# ಕರ್ನಾಟಕ ವಿಧಾನ ಪರಿಷತ್ತು

**ಗುರುವಾರ, 02ನೇ ಫೆಬ್ರವರಿ 2012**

**ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಪೂರ್ವಾಹ್ನ 11 ಗಂಟೆ 12 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಡಿ.ಹೆಚ್. ಶಂಕರಮೂರ್ತಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

## 1. ಸಂತಾಪ ಸೂಚನೆ

ಮಾಜಿ ಸಚಿವರು ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರಾದ ಡಾ|| ಬಿ.ಆರ್. ಚೌಧರಿ ಅವರ ನಿಧನಕ್ಕೆ ಸಭೆಯ ಸಂತಾಪ

**ಸಭಾಪತಿಯವರು:-** ಮಾಜಿ ಸಚಿವರು ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರಾದ ಡಾ|| ಬಿ.ಆರ್. ಚೌಧರಿ ಅವರು ದಿನಾಂಕ:01.02.2012ರಂದು ನಿಧನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾಧಿಸುತ್ತೇನೆ. 1939ರ ಜನವರಿ, 17ರಂದು ಬಿಜಾಪುರದಲ್ಲಿ ಜನಿಸಿದ ಶ್ರೀಯುತರು ಎಂ.ಬಿ.ಬಿ.ಎಸ್. ಪದವೀಧರರಾಗಿದ್ದು, ವೃತ್ತಿಯಲ್ಲಿ ವೈದ್ಯರು ಹಾಗೂ ಸಮಾಜ ಸೇವಾ ಕಾರ್ಯಕರ್ತರಾಗಿದ್ದರು. ಹಿಂದುಳಿದ ವರ್ಗಗಳ ಏಳಿಗೆ ಬಗ್ಗೆ ಅಪಾರ ಕಾಳಜಿಯನ್ನು ಹೊಂದಿದ್ದ ಇವರು ಕರ್ನಾಟಕ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿ, ಬಿಜಾಪುರ ಜಿಲ್ಲೆಯ ಕೋಳಿ ಸಮಾಜದ ಅಧ್ಯಕ್ಷರಾಗಿ ಹಾಗೂ ಹದಿನೆಂಟು ವರ್ಷಗಳ ಕಾಲ ವೈದ್ಯಾಧಿಕಾರಿಯಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ. ಶ್ರೀಯುತರು 1989ರಲ್ಲಿ ಸಿಂಧಗಿ ಮತಕ್ಷೇತ್ರದಿಂದ 9ನೇ ವಿಧಾನ ಸಭೆಗೆ ಚುನಾಯಿತರಾಗಿ, 1990ರಲ್ಲಿ ಶ್ರೀ ವೀರಪ್ಪ ಮೊಯ್ಲಿಯವರ ಸಚಿವ ಸಂಪುಟದಲ್ಲಿ ಸಣ್ಣ ನೀರಾವರಿ ಸಚಿವರಾಗಿ ನಂತರ ಬಂಧಿಖಾನೆ, ಗೃಹರಕ್ಷಕ ಖಾತೆಯ ಸಚಿವರಾಗಿಯೂ ಸಹ ಕಾರ್ಯ ನಿರ್ವಹಿಸಿರುತ್ತಾರೆ.

ಇವರ ನಿಧನದಿಂದಾಗಿ ರಾಜ್ಯವು ಒಬ್ಬ ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.

**ಶ್ರೀ ಡಿ.ವಿ.ಸದಾನಂದಗೌಡ (ಮುಖ್ಯಮಂತ್ರಿಗಳು):-** ಸನ್ಮಾನ್ಯ ಸಭಾಪತಿಯವರೇ, ಡಾ|| ಬಿ.ಆರ್. ಚೌಧರಿಯವರನ್ನು ನಾವು ಇಂದು ಕಳೆದುಕೊಂಡಿದ್ದೇವೆ. ಶ್ರೀಯುತರು ವೃತ್ತಿಯಲ್ಲಿ ವೈದ್ಯಾರಾಗಿದ್ದು, ಅತ್ಯಂತ ಜನಾನುರಾಗಿ ವೈದ್ಯಾರಾಗಿದ್ದರೆಂದು ನಾವು ಕೇಳಿದ್ದೇವೆ. ಅವರು ಶಾಸಕರಾಗಿದ್ದಾಗಲೂ ಸಹ ಬಿಡುವಿನ ವೇಳೆಯಲ್ಲಿ ವೈದ್ಯ ವೃತ್ತಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಶ್ರೀಯುತರು ವಿಧಾನ ಸಭೆಯ ಕಾರ್ಯಕಲಾಪಗಳಲ್ಲಿ

ಅತ್ಯಂತ ಸಕ್ರಿಯವಾಗಿ ಭಾಗವಹಿಸುತ್ತಿದ್ದ ಶಾಸಕರುಗಳ ಪೈಕಿ ಒಬ್ಬರು ಎಂದು ಕೇಳಿದ್ದೇವೆ. ಮಾನ್ಯ ವೀರಪ್ಪ ಮೊಯ್ಲಿಯವರ ಸಚಿವ ಸಂಪುಟದಲ್ಲಿ ಸಣ್ಣ ನೀರಾವರಿ ಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ, ಅತ್ಯಂತ ದಕ್ಷ ಸಚಿವರಲ್ಲಿ ಇವರೂ ಒಬ್ಬರಾಗಿದ್ದಾರೆ. ಇಂತಹ ಒಬ್ಬ ಒಳ್ಳೆಯ ರಾಜಕಾರಣಿಯನ್ನು ನಾವು ಕಳೆದುಕೊಂಡಿದ್ದೇವೆ. ಅವರ ಆತ್ಮಕ್ಕೆ ಪರಮಾತ್ಮನು ಶಾಂತಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ. ಅವರ ಅಗಲಿಕೆಯ ನೋವನ್ನು ಭರಿಸುವಂತಹ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಭಗವಂತನು ಕರುಣಿಸಲಿ ಎಂದು ಕೇಳಿಕೊಳ್ಳುತ್ತಾ ತಾವು ಮಂಡಿಸಿರುವಂತಹ ಸಂತಾಪ ಸೂಚನೆಯನ್ನು ನಾನು ಅನುಮೋದಿಸುತ್ತಿದ್ದೇನೆ.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಡಾ|| ಆರ್.ಬಿ. ಚೌಧರಿಯವರು ಬಿಜಾಪುರ ಜಿಲ್ಲೆಯ ನಮ್ಮ ಪಕ್ಷದ ಮುಖಂಡರಾಗಿದ್ದವರು. 1994ರವರೆಗೆ ಅವರು ನನ್ನ ಜೊತೆಗೆ ಶಾಸಕರಾಗಿದ್ದರು. ಮಾನ್ಯ ವೀರಪ್ಪ ಮೊಯ್ಲಿಯವರ ಸಚಿವ ಸಂಪುಟದಲ್ಲಿ ಸಣ್ಣ ನೀರಾವರಿ ಮತ್ತು ಬಂಧಿಖಾನೆ ಸಚಿವರಾಗಿ ಕಾರ್ಯವನ್ನು ನಿರ್ವಹಿಸಿದ್ದರು. ಸಮಾಜವನ್ನು ಸಂಘಟಿಸುವ ಮತ್ತು ಜನಸಾಮಾನ್ಯರ ಕಷ್ಟಗಳಿಗೆ ಸ್ಪಂದಿಸುವಂತಹ ಮತ್ತು ಕೂಲಿ ಕಾರ್ಮಿಕರ ಅಭಿವೃದ್ಧಿಗಾಗಿ ಹೋರಾಟ ಮಾಡಿದಂತಹ ವ್ಯಕ್ತಿಯಾಗಿದ್ದರು. ಅವರ ಅಗಲಿಕೆಯಿಂದ ತುಂಬಲಾರದಷ್ಟು ನಷ್ಟವುಂಟಾಗಿದೆ. ಅವರ ಅಗಲಿಕೆಯನ್ನು ಭರಿಸುವಂತಹ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಪರಮಾತ್ಮನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ.

**ಸಭಾಪತಿಯವರು:-** ಡಾ|| ಆರ್.ಬಿ. ಚೌಧರಿ ಅವರಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು.)**

**ಸಭಾಪತಿಯವರು:–** ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

ಸಂತಾಪ ಸೂಚನೆಯ ನಂತರ ಮುಂದಿನ ಕಾರ್ಯಕಲಾಪಗಳನ್ನು ತೆಗೆದುಕೊಳ್ಳುವುದಕ್ಕೂ ಮೊದಲು 5 ನಿಮಿಷಗಳ ವಿರಾಮವನ್ನು ನೀಡುವುದು ಪದ್ಧತಿ. ಆ ಪ್ರಕಾರವಾಗಿ ಈಗ 5 ನಿಮಿಷಗಳ ಕಾಲ ಸದನವನ್ನು ಮುಂದೂಡಲಾಗುತ್ತಿದೆ.

**(11.00 ಗಂಟೆ 18 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ 11 ಗಂಟೆ 27 ನಿಮಿಷಕ್ಕೆ ಸಮಾವೇಶಗೊಂಡಿತು ಮಾನ್ಯ ಸಭಾಪತಿಯವರು ಸಭಾಪೀಠವನ್ನಲಂಕರಿಸಿದ್ದರು)**

## 2. ಪ್ರಶ್ನೋತ್ತರಗಳು

### (ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

**ಸಭಾಪತಿಯವರು:–** ಮಾನ್ಯ ಪಟೇಲ್ ಶಿವರಾಂರವರೆ, ತಮ್ಮ ಮೊದಲನೆಯ ಪ್ರಶ್ನೆಗೆ ಸರ್ಕಾರ ಸ್ವಲ್ಪ ಕಾಲಾವಕಾಶವನ್ನು ಕೇಳಿದೆ. ನಿಮಗೆ ನಂತರ ಉತ್ತರವನ್ನು ಒದಗಿಸಲಾಗುವುದು.

**ಶ್ರೀ ಪಟೇಲ್ ಶಿವರಾಂ:–** ಮಾನ್ಯ ಸಭಾಪತಿಯವರೇ, ಬಹಳಷ್ಟು ಪ್ರಶ್ನೆಗಳಿಗೆ ಸರ್ಕಾರ ಕಾಲಾವಕಾಶವನ್ನು ಕೇಳಿದೆ. ನಾವು ಕೇಳಿದ ಪ್ರಶ್ನೆಗಳಿಗೆ ಸುಮಾರು ಮೂರ್‍ನಾಲ್ಕು ತಿಂಗಳೂಗಳಾದರೂ ಸರ್ಕಾರದಿಂದ ಉತ್ತರಗಳು ಬಂದಿಲ್ಲ. ಆ ರೀತಿ ಆಗಬಾರದು ಎಂದು ಮಾನ್ಯ ಸಚಿವರನ್ನು ಕೇಳುತ್ತೇನೆ. 10ನೇ ತಾರೀಖಿನ ಒಳಗೆ ಅಥವಾ ಈ ಅಧಿವೇಶನ ಮುಗಿಯುವುದರೊಳಗೆ ಸರ್ಕಾರದಿಂದ ತಾವು ನನ್ನ ಪ್ರಶ್ನೆಗೆ ಉತ್ತರವನ್ನು ಕೊಡಿಸಬೇಕು. ಈ ಪ್ರಶ್ನೆಯನ್ನು ತಾವು ಪುನರಾವರ್ತನೆ ಮಾಡಿದರೆ ಅನುಕೂಲವಾಗುತ್ತದೆ. ಏಕೆಂದರೆ ಹಾಸನ ನಗರದಲ್ಲಿರುವ ಪರಿಸ್ಥಿತಿ ಬಗ್ಗೆ ತಮಗೆ ತಿಳಿದಿದೆ.

## ಕಾನೂನು ಬಾಹಿರವಾಗಿ ಮಂಜೂರು ಮಾಡಿದ ಜಮೀನನ್ನು ಹಿಂಪಡೆಯುವ ಬಗ್ಗೆ

### 06; ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ)

**ಅ)** ಬೆಂಗಳೂರು ಹಾಗೂ ಸುತ್ತಮುತ್ತಲಿನ ಜಿಲ್ಲೆಗಳಲ್ಲಿ 2804 ಎಕರೆ ಜಮೀನನ್ನು ಮಾಫಿಯಾದವರಿಗೆ ಕಾನೂನು ಬಾಹಿರವಾಗಿ ಕಂದಾಯ ಇಲಾಖೆಯ ಅಧಿಕಾರಿಗಳು ಮಂಜೂರು ಮಾಡಿರುವುದು ನಿಜವೇ;

**ಆ)** ಹಾಗಿದ್ದಲ್ಲಿ, ಕಾನೂನು ಬಾಹಿರವಾಗಿ ಜಮೀನನ್ನು ಮಂಜೂರು ಮಾಡಿದ ಕಂದಾಯ ಇಲಾಖೆಯ ಅಧಿಕಾರಿಗಳ ವಿರುದ್ಧ ಸರಕಾರ ಕೈಗೊಂಡ ಕ್ರಮಗಳೇನು;

**ಇ)** ಈ ರೀತಿ ಕಾನೂನು ಬಾಹಿರವಾಗಿ ಜಮೀನು ಮಂಜೂರಾತಿಯಿಂದ ಎಷ್ಟು ಮೊತ್ತದ ಜಮೀನು ಪರಭಾರೆಯಾಗಿದೆ;

**ಈ)** ಈ ಜಮೀನು ಮಂಜೂರಾತಿಯನ್ನು ರದ್ದುಪಡಿಸಲು ಸರಕಾರ ಕೈಗೊಂಡ ಕ್ರಮಗಳೇನು?

### ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಯವರು)

**ಅ)** ದಿನಾಂಕ:15–08–1986ರಿಂದ ಬೆಂಗಳೂರು ಜಿಲ್ಲೆ ವಿಭಜನೆಯಾದ ಹಿನ್ನೆಲೆಯಲ್ಲಿ 2007–08ರಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಭೂ ಮಂಜೂರಾತಿಗೆ ಸಂಬಂಧಿಸಿದ ವಿವಿಧ ಹಂತದಲ್ಲಿನ ಕಡತಗಳು ಬೆಂಗಳೂರು ನಗರ ಜಿಲ್ಲೆಗೆ ವರ್ಗಾವಣೆಗೊಂಡಿರುತ್ತವೆ.

ಇವುಗಳು ಬೆಂಗಳೂರು ಉತ್ತರ ತಾಲ್ಲೂಕು, ತಹಶೀಲ್ದಾರ್, ರವರು 428 ಕಡತಗಳಲ್ಲಿ 2804.04.12 ಎಕರೆ/ಗುಂಟೆ ವಿಸ್ತೀರ್ಣದ ಜಮೀನಿಗೆ 1248 ವ್ಯಕ್ತಿಗಳು ತಮ್ಮ ಹೆಸರುಗಳಿಗೆ ಅಕ್ರಮವಾಗಿ ಮಂಜೂರಾತಿ ಮಾಡಿಸಿಕೊಂಡಿರುವುದನ್ನು ವರದಿ ಮಾಡಿದ್ದರು.

ತದನಂತರ ಬೆಂಗಳೂರು ಉತ್ತರ ತಾಲ್ಲೂಕು, ತಹಶೀಲ್ದಾರ್, ರವರು ತಮ್ಮ ಹಿಂದಿನ ವರದಿಯಲ್ಲಿ ಕೈತಪ್ಪಿನಿಂದಾಗಿ 428 ಕಡತಗಳೆಂದು ವರದಿ ಮಾಡಲಾಗಿತ್ತೆಂದು ತಿಳಿಸಿ ಅದನ್ನು ಸರಿಪಡಿಸಿ ಅಕ್ರಮ ಸೃಷ್ಟಿತ ಕಡತಗಳ ಸಂಖ್ಯೆ:382 ಆಗಿದ್ದು, ಇವುಗಳಲ್ಲಿ 1127 ಅಕ್ರಮ ಮಂಜೂರಾತಿದಾರರು ಒಟ್ಟು 2580.02.12 ಎಕರೆ/ ಗುಂಟೆ ಜಮೀನನ್ನು ಸೃಷ್ಠಿತ ದಾಖಲೆಗಳ ಮೂಲಕ ಮಂಜೂರು ಮಾಡಿಸಿಕೊಂಡಿದ್ದಾರೆ ಎಂಬುದಾಗಿ ವರದಿ ಮಾಡಿದ್ದಾರೆ. ಇದರಿಂದ ಈಗ 2580.02.12 ಎಕರೆ/ಗುಂಟೆ ವಿಸ್ತೀರ್ಣಕ್ಕೆ ಮಾತ್ರ 382 ಸೃಷ್ಟಿತ ಕಡತಗಳಿವೆ ಎಂದು ಅಂತಿಮವಾಗಿ ನಿರ್ಧರಿಸಲಾಗಿದೆ.

ಆ) ಬೆಂಗಳೂರು ನಗರ ಜಿಲ್ಲೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ ದಿ:15–8–1986 ರಿಂದ ಅಸ್ತಿತ್ವಕ್ಕೆ ಬಂದಿದ್ದು ಅವಿಭಜಿತ ಬೆಂಗಳೂರು ಜಿಲ್ಲೆಯ ಹೊಸಕೋಟೆ ತಾ. ಮತ್ತು ದೇವನಹಳ್ಳಿ ತಾಲ್ಲೂಕುಗಳ ಬಿದರಹಳ್ಳಿ ಹೋಬಳಿ ಮತ್ತು ಜಾಲ ಹೋಬಳಿ ಅನುಕ್ರಮವಾಗಿ ಬೆಂಗಳೂರು ಪೂರ್ವ ತಾಲ್ಲೂಕಿಗೂ ಮತ್ತು ಬೆಂಗಳೂರು ಉತ್ತರ (ಅಪಂ) ತಾಲ್ಲೂಕಿಗೂ ಸೇರಿಸಲ್ಪಟ್ಟಿರುತ್ತವೆ. ಈ ಎರಡು ಹೋಬಳಿಗಳಲ್ಲಿನ ಗ್ರಾಮಗಳಲ್ಲಿನ ಜಮೀನುಗಳಿಗೆ ಅದರಲ್ಲೂ ಪ್ರಮುಖವಾಗಿ ಬೆಂಗಳೂರು ಪೂರ್ವ ತಾಲ್ಲೂಕಿನಲ್ಲಿ ಐ.ಟಿ.ಬಿ.ಟಿ. ಕಂಪನಿಗಳು ದೊಡ್ಡ ಪ್ರಮಾಣದಲ್ಲಿ ಪ್ರಾರಂಭಿಸಲ್ಪಟ್ಟಿದ್ದು, ಅದೇ ರೀತಿ ಜಾಲ ಹೋಬಳಿಯ ಗ್ರಾಮಗಳ ಸಮೀಪದಲ್ಲಿಯೇ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಸ್ಥಾಪನೆಗೊಂಡಿದ್ದರೆ ಹಿನ್ನೆಲೆಯಲ್ಲಿ ಇಲ್ಲಿನ ಜಮೀನುಗಳ ಮೌಲ್ಯ ಏಕಾಏಕಿ ಅತ್ಯಂತ ದುಬಾರಿ ಎನಿಸುವ ಮಟ್ಟಕ್ಕೆ ಎರಿರುತ್ತವೆ. ಈ ಕಾರಣಕ್ಕಾಗಿ ಅವಿಭಜಿತ ಬೆಂಗಳೂರು ಜಿಲ್ಲೆಯ ಹೊಸಕೋಟೆ ಮತ್ತು ದೇವನಹಳ್ಳಿ ತಾಲ್ಲೂಕುಗಳ ಬಿದರಳ್ಳಿ ಮತ್ತು ಜಾಲ ಹೋಬಳಿ ಇವುಗಳಲ್ಲಿನ ಸರ್ಕಾರಿ ಜಮೀನುಗಳಿಗೆ ಸೃಷ್ಟಿತ ದಾಖಲೆಗಳನ್ನು ತಯಾರಿಸಿ ಸಾಕಷ್ಟು ಜನ ಅಕ್ರಮ ಮಂಜೂರಾತಿಗಳನ್ನು ಮಾಡಿಸಿಕೊಂಡಿರುತ್ತಾರೆ.

ಇಲ್ಲಿ ಗಮನಿಸಬೇಕಾದ ಮುಖ್ಯವಾದ ಅಂಶವೆಂದರೆ 1,217 ಅಕ್ರಮ ಮಂಜೂರಾತಿದಾರರು 2580.2.12 ಎಕರೆ ವಿಸ್ತೀರ್ಣದ ಜಮೀನನ್ನು ಸೃಷ್ಟಿತ ದಾಖಲೆಗಳ ಮೂಲಕ ಕಬಳಿಸಲು ಪ್ರಯತ್ನಿಸಿದ್ದಾರೆ. ಈ ಪೈಕಿ ಕೇವಲ 258 ಜನರು ಮಾತ್ರ ತಮ್ಮ ಹೆಸರಿಗೆ ಖಾತೆಗಳನ್ನು ಈ ಪ್ರಕರಣಗಳ ಕಡತಗಳು ಬೆಂಗಳೂರು ನಗರ ಜಿಲ್ಲೆಗೆ 2007–08 ರಲ್ಲಿ ವರ್ಗಾವಣೆ ಆಗುವ ಪೂರ್ವದಲ್ಲಿಯೇ ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿಗಳ ಕಛೇರಿಯ ಅಭಿಲೇಖಾಲಯದಲ್ಲಿ ಇರುವಂತಹ ಸಂದರ್ಭದಲ್ಲಿ, ಅಲ್ಲಿಂದ ದೃಢೀಕೃತ ಸಾಗುವಳಿ ಚೀಟಿ, ಜಿಲ್ಲಾಧಿಕಾರಿಗಳ ಓ.ಎಂ. ಇತ್ಯಾದಿಗಳನ್ನು ಪಡೆದುಕೊಂಡು ಆಗಲೇ ಖಾತೆಗಳನ್ನು ಬದಲಾವಣೆ ಮಾಡಿಸಿಕೊಂಡಿರುತ್ತಾರೆ.

ಬೆಂಗಳೂರು ನಗರ ಜಿಲ್ಲೆಗೆ ಈ ಅಕ್ರಮ ಸೃಷ್ಟಿತ ಕಡತಗಳು ವರ್ಗಾಣೆಗೊಂಡ ನಂತರ ಯಾವುದೇ ಒಂದು ಪ್ರಕರಣದಲ್ಲಿ ಯಾವುದೇ ದಾಖಲೆಯನ್ನು ಅಂದರೆ ಸಾಗುವಳಿ ಚೀಟಿ ಅಥವಾ ಜಿಲ್ಲಾಧಿಕಾರಿಗಳ ಓ.ಎಂ. ಇತ್ಯಾದಿಗಳನ್ನು ಯಾವೊಬ್ಬ ವ್ಯಕ್ತಿಗೂ ನೀಡಿರುವುದಿಲ್ಲ. ಇದಕ್ಕೆ ರಾಜ್ಯ ಮಾಹಿತಿ ಆಯೋಗ ಆಯುಕ್ತರಿಂದಲೂ ಈ ರೀತಿಯ ದೃಢೀಕೃತ ನಕಲುಗಳನ್ನು ನೀಡದೇ ಇರುವುದಕ್ಕೆ ಬೆಂಗಳೂರು ನಗರ ಜಿಲ್ಲಾಧಿಕಾರಿಗಳು ಒಪ್ಪಿಗೆಯನ್ನು ಪಡೆದಿರುತ್ತಾರೆ.

ಈ ಸೃಷ್ಟಿತ ದಾಖಲೆಗಳ ಅಕ್ರಮ ಮಂಜೂರಾತಿ ಪ್ರಕರಣಗಳ ಬಗ್ಗೆ ಶೀಘ್ರವಾಗಿ ಕ್ರಮ ತೆಗೆದುಕೊಂಡು ಅಕ್ರಮ ಭೂ ಮಂಜೂರಾತಿದಾರರು ಹಾಗೂ ಇದಕ್ಕೆ ಸಹಕರಿಸಿದ ಅಧಿಕಾರಿ/ನೌಕರರ ವಿರುದ್ಧ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ:192ಎ ಮತ್ತು 192ಬಿ ಅನ್ವಯ ಕ್ರಿಮಿನಲ್ ಮೊಕದ್ದಮೆ ಹೂಡಲು ಕ್ರಮವಹಿಸಲಾಗುವುದು.

ಈ ರೀತಿ ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿನ ಅಭಿಲೇಖಾಲಯದಲ್ಲಿ ಮೇಲ್ಕಂಡ ಸೃಷ್ಟಿತ ಪ್ರಕರಣಗಳ ಕಡತಗಳನ್ನು ಸಂಗ್ರಹಿಸಿ ಇಡಲು ಕಾರಣಕರ್ತರಾದ ಅಧಿಕಾರಿ/ ನೌಕರರು ಹಾಗೂ

258 ಪ್ರಕರಣಗಳಲ್ಲಿ ಖಾತೆಗಳನ್ನು ಮಾಡಿದ ಸರ್ಕಾರಿ ಸಿಬ್ಬಂದಿಯ ವಿರುದ್ದ ಶೀಘ್ರವೇ ಕಾನೂನಿನಂತೆ ಕಠಿಣ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು.

ಇ) ಈಗಿನ ಮಾರುಕಟ್ಟೆ ದರಕ್ಕೆ ಹೋಲಿಸಿ ತುಲನೆ ಮಾಡಿದಾಗ 2580.02.12 ಎಕರೆ/ಗುಂಟೆ ಜಮೀನು ವಿಸ್ತೀರ್ಣಕ್ಕೆ ಅಂದಾಜು ರೂ. 5,000 ಕೋಟಿ ಮೌಲ್ಯ ಆಗಬಹುದು. ಕಾರಣ ಈ ಅಕ್ರಮ ಮಂಜೂರಾತಿಗಳಲ್ಲಿ ಒಳಗೊಂಡಿರುವ ಹೆಚ್ಚಿನ ವಿಸ್ತೀರ್ಣದ ಜಮೀನು ಬೆಂಗಳೂರು ಪೂರ್ವ ತಾಲ್ಲೂಕಿನ ಬಿದರಹಳ್ಳಿ ಹೋಬಳಿ, ಹಾಗೂ ಬೆಂಗಳೂರು ಉತ್ತರ (ಅಪರ) ತಾಲ್ಲೂಕಿನ ಜಾಲಾ ಹೋಬಳಿ ಮತ್ತು ಸುತ್ತಮುತ್ತಲಿನ ಬೆಲೆ ಬಾಳುವ ಪ್ರದೇಶದ ವ್ಯಾಪ್ತಿಗೆ ಬರುತ್ತದೆ.

**ಈ)** ಈಗಾಗಲೇ ಈ ಅಕ್ರಮ ಸೃಷ್ಟಿತ ಮಂಜೂರಾತಿಗಳ ಬಗ್ಗೆ ಸರ್ಕಾರದ ಮಟ್ಟದಲ್ಲಿ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ 6 ಸಭೆಗಳನ್ನು ನಡೆಸಲಾಗಿದ್ದು, ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ ಇವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಸಹ ರಚಿಸಲಾಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯಿಂದ ಬೆಂಗಳೂರು ನಗರ ಜಿಲ್ಲೆಗೆ ಒಟ್ಟು 19,753 ಕಡತಗಳು ಬಂದಿರುತ್ತವೆ. ಈ ಪೈಕಿ ದರಖಾಸ್ತು ಮಂಜೂರಾತಿಗೆ ಸಂಬಂಧಪಟ್ಟ ಕಡತಗಳ ಸಂಖ್ಯೆ 1376 ಮಾತ್ರ ಇದರಲ್ಲಿ 209 ಕಡತಗಳು ಕೇವಲ ಸರ್ಕಾರಿ ಜಮೀನುಗಳ ಮಂಜೂರಾತಿ ಕೋರಿದ್ದ ಅರ್ಜಿಗಳ ಪತ್ರ ವ್ಯವಹಾರಕ್ಕೆ ಸಂಬಂಧಿಸಿದ್ದು, ಉಳಿದ 1167 ಪ್ರಕರಣಗಳ ಪೈಕಿ ಕೇವಲ 692 ಪ್ರಕರಣಗಳು ದರಖಾಸ್ತು, ಮಂಜೂರಾತಿಗೆ ಸಂಬಂಧಿಸಿದ್ದೆಂದು, ಈ ಪೈಕಿ 382 ಪ್ರಕರಣಗಳು ಸೃಷ್ಟಿತವೆಂದು ಉಳಿದ 785 ಪ್ರಕರಣಗಳಲ್ಲಿ ನೈಜ ಭೂ ಮಂಜೂರಾತಿ ಕಡತಗಳು ಲಭ್ಯವಾಗಿವೆಯೆಂದು ಪರಿಶೀಲನೆ ಮೂಲಕ ತಿಳಿದು ಬಂದಿರುತ್ತದೆ.

ಈ ಎಲ್ಲಾ 382 ಸೃಷ್ಟಿತ ಭೂ ಮಂಜೂರಾತಿ ಪ್ರಕರಣಗಳಲ್ಲಿನ ಅಕ್ರಮ ಮಂಜೂರಾತಿದಾರರ ವಿವರಗಳನ್ನು ಅಂದರೆ ಯಾರು ಯಾರಿಗೆ ಎಷ್ಟು ವಿಸ್ತೀರ್ಣದ ಜಮೀನು ಮಂಜೂರಾಗಿದೆ ಎಂಬುದು, ಯಾರು ಯಾರು ಖಾತೆ ಮಾಡಿಸಿಕೊಂಡಿದ್ದಾರೆ ಎಂಬುವ ಅಂಕಿ ಅಂಶಗಳನ್ನು ಗಣಕೀಕರಣ ಮಾಡಿಸಲಾಗಿದೆ. ಇದರಿಂದ ಮುಂದೆ ಅಕ್ರಮವಾಗಿ ಖಾತೆ ಮಾಡಿಸಿರುವವರ ಪ್ರಕರಣಗಳನ್ನು ಕೈಗೆತ್ತಿಕೊಂಡು ಖಾತೆಗಳನ್ನು ವಜಾಗೊಳಿಸಲು ಅನುಕೂಲವಾಗುತ್ತದೆ.

ಇನ್ನುಳಿದಂತೆ 869 ಅಕ್ರಮ ಸೃಷ್ಟಿತ ಪ್ರಕರಣಗಳ ಮಂಜೂರಾತಿದಾರರು ತಮ್ಮ ಹೆಸರಿಗೆ ಖಾತೆಗಳನ್ನು ಈವರೆವಿಗೂ ಮಾಡಿಸಿಕೊಳ್ಳಲು ಸಫಲರಾಗಿರುವುದಿಲ್ಲ. ಇವರೆಲ್ಲರನ್ನು ನೇರವಾಗಿ ಈ ಜಮೀನುಗಳಿಂದ ಹೊರ ಹಾಕಿ ಸದರಿ ವಿಸ್ತೀರ್ಣವನ್ನು ಸರ್ಕಾರದ ಸುಪರ್ಧಿಗೆ ತಕ್ಷಣವೇ ಪಡೆದುಕೊಳ್ಳಲು ಕ್ರಮವಹಿಸಲಾಗುತ್ತದೆ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಬೆಂಗಳೂರಿನಲ್ಲಿ ಸುಮಾರು 5,000 ಕೋಟಿ ಮೌಲ್ಯಕ್ಕಿಂತ ಹೆಚ್ಚು ಬೆಲೆ ಬಾಳುವ ಸರ್ಕಾರಿ ಭೂಮಿಯನ್ನು ಬೇರೆ ಬೇರೆಯವರು ಅಕ್ರಮವಾಗಿ ತೆಗೆದುಕೊಂಡಿದ್ದಾರೆ. ಇದನ್ನು ಸರ್ಕಾರ ಒಪ್ಪಿಕೊಂಡಿದೆ. ಆದರೆ ಇದರ ಬಗ್ಗೆ ಸರ್ಕಾರ ಯಾವುದೇ ರೀತಿಯ ಕ್ರಮವನ್ನು ತೆಗೆದುಕೊಂಡಿಲ್ಲ. ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲು ಕ್ರಮ ವಹಿಸಲಾಗುವುದು ಎಂದು ಸರ್ಕಾರ ಉತ್ತರದಲ್ಲಿ ಹೇಳಿದೆ. ಈ ಕೇಸ್ ಆಗಿ ಇಷ್ಟು ದಿವಸಗಳಾದರೂ ಏಕೆ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಿಲ್ಲ ಮತ್ತು ಅವರ ಹೆಸರುಗಳನ್ನು ಬಹಿರಂಗ ಮಾಡಿಲ್ಲ. ಇದರಲ್ಲಿ ಎಲ್ಲಾ ದೊಡ್ಡ ದೊಡ್ಡವರೇ ಇದ್ದಾರೆ. ನಮಗೆ ಬಹಳಷ್ಟು ಜನ ನೀವು ಸಹ ಇದರಲ್ಲಿ ಇದ್ದೀರಿ ಎಂದು ಹೇಳುತ್ತಾರೆ. ನಮಗೆ ಜನ ಎಂಎಲ್ಎ, ಎಂಎಲ್‌ಸಿ, ಮಂತ್ರಿಗಳು ಇದ್ದೀರಿ, ನೀವು ನಿಂತು ಏಜೆಂಟ್‌ಗಳ ಮೂಲಕ ಮಾಡಿಸುತ್ತೀರಿ ಎಂಬ ಆಪಾದನೆಗಳು ಬರುತ್ತಿವೆ. ಉತ್ತರದಲ್ಲಿ ತಪ್ಪು ಮಾಡಿದ್ದಾರೆ ಎಂದು ಸರ್ಕಾರ ಹೇಳಿದೆ ಹಾಗೂ ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕುತ್ತೇವೆಂದು ಹೇಳಿದೆ. ಸುಮಾರು 5,000 ಕೋಟಿ ರೂಪಾಯಿಗಿಂತ

ಹೆಚ್ಚು ಮೌಲ್ಯದ ಭೂಮಿಯನ್ನು ಕಬಳಿಸಿದ್ದಾರೆ. ಎಲ್ಲರೂ ಈ ಬಗ್ಗೆ ಮಾತನಾಡುತ್ತಾರೆ. ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ವಿವರವಾದ ಲೇಖನವನ್ನು ಬರೆದಿದ್ದಾರೆ. ಎಲ್ಲಾ ಶಾಸಕರು, ಎಲ್ಲಾ ಮಂತ್ರಿಗಳ ಬಗ್ಗೆಯೇ, ನಿಮ್ಮ ಏಜೆಂಟ್‌ಗಳಿರುತ್ತಾರೆ, ನಿಮ್ಮ ಚಮಚಗಳಿರುತ್ತಾರೆ ಮುಂತಾದವುಗಳನ್ನು ಮಾತನಾಡುತ್ತಾರೆ. ಸರ್ಕಾರ ಇದರ ಬಗ್ಗೆ ಇವತ್ತಿನವರೆವಿಗೂ ಏಕೆ ಕ್ರಮ ತೆಗೆದುಕೊಂಡಿಲ್ಲ. ತಾವು ದಯಮಾಡಿ ಎಷ್ಟು ಭೂಮಿಯನ್ನು ಕಬಳಿಕೆ ಮಾಡಿದ್ದಾರೆಂಬುದನ್ನು ನೋಡಿ. ಇದಕ್ಕೆ ಏನೋ ಉತ್ತರವನ್ನು ಹೇಳಿದ್ದಾರೆ. ಏರ್‌ಪೋರ್ಟ್ ಆಗಿರುವುದರಿಂದ ಭೂಮಿಯ ಬೆಲೆ ಹೆಚ್ಚಾಗಿದೆ ಎಂದು ಹೇಳಿದ್ದಾರೆ. ಜಮೀನಿನ ಬೆಲೆ ಹೆಚ್ಚಾಗಲಿ ಆದರೆ ಇದರ ಬಗ್ಗೆ ಸರ್ಕಾರ ಏಕೆ ಇವತ್ತಿನವರೆವಿಗೂ ಕ್ರಮವನ್ನು ತೆಗೆದುಕೊಂಡಿಲ್ಲ? ಉತ್ತರದ ಕೊನೆಯಲ್ಲಿ ಸರ್ಕಾರ "ಇನ್ನುಳಿದಂತೆ 869 ಅಕ್ರಮ ಸೃಷ್ಟಿತ ಪ್ರಕರಣಗಳ ಮಂಜೂರಾತಿದಾರರು ತಮ್ಮ ಹೆಸರಿಗೆ ಖಾತೆಗಳನ್ನು ಈವರೆವಿಗೂ ಮಾಡಿಸಿಕೊಳ್ಳಲು ಸಫಲರಾಗಿರುವುದಿಲ್ಲ. ಇವರೆಲ್ಲರನ್ನು ನೇರವಾಗಿ ಈ ಜಮೀನುಗಳಿಂದ ಹೊರ ಹಾಕಿ ಸದರಿ ವಿಸ್ತೀರ್ಣವನ್ನು ಸರ್ಕಾರದ ಸುಪರ್ದಿಗೆ ತಕ್ಷಣವೇ ಪಡೆದುಕೊಳ್ಳಲು ಕ್ರಮ ವಹಿಸಲಾಗುತ್ತದೆ" ಎಂದು ಹೇಳಿದೆ. ತಕ್ಷಣ ಎಂದರೆ ಯಾವಾಗ ಎಂದು ಸರ್ಕಾರ ತಿಳಿಸಬೇಕು. ಇದು ಎಷ್ಟೋ ದಿವಸಗಳ ಹಿಂದೆಯೇ ಬಂದಿದೆ.

(11.30 ಗಂಟೆ)

ಇದು ಬಹಳ ದೊಡ್ಡ ಹಗರಣವಾಗಿದೆ. ಸರ್ಕಾರಿ ಭೂಮಿಯನ್ನು ಹೇಗೆ ಬೇಕಾದರೂ ಲೂಟಿ ಮಾಡಬಹುದು ಎನ್ನುವ ಭಾವನೆ ಬಂದುಬಿಟ್ಟಿದೆ. ಇಂಥದ್ದರಲ್ಲಿ ದೊಡ್ಡ ದೊಡ್ಡ ಅಧಿಕಾರಿಗಳು ಶಾಮೀಲಾಗಿರುತ್ತಾರೆ ಎನ್ನುವ ಮಾತುಗಳು ಬರುತ್ತವೆ. ಅಕ್ರಮವಾಗಿ ಯಾರು ತಮ್ಮ ಹೆಸರಿಗೆ ಜಮೀನನ್ನು ಮಾಡಿಕೊಂಡಿದ್ದಾರೋ ಅವರ ಹೆಸರುಗಳನ್ನು ಸರ್ಕಾರ ಹೇಳಬೇಕು. ಅವರು ಅಧಿಕಾರಿಗಳಾಗಿರಲಿ, ಶಾಸಕರಾಗಿರಲಿ ಯಾರೇ ಆಗಿರಲಿ ಅವರ ಹೆಸರನ್ನು ಬಹಿರಂಗಪಡಿಸಬೇಕು. ಇಡೀ ಭಾರತ ದೇಶದಲ್ಲಿ ನಡೆಯಲಾರದಂತಹ ಹಗರಣ ಇಲ್ಲಿ ನಡೆದಿದೆ. ಕಾನೂನುಬಾಹಿರವಾಗಿ ಮಂಜೂರಾಗಿರುವ

ಜಮೀನಿನ ಮೌಲ್ಯ ಐದು ಸಾವಿರ ಕೋಟಿ ರೂಪಾಯಿ ಆಗಬಹುದು ಎಂದು ಹೇಳಿದ್ದಾರೆ. ಆದರೆ ನಮಗೆ ಮಾಹಿತಿ ಇರುವ ಪ್ರಕಾರ ಇದರ ಮೌಲ್ಯ ಸುಮಾರು ಹನ್ನೊಂದು ಸಾವಿರ ಕೋಟಿ ರೂಪಾಯಿಗಳಾಗುತ್ತವೆ. ಇಷ್ಟೆಲ್ಲ ಲೂಟಿ ಮಾಡಿರುವವರು ಅಲ್ಲಿ ಇಲ್ಲಿ ಅಡ್ಡಾಡುತ್ತಾರೆ, ವಿಧಾನಸೌಧದಲ್ಲಿ ಅಡ್ಡಾಡುತ್ತಿದ್ದಾರೆ. ಆದರೂ ಸರ್ಕಾರ ಅವರ ಮೇಲೆ ಕ್ರಮ ಕೈಗೊಂಡಿಲ್ಲ. ಇಂಥವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಬೇಕು. ಈಗ ಮಾನ್ಯ ಸದಾನಂದಗೌಡರು ಮುಖ್ಯಮಂತ್ರಿ ಆಗಿರುವಾಗ ಕ್ರಮ ಕೈಗೊಳ್ಳುವುದಕ್ಕೆ ಸಂಬಂಧಪಟ್ಟವರು ಏಕೆ ಹೆದರಬೇಕು? ಇದು ಹಿಂದಿನ ಕಾಲದಲ್ಲಿ ಆಗಿರುವಂಥದ್ದು ಎನ್ನುವ ಭಾವನೆ ಇರಬಹುದು. ಹಿಂದಿನ ಕಾಲ ಎಂದರೆ ಕೇವಲ ಮಾನ್ಯ ಯಡಿಯೂರಪ್ಪನವರ ಕಾಲ ಎಂದರ್ಥವಲ್ಲ, ಅವರ ಹಿಂದೆ ಇದ್ದಂಥ ಎಲ್ಲರೂ ಬರುತ್ತಾರೆ . . .

**ಸಭಾಪತಿಯವರು:–** ಮಾನ್ಯ ಹೊರಟ್ಟಿಯವರೆ, ನೀವೇನು ಪ್ರಶ್ನೆಯನ್ನು ಕೇಳಬೇಕೆಂದಿದ್ದೀರೋ ಅದನ್ನು ಕೇಳಿ.

**ಶ್ರೀ ಬಸವರಾಜ ಹೊರಟ್ಟಿ:–** ಇಷ್ಟೆಲ್ಲ ಜಮೀನು ಲೂಟಿಯಾಗಿದೆ. ಲೂಟಿ ಮಾಡಿರುವವರ ಹೆಸರುಗಳೇನು, ಅವರ ಮೇಲೆ ಏಕೆ ಕ್ರಮ ಕೈಗೊಂಡಿಲ್ಲ ಎನ್ನುವುದನ್ನು ಹೇಳಬೇಕು.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಗಳೇ, ಮಾನ್ಯ ಹೊರಟ್ಟಿಯವರು ಹೇಳಿರುವಂಥದ್ದು ಸತ್ಯವಾಗಿದೆ. ಬೆಂಗಳೂರು ಜಿಲ್ಲೆ ವಿಭಜನೆಯಾದ ನಂತರ ಬೆಂಗಳೂರು ಗ್ರಾಮಾಂತರ ಜಿಲ್ಲೆಯಿಂದ ಬೆಂಗಳೂರು ನಗರ ಜಿಲ್ಲೆಗೆ ಒಟ್ಟು 19,753 ಭೂ ಮಂಜೂರಾತಿ ಕಡತಗಳು ವರ್ಗಾವಣೆಯಾದವು. ಇದರಲ್ಲಿ ಸುಮಾರು 1376 ಕಡತಗಳು ದರಖಾಸ್ತು ಮಂಜೂರಾತಿಗೆ ಸಂಬಂಧಪಟ್ಟ ಕಡತಗಳು. ಮೇಲ್ನೋಟಕ್ಕೆ 382 ಕಡತಗಳು ಅಕ್ರಮ ಕಡತಗಳು ಎನ್ನುವುದು ನಮ್ಮ ಗಮನಕ್ಕೆ ಬಂದಿದೆ. ಅಕ್ರಮ ಕಡತಗಳಲ್ಲಿ ಮಂಜೂರಾದ ಸರ್ಕಾರಿ ಜಮೀನು ಸುಮಾರು 2580 ಎಕರೆಗಳು. ಇದು ಬೆಂಗಳೂರು ಜಿಲ್ಲೆ ವಿಭಜನೆಯಾಗುವುದಕ್ಕೆ ಮುಂಚೆ ಮತ್ತು ನಂತರ ಬೇರೆ

ಬೇರೆ ಹಂತಗಳಲ್ಲಿ ಈ ಅಕ್ರಮ ಕಡತಗಳು ತಯಾರಾಯಿತು ಎನ್ನುವುದು ನಮಗೆ ಗೊತ್ತಾಗಿದೆ. ಅಕ್ರಮ ದಾಖಲೆಗಳ ಮೂಲಕ ಸರ್ಕಾರಿ ಜಮೀನು ಮಂಜೂರಾತಿ ಪಡೆದವರ ಸಂಖ್ಯೆ 1127. ಅದರಲ್ಲಿ ಈಗಾಗಲೇ 258 ಜನ ಖಾತೆ ಮಾಡಿಸಿಕೊಂಡು ಬಿಟ್ಟಿದ್ದಾರೆ. ಸುಮಾರು 869 ಜನ ಇನ್ನೂ ಖಾತೆಗಳನ್ನು ಮಾಡಿಸಿಕೊಂಡಿಲ್ಲ. ಇವರ ಹೆಸರುಗಳು, ಜಮೀನು ವಿಸ್ತೀರ್ಣ ಈ ಕುರಿತು ನಾವು ಈಗಾಗಲೇ ವಿವರಗಳನ್ನು ತಯಾರು ಮಾಡಿದ್ದೇವೆ. ಸೆಕ್ಷನ್ 192(ಎ) ಮತ್ತು 192 (ಬಿ)ಯ ಅಡಿಯಲ್ಲಿ ಅವರ ಮೇಲೆ ಕ್ರಿಮಿನಲ್ ಕೇಸ್ ಜರುಗಿಸುವಂಥದ್ದು ಮತ್ತು ಅಕ್ರಮವಾಗಿ ಮಂಜೂರಾಗಿರುವ ಜಮೀನುಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವಂತಹ ಎಲ್ಲಾ ಪ್ರಕ್ರಿಯೆಗಳನ್ನು ಪ್ರಾರಂಭ ಮಾಡಲು ಬೇಕಾದ ಎಲ್ಲಾ ಕಡತಗಳನ್ನು ತಯಾರು ಮಾಡಿದ್ದೇವೆ. ಕಾನೂನುಬಾಹಿರವಾಗಿ ಮಂಜೂರಾತಿ ಪಡೆದಿರುವ ಜಮೀನಿನ ಬೆಲೆ ಸುಮಾರು ಐದು ಸಾವಿರ ಕೋಟಿಯಷ್ಟಾಗುತ್ತದೆ ಎನ್ನುವುದು ನಮ್ಮ ಗಮನಕ್ಕೆ ಬಂದಿದೆ. ಕಳೆದ ನಾಲ್ಕೈದು ತಿಂಗಳುಗಳಿಂದ ಈ ದಿಸೆಯಲ್ಲಿ ಕೈಗೊಳ್ಳಬೇಕಾದ ಪ್ರಕ್ರಿಯೆಗಳನ್ನು ಸ್ಪೀಡ್‌ಅಪ್ ಮಾಡಲು ಸೂಕ್ತ ಕೆಲಸಕಾರ್ಯಗಳನ್ನು ಮಾಡುತ್ತಿದ್ದೇವೆ. ನಾನು ಸದನಕ್ಕೆ ಒಂದು ಭರವಸೆ ಕೊಡಲಿಚ್ಛಿಸುತ್ತೇನೆ. ಮುಂದಿನ 15 ದಿನಗಳ ಒಳಗೆ ಇದನ್ನು ಕ್ಯಾಬಿನೆಟ್‌ಗೆ ತಂದು . . ಮಾನ್ಯ ಸದಸ್ಯರುಗಳು, ಅಧಿಕಾರಿಗಳು ತಪ್ಪಿತಸ್ಥರಾಗಿರುವುದರಿಂದ ಇದನ್ನು ಏಕೆ ಕ್ಯಾಬಿನೆಟ್‌ಗೆ ತರಬೇಕು, ಸೋಮೋಟೋ ಕ್ರಮ ಕೈಗೊಳ್ಳಬಹುದಲ್ಲ ಎಂದು ಕೇಳಬಹುದು. ಆದರೆ ಎಲ್ಲಾ ಕಡತಗಳನ್ನು nullify ಮಾಡಬೇಕು ಮತ್ತು ಈ ಪ್ರಕರಣಗಳಲ್ಲಿ ಹೆಚ್ಚು ವಿಸ್ತೀರ್ಣದ ಜಾಗ ಸೇರಿಕೊಂಡಿರುವ ಹಿನ್ನೆಲೆಯಲ್ಲಿ ಬಿಲ್ಡರ್‌ಗಳ ಮೇಲೆ ಮತ್ತು ಬಾಕಿಯವರ ಮೇಲೆ ಕ್ರಮ ಕೈಗೊಳ್ಳಬೇಕಾಗುತ್ತದೆ. ನಾನು ಭರವಸೆಯಿಂದ ಮಾನ್ಯ ಹೊರಟ್ಟಿಯವರಿಗೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ವಿಚಾರದಲ್ಲಿ, ಯಾವುದೇ ಸಂದರ್ಭದಲ್ಲೂ, ಯಾವುದೇ ಒತ್ತಡಕ್ಕೆ ನಮ್ಮ ಸರ್ಕಾರ ಮಣಿಯುವುದಿಲ್ಲ, ನಾವೂ ಮಣಿಯುವುದಿಲ್ಲ. ಅಧಿಕಾರಿಗಳಿರಬಹುದು, ಬಿಲ್ಡರ್ಸ್ ಇರಬಹುದು ಅಥವಾ ಯಾರೇ ಇರಬಹುದು ಅವರೆಲ್ಲರ ಮೇಲೆ ನಾವು ಕ್ರಿಮಿನಲ್ ಕೇಸುಗಳನ್ನು ದಾಖಲು

ಮಾಡಬೇಕು ಮತ್ತು ಎಲ್ಲ ಜಾಗವನ್ನು ಮತ್ತೆ ಸ್ವಾಧೀನಪಡಿಸಿಕೊಳ್ಳಬೇಕು. ಇದರ ಬಗ್ಗೆ ನಮ್ಮ ಕಮಿಟ್‌ಮೆಂಟ್ ಇದೆ. ನಾವು ಮಾಡಿಯೇ ಮಾಡುತ್ತೇವೆ. 15–20 ದಿನಗಳ ಒಳಗೆ ಇದನ್ನು ಕ್ಯಾಬಿನೆಟ್‌ಗೆ ತಂದು ಮುಂದಿನ ಹೆಜ್ಜೆ ಇಡುತ್ತೇವೆ, ಮುಂದಿನ ಒಂದು ತಿಂಗಳ ಒಳಗೆ ಏನು ಕ್ರಮ ಕೈಗೊಳ್ಳುತ್ತೇವೆ ಎನ್ನುವುದನ್ನು ಮಾನ್ಯ ಹೊರಟ್ಟಿಯವರಿಗೆ ತಿಳಿಸಲು ಬದ್ಧನಾಗಿದ್ದೇನೆ.

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಗಳೇ, ಸರ್ಕಾರ ಮುಂದೆ, ಬಾಲಸುಬ್ರಹ್ಮಣ್ಯನವರ ವರದಿಯಲ್ಲೇನು 43 ಸಾವಿರ ಎಕರೆಗೆ ಸಂಬಂಧಪಟ್ಟಂತೆ ಪ್ರಸ್ತಾಪ ಇದೆಯೋ ಅದೂ ಕೂಡ ಇದೆ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ, 1167 ಪ್ರಕರಣಗಳ ಪೈಕಿ 662 ಪ್ರಕರಣಗಳು ದರಖಾಸ್ತು ಮಂಜೂರಾತಿಗೆ ಸಂಬಂಧಿಸಿವೆ ಎಂದು ಹೇಳಿದರು. ಇದು ಬಹಳ ಮುಖ್ಯವಾದುದು. ದರಖಾಸ್ತಿಗೆ ಹಾಕಿದವರು ಯಾರು?

**ಸಭಾಪತಿಯವರು:–** ಅದರ ಪಟ್ಟಿಯನ್ನು ಕೊಡುತ್ತೇವೆ ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ.

**ಶ್ರೀ ಎಂ.ಸಿ. ನಾಣಯ್ಯ:–** ಒಂದು ಎಕರೆ ಜಮೀನಿನ ಬೆಲೆ 2 ಕೋಟಿ ರೂಪಾಯಿಗಳಾಗಿವೆ. ದರಖಾಸ್ತು ಮಂಜೂರಾತಿಗೆ ಹಾಕಿರುವವರು ಬೇರೆಯವರ ಹೆಸರಿನಲ್ಲಿ, ಬೇನಾಮಿ ಹೆಸರುಗಳಲ್ಲಿ ಹಾಕಿದ್ದಾರೆ. ಈ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಸಲಹೆ ಕೊಡುತ್ತೇನೆ. ಎಲ್ಲಾ ದರಖಾಸ್ತು ಅರ್ಜಿಗಳನ್ನು ರದ್ದು ಮಾಡಬೇಕು. ಏಕೆಂದರೆ ಇವತ್ತು ಒಂದು ಎಕರೆ ಜಮೀನಿನ ಬೆಲೆ 5 ಕೋಟಿ ರೂಪಾಯಿಗಳು. ಇನ್ನು ಮುಂದಕ್ಕೆ ಯಾವುದೇ ದರಖಾಸ್ತು ಅರ್ಜಿಗಳಿಗೆ ಸರ್ಕಾರ ಮಂಜೂರಾತಿ ಕೊಡಬಾರದು. ಸರ್ಕಾರ ಕೊಟ್ಟಿರುವ ಉತ್ತರದಲ್ಲಿ "2580.2.12 ಎಕರೆ ವಿಸ್ತೀರ್ಣದ ಜಮೀನನ್ನು ಸೃಷ್ಟಿತ ದಾಖಲೆಗಳ ಮೂಲಕ ಕಬಳಿಸಲು ಪ್ರಯತ್ನಿಸಿದ್ದಾರೆ. ಈ ಪೈಕಿ 258 ಜನರು ಮಾತ್ರ ತಮ್ಮ ಹೆಸರಿಗೆ ಖಾತೆಗಳನ್ನು ಈ ಪ್ರಕರಣಗಳ ಕಡತಗಳು ಬೆಂಗಳೂರು ನಗರ ಜಿಲ್ಲೆಗೆ 2007–08ರಲ್ಲಿ ವರ್ಗಾವಣೆ ಆಗುವ ಪೂರ್ವದಲ್ಲಿಯೇ, ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿಗಳ ಕಚೇರಿಯ

ಅಭಿಲೇಖಾಲಯದಲ್ಲಿ ಇರುವಂತಹ ಸಂದರ್ಭದಲ್ಲಿ, ಅಲ್ಲಿಂದ ದೃಢೀಕೃತ ಸಾಗುವಳಿ ಚೀಟಿ, ಜಿಲ್ಲಾಧಿಕಾರಿಗಳ ಓ.ಎಂ. ಇತ್ಯಾದಿಗಳನ್ನು ಪಡೆದುಕೊಂಡು ಆಗಲೇ ಖಾತೆಗಳನ್ನು ಬದಲಾವಣೆ ಮಾಡಿಸಿಕೊಂಡಿದ್ದಾರೆ" ಎಂಬ ಅಂಶ ಇದೆ. ಇದನ್ನು ಯಾರು ಮಾಡಿದರು? 258 ಪ್ರಕರಣಗಳಲ್ಲಿ ಸರ್ಕಾರಿ ಜಮೀನನ್ನು ವರ್ಗಾವಣೆ ಮಾಡಬೇಕಾದರೆ ಅದನ್ನು ಯಾರು ನೋಡಲಿಲ್ಲವೇ? ಜಿಲ್ಲಾಧಿಕಾರಿಗಳು ನೋಡಲಿಲ್ಲವೇ? ತಹಸೀಲ್ದಾರರು ನೋಡಲಿಲ್ಲವೇ? ವಿಲೇಜ್ ಅಕೌಂಟೆಂಟ್ ನೋಡಲಿಲ್ಲವೇ? ಈ ಅಧಿಕಾರಿಗಳ ವಿರುದ್ಧ ಈಗ ಏನು ಕ್ರಮ ಕೈಗೊಳ್ಳುತ್ತೀರಿ? ಇನ್ನು ಮುಂದಕ್ಕೆ ಈ ದರಖಾಸ್ತು ಅರ್ಜಿಗಳನ್ನು ರದ್ದು ಮಾಡಬೇಕಾಗುತ್ತದೆ ಮತ್ತು ವರ್ಗಾವಣೆ ಮಾಡಿದ ಅಧಿಕಾರಿಗಳು ಯಾರಿದ್ದಾರೋ ಅವರ ಮೇಲೆ ಏನು ಕ್ರಮ ಕೈಗೊಳ್ಳುತ್ತೀರಿ ಎಂಬುದನ್ನು ಹೇಳಬೇಕು.

**ಶ್ರೀ ವಿ.ಆರ್. ಸುದರ್ಶನ್:-** ಖಾತಾ ಬದಲಾವಣೆಗಳನ್ನೂ ಕೂಡ ರದ್ದು ಮಾಡಬೇಕಾಗುತ್ತದೆ.

**ಶ್ರೀ ಬಸವರಾಜ ಹೊರಟ್ಟಿ:-** 1167 ಪ್ರಕರಣದಲ್ಲಿ 9900 ಎಕರೆಗಳನ್ನು ಅಕ್ರಮವಾಗಿ ಪಡೆದುಕೊಳ್ಳಲಾಗಿದೆ ಎನ್ನುವ ಮಾಹಿತಿ ನನ್ನ ಕಡೆ ಇದೆ. ಮತ್ತೆ, ಇದರಲ್ಲಿ ಯಾರು ಶಾಮೀಲಾಗಿದ್ದಾರೋ ಅವರ ಹೆಸರುಗಳನ್ನೂ ತಿಳಿಸಬೇಕು.

**ಶ್ರೀ ಡಿ.ವಿ. ಸದಾನಂದಗೌಡ:-** ಈಗ ಇದು ತನಿಖೆ ಹಂತದಲ್ಲಿದೆ. ನಾವು ಎಲ್ಲಾ ಪೇಪರ್‌ಗಳನ್ನು ರೆಡಿ ಮಾಡುತ್ತಿದ್ದೇವೆ. ಈ ಹಂತದಲ್ಲಿ ಹೆಸರುಗಳನ್ನು ಬಹಿರಂಗಪಡಿಸಿದರೆ ತನಿಖೆಗೆ ತೊಂದರೆ ಆಗುವಂತಹ ಎಲ್ಲಾ ಲಕ್ಷಣಗಳಿರುವಂಥದ್ದನ್ನು ನಾವು ಕಂಡಿದ್ದೇವೆ. ನಾನು ಸದನದಲ್ಲೇ ಭರವಸೆ ಕೊಡುತ್ತಿದ್ದೇನೆ. 15-20 ದಿನಗಳ ಒಳಗೆ ಇದನ್ನು ಕ್ಯಾಬಿನೆಟ್‌ಗೆ ತಂದು, ಅವರ ಹೆಸರುಗಳನ್ನು ಬಹಿರಂಗ ಮಾಡುವಂಥದ್ದು ಮತ್ತು ಅದರ ಪಟ್ಟಿಯನ್ನು ನೀಡುವಂತಹ ಎಲ್ಲಾ ಕೆಲಸಗಳನ್ನು ಮಾಡುತ್ತೇವೆ. ಈಗಾಗಲೇ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಈ ವಿಚಾರಕ್ಕೆ ಸಂಬಂಧಿಸಿದಂತೆ ಆರು ಮೀಟಿಂಗ್‌ಗಳು ನಡೆದಿವೆ, ಬೇರೆ ಬೇರೆ ಹಂತದಲ್ಲಿ ಪ್ರಕ್ರಿಯೆಗಳನ್ನು

ಸ್ಪೀಡ್‌ಅಪ್ ಮಾಡಲೂ ಬೇಕಾದಂತಹ ಎಲ್ಲಾ ಕಾರ್ಯಗಳನ್ನು ಮಾಡಿದ್ದೇವೆ. 15–20 ದಿನಗಳ ಒಳಗೆ ಇದನ್ನು ಕ್ಯಾಬಿನೆಟ್‌ಗೆ ತರುವಂಥದ್ದು ಮತ್ತು ಒಂದು ತಿಂಗಳ ಒಳಗೆ ಇದರ ಮೇಲೆ ಕಾರ್ಯಾಚರಣೆ ಮಾಡುವಂತಹ ಎಲ್ಲಾ ಕೆಲಸ ಕಾರ್ಯಗಳನ್ನು ಮಾಡುತ್ತೇವೆ. ಯಾವುದೇ ಒತ್ತಡಕ್ಕೆ ಮಣಿಯುವ ಸಂಗತಿಗಳಿಲ್ಲ ಎನ್ನುವುದನ್ನು ನಿಶ್ಚಿತವಾಗಿ ಹೇಳಬಯಸುತ್ತೇನೆ. ಸರ್ಕಾರದ ಒಂದಿಂಚು ಭೂಮಿಯನ್ನೂ ಸ್ವಾಧೀನಪಡಿಸಿಕೊಳ್ಳುವ ನಿಟ್ಟಿನಲ್ಲಿ ಹಿಂದು–ಮುಂದು ನೋಡುವುದಿಲ್ಲ. ಅಧಿಕಾರಿಗಳಿರಲಿ, ಬಿಲ್ಡರ್ಸ್ ಇರಲಿ ಅಥವಾ ಯಾವ ಫಲಾನುಭವಿಗಳು ಇದರ ಹಿಂದೆ ಇದ್ದಾರೋ ಅವರೆಲ್ಲರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುತ್ತೇವೆ.

**ಶ್ರೀಮತಿ ಮೋಟಮ್ಮ:–** ತಪ್ಪಿತಸ್ಥರ ಹೆಸರುಗಳನ್ನು ಬಹಿರಂಗ ಮಾಡುವುದರಿಂದ ತನಿಖೆಗೆ ಹೇಗೆ ಅಡ್ಡಿಯಾಗುತ್ತದೆ? ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳಿರುವುದರ ಹಿನ್ನೆಲೆಯಲ್ಲೂ ಪ್ರಭಾವಿಗಳು ತನಿಖೆಗೆ ಅಡ್ಡಿ ಮಾಡಬಹುದಲ್ಲವೇ? ಹೆಸರು ಪ್ರಕಟ ಮಾಡುವುದರಿಂದ ಏನು ತೊಂದರೆಯಾಗುತ್ತದೆ? ದಯಮಾಡಿ ಹೆಸರುಗಳನ್ನು ಪ್ರಕಟ ಮಾಡಿ.

**ಶ್ರೀ ಎಂ.ಸಿ. ನಾಣಯ್ಯ:–** ನಾವು ಇವತ್ತು ಪಕ್ಷಾತೀತವಾಗಿ ಮಾತನಾಡಬೇಕಾಗುತ್ತದೆ . .

**ಸಭಾಪತಿಯವರು:–** ಮಾನ್ಯ ನಾಣಯ್ಯನವರೆ, ಮೊದಲನೆಯ ಪ್ರಶ್ನೆಗೆ 15 ನಿಮಿಷ ಹೋಗಿಬಿಟ್ಟರೆ ಮುಂದಿನ ಪ್ರಶ್ನೆಗಳನ್ನು ಹೇಗೆ ತೆಗೆದುಕೊಳ್ಳಬೇಕು...

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಗಳೆ, ಹತ್ತತ್ತು ಸಾವಿರ ಕೋಟಿಗಳು ಹೋಗುತ್ತಿರುವಾಗ ಹತ್ತು ನಿಮಿಷ ಹೆಚ್ಚು ತೆಗೆದುಕೊಂಡರೆ ಏನಾಗುವುದಿಲ್ಲ. ಸರ್ಕಾರ ಪ್ರಮುಖರ ಹೆಸರುಗಳ ಪಟ್ಟಿಯನ್ನು ಕೊಡಲಿ.

**ಶ್ರೀ ಡಿ.ವಿ. ಸದಾನಂದಗೌಡ:–** ನಾವು ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿ, ಒಂದು ತೀರ್ಮಾನವಾದಾಗ ಅದು ಮಾಧ್ಯಮಗಳಿಗೆ ಹೋಗಿಯೇ ಹೋಗುತ್ತದೆ. ಇದರಲ್ಲಿ ಎರಡು ಮಾತಿಲ್ಲ. ನಾನು ಹೇಳುತ್ತಿರುವಂಥದ್ದು ಇದರ ಬಗ್ಗೆ ನಾವು ಏನು ನಿಶ್ಚಯ ಮಾಡಿದ್ದೇವೆ ಆ ದಾರಿಯಲ್ಲಿ ಹೋಗುವುದು ನಿಶ್ಚಿತ. ಯಾವುದೇ ಸಂಶಯ ಬೇಡ. ಹೆಸರುಗಳನ್ನು ಬಹಿರಂಗ ಮಾಡುತ್ತೇವೆ.

**ವಯೋವೃದ್ಧರಿಗೆ ಪಿಂಚಣಿ ಸ್ಥಗಿತಗೊಳಿಸಿರುವ ಕುರಿತು.**

**362; ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ರಾಜ್ಯದಲ್ಲಿನ ವಯೋವೃದ್ಧರಿಗೆ ಮತ್ತು ವಿಧವೆಯರಿಗೆ ಸರ್ಕಾರದ ವತಿಯಿಂದ ನೀಡುತ್ತಿದ್ದ ಪಿಂಚಣಿ ಹಣವನ್ನು ಸ್ಥಗಿತಗೊಳಿಸಿರುವುದರಿಂದ ಇವರಿಗೆ ಜೀವನ ನಡೆಸಲು ತುಂಬಾ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಇವರ ಜೀವನೋಪಾಯಕ್ಕೆ ಸರ್ಕಾರ ಅತಿ ಜರೂರಾಗಿ ಪಿಂಚಣಿ ಯೋಜನೆಯನ್ನು ಜಾರಿಗೊಳಿಸುವ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಯವರು)**

ಅ) ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಾದ ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ, ವಿಧವಾ ವೇತನ, ಅಂಗವಿಕಲ ವೇತನ ಹಾಗೂ ಸಂಧ್ಯಾ ಸುರಕ್ಷಾ ಯೋಜನೆಗಳಡಿಯಲ್ಲಿ ಹಾಲಿ ಇರುವ ಅರ್ಹ ಫಲಾನುಭವಿಗಳಿಗೆ ಡಿಸೆಂಬರ್–11 ರ ಮಾಹೆಯವರೆಗೂ ಪಿಂಚಣಿ ವಿತರಿಸಲಾಗಿರುತ್ತದೆ. ಹಾಗೂ ಸಂಖ್ಯೆ: ಆರ್‌ಡಿ 106 ಡಿಎಸ್‌ಪಿ 2011, ದಿನಾಂಕ:06/01/2012 ರನ್ವಯ ಭೌತಿಕ ಪರಿಶೀಲನಾ ಕಾರ್ಯದ ಸಂದರ್ಭದಲ್ಲಿ ಕಾರಣಾಂತರದಿಂದ ಅರ್ಹ ಫಲಾನುಭವಿಗಳ ಪಿಂಚಣಿಯನ್ನು ರದ್ದುಪಡಿಸಿದ ಸಂದರ್ಭದಲ್ಲಿ ಇಂತಹ ಪ್ರಕರಣಗಳಲ್ಲಿ ಪಿಂಚಣಿ ವಿತರಣಾ ಕಾರ್ಯವನ್ನು ಮುಂದುವರೆಸುವ ಕುರಿತು ಅನುಸರಿಸಬೇಕಾದ ಕ್ರಮಗಳನ್ನು ಈಗಾಗಲೇ ತಿಳಿಸಲಾಗಿದೆ.

ಆ)

1. ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಪಿಂಚಣಿ ಹಣವನ್ನು ಅರ್ಹ ಫಲಾನುಭವಿಗಳಿಗೆ ಡಿಸೆಂಬರ್–11 ರವರೆಗೂ ವಿತರಿಸಲಾಗಿರುತ್ತದೆ.
2. ಭೌತಿಕ ಪರಿಶೀಲನಾ ಕಾರ್ಯ ಪೂರ್ಣಗೊಂಡಿರುವ 26 ಜಿಲ್ಲೆಗಳಲ್ಲಿ (ಬಳ್ಳಾರಿ, ಬಿಜಾಪುರ, ಬಾಗಲಕೋಟೆ ಹಾಗೂ ರಾಯಚೂರು ಜಿಲ್ಲೆಗಳನ್ನು ಹೊರತುಪಡಿಸಿ) ಮೇಲ್ಕಂಡ ಯೋಜನೆಗಳಡಿ ಹೊಸ ಮಂಜೂರಾತಿ ಕಾರ್ಯವನ್ನು ಪ್ರಾರಂಭಿಸಲಾಗಿರುತ್ತದೆ.

**ಶ್ರೀ ಇ. ಕೃಷ್ಣಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಒದಗಿಸಿದ್ದಾರೆ. ಆದರೆ, ಈ ಯೋಜನೆ ಸುಮಾರು 30 ವರ್ಷಗಳಿಂದ ಜಾರಿಯಲ್ಲಿದೆ. ಹಿಂದೆ ಕೆಲವು ಒಂದೆರಡು ತಿಂಗಳು ಅಡೆತಡೆಗಳಿದ್ದವು. ಈ ವೃದ್ಧಾಪ್ಯ ವೇತನ, ವಿಧವಾ ವೇತನ, ಅಂಗವಿಕಲರ ವೇತನ ಇರಬಹುದು, ಒಂದೆರಡು ತಿಂಗಳು ತಡವಾಗಿಯಾದರೂ ಮತ್ತೆ ಕೊಡುವಂತಹ ಪ್ರವೃತ್ತಿ ಇತ್ತು. ಇತ್ತೀಚಿನ ದಿನಗಳಲ್ಲಿ ಕಳೆದ ವರ್ಷ 8 ತಿಂಗಳವರೆಗೂ ವೃದ್ಧಾಪ್ಯ ವೇತನವನ್ನು ಕೊಟ್ಟಿಲ್ಲ. ಈಗ ಹೆಚ್ಚಿನ ಬೋಗಸ್ ವೃದ್ಧಾಪ್ಯ ವೇತನದ ಅರ್ಜಿಗಳು ಸೇರಿಕೊಂಡಿವೆ ಎಂದು ಸತತ ಮೂರು ತಿಂಗಳಿಂದ ಅವರಿಗೆ ವೇತನ ಬಿಡುಗಡೆಯಾಗಿಲ್ಲ. ಎಲ್ಲಾ ವರ್ಗಕ್ಕೂ ಸಂಘಟನೆಗಳಿವೆ. ಅಂಗನವಾಡಿ, ಉಪಾಧ್ಯಾಯರು, ಬೇರೆ ಬೇರೆ ಸಾರ್ವಜನಿಕ ಜೀವನದಲ್ಲಿ ಸೇವೆ ಸಲ್ಲಿಸುವಂಥ ವರ್ಗ ಇರಬಹುದು, ಅವರಿಗೆಲ್ಲಾ ಸಂಘಟನೆಗಳಿವೆ. ಆದರೆ, ವೃದ್ಧರಿಗೆ ಸಂಘಟನೆಗಳಿಲ್ಲ. ಅವರು ಕೇಳುವುದಿಲ್ಲವೆಂದು ನಮಗೆ ಇಷ್ಟ ಬಂದಂತೆ ಆರು ತಿಂಗಳಿಗೆ, ಎಂಟು ತಿಂಗಳಿಗೆ, ಒಂದು ವರ್ಷಕ್ಕಾದರೂ ಕೊಡಬಹುದು ಎನ್ನುವ ತಾತ್ಸಾರ ಮನೋಭಾವ ನಮ್ಮ ಸರ್ಕಾರಿ ಅಧಿಕಾರಿಗಳಿಗೂ ಮತ್ತು ನಮಗೂ ಇದೆ ಎಂದು ಅನಿಸುತ್ತದೆ. ಮಾನ್ಯ ಮುಖ್ಯಮಂತ್ರಿಗಳಿಗೆ ಸಾರ್ವಜನಿಕವಾಗಿ ಬಹಳ ಒಳ್ಳೆಯ ಮನಸ್ಸು ಇದೆ. ನಾವು ಒಂದನೇ ತಾರೀಖು ಎಲ್ಲಾ ಅಧಿಕಾರಿಗಳಿಗೂ

ಸಂಬಳ ಕೊಡುತ್ತೇವೆ. ವೃದ್ಧರಿಗೆ ಮಾತ್ರ ಮೂರು–ನಾಲ್ಕು ತಿಂಗಳಿಗೆ ಸಂಬಳ ಕೊಡುತ್ತೇವೆಂದರೆ ಅವರ ಕಷ್ಟವನ್ನು ಕೇಳುವವರು ಯಾರು?

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಕೃಷ್ಣಪ್ಪರವರ ಕಾಳಜಿಗೆ ಖಂಡಿತವಾಗಿಯೂ ನನಗೆ ಗೌರವವಿದೆ. ವಿಶೇಷವಾಗಿ ಸಂಧ್ಯಾ ಸುರಕ್ಷಾ ಯೋಜನೆ ಯಾವ ರೀತಿ ನಡೆದಿದೆ ಎಂಬುದನ್ನು ನೋಡಬಹುದು. 2006–07 ರಲ್ಲಿ ಫಲಾನುಭವಿಗಳ ಸಂಖ್ಯೆ 16,48,420 ಇತ್ತು. ಸಂಧ್ಯಾ ಸುರಕ್ಷಾ ವೇತನ, ವಿಧವಾ ವೇತನ, ಅಂಗವಿಕಲರ ವೇತನ ಎಲ್ಲಾ ಸೇರಿ 2010–11ರಲ್ಲಿ ಫಲಾನುಭವಿಗಳ ಸಂಖ್ಯೆ 40,88,125 ಆಗಿದೆ. ನಾವು ಈಗಾಗಲೇ ಇದನ್ನು ಸ್ಟ್ರೀಮ್‌ಲೈನ್ ಮಾಡಬೇಕೆಂದು ಎಲ್ಲಾ ಪ್ರಯತ್ನ ಮಾಡಿದ್ದೇವೆ. ಆದರೆ, ಕೆಲವು ಕಡೆ ಬೋಗಸ್ ಅರ್ಜಿ ಸಲ್ಲಿಸಿ ವೃದ್ಧಾಪ್ಯ ವೇತನ ತೆಗೆದುಕೊಂಡಿದ್ದಾರೆ ಎಂದು ನಮ್ಮ ಗಮನಕ್ಕೆ ಬಂದ ಮೇಲೆ ಇದನ್ನು ವೆರಿಫಿಕೇಶನ್ ಮಾಡಬೇಕೆಂದು ಆಲೋಚನೆ ಮಾಡಿದೆವು. ಇದನ್ನು ವೆರಿಫಿಕೇಶನ್ ಮಾಡಿದಾಗ ತೀರಿಕೊಂಡವರಿಗೂ ಕೂಡ ವೇತನ ಹೋಗುತ್ತಿದೆ ಎನ್ನುವ ಸಂಗತಿ ಗೊತ್ತಾಯಿತು. ಈಗ ಅದನ್ನು ವಸೂಲು ಮಾಡುತ್ತಿದ್ದಾರೆ. ಒಂದಕ್ಕಿಂತ ಹೆಚ್ಚು ಪಿಂಚಣಿ ಪಡೆಯುತ್ತಿರತಕ್ಕಂಥ ಅನರ್ಹರ ಸಂಖ್ಯೆ ಒಟ್ಟು 5.19 ಲಕ್ಷ ಎನ್ನುವ ಸಂಗತಿ ಬೇರೆ ಬೇರೆ ಪರಿಶೀಲನೆ ಕಾರ್ಯಗಳಿಂದ ಗೊತ್ತಾಗಿದೆ. ಅಂದರೆ ರಾಜ್ಯದ ಬೊಕ್ಕಸಕ್ಕೆ ಪ್ರತಿ ವರ್ಷ ಸುಮಾರು 250 ಕೋಟಿ ರೂಪಾಯಿಗಳು ನಷ್ಟ ಆಗುತ್ತಿರುವ ಕೆಲಸ ಕಾರ್ಯಗಳು ಆಗುತ್ತಿವೆ. ಇದನ್ನು ನಾವು ವೆರಿಫಿಕೇಶನ್ ಮಾಡಿದೆವು. ಈಗ ವೆರಿಫಿಕೇಶನ್ ಕೆಲಸ ಚುರುಕುಗೊಳಿಸಿದ್ದೇವೆ. ಮಾನ್ಯ ಕೃಷ್ಣಪ್ಪನವರು ಹೇಳುತ್ತಿರುವುದು ನಿಜ. ವೆರಿಫಿಕೇಶನ್ ಸಂದರ್ಭದಲ್ಲಿ ಒಂದಷ್ಟು ಕಾಲ ನಾವು ಇದನ್ನು withhold ಮಾಡಿದ್ದೆವು. ನಾನು ಇದರ ಬಗ್ಗೆ ಎಲ್ಲವನ್ನು ಹೇಳುವುದಕ್ಕೆ ಹೋಗುವುದಿಲ್ಲ. ಡಿಸೆಂಬರ್ 2011 ರವರೆಗೆ 9 ತಾಲ್ಲೂಕುಗಳನ್ನು ಬಿಟ್ಟು ಬಾಕಿ ಎಲ್ಲಾ ತಾಲ್ಲೂಕುಗಳಲ್ಲಿ ಪೂರ್ತಿ ವಿತರಣೆ ಮಾಡುವಂತಹ ಕೆಲಸ ಕಾರ್ಯಗಳನ್ನು ಮಾಡಿದ್ದೇವೆ. ವಿಶೇಷವಾಗಿ ನಾಲ್ಕು ಜಿಲ್ಲೆಗಳಲ್ಲಿ ರಾಯಚೂರು, ಬಳ್ಳಾರಿ, ಬಾಗಲಕೋಟೆ ಮತ್ತು ಬಿಜಾಪುರದಲ್ಲಿ ವೆರಿಫಿಕೇಶನ್ ಮುಗಿಯುವುದಕ್ಕೆ

ಇನ್ನೂ ಒಂದು ವಾರ ಬೇಕು. ವೆರಿಫಿಕೇಶನ್ ಕಾರಣದಿಂದಾಗಿ for the time being ನಾವು withheld ಮಾಡಿರುವುದು ನಿಜ. ಆದರೆ, ಈಗ ಎಲ್ಲವನ್ನು ಕೊಡುವುದಕ್ಕೆ ಪ್ರಾರಂಭ ಮಾಡಿ ಕಳೆದ ನವೆಂಬರ್ ಮತ್ತು ಡಿಸೆಂಬರ್‌ನಲ್ಲಿ ಎಲ್ಲಾ ಕಡೆಗಳಲ್ಲಿ ಒಂದೇ ಸಲ ಬಿಡುಗಡೆ ಮಾಡುವಂಥದ್ದನ್ನು ಮಾಡಿದ್ದೇವೆ. ರಾಯಚೂರು, ಬಳ್ಳಾರಿ, ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ವೆರಿಫಿಕೇಶನ್ ಕೆಲಸ ಸ್ವಲ್ಪ ಬಾಕಿ ಇದ್ದ ಕಾರಣ ತಡ ಮಾಡಿದ್ದೇವೆ. ಫೆಬ್ರವರಿ 07 ರೊಳಗೆ ಜನವರಿ ಅಂತ್ಯದವರೆಗೂ ಇರುವ ಬಾಕಿಯನ್ನು ಕೊಡುತ್ತೇವೆ. ಈಗ ಡಿಸೆಂಬರ್ ಅಂತ್ಯದವರೆಗೆ ಕೊಟ್ಟಿದ್ದೇವೆ. ಹೊಸ ಅರ್ಜಿಗಳನ್ನು ಕೊಟ್ಟವರಿಗೆ ವೇತನ ಕೊಡುವುದಕ್ಕೆ ಪ್ರಾರಂಭ ಮಾಡಲಿಲ್ಲ ಎಂದು ಮಾನ್ಯ ಸದಸ್ಯರು ಹೇಳಿರುವುದು ಸಮಂಜಸವಾಗಿದೆ. ಹೊಸ ಅರ್ಜಿಗಳನ್ನು ಪರಿಶೀಲನೆ ಮಾಡಿ ಕೊಡುವಂಥದ್ದಕ್ಕೆ ಎಲ್ಲಾ ಜಿಲ್ಲೆಗಳಿಗೆ ಈಗಾಗಲೇ ಆದೇಶವನ್ನು ಕೊಟ್ಟಿದ್ದೇವೆ. ಆದಕಾರಣ ಇದರಲ್ಲಿ ಯಾವುದೇ ಸಂದರ್ಭದಲ್ಲೂ ವ್ಯತ್ಯಾಸ ಆಗುವಂಥದ್ದು ಇಲ್ಲ. ಮುಂದಿನ ತಿಂಗಳಿನಿಂದ ಆ ಜಿಲ್ಲೆಗಳಿಗೆ ಹಣವನ್ನು ಬಿಡುಗಡೆ ಮಾಡಿ ಪ್ರತಿ ತಿಂಗಳ 7ನೇ ತಾರೀಖಿನೊಳಗೆ ಫಲಾನುಭವಿಗಳಿಗೆ ತಲುಪಿಸುವಂತಹ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಸರ್ಕಾರ ಬದ್ಧವಾಗಿದೆ.

## ಲೋಕಾಯುಕ್ತ ಸಂಸ್ಥೆಯ ಬಗ್ಗೆ

### 277; ಶ್ರೀ ಅಲ್ಲಮ್ಮ ಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

**ಅ)** ಈಗ ಲೋಕಾಯುಕ್ತ ಸಂಸ್ಥೆಯ ಮುಖ್ಯಸ್ಥರು ಯಾರು;

**ಆ)** ಲೋಕಾಯುಕ್ತ ಹುದ್ದೆ ಖಾಲಿಯಾದ ನಂತರ ಲೋಕಾಯುಕ್ತರಿಗೆ ಬಂದ ದೂರುಗಳೆಷ್ಟು;

**ಇ)** ನೇರವಾಗಿ ಲೋಕಾಯುಕ್ತರಿಗೆ ಬಂದ ದೂರುಗಳನ್ನು ಯಾರು ನೋಡುತ್ತಾರೆ;

**ಈ)** ನೂತನ ಲೋಕಾಯುಕ್ತರ ನೇಮಕ ಆಗುವುದು ಯಾವಾಗ;

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿ)**

**ಅ)** ಕರ್ನಾಟಕ ಲೋಕಾಯುಕ್ತ ಅಧಿನಿಯಮ 1984 ರ ಕಲಂ 15(4) ರ ಪ್ರಕಾರ ಗೌರವಾನ್ವಿತ ಲೋಕಾಯುಕ್ತರ ಹುದ್ದೆಯು ಖಾಲಿ ಇದ್ದಾಗ, ಲೋಕಾಯುಕ್ತ ಸಿಬ್ಬಂದಿಗಳ ನಿರ್ವಹಣೆ ಬಗ್ಗೆ ಹಿರಿಯ ಉಪ ಲೋಕಾಯುಕ್ತರು, ಗೌರವಾನ್ವಿತ ಲೋಕಾಯುಕ್ತರವರ ಅಧಿಕಾರವನ್ನು ಹೊಂದಿರುತ್ತಾರೆ.

**ಆ)** 463

**ಇ)** ಲೋಕಾಯುಕ್ತರು

**ಈ)** ನೂತನ ಲೋಕಾಯುಕ್ತರ ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿದೆ

**ಶ್ರೀ ವಿ.ಆರ್. ಸುದರ್ಶನ್ (ಶ್ರೀ ಅಲ್ಲಮಪ್ರಭು ಪಾಟೀಲ್‌ರವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಲೋಕಾಯುಕ್ತರ ನೇಮಕ ಪ್ರಕ್ರಿಯೆ ಚಾಲ್ತಿಯಲ್ಲಿದೆ ಎನ್ನುವ ಮಾತನ್ನು ಸರ್ಕಾರ ಹೇಳಿದೆ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ನೇರವಾಗಿ ಕೇಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳ ಉದ್ದೇಶವನ್ನು ನಾನು ಪ್ರಶ್ನೆ ಮಾಡುತ್ತಿಲ್ಲ. ಆದರೆ, ಸರ್ಕಾರದ ದುರುದ್ದೇಶವನ್ನು ಪ್ರಶ್ನೆ ಮಾಡುವುದು ಅನಿವಾರ್ಯವಾಗಿದೆ. ಇಷ್ಟೊಂದು ಮಹತ್ವದ ಸಂಸ್ಥೆಗೆ ಮುಖ್ಯಸ್ಥರು ಇಲ್ಲದೆ ಈ ಸಂಸ್ಥೆಯನ್ನು ಸರ್ಕಾರ ಕಡೆಗಣಿಸುತ್ತಿದೆಯಲ್ಲಾ ಇದನ್ನು ಉದ್ದೇಶ ಎಂದು ಹೇಳುತ್ತಾರೆಯೋ ಅಥವಾ ದುರುದ್ದೇಶ ಎಂದು ಹೇಳುತ್ತಾರೆಯೋ ಅದನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕಾಗುತ್ತದೆ. ಎರಡನೆಯದು ಏನೆಂದರೆ, ಈ ಲೋಕಾಯುಕ್ತ ಸಂಸ್ಥೆಗೆ ಇರುವ ಕಾನೂನುಗಳಿಗೆ ಅನೇಕ ತಿದ್ದುಪಡಿಗಳನ್ನು ತರುವಂತಹ ಅವಶ್ಯಕತೆ ಇದೆ. ಅದು ಲೋಕಾಯುಕ್ತರ ಸ್ಥಾನವನ್ನು ಭರ್ತಿ ಮಾಡುವಂಥದ್ದು ಇರಬಹುದು, ಮತ್ತೊಂದು ಇರಬಹುದು. ಆ ಸಂಸ್ಥೆಯ ಮಹತ್ವದ ಹಿನ್ನಲೆಯಲ್ಲಿ ಅದಕ್ಕೆ ಇನ್ನೂ ಹೆಚ್ಚು ಶಕ್ತಿಯನ್ನು ತಂದು ಕೊಡುವಂತಹ ಕಾರಣಕ್ಕಾಗಿ, ಭ್ರಷ್ಟಾಚಾರವನ್ನು ನಿಯಂತ್ರಣ ಮಾಡುವ ಕಾರಣಕ್ಕಾಗಿ ಮತ್ತು ತಪ್ಪಿತಸ್ಥರ ಮೇಲೆ ಸಾಕಷ್ಟು ಕಠಿಣ ಕ್ರಮಗಳನ್ನು ತೆಗೆದುಕೊಳ್ಳುವ ಕಾರಣಕ್ಕಾಗಿ

ಕಾಯಿದೆಗೆ ತಿದ್ದುಪಡಿಗಳನ್ನು ತರತಕ್ಕಂಥ ಅವಶ್ಯಕತೆ ಇದೆ. ಆದ್ದರಿಂದ ಇದಕ್ಕೆ ಸಂಬಂಧಪಟ್ಟ ಹಾಗೆ ಪ್ರಕ್ರಿಯೆ ಯಾವ ಹಂತದಲ್ಲಿದೆ? ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಿರುತ್ತಾರೆ. ರಾಜ್ಯಪಾಲರು ಮಾತನಾಡುತ್ತಿರುತ್ತಾರೆ, ಪತ್ರಿಕೆಗಳಲ್ಲೂ ಸಾಕಷ್ಟು ವ್ಯಾಪಕವಾಗಿ ಬರುತ್ತಿರುತ್ತವೆ. ಸಾರ್ವಜನಿಕರ ಟೀಕೆ ಟಿಪ್ಪಣಿಗಳಿಗೆ ಮಾನ್ಯ ಮುಖ್ಯಮಂತ್ರಿಗಳು ಗಮನಹರಿಸಿರುತ್ತಾರೆ ಎಂದು ನಾನು ಭಾವಿಸುತ್ತೇನೆ. ಅವರ ಮೇಲೆ ದೊಡ್ಡ ಜವಾಬ್ದಾರಿ ಇದೆ. ಅವರಿಗೆ ಸಾಕಷ್ಟು ವಿವೇಚನೆ ಕೂಡ ಇದೆ. ಈ ಸಂಸ್ಥೆಯನ್ನು ಬಲಪಡಿಸದೆ ಕಡೆಗಣಿಸುತ್ತಾ ಹೋದರೆ ನಾಳೆ ಬರತಕ್ಕಂಥ ದಿನಗಳಲ್ಲಿ ಸಾರ್ವಜನಿಕ ಜೀವನದ ಪರಿಸ್ಥಿತಿ ಏನಾಗುತ್ತದೆ? ಆಡಳಿತದ ಅಭಿವೃದ್ಧಿ ಯಾವ ಹಂತಕ್ಕೆ ಹೋಗಿ ನಿಲ್ಲುತ್ತದೆ ಅಥವಾ ಈ ಸಂಸ್ಥೆಯನ್ನು ರದ್ದು ಮಾಡುತ್ತೇವೆ ಎನ್ನುವುದಾದರೂ ಹೇಳಿಬಿಡಿ. ಎಲ್ಲೋ ಒಂದು ಕಡೆ ಈ ರೀತಿಯ ಪ್ರಯತ್ನಗಳನ್ನು ನೋಡುತ್ತಿದ್ದರೆ ಈ ಸಂಸ್ಥೆಯ ಅಗತ್ಯ ಇಲ್ಲವೇನೋ, ಹಾಗೆಯೇ ಈ ಸಂಸ್ಥೆ ಮುಚ್ಚಿಕೊಂಡು ಹೋಗಲಿ ಎನ್ನುವ ಅಭಿಪ್ರಾಯಕ್ಕೆ ಏನಾದರೂ ಸರ್ಕಾರ ಬಂದಿದೆಯೇ ಎಂಬುದನ್ನು ನಾನು ನೇರವಾಗಿ ಮುಖ್ಯಮಂತ್ರಿಗಳಿಗೆ ಕೇಳುತ್ತಿದ್ದೇನೆ.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ತಮಗೆ ಕೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಸನ್ಮಾನ್ಯ ನಾಣಯ್ಯನವರೂ ಕೂಡ ಈ ವಿಚಾರದ ಬಗ್ಗೆ ನಿನ್ನೆ 330ರ ಅಡಿಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇವೆರಡನ್ನು ಕ್ಲಬ್ ಮಾಡುವುದಾದರೆ ಒಟ್ಟಿಗೆ ಉತ್ತರವನ್ನು ಕೊಡುವುದಕ್ಕೆ ನಾನು ತಯಾರಿದ್ದೇನೆ. ಇದಕ್ಕೆ ಉತ್ತರ ಕೊಟ್ಟರೆ ಅದಕ್ಕೂ ಉತ್ತರ ಕೊಟ್ಟ ಹಾಗೆ ಆಗುತ್ತದೆ ಎಂದು ನನಗನಿಸುತ್ತದೆ. ಏನು ಮಾಡಬೇಕೆಂದು ತಾವು ಆದೇಶವನ್ನು ಕೊಡಬೇಕು.

**ಸಭಾಪತಿಯವರು:–** ಈಗ ಪ್ರಶ್ನೆಗೆ ಉತ್ತರ ಕೊಟ್ಟುಬಿಡಿ. ಅದರ ಬಗ್ಗೆ ಆಮೇಲೆ ನೋಡೋಣ.

**ಶ್ರೀ ವಿ.ಆರ್. ಸುದರ್ಶನ್:–** ಮಾನ್ಯ ಸಭಾಪತಿಯವರೇ, ಮಾನ್ಯ ಅಲ್ಲಮ ಪ್ರಭುಪಾಟೀಲ್‌ರವರು ಹತ್ತು ದಿನಗಳ ಹಿಂದೆಯೇ ಪ್ರಶ್ನೆಯನ್ನು ಕೇಳಿದ್ದಾರೆ.

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೇ, ನಾನು ಪ್ರಸ್ತಾಪ ಮಾಡಿರುವಂಥ ನಿಲುವಳಿ ಸೂಚನೆ ತಮ್ಮ ಮುಂದೆ ಇದೆ. ಅದು ಬಂದಾಗ ನಾನು ಹೇಳುತ್ತೇನೆ.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ನಾನು ಒಂದು ವಿಚಾರವನ್ನು ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಲೋಕಾಯುಕ್ತ ಸಂಸ್ಥೆಯನ್ನು ಬಲಪಡಿಸಬೇಕೆನ್ನುವ ಇರಾದೆ ನಮಗೆ ಪೂರ್ಣವಾಗಿ ಇದೆ. ಲೋಕಾಯುಕ್ತ ಸಂಸ್ಥೆಯನ್ನು ನಿಶಕ್ತಿಗೊಳಿಸಬೇಕೆನ್ನುವ ಇರಾದೆ ಸರ್ಕಾರಕ್ಕೆ ಇಲ್ಲ. ನಾನು ಮುಖ್ಯಮಂತ್ರಿಯಾಗಿ ಬಂದ ತಕ್ಷಣ, ಬೇಕಾದರೆ ಅದರ ದಿನಾಂಕಗಳನ್ನು ಕೂಡ ನಾನು ಕೊಡಬಲ್ಲೆ. ನಾನು ಮುಖ್ಯಮಂತ್ರಿಯಾಗಿ ಬಂದ ತಕ್ಷಣ ಕಾನೂನಿನ ಚೌಕಟ್ಟಿನಲ್ಲಿ ಲೋಕಾಯುಕ್ತರ ನೇಮಕಕ್ಕೆ ಏನೆಲ್ಲಾ ಮಾಡಬೇಕು ಅವೆಲ್ಲವನ್ನು ಮಾಡಿ ರಾಜ್ಯಪಾಲರಿಗೆ ಕಳುಹಿಸಿಕೊಡುವಂತಹ ಕೆಲಸ ಕಾರ್ಯಗಳನ್ನು ಮಾಡಿದ್ದೇನೆ ಮತ್ತು ಎಲ್ಲಾ ಪ್ರಕ್ರಿಯೆಗಳು ಅಲ್ಲಿ ಬಾಕಿ ಇರುವಂಥದ್ದನ್ನು ನಾವು ನೋಡಿದ್ದೇವೆ. ವಿಶೇಷವಾಗಿ ಇವತ್ತು ಉಪ ಲೋಕಾಯುಕ್ತರಾಗಿ ನ್ಯಾಯಮೂರ್ತಿ ಮಜ್ಜಗೆಯವರು ಮತ್ತು ನ್ಯಾಯಮೂರ್ತಿ ಚಂದ್ರಶೇಖರಯ್ಯನವರು ಕಾರ್ಯ ನಿರ್ವಹಿಸುತ್ತಿದ್ದಾರೆ. ದಿನಾಂಕ:20–9–2011 ರಂದು ತೆರವಾದಂತಹ ಲೋಕಾಯುಕ್ತರ ಹುದ್ದೆ ಇನ್ನೂ ಖಾಲಿ ಇದೆ. ಅದು ಭರ್ತಿಯಾಗಬೇಕು. ಅದಕ್ಕೆ ಪ್ರಕ್ರಿಯೆಗಳು ಚಾಲನೆಯಲ್ಲಿವೆ. ನಮ್ಮ ಕಡೆಯಿಂದ ಏನಾಗಬೇಕು ಅವೆಲ್ಲಾ ಮಾಡಿ ನಾವು ರಾಜ್ಯಪಾಲರಿಗೆ ಕಳುಹಿಸಿದ್ದೇವೆ. ಈಗ ಈ ವಿಚಾರ ರಾಜ್ಯಪಾಲರ ಮುಂದೆ ಇದೆ. ಈಗ ಸುಮಾರು 463 ಪ್ರಕರಣಗಳು ಲೋಕಾಯುಕ್ತರ ವ್ಯಾಪ್ತಿಯಲ್ಲಿ ದಾಖಲಾಗಿವೆ ಎಂದು ನನಗೆ ಸಿಕ್ಕಿರುವ ಮಾಹಿತಿಗಳ ಪ್ರಕಾರ ಇದೆ. ಘನತೆವೆತ್ತ ರಾಜ್ಯಪಾಲರ ಅನುಮೋದನೆಯ ನಿರೀಕ್ಷೆಯಲ್ಲಿ ನಾವಿದ್ದೇವೆ. ಆ ಅನುಮೋದನೆ ಬಂದ ತಕ್ಷಣ ಬಾಕಿ ಕೆಲಸ ಕಾರ್ಯಗಳು ನಡೆಯುತ್ತವೆ.

**ಶ್ರೀ ವಿ.ಆರ್. ಸುದರ್ಶನ್:-** ಮಾನ್ಯ ಸಭಾಪತಿಯವರೇ, ಇದರಲ್ಲಿ ಮುಚ್ಚಿಡುವಂಥದ್ದು ಏನು ಇಲ್ಲ. ಸರ್ಕಾರ ಕಳುಹಿಸಿರುವ ಶಿಫಾರಸ್ಸನ್ನು ಅಂಗೀಕಾರ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಪುನಃ ಪುನಃ ರಾಜ್ಯಪಾಲರು ಹೇಳಿದ್ದಾರೆ ಮತ್ತು ಇದನ್ನು ಸರ್ಕಾರ ಕೂಡ ಪುನರ್ ಪರಿಶೀಲಿಸಬೇಕೆನ್ನುವ ಮಾತುಗಳನ್ನು ಹೇಳಿದ್ದಾರೆಂದು ನಾವು ಕೂಡ ಪತ್ರಿಕೆಗಳಲ್ಲಿ ನೋಡಿದ್ದೇವೆ. ಹಾಗಿದ್ದ ಮೇಲೆ ಸರ್ಕಾರದ ನಿಲುವೇನು?

**ಶ್ರೀ ಡಿ.ವಿ. ಸದಾನಂದಗೌಡ:-** ಮಾನ್ಯ ಸಭಾಪತಿಯವರೇ, ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ನಮ್ಮ ಕಡೆಯಿಂದ ಏನು ಮಾಡಬೇಕು ಆ ಎಲ್ಲಾ ಪ್ರಕ್ರಿಯೆಗಳನ್ನು ಮಾಡಿದ್ದೇವೆ. ಹಿಂದಿನ ದಿನಗಳಲ್ಲಿ ಲೋಕಾಯುಕ್ತರ ನೇಮಕಾತಿಗೆ ಸಂಬಂಧಪಟ್ಟ ಹಾಗೆ ಯಾವ ಪ್ರಕ್ರಿಯೆಗಳನ್ನು ತೆಗೆದುಕೊಳ್ಳಲಾಗಿತ್ತೋ, ಲೋಕಾಯುಕ್ತ ಕಾನೂನಿನ ಅಡಿಯಲ್ಲಿ ಯಾವ ವಿಚಾರಗಳನ್ನು ಹೇಗೆ ಮಾಡಬೇಕು, ಯಾರ ಸಲಹೆ ಸೂಚನೆಗಳನ್ನು ತೆಗೆದುಕೊಂಡು ಮಾಡಬೇಕು ಅದನ್ನೆಲ್ಲಾ ಕಾನೂನು ಬದ್ಧವಾಗಿ ಮಾಡಿ ಹೆಸರುಗಳನ್ನು ಕಳುಹಿಸಿಕೊಡಲಾಗಿದೆ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ನುಣುಚಿಕೊಳ್ಳುವ ಉತ್ತರವನ್ನು ಹೇಳಿದಂತಾಗುತ್ತದೆ. ಏಕೆಂದರೆ, ಈಗಾಗಲೇ ಈ ವಿಚಾರವಾಗಿ ಪತ್ರಿಕೆಯಲ್ಲಿ ವರದಿಯಾಗಿದೆ. ರಾಜ್ಯಪಾಲರು ಹೇಳಿದ್ದಾರೆ. ಇವತ್ತು ನೀವು ಲೋಕಾಯುಕ್ತರ ನೇಮಕಕ್ಕೆ ಏನು ಶಿಫಾರಸ್ಸು ಮಾಡಿದ್ದೀರಿ, ಇವರ ಮೇಲೆ ಕೂಡ ಹಿಂದಿನ ಲೋಕಾಯುಕ್ತರ ಮೇಲೆ ಏನು ಒಂದು ಅಪಾದನೆ ಇತ್ತು. ಅಂತಹ ಒಂದು ಅಪಾದನೆ ಇದೆ. ಆದ್ದರಿಂದ, ಇವರನ್ನು ನೇಮಕ ಮಾಡಲು ಸಾಧ್ಯವಿಲ್ಲವೆಂದು ಮಾನ್ಯ ರಾಜ್ಯಪಾಲರು ಹೇಳಿದ್ದಾರೆ.

**ಶ್ರೀ ಡಿ.ವಿ. ಸದಾನಂದಗೌಡ:-** ಮಾನ್ಯ ಸಭಾಪತಿಯವರೆ, ಈ ವಿಚಾರವನ್ನು ನಾನು ವಿವರವಾಗಿ ಚರ್ಚೆ ಮಾಡುವಂತಹ ಪ್ರಯತ್ನಗಳನ್ನು ಮಾಡುವುದಿಲ್ಲ. ಏಕೆಂದರೆ, ಈಗಾಗಲೇ ಸಾರ್ವಜನಿಕ ಹಿತಾಸಕ್ತಿಯ ಎರಡು ಕೇಸ್‌ಗಳು ಹೈಕೋರ್ಟ್‌ನಲ್ಲಿ ದಾಖಲಾಗಿವೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಮುಖ್ಯಮಂತ್ರಿಯವರೆ, . . .

**ಸಭಾಪತಿಯವರು:–** ಪ್ರಶ್ನೋತ್ತರ ಅವಧಿಯಲ್ಲಿ ಈ ರೀತಿ ಮಾಡಿದರೆ ಹೇಗೆ? ನಿಮಗೇನು ಮಾಹಿತಿಬೇಕೋ ತೆಗೆದುಕೊಳ್ಳಿ. ನನಗೇನೂ ಅಭ್ಯಂತರವಿಲ್ಲ. ಅಲೋ ಮಾಡಿ ಎಂದರೆ ನಾನು ಮಾಡುತ್ತೇನೆ.

**ಶ್ರೀ ಡಿ.ವಿ. ಸದಾನಂದಗೌಡ:–** ಈಗಾಗಲೇ 3301 ಮತ್ತು 3306 ನಂಬರ್‌ನ ಎರಡು ಸಾರ್ವಜನಿಕ ಹಿತಾಸಕ್ತಿಯ ದೂರುಗಳು ಲೋಕಾಯುಕ್ತ ನೇಮಕಾತಿ ಬಗ್ಗೆ ಹೈಕೋರ್ಟ್‌ನಲ್ಲಿ ದಾಖಲಾಗಿವೆ. ಆದಕಾರಣ, ಹೈಕೋರ್ಟ್‌ನಲ್ಲಿ ಇವುಗಳ ಬಗ್ಗೆ ಇತ್ಯರ್ಥ ಆಗುವವರೆಗೆ ಇಲ್ಲಿ ಮಾತನಾಡುವುದು sub judice ಆಗುತ್ತದೆ.

**ಶ್ರೀ ವಿ.ಆರ್. ಸುದರ್ಶನ್:–** ಮಾನ್ಯ ಸಭಾಪತಿಯವರೆ, ಇದು ಸರ್ಕಾರದ ಸರಿಯಾದ ಧೋರಣೆಯಾಗುವುದಿಲ್ಲ.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸದಸ್ಯರು ನಾನು ಉತ್ತರ ಕೊಟ್ಟಮೇಲೆ ಮಾತನಾಡಬಹುದು.

**ಶ್ರೀ ವಿ.ಆರ್. ಸುದರ್ಶನ್:–** ಹೈಕೋರ್ಟ್‌ನಲ್ಲಿ ದೂರುಗಳು ದಾಖಲಾದರೆ ಸದನದಲ್ಲಿ ಚರ್ಚೆ ಮಾಡಬಾರದು ಎನ್ನುವಂತಹ ನಿಯಮಗಳು ಎಲ್ಲಿವೆ ಎಂದು ದಯಮಾಡಿ ಹೇಳಿ. ಯಾವ Rules of Procedure ಹೇಳಿ. ಇದೇ ರೀತಿಯ ಹತ್ತು–ಹಲವಾರು ಕೇಸ್‌ಗಳು ಹೈ ಕೋರ್ಟ್‌ನಲ್ಲಿವೆ. ಅದರ ಅರ್ಥ ಈ ಸದನದಲ್ಲಿ ಚರ್ಚೆ ಮಾಡಬಾರದು ಎನ್ನುವುದೇ? ಈ ರೀತಿಯ ಸರ್ಕಾರದ ಧೋರಣೆ ಸರಿಯಾದುದಲ್ಲ.

**ಶ್ರೀ ಡಿ.ವಿ. ಸದಾನಂದಗೌಡ:–** ಇದರ ಬಗ್ಗೆ ದೂರುಗಳು ಹೈಕೋರ್ಟ್‌ನಲ್ಲಿ ದಾಖಲಾಗಿರುವುದರಿಂದ ಅದರ ಬಗ್ಗೆ ಇಲ್ಲಿ ಚರ್ಚೆ ಮಾಡಲು ಸಾಧ್ಯವಿಲ್ಲ. ಹೈಕೋರ್ಟ್‌ಗೆ ಅಗೌರವ ಮಾಡುವಂತಹ ಯಾವುದೇ ಪ್ರಯತ್ನಗಳನ್ನು ಮುಖ್ಯಮಂತ್ರಿಯಾಗಿ ಮಾಡುವುದಕ್ಕೆ ನಾನು ಇಚ್ಛೆಪಡುವುದಿಲ್ಲ. ಈಗಾಗಲೇ ಎರಡು ರಿಟ್ ಅರ್ಜಿಗಳು ದಾಖಲಾಗಿರುವ ಹಿನ್ನೆಲೆಯಲ್ಲಿ ಲೋಕಾಯುಕ್ತರ ನೇಮಕಾತಿ ಬಗ್ಗೆ ಯಾವುದೇ ಚರ್ಚೆಯನ್ನು

ಮಾಡಲಿಕ್ಕೆ ನಾನು ಇಷ್ಟಪಡುವುದಿಲ್ಲ. ನನಗೆ ಹೈಕೋರ್ಟ್‌ನ ಬಗ್ಗೆ ಅಪಾರ ಗೌರವ ಇದೆ. ನ್ಯಾಯಾಂಗ ನಿಂದನೆ ವಿಚಾರ . . .

**ಶ್ರೀ ವಿ.ಆರ್. ಸುದರ್ಶನ್:-** ಈ ಬಗ್ಗೆ ಹೈಕೋರ್ಟ್‌ನವರು ಏನಾದರೂ ಸರ್ಕಾರಕ್ಕೆ ಆದೇಶವನ್ನು ಕೊಟ್ಟಿದ್ದಾರೆಯೇ? ಪಿಐಎಲ್ ಇದೆ ಎನ್ನುವ ಒಂದೇ ಒಂದು ಕಾರಣಕ್ಕಾಗಿ ಈ ವಿಚಾರವನ್ನು ಸದನದಲ್ಲಿ ಚರ್ಚೆ ಮಾಡಬಾರದು ಎಂದು ಹೇಳಿ ಏನಾದರೂ ಸರ್ಕಾರದ ನೀತಿ ಇದೆಯೇ? ಇದು ಸರ್ಕಾರದ ಸರಿಯಾದ ಧೋರಣೆಯಾಗುವುದಿಲ್ಲವಾದ್ದರಿಂದ ಇದನ್ನು ಪ್ರತಿಭಟಿಸಿ ನಾನು ಸಭಾತ್ಯಾಗ ಮಾಡುತ್ತೇನೆ. ಇವರು ಪಲಾಯನವಾದಿ ಕೆಲಸ ಮಾಡುತ್ತಿದ್ದಾರೆ. ಲೋಕಾಯುಕ್ತ ಸಂಸ್ಥೆಯನ್ನು ದುರ್ಬಲಗೊಳಿಸುವಂತಹ ಕೆಲಸವನ್ನು ಮಾಡುತ್ತಿದ್ದಾರೆ.

(ಗೊಂದಲ)

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀಯುತ ವಿ.ಆರ್. ಸುದರ್ಶನ್‌ರವರು ಸರ್ಕಾರದ ನಿಲುವನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡಿದರು)

**ರಾಜ್ಯದ ಮಹಾನಗರ ಪಾಲಿಕೆಗಳು ಸಂಗ್ರಹಿಸಿರುವ ಗ್ರಂಥಾಲಯ ಸೆಸ್ ಕುರಿತು.**

**342; ಶ್ರೀ ಮನೋಹರ ಮಸ್ಕಿ (ಪದವೀಧರರ ಕ್ಷೇತ್ರ)**

ಅ) ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿರುವ ಮಹಾನಗರ ಪಾಲಿಕೆಗಳು ಸಂಗ್ರಹಿಸಿರುವ "ಗ್ರಂಥಾಲಯ ಸೆಸ್" ಎಷ್ಟು; (ಮಹಾನಗರ ಪಾಲಿಕೆವಾರು ವಿವರ ನೀಡುವುದು)

ಆ) ಇದರಲ್ಲಿ ಎಷ್ಟು ಹಣವನ್ನು ಗ್ರಂಥಾಲಯ ಪ್ರಾಧಿಕಾರಕ್ಕೆ ಪಾವತಿಸಲಾಗಿದೆ; ಎಷ್ಟು ಬಾಕಿ ಇದೆ;

ಇ) ಸಂಗ್ರಹಗೊಂಡ ಗ್ರಂಥಾಲಯ ಸೆಸ್ ಅನ್ನು ಯಾವ ಕಾಲಮಿತಿಯಲ್ಲಿ ಗ್ರಂಥಾಲಯ ಪ್ರಾಧಿಕಾರಕ್ಕೆ ಪಾವತಿಸಬೇಕು;

**ಈ)** ಗ್ರಂಥಾಲಯ ಸೆಸ್ ಪಾವತಿಸದೆ ವಿಳಂಬ ಮಾಡಿರುವ ಅಧಿಕಾರಿಗಳು ಯಾರ್‍ಯಾರು; ಅವರ ಮೇಲೆ ಕೈಗೊಂಡಿರುವ ಶಿಸ್ತು ಕ್ರಮಗಳೇನು?

**ಶ್ರೀ ಎಸ್. ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)**

**ಅ)** **ಮತ್ತು ಆ)** ವಿವರಗಳು ಈ ಕೆಳಕಂಡಂತೆ ಇರುತ್ತದೆ:

**(ರೂ. ಲಕ್ಷಗಳಲ್ಲಿ)**

| | **ಮಹಾನಗರಪಾಲಿಕೆ** | **ಮೊತ್ತ** | **ಪಾವತಿ** | **ಬಾಕಿ** |
|---|---|---|---|---|
| 1 | ಬೃಹತ್ ಬೆಂಗಳೂರು | 13,650.54 | 10,612.83 | 3,037.71 |
| 2 | ಬಳ್ಳಾರಿ | 132.93 | 24.50 | 108.43 |
| 3 | ಮೈಸೂರು | 480.32 | 100.00 | 380.32 |
| 4 | ದಾವಣಗೆರೆ | 87.77 | 53.61 | 34.16 |
| 5 | ಹುಬ್ಬಳ್ಳಿ–ಧಾರವಾಡ | 282.85 | 282.85 | 0.00 |
| 6 | ಮಂಗಳೂರು | 276.07 | 276.07 | 0.00 |
| 7 | ಬೆಳಗಾವಿ | 187.45 | 141.28 | 46.17 |
| 8 | ಗುಲ್ಬರ್ಗಾ | 85.46 | 85.46 | 0.00 |

ಇ) ಸಂಗ್ರಹಿಸುತ್ತಿರುವ ಗ್ರಂಥಾಲಯ ಸೆಸ್ ಅನ್ನು ಲೆಕ್ಕ ಸಮನ್ವಯಗೊಳಿಸಿದ ನಂತರ ಆಯಾ ಆರ್ಥಿಕ ಸಾಲಿನಲ್ಲಿ ಪಾವತಿಸಬೇಕಾಗುತ್ತದೆ.

**ಈ)** ಈ ಬಗ್ಗೆ ದಿನಾಂಕ 5/1/2012 ರಂದು ನಗರಾಭಿವೃದ್ಧಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಮತ್ತು ಸಾರ್ವಜನಿಕ ಗ್ರಂಥಾಲಯ ಸಣ್ಣ ಉಳಿತಾಯ & ಲಾಟರಿ, ಪಶುಸಂಗೋಪನಾ ಸಚಿವರ ಜಂಟಿ ಅಧ್ಯಕ್ಷತೆಯಲ್ಲಿ ವಿವಿಧ ಮಹಾನಗರಪಾಲಿಕೆಗಳ ಮತ್ತು ಗ್ರಂಥಾಲಯ ಇಲಾಖೆಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಗ್ರಂಥಾಲಯ ಸೆಸ್‌ಅನ್ನು ಗ್ರಂಥಾಲಯ ಇಲಾಖೆಗೆ ನಿಯಮಿತವಾಗಿ ಪಾವತಿಸುವ ಬಗ್ಗೆ ಸೂಚನೆ ನೀಡಲಾಗಿದೆ.

**ಶ್ರೀ ವಿ. ಮನೋಹರ್ ಮಸ್ಕಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ನಾನು ಕೇಳಿದಂತಹ ಮೊದಲನೆಯ ಮತ್ತು ಎರಡನೆಯ ಪ್ರಶ್ನೆಗೆ ಕ್ಲಬ್ ಮಾಡಿ ಉತ್ತರವನ್ನು ಕೊಟ್ಟಿದ್ದಾರೆ. ಮೂರು ವರ್ಷಗಳಲ್ಲಿ ರಾಜ್ಯದಲ್ಲಿರುವ ಮಹಾನಗರ ಪಾಲಿಕೆಗಳು ಸಂಗ್ರಹಿಸಿರುವ "ಗ್ರಂಥಾಲಯ ಸೆಸ್" ಎಷ್ಟು ಎಂದು ಕೇಳಿದ್ದೇನೆ. ಆದರೆ, ನನಗೆ ತಿಳಿದಿರುವ ಮಟ್ಟಿಗೆ ಆ ರೀತಿ ಇರುವುದಿಲ್ಲ. ಮಾನ್ಯ ಸಚಿವರು ಏತಕ್ಕೆ ಈ ರೀತಿಯ ಉತ್ತರವನ್ನು ಕೊಟ್ಟಿದ್ದಾರೆಂದು ಗೊತ್ತಿಲ್ಲ. ಉತ್ತರವನ್ನು ವರ್ಷವಾರು ಕೊಟ್ಟಿಲ್ಲ. ಕಳೆದ ಮೂರು ವರ್ಷಗಳಿಗೆ ಸಂಬಂಧಪಟ್ಟಂತೆ ಕೇಳಿದ್ದೇನೆ. ಕೊನೆಯದಾಗಿ, ಈ ವಿಳಂಬಕ್ಕೆ ಯಾವ್ಯಾವ ಅಧಿಕಾರಿಗಳು ಕಾರಣ ಎಂದು ಕೇಳಿದ್ದೆನು. ಅದಕ್ಕೂ ಕೂಡ ಉತ್ತರವನ್ನು ಕೊಟ್ಟಿಲ್ಲ. ಅದಕ್ಕೆ ಬದಲಾಗಿ ಬಾಕಿಯನ್ನು ವಸೂಲು ಮಾಡಬೇಕೆಂದು ಮಾನ್ಯ ಸಚಿವರು ಪ್ರಯತ್ನ ಮಾಡಿರುವುದಕ್ಕೆ ನಾನು ಅಭಿನಂದಿಸುತ್ತೇನೆ. ಅದಕ್ಕೆ ಅವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ನಾನು ಆ ಪ್ರಶ್ನೆಯನ್ನು ಕೇಳಿರಲಿಲ್ಲ. ಹೀಗಾಗಿ, ಮಾನ್ಯ ಸಚಿವರು ನಾನು ಕೇಳಿದಂತಹ ಪ್ರಶ್ನೆಗಳಿಗೆ ಸರಿಯಾಗಿ ಉತ್ತರವನ್ನು ಕೊಟ್ಟಿರುವುದಿಲ್ಲ.

**ಶ್ರೀ ಎಸ್. ಸುರೇಶ್ ಕುಮಾರ್:–** ಮಾನ್ಯ ಸಭಾಪತಿಯವರೆ, ನನಗೆ ಅರ್ಥವಾಗುತ್ತಿರುವ ಪ್ರಶ್ನೆ ಏನೆಂದರೆ ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಮಹಾನಗರ ಪಾಲಿಕೆಗಳು ಸಂಗ್ರಹಿಸಿದ ಗ್ರಂಥಾಲಯ ಸೆಸ್ ಎಷ್ಟು ಎನ್ನುವ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಅದಕ್ಕೆ ಉತ್ತರವಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಗ್ರಂಥಾಲಯ ಸೆಸ್ ಇಷ್ಟು, ಪಾವತಿ ಮಾಡಿದಿಷ್ಟು, ಬಾಕಿ ಇರುವುದು ಇಷ್ಟು ಎಂದು ಹೇಳಿದ್ದೇವೆ. ಅವರು ಪ್ರತಿ ವರ್ಷ, ವರ್ಷವಾರು ಎಂದು ಕೇಳಿದ್ದರೆ ನಾವು ಅದಕ್ಕೆ ಉತ್ತರವನ್ನು ಕೊಡುತ್ತಿದ್ದೆವು. ಮೊದಲಿನಿಂದಲೂ ಅವರು ಏನು ಪ್ರಶ್ನೆಯನ್ನು ಕೇಳಿದ್ದಾರೆ, ಅದಕ್ಕಷ್ಟೆ ಉತ್ತರವನ್ನು ಕೊಟ್ಟಂಥ ಅಭ್ಯಾಸವಿದೆ.

**ಶ್ರೀ ವಿ. ಮನೋಹರ್ ಮಸ್ಕಿ:-** ಬಹಳ ಸಂತೋಷ. ಅವರಿಂದ ಆ ರೀತಿಯ ಉತ್ತರ ಬರುತ್ತದೆ ಎಂದು ತಿಳಿದೇ ಮುಂದಿನ ಪ್ರಶ್ನೆಗಳನ್ನು ಕೇಳಿದ್ದೇನೆ. ಇಲ್ಲಿ ಬಹಳ ಸ್ಪಷ್ಟವಾಗಿ ಕೇಳಲಾಗಿದೆ. ಇಲ್ಲಿ ಸಂಗ್ರಹವಾದ 'ಗ್ರಂಥಾಲಯ ಸೆಸ್' ಅನ್ನು ಯಾವ ಕಾಲಮಿತಿಯಲ್ಲಿ ಗ್ರಂಥಾಲಯ ಪ್ರಾಧಿಕಾರಕ್ಕೆ ಪಾವತಿಸಬೇಕೆಂದು ಎಂದು ಕೇಳಲಾಗಿದೆ. ಇದು ಬಹಳ ಮುಖ್ಯವಾದಂತಹ ಪ್ರಶ್ನೆಯಾಗಿದೆ. ಇವತ್ತು ರಾಜ್ಯದ ಬಜೆಟ್‌ನಲ್ಲಿ ಅತಿ ದೊಡ್ಡ ಭಾಗವನ್ನು ಶಿಕ್ಷಣ ಕ್ಷೇತ್ರಕ್ಕೆ ಕೊಡುತ್ತೇವೆ. ಬರೀ ಶಾಲಾ-ಕಾಲೇಜುಗಳ ಕಟ್ಟಡಗಳನ್ನು ಕಟ್ಟಿದರೆ ಸಾಕಾಗುವುದಿಲ್ಲ. ಅದಕ್ಕೆ ಪೂರಕವಾದಂತಹ ಗ್ರಂಥಾಲಯಗಳ ಬೆಳವಣಿಗೆಯಾಗಬೇಕು. ಅದಕ್ಕೆ ಪುಸ್ತಕಗಳು ಬರಬೇಕು. ಇದಕ್ಕೆ ಸಪೋರ್ಟ್ ಆಗಿರುವಂತಹದ್ದಾಗಿರಬೇಕು. ಇದಕ್ಕೆ ಸರ್ಕಾರದಿಂದ ಮಾತ್ರವಲ್ಲದೆ, ಆಯಾ ಮಟ್ಟದಲ್ಲಿ ಸ್ಥಳೀಯವಾಗಿ ಸಂಗ್ರಹವಾದಂತಹ ಹಣ ಆಯಾ ಪ್ರಾಧಿಕಾರಗಳಿಗೆ, ಜಿಲ್ಲಾ ಪ್ರಾಧಿಕಾರಗಳಿಗೆ ಹೋಗಬೇಕೆನ್ನುವ ಸದುದ್ದೇಶದಿಂದ ಕಾನೂನನ್ನು ಮಾಡಿದ್ದೇವೆ. ಗ್ರಂಥಾಲಯ ಕಾನೂನುಗಳಲ್ಲಿ ಬಹಳ ಸ್ಪಷ್ಟವಾಗಿ, 'ಇದನ್ನು ಸಂಗ್ರಹ ಮಾಡಿದ ತಕ್ಷಣ ಕೊಡಬೇಕೆಂದು' ಇದೆ. ಆದರೆ, ಇಲ್ಲಿ ಯಾವ ರೀತಿಯ ಉತ್ತರವನ್ನು ಕೊಟ್ಟಿದ್ದಾರೆಂದರೆ 'ಆಯಾ ಆರ್ಥಿಕ ಸಾಲಿನಲ್ಲಿ ಪಾವತಿಸಬೇಕಾಗಿರುತ್ತದೆ' ಎಂದು ಇದೆ. ಇದು ತಪ್ಪು ಉತ್ತರವಾಗಿದೆ. ಇದು ತಪ್ಪು ಉತ್ತರವಾಗಿದೆ. ಇದು ಕಾನೂನಿಗೆ ವಿರುದ್ಧವಾಗುತ್ತದೆ ಎನ್ನುವುದನ್ನು ತಮ್ಮ ಮೂಲಕ ಅವರ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ.

ಎರಡನೆಯದಾಗಿ, ಕಳೆದ ಮೂರು ವರ್ಷಗಳಲ್ಲಿ ವರ್ಷವಾರು ಕೇಳಿಲ್ಲ, ಆದ್ದರಿಂದ ನಾವು ಉತ್ತರವನ್ನು ಕೂಡಿಸಿ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಹಾಗಾದರೆ, ನನ್ನ ನಾಲ್ಕನೆಯ ಪ್ರಶ್ನೆ ಬಹಳ ಸ್ಪಷ್ಟವಾಗಿದೆ. 'ಗ್ರಂಥಾಲಯ ಸೆಸ್' ಅನ್ನು ಪಾವತಿಸದೆ ವಿಳಂಬ ಮಾಡಿರುವ ಅಧಿಕಾರಿಗಳು ಯಾರ್ಯಾರು, ಕಾನೂನನ್ನು ಯಾರ್ಯಾರು ಉಲ್ಲಂಘನೆ ಮಾಡಿದ್ದಾರೆ ಅವರ ಮೇಲೆ ಏನು ಕ್ರಮ ಕೈಗೊಂಡಿದ್ದೀರಿ ಎನ್ನುವುದರ ಬಗ್ಗೆ ಏತಕ್ಕೆ ಸಚಿವರು ಉತ್ತರವನ್ನು ಕೊಟ್ಟಿಲ್ಲ?

**ಶ್ರೀ ಎಸ್. ಸುರೇಶ್ ಕುಮಾರ್:-** ಸನ್ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀಯುತ ಮನೋಹರ್ ಮಸ್ಕಿಯವರು ಈ ಪ್ರಶ್ನೆಯನ್ನು ಇವತ್ತು ಈ ಸದನಕ್ಕೆ ಕೇಳುವ ಮುನ್ನವೇ ನನ್ನ ಗಮನಕ್ಕೆ ತಂದಿದ್ದಾರೆ. ಅದಕ್ಕೋಸ್ಕರ, ನಮ್ಮ ಗ್ರಂಥಾಲಯ ಸಚಿವರು ಮತ್ತು ನಾನು ಜಂಟಿಯಾಗಿ ಸಭೆಯನ್ನು ಮಾಡಿ, ಇದರ ಬಗ್ಗೆ ಪೂರ್ಣವಾದ ವಿವರಗಳನ್ನು ಪಡೆದುಕೊಡುತ್ತೇನೆ. ಶ್ರೀಯುತ ಮನೋಹರ್ ಮಸ್ಕಿಯವರು ಏನು ಹೇಳುತ್ತಿದ್ದಾರೆ, ಅದು ನೂರಕ್ಕೆ ನೂರರಷ್ಟು ಸತ್ಯ ಇದೆ. ಯಾವುದೇ ನಗರ ಪಾಲಿಕೆ ಇರಬಹುದು, 'ಗ್ರಂಥಾಲಯ ಸೆಸ್' ಅನ್ನು ಸಂಗ್ರಹ ಮಾಡಿದ ಮೇಲೆ ಗ್ರಂಥಾಲಯದ ಉದ್ದೇಶಕ್ಕೆ ಅದನ್ನು ಕೊಡಬೇಕು. ನಿಯಮಾವಳಿಯಂತೆ ಎಲ್ಲಾ ಮಹಾನಗರ ಪಾಲಿಕೆಗಳಲ್ಲಿ ಆಸ್ತಿ ತೆರಿಗೆ ಸಂಗ್ರಹ ಮಾಡುವಾಗ ನಿಯಮಾವಳಿಯಂತೆ ಆಸ್ತಿ ತೆರಿಗೆ ಮೇಲೆ ಶೇಕಡ 6 ರಷ್ಟು 'ಗ್ರಂಥಾಲಯ ಸೆಸ್' ಅನ್ನು ಸಂಗ್ರಹ ಮಾಡುತ್ತೇವೆ. ಆ ರೀತಿ ಸಂಗ್ರಹಿಸಿದ ಸೆಸ್‌ನಲ್ಲಿ ಶೇಕಡ 10 ರಷ್ಟನ್ನು ನಾವು ಆಡಳಿತಾತ್ಮಕ ವೆಚ್ಚವೆಂದು ಇಟ್ಟುಕೊಂಡು ಉಳಿದ ಹಣವನ್ನು ಕೊಡುತ್ತೇವೆ. ಈಗಾಗಲೇ ನಾವು ಮೂರು ವರ್ಷಗಳಿಂದ ಗ್ರಂಥಾಲಯ ಸೆಸ್ ಸಂಗ್ರಹಿಸಿದ್ದು, ಸುಮಾರು 151 ಕೋಟಿ ರೂಪಾಯಿಗಳಾಗಿವೆ. ಆ ಪೈಕಿ ನಾವು 115 ಕೋಟಿ ರೂಪಾಯಿಗಳನ್ನು ಪಾವತಿ ಮಾಡಿದ್ದೇವೆ. ಬಾಕಿ 36 ಕೋಟಿ ರೂಪಾಯಿಗಳು ಉಳಿದಿದೆ. ಬೆಂಗಳೂರು ಮಹಾನಗರ ಪಾಲಿಕೆಯಿಂದ ಬಾಕಿ ಸುಮಾರು 30 ಕೋಟಿ ರೂಪಾಯಿಗಳು ಬರಬೇಕಾಗಿದೆ. ಅದರ ಜೊತೆಗೆ ಮತ್ತೊಂದು ಇದೆ. ಅನೇಕ ಗ್ರಂಥಾಲಯಗಳು ಬೆಂಗಳೂರು ಮಹಾನಗರ ಪಾಲಿಕೆಯ ಕಟ್ಟಡಗಳಲ್ಲಿ ಕೆಲಸ ಮಾಡುತ್ತಿವೆ. ಅದರ ಬಾಡಿಗೆಯನ್ನೂ ಸಹ ಕಟ್ಟುತ್ತಿಲ್ಲ. ಅದನ್ನು ಕೇಳುವುದಕ್ಕೆ ನಾನು ಹೋಗುವುದಿಲ್ಲ. ಈ ಬಗ್ಗೆ ಮೊನ್ನೆ ನಡೆದಂತಹ ಸಭೆಯಲ್ಲಿ ನಾವು ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಆರ್ಥಿಕ ವರ್ಷ ಕೊನೆಗೊಳ್ಳುವ ವೇಳೆಗೆ ಅಂದರೇ, 31ನೇ ಮಾರ್ಚ್ ವೇಳೆಗೆ 'ಗ್ರಂಥಾಲಯ ಸೆಸ್' ಏನು ಬಾಕಿ ಇದೆ, ಆ ಹಣವನ್ನು ಗ್ರಂಥಾಲಯ ಇಲಾಖೆಗೆ ಕೊಡುವುದಕ್ಕೆ ನಾವು ನಿರ್ಧಾರವನ್ನು ತೆಗೆದುಕೊಂಡಿದ್ದೇವೆ. ಈ ಸಂಬಂಧ ವಿಳಂಬವಾಗುವುದಕ್ಕೆ ಯಾವ್ಯಾವ ಅಧಿಕಾರಿಗಳು ಕಾರಣರಿದ್ದಾರೆ, ಅವರನ್ನು ಪತ್ತೆ ಹಚ್ಚಿ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ವಿ. ಮನೋಹರ್ ಮಸ್ಕಿ:-** ಮಾನ್ಯ ಸಚಿವರ ಉತ್ತರಕ್ಕೆ ಧನ್ಯವಾದಗಳು. ಆದರೆ, ಮುಂದೆಯೂ ಕೂಡ ಈ ರೀತಿಯ ವಿಳಂಬ ಆಗುತ್ತದೆ. ಆದ್ದರಿಂದ, ಯಾವ ಅಧಿಕಾರಿಗಳು ವಿಳಂಬ ಮಾಡುತ್ತಾರೆ, ಅವರ ಮೇಲೆ ಕ್ರಮ ಕೈಗೊಳ್ಳಬೇಕಾಗುತ್ತದೆ. ಏಕೆಂದರೆ, ಗ್ರಂಥಾಲಯಗಳಿಗೆ ಕೊಟ್ಟ ಹಣ ಜನರ ಹಣವಾಗಿದ್ದು, ಇದನ್ನು ಇಟ್ಟುಕೊಂಡು ಬೇರೆ ಉದ್ದೇಶಕ್ಕೆ ಬಳಸುವಂತಹ ಅಧಿಕಾರಿಗಳ ಮೇಲೆ ಸರ್ಕಾರದಿಂದ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಇಲ್ಲಿಯವರೆಗೂ ಕಾರ್ಪೋರೇಷನ್, ಮುನಿಸಿಪಾಲಿಟಿಯವರು ಈ ಗ್ರಂಥಾಲಯ ಸೆಸ್ ಅನ್ನು ಕೊಟ್ಟೇ ಇಲ್ಲ. ಇದನ್ನು ಮಾನ್ಯ ಸಚಿವರು ಗಮನಿಸಬೇಕು. ಈ ಹಣವನ್ನು ಬೇರೆ ಬೇರೆ ಉದ್ದೇಶಕ್ಕೆ ಬಳಸುತ್ತಾರೆ. ನಾನು ಮಂತ್ರಿಯಾಗಿದ್ದಾಗ ಈ ಬಗ್ಗೆ ಸಾಕಷ್ಟು ಪ್ರಯತ್ನ ಮಾಡಿದ್ದರೂ ಸಹಿತ ಕೊಟ್ಟಿಲ್ಲ. ಆದ್ದರಿಂದ, ಯಾರು ನಿಯಮವನ್ನು ಉಲ್ಲಂಘನೆ ಮಾಡುತ್ತಾರೆ, ಅವರ ಮೇಲೆ ಕ್ರಮ ಕೈಗೊಳ್ಳಬೇಕಾಗುತ್ತದೆ. ಏಕೆಂದರೆ ಗ್ರಂಥಾಲಯಗಳು ಬಹಳ ಮುಖ್ಯ. ಆ ಹಿನ್ನೆಲೆಯಲ್ಲಿ ಸನ್ಮಾನ್ಯ ಸುರೇಶ್ ಕುಮಾರ್‌ರವರು ಸರ್ಕಾರದ ವತಿಯಿಂದ ತಕ್ಷಣ ಒಂದು ಆದೇಶವನ್ನು ಹೊರಡಿಸಬೇಕು. ಯಾರೇ ನಿಯಮವನ್ನು ಉಲ್ಲಂಘನೆ ಮಾಡಿದರೂ ಸಹಿತ ಇಲಾಖೆಯ ಆಯುಕ್ತರನ್ನು ಜವಾಬ್ದಾರರನ್ನಾಗಿ ಮಾಡಬೇಕು.

(12.00 ಗಂಟೆ)

**ಶ್ರೀ ಎಸ್. ಸುರೇಶ್ ಕುಮಾರ್:-** ಮಾನ್ಯ ಸಭಾಪತಿಯವರೆ, ಈಗ ನಾನೇ ಎಷ್ಟು ಮೊತ್ತವನ್ನು ಸಂಗ್ರಹ ಮಾಡಿದ್ದೇವೆ, ಎಷ್ಟು ಮೊತ್ತವನ್ನು ಪಾವತಿ ಮಾಡಿದ್ದೇವೆ, ಶೇಕಡ 6 ರಂತೆ ಎಷ್ಟು ಗ್ರಂಥಾಲಯ ಸೆಸ್ ಅನ್ನು ಸಂಗ್ರಹಣೆ ಮಾಡಿದ್ದೇವೆ ಮತ್ತು ಎಷ್ಟು ಪಾವತಿ ಮಾಡಿದ್ದೇವೆ ಎಂಬ ಬಗ್ಗೆ ಮಾಹಿತಿಯನ್ನು ಕೊಡುತ್ತೇನೆ. ಉದಾಹರಣೆಗೆ ಹೇಳುವುದಾದರೆ, ಹುಬ್ಬಳ್ಳಿ,

ಧಾರವಾಡದಲ್ಲಿ ಒಂದು ಪೈಸೆ ಬಾಕಿ ಇಲ್ಲ. ಮಂಗಳೂರಿನಲ್ಲಿ ಕೂಡ ಬಾಕಿ ಇಲ್ಲ. ಎಲ್ಲಿ ಪಾವತಿ ಮಾಡಿಲ್ಲ ಅಲ್ಲಿ ಈ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

**ಶ್ರೀ ಜಿ. ಮಧುಸೂಧನ್:–** ಮಾನ್ಯ ಸಭಾಪತಿಯವರೆ ನಿನ್ನೆ ಕೂಡ ನನ್ನ ಪ್ರಶ್ನೆ ಬಂದಿತ್ತು ಅದಕ್ಕೆ ಉತ್ತರ ಬರಲಿಲ್ಲ.

**ಸಭಾಪತಿಯವರು:–** ನೀವು ಅಂತಹ ಪ್ರಶ್ನೆಗಳನ್ನೇ ಕೇಳುತ್ತೀರಿ.

**ಶ್ರೀ ಜಿ. ಮಧುಸೂಧನ್:–** ಇದೆಲ್ಲವನ್ನೂ ನೋಡಿದರೆ ಈ ಸದನದಲ್ಲಿ ಮೂರು ರೀತಿಯ ಪ್ರಶ್ನೆಗಳ ಪಟ್ಟಿ ಇವೆ ಎಂದು ಅನ್ನಿಸುತ್ತಿದೆ. ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು ಹಾಗೂ ಉತ್ತರಿಸಲಾರದ, ಕೇಳಬಾರದ ಪ್ರಶ್ನೆಗಳು ಎಂದು ಏನಾದರೂ ಇದೆಯೇ ಎಂದು ಅನ್ನಿಸುತ್ತಿದೆ.

**ಸಭಾಪತಿಯವರು:–** ಮಾನ್ಯ ಮಧುಸೂಧನ್ ಅವರ ಪ್ರಶ್ನೆಗೆ ಕಾಲಾವಕಾಶವನ್ನು ಕೋರಿದ್ದಾರೆ. ಕಾಲಾವಕಾಶವನ್ನು ನೀಡಲಾಗಿದೆ.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೆ, ಮಾನ್ಯ ಮಧುಸೂಧನ್ ಅವರು ಕೇಳುವಂತಹ ಪ್ರಶ್ನೆಗಳಿಗೆ ಅವರಷ್ಟೇ ದೊಡ್ಡ ಗಾತ್ರದ ಉತ್ತರವನ್ನು ಕೊಡಬೇಕಾಗಿದೆ. ಇದಕ್ಕೆ ಹತ್ತಿರ ಹತ್ತಿರ 500–600 ಪುಟಗಳಷ್ಟು ಆಗಬಹುದೆಂದು ಅನ್ನಿಸುತ್ತದೆ. ಅವರು ಆರು ಇಲಾಖೆಗಳಿಗೆ ಸಂಬಂಧಿಸಿದಂತೆ ಪ್ರಶ್ನೆ ಕೇಳಿದ್ದಾರೆ.

**ಶ್ರೀ ಜಿ. ಮಧುಸೂಧನ್:–** ಉತ್ತರದ ಸಿ.ಡಿ.ಯನ್ನು ಅವರು ನಮಗೆ ಕೊಡಲಿ. ಹೇಗೂ ಗಣಕ ಯಂತ್ರವನ್ನು ನಮಗೆ ಕೊಟ್ಟಿದ್ದೀರಿ.

**ಶ್ರೀ ಡಿ.ವಿ. ಸದಾನಂದಗೌಡ:–** ಆದಷ್ಟು ಶೀಘ್ರವಾಗಿ ಉತ್ತರವನ್ನು ಕೊಡುವಂತಹ ಪ್ರಯತ್ನಗಳನ್ನು ಮಾಡುತ್ತೇವೆ. ನಾನು ನಿನ್ನೆ ಒಪ್ಪಿಕೊಂಡಿದ್ದೇನೆ. ಆರು ಇಲಾಖೆಗಳಿಂದ ಈ ಪ್ರಶ್ನೆಗೆ ಉತ್ತರವನ್ನು ತರಿಸಬೇಕಾಗಿದೆ. ಈಗಾಗಲೇ 4 ಇಲಾಖೆಗಳಿಂದ ಉತ್ತರಗಳು ಬಂದಿವೆ. ಇನ್ನು ಎರಡು ಇಲಾಖೆಗಳಿಂದ ಉತ್ತರ ಬರಬೇಕಾಗಿದೆ.

**ಶ್ರೀ ಜಿ. ಮಧುಸೂಧನ್:–** ನನಗೆ ಆತಂಕ ಏನಿಲ್ಲ. (xxx) ಸನ್ಮಾನ್ಯ ಸಿಗುತ್ತದೆ ನಮಗೆ ಸಿಗುವುದಿಲ್ಲವಲ್ಲ ಎಂದು. . . .

(ಗೊಂದಲ)

(ಈ ಹಂತದಲ್ಲಿ ಜೆ.ಡಿ.(ಎಸ್) ಪಕ್ಷದ ಸದಸ್ಯರು ಎದ್ದು ನಿಂತು ಮಾತನಾಡ ತೊಡಗಿದರು)

**ಶ್ರೀ ಸಂದೇಶ್ ನಾಗರಾಜ್:–** ಬಹಳ ಸುಲಭವಾಗಿ ಮಾತನಾಡುತ್ತಿದ್ದಾರೆ. ಇವರು ಪದೇ ಪದೇ ಈ ರೀತಿ ಮಾತನಾಡುತ್ತಿದ್ದಾರೆ. ಅವರು ಆ ಮಾತನ್ನು ವಾಪಸ್ ತೆಗೆದುಕೊಳ್ಳಬೇಕು. (xxx) ಇರುವ ಗೌರವ ಇದ್ದೇ ಇದೆ. ಮಾನ್ಯ ಮಧುಸೂಧನ್ ಅವರಿಂದ ಗೌರವ ಬೇಕಾಗಿಲ್ಲ.

(ಗೊಂದಲ)

**ಶ್ರೀ ಜಿ. ಮಧುಸೂಧನ್:–** ಹಾಗಾದರೆ ನಾನು ಸನ್ಮಾನ್ಯ ಎಂದು ಹೇಳಿದ್ದನ್ನು ವಾಪಸ್ ತೆಗೆದುಕೊಳ್ಳಬೇಕಾ?

(ಗೊಂದಲ)

**ಸಭಾಪತಿಯವರು:–** ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ. ಈ ಸದನದ ಸದಸ್ಯರಲ್ಲದವರ ಹೆಸರುಗಳನ್ನು ಯಾರಾದರೂ ಪ್ರಸ್ತಾಪ ಮಾಡಿದ್ದರೆ ಆ ಹೆಸರುಗಳನ್ನು ಕಡತದಿಂದ ತೆಗೆದು ಹಾಕುವುದು. ಇಲ್ಲಿ ಸದಸ್ಯರಲ್ಲದವರ ಯಾರ ಹೆಸರನ್ನೂ ತರಬೇಡಿ.

(ಗೊಂದಲ)

(xxx) [ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆದು ಹಾಕಲಾಗಿದೆ.]

**ಸಭಾಪತಿಯವರು:–** ಬೇರೆಯವರ ಹೆಸರನ್ನು ಹೇಳಿದರೆ, ಈ ಸದನದ ಸದಸ್ಯರಲ್ಲದವರ ಹೆಸರನ್ನು ಯಾರಾದರೂ ಪ್ರಸ್ತಾಪ ಮಾಡಿದ್ದರೆ ನಾನು ಅದನ್ನು ಪರಿಶೀಲಿಸುತ್ತೇನೆ. ಯಾವ ಹಿನ್ನೆಲೆಯಲ್ಲಿ, ಯಾವ ಸಂದರ್ಭದಲ್ಲಿ ಅದರ ಪ್ರಯೋಗ ಆಗಿದೆ ಎಂದು ನೋಡುತ್ತೇನೆ. ಆದರೆ ಸ್ವಾಭಾವಿಕವಾಗಿ ಈ ಸದನದ ಸದಸ್ಯರಲ್ಲದವರ ಹೆಸರನ್ನು ಯಾರೂ ಪ್ರಸ್ತಾಪ ಮಾಡಬಾರದು. ಒಂದು ವೇಳೆ ಯಾರಾದರೂ ಪ್ರಸ್ತಾಪ ಮಾಡಿದ್ದರೆ ಅದನ್ನು ನಾನು ಕಡತದಿಂದ ತೆಗೆಸಿ ಹಾಕಿದ್ದೇನೆ. ಈಗ ಅವರು ಪ್ರಸ್ತಾಪ ಮಾಡಿರುವ ಹೆಸರನ್ನು ನಾನು ಕಡತದಿಂದ ತೆಗೆಸಿ ಹಾಕಿದ್ದೇನೆ. ಹಾಗೆ ಮಾತನಾಡಬಾರದು. ಕುಳಿತುಕೊಳ್ಳಿ

**ಶ್ರೀ ಜಿ. ಮಧುಸೂಧನ್:–** ಅವರ ಕೈಗೆ ಮಾಹಿತಿಗಳು ಸಿಕ್ಕಿದೆ. ಅವರು ಪತ್ರಿಕೆಗಳಲ್ಲಿ ವಿಷಯ ಹೇಳುತ್ತಾರೆ, ಆದರೆ ನಮಗೆ ಮಾಹಿತಿಗಳು ಸಿಗುತ್ತಿಲ್ಲ ಎಂದು ನಾನು ಹೇಳಿದ್ದು. ನಾನು ಅವರಿಗೆ ಅಗೌರವ ತೋರುವ ರೀತಿಯಲ್ಲಿ ಮಾತನಾಡಿಲ್ಲ. ಅವರ ಹೆಸರಿಗೆ 'ಸನ್ಮಾನ್ಯರು' ಎಂದು ಸಂಬೋಧಿಸಿಯೇ ಮಾತನಾಡಿದ್ದೇನೆ. ನಿಮಗೆ ನಾನು ಅವರಿಗೆ ಅಗೌರವ ತೋರಿಸಿದ್ದೇನೆ ಮತ್ತು ಅವರಿಗೆ ಮರ್ಯಾದೆ ಕೊಡುವುದು ಬೇಡವೆಂದಾದರೆ, 'ಸನ್ಮಾನ್ಯರು' ಎಂದು ನಾನು ಹೇಳಿದ್ದನ್ನು ವಾಪಸ್ ತೆಗೆದುಕೊಳ್ಳಬೇಕಾ?

(ಗೊಂದಲ)

**ಸಭಾಪತಿಯವರು:–** ಒಬ್ಬರಿಗಿಂತ ಹೆಚ್ಚು ಜನರು ಮಾತನಾಡಿದರೆ ಅದು ಕಡಟದಲ್ಲಿ ದಾಖಲಾಗಬಾರದು.

**ಶ್ರೀ ಬಸವರಾಜ ಹೊರಟ್ಟಿ:–** ಬೆಂಕಿ ಹಚ್ಚುವ ಕೆಲಸವನ್ನು ಕಡಿಮೆ ಮಾಡಿ ಎಂದು ಅವರಿಗೆ ಹೇಳಿ. ಯಾವಾಗಲೂ ಬೆಂಕಿ ಹಚ್ಚುತ್ತಾರೆ.

(ಗೊಂದಲ)

**ಸಭಾಪತಿಯವರು:–** ತಾವು ಮಾನ್ಯ ಜಗ್ಗೇಶ್ ಅವರು ತಮ್ಮ ಪ್ರಶ್ನೆಯನ್ನು ಕೇಳುವುದಕ್ಕೆ ಬಿಡುವುದಿಲ್ಲವೇ?

**ಶ್ರೀ ಆರ್.ವಿ. ವೆಂಕಟೇಶ್:–** ಯಾವುದೇ ಪ್ರಶ್ನೆಗೂ ಸರಿಯಾದ ಉತ್ತರವನ್ನು ನೀಡುತ್ತಿಲ್ಲ. ಲೋಕಾಯುಕ್ತದ ಬಗ್ಗೆ ಪ್ರಶ್ನೆ . . . . . .

**ಕನ್ನಡ ಸಿನಿಮಾ ಚಿತ್ರೀಕರಣವನ್ನು ಕರ್ನಾಟಕದಲ್ಲೇ ಚಿತ್ರೀಕರಿಸುವ ಬಗ್ಗೆ.**

**16; ಶ್ರೀ ಜಗ್ಗೇಶ್ (ನಾಮ ನಿರ್ದೇಶನ ಹೊಂದಿರುವವವರು)**

**ಅ)** ಕನ್ನಡ ಸಿನಿಮಾ ಚಿತ್ರೀಕರಣ ಶೇಕಡ 50 ರಷ್ಟು ಕರ್ನಾಟಕದಲ್ಲೇ ಚಿತ್ರೀಕರಿಸಬೇಕೆಂಬ ನಿಯಮದಂತೆ, ಸಂಬಂಧಪಟ್ಟ ಎಲ್ಲಾ ಇಲಾಖೆಗಳ ಅನುಮತಿ ಪಡೆಯಬೇಕಾಗುತ್ತಿದ್ದು, ಇದನ್ನು ಮನಗಂಡ ಸರ್ಕಾರ 'ಏಕಗವಾಕ್ಷಿ' ಪದ್ಧತಿ ಜಾರಿ ಮಾಡಿದ್ದು, ಈ ಪದ್ಧತಿ ಇನ್ನು ಕಾರ್ಯಗತವಾಗದೇ ಇರಲು ಕಾರಣವೇನು;

**ಆ)** ಇದನ್ನು ಯಾವಾಗ ಜಾರಿ ಮಾಡಲಾಗುವುದು?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಯವರು)**

**ಅ)** ಸರ್ಕಾರವು ಕರ್ನಾಟಕ ರಾಜ್ಯದಲ್ಲಿ ಚಲನಚಿತ್ರಗಳ ಚಿತ್ರೀಕರಣಕ್ಕೆ ಅನುಮತಿ ನೀಡಲು "ಏಕಗವಾಕ್ಷಿ" ಪದ್ಧತಿಯನ್ನು ಈಗಾಗಲೇ ಜಾರಿಗೆ ತಂದಿದೆ.

**ಆ)** "ಏಕಗವಾಕ್ಷಿ" ಪದ್ಧತಿ ದಿನಾಂಕ:23.09.2010 ರಿಂದ ಜಾರಿಗೆ ಬಂದಿದೆ.

**ಶ್ರೀ ಜಗ್ಗೇಶ್:-** ಮಾನ್ಯ ಸಭಾಪತಿಯವರೆ, ಅವಕಾಶ ಸಿಕ್ಕಿದಾಗ ಜಮಾಯಿಸಿ ಬಿಡಿ ಎಂದು ಡಾ॥ ರಾಜ್‌ಕುಮಾರ್ ಅವರು ಹೇಳಿ ಕೊಟ್ಟಿದ್ದಾರೆ. ಅದರಂತೆ ನಮ್ಮ ಇಂಡಸ್ಟ್ರೀ ಬಗ್ಗೆ ಮಾತನಾಡಲು ನನಗೆ ಅವಕಾಶ ಸಿಕ್ಕಿದೆ ಕೆಲವು ಮಾತುಗಳನ್ನು ಹೇಳಬಯಸತ್ತೇನೆ. ಸುಮಾರು ನೂರು ವರ್ಷ ಇತಿಹಾಸ ಇರುವ ನಮ್ಮ ಕನ್ನಡ ಚಿತ್ರರಂಗದಲ್ಲಿ ನಾನು ಸುಮಾರು 30 ವರ್ಷಗಳ ಕಾಲ ಪ್ರಯಾಣ ಮಾಡಿದ್ದೇನೆ. ನಾನು ಸಣ್ಣ ಹುಡುಗ ಇದ್ದಾಗಿನಿಂದ, ಚಿರ ಯುವಕರಾದ ಡಾ॥ ಶ್ರೀನಾಥ್ ಅವರು ಕಳೆದ 45 ವರ್ಷಗಳಿಂದ ನಮ್ಮೊಟ್ಟಿಗೆ ಈ ಸಿನಿಮಾ ರಂಗದಲ್ಲಿ ಇದ್ದಾರೆ.

**ಸಭಾಪತಿಯವರು:–** ಸದನದಲ್ಲಿ ಅವರ ವಯಸ್ಸನ್ನು ಹೇಳುವ ಹಾಗೆ ಇಲ್ಲ.

**ಶ್ರೀ ಜಗ್ಗೇಶ್:–** ಮಾನ್ಯ ಸಂದೇಶ್ ನಾಗರಾಜ್ ಅವರು ಅವರ ಶ್ರೀಮತಿಯವರ ಒತ್ತಾಯದ ಮೇರೆಗೆ ತಲೆಗೆ ಡೈ ಹಾಕುವುದನ್ನು ಬಿಟ್ಟಿರುತ್ತಾರೆ. ಅವರೂ ಕೂಡ ನಮ್ಮ ಜೊತೆಯಲ್ಲಿ ಕಳೆದ 25 ವರ್ಷಗಳಿಂದ ಇದ್ದಾರೆ. ಮಾನ್ಯ ಕೃಷ್ಣಪ್ಪನವರು ಕಳೆದ 7 ವರ್ಷಗಳಿಂದ ಇದ್ದಾರೆ. ಮಾನ್ಯ ದೊಡ್ಡರಂಗೇಗೌಡರವರು ಸುಮಾರು 45 ವರ್ಷಗಳಿಂದ ಇದ್ದಾರೆ. ಒಳ್ಳೆಯ ಇತಿಹಾಸ ಇರುವಂತಹ ನಮ್ಮ ಕನ್ನಡ ಚಿತ್ರರಂಗ ಇಂದು ಸೊರಗಿ ಹೋಗಿದೆ. ಇದಕ್ಕೆ ಕಾರಣ ನಮ್ಮ ನಿರಾಭಿಮಾನವೋ ಏನೋ ಗೊತ್ತಿಲ್ಲ. ನಾವು ಬಹಳ ಸೊರಗುವ ಸ್ಥಿತಿಯನ್ನು ತಲುಪಿದ್ದೇವೆ. ಶೇಕಡ 50 ರಷ್ಟು ಚಿತ್ರೀಕರಣವನ್ನು ನಮ್ಮ ಕರ್ನಾಟಕದಲ್ಲಿಯೇ ಮಾಡಬೇಕೆಂಬ ಆದೇಶವನ್ನು ಸರ್ಕಾರ ಮಾಡಿದೆ. ಅದು ಬಹುಶ: ಸಂಪೂರ್ಣವಾಗಿ ಕಾರ್ಯಗತಗೊಂಡರೆ ಕನ್ನಡ ಚಿತ್ರರಂಗಕ್ಕೆ ಬಹಳ ಸಹಾಯವಾಗುತ್ತದೆ. ನಮ್ಮಲ್ಲಿರುವ ಆರ್ಕಿಯಾಲಜಿ ಇಲಾಖೆ ಆಗಬಹುದು, ಸಮುದ್ರ ತೀರಗಳು ಆಗಬಹುದು ಐಲ್ಯಾಂಡ್‌ಗಳು ಆಗಬಹುದು. ಈ ಬಗ್ಗೆ ನಮಗೆ ಏಕಗವಾಕ್ಷಿಯಲ್ಲಿ ಪದ್ಧತಿಯಲ್ಲಿ ಸಾಕಷ್ಟು ಅವಕಾಶಗಳನ್ನು ನೀಡಿದ್ದರೂ ಕೂಡ ನಮಗೆ ಸಿಗುತ್ತಿಲ್ಲ ಮತ್ತು ನಮ್ಮ ಕೆಲವು ನಿಗಮ ಮಂಡಳಿಗಳೂ ಕೂಡ ನಮ್ಮಿಂದ ದುಬಾರಿ ಹಣವನ್ನು ಪಡೆದು ಚಿತ್ರೀಕರಣಕ್ಕೆ ಅವಕಾಶಗಳನ್ನು ಮಾಡಿಕೊಡುತ್ತಿದ್ದಾರೆ. ಇದನ್ನೆಲ್ಲಾ ಮನಗಂಡು ನಾವು ಸರ್ಕಾರದ ಮುಂದೆ ಈ ಒಂದು ಪ್ರಸ್ತಾವನೆಯನ್ನು ಕೊಟ್ಟಾಗ ಅವರು ಏಕಗವಾಕ್ಷಿ ಪದ್ಧತಿಯೆಂದು ನಾಮಕರಣ ಮಾಡಿ ಇದರಿಂದ ಎಲ್ಲರಿಗೂ ಅವಕಾಶ ಮಾಡಿಕೊಡಬೇಕೆಂದು ಮಾಡಿದ್ದಾರೆ. ಮಾನ್ಯ ಮುಖ್ಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ಎಲ್ಲಾ ಇಲಾಖಾ ಕಾರ್ಯದರ್ಶಿಗಳ ಒಂದು ಸಭೆಯನ್ನು ಕರೆದು ಚರ್ಚೆ ಮಾಡಿ ಈ ಕುರಿತು ಒಂದು ಆದೇಶ ಆಗಿ ಅದು ಎಲ್ಲಾ ಇಲಾಖೆಗಳಿಗೂ ಹೋದಾಗ ಮಾತ್ರ ಈ ಏಕಗವಾಕ್ಷಿ ಯೋಜನೆ ಕಾರ್ಯಗತವಾಗುತ್ತದೆ. ಇಲ್ಲದಿದ್ದರೆ ಇಲ್ಲ. ಸಾಮಾನ್ಯವಾಗಿ ಅರಣ್ಯ ಇಲಾಖೆ, ಜಲ ಸಂಪನ್ಮೂಲ ಇಲಾಖೆ, ಪ್ರಾಚ್ಯವಸ್ತು ಇಲಾಖೆ, ರಾಜ್ಯ ತೋಟಗಾರಿಕಾ

ಇಲಾಖೆ ಕೆ.ಪಿ.ಟಿ.ಸಿ.ಎಲ್. ಬಿ.ಬಿ.ಎಂ.ಪಿ. ಬಿ.ಡಿ.ಎ. ಶಿಕ್ಷಣ ಇಲಾಖೆ ಇಲ್ಲಿ ಎಲ್ಲೂ ಕೂಡ ನಮಗೆ ಅವಕಾಶಗಳು ಸಿಗುತ್ತಿಲ್ಲ. ಆದುದರಿಂದಾಗಿ ಮಾನ್ಯ ಮುಖ್ಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ಎಲ್ಲಾ ಇಲಾಖಾ ಕಾರ್ಯದರ್ಶಿಗಳ ಒಂದು ಸಭೆಯನ್ನು ಕರೆದು ಮುಕ್ತವಾಗಿ ಚಿತ್ರೀಕರಣ ಕರ್ನಾಟಕದಲ್ಲಿಯೇ ಆಗಬೇಕೆನ್ನುವ ಆದೇಶ ಜಾರಿಯಾಗಬೇಕು. ಈಗ ಒಂದೊಂದು ಇಲಾಖೆಯವರು ಇಷ್ಟಿಷ್ಟು ಹಣ ಎಂದು ಇಟ್ಟಿದ್ದಾರೆ. ದಯವಿಟ್ಟು ವಾರ್ತಾ ಇಲಾಖೆಗೆ ಒಬ್ಬ ತಜ್ಞರನ್ನು ಕಳಿಸಿ ಈ ಮೊತ್ತವನ್ನು ನಿಗದಿಗೊಳಿಸಿ. ನಾವು ಒಟ್ಟಿಗೆ ಒಂದೇ ಕಡೆ ಈ ಹಣವನ್ನು ಕಟ್ಟಿ ಚಿತ್ರೀಕರಣ ಮಾಡುವಂತಹ ಕಾರ್ಯಕ್ರಮವನ್ನು ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳವರಲ್ಲಿ ವಿನಂತಿಸುತ್ತೇನೆ.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಜಗ್ಗೇಶ್ ಅವರು ಹೇಳುವಂತಹ ಎಲ್ಲಾ ವಿಚಾರಗಳೂ ಸರಿಯಾಗಿವೆ. ದಿನಾಂಕ 23–09–2011 ರಿಂದ ಈ ಏಕಗವಾಕ್ಷಿ ಪದ್ಧತಿ ಜಾರಿಗೆ ಬಂದಿದೆ. ಅವರು ಹೇಳಿದಂತಹ ಅರಣ್ಯ ಇಲಾಖೆ, ಜಲಸಂಪನ್ಮೂಲ ಇಲಾಖೆ, ಪ್ರಾಚ್ಯವಸ್ತು ಇಲಾಖೆ, ರಾಜ್ಯ ತೋಟಗಾರಿಕಾ ಇಲಾಖೆ ಮತ್ತು ಇತರೆ ಇಲಾಖೆಗಳಿಗೆ ಸಂಬಂಧಿಸಿದ ಪ್ರದೇಶಗಳಲ್ಲಿ ಅವರು ಚಿತ್ರೀಕರಣ ಮಾಡಬೇಕಾದ ಸಂದರ್ಭದಲ್ಲಿ ಅಲ್ಲಿ ಚಿತ್ರೀಕರಣ ಶುಲ್ಕ ಪಾವತಿ ಮಾಡಿ, ಆ ನಂತರ ವಾರ್ತಾ ಇಲಾಖೆಗೆ ಬಂದು ಅಲ್ಲಿಂದ ಅನುಮತಿ ಪಡೆಯಬೇಕಾದ ಪರಿಸ್ಥಿತಿ ಇದೆ. ಅವರು ಹೇಳುವಂತೆ ಅವರಿಗೆ ಸ್ವಲ್ಪ ತೊಂದರೆ ಇರುವುದು ಸರಿ ಇದೆ. ಮಾನ್ಯ ಮುಖ್ಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ಎಲ್ಲಾ ಇಲಾಖಾ ಕಾರ್ಯದರ್ಶಿಗಳ ಒಂದು ಸಭೆಯನ್ನು ಕರೆದು ಒಂದೇ ಕಡೆಯಲ್ಲಿ ಹಣವನ್ನು ಪಾವತಿ ಮಾಡಿದರೆ ಆ ಕುರಿತು ನೋಂದಣಿ ಪತ್ರವನ್ನು ಕೊಡಬೇಕೆಂಬ ಬಗ್ಗೆ ಆದಷ್ಟು ಶೀಘ್ರವಾಗಿ ಮಾನ್ಯ ಮುಖ್ಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ಎಲ್ಲಾ ಇಲಾಖಾ ಕಾರ್ಯದರ್ಶಿಗಳ ಒಂದು ಸಭೆಯನ್ನು ಕರೆದು ಇದರ ಬಗ್ಗೆ ಸೂಕ್ತ ಕ್ರಮವನ್ನು ಕೈಗೊಳ್ಳುತ್ತೇನೆ.

**ಶ್ರೀ ಸಂದೇಶ್ ನಾಗರಾಜ್:-** ಮಾನ್ಯ ಸಭಾಪತಿಯವರೇ, ಮಂಡ್ಯ ಜಿಲ್ಲೆಯಲ್ಲಿ ಮೇಲುಕೋಟೆ ಎಂಬ ಒಂದು ಪುಣ್ಯ ಸ್ಥಳ ಇದೆ. ಅಲ್ಲಿ ಪ್ರವೇಶ ಮಾಡಿದರೆ ಟೋಲ್ ಅನ್ನು ಕೊಡಬೇಕು. ನಂತರ ಪಂಚಾಯತಿಗೆ ಹಣವನ್ನು ಕೊಡಬೇಕು. ಕೊಳಕ್ಕೆ ಹಣವನ್ನು ಕಟ್ಟಬೇಕು. ಮತ್ತೊಂದು ಕಡೆಯಲ್ಲಿ ಹಣವನ್ನು ಕಟ್ಟಬೇಕು. ಒಟ್ಟು 5 ಕಡೆಗಳಲ್ಲಿ ಹಣವನ್ನು ಕಟ್ಟಬೇಕಾಗಿದೆ. ಇದರ ಬದಲಿಗೆ ಒಂದೇ ಕಡೆಯಲ್ಲಿ ಹಣವನ್ನು ಕಟ್ಟುವ ಏಕಗವಾಕ್ಷಿ ಯೋಜನೆಯನ್ನು ಜಾರಿಗೆ ತರುತ್ತೇವೆಂದು ಹಿಂದಿನ ಮೂವರು ಮುಖ್ಯಮಂತ್ರಿಗಳು ಸಭೆಯನ್ನು ಮಾಡಿದರು. ಆದರೆ ಅದು ಸಾಧ್ಯವಾಗಲಿಲ್ಲ. ಮಾನ್ಯ ಸದಾನಂದಗೌಡರವರು ಈ ಏಕಗವಾಕ್ಷಿ ಪದ್ಧತಿಯನ್ನು ಆದಷ್ಟು ಶೀಘ್ರವಾಗಿ ಜಾರಿಗೆ ತಂದು ನಮಗೆ ಚಿತ್ರೀಕರಣಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ. ಮೊನ್ನೆ ಅರಣ್ಯ ಇಲಾಖೆಯವರು ಅನುಮತಿ ಕೊಟ್ಟಿದ್ದರು ಪುನ: ಅದನ್ನು ನಿಲ್ಲಿಸಿದ್ದಾರೆ.

**ಡಾ॥ ಶ್ರೀನಾಥ್:-** ಮಾನ್ಯ ಸಭಾಪತಿಯವರೆ, ಪ್ರತಿ ರಾಜ್ಯದಲ್ಲೂ ಏಕಗವಾಕ್ಷಿ ಪದ್ಧತಿ ಜಾರಿಯಲ್ಲಿದೆ. ನಾವು ಸಿನಿಮಾ ರಂಗದವರು ಚಿತ್ರಗಳ ಮೇಲೆ ಬಹಳಷ್ಟು ಬಂಡವಾಳವನ್ನು ಹೂಡುತ್ತೇವೆ. ಮಾನ್ಯ ಸಂದೇಶ್ ನಾಗರಾಜ್ ಅವರು ಹೇಳಿದ ಹಾಗೆ ಅಲ್ಲಿ ಹಣವನ್ನು ಕಟ್ಟಿದ್ದೀರೇನ್ರಿ, ನಮಗೂ ಕೂಡ ಹಣವನ್ನು ಕೊಡಿ ಎಂದು ಕೇಳುತ್ತಾರೆ, ಇದು ಮುಂದುವರಿದ್ದಿದ್ದೇ ಆದರೆ, ಹೀಗೇ ಚಿತ್ರೀಕರಣದ ಉದ್ದಕ್ಕೂ ಅಲ್ಲಲ್ಲೇ ಹಣವನ್ನು ಕೊಡುತ್ತಾ ಹೋಗಬೇಕಾಗುತ್ತದೆ. ಇದನ್ನು ತಪ್ಪಿಸಬೇಕು. ಜಗ್ಗೇಶ್‌ರವರು ಕೇಳಿದ ಹಾಗೆ ಏಕಗವಾಕ್ಷಿಯ ಒಂದು ಆದೇಶ ನಮಗೆ ಸಿಕ್ಕರೆ, ನಮಗೆ ಯಾರು ತೊಂದರೆ ಕೊಡುವುದಿಲ್ಲ. ಅದರಿಂದ ಸರಳವಾಗಿ ಚಿತ್ರೀಕರಣ ಮಾಡಲು ಅನುಕೂಲವಾಗುತ್ತದೆ. ಈ ಅನುಕೂಲವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಡಾ॥ ದೊಡ್ಡರಂಗೇಗೌಡ:-** ಮಾನ್ಯ ಸಭಾಪತಿಗಳೆ, ನಮ್ಮಲ್ಲಿ ಅದ್ಭುತವಾದ ಪ್ರೇಕ್ಷಣಿಯ ಸ್ಥಳಗಳು ಇವೆ, ಅವು ಏಕೆ ನಮ್ಮ ಚಿತ್ರದಲ್ಲಿ ಚಿತ್ರೀಕರಣವಾಗುತ್ತಿಲ್ಲ ಎಂದರೆ, ಈ ಕಾನೂನಿನ ತೊಡಕಿನಿಂದಲೇ. ಬೇರೆ ದೇಶಗಳಲ್ಲಿ ಸುಂದರವಾದ ತಾಣಗಳ ಚಿತ್ರೀಕರಣವಾಗಲು ಅನುಕೂಲಗಳಿವೆ.

ನಮ್ಮಲ್ಲಿ ಕಾನೂನು ತೊಡಕುಗಳು ಇವೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಈ ವಿಚಾರದಲ್ಲಿ ಗಟ್ಟಿಯಾದ ನಿರ್ಧಾರವನ್ನು ತೆಗೆದುಕೊಂಡು ಒಂದು ಸರಿಯಾದ ಸಂದೇಶವನ್ನು ರವಾನಿಸಬೇಕೆಂದು ವಿನಂತಿ.

**ಶ್ರೀ ಡಿ.ವಿ. ಸದಾನಂದಗೌಡ:-** ಮಾನ್ಯ ಸಭಾಪತಿಗಳೆ, ಇನ್ನು 15 ದಿನಗಳಲ್ಲಿ ಮುಖ್ಯ ಕಾರ್ಯದರ್ಶಿಯವರನ್ನು ಮತ್ತು ಚಿತ್ರರಂಗಕ್ಕೆ ಸಂಬಂಧಪಟ್ಟ ಶಾಸಕರನ್ನು ಕರೆದು ಚರ್ಚೆ ಮಾಡಿ ಇದಕ್ಕೆ ಪರಿಹಾರ ಕಂಡುಕೊಂಡು ಖಂಡಿತವಾಗಿ ಆ ಕೆಲಸವನ್ನು ಮಾಡಿ ಕೊಡುತ್ತೇವೆ.

**ಸಭಾಪತಿಯವರು:-** ಎಲ್ಲರಿಗೂ ಸಮಾಧಾನವಾಗಿದೆ ಎಂದು ಭಾವಿಸುತ್ತೇನೆ.

**ಶ್ರೀ ಜಗ್ಗೇಶ್:-** ಮಾನ್ಯ ಸಭಾಪತಿಗಳೆ, ನಮ್ಮ ಸರ್ಕಾರ ಚಿತ್ರರಂಗಕ್ಕೆ ವಿಶೇಷ ಸವಲತ್ತುಗಳನ್ನು ಒದಗಿಸಿ ಕೊಟ್ಟಿದೆ. 75 ಚಿತ್ರಗಳಿಗೆ ಸಬ್ಸಿಡಿ ಕೊಡುವುದು, ಡಾ॥ ರಾಜಕುಮಾರ್ ಮತ್ತು ಡಾ॥ ವಿಷ್ಣುವರ್ಧನ್‌ರವರ ಸ್ಮಾರಕ ಮಾಡಲು, ಕಂಠೀರವ ಸ್ಟುಡಿಯೋ ಹಾಳು ಬಿದ್ದಿತ್ತು, ಅದಕ್ಕೆ ವಿಶೇಷವಾದ ಅನುದಾನವನ್ನು ಕೊಟ್ಟು ಒಳ್ಳೆಯ ಇಂಡೋರ್ ಸ್ಟುಡಿಯೋ ಮಾಡಿದ್ದಾರೆ. ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಮತ್ತು ಚಲನಚಿತ್ರ ಅಕಾಡೆಮಿ ಮಾಡಲು ನಮ್ಮ ಸರ್ಕಾರ ಸಹಾಯ ಮಾಡಿದೆ. ಅದಕ್ಕಾಗಿ ನಮ್ಮ ಸರ್ಕಾರಕ್ಕೆ ಇಡೀ ಚಿತ್ರರಂಗದ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇವೆ.

**ಶ್ರೀ ಸಂದೇಶ ನಾಗರಾಜ:-** ಸರ್ಕಾರ ದಯಮಾಡಿ ನಮ್ಮ ಚಿತ್ರರಂಗಕ್ಕೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ಇಲ್ಲಿ ಒಂದು ವಿಚಾರವನ್ನು ಹಂಚಿಕೊಳ್ಳುತ್ತೇನೆ, ನಮ್ಮ ಸದನದ ಕಲಾಪವನ್ನು ವೀಕ್ಷಿಸಲು ಕೆಲವು ಗಣ್ಯರು ಬಂದಿದ್ದಾರೆ. ರಾಜ್ಯಸಭಾ ಸದಸ್ಯರಾದ ಗೌರವಾನ್ವಿತ ಶ್ರೀಮತಿ ಜಯಶ್ರೀಯವರು ಬಂದಿದ್ದಾರೆ ಅವರಿಗೆ ಎಲ್ಲರ ಪರವಾಗಿ ಸ್ವಾಗತ ಕೋರುತ್ತೇನೆ.

ಭಾರತದ ಸಂಸ್ಕೃತಿಯನ್ನು ಅಧ್ಯಯನ ಮಾಡಲು ಬೆಲ್ಜಿಯಂ ವಿಶ್ವವಿದ್ಯಾನಿಲಯದ ಇಬ್ಬರು ವಿದ್ಯಾರ್ಥಿಗಳು ಬಂದಿದ್ದಾರೆ ಅವರಿಗೆ ಸದನದ ಪರವಾಗಿ ಸ್ವಾಗತ ಕೋರುತ್ತೇನೆ.

ಮುಂದಿನ ಪ್ರಶ್ನೆಗಳಿಗೆ ಸಮಯ ತುಂಬಾ ಕಡಿಮೆ ಇದೆ, ಎಲ್ಲ ಪ್ರಶ್ನೆಗಳು ಮುಖ್ಯಮಂತ್ರಿಗಳಿಗೆ ಇವೆ, ಎಲ್ಲರಿಗೂ ಮುಖ್ಯಮಂತ್ರಿಗಳಿಂದ ಉತ್ತರ ಪಡೆಯಬೇಕು ಎನ್ನುವ ಆಸೆ ಇರುತ್ತದೆ, ಅದಕ್ಕಾಗಿ ದಯಮಾಡಿ ಎಲ್ಲರೂ ಚರ್ಚೆಯನ್ನು ಮುಂದುವರಿಸದೆ ಬೇಗನೆ ಮಾತನಾಡಿ ಮುಗಿಸಿ.

**ಜನರು ಗ್ರಾಮೀಣ ಭಾಗದಿಂದ ನಗರಗಳಿಗೆ ನಿರಂತರವಾಗಿ ವಲಸೆ ಬರುತ್ತಿರುವ ಬಗ್ಗೆ.**

**49; ಶ್ರೀ ಮೋಹನ್ ಎ. ಲಿಂಬೀಕಾಯಿ (ಪದವೀಧರರ ಕ್ಷೇತ್ರ)**

ಅ) ಗ್ರಾಮೀಣ ಭಾಗದ ಜನ, ನಗರಗಳಿಗೆ ನಿರಂತರವಾಗಿ ವಲಸೆ ಬರುತ್ತಿರುವುದರಿಂದ ನಗರಗಳ ಜನಸಂಖ್ಯೆ ಹೆಚ್ಚಾಗಿ ಮೂಲ ಸೌಲಭ್ಯಗಳನ್ನು ಒದಗಿಸಲು ಕಷ್ಟಸಾಧ್ಯವಾಗಿರುವ ಪರಿಸ್ಥಿತಿ ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಇಂತಹ ವಲಸೆಗೆ ಮೂಲ ಕಾರಣಗಳೇನೆಂಬ ಬಗ್ಗೆ ಸರ್ಕಾರದಿಂದ ಯಾವುದಾದರೂ ಅಧ್ಯಯನ ನಡೆಸಲಾಗಿದೆಯೆ;

ಇ) ನಡೆಸಿದ್ದಲ್ಲಿ, ಕಾರಣಗಳೇನು ಮತ್ತು ಅಂತಹ ವಲಸೆ ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು?

**ಶ್ರೀ ಎಸ್. ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಬೆಂಗಳೂರು ಜಲ ಮಂಡಳಿ ಸಚಿವರು)**

ಅ) ಗ್ರಾಮೀಣ ಭಾಗದಿಂದ ನಗರಗಳಿಗೆ ವಲಸೆ ಬರುತ್ತಿರುವುದರಿಂದ ಜನಸಂಖ್ಯೆ ಹೆಚ್ಚಾಗಿದೆ. ಮೂಲಸೌಲಭ್ಯ ಒದಗಿಸಲು ಸರ್ಕಾರವು ಪ್ರಯತ್ನಿಸುತ್ತಿದೆ.

ಆ) ಸರ್ಕಾರದಿಂದ ಈ ಬಗ್ಗೆ ನಿರ್ದಿಷ್ಟವಾಗಿ ಯಾವುದೇ ಅಧ್ಯಯನಗಳು ನಡೆದಿಲ್ಲ.

ಆದರೆ

1) ಜನಗಣತಿ–2011,

2) ಯೋಜನಾ ಆಯೋಗದ ವರದಿ.

3) Karnataka Human Development Report-2005.

4) High Powered Expert Committee Report on Urban Infrastructure and Services, 2011, Ministry of Urban Development, Government of India,

5) Suresh Tendulkar's Committee on Methodology for Estimation of Poverty.

ಈ ಅಧ್ಯಯನಗಳು ವಲಸೆ ಸಮಸ್ಯೆಗಳ ಬಗ್ಗೆ ಚರ್ಚಿಸಿವೆ.

ಇ) ಈ ಅಧ್ಯಯನಗಳಲ್ಲಿ ವಲಸೆಗೆ ಕೊಟ್ಟಿರುವ ಕಾರಣಗಳು;

1. ಕೃಷಿಯೇತರ ಆರ್ಥಿಕ ಪ್ರಗತಿಯ ಕುಂಠಿತವಾಗಿದ್ದು, ಕೃಷಿ ಕ್ಷೇತ್ರದ ಮೇಲೆ ಹೆಚ್ಚಿನ ಅವಲಂಬನೆ ಇರುವುದರಿಂದ ಗ್ರಾಮೀಣ ಭಾಗದಿಂದ ನಗರಕ್ಕೆ ವಲಸೆ ಬರುವವರ ಸಂಖ್ಯೆ ಹೆಚ್ಚಿದೆ.
2. ಬಡಜನರಿಗೆ ಉದ್ಯೋಗ ಹಾಗೂ ಜೀವನ ನಿರ್ವಹಣೆಯು ಕಷ್ಟಕರವಾಗಿರುವುದರಿಂದ ನಗರ ಪ್ರದೇಶಗಳಿಗೆ ಉದ್ಯೋಗ ಅರಸಿ ವಲಸೆ ಬರುತ್ತಾರೆ.

ವಲಸೆಯನ್ನು ನಿಯಂತ್ರಿಸಲು ಗ್ರಾಮೀಣ ಪ್ರದೇಶಗಳಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ, ಕೂಲಿಗಾಗಿ ಕಾಳು ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ ಹಾಗೂ ವಲಸೆ ನಿಯಂತ್ರಿಸಲು ಸರ್ಕಾರದ ಹಂತದಲ್ಲಿ ಚಿಂತನೆ ನಡೆಯುತ್ತಿದೆ.

**ಶ್ರೀ ಮೋಹನ .ಎ. ಲಿಂಬೀಕಾಯಿ:–** ಮಾನ್ಯ ಸಭಾಪತಿಗಳೆ, ಗ್ರಾಮೀಣ ಭಾಗದ ಜನ ನಗರಗಳಿಗೆ ನಿರಂತರವಾಗಿ ವಲಸೆ ಬರುವುದನ್ನು ತಡೆಯುವ ಸಲುವಾಗಿ ಯಾವ ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತದೆ ಎನ್ನುವ ಬಗ್ಗೆ ಪ್ರಶ್ನೆ ಕೇಳಲಾಗಿದೆ. ಅದಕ್ಕೆ ಅವರು 'ಮಹಾತ್ಮಾಗಾಂಧಿ ಉದ್ಯೋಗ ಖಾತರಿ ಯೋಜನೆ, ಕೂಲಿಗಾಗಿ ಕಾಳು ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ' ಎಂದು ಉತ್ತರ ಕೊಟ್ಟಿದ್ದಾರೆ. ಈ ಎರಡು ಯೋಜನೆಗಳು ಗ್ರಾಮೀಣ ಮಟ್ಟದಲ್ಲಿ ಏನು ಕೆಲಸ ಮಾಡುತ್ತಿಲ್ಲ ಕಾರಣ ಎಂದರೆ, ಈ ಯೋಜನೆಯಲ್ಲಿ ಕೆಲಸ ಮಾಡಲು ಕಾರ್ಮಿಕರು ಸಿಗುತ್ತಿಲ್ಲ, 1956ನೇ ಇಸವಿಯಲ್ಲಿ ಭಾಷಾವಾರು ಪ್ರಾಂತ್ಯಗಳು ರಚನೆಯಾದಾಗ 78% ರಷ್ಟು ಜನ ಗ್ರಾಮೀಣ ಪ್ರದೇಶದಲ್ಲಿದ್ದರೆ ಈಗ 2010ನೇ ಸಾಲಿನ ಸಮೀಕ್ಷೆ ನೋಡಿದಾಗ 54% ರಷ್ಟು ಜನ ಗ್ರಾಮೀಣ ಪ್ರದೇಶದಲ್ಲಿ ಉಳಿದುಕೊಂಡಿದ್ದಾರೆ. ಅಂದರೆ 25%ಕ್ಕಿಂತಲು ಹೆಚ್ಚು ಜನ ಗ್ರಾಮೀಣ ಪ್ರದೇಶದಿಂದ ನಗರ ಪ್ರದೇಶಕ್ಕೆ ಬಂದಿದ್ದಾರೆ. ಈ ರೀತಿಯಾಗಲು ಏನು ಕಾರಣ ಎನ್ನುವ ಬಗ್ಗೆ ಅಧ್ಯಯನ ಕೂಡ ಆಗಿದೆ. ಆ ಅಧ್ಯಯನಕ್ಕೆ ಪೂರಕವಾಗಿ ಏನೇನು ಶಿಫಾರಸ್ಸು ಮಾಡಿದ್ದಾರೆ, ಆ ಶಿಫಾರಸ್ಸನ್ನು ಕಾರ್ಯರೂಪಕ್ಕೆ ತರಲು ಏನು ಕಾರ್ಯಗಳಾಗಿವೆ ಎನ್ನುವುದನ್ನು ಮಾನ್ಯ ಸಚಿವರು ಹೇಳಬೇಕೇ ಹೊರತು ಮಹಾತ್ಮಾಗಾಂಧಿ ಉದ್ಯೋಗ ಖಾತರಿ ಯೋಜನೆ, ಕೂಲಿಗಾಗಿ ಕಾಳು ಯೋಜನೆಗಳ ಬಗ್ಗೆ ಅಲ್ಲ, ಇವು ಈಗಾಗಲೇ defunct ಆಗಿವೆ, obsolete ಆಗಿವೆ, ಇಂತಹ ಯೋಜನೆಗಳ ಬಗ್ಗೆ ಹೇಳುವುದಕ್ಕಿಂತ ಸುರೇಶ್ ತೆಂಡಲ್ಕೂರ್ ಕಮಿಟಿ ಇರಬಹುದು ಅಥವಾ ಯೋಜನಾ ಆಯೋಗದ ವರದಿ ಇರಬಹುದು, ಕೇಂದ್ರ ಸರ್ಕಾರವಿರಬಹುದು, ರಾಜ್ಯ ಸರ್ಕಾರವಿರಬಹುದು, ಇವು ಕಾಲಕಾಲಕ್ಕೆ ನಗರಕ್ಕೆ ವಲಸೆ ಬರುವುದನ್ನು ತಡೆಯಲು ಏನು ಶಿಫಾರಸ್ಸುಗಳನ್ನು ಆ ಸಮಿತಿಗಳು ಮಾಡಿವೆ, ಆ ಶಿಫಾರಸ್ಸುಗಳನ್ನು ಜಾರಿಗೆ ತರುವುದರ ಸಲುವಾಗಿ ವಿಶೇಷವಾಗಿ ಸರ್ಕಾರ ಅದಕ್ಕೆ ಅನುದಾನವನ್ನು ಕೊಡುವುದು, ಕ್ರಮ ತೆಗೆದುಕೊಳ್ಳುವ ಬಗ್ಗೆ ಸರ್ಕಾರ ಏನು ಮಾಡುತ್ತಿದೆ ಎನ್ನುವುದನ್ನು ಮಾನ್ಯ ಸಚಿವರು ಹೇಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಎಸ್. ಸುರೇಶ್‌ಕುಮಾರ್:-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರ ಪ್ರಶ್ನೆಗಳಿಗೆ ಉತ್ತರಗಳನ್ನು ಒದಗಿಸಲಾಗಿದೆ. ಒಂದು ವಿಚಾರ ಇಲ್ಲಿ ಸ್ಪಷ್ಟ. ನಗರೀಕರಣವನ್ನು ತಡೆಯಲು ಸಾಧ್ಯವಿಲ್ಲ. We cannot wish it away. ಅದು ನಡೆಯುತ್ತಾ ಇದೆ. 1971ನೇ ಸೆನ್ಸಸ್ ಪ್ರಕಾರ ನಮ್ಮ ರಾಜ್ಯದಲ್ಲಿ ನಗರೀಕರಣದ ಸರಾಸರಿ ಇದ್ದುದು 24.31%, 1981ರಲ್ಲಿ 28.29%, 1991ರಲ್ಲಿ 30.91%, 2001ರಲ್ಲಿ 33.98%, 2011ರಲ್ಲಿ 38.57% ಒಂದು ಅಂದಾಜಿನ ಪ್ರಕಾರ 2025ರಲ್ಲಿ 50% ಆಗುತ್ತದೆ. ಏಕೆ ವಲಸೆ ಹೋಗುತ್ತಾರೆ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಒಂದು ಶಿಕ್ಷಣಕ್ಕಾಗಿ ಇನ್ನೊಂದು ಉದ್ಯೋಗಕ್ಕೆ. ಮೂಲವಾಗಿ ಗ್ರಾಮೀಣ ಪ್ರದೇಶ ವ್ಯಕ್ತಿಗಳು ಕೂಡ ಶಿಕ್ಷಣ ಪಡೆದ ಮೇಲೆ ಗ್ರಾಮೀಣ ಪ್ರದೇಶದಲ್ಲಿ ಉಳಿಯಲು ಇಷ್ಟಪಡುವುದಿಲ್ಲ. ಏಕೆಂದರೆ ಅಲ್ಲಿ ಮೂಲಭೂತವಾದ ಸೌಲಭ್ಯಗಳು ಇಲ್ಲ ಎಂದು. ಅವರ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಸಿಗದೆ ಇರಬಹುದು, ಇನ್ನು ಬೇರೆ-ಬೇರೆ ಸೌಲಭ್ಯಗಳು ಇಲ್ಲದೆ ಇರಬಹುದು. ಅದನ್ನು ಇವತ್ತು ನಾವು ಅಡ್ರೆಸ್ ಮಾಡಲೇಬೇಕಾಗಿದೆ. ಆದರೆ ಇಡೀ ಪ್ರಪಂಚದಲ್ಲಿ, ಇಡೀ ದೇಶದಲ್ಲಿ ಒಂದು ಅನ್ನಿಸಿಕೆ, ಅಭಿಪ್ರಾಯ ಬಂದಿದೆ, ನಗರೀಕರಣವಾದಾಗಲೇ ಇವತ್ತು ಆರ್ಥಿಕ ಬೆಳವಣಿಗೆ ಆಗುವುದು. ಏಕೆಂದರೆ ಕೃಷಿ ಕ್ಷೇತ್ರದಿಂದ ನಾವು ಯಾವ ಮಟ್ಟದ ಆದಾಯವನ್ನು ನಿರೀಕ್ಷೆ ಮಾಡಿದ್ದೇವೆ ಆ ಮಟ್ಟದಲ್ಲಿ ಬರುತ್ತಿಲ್ಲ. ಅದಕ್ಕೆ ಕಾರಣ ಮಧ್ಯವರ್ತಿಗಳವಿರಬಹುದು, ಕೂಲಿಕಾರರು ಸಿಗುವುದಿಲ್ಲ, ಒಳ್ಳೆಯ ಬೀಜಗಳನ್ನು ಕೊಡದೆ ಇರುವುದು ಇವೆಲ್ಲ ಕಾರಣಗಳು ಇವೆ. ಸಭಾಪತಿಗಳಿಗೆ ಗೊತ್ತಿದೆ, ವಿಶೇಷವಾಗಿ ಶೃಂಗೇರಿ, ಕೊಪ್ಪದ ಕಡೆಗಳಲ್ಲಿ ಅಡಿಕೆ ಮರಗಳು ವೃದ್ಧಾಶ್ರಮದ ಹಾಗೆ ಆಗಿವೆ. ಈ ಹಿನ್ನೆಲೆಯಲ್ಲಿ ನಾವು ಎರಡು ಕೆಲಸಗಳನ್ನು ಮಾಡಬಹುದು, ಈಗಾಗಲೇ ತಿಳಿಸಿರುವ ಹಾಗೆ ಗ್ರಾಮೀಣ ಪ್ರದೇಶದಲ್ಲಿ ಮೂಲಭೂತ ಸೌಲಭ್ಯಗಳನ್ನು ಆರ್‌ಡಿಪಿಆರ್ ಮೂಲಕ ಹೆಚ್ಚು ಮಾಡುವುದು, ಆದರೂ ನಗರಕ್ಕೆ ಬಂದೇ ಬರುವವರಿಗೆ ಮೂಲಭೂತ ಸೌಲಭ್ಯಗಳನ್ನು ನಮ್ಮ ಇಲಾಖೆಯಿಂದ ಕೊಡುವಂತಹ ಕೆಲಸವನ್ನು ನಾವು ಮಾಡುತ್ತೇವೆ.

## ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕಿನ ಸುದ್ದೇಕುಂಟೆ ಆರೋಗ್ಯ ಉಪ ಕೇಂದ್ರದ ಕಾರ್ಯನಿರ್ವಹಣೆ ಬಗ್ಗೆ

**349; ಡಾ॥ ದೊಡ್ಡರಂಗೇಗೌಡ (ನಾಮನಿರ್ದೇಶನ ಹೊಂದಿದವರು)**

**ಅ)** ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಆರೋಗ್ಯ ಉಪ ಕೇಂದ್ರಗಳ ಸಂಖ್ಯೆ ಎಷ್ಟು;

**ಆ)** ಮಧುಗಿರಿ ತಾಲ್ಲೂಕಿನಲ್ಲಿ ಸುದ್ದೇಕುಂಟೆಯಲ್ಲಿ ಇಲಾಖೆಯ ಸುಸಜ್ಜಿತವಾದ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪ್ರಾಥಮಿಕ ಆರೋಗ್ಯ ಉಪಕೇಂದ್ರ ಪ್ರಸ್ತುತ ಕಾರ್ಯನಿರ್ವಹಿಸುತ್ತಿದೆಯೇ.

**ಇ)** ಪ್ರಾಥಮಿಕ ಆರೋಗ್ಯ ಉಪಕೇಂದ್ರ ಕಾರ್ಯನಿರ್ವಹಿಸದೇ ಇರಲು ಕಾರಣಗಳೇನು; (ವಿವರವಾದ ಮಾಹಿತಿಯನ್ನು ನೀಡುವುದು).

**ಈ)** ವ್ಯವಸ್ಥಿತವಾದ ಇಲಾಖೆಯ ಕಟ್ಟಡವಿದ್ದೂ ಸಿಬ್ಬಂದಿ ಕಾರ್ಯ ನಿರ್ವಹಿಸದೇ ಇರಲು ಕಾರಣಗಳೇನು?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿ)**

**ಅ)** ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕಿನಲ್ಲಿ 51 ಆರೋಗ್ಯ ಉಪ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

**ಆ)** ಹೌದು.

**ಇ)** **ಮತ್ತು ಈ)** ಮಧುಗಿರಿ ತಾಲ್ಲೂಕಿನಲ್ಲಿ ಸುದ್ದೇಕುಂಟೆ ಉಪಕೇಂದ್ರವು ಮುದ್ದೇನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಗೆ ಬರುತ್ತದೆ. ಈ ಉಪಕೇಂದ್ರದಲ್ಲಿ ಕಿರಿಯ ಮಹಿಳಾ ಸಹಾಯಕಿಯ ಹುದ್ದೆ ಖಾಲಿ ಇರುವುದರಿಂದ ಪ್ರಭಾರ ವ್ಯವಸ್ಥೆಯ ಮೇರೆಗೆ ಸೇವೆ ನೀಡಲಾಗುತ್ತಿದೆ.

**ಡಾ|| ದೊಡ್ಡರಂಗೇಗೌಡ:–** ಮಾನ್ಯ ಸಭಾಪತಿಗಳೆ, ಲಿಖಿತ ಉತ್ತರ ಕೊಟ್ಟಿದ್ದಾರೆ ನಿಜ. ಆದರೆ ಸುಮ್ಮನೆ ಪ್ರಶ್ನೆಯನ್ನು ಕೇಳುವ ಹವ್ಯಾಸ ನನಗೆ ಇಲ್ಲ. ವಿಷಯದ ಆಳವಾದ ಅರಿವು ನನಗೆ ಇದೆ. ಅಧಿಕಾರಿಗಳು ಪಾರದರ್ಶಕವಾಗಿ ಇರಬೇಕಾಗುತ್ತದೆ. ಸಂಗತಿಗಳು ಸ್ಪಷ್ಟವಾಗಿರಬೇಕಾಗಿರುತ್ತದೆ. ವಾಸ್ತವಾಗಿ ಸುದ್ದೇಕುಂಟೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸಿಬ್ಬಂದಿಗಳೆ ಇಲ್ಲ. ನನ್ನ ಭಿನ್ನಹ ಏನು ಎಂದರೆ, ನಾನು ಮಧುಗಿರಿ ಪ್ರಾಂತ್ಯದವನು. ಸುದ್ದೇಕುಂಟೆ, ಅಡವಿ ನಾಗೇನಹಳ್ಳಿ, ವರದನಹಳ್ಳಿ, ಉತ್ತರಾಯನಹಳ್ಳಿ ಈ ನಾಲ್ಕು ಹಳ್ಳಿಗಳಿಗೆ ಇರುವುದು ಒಂದೇ ಪ್ರಾಥಮಿಕ ಆರೋಗ್ಯ ಕೇಂದ್ರ. ಆ ಕೇಂದ್ರವು ಸರಿಯಾಗಿ ನಡೆಯುವುದಿಲ್ಲ ಎಂದರೆ, ಜನ ಎಲ್ಲಿಗೆ ಹೋಗಬೇಕು? ದೂರದಲ್ಲಿರುವ ಕೊಡಗೇನಹಳ್ಳಿಗೆ ಹೋಗುವಷ್ಟು ಶಕ್ತಿ ಅನಾರೋಗ್ಯಪೀಡಿತ ಮುದಕರಿಗೆ, ಹೆಣ್ಣುಮಕ್ಕಳಿಗೆ, ಮಕ್ಕಳಿಗೆ ಇರುವುದಿಲ್ಲ. ನಿನ್ನೆಯು ಈ ವಿಚಾರ ಸದನದಲ್ಲಿ ಪ್ರಸ್ತಾಪವಾಯಿತು. ಆರೋಗ್ಯ ಕೇಂದ್ರಗಳಲ್ಲಿ ಕೆಲಸ ಮಾಡುವಂತಹ ವ್ಯಕ್ತಿಗಳು ಬೇಕು. ಅಲ್ಲಿಗೆ ಹೋಗುವುದಿಲ್ಲ, ಕೆಲಸ ಮಾಡುವುದಿಲ್ಲ ಎಂದರೆ, ಸರ್ಕಾರಕ್ಕೆ ಅದಕ್ಕೆ ಏನಾದರು ಒಂದು ಗಟ್ಟಿ ನಿರ್ಧಾರ ತೆಗೆದುಕೊಂಡು ಹೋಗಲೇಬೇಕು ಎನ್ನುವ ಸರಿಯಾದಂತಹ ಬಿಗಿ ವ್ಯವಸ್ಥೆಯನ್ನು ಮಾಡಬೇಕು. ಆದ್ದರಿಂದ 3000–4000 ಜನ ಇರುವ ಗ್ರಾಮದಲ್ಲಿ ಒಂದು ಸರಿಯಾದ ಆರೋಗ್ಯ ಕೇಂದ್ರ ಇರಬೇಕು. ಅದು ಸರಿಯಾಗಿ ಕೆಲಸ ನಿರ್ವಹಿಸಬೇಕು, ಅಲ್ಲಿ ಸದಾಕಾಲ ಸಿಬ್ಬಂದಿಗಳು ಇರಬೇಕು ಎನ್ನುವುದು ನಮ್ಮ ನಿಜವಾದ ಕಾಳಜಿ.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಗಳೆ, ಮಾನ್ಯ ದೊಡ್ಡರಂಗೇಗೌಡರು ಹೇಳಿದ ವಿಚಾರ ಸರಿಯಾಗಿದೆ. ಈ ಉಪಕೇಂದ್ರವಿರುವುದು ಆಂಧ್ರ ಮತ್ತು ಕರ್ನಾಟಕದ ಗಡಿಭಾಗದಲ್ಲಿ. ಅಲ್ಲಿಗೆ ಹೋಗಿ ಕೆಲಸ ಮಾಡಲು ಎಎನ್‌ಎಂ ಗಳು ಸ್ವಲ್ಪ ಹಿಂಜರಿಯುತ್ತಿರುವುದನ್ನು ನಾವು ಕಂಡಿದ್ದೇವೆ. ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕಿನಲ್ಲಿ ಒಟ್ಟು 51 ಆರೋಗ್ಯ ಉಪಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಮಧುಗಿರಿ ತಾಲ್ಲೂಕಿನ ಸುದ್ದೇಕುಂಟೆಯ ಉಪಕೇಂದ್ರ ಮುದ್ದೇನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಬರುತ್ತದೆ. ಈ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ 5 ಉಪಕೇಂದ್ರಗಳು ಇವೆ.

ಮೂರು ಉಪಕೇಂದ್ರಗಳಲ್ಲಿ ಕಿರಿಯ ಮಹಿಳಾ ಸಹಾಯಕಿ ಹುದ್ದೆ ಖಾಲಿ ಇದೆ. ಈಗ ಒಂದು ವಾರದಲ್ಲಿ ಪ್ರಭಾರದ ಮೇಲೆ ಒಬ್ಬರನ್ನು ಅಲ್ಲಿಗೆ ಕಳುಹಿಸಿ ಕೊಡುತ್ತಿದ್ದೇವೆ. ಪಕ್ಕದ ಐ.ಡಿ.ಹಳ್ಳಿಯಿಂದ ಅಲ್ಲಿಗೆ ಕಳುಹಿಸಿ ಕೊಡುವ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಆ ಭಾಗದಲ್ಲಿ ಕೆಲಸ ಮಾಡಲು ಸಿಬ್ಬಂದಿಗಳು ಸ್ವಲ್ಪ ಹಿಂಜರಿಯುತ್ತಿದ್ದಾರೆ. ಇದಕ್ಕೆ ಕಾರಣವನ್ನು ಹುಡುಕುತ್ತಿದ್ದೇವೆ. ಇದಕ್ಕೆ ಸಕಾರಣಗಳನ್ನು ಹುಡುಕಿ ಅಲ್ಲಿಗೆ ಅಗತ್ಯವಿರುವಷ್ಟು A.N.M., ಗಳನ್ನು ಹಾಕಲು ಏನು ಮಾಡಬೇಕೆಂಬುದರ ಬಗ್ಗೆ ಈಗಾಗಲೇ ಚಿಂತನೆಗಳು ನಡೆದಿದೆ. ಈ ವಿಚಾರದಲ್ಲಿ ಡಾ॥ ದೊಡ್ಡರಂಗೇಗೌಡರು ವ್ಯಕ್ತಪಡಿಸಿರುವಂತಹ ಕಾಳಜಿ ಕೂಡ ಸರಿ ಇದೆ. ಮಾನ್ಯ ಸುರೇಶ್ ಕುಮಾರ್ ಅವರು ಉಲ್ಲೇಖ ಮಾಡಿರುವಂತೆ ಗ್ರಾಮೀಣ ಪ್ರದೇಶದಲ್ಲಿ ಈ ರೀತಿಯ ಸವಲತ್ತುಗಳಿಲ್ಲದ ಕಾರಣದಿಂದಾಗಿ ಜನರು ಬೇರೆ ಬೇರೆ ಆಸ್ಪತ್ರೆಗಳಿಗೆ ಹೋಗಬೇಕಾದಂತಹ ಪರಿಸ್ಥಿತಿ ಎದುರಾಗುತ್ತಿದೆ. ಆದುದರಿಂದ ಈ ವಿಚಾರದಲ್ಲಿ ಆರೋಗ್ಯ ಇಲಾಖೆಯ ಬಗ್ಗೆ ಒಂದು ಗಂಭೀರವಾದಂತಹ ಚಿಂತನೆಯನ್ನು ಮಾಡಿದ್ದೇವೆ. ನೆನ್ನೆಯ ದಿವಸ ಕೂಡ ನಾವು ಮತ್ತು ಡಾ॥ ಆಚಾರ್ಯ ಸೇರಿ ಚರ್ಚಿಸಿದಾಗ ಆ ಪ್ರಾಥಮಿಕ ಆರೋಗ್ಯ ಉಪಕೇಂದ್ರಗಳಲ್ಲಿನ ವೈದ್ಯರು, ನರ್ಸ್‌ನಗಳ ಕೊರತೆಯನ್ನು ನೀಗಿಸಲು ಒಂದು ಬದಲಾದಂತಹ ಕಾನೂನನ್ನೇ ತರಬೇಕಾದಂತಹ ಅವಶ್ಯಕತೆ ಇದೆ ಎಂದು ನಮಗೆ ಅನಿಸುವುದಕ್ಕೆ ಪ್ರಾರಂಭವಾಗಿದೆ. ಅದನ್ನು ಮಾಡಬೇಕೆಂದು ನಾವು ತೀರ್ಮಾನ ಮಾಡಿದ್ದೇವೆ.

**ರಾಜ್ಯದಲ್ಲಿನ ತಾಲ್ಲೂಕು ಅಕ್ರಮ –ಸಕ್ರಮ ಸಮಿತಿಯ ಮಾಹಿತಿ ಬಗ್ಗೆ.**

**105; ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ಕಳೆದ ಎರಡು ವರ್ಷಗಳಿಂದ ರಾಜ್ಯದಲ್ಲಿ ತಾಲ್ಲೂಕು ಅಕ್ರಮ–ಸಕ್ರಮ ಸಮಿತಿ ಕಾರ್ಯನಿರ್ವಹಿಸುತ್ತಿರುವ ಹಾಗೂ ಕಾರ್ಯ ನಿರ್ವಹಿಸದೆ ಇರುವ ತಾಲ್ಲೂಕುಗಳು ಯಾವುವು; ಕಾರ್ಯನಿರ್ವಹಿಸದಿದ್ದಲ್ಲಿ, ಕಾರಣಗಳೇನು; (ಜಿಲ್ಲಾವಾರು, ತಾಲ್ಲೂಕುವಾರು, ವಿವರ ನೀಡುವುದು)

ಆ) ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯಕ್ಕೆ ಸರ್ಕಾರ ಸಲ್ಲಿಸುವ ಮಧ್ಯಂತರ ಅರ್ಜಿಯ ಹಿನ್ನೆಲೆಯಲ್ಲಿ ಕಾರ್ಯ ಸ್ಥಗಿತಗೊಳಿಸಿದ ತಾಲ್ಲೂಕು ಅಕ್ರಮ-ಸಕ್ರಮ ಸಮಿತಿಗಳು ಯಾವುವು; ಮತ್ತು ಕಾರ್ಯ ನಿರ್ವಹಿಸುತ್ತಿರುವ ತಾಲ್ಲೂಕು ಸಮಿತಿಗಳು ಯಾವುವು? (ಮಧ್ಯಂತರ ಅರ್ಜಿಯ ಪ್ರತಿ ಒದಗಿಸುವುದು)

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)**

ಅ) ರಾಜ್ಯದಲ್ಲಿ ಹಾಲಿ 143 ತಾಲ್ಲೂಕುಗಳಲ್ಲಿ ತಾಲ್ಲೂಕು ಅಕ್ರಮ ಸಕ್ರಮ ಸಮಿತಿಗಳನ್ನು ರಚಿಸಲಾಗಿದ್ದು, ಉಳಿದ 36 ತಾಲ್ಲೂಕುಗಳಲ್ಲಿ ಅಕ್ರಮ-ಸಕ್ರಮ ಸಮಿತಿಗಳನ್ನು ರಚಿಸುವುದು ಬಾಕಿಯಿದೆ.

ರಚಿಸಲಾದ ಸಮಿತಿಗಳಲ್ಲಿ ಕಳೆದ 2

| | | |
|---|---|---|
| ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿರುವ ಸಮಿತಿಗಳು | – | 136 |
| ಕಾರ್ಯ ನಿರ್ವಹಿಸದೇ ಇರುವ ಸಮಿತಿಗಳು | – | 7 |
| | **ಒಟ್ಟು** | **143** |

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿನ ತಾಲ್ಲೂಕು ಅಕ್ರಮ-ಸಕ್ರಮ ಸಮಿತಿಗಳು ಮಾನ್ಯ ಸರ್ವೋಚ್ಚ ನ್ಯಾಯಾಲಯದ ತಡೆಯಾಜ್ಞೆ ಇರುವ ಕಾರಣ ಕಾರ್ಯ ನಿರ್ವಹಿಸುತ್ತಿರುವುದಿಲ್ಲ.

ಜಿಲ್ಲಾವಾರು, ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಸರ್ಕಾರವು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಯಾವುದೇ ಮಧ್ಯಂತರ ಅರ್ಜಿ ಸಲ್ಲಿಸಿಲ್ಲ. ಆದರೆ, ದಕ್ಷಿಣ ಕನ್ನಡ/ಉಡುಪಿ ಜಿಲ್ಲೆಗಳ ಕಾನ, ಬಾಣೆ, ಕುಮ್ಕಿ ಜಮೀನುಗಳ ಹಕ್ಕುಗಳ ಅಧಿಭೋಗದಾರರ ವೇದಿಕೆ ಅಧ್ಯಕ್ಷರಾದ ಶ್ರೀ ಜಿ.ಕೆ. ಮಹಾಬಲೇಶ್ವರ ಭಟ್, ಇವರು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ ಬಾಕಿಯಿರುವ ರಿಟ್ ಅರ್ಜಿ (ಸಿವಿಲ್) ಸಂಖ್ಯೆ:202/1995ಕ್ಕೆ ತಮ್ಮನ್ನು Impleading

Applicant ಮಾಡಿಕೊಳ್ಳುವಂತೆ ಕೋರಿ ಮಧ್ಯಂತರ ಅರ್ಜಿ ಸಂಖ್ಯೆ: I.A.No.2172-2174/2007 ಸಲ್ಲಿಸಿದ್ದಾರೆ. ಈ ಅರ್ಜಿಗಳಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯ ನೀಡಿರುವ ಮಧ್ಯಂತರ ತಡೆಯಾಜ್ಞೆಯ ಹಿನ್ನೆಲೆಯಲ್ಲಿ ಕಾರ್ಯಸ್ಥಗಿತಗೊಳಿಸಿರುವ ತಾಲ್ಲೂಕು ಅಕ್ರಮ–ಸಕ್ರಮ ಸಮಿತಿಗಳ ವಿವರಗಳು ಈ ಕೆಳಕಂಡಂತಿವೆ:

| ಕ್ರ.ಸಂ. | ಜಿಲ್ಲೆ | ತಾಲ್ಲೂಕು |
|---|---|---|
| 1. | ದಕ್ಷಿಣ ಕನ್ನಡ | 1. ಸುಳ್ಯ<br>2. ಪುತ್ತೂರು<br>3. ಬೆಳ್ತಂಗಡಿ<br>4. ಮೂಡಬಿದ್ರೆ ಹೋಬಳಿ (ಮಂಗಳೂರು) |
| 2. | ಉಡುಪಿ | 1. ಉಡುಪಿ<br>2. ಕಾರ್ಕಳ<br>3. ಕುಂದಾಪುರ |

ಇವುಗಳನ್ನು ಹೊರತುಪಡಿಸಿ ಉಳಿದ ತಾಲ್ಲೂಕುಗಳಲ್ಲಿನ ಅಕ್ರಮ–ಸಕ್ರಮ ಸಮಿತಿಗಳು ಕಾರ್ಯನಿರ್ವಹಿಸುತ್ತಿವೆ. (ಅನುಬಂಧದಂತೆ)

ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿನ ಮಧ್ಯಂತರ ಅರ್ಜಿಯ ಪ್ರತಿಯನ್ನು ಮಾನ್ಯ ಸದಸ್ಯರಿಗೆ ಒದಗಿಸಲಾಗಿದೆ.

## ಅನುಬಂಧ

### ರಾಜ್ಯದಲ್ಲಿ ರಚಿಸಲಾಗಿರುವ ತಾಲ್ಲೂಕು ಅಕ್ರಮ-ಸಕ್ರಮ ಸಮಿತಿಗಳ ವಿವರ.

| ಕ್ರ.ಸ | ಜಿಲ್ಲೆಯ | ತಾಲ್ಲೂಕು | ಕಡತ ಸಂಖ್ಯೆ | ಆದೇಶ ಹೊರಡಿಸಿದ ದಿನಾಂಕ |
|---|---|---|---|---|
| 1 | ಬೆಂಗಳೂರು | 1.ಬೆಂಗಳೂರುಉತ್ತರ(ಅ) | ಆರ್‌ಡಿ 881 ಎಲ್‌ಜಿಬಿ 2009 | ದಿ.31.12.2009 |
| | | 2. ಆನೇಕಲ್ | ಆರ್‌ಡಿ 128 ಎಲ್‌ಜಿಬಿ 2009 | ದಿ.26.10.2009 |
| | | 3. ಬೆಂಗಳೂರು ದಕ್ಷಿಣ | ಆರ್‌ಡಿ194 ಎಲ್‌ಜಿಬಿ 2009 | ದಿ.04.12.2010 |
| | | 4. ಬೆಂಗಳೂರು ಪೂರ್ವ | ಆರ್‌ಡಿ652128 ಎಲ್‌ಜಿಬಿ 2009(ಪಿ1) | ದಿ.21.02.2011 |
| 2 | ಬೆಂಗಳೂರು ಗ್ರಾ | 5. ಹೊಸಕೋಟೆ | ಆರ್‌ಡಿ 684 ಎಲ್‌ಜಿಬಿ 2009 | - |
| | | 6. ನೆಲಮಂಗಲ | ಆರ್‌ಡಿ 468 ಎಲ್‌ಜಿಬಿ 2009 | ದಿ.16.02.2010 |
| | | 7. ದೇವನಹಳ್ಳಿ | ಆರ್‌ಡಿ 342 ಎಲ್‌ಜಿಬಿ 2009 | ದಿ.15.12.2009 |
| | | 8. ದೊಡ್ಡಬಳ್ಳಾಪುರ | ಆರ್‌ಡಿ 622 ಎಲ್‌ಜಿಬಿ 2009 | ದಿ.07.01.2010 |
| 3 | ರಾಮನಗರ | 9. ರಾಮನಗರ | ಆರ್‌ಡಿ 122 ಎಲ್‌ಜಿಬಿ 2009 | ದಿ.23.10.2009 |
| | | 10. ಚನ್ನಪಟ್ಟಣ | ಆರ್‌ಡಿ 129 ಎಲ್‌ಜಿಬಿ 2009 | ದಿ.26.10.2009 |
| | | 11. ಕನಕಪುರ | ಆರ್‌ಡಿ 126 ಎಲ್‌ಜಿಬಿ 2009 | ದಿ.26.10.2009 |
| | | 12. ಮಾಗಡಿ | ಆರ್‌ಡಿ 502 ಎಲ್‌ಜಿಬಿ 2009 | ದಿ.26.10.2009 |
| 4 | ಶಿವಮೊಗ್ಗ | 13. ಶಿಕಾರಿಪುರ | ಆರ್‌ಡಿ 47 ಎಲ್‌ಜಿಎಸ್ 2008 | ದಿ.23.10.2009 |
| | | 14. ಸೊರಬ | ಆರ್‌ಡಿ 63 ಎಲ್‌ಜಿಬಿ 2009 | ದಿ.6.12.2010 |
| | | 15. ಸಾಗರ | ಆರ್‌ಡಿ 12 ಎಲ್‌ಜಿಬಿ 2009 | ದಿ.6.12.2010 |
| | | 16. ಭದ್ರಾವತಿ | ಆರ್‌ಡಿ 11 ಎಲ್‌ಜಿಎಸ್ 2009 | ದಿ.12.01.2010 |
| | | 17. ತೀರ್ಥಹಳ್ಳಿ | ಆರ್‌ಡಿ 100 ಎಲ್‌ಜಿಎನ್ 2009 | ದಿ.06.12.2010 |
| | | 18. ಶಿವಮೊಗ್ಗ | ಆರ್‌ಡಿ 01 ಎಲ್‌ಜಿಎನ್ 2009 | ದಿ.12.05.2010 |
| | | 19.ಹೊಸನಗರ | ಆರ್‌ಡಿ 53 ಎಲ್‌ಜಿಎಸ್ 2009(ಪಿ2) | ದಿ.14.06.2011 |
| 5 | ಚಿಕ್ಕಬಳ್ಳಾಪುರ | 20. ಗುಡಿಬಂಡೆ | ಆರ್‌ಡಿ 7 ಎಲ್‌ಜಿಕೆ 2009 | ದಿ.23.10.2009 |
| | | 21.ಚಿಕ್ಕಬಳ್ಳಾಪುರ | ಆರ್‌ಡಿ 50 ಎಲ್‌ಜಿಕೆ 2010 | ದಿ.06.01.2011 |
| | | 22. ಶಿಡ್ಲಘಟ್ಟ | ಆರ್‌ಡಿ 8 ಎಲ್‌ಜಿಕೆ 2009 | ದಿ.27.10.2009 |
| | | 23. ಬಾಗೇಪಲ್ಲಿ | ಆರ್‌ಡಿ 9 ಎಲ್‌ಜಿಕೆ 2009 | ದಿ.23.10.2009 |
| | | 24. ಗೌರಿಬಿದನೂರು | ಆರ್‌ಡಿ 10 ಎಲ್‌ಜಿಕೆ 2010 | ದಿ.12.01.2010 |
| | | 25. ಚಿಂತಾಮಣಿ | ಆರ್‌ಡಿ 6 ಎಲ್‌ಜಿಕೆ 2009 | ದಿ.23.10.2009 |
| 6 | ಹಾಸನ | 26. ಆಲೂರು | ಆರ್‌ಡಿ 21 ಎಲ್‌ಜಿಹೆಚ್ 2009 | ದಿ.23.10.2009 |
| | | 27. ಸಕಲೇಶಪುರ | ಆರ್‌ಡಿ 22 ಎಲ್‌ಜಿಹೆಚ್ 2009 | ದಿ.27.10.2009 |
| | | 28. ಬೇಲೂರು | ಆರ್‌ಡಿ 19 ಎಲ್‌ಜಿಹೆಚ್ 2009 | ದಿ.19.042011 |
| | | 29. ಚನ್ನರಾಯಪಟ್ಟಣ | ಆರ್‌ಡಿ 12 ಎಲ್‌ಜಿಹೆಚ್ 2011 | ದಿ.19.042011 |
| | | 30. ಅರಸೀಕೆರೆ | ಆರ್‌ಡಿ 55 ಎಲ್‌ಜಿಹೆಚ್ 2009 | ದಿ.20.11.2009 |
| | | 31. ಅರಕಲಗೂಡು | ಆರ್‌ಡಿ 20 ಎಲ್‌ಜಿಹೆಚ್ 2009 | ದಿ.11.02.2011 |
| | | 32. ಹಾಸನ | ಆರ್‌ಡಿ 11ಎಲ್‌ಜಿಹೆಚ್ 2011 | ದಿ.19.04.2011 |
| | | 33.ಹೊಳೆನರಸೀಪುರ | ಆರ್‌ಡಿ 31ಎಲ್‌ಜಿಹೆಚ್ 2011 | ದಿ:19.04.2011 |

| | | | | |
|---|---|---|---|---|
| 7 | ಕೋಲಾರ | 34. ಮುಳಬಾಗಿಲು | ಆರ್‌ಡಿ 98 ಎಲ್‌ಜಿಕೆ 2009 | ದಿ.20.1[illegible]09 |
| | | 35. ಮಾಲೂರು | ಆರ್‌ಡಿ 60 ಎಲ್‌ಜಿಕೆ 2009 | ದಿ:10.03.2010 |
| 8 | ಕೊಡಗು | 36. ಸೋಮವಾರಪೇಟೆ | ಆರ್‌ಡಿ 28 ಎಲ್‌ಜಿಒ 2009 | ದಿ.27.11.2009 |
| | | 37. ವಿರಾಜಪೇಟೆ | ಆರ್‌ಡಿ 43 ಎಲ್‌ಜಿಒ 2008 | ದಿ.27.11.2009 |
| | | 38. ಮಡಿಕೇರಿ | ಆರ್‌ಡಿ 9 ಎಲ್‌ಜಿಒ 2009 | ದಿ.28.05.2010 |
| 9 | ದಕ್ಷಿಣ ಕನ್ನಡ ಜಿಲ್ಲೆ | 39. ಸುಳ್ಯ | ಆರ್‌ಡಿ 134 ಎಲ್‌ಜಿಎ 2008 | ದಿ:09.11.2009 |
| | | 40. ಬೆಳ್ತಂಗಡಿ | ಆರ್‌ಡಿ 107 ಎಲ್‌ಜಿಎ 2008 (ಪಿ) | ದಿ:08.12.2009 |
| | | 41. ಪುತ್ತೂರು | ಆರ್‌ಡಿ 133 ಎಲ್‌ಜಿಎ 2008 | ದಿ:09.11.2009 |
| | | 42. ಮೂಡಬಿದರೆ | ಆರ್‌ಡಿ 45 ಎಲ್‌ಜಿಎ2011 | ದಿ:25.05.2011 |
| 10 | ಚಿಕ್ಕಮಗಳೂರು | 43. ಚಿಕ್ಕಮಗಳೂರು | ಆರ್‌ಡಿ 78 ಎಲ್‌ಜಿಯು 2009 | ದಿ:08.02.2010 |
| | | 44. ತರೀಕೆರೆ | ಆರ್‌ಡಿ 50 ಎಲ್‌ಜಿಯು 2009 | ದಿ:18.12.2009 |
| | | 45. ಎನ್.ಆರ್.ಪುರ | ಆರ್‌ಡಿ 63 ಎಲ್‌ಜಿಯು 2011 | ದಿ:15.10.2010 |
| | | 46. ಕೊಪ್ಪ | ಆರ್‌ಡಿ 63 ಎಲ್‌ಜಿಯು 2011 (ಭಾ1) | ದಿ:15.10.2010 |
| | | 47. ಶೃಂಗೇರಿ | ಆರ್‌ಡಿ 63 ಎಲ್‌ಜಿಯು 2011 (ಭಾ2) | ದಿ:15.10.2010 |
| | | 48. ಮೂಡಿಗೆರೆ | ಆರ್‌ಡಿ 04 ಎಲ್‌ಜಿಯು 2009 (ಭಾಗ1) | ದಿ:27.01.2010 |
| | | 49. ಕಡೂರು | ಆರ್‌ಡಿ 11 ಎಲ್‌ಜಿಯು 2009 | ದಿ:02.01.2010 |
| 11 | ಉಡುಪಿ | 50. ಉಡುಪಿ | ಆರ್‌ಡಿ 137 ಎಲ್‌ಜಿಎ 2008 | ದಿ:09.11.2009 |
| | | 51. ಕುಂದಾಪುರ | ಆರ್‌ಡಿ 139 ಎಲ್‌ಜಿಎ 2008 | ದಿ:15.01.2010 |
| | | 52. ಕಾರ್ಕಳ | ಆರ್‌ಡಿ 138 ಎಲ್‌ಜಿಎ 2008 | ದಿ:10.02.2010 |

| | | | | |
|---|---|---|---|---|
| 12 | ಉತ್ತರ ಕನ್ನಡ | 53. ಜೋಯಿಡ | ಆರ್‌ಡಿ 17 ಎಲ್‌ಜಿಎನ್ 2009 | ದಿ:09.12.2009 |
| | | 54. ಶಿರಸಿ | ಆರ್‌ಡಿ 19 ಎಲ್‌ಜಿಎನ್ 2009 | ದಿ:09.12.2009 |
| | | 55. ಯಲ್ಲಾಪುರ | ಆರ್‌ಡಿ 16 ಎಲ್‌ಜಿಎನ್ 2009 | ದಿ:09.12.2009 |
| | | 56. ಮುಂಡಗೋಡು | ಆರ್‌ಡಿ 10 ಎಲ್‌ಜಿಎನ್ 2009 | ದಿ:15.01.2010 |
| 13 | ಚಾಮರಾಜನಗರ | 57. ಚಾಮರಾಜನಗರ | ಆರ್‌ಡಿ 86 ಎಲ್‌ಜಿಎಂ 2009 | ದಿ:15.01.2010 |
| | | 58. ಕೊಳ್ಳೇಗಾಲ | ಆರ್‌ಡಿ 100 ಎಲ್‌ಜಿಎಂ 2008 | ದಿ:15.01.2010 |
| 14 | ಮಂಡ್ಯ | 59. ಮಂಡ್ಯ | ಆರ್‌ಡಿ 32 ಎಲ್‌ಜಿವೈ 2009 | ದಿ:09.12.2009 |
| | | 60. ಮದ್ದೂರು | ಆರ್‌ಡಿ 27 ಎಲ್‌ಜಿವೈ 2009 | ದಿ:09.12.2009 |
| | | 61. ಮಳವಳ್ಳಿ | ಆರ್‌ಡಿ 31 ಎಲ್‌ಜಿವೈ 2009 | ದಿ:15.01.2010 |
| | | 62. ನಾಗಮಂಗಲ | ಆರ್‌ಡಿ 09 ಎಲ್‌ಜಿವೈ 2009 | ದಿ:08.02.2010 |
| | | 63. ಪಾಂಡವಪುರ | ಆರ್‌ಡಿ 42 ಎಲ್‌ಜಿವೈ 2009 | ದಿ:08.02.2010 |
| | | 64. ಕೆ.ಆರ್.ಪೇಟೆ | ಆರ್‌ಡಿ 41 ಎಲ್‌ಜಿವೈ 2009 | ದಿ:25.07.2011 |
| 15 | ಗುಲ್ಬರ್ಗಾ | 65. ಅಫ್ಜಲ್‌ಪುರ | ಆರ್‌ಡಿ: 24 :ಎಲ್‌ಜಿಜಿ:2009 | ದಿ:15-10-2009 |
| | | 66. ಸೇಡಂ | ಆರ್‌ಡಿ: 25 :ಎಲ್‌ಜಿಜಿ:2009 | ದಿ:15-10-2009 |
| | | 67. ಗುಲ್ಬರ್ಗಾ | ಆರ್‌ಡಿ: 8 :ಎಲ್‌ಜಿಜಿ:2011 | ದಿ:28-03-2011 |
| | | 68. ಆಳಂದ | ಆರ್‌ಡಿ: 67 :ಎಲ್‌ಜಿಜಿ:2010 | ದಿ:06.12.2010 |
| | | 69. ಚಿಂಚೋಳಿ | ಆರ್‌ಡಿ 32 ಎಲ್‌ಜಿಜಿ 2011 | ದಿ:10.11.2011 |
| | | 70. ಚಿತ್ತಾಪುರ | ಆರ್‌ಡಿ 33 ಎಲ್‌ಜಿಜಿ 2011 | ದಿ:15.11.2011 |
| | | 71. ಜೇವರ್ಗಿ | ಆರ್‌ಡಿ 29 ಎಲ್‌ಜಿಜಿ 2011 | ದಿ:24.11.2011 |
| 16 | ಯಾದಗಿರಿ | 72. ಯಾದಗಿರಿ | ಆರ್‌ಡಿ: 26 :ಎಲ್‌ಜಿಜಿ:2009 | ದಿ:26-03-2010 |
| | | 73. ಸುರಪುರ | ಆರ್‌ಡಿ: 7 :ಎಲ್‌ಜಿಜಿ:2011 | ದಿ:21.02.2011 |
| | | 74. ಶಹಾಪುರ | ಆರ್‌ಡಿ 26 ಎಲ್‌ಜಿಜಿ 2011 | ದಿ:29.09.2011 |

| | | | | |
|---|---|---|---|---|
| 17 | ಬಳ್ಳಾರಿ | 75. ಬಳ್ಳಾರಿ | ಆರ್‌ಡಿ 12 ಎಲ್‌ಜಿಇ 2010 | ದಿ:26.03.2010 |
| | | 76.ಹಡಗಲಿ | ಆರ್‌ಡಿ 19 ಎಲ್‌ಜಿಇ 2011 | ದಿ:20.04.2011 |
| | | 77 ಹಗರಿಬೊಮ್ಮನಹಳ್ಳಿ | ಆರ್‌ಡಿ: 23 :ಎಲ್‌ಜಿಇ:2009 | ದಿ:15.10.2009 |
| | | 78. ಹೊಸಪೇಟೆ | ಆರ್‌ಡಿ: 41 :ಎಲ್‌ಜಿಇ:2009 | ದಿ:03.12.2011 |
| | | 79. ಶಿರಗುಪ್ಪ | ಆರ್‌ಡಿ: 40 :ಎಲ್‌ಜಿಇ:2009 | ದಿ:03.12.2009 |
| | | 80. ಸಂಡೂರು | ಆರ್‌ಡಿ 39 ಎಲ್‌ಜಿಇ 2011 | ದಿ:21.10.2011 |
| 18 | ದಾವಣಗೆರೆ | 81. ದಾವಣಗೆರೆ | ಆರ್‌ಡಿ 4 ಎಲ್‌ಜಿಸಿ 2010(ಪಿ1) | ದಿ:19.06.2010 |
| | | 82. ಚನ್ನಗಿರಿ | ಆರ್‌ಡಿ 79 ಎಲ್‌ಜಿಸಿ:2009 | ದಿ:02.12.2009 |
| | | 83. ಹರಿಹರ | ಆರ್‌ಡಿ 53 ಎಲ್‌ಜಿಸಿ 2009 | ದಿ:15.10.2009 |
| | | 84. ಹರಪನಹಳ್ಳಿ | ಆರ್‌ಡಿ 58 ಎಲ್‌ಜಿಸಿ 2008 | ದಿ:02.02.2010 |
| | | 85. ಜಗಳೂರು | ಆರ್‌ಡಿ 73 ಎಲ್‌ಜಿಸಿ 2010 | ದಿ:30.11.2010 |
| | | 86. ಹೊನ್ನಾಳಿ | ಆರ್‌ಡಿ: 26 :ಎಲ್‌ಜಿಸಿ:2011 | ದಿ:26.03.2011 |
| 19 | ಬೀದರ್ | 87. ಬೀದರ್ | ಆರ್‌ಡಿ 36 ಎಲ್‌ಜಿಇ 2011 | ದಿ:17.02.2011 |
| | | 88. ಹುಮ್ನಾಬಾದ್ | ಆರ್‌ಡಿ: 12 :ಎಲ್‌ಜಿಐ:2009 | ದಿ:15-10-2009 |
| | | 89. ಬಸವಕಲ್ಯಾಣ | ಆರ್‌ಡಿ: 13 :ಎಲ್‌ಜಿಐ:2009 | ದಿ:15-10-2009 |
| | | 90. ಔರಾದ್ | ಆರ್‌ಡಿ 7 ಎಲ್‌ಜಿಇ 2010 | ದಿ:23.02.2011 |
| | | 91. ಭಾಲ್ಕಿ | ಆರ್‌ಡಿ 35 ಎಲ್‌ಜಿಐ 2010 | ದಿ:14.02.2011 |
| 20 | ರಾಯಚೂರು | 92. ರಾಯಚೂರು | ಆರ್‌ಡಿ 3 ಎಲ್‌ಜಿಆರ್ 2011 | ದಿ:10.02.2011 |
| | | 93. ಲಿಂಗಸೂಗೂರು | ಆರ್‌ಡಿ: 35 ಎಲ್‌ಜಿಆರ್:2009 | ದಿ:15-10-2009 |
| | | 94. ಮಾನವಿ | ಆರ್‌ಡಿ 22 ಎಲ್‌ಜಿಆರ್ 2009 | ದಿ:15.10.2009 |
| | | 95. ದೇವದುರ್ಗ | ಪರಿಷ್ಕೃತ ಪ್ರಸ್ತಾವನೆ ಪರಿಶೀಲನೆಯಲ್ಲಿದೆ. | – |
| 21 | ಕೊಪ್ಪಳ | 96. ಯಲಬುರ್ಗಾ | ಆರ್‌ಡಿ: 23 :ಎಲ್‌ಜಿಆರ್:2009 | ದಿ:15-10-2009 |
| | | 97. ಕೊಪ್ಪಳ | ಆರ್‌ಡಿ: 24 :ಎಲ್‌ಜಿಆರ್:2009 | ದಿ:15-10-2009 |
| | | 98. ಗಂಗಾವತಿ | ಆರ್‌ಡಿ 40 ಎಲ್‌ಜಿಆರ್ 2011 | ದಿ:14.10.2011 |
| 22 | ಗದಗ್ | 99. ಗದಗ್ | ಆರ್‌ಡಿ 73 ಎಲ್‌ಜಿಡಿ 2011 | ದಿ:03.01.2011 |
| | | 100. ಮುಂಡರಗಿ | ಆರ್‌ಡಿ: 57 ಎಲ್‌ಜಿಡಿ:2009 | ದಿ:15-10-2009 |
| | | 101. ಶಿರಹಟ್ಟಿ | ಆರ್‌ಡಿ: 56 ಎಲ್‌ಜಿಡಿ:2009 | ದಿ:21-10-2009 |
| | | 102. ರೋಣ | ಆರ್‌ಡಿ: 55 ಎಲ್‌ಜಿಡಿ:2009 | ದಿ:26-10-2009 |
| 23 | ಚಿತ್ರದುರ್ಗ | 103 ಚಳ್ಳಕೆರೆ | ಆರ್‌ಡಿ: 39 ಎಲ್‌ಜಿಸಿ:2009 | ದಿ:16-10-2009 |
| | | 104. ಹಿರಿಯೂರು | ಆರ್‌ಡಿ 52 ಎಲ್‌ಜಿಸಿ 2011 | ದಿ:12.10.2011 |
| | | 105. ಹೊಳಲ್ಕೆರೆ | ಆರ್‌ಡಿ: 80 ಎಲ್‌ಜಿಸಿ:2009 | ದಿ:03-12-2009 |
| | | 106. ಚಿತ್ರದುರ್ಗ | ಆರ್‌ಡಿ: 75 ಎಲ್‌ಜಿಸಿ 2010 | ದಿ:11.11.2010 |
| | | 107.ಮೊಳಕಾಲ್ಮೂರು | ಆರ್‌ಡಿ: 75 ಎಲ್‌ಜಿಸಿ 2010 | ದಿ:11.11.2010 |
| 24 | ತುಮಕೂರು | 108. ಚಿಕ್ಕನಾಯಕನಹಳ್ಳಿ | ಆರ್‌ಡಿ 37 ಎಲ್‌ಜಿಟಿ 2009 | ದಿ:03-08-2010 |
| | | 109. ಗುಬ್ಬಿ | ಆರ್‌ಡಿ 35 ಎಲ್‌ಜಿಟಿ 2009 | ದಿ:06-01-2010 |
| | | 110. ಶಿರಾ | ಆರ್‌ಡಿ 71 ಎಲ್‌ಜಿಟಿ 2009 | ದಿ:29-10-2010 |
| | | 111. ಪಾವಗಡ | ಆರ್‌ಡಿ: 39 ಎಲ್‌ಜಿಟಿ:2009 | ದಿ:21-10-2009 |
| | | 112. ಕುಣಿಗಲ್ | ಆರ್‌ಡಿ 70 ಎಲ್‌ಜಿಟಿ 2009 | ದಿ:25-11-2010 |
| | | 113.ತುಮಕೂರು | ಆರ್‌ಡಿ 82 ಎಲ್‌ಜಿಟಿ 2010 | ದಿ:06.12.2010 |
| | | 114. ತುರುವೇಕೆರೆ | ಆರ್‌ಡಿ: 36 ಎಲ್‌ಜಿಟಿ:2009 | ದಿ:23-10-2009 |
| | | 115. ಕೊರಟಗೆರೆ | ಆರ್‌ಡಿ: 72 ಎಲ್‌ಜಿಟಿ:2010 | ದಿ:30.11.2010 |
| | | 116. ಮಧುಗಿರಿ | ಆರ್‌ಡಿ 88 ಎಲ್‌ಜಿಟಿ 2011 | ದಿ:26.12.2011 |
| | | 117. ತಿಪಟೂರು | ಆರ್‌ಡಿ 72 ಎಲ್‌ಜಿಟಿ 2011 | ದಿ:15.11.2011 |

| | | | | |
|---|---|---|---|---|
| 25 | ಹಾವೇರಿ | 118. ಬ್ಯಾಡಗಿ | ಆರ್‌ಡಿ: 53 ಎಲ್‌ಜಿಡಿ:2009 | ದಿ:26-10-2009 |
| | | 119. ಹಾನಗಲ್ | ಆರ್‌ಡಿ 42 ಎಲ್‌ಜಿಡಿ 2009 | ದಿ: 6-10-2010 |
| | | 120. ರಾಣಿಬೆನ್ನೂರು | ಆರ್‌ಡಿ: 83 ಎಲ್‌ಜಿಡಿ:2009 | ದಿ:31-10-2009 |
| | | 121. ಹಿರೇಕೆರೂರು | ಆರ್‌ಡಿ: 74 ಎಲ್‌ಜಿಡಿ:2009 | ದಿ:20.02.2010 |
| 26 | ಬೆಳಗಾವಿ | 122. ಖಾನಾಪುರ | ಆರ್‌ಡಿ: 8 ಎಲ್‌ಜಿಎಲ್:2009 | ದಿ:21-2-2011 |
| | | 123. ರಾಮದುರ್ಗ | ಆರ್‌ಡಿ: 80 ಎಲ್‌ಜಿಎಲ್:2009 | ದಿ:31-10-2009 |
| | | 124. ಬೆಳಗಾವಿ | ಆರ್‌ಡಿ 68 ಎಲ್‌ಜಿಎಲ್ 2009 | ದಿ:31-12-2009 |
| | | 125. ಬೈಲಹೊಂಗಲ | ಆರ್‌ಡಿ 15 ಎಲ್‌ಜಿಎಲ್ 2011 | ದಿ:29.03.2011 |
| | | 126. ರಾಯಬಾಗ್ | ಆರ್‌ಡಿ 4 ಎಲ್‌ಜಿಎಲ್ 2011 | ದಿ:21.02.2011 |
| | | 127. ಅಥಣಿ | ಆರ್‌ಡಿ 7 ಎಲ್‌ಜಿಎಲ್ 2011 | ದಿ:23.02.2011 |
| | | 128.ಗೋಕಾಕ್ | ಆರ್‌ಡಿ 18 ಎಲ್‌ಜಿಎಲ್ 2011 | ದಿ:21.10.2011 |
| 27 | ಬಿಜಾಪುರ | 129. ಮುದ್ದೇಬಿಹಾಳ | ಆರ್‌ಡಿ: 56 ಎಲ್‌ಜಿಜೆ:2009 | ದಿ:02-11-2009 |
| | | 130. ಬಸವನಬಾಗೇವಾಡಿ | ಆರ್‌ಡಿ: 57 ಎಲ್‌ಜಿಜೆ:2009 | ದಿ:02-11-2009 |
| | | 131. ಸಿಂಧಗಿ | ಆರ್‌ಡಿ: 25 ಎಲ್‌ಜಿಜೆ:2011 | ದಿ:26.03.2011 |
| | | 132. ಬಿಜಾಪುರ | ಆರ್‌ಡಿ: 68 ಎಲ್‌ಜಿಜೆ:2009(ಪಿ1) | ದಿ:06.12.2010 |
| 28. | ಬಾಗಲಕೋಟೆ | 133. ಬಾಗಲಕೋಟೆ | ಆರ್‌ಡಿ: 40 ಎಲ್‌ಜಿಜೆ:2009(ಪಿ1) | ದಿ:06.12.2010 |
| | | 134. ಮುಧೋಳ | ಆರ್‌ಡಿ: 10 ಎಲ್‌ಜಿಜೆ 2010 | ದಿ:23.02.2011 |
| | | 135. ಜಮಖಂಡಿ | ಕರಡು ಅಧಿಸೂಚನೆ ಮಂಡಿಸಿದೆ. | - |
| 29. | ಧಾರವಾಡ | 136. ಕಲಘಟಗಿ | ಆರ್‌ಡಿ 40 ಎಲ್‌ಜಿಡಿ 2009 | ದಿ:31-12-2009 |
| | | 137. ಕುಂದಗೋಳ | ಆರ್‌ಡಿ 8 ಎಲ್‌ಜಿಡಿ 2011 | ದಿ:23.02.2011 |
| 30. | ಮೈಸೂರು | 138. ಮೈಸೂರು | ಆರ್‌ಡಿ 107 ಎಲ್‌ಜಿಎಂ 2009 | ದಿನಾಂಕ:15.01.2010 |
| | | 139. ಪಿರಿಯಾಪಟ್ಟಣ | ಆರ್‌ಡಿ 108 ಎಲ್‌ಜಿಎಂ 2009 | ದಿನಾಂಕ:15.01.2010 |
| | | 140. ಕೃಷ್ಣರಾಜನಗರ | ಆರ್‌ಡಿ 109 ಎಲ್‌ಜಿಎಂ 2009 | ದಿನಾಂಕ:15.01.2010 |
| | | 141. ನಂಜನಗೂಡು | ಆರ್‌ಡಿ 110 ಎಲ್‌ಜಿಎಂ 2009 | ದಿನಾಂಕ:15.01.2010 |
| | | 142. ಟಿ.ನರಸೀಪುರ | ಆರ್‌ಡಿ 114 ಎಲ್‌ಜಿಎಂ 2009 | ದಿನಾಂಕ:15.01.2010 |
| | | 143. ಹುಣಸೂರು | ಆರ್‌ಡಿ 107 ಎಲ್‌ಜಿಎಂ 2009 | ದಿನಾಂಕ:15.01.2010 |

**ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ:–** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಹಾಲಿ 143 ತಾಲ್ಲೂಕುಗಳಲ್ಲಿ ತಾಲ್ಲೂಕು ಅಕ್ರಮ–ಸಕ್ರಮ ಸಮಿತಿಗಳನ್ನು ರಚಿಸಲಾಗಿರುವುದಾಗಿ ತಿಳಿಸಿದ್ದು, ಉಳಿದ 36 ತಾಲ್ಲೂಕುಗಳಲ್ಲಿ ಆ ಸಮಿತಿಗಳನ್ನು ರಚಿಸದಿರುವುದಕ್ಕೆ ಕಾರಣವೇನೆಂಬುದು ಗೊತ್ತಾಗಲಿಲ್ಲ. ಇದು ಒಂದು ವಿಚಾರ. ಇನ್ನು ಎರಡನೆಯದಾಗಿ ರಚಿಸಲಾದ ಸಮಿತಿಗಳಲ್ಲಿ ಕಳೆದ 2 ವರ್ಷಗಳಿಂದ 136 ತಾಲ್ಲೂಕುಗಳಲ್ಲಿ ಈ ಸಮಿತಿಗಳು ಕಾರ್ಯ ನಿರ್ವಹಿಸುತ್ತಿದ್ದು ಇನ್ನುಳಿದ 7 ತಾಲ್ಲೂಕುಗಳಲ್ಲಿ ಈ ಸಮಿತಿಗಳು ಕಾರ್ಯನಿರ್ವಹಿಸದಿರುವುದಕ್ಕೆ ಕಾರಣವೇನೆಂಬುದನ್ನು ಮಾನ್ಯ ಸಚಿವರು ತಿಳಿಸಬೇಕು. ಮತ್ತೊಂದು ವಿಚಾರವೆಂದರೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿನ ತಾಲ್ಲೂಕು ಅಕ್ರಮ–ಸಕ್ರಮ ಸಮಿತಿಗಳು ಮಾನ್ಯ ಸರ್ವೋಚ್ಚ ನ್ಯಾಯಾಲಯದ ತಡೆಯಾಜ್ಞೆ ಇರುವ ಕಾರಣ ಕಾರ್ಯ ನಿರ್ವಹಿಸುತ್ತಿರುವುದಿಲ್ಲ ಎನ್ನುವಂತಹ ಉತ್ತರವನ್ನು ನೀಡಲಾಗಿದೆ. ರಾಜ್ಯ ಸರ್ಕಾರಕ್ಕೆ ಮತ್ತು ನಮ್ಮೆಲ್ಲರಿಗೂ ಸಹ ಸರ್ವೋಚ್ಚ ನ್ಯಾಯಾಲಯದ ಆದೇಶದ ಮೇಲೆ ಬಹಳಷ್ಟು ಗೌರವ ಇದೆ ಎನ್ನುವಂತಹ ಮಾತನ್ನು ಪದೇ ಪದೇ ಈ ವೇದಿಕೆಯಲ್ಲಿ ಹೇಳುತ್ತಿರುತ್ತೇವೆ. ಉಡುಪಿ ಜಿಲ್ಲೆಯಲ್ಲಿ ತಾಲ್ಲೂಕು ಅಕ್ರಮ–ಸಕ್ರಮ ಸಮಿತಿಗಳು ಕಾರ್ಯನಿರ್ವಹಿಸುತ್ತಿವೆ. ಆದರೆ ಸರ್ಕಾರ ಕೊಟ್ಟಿರತಕ್ಕಂತಹ ಉತ್ತರದಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿನ ತಾಲ್ಲೂಕು ಅಕ್ರಮ–ಸಕ್ರಮ ಸಮಿತಿಗಳು ಮಾನ್ಯ ಸರ್ವೋಚ್ಚ ನ್ಯಾಯಾಲಯದ ತಡೆಯಾಜ್ಞೆ ಇರುವ ಕಾರಣ ಕಾರ್ಯ ನಿರ್ವಹಿಸುತ್ತಿರುವುದಿಲ್ಲ ಎಂದು ತಿಳಿಸಲಾಗಿದೆ. ಉಡುಪಿ ಜಿಲ್ಲೆಯಲ್ಲಿ ಸಭೆಗಳು ನಡೆಯುತ್ತಿದ್ದರೂ ಸಹ ಈ ಸದನದಲ್ಲಿ ಮುಖ್ಯಮಂತ್ರಿಯವರಿಂದ ಸುಳ್ಳು ಹೇಳಿಸತಕ್ಕಂತಹ ಅವಶ್ಯಕತೆ ಏನಿತ್ತು ಎನ್ನುವುದು ನನ್ನ ಪ್ರಶ್ನೆ. ಅಲ್ಲಿ ಸಭೆಗಳು ನಡೆಯುತ್ತಿರುವುದಕ್ಕೆ ದಾಖಲೆಗಳಿವೆ. ಹೀಗಿರುವಾಗಿ ಅಲ್ಲಿ ಸಭೆಗಳು ನಡೆಯುತ್ತಿಲ್ಲ ಎಂದು ಹೇಳಿಸಿದರೆ ಇದು breach of privilege ಆಗುತ್ತದೆ. ಆದರೆ ಇದರಲ್ಲಿ ತಾಲ್ಲೂಕು ಮಟ್ಟದ ಅಧಿಕಾರಿಗಳ ಹಿತಾಸಕ್ತಿ ಇದೆ. ಈಗಾಗಲೇ ಹಿರಿಯ ಸದಸ್ಯರಾದಂತಹ ಮಾನ್ಯ ನಾಣಯ್ಯನವರು ಮತ್ತು ಮಾನ್ಯ ಬಸವರಾಜ

ಹೊರಟ್ಟಿಯವರು ತಿಳಿಸಿರುವಂತೆ ಇದೊಂದು ದೊಡ್ಡ ಜಾಲ, ಎಷ್ಟೆಷ್ಟು ಎಕರೆ ಎನ್ನುವಂಥದ್ದರ ಬಗ್ಗೆ ಈಗಾಗಲೇ ಎಲ್ಲಾ ತಾಲ್ಲೂಕು ಕಚೇರಿಗಳಲ್ಲಿ ಲೆಕ್ಕ ಇದೆ. ಬಹುಶಃ ಈ ರೀತಿಯ ಒಂದು ಹಿತಾಸಕ್ತಿಯಿಂದ ಸರ್ವೋಚ್ಚ ನ್ಯಾಯಾಲಯದ ತಡೆಯಾಜ್ಞೆ ಇದ್ದರೂ ಸಹ ಈ ಅಕ್ರಮ-ಸಕ್ರಮ ಸಮಿತಿ ಸಭೆಗಳು ನಡೆಯುತ್ತಿವೆ. ಅಕ್ರಮ-ಸಕ್ರಮ ಸಮಿತಿಗಳು ರಚನೆಯಾಗಿ ಸುಮಾರು 22 ವರ್ಷಗಳಾದರೂ ಸಹ ಇಲ್ಲಿಯವರೆಗೆ ಇತ್ಯರ್ಥವಾಗದಿರತಕ್ಕಂಥದ್ದು ಮತ್ತು ಬಹಳಷ್ಟು ಅವ್ಯವಹಾರಗಳಾಗಿರತಕ್ಕಂತಹ ಹಿನ್ನೆಲೆಯಲ್ಲಿ ಇವುಗಳನ್ನು ಸಮಗ್ರವಾಗಿ ತನಿಖೆ ಮಾಡಬೇಕೆಂಬ ವಿಚಾರವನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

**ಶ್ರೀ ಡಿ.ವಿ. ಸದಾನಂದಗೌಡ:-** ಸನ್ಮಾನ್ಯ ಸಭಾಪತಿಯವರೇ, ಈಗಾಗಲೇ ದಕ್ಷಿಣ ಕನ್ನಡ ಮತ್ತು ಉಡುಪಿಯಲ್ಲಿ ವಿಶೇಷವಾದಂತಹ ಒಂದು ಹಕ್ಕುಗಳು ಅದು ಕಾನ, ಬಾಣೆ, ಕುಮ್ಕಿ ಜಮೀನುಗಳ ಹಕ್ಕುಗಳ ಬಗ್ಗೆ ಈಗಾಗಲೇ ಅದಕ್ಕೆ ಬೇಕಾದಂತಹ ನಿಯಮಾವಳಿಗಳನ್ನು ತರುವಂತಹ ಕೆಲಸಕಾರ್ಯಗಳನ್ನು ಮಾಡಿದ್ದೇವೆ. ಪ್ರಾಯಶಃ ಕಾನ, ಬಾಣೆ, ಕುಮ್ಕಿ ಮತ್ತು ಗೇರು ಕೃಷಿ ಮಾಡಿದಂತಹ ಜಾಗದ ಬಗ್ಗೆ ತಕ್ಷಣ ಅದನ್ನು ತರುವಂತಹ ಎಲ್ಲ ಪ್ರಯತ್ನಗಳನ್ನು ಮಾಡಿದ್ದೇವೆ. ಮುಂದಿನ ಕೆಲವೇ ದಿನಗಳಲ್ಲಿ ಅದನ್ನು ತರುವಂಥದ್ದನ್ನು ನಾವು ಮಾಡುತ್ತೇವೆ. ಅದು ಮಾನ್ಯ ಪ್ರತಾಪಚಂದ್ರಶೆಟ್ಟಿಯವರ ಬಹಳ ದಿನಗಳ ಬೇಡಿಕೆಯಾಗಿತ್ತು, ಅದನ್ನು ಈಡೇರಿಸುವಂತಹ ಕೆಲಸಕಾರ್ಯಗಳನ್ನು ಮಾಡುತ್ತಿದ್ದೇವೆ. ಜೊತೆಗೆ ಕಳೆದ ಎರಡು ವರ್ಷಗಳಿಂದ ಇಲ್ಲಿ 7 ಅಕ್ರಮ-ಸಕ್ರಮ ಸಮಿತಿಗಳು ಕಾರ್ಯನಿರ್ವಹಿಸುತ್ತಿಲ್ಲ ಎಂದು ನಾನು ಏನು ಹೇಳಿದ್ದೇನೆ, ಈ ಸಮಿತಿಗಳು ಕಾರ್ಯನಿರ್ವಹಿಸದಿರುವುದಕ್ಕೆ ಕಾರಣವೇನೆಂದರೆ ಉಡುಪಿ ಜಿಲ್ಲೆಯಲ್ಲಿ ಉಡುಪಿ, ಕಾರ್ಕಳ, ಕುಂದಾಪುರ ಈ ಮೂರು ತಾಲ್ಲೂಕುಗಳ ಅಕ್ರಮ-ಸಕ್ರಮ ಸಮಿತಿಗಳನ್ನು ಕ್ಷೇತ್ರವಾರು ಮಾಡಬೇಕೆಂದು ಮೊನ್ನೆ ಹೇಳಿದಂತಹ ಹಿನ್ನೆಲೆಯಲ್ಲಿ ಈಗ ಆ ಕ್ಷೇತ್ರವಾರು ಸಮಿತಿಗಳು ರಚನೆಯಾಗುವುದಕ್ಕೆ ಬೇಕಾದಂತಹ ಪ್ರಕ್ರಿಯೆಗಳನ್ನು ಮಾಡುತ್ತಿದ್ದೇವೆ. ಹಾಗಾಗಿ ಉಡುಪಿಯಲ್ಲಿ 3

ಸಮಿತಿಗಳಿದ್ದದ್ದು ಈಗ 5 ಆಗುತ್ತದೆ. ಇತ್ತೀಚೆಗೆ ಈ ಸಮಿತಿಗಳನ್ನು ಶಾಸಕರ ನೇತೃತ್ವದಲ್ಲಿ ಮಾಡಬೇಕೆನ್ನುವಂತಹ ಬೇಡಿಕೆ ಬಂದುದಕ್ಕಾಗಿ ಅದನ್ನು ಮಾಡುವಂತಹ ಕೆಲಸ ಕಾರ್ಯಗಳನ್ನು ನಾವು ಮಾಡುತ್ತಿದ್ದೇವೆ. ಈಗಾಗಲೇ ಕುಮ್ಕಿ ಜಮೀನುಗಳ ಹಕ್ಕುಗಳ ಅಧಿಭೋಗದಾರರ ವೇದಿಕೆ ಅಧ್ಯಕ್ಷರೊಬ್ಬರು ಸರ್ವೋಚ್ಚ ನ್ಯಾಯಾಲಯದ ಮುಂದೆ ದಾವೆಯನ್ನು ಹೂಡಿರುವ ಕಾರಣ ಅದರಲ್ಲಿ ಒಂದು ಮಧ್ಯಂತರ ತಡೆಯಾಜ್ಞೆ ಇದೆ. ಅದು ವಿಶೇಷವಾಗಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗೆ ಅನ್ವಯವಾಗುವಂತಹ ಹಿನ್ನೆಲೆಯಲ್ಲಿ ಇದು ಸ್ವಲ್ಪ ತಡವಾಗಿದೆ. ಈಗಾಗಲೇ ಇದಕ್ಕೆ ಬೇಕಾದಂತಹ ರೂಲ್ಸ್‌ಗಳನ್ನು ಫ್ರೇಮ್ ಮಾಡಿದ ತಕ್ಷಣ ಇದನ್ನು ವಿತ್‌ಡ್ರಾ ಮಾಡುವಂತಹ ಕೆಲಸಕಾರ್ಯಗಳಾಗುತ್ತವೆ. ಆ ಮಾತುಕತೆಗಳು ಕೂಡ ನಡೆದಿವೆ. ಆ ಹಿನ್ನೆಲೆಯಲ್ಲಿ ನಾವು ತಕ್ಷಣ ಇದೆಲ್ಲವನ್ನೂ ಕಾರ್ಯಾಚರಣೆ ಮಾಡುತ್ತೇವೆ. ಅಲ್ಲದೆ ಕ್ಷೇತ್ರವಾರು ಸಮಿತಿಗಳನ್ನು ಆದಷ್ಟು ಶೀಘ್ರವಾಗಿ ರಚನೆ ಮಾಡಿ ಈಗಾಗಲೇ ಮೊನ್ನೆಯ ಅಧಿವೇಶನದಲ್ಲಿ ಈ ಪೆಂಡಿಂಗ್ ಅನ್ನು dispose off ಮಾಡುವುದಕ್ಕೆ ಮತ್ತೆ 2014ರವರೆಗೆ ಅವಧಿ ವಿಸ್ತರಣೆ ಮಾಡುವಂತಹ ಕೆಲಸಕಾರ್ಯಗಳನ್ನು ಮಾಡಿದ್ದೇವೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಸಮಿತಿಯಲ್ಲಿ ಯಾರಿರುತ್ತಾರೆ ಅವರು ಮೀಟಿಂಗ್ ಕರೆಯದೆ ಬೇನಾಮಿ ಹೆಸರಿನಲ್ಲಿ ಇವರೇ ಮಾಡುತ್ತಾರೆ. ಬಹಳಷ್ಟು ಕಡೆಗಳಲ್ಲಿ ಈ ರೀತಿ ಆಗುತ್ತಿದೆ.

**ಸಭಾಪತಿಯವರು:–** ಆ ಬಗ್ಗೆ ದೂರು ಕೊಡಬೇಕಾಗುತ್ತದೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಬೇನಾಮಿ ಹೆಸರಿನಲ್ಲಿ ಈ ರೀತಿ ನಡೆಯುತ್ತಿದೆ. ಇಡೀ ರಾಜ್ಯದ ಎಲ್ಲ ತಾಲ್ಲೂಕುಗಳಲ್ಲಿ ಈ ಅಕ್ರಮ–ಸಕ್ರಮ ಸಮಿತಿಗಳನ್ನು ರಚನೆ ಮಾಡಲಾಗುತ್ತದೆಯೇ?

**ಶ್ರೀ ಡಿ.ವಿ. ಸದಾನಂದಗೌಡ:-** ಮಾನ್ಯ ಸಭಾಪತಿಯವರೇ, ಈ ಸಮಿತಿಗಳನ್ನು ಕ್ಷೇತ್ರವಾರು ರಚನೆ ಮಾಡಬೇಕೆಂದು ಬೇಡಿಕೆ ಇರುವುದರಿಂದ 224 ವಿಧಾನಸಭಾ ಕ್ಷೇತ್ರಕ್ಕೂ ಮಾಡಬೇಕೆಂದು ಮೊನ್ನೆ ವಿಧಾನ ಸಭೆಯಲ್ಲಿ ತೀರ್ಮಾನಿಸಲಾಗಿದೆ.

**ಸಭಾಪತಿಯವರು:-** ವಿಧಾನಸಭಾ ಕ್ಷೇತ್ರವಾರು ಈ ಸಮಿತಿಗಳನ್ನು ರಚನೆ ಮಾಡುತ್ತಾರೆ.

**ಶ್ರೀ ಡಿ.ವಿ. ಸದಾನಂದಗೌಡ:-** ಹೌದು, ವಿಧಾನಸಭಾ ಕ್ಷೇತ್ರವಾರು ಈ ಸಮಿತಿಗಳನ್ನು ರಚನೆ ಮಾಡಲಾಗುತ್ತದೆ.

**ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ:-** ಅಕ್ರಮ-ಸಕ್ರಮ ಸಮಿತಿಯಲ್ಲಿ ಅರ್ಹರಾದವರಿಗೆ ಕೊಡಲಿಕ್ಕೆ ನಮ್ಮದೇನೂ ಆಕ್ಷೇಪ ಇಲ್ಲ. ಆದರೆ ಅಕ್ರಮ-ಸಕ್ರಮದ ಹೆಸರಿನಲ್ಲಿ ಸರ್ಕಾರದ ಭೂಮಿಯನ್ನು ಕೊಳ್ಳೆ ಹೊಡೆಯುವಂಥದ್ದನ್ನು ನಿಲ್ಲಿಸಬೇಕಾಗುತ್ತದೆ. ಇಲ್ಲದಿದ್ದರೆ ನಾಳೆ ಒಂದು ಸೆಂಟ್ ಜಾಗ ಸಹ ಈ ರಾಜ್ಯದಲ್ಲಿ ಸಿಗದೆ ಇರತಕ್ಕಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. 22 ವರ್ಷಗಳಿಂದ ಸತತವಾಗಿ ಈ ಲೂಟಿ ನಡೆಯುತ್ತಿದೆ. ನಾವು ಯಾರಿಗೋಸ್ಕರ ಈ ಅಕ್ರಮ-ಸಕ್ರಮ ಸಮಿತಿಯ ರಚನೆಯ ಬಗ್ಗೆ, ಈ ಭೂ ಮಂಜೂರಾತಿಯ ಬಗ್ಗೆ ಹೋರಾಟ ಮಾಡಿದ್ದೇವೆ ಅವರಿಗೆ ಇದರ ಪ್ರಯೋಜನ ಸಿಗುತ್ತಿಲ್ಲ. ಏಕೆಂದರೆ ಅವರು ಧ್ವನಿ ಇಲ್ಲದವರು. ಇವೊತ್ತು ಯಾರು ಶಕ್ತಿಶಾಲಿಗಳು, ಯಾರು ದುಡ್ಡು ಕೊಡುತ್ತಾರೆ ಅವರಿಗೆ ಮಾತ್ರ ಭೂಮಿಯ ಮಂಜೂರಾತಿ ಆಗುತ್ತಿದೆ. ಆದ್ದರಿಂದ ತಕ್ಷಣ ಅರ್ಹರಿಗೆ ಭೂಮಿಯನ್ನು ಮಂಜೂರು ಮಾಡುವ ವಿಚಾರದಲ್ಲಿ ನಮ್ಮ ಆಕ್ಷೇಪಣೆ ಏನೂ ಇಲ್ಲ. ಆದರೆ ಲೂಟಿ ಮಾಡುವಂತಹವರಿಗೆ ಕಡಿವಾಣ ಹಾಕಬೇಕೆಂಬುದು ನಮ್ಮ ವಿನಂತಿ.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ಇರಬಹುದು. ಅಂಥದ್ದೇನೂ ಇಲ್ಲ ಎಂದು ನಾನು ಎಲ್ಲವನ್ನೂ ಸಾರಾಸಗಟಾಗಿ ತಳ್ಳಿಹಾಕುವುದಕ್ಕಾಗುವುದಿಲ್ಲ. ಆದರೆ ಇವೆಲ್ಲವನ್ನೂ ಪರಿಶೀಲನೆ ಮಾಡುವುದಕ್ಕಾಗಿಯೇ ಈ ಸಮಿತಿಯನ್ನು ರಚನೆ ಮಾಡಿರುವುದು. ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು ಶಿಫಾರಸ್ಸು ಮಾಡಿದ ನಂತರ ಆ ಶಿಫಾರಸ್ಸಿನ ಆಧಾರದ ಮೇಲೆಯೇ ಅದಕ್ಕೆ ಬೇಕಾದಂತಹ ಹಕ್ಕುಪತ್ರಗಳನ್ನು ವಿತರಿಸುವಂತಹ ಕೆಲಸಕಾರ್ಯಗಳನ್ನು ಮಾಡಲಾಗುತ್ತದೆ. ಆ ರೀತಿ ಎಲ್ಲಿಯಾದರೂ ನಡೆದಿರುವಂಥದ್ದರ ಬಗ್ಗೆ ನಿರ್ದಿಷ್ಟವಾದ ಮಾಹಿತಿ ಇದ್ದರೆ ಅದನ್ನು ನನ್ನ ಗಮನಕ್ಕೆ ತಂದರೆ ಖಂಡಿತವಾಗಿಯೂ ನಾನು ಅದರ ಮೇಲೆ ಕ್ರಮ ತೆಗೆದುಕೊಳ್ಳುವಂತಹ ಕೆಲಸವನ್ನು ಮಾಡುತ್ತೇನೆ.

**ಎನ್.ಆರ್.ಹೆಚ್.ಎಂ. ಯೋಜನೆ ಬಗ್ಗೆ**

**226; ಶ್ರೀ ವೀರಕುಮಾರ್ ಅಪ್ಪಾಸೊ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ (NRHM) ಈ ಯೋಜನೆಯಡಿ ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ; (ವಿವರ ನೀಡುವುದು)

**ಆ)** ಇದರಲ್ಲಿ ಬೆಳಗಾಂ ಜಿಲ್ಲೆಯಲ್ಲಿ ಕೈಗೊಂಡಿರುವ ಕಾರ್ಯಕ್ರಮಗಳೇನು;

**ಇ)** ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಬಂದಿರುವ ಹಣವೆಷ್ಟು; (ಕಳೆದ ಎರಡು ವರ್ಷದ ವಿವರ ನೀಡುವುದು)

**ಈ)** ಈ ಯೋಜನೆಗೆ ವೆಚ್ಚ ಮಾಡಿರುವ ಹಣ ಎಷ್ಟು? ವಿವರ ನೀಡುವುದು?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿ)**

**ಅ)** ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ (NRHM) ಯೋಜನೆಯಡಿ ರಾಜ್ಯದ ಎಲ್ಲಾ ಮೂವತ್ತು ಜಿಲ್ಲೆಗಳಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಆ) ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದಡಿ ಬೆಳಗಾಂ ಜಿಲ್ಲೆಯಲ್ಲಿ ಕೈಗೊಳ್ಳಲಾಗುತ್ತಿರುವ ಯೋಜನೆಗಳು/ಕಾರ್ಯಕ್ರಮಗಳ ವಿವರ ಈ ಕೆಳಕಂಡಂತಿವೆ,

ಆರ್.ಸಿ.ಹೆಚ್. ಕಾರ್ಯಕ್ರಮ

ಎನ್.ಆರ್.ಹೆಚ್.ಎಂ. ಹೆಚ್ಚುವರಿ ಯೋಜನೆಗಳು

ಸಾರ್ವತ್ರಿಕಾ ಲಸಿಕಾ ಕಾರ್ಯಕ್ರಮ

ಕ್ಷಯರೋಗ ನಿವಾರಣಾ ಕಾರ್ಯಕ್ರಮ

ಮಲೇರಿಯಾ ನಿಯಂತ್ರಣಾ ಕಾರ್ಯಕ್ರಮ

ಅಂಧತ್ವ ನಿವಾರಣಾ ಕಾರ್ಯಕ್ರಮ

ಕುಷ್ಠರೋಗ ನಿವಾರಣಾ ಕಾರ್ಯಕ್ರಮ

ಐ.ಡಿ.ಎಸ್.ಪಿ. ಕಾರ್ಯಕ್ರಮ

ಇ) ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನ ವಿವರ ಈ ಕೆಳಕಂಡಂತಿವೆ:–

**ರೂ. ಕೋಟಿಗಳಲ್ಲಿ**

| **ಆರ್ಥಿಕ ವರ್ಷ** | **ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನ** |
|---|---|
| 2009–10 | 433.71 |
| 2010–11 | 587.56 |
| 2011–12 (ಡಿಸೆಂಬರ್2011ರ ಅಂತ್ಯಕ್ಕೆ) | 524.77 |

**ಈ)**

**ರೂ. ಕೋಟಿಗಳಲ್ಲಿ**

| **ಆರ್ಥಿಕ ವರ್ಷ** | **ವೆಚ್ಚ** * |
|---|---|
| 2009–10 | 647.25 |
| 2010–11 | 752.76 |
| 2011–12 (ಡಿಸೆಂಬರ್2011ರ ಅಂತ್ಯಕ್ಕೆ) | 446.81 |

* ಈ ಮೊತ್ತವು ರಾಜ್ಯ ಸರ್ಕಾರದ ಹಾಲಿನ ಅನುದಾನ ಹಾಗೂ ಪ್ರತಿ ವರ್ಷದ ಪ್ರಾರಂಭಿಕ ಶಿಲ್ಕು ಒಳಗೊಂಡಿದೆ.

**ಶ್ರೀ ವೀರಕುಮಾರ್ ಅಪ್ಪಾಸೋ ಪಾಟೀಲ್:–** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದಿಂದ ಆರೋಗ್ಯ ಇಲಾಖೆಗೆ ಸಾಕಷ್ಟು ಹಣ ಬಿಡುಗಡೆಯಾಗಿ ಬರುತ್ತಿದೆ. ಆದರೆ ಜಿಲ್ಲಾ ಮಟ್ಟದಲ್ಲಿ ಅದರ ನಿಯಂತ್ರಣಕ್ಕಾಗಿ ಜಿಲ್ಲಾಧಿಕಾರಿ ಅಥವಾ ಜಿಲ್ಲಾ ಮಂತ್ರಿಗಳ ಅಧೀನದಲ್ಲಿ ಒಂದೊಂದು ಕಮಿಟಿಯನ್ನು ರಚನೆ ಮಾಡಬೇಕು. ಏಕೆಂದರೆ ಈ ಯೋಜನೆಯಲ್ಲಿ ಸಾಕಷ್ಟು NGO ಗಳು ಕೆಲಸ ಮಾಡುತ್ತಿರುವುದರಿಂದ ಅವರು ಎಲ್ಲಿ ಕೆಲಸ ಮಾಡುತ್ತಿದ್ದಾರೆ, ಏನು ಕೆಲಸ ಮಾಡುತ್ತಿದ್ದಾರೆ ಎನ್ನುವುದು ಗೊತ್ತಾಗುವುದಿಲ್ಲ. ಆದ್ದರಿಂದ ಈ ವಿಚಾರದಲ್ಲಿ ಒಂದು ಕಮಿಟಿಯ ಕಂಟ್ರೋಲ್ ಇರಬೇಕೆಂಬುದು ನಮ್ಮ ವಿನಂತಿ.

**ಶ್ರೀ ಡಿ.ವಿ. ಸದಾನಂದಗೌಡ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಸಲಹೆಗಳನ್ನು ಖಂಡಿತವಾಗಿಯೂ ನಾವು ಪರಿಶೀಲನೆ ಮಾಡುತ್ತೇವೆ ಮತ್ತು ಆ ರೀತಿಯಲ್ಲಿ ಮುಂದುವರೆಸುವುದಕ್ಕೆ ನಾವು ತಯಾರಿದ್ದೇವೆ. ಇದು C.M.C., ಮತ್ತು ಅದಕ್ಕಿಂತ ಕೆಳಹಂತಕ್ಕೆ ಮಾಡಿದ್ದು ಅದಕ್ಕಿಂತ ಮೇಲಿನ ಹಂತಕ್ಕೆ ಮಾಡಿಲ್ಲ. ಇದು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು ಸುಮಾರು 50,000 ಜನಸಂಖ್ಯೆಗಿಂತ ಕೆಳಗಿರುವಲ್ಲೆಲ್ಲಾ ಇದನ್ನು ಮಾಡುವಂತಹ ಕೆಲಸಕಾರ್ಯಗಳನ್ನು ಮಾಡುತ್ತಿದ್ದೇವೆ. ಕೇಂದ್ರ ಸರ್ಕಾರದಿಂದ ನಮಗೆ

ಸಾಕಷ್ಟು ಮೊತ್ತದ ಹಣ ಕೂಡ ಬಂದಿದೆ. ಸನ್ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

**ಬೆಂಗಳೂರಿನ ಕದಿರೇನಹಳ್ಳಿ 'ಅಂಡರ್ ಪಾಸ್' ಕುರಿತು**

**19; ಡಾ|| ಎಂ.ಆರ್. ದೊರೆಸ್ವಾಮಿ (ನಾಮ ನಿರ್ದೇಶಿತರು)**

**ಅ)** ಬೆಂಗಳೂರಿನ ಕದಿರೇನಹಳ್ಳಿ 'ಅಂಡರ್ ಪಾಸ್' ಕೆಲಸವು ಹಲವು ವರ್ಷಗಳಿಂದ ನಿಧಾನಗತಿಯಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

**ಆ)** ಈ ಕಾಮಗಾರಿಯಿಂದ ಇಲ್ಲಿನ ಸಾರ್ವಜನಿಕರಿಗೆ ಬಹಳ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

**ಇ)** ಬಂದಿದ್ದಲ್ಲಿ, ಈ ಕಾಮಗಾರಿ ತ್ವರಿತಗತಿಯಲ್ಲಿ ಪೂರ್ಣಗೊಳ್ಳಲು ಬಿ.ಬಿ.ಎಂ.ಪಿ ತೆಗೆದುಕೊಂಡಿರುವ ಕ್ರಮಗಳೇನು;

**ಈ)** ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಕಾಲಮಿತಿಯನ್ನು ನಿಗಧಿಪಡಿಸಲಾಗಿದೆಯೇ?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)**

**ಅ)** ಬಂದಿದೆ. ಕೆಲವು ಅನಿವಾರ್ಯ ಕಾರಣಗಳಿಂದ ಕಾಮಗಾರಿಯನ್ನು ಪೂರ್ಣಗೊಳಿಸಲು ವಿಳಂಬವಾಗಿರುತ್ತದೆ.

**ಆ)** ಈ ಕಾಮಗಾರಿಯಿಂದ ಸಾರ್ವಜನಿಕರಿಗೆ ಹಾಗೂ ವಾಹನ ಸಂಚಾರಕ್ಕೆ ಸ್ವಲ್ಪ ಮಟ್ಟಿಗೆ ಅನಾನುಕೂಲವಾಗಿರುತ್ತದೆ. ಕನಕಪುರ ರಸ್ತೆಯ ಭಾಗದಲ್ಲಿ ತಡೆಗೋಡೆ ನಿರ್ಮಾಣ ಕಾರ್ಯವು ಸುಮಾರು ಎರಡು ವರ್ಷಗಳ ಹಿಂದೆ ಪೂರ್ಣಗೊಂಡಿದ್ದು, ಈ ಭಾಗದ ಸೇವಾ ರಸ್ತೆಗಳಲ್ಲಿ ಹಾಗೂ ಡೆಕ್ ಮೇಲು ಭಾಗದಲ್ಲಿ ವಾಹನಗಳ ಸಂಚಾರಕ್ಕೆ ಅವಕಾಶ ಮಾಡಿಕೊಡಲಾಗಿರುತ್ತದೆ.

**ಇ)** ಕಾಮಗಾರಿ ಸ್ಥಳದಲ್ಲಿದ್ದ ಎಲ್ಲಾ ಅಡೆತಡೆಗಳನ್ನು ನಿವಾರಿಸಿಕೊಳ್ಳಲಾಗಿದ್ದು ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗಿದೆ.

**ಈ)** ಹೌದು. ಮಾರ್ಚ್ 2012ರೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗಿದೆ.

**ಡಾ|| ಎಂ.ಆರ್. ದೊರೆಸ್ವಾಮಿ:-** ಮಾನ್ಯ ಸಭಾಪತಿಯವರೇ, ಸರ್ಕಾರ ನೀಡಿರುವಂತಹ ಉತ್ತರದಲ್ಲಿಯೇ ಈ ಸಮಸ್ಯೆ ಇದೆ ಎಂಬುದನ್ನು ಒಪ್ಪಿಕೊಂಡಿದ್ದಾರೆ. ಆದರೆ ಈ ಸಂದರ್ಭದಲ್ಲಿ ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಬಯಸುವುದೇನೆಂದರೆ ಈ ಕಾಮಗಾರಿ ಪ್ರಾರಂಭವಾಗಿ ಸುಮಾರು ಎರಡೂವರೆ ವರ್ಷಗಳಾಗಿದ್ದು ಅಲ್ಲಿ ವಾಹನ ದಟ್ಟಣೆ ಕೂಡ ಹೆಚ್ಚಾಗಿರುವ ಕಾರಣದಿಂದಾಗಿ ಜನತೆಗೆ ದಿನನಿತ್ಯ ಬಹಳ ತೊಂದರೆಯಾಗುತ್ತಿದೆ. ಅನೇಕ ಬಾರಿ ಈ ವಿಷಯವಾಗಿ ಪ್ರಸ್ತಾಪವಾಗಿದ್ದು ಹಿಂದಿನ ಮುಖ್ಯಮಂತ್ರಿಯವರು ಇದರ ಬಗ್ಗೆ ಉತ್ತರ ಕೊಟ್ಟಿದ್ದಾರೆ. ಆದರೂ ಸಹ ಕಾಮಗಾರಿ ಆಮೆ ವೇಗದಲ್ಲಿ ನಡೆಯುತ್ತಿದೆ. ಇದರ ಜೊತೆಗೆ ಬೆಂಗಳೂರು ದಕ್ಷಿಣದಲ್ಲಿ 'ಟ್ಯಾಗೂರ್ ಸರ್ಕಲ್' ಎಂದೇ ಪ್ರಸಿದ್ಧಿಯಾಗಿರತಕ್ಕಂತಹ ಗಾಂಧಿ ಬಜಾರ್‌ನಲ್ಲಿ ಇದೇ ರೀತಿ ಅಂಡರ್‌ಪಾಸ್ ಕಾಮಗಾರಿ ಏನು ನಡೆಯುತ್ತಿದೆ ಅಲ್ಲಿ ಕೂಡ ಇದೇ ಪರಿಸ್ಥಿತಿಯಾಗಿದೆ. ಒಟ್ಟಿನಲ್ಲಿ ಬೆಂಗಳೂರಿನಲ್ಲಿ ನಡೆಯುತ್ತಿರುವ ಅನೇಕ ಅಂಡರ್‌ಪಾಸ್‌ಗಳ ಸ್ಥಿತಿಗತಿ ಸಹ ಸ್ವಲ್ಪಮಟ್ಟಿಗೆ ಕದಿರೇನಹಳ್ಳಿ ಅಂಡರ್‌ಪಾಸ್ ಸ್ಥಿತಿಗತಿ ಏನಾಗಿದೆ ಅದೇ ರೀತಿ ಮಂದಗತಿಯಲ್ಲಿ ಕೆಲಸ ನಡೆಯುತ್ತಿದೆ. ಇದರ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಯವರು ಹೆಚ್ಚಿನ ಗಮನ ಕೊಡಬೇಕು ಮತ್ತು ನಾಗರೀಕರಿಗೆ ತೊಂದರೆಯಾಗದಿರುವ ರೀತಿಯಲ್ಲಿ ಅತಿ ಶೀಘ್ರವಾಗಿ ಈ ಕಾಮಗಾರಿಯನ್ನು ಮುಗಿಸಬೇಕಾಗಿದೆ. ಮಾರ್ಚ್ ಒಳಗೆ ಈ ಕಾಮಗಾರಿಯನ್ನು ಮುಗಿಸುವುದಾಗಿ ಸರ್ಕಾರದ ಉತ್ತರದಲ್ಲಿ ತಿಳಿಸಲಾಗಿದೆ. ಬಹಳ ಸಂತೋಷ, ದಯವಿಟ್ಟು ಆ ಮಾರ್ಚ್ ಎನ್ನುವುದು ಈ ವರ್ಷದ ಮಾರ್ಚ್ ಆಗಬೇಕು, ಅದು ಮುಂದಿನ ವರ್ಷದ ಮಾರ್ಚ್ ಆಗಬಾರದು ಎಂದು ನಾನು ಸನ್ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿಸುತ್ತೇನೆ.

**ಶ್ರೀ ಡಿ.ವಿ. ಸದಾನಂದಗೌಡ:-** ಸನ್ಮಾನ್ಯ ಸಭಾಪತಿಯವರೇ, ಈ ಕಾಮಗಾರಿಯ ಪ್ರಗತಿ ಸ್ವಲ್ಪಮಟ್ಟಿಗೆ ವಿಳಂಬವಾಗಿರುವಂಥದ್ದು ನಿಜ. ಅದಕ್ಕೆ ಕೆಲವು ಕಾರಣಗಳಿವೆ. ಆ ಭಾಗದಲ್ಲಿ ಶೇಕಡ 80ರಷ್ಟು ಬಂಡೆ ಇದ್ದದ್ದು, ಭೂಸ್ವಾಧೀನದ ಸಂದರ್ಭದಲ್ಲಿ ಪರಿಹಾರ ಇತ್ಯಾದಿಗಳನ್ನು ನಿರ್ಧರಿಸುವುದು

ಹಾಗೂ ವಿತರಿಸುವಂಥದ್ದರಲ್ಲಿ ವಿಳಂಬ ಆಗಿರುವುದು, ಗುತ್ತಿಗೆದಾರರು ಕಾಮಗಾರಿಯನ್ನು ಕೈಗೊಳ್ಳುವಲ್ಲಿ ಸ್ವಲ್ಪ ನಿಧಾನಗತಿಯ ಕಾರಣಕ್ಕಾಗಿ ಅವರಿಗೆ 80 ಲಕ್ಷ ದಂಡವನ್ನು ಸಹ ವಿಧಿಸಿದ್ದೇವೆ. ಸುಮಾರು 2871 ಲಕ್ಷ ರೂಪಾಯಿಗಳ ವೆಚ್ಚದ ಈ ಕಾಮಗಾರಿಯಲ್ಲಿ ನಿಧಾನಗತಿಯ ಪ್ರಗತಿಗಾಗಿ ಗುತ್ತಿಗೆದಾರರಿಗೆ ಸುಮಾರು 80 ಲಕ್ಷ ರೂಪಾಯಿಗಳ ದಂಡವನ್ನು ವಿಧಿಸಿದ್ದೇವೆ. ಅಲ್ಲಿ ವಾಹನ ಸಂಚಾರದ ದಟ್ಟಣೆ ಭಾರಿ ಇದ್ದ ಕಾರಣ ಸ್ವಲ್ಪ ತಡವಾಗಿದೆ. ಈಗ ಅದನ್ನು ಎಲ್ಲವನ್ನೂ speedup ಮಾಡಿದ್ದೇವೆ. ಈಗಾಗಲೇ ಶೇಕಡ 80ರಷ್ಟು ಕೆಲಸ ಕಾರ್ಯಗಳು ಮುಗಿದಿದೆ. ಖಂಡಿತವಾಗಿ ಈ ವರ್ಷವೇ ಅಂದರೆ 2012 ರ ಮಾರ್ಚ್ ತಿಂಗಳ ಒಳಗಾಗಿ ಆ ಕೆಲಸವನ್ನು ಮುಗಿಸುತ್ತೇವೆಂಬ ಮಾತನ್ನು ಸಹ ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

## ಆರೋಗ್ಯ ಇಲಾಖೆಯಲ್ಲಿನ ಆಹಾರ ಸುರಕ್ಷಿತ ಅಧಿಕಾರಿ ಹುದ್ದೆ ಮಂಜೂರಾತಿ ಬಗ್ಗೆ

**110; ಡಾ॥ ಎಸ್.ಆರ್. ಲೀಲಾ (ನಾಮನಿರ್ದೇಶನ ಹೊಂದಿದವರು)**

ಅ) ಆರೋಗ್ಯ ಇಲಾಖೆಯಲ್ಲಿನ ಆಹಾರ ಸುರಕ್ಷಿತ ಮತ್ತು ಗುಣಮಟ್ಟ ಕಾಯ್ದೆಯನ್ವಯ ರಾಜ್ಯದಲ್ಲಿ ಮಂಜೂರಾದ ಆಹಾರ ಸುರಕ್ಷಿತ ಅಧಿಕಾರಿ ಹುದ್ದೆಗಳ ಸಂಖ್ಯೆ ಎಷ್ಟು;

ಆ) ಅವುಗಳನ್ನು ಯಾವಾಗ ಭರ್ತಿ ಮಾಡಲಾಗುವುದು.

ಇ) ಈ ಹುದ್ದೆಯಲ್ಲಿ ಈಗಾಗಲೇ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಆಹಾರ ನಿರೀಕ್ಷಕರನ್ನೇ ನೇಮಕ ಮಾಡಿಕೊಳ್ಳಲು ಸರ್ಕಾರಕ್ಕೆ ಏನಾದರೂ ತೊಂದರೆಗಳಿವೆಯೇ?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)**

**ಅ)** ಆರೋಗ್ಯ ಇಲಾಖೆಯಲ್ಲಿನ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006 ಮತ್ತು ಅದರಡಿ ರಚಿತವಾಗಿರುವ 2011 ರ ನಿಯಮಗಳನ್ವಯ, ರಾಜ್ಯದಲ್ಲಿ ಆಹಾರ ಸುರಕ್ಷತೆ ಅಧಿಕಾರಿಗಳ ಹುದ್ದೆಗಳನ್ನು ಸೃಜಿಸಬೇಕಾಗಿದೆ.

**ಆ)** ಸದರಿ ಹುದ್ದೆಗಳನ್ನು ಸೃಜಿಸಿದ ನಂತರ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕ್ರಮ ಕೈಗೊಳ್ಳಬೇಕಾಗಿದೆ.

**ಇ)** ಆಹಾರ ಸುರಕ್ಷಿತ ಅಧಿಕಾರಿ ಹುದ್ದೆಗೆ ನೇಮಿಸಲು ಕೇಂದ್ರ ಸರ್ಕಾರವು ಈ ಕೆಳಕಂಡ ವಿದ್ಯಾರ್ಹತೆಯನ್ನು ನಿಗದಿಪಡಿಸಿದೆ:

ಆಹಾರ ತಂತ್ರಜ್ಞಾನ ಅಥವಾ ಹೈನುಗಾರಿಕೆ ತಂತ್ರಜ್ಞಾನ

ಅಥವಾ ಜೈವಿಕ ತಂತ್ರಜ್ಞಾನ ಅಥವಾ ತೈಲ ತಂತ್ರಜ್ಞಾನ

ಅಥವಾ ಕೃಷಿ ವಿಜ್ಞಾನ ಅಥವಾ ಪಶು ವಿಜ್ಞಾನ ಅಥವಾ

ಬಯೋ ಕೆಮಿಸ್ಟ್ರಿ ಅಥವಾ ಮೈಕ್ರೋ ಬಯಾಲಜಿಯಲ್ಲಿ

ಪದವಿ ಅಥವಾ ರಾಸಾಯನ ಶಾಸ್ತ್ರದಲ್ಲಿ ಸ್ನಾತಕೋತ್ತರ

ಪದವಿ ಅಥವಾ ವೈದ್ಯಕೀಯ ಪದವಿ.

ನಿಯತಕಾಲಿಕ ಆಹಾರ ಸುರಕ್ಷಿತ ಅಧಿಕಾರಿಗಳು ನೇಮಕವಾಗುವ ತನಕ ಸದರಿ ಆಹಾರ ನಿರೀಕ್ಷಕರು ಆಹಾರ ಸುರಕ್ಷತಾ ಅಧಿಕಾರಿಗಳ ಕರ್ತವ್ಯ ನಿರ್ವಹಿಸಲು ನಿಯಮಗಳಲ್ಲಿ ಅಡಚಣೆಯಿರುವುದಿಲ್ಲ. ಅದರಂತೆ, ಅವರುಗಳು ಈಗಾಗಲೇ ಆಹಾರ ಸುರಕ್ಷಿತ ಅಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

**ಶ್ರೀಮತಿ ಭಾರತಿಶೆಟ್ಟಿ (ಡಾ॥ ಎಸ್.ಆರ್. ಲೀಲಾರವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಮೊದಲನೆಯ ಪ್ರಶ್ನೆಗೆ ಉತ್ತರವಾಗಿ ಆರೋಗ್ಯ ಇಲಾಖೆಯಲ್ಲಿನ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006 ಮತ್ತು ಅದರಡಿ ರಚಿತವಾಗಿರುವ 2011ರ ನಿಯಮಗಳನ್ವಯ ರಾಜ್ಯದಲ್ಲಿ ಆಹಾರ ಸುರಕ್ಷತೆ ಅಧಿಕಾರಿಗಳ ಹುದ್ದೆಗಳನ್ನು ಸೃಜಿಸಬೇಕಾಗಿದೆ ಹಾಗೂ ಸದರಿ ಹುದ್ದೆಗಳನ್ನು ಸೃಜಿಸಿದ ನಂತರ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಈಗಾಗಲೇ ಪ್ರತಿ ತಾಲ್ಲೂಕು ಕೇಂದ್ರಗಳಲ್ಲಿಯೂ ಸಹ ಕರ್ತವ್ಯವನ್ನು ನಿರ್ವಹಿಸಲು ಅಧಿಕಾರಿಗಳು ಇದ್ದಾರೆ ಎಂಬ ಉಲ್ಲೇಖವನ್ನು ಮಾಡಿದ್ದಾರೆ. ಆದರೆ ಆಹಾರ ತಯಾರಿಕೆ, ದಾಸ್ತಾನು, ವಿತರಣೆ, ಮಾರಾಟ ಮತ್ತು ಆಮದು ಇದರ ಸುರಕ್ಷತೆ ಮತ್ತು ಗುಣಮಟ್ಟವನ್ನು ಕಾಪಾಡಬೇಕಾಗಿದೆ. ಈಗಾಗಲೇ ಗುಜರಾತ್, ತಮಿಳುನಾಡು, ಮಹಾರಾಷ್ಟ್ರ, ಆಂಧ್ರಪ್ರದೇಶ, ಮತ್ತು ಉತ್ತರ ಪ್ರದೇಶ ಇಲ್ಲೆಲ್ಲಾ ಪ್ರತ್ಯೇಕವಾಗಿ ಒಂದು ಇಲಾಖೆಯನ್ನು ರಚಿಸಿ ಅದಕ್ಕೆ ಬೇಕಾದಂತಹ ಸೌಲಭ್ಯವನ್ನು ಕೊಟ್ಟು ಈ ಒಂದು ಕಾರ್ಯವನ್ನು ನಡೆಸುತ್ತಿದ್ದಾರೆ. ಆದುದರಿಂದ ನಮ್ಮ ರಾಜ್ಯದಲ್ಲಿಯೂ ಸಹ ಸಾರ್ವಜನಿಕರಿಗೆ ಉಪಯೋಗವಾಗುವಂತೆ ಪ್ರತ್ಯೇಕ ಇಲಾಖೆಯನ್ನು ರಚಿಸಿ ಹುದ್ದೆಯನ್ನು ಭರ್ತಿಮಾಡಿ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ಇದಕ್ಕೆ ಬೇಕಾದಂತಹ C & R Rules ಅನ್ನು frame ಮಾಡಬೇಕಾಗಿದೆ. ಇದು ಕೇಂದ್ರ ಸರ್ಕಾರದ ಕಾಯಿದೆ. ಇದು 5ನೇ ಆಗಸ್ಟ್ 2011ನೇ ಸಾಲಿನಲ್ಲಿ ಜಾರಿಗೆ ಬಂದಿರುವಂಥದ್ದು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆಯುಕ್ತರೇ ಈಗ ಆಹಾರ ಸುರಕ್ಷತೆಯ ಆಯುಕ್ತರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಹೊಸ ಕಾಯಿದೆ ಬಂದ ನಂತರ ಎಲ್ಲವನ್ನೂ ಮಾಡಬೇಕೆಂದು ಈಗಾಗಲೇ ನಾವು ಆಲೋಚನೆ ಮಾಡಿದ್ದೇವೆ. Interim arrangement ಇದಕ್ಕೆ ಬೇಕಾದಂತೆ ಮಾಡಿ, ಇದರ ಪ್ರಕಾರ ಕೆಲಸ

ಕಾರ್ಯಗಳನ್ನು ಮುಂದುವರೆಸುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ಈಗ salary, pay scale and post creation ಈ ಎಲ್ಲಾ ಕೆಲಸ ಕಾರ್ಯಗಳು ಆಗಬೇಕಾಗಿದೆ. ಈ ಎಲ್ಲಾ ಕೆಲಸಗಳನ್ನು ಮಾಡಲು ಅಂದರೆ post creation ಮುಂತಾದವನ್ನು ಮಾಡುವುದಕ್ಕೆ ಸುಮಾರು ಮೂರು ತಿಂಗಳ ಕಾಲಾವಕಾಶ ಬೇಕಾಗುತ್ತದೆ, ಅದನ್ನು ಭರ್ತಿ ಮಾಡುವುದಕ್ಕೆ ಮತ್ತೊಂದು ಮೂರು ತಿಂಗಳ ಕಾಲಾವಕಾಶ ಬೇಕಾಗುತ್ತದೆ. ಸುಮಾರು ಐದಾರು ತಿಂಗಳ ಒಳಗಾಗಿ ಈ ಎಲ್ಲಾ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಬೇಕಾದಂತಹ ನಿಯೋಜನೆಗಳನ್ನು, appointment ಎಲ್ಲವನ್ನು ಮಾಡುವಂತಹ ಕೆಲಸವನ್ನು ಮಾಡುತ್ತೇವೆ. ಅದರಲ್ಲಿ ಇರುವಂತಹ ತೊಂದರೆ ಏನೆಂದರೆ, ಅದರಲ್ಲಿ ಹೇಳಿದಂತಹ ಹುದ್ದೆಯ ಅರ್ಹತೆಗೂ ಮತ್ತು ಈಗಿರುವಂತಹ ನಮ್ಮ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಯಲ್ಲಿರುವಂತಹ ಅರ್ಹತೆಗಳಿಗೂ ಸ್ವಲ್ಪ ವ್ಯತ್ಯಾಸ ಇರುವ ಹಿನ್ನೆಲೆಯಲ್ಲಿ ಅದನ್ನೆಲ್ಲಾ ಹೊಸ C & R Rules ಪ್ರಕಾರವೇ ಮಾಡಬೇಕಾಗುತ್ತದೆ. ಆದಕಾರಣ ಸುಮಾರು ಐದಾರು ತಿಂಗಳಿನಲ್ಲಿ ಈ ಎಲ್ಲಾ ಕೆಲಸವನ್ನು ಮಾಡುತ್ತೇವೆ. ಮಾನ್ಯ ಸದಸ್ಯರು ಇದಕ್ಕೆ ಪ್ರತ್ಯೇಕವಾದಂತಹ ಇಲಾಖೆಯನ್ನು ಸೃಷ್ಟಿಸಬೇಕೆಂದು ಹೇಳಿದ್ದಾರೆ, ಇದನ್ನು ಪರಿಶೀಲನೆ ಮಾಡುತ್ತೇವೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಲಿಚ್ಛಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ಸುದರ್ಶನ್‌ರವರು ಪ್ರಶ್ನೆ ಕೇಳುವಾಗ ವಾಕ್‌ಔಟ್ ಮಾಡಿಬಿಟ್ಟಿದ್ದರು. ಈಗ ಪುನಃ ವಾಪಸ್ಸು ಸದನಕ್ಕೆ ಬಂದಿದ್ದಾರೆ. ಆದಕಾರಣ ತಾವು ತಮ್ಮ ಪ್ರಶ್ನೆಯನ್ನು ಕೇಳಿ.

## ವೆಚ್ಚ ಸುಧಾರಣೆಗಳ ಆಯೋಗ

**211; ಶ್ರೀ ವಿ.ಆರ್. ಸುದರ್ಶನ್ (ವಿಧಾನಸಭಾ ಕ್ಷೇತ್ರ)**

ಅ) ಸರ್ಕಾರವು ವೆಚ್ಚ ಸುಧಾರಣಾ ಆಯೋಗವನ್ನು ರಚಿಸಿದೆಯೆ;

ಆ) ಹಾಗಿದ್ದಲ್ಲಿ, ಆಯೋಗದ ಗುರಿ ಮತ್ತು ಉದ್ದೇಶಗಳ ವಿವರಗಳನ್ನು ತಿಳಿಸಿ;

ಇ) ಆಯೋಗವು ಸಲ್ಲಿಸಿರುವ ವರದಿಗಳ ವಿವರಗಳನ್ನು ತಿಳಿಸಿ?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಯವರು)**

ಅ) ಹೌದು.

ಆ) ಸರ್ಕಾರದ ಕಾರ್ಯಕ್ರಮದಲ್ಲಿ ಆಗುವ ವೆಚ್ಚವನ್ನು ಪರಿಶೀಲಿಸಿ ಕಡಿಮೆ ಪರಿಣಾಮಕಾರಿಯಾದ ಕಾರ್ಯಕ್ರಮಗಳ ವೆಚ್ಚವನ್ನು ತಗ್ಗಿಸಿ, ಹೆಚ್ಚು ಪರಿಣಾಮಕಾರಿಯಾದ ಕಾರ್ಯಕ್ರಮಗಳಿಗೆ ಸಂಪನ್ಮೂಲಗಳನ್ನು ಕ್ರೋಢೀಕರಿಸುವ ಮತ್ತು ಕಾರ್ಯಕ್ರಮಗಳ ಅನುಷ್ಠಾನದ ದಕ್ಷತೆಯನ್ನು ಹೆಚ್ಚಿಸಲು ಸೂಕ್ತ ಕಾರ್ಯನೀತಿಯನ್ನು ರೂಪಿಸುವುದು.

ಕೆಲವು ಪ್ರಧಾನ ಇಲಾಖೆಗಳಲ್ಲಿನ ಕಾರ್ಯಕ್ರಮ ಅನುಷ್ಠಾನದ ಪರಿಣಾಮ ಮತ್ತು ದಕ್ಷತೆಯನ್ನು ಪರಿಶೀಲಿಸಲು ಮತ್ತು ಸಹಾಯಧನಗಳು, ಬಳಕೆದಾರರ ಶುಲ್ಕಗಳು, ಕಾರ್ಯನಿರ್ವಹಣಾ ಮೇಲ್ವಿಚಾರಣೆ, ದಕ್ಷ ಸಾರ್ವಜನಿಕ ಸೇವಾ ನೀಡಿಕೆಗಾಗಿ ಸಂಸ್ಥಿಕ ಕಾರ್ಯಕೌಶಲ್ಯ ಮುಂತಾದ ಕೆಲವು ಸಾಮಾನ್ಯ ವಿಷಯಗಳನ್ನು ಪುನರ್ವಿಮರ್ಶಿಸಲು.

ಇ) ಆಯೋಗವು ನಾಲ್ಕು ಸಂಪುಟಗಳಲ್ಲಿ ತನ್ನ ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ ಪ್ರಮುಖವಾಗಿ:–

ಅ) ಆರ್ಥಿಕ ಬೆಳವಣಿಗೆ ಮತ್ತು ಮಾನವ ಅಭಿವೃದ್ಧಿಗೆ ನೀಡಿರುವ ಕೊಡುಗೆಯ ದೃಷ್ಟಿಕೋನದಿಂದ ಕರ್ನಾಟಕದಲ್ಲಿನ ಸಮಗ್ರ ಸಾರ್ವಜನಿಕ ವೆಚ್ಚದ ವಿಮರ್ಶೆಯನ್ನು ಮಾಡಲಾಗಿದೆ.

ಆ) ವೆಚ್ಚ ನಿರ್ವಹಣೆಯಲ್ಲಿ ದೂರದೃಷ್ಟಿಯ ಮೂಲತತ್ವದ ಕುರಿತು ಶಿಫಾರಸ್ಸನ್ನು ಮಾಡಲಾಗಿದೆ;

ಇ) ವೆಚ್ಚಗಳ ಮೇಲೆ ಶಾಸಕಾಂಗದ ಮತ್ತು ಕಾರ್ಯಾಂಗದ ಹತೋಟಿಯನ್ನು ಬಲಪಡಿಸುವ ಮಾನಕದ ಬಗ್ಗೆ ಸಲಹೆಗಳನ್ನು ನೀಡಲಾಗಿದೆ.

ಈ) ಯೋಜನೆಗಳಲ್ಲಿ ಬಂಡವಾಳ ಹೂಡಿಕೆ ಮುನ್ನ ಕ್ಲಿಷ್ಟಕರವಾದ ಯೋಜನಾ ಪೂರ್ವ ಗುಣಮಟ್ಟ ನಿಷ್ಕರ್ಷೆ ವಿಧಾನಗಳು ಹಾಗೂ ಸಿದ್ಧಪಡಿಸಿದ ಯೋಜನಾ ಅನುಷ್ಠಾನ ವ್ಯವಸ್ಥೆಯ ಅಳವಡಿಕೆಯ ಅವಶ್ಯಕತೆ ಬಗ್ಗೆ ತೀವ್ರವಾದ ಒತ್ತು ನೀಡಲಾಗಿದೆ.

ಉ) ಸಹಾಯಧನಗಳು (ಸಬ್ಸಿಡಿಗಳು), ಬಳಕೆದಾರರಿಂದ ಶುಲ್ಕ ವಸೂಲಿ ಹಾಗೂ ಸೇವಾ ವಿತರಣೆಯ ವಿಧಾನಕ್ಕೆ ಸಂಬಂಧಿಸಿದಂತೆ ಕೆಲವು ಸಲಹೆಗಳನ್ನು ನೀಡಲಾಗಿದೆ.

**ಶ್ರೀ ವಿ.ಆರ್. ಸುದರ್ಶನ್:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಈ ಸಂದರ್ಭದಲ್ಲಿ ಒಂದು ವಿಷಯದ ಬಗ್ಗೆ ಗಮನ ಹರಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಈಗಿರುವಂತಹ Karnataka Financial Code ಏನಿದೆ, ಅದು 1975 ಅಥವಾ 1976ರಲ್ಲಿ ಮಾನ್ಯ ದೇವರಾಜ್ ಅರಸ್‌ರವರ ಕಾಲದಲ್ಲಿ ಆಗಿರುವಂಥದ್ದು. ಆದಕಾರಣ ಇದಕ್ಕೆ ಅನೇಕ amrndaments ಅಗತ್ಯವಿದೆ. ಹಾಗಾಗಿ ಸರ್ಕಾರ ಇದರ ಬಗ್ಗೆ ಗಮನವೇನಾದರು ಹರಿಸಿದೆಯೇ? ಗಮನಹರಿಸಿದ್ದರೆ Karnataka Financial Code ಗೆ amendments ತರುವುದಕ್ಕೆ ಸರ್ಕಾರ ಏನು ಕ್ರಮಗಳನ್ನು ತೆಗೆದುಕೊಂಡಿದೆ ಎಂಬುದನ್ನು ತಿಳಿಸಬೇಕು.

ಎರಡನೆಯದಾಗಿ, ಖರ್ಚು–ವೆಚ್ಚಗಳನ್ನು ಯಾವ ಯಾವ ರೀತಿಯಿಂದ ಕಡಿಮೆ ಮಾಡುವುದಕ್ಕೆ ಸಾಧ್ಯವಿದೆ, ಅದರ ಸುದುಪಯೋಗ ಆಡಳಿತ ದೃಷ್ಟಿಯಿಂದ, ಅಭಿವೃದ್ಧಿ ದೃಷ್ಟಿಯಿಂದ ಎಂದು ಹೇಳಿ ಅದಕ್ಕಾಗಿ Expenditure Reforms Commission ಅನೇಕ ವರದಿಗಳನ್ನು ಕೊಟ್ಟಿದ್ದಾರೆ. ಆ Commission ಇನ್ನೂ ಸಹ ಅಸ್ತಿತ್ವದಲ್ಲಿದೆಯೇ ಹಾಗೂ ಈ ವರದಿಗಳ ಶಿಫಾರಸ್ಸುಗಳನ್ನು implement ಮಾಡುವುದಕ್ಕೆ ಏನೆಲ್ಲಾ ಪ್ರಯತ್ನಗಳನ್ನು ಸರ್ಕಾರ ನಡೆಸಿದೆ ಎನ್ನುವ ನನ್ನ ಪ್ರಶ್ನೆಗೆ ನೀಡಿರುವ ಉತ್ತರದಲ್ಲಿ ಕಮೀಷನ್ ಸರ್ಕಾರಕ್ಕೆ ಏನನ್ನು ತಿಳಿಸಿದೆ ಎನ್ನುವುದನ್ನು ಮಾತ್ರ ಹೇಳಲಾಗಿದೆ. ಆದರೆ ಸರ್ಕಾರ implement ಮಾಡುವಲ್ಲಿ ಯಾವ ರೀತಿಯಾದಂತಹ ಪ್ರಯತ್ನವನ್ನು ಮಾಡಿದೆ 'Action Taken Report' ಕೂಡ ನೀವು ಸದನದಲ್ಲಿ ಒದಗಿಸಬೇಕಾಗುತ್ತದೆ. ಉದಾಹರಣೆಗೆ ಹೇಳಬೇಕೆಂದರೆ, ಈಗ ಸರ್ಕಾರಕ್ಕೆ ಒಂದು identity ಇದೆ, ಒಂದು dignity ಸಹ ಇದೆ. ಯಾವುದೇ ಒಂದು ಇಲಾಖೆ ಒಂದು ವಾಹನವನ್ನು ಕೊಂಡುಕೊಳ್ಳುವಂತಹ ಸಮಯದಲ್ಲಿ ಒಂದು Transport Policy ಬೇಡವೆ? ಇವತ್ತು ಅನೇಕ ಸರ್ಕಾರಿ ಕಛೇರಿಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿವೆ. ಬೆಂಗಳೂರಿನಲ್ಲಿರುವ State office ಗಳು ಇರಬಹುದು, ಅಥವಾ ಜಿಲ್ಲಾ ಕೇಂದ್ರಗಳಲ್ಲಿ ಇರಬಹುದು. ಇದಕ್ಕೇನಾದರು ಒಂದು ಶಾಶ್ವತವಾದಂತಹ ಕಾರ್ಯಕ್ರಮಗಳನ್ನು ಸರ್ಕಾರ ಹಾಕಿಕೊಳ್ಳಬೇಕಲ್ಲವೆ. ಇವತ್ತು State Guest Houses ಗಳು ಇವೆ. ಆದರೂ ಸಹ ಸರ್ಕಾರದ ಕಾರ್ಯಕ್ರಮಗಳು Seven star Hotels ನಲ್ಲಿ ನಡೆಸುತ್ತೇವೆ ಎಂದು ಹೇಳುವುದಾದರೆ ಸರ್ಕಾರ ಅಷ್ಟೊಂದು ಶ್ರೀಮಂತವಾಗಿದೆಯೇ? ಅಭಿವೃದ್ಧಿಗೆ ಉಪಯೋಗಿಸುವಂತಹ ಹಣವನ್ನು ಈ ರೀತಿ ಖರ್ಚು ಮಾಡುವುದು ಸರಿಯೇ? ಹಾಗಿದ್ದರೆ ಇಂತಹ Commission ಗಳನ್ನು constitute ಮಾಡುವುದರಲ್ಲಿ ಅರ್ಥವೇನಿದೆ ಹೇಳಿ. ಈ ಆಯೋಗಕ್ಕೆ ಭಟ್ಟಾಚಾರ್ಯರವರನ್ನು ಅಧ್ಯಕ್ಷರನ್ನಾಗಿ ಮಾಡಿ ಅವರಿಗೆ ಟಿ.ಎ., ಡಿ.ಎ. ಮುಂತಾದ ಸೌಲಭ್ಯಗಳನ್ನು ಒದಗಿಸಿಕೊಡಲಾಗಿದೆ. ಈ ಹಿಂದೆಯು ಸಹ ಶ್ರೀಮಾನ್ ವೀರಪ್ಪಮೊಯಲಿಯವರು ಸರ್ಕಾರಕ್ಕೆ ಅನೇಕ ವರದಿಗಳನ್ನು

ಕೊಟ್ಟಿದ್ದಾರೆ. ವರದಿಗಳನ್ನು ಪಡೆದುಕೊಂಡು ಅವುಗಳನ್ನು cold storage ಗೆ ಕಳುಹಿಸುವುದಾದರೆ ಸರ್ಕಾರದ ಸದುದ್ದೇಶವನ್ನು ಪ್ರಶ್ನೆ ಮಾಡಬೇಕಾಗುತ್ತದೆ. ಇದರ ಪರಿಣಾಮದಿಂದಾಗಿ ಆಡಳಿತ ಮತ್ತು ಅಭಿವೃದ್ಧಿಯ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ. ಯಾವುದೇ ರೀತಿಯಾದಂತಹ ಕ್ರಮಗಳನ್ನು ತೆಗೆದುಕೊಳ್ಳದೇ ಇರುವುದರಿಂದ ಇದು ಕೇವಲ ತೋರಿಕೆಗೋಸ್ಕರ ಮಾಡಿದಂತೆ ಆಗುತ್ತದೆ. ಆದುದರಿಂದ ನಿಮಗೆ ಕಾಳಜಿ ಇದೆ ಎಂದು ತಿಳಿಸಿಕೊಳ್ಳುತ್ತೇನೆ. ಕಾಳಜಿ ಇದೆ ಎಂದು ಹೇಳುವುದಾದರೆ ದಯಮಾಡಿ ಇದರಲ್ಲಿ ನೀವು exhibit ಮಾಡಬೇಕಾಗುತ್ತದೆ. ದಯಮಾಡಿ ತಮ್ಮ ಉತ್ತರವನ್ನು ನಾನು ನಿರೀಕ್ಷೆ ಮಾಡುತ್ತೇನೆ.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, 2009–10ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವಂತೆ ಈ ಆಯೋಗವನ್ನು ರಚನೆ ಮಾಡಿ ಅದರ ಮುಖಾಂತರ ವೆಚ್ಚ ನಿರ್ವಹಣೆ ಇರಬಹುದು, ಬಂಡವಾಳ ವೆಚ್ಚ ಇರಬಹುದು, ಸಾರ್ವಜನಿಕ ವೆಚ್ಚದ ಪುನರಾವರ್ತನೆ ಇರಬಹುದು, ಶಾಸಕಾಂಗದ ವೆಚ್ಚದ ಮೇಲೆ ನಿಯಂತ್ರಣ ಇರಬಹುದು, ಮಾನವ ಅಭಿವೃದ್ಧಿ ಇರಬಹುದು, ಸಮಾಜ ಕಲ್ಯಾಣ, ಜಲಸಂಪನ್ಮೂಲ ಮತ್ತು ಇತರ ಆರ್ಥಿಕ ಮೂಲ ಸೌಲಭ್ಯದ ವ್ಯವಸ್ಥೆಗಳಿರಬಹುದು. ಇವೆಲ್ಲವನ್ನೂ ಕೂಡ ಕಾರ್ಯಕ್ರಮದ ಅನುಷ್ಠಾನ ಮತ್ತು ಸೇವಾ ಜೇಷ್ಠತೆಗೆ ಏನೆಲ್ಲಾ ಮಾಡಬಹುದು ಎಂದು ಹೇಳುವಂತಹ ಒಂದು ಸುದೀರ್ಘವಾದಂತಹ ವರದಿಯನ್ನು ಅವರು ಕೊಟ್ಟಿದ್ದಾರೆ. ಸರ್ಕಾರ ಆ ವರದಿಗಳನ್ನು ತೆಗೆದುಕೊಂಡ ಮೇಲೆ ಸುಮ್ಮನೆ ಕುಳಿತುಕೊಂಡಿಲ್ಲ. ಕಳೆದ 2010–11ನೇ ಸಾಲಿನ ಬಜೆಟ್‌ನಲ್ಲಿ ನಾನು ಅದೆಲ್ಲವನ್ನೂ ಓದುವುದಿಲ್ಲ, ತಮಗೆ ಬೇಕಾದರೆ ಅದರ ಪ್ರತಿಯನ್ನು ಕಳುಹಿಸಿ ಕೊಡುತ್ತೇನೆ. ವೆಬ್‌ಸೈಟ್‌ನಲ್ಲಿ ಇದಕ್ಕೆ ಸಂಬಂಧಪಟ್ಟಂತಹ ಎಲ್ಲಾ ವಿಷಯಗಳು ಇವೆ. ಪ್ಯಾರ 298, 109, 160, 161, 207, 182, 178, 181, 197, ಈ ರೀತಿ ಕಳೆದ ಬಜೆಟ್‌ನಲ್ಲಿ ಇದನ್ನೆಲ್ಲಾ ತೆಗೆದುಕೊಳ್ಳುವುದಕ್ಕೆ ಬೇಕಾದಂತಹ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಬೇಕಾದಂತಹ ಎಲ್ಲಾ ವ್ಯವಸ್ಥೆಗಳನ್ನು ಮಾಡಿ ಈಗಾಗಲೇ implementation

part ಪ್ರಾರಂಭವಾಗಿದೆ. Karnataka Financial Code ಗೆ amendments ಮಾಡುವುದರ ಬಗ್ಗೆಯೂ ಸಹ ತಾವು ಪ್ರಸ್ತಾಪ ಮಾಡಿದ್ದೀರಿ. ಈಗಾಗಲೇ Karnataka Financial Code ಮತ್ತು Karnataka Treasury Code ಗಳಿಗೆ amendments ತರುವುದಕ್ಕೆ ಒಂದು ಕಮಿಟಿ ರಚನೆಯಾಗಿ ಅದು ಮುಕ್ತಾಯದ ಹಂತದಲ್ಲಿದೆ. ಹಾಗಾಗಿ ತಕ್ಷಣ Karnataka Financial Code ಗೆ amendments ತರುತ್ತೇವೆ. ಆಯೋಗದವರು ನಮಗೇನು ವರದಿಯನ್ನು ಕೊಟ್ಟಿದ್ದಾರೆ ಅದು ದೊಡ್ಡ ಪುಸ್ತಕವಿದೆ, ಅದು ತಮಗೆ ಬೇಕು ಎಂದರೆ ಕಳುಹಿಸಿಕೊಡುತ್ತೇನೆ. Detail ಆಗಿ ಇದನ್ನು ಓದಿ ಹೇಳುವುದರ ಬದಲು ತಮಗೆ ಈ ಪುಸ್ತಕವನ್ನು ಕೊಡುತ್ತೇನೆ. ಮಾನ್ಯ ಸುದರ್ಶನ್‌ರವರು ಮುಂದಿನ ಸಲ ಬರುವಾಗ ಇನ್ನಷ್ಟು ಪ್ರಶ್ನೆಗಳನ್ನು ತಯಾರು ಮಾಡಿಕೊಂಡು ಬರುವುದಕ್ಕಾಗಿ ಈ ಪುಸ್ತಕವನ್ನು ಒದಗಿಸಿ ಕೊಡುತ್ತಿದ್ದೇನೆ. ಇದರ ಬಗ್ಗೆ ನಮ್ಮ ಸರ್ಕಾರ ಗಂಭೀರವಾದಂತಹ ಕೆಲಸ ಕಾರ್ಯಗಳನ್ನು ಹಮ್ಮಿಕೊಂಡಿದೆ. ಇದರಿಂದ ಆರ್ಥಿಕ discipline ಮತ್ತು ಪರಿಣಾಮಕಾರಿಯಾದಂತಹ ಕಾರ್ಯಕ್ರಮದ ವೆಚ್ಚವನ್ನು ತಗ್ಗಿಸುವಂಥದ್ದು ಮತ್ತು ಸಂಪನ್ಮೂಲವನ್ನು ಕ್ರೋಢೀಕರಣ ಮಾಡುವಂಥದ್ದು, ಕಾರ್ಯಕ್ರಮದ ಅನುಷ್ಠಾನದ ದಕ್ಷತೆಯನ್ನು ಹೆಚ್ಚಿಸುವಂಥದ್ದು ಇದಕ್ಕೆಲ್ಲದಕ್ಕೂ ಸೂಕ್ತ ವ್ಯವಸ್ಥೆಗಳನ್ನು ಮಾಡುವಂತಹ ಕೆಲಸವನ್ನು ಮಾಡಿದ್ದೇವೆ. ಖಂಡಿತವಾಗಿಯೂ ಇದರ ಅನುಷ್ಠಾನಗಳನ್ನು ಮುಂದಿನ ದಿವಸದಲ್ಲಿ ಮಾಡುತ್ತೇವೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಲಿಚ್ಛಿಸುತ್ತೇನೆ.

**ಸಭಾಪತಿಯವರು:-** ಈಗ ಪ್ರಶ್ನೋತ್ತರ ಅವಧಿ ಮುಗಿದಿದೆ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

## (ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

**ಡಾ|| ವಿ.ಎಸ್. ಆಚಾರ್ಯ (ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ ಸಮೂಹ 4ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 58 ಪ್ರಶ್ನೆಗಳ ಪೈಕಿ 48 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

## ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವ ಬಗ್ಗೆ

### 04; ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ)

ಅ) ರಾಜ್ಯದಲ್ಲಿ ಕಲ್ಲಪುಡಿ ಮಾಡುವ ಘಟಕಗಳ (ಕ್ರಷರ್) ನಿಯಂತ್ರಣ ಕಾಯ್ದೆಯನ್ನು ಯಾವ ದಿನಾಂಕದಿಂದ ಜಾರಿಗೊಳಿಸಲಾಗಿದೆ;

ಆ) ಈ ಕಾನೂನಿನಡಿ ನಿಯಮಗಳನ್ನು ರಚಿಸಲಾಗಿದೆಯೆ;

ಇ) ಹಾಗಿದ್ದಲ್ಲಿ, ಕಲ್ಲುಪುಡಿ ಮಾಡುವ ಘಟಕಗಳಿಗೆ ರಕ್ಷಣಾ ವಲಯ ನಿಗದಿಪಡಿಸಲು ಜಿಲ್ಲಾಡಳಿತಗಳು ಯಾವ ಕ್ರಮ ಕೈಗೊಂಡಿವೆ;

ಈ) ಧಾರವಾಡ ಜಿಲ್ಲೆಯಲ್ಲಿ ಕಲ್ಲುಪುಡಿ ಮಾಡುವ ಎಷ್ಟು ಘಟಕಗಳು ಈ ಕಾನೂನಿನನ್ವಯ ಕಾರ್ಯ ನಿರ್ವಹಿಸುತ್ತಿವೆ;

ಉ) ಕಾನೂನು ಹಾಗೂ ನಿಯಮಗಳನ್ನು ಉಲ್ಲಂಘಿಸಿದ ಘಟಕಗಳ ವಿರುದ್ಧ ಜಿಲ್ಲಾಡಳಿತ ಕೈಗೊಂಡ ಕ್ರಮಗಳೇನು?

### ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಯವರು)

ಅ) ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ ಅಧಿನಿಯಮ 2011ನ್ನು ಅಧಿಸೂಚನೆ ಸಂಖ್ಯೆ: ಸಂವ್ಯಾ ಶಾಇ/20 ಶಾಸನ 2011, ದಿನಾಂಕ:05–01–2012 ರಂದು ಜಾರಿಗೊಳಿಸಲಾಗಿದೆ.

ಆ) ಈ ಅಧಿನಿಯಮದನ್ವಯ ನಿಯಮಾವಳಿಗಳನ್ನು ರಚಿಸುವ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ.

ಇ) ಜಿಲ್ಲಾಡಳಿತಗಳು ಕಲ್ಲುಪುಡಿ ಮಾಡುವ ಘಟಕಗಳಿಗಾಗಿ ಸುರಕ್ಷಿತ ವಲಯಗಳನ್ನು ಗುರುತಿಸುವ ಪ್ರಕ್ರಿಯೆ ಚಾಲನೆಯಲ್ಲಿದ್ದು, ನಿಯಮಾವಳಿಗಳನ್ನು ರಚಿಸಿದ ನಂತರ ಅದರನ್ವಯ ಅಗತ್ಯ ಕ್ರಮವಹಿಸಲಾಗುವುದು

ಈ) ಪ್ರಸ್ತುತ 124 ಕಲ್ಲುಪುಡಿ ಮಾಡುವ ಘಟಕಗಳು ಕಾರ್ಯ ನಿರ್ವಹಿಸುತ್ತಿದೆ.

ಉ) ಈಗ ಚಾಲ್ತಿಯಲ್ಲಿರುವ ಜಲ್ಲಿ ಕ್ರಷರ್ ಘಟಕಗಳು ದಿನಾಂಕ: 07-09-2011ರ ಅಧ್ಯಾದೇಶದನ್ವಯ ಸುರಕ್ಷಿತ ವಲಯಗಳನ್ನು ಗುರುತಿಸುವವರೆಗೆ ಕಾರ್ಯ ನಿರ್ವಹಿಸಲು ಅವಕಾಶವಿದ್ದು ನಿಯಮಗಳನ್ನು ರಚಿಸುವ ಪ್ರಕ್ರಿಯೆ ಪೂರ್ಣಗೊಂಡ ನಂತರ ನಿಯಮ ಉಲ್ಲಂಘಿಸುವ ಘಟಕಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು.

**ಹೊರಗುತ್ತಿಗೆಯ ಮೇಲೆ ಸಿಬ್ಬಂದಿ ನೇಮಿಸುವ ಪದ್ಧತಿ ಕೈಬಿಡುವ ಬಗ್ಗೆ**

**05; ಶ್ರೀ ಬಸವರಾಜ್ ಹೊರಟ್ಟಿ (ಶಿಕ್ಷಕರ ಕ್ಷೇತ್ರ)**

ಅ) ರಾಜ್ಯದಲ್ಲಿ ಡಿಸೆಂಬರ್ 2011 ರವರೆಗೆ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು [ಇಲಾಖಾವಾರು ಮಾಹಿತಿ ನೀಡುವುದು]

ಆ) ಈ ಹುದ್ದೆಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; [ಇಲಾಖಾವಾರು ಮಾಹಿತಿ ನೀಡುವುದು]

ಇ) ಹೊರಗುತ್ತಿಗೆ ಮೇಲೆ ಸಿಬ್ಬಂದಿ ನೇಮಕಾತಿ ಮಾಡುವ ಅನಿಷ್ಠ ಪದ್ಧತಿಯಿಂದ ನಿರುದ್ಯೋಗಿ ಯುವಕರ ಭವಿಷ್ಯದ ಮೇಲೆ ಆಗುತ್ತಿರುವ ದುಷ್ಪರಿಣಾಮಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಹೊರಗುತ್ತಿಗೆ ಮೇಲೆ ಸಿಬ್ಬಂದಿ ನೇಮಿಸುವ ವ್ಯವಸ್ಥೆ ರದ್ದುಪಡಿಸಲು ಸರಕಾರ ಸಕಾರಾತ್ಮಕವಾಗಿ ಚಿಂತನೆ ನಡೆಸಿದೆಯೇ?

ಉ) ಯಾವ ದಿನಾಂಕದಿಂದ ಹೊರಗುತ್ತಿಗೆ ಪದ್ಧತಿಯನ್ನು ಸಂಪೂರ್ಣವಾಗಿ ನಿಷೇಧಿಸಲಾಗುವುದು?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯ ಮಂತ್ರಿಗಳು)**

ಅ) ವಿವಿಧ ಇಲಾಖೆಗಳಲ್ಲಿನ ಖಾಲಿ ಇರುವ ಹುದ್ದೆಗಳ ಸಂಖ್ಯೆ 1,42,330. ಇಲಾಖಾವಾರು ವಿವರಗಳನ್ನು ಅನುಬಂಧ -1 ರಲ್ಲಿ ನೀಡಲಾಗಿದೆ.

ಆ) ಕರ್ನಾಟಕ ಆಡಳಿತ ಸುಧಾರಣಾ ಆಯೋಗದ ಶಿಫಾರಸ್ಸಿನನ್ವಯ ಇಲಾಖೆಗಳಲ್ಲಿ ದಿನಾಂಕ 01–04–2000 ರಲ್ಲಿ ಖಾಲಿ ಇದ್ದ ಹುದ್ದೆಗಳ ಪೈಕಿ ಶೇಕಡಾ 80 ರಷ್ಟು ಹುದ್ದೆಗಳನ್ನು ರದ್ದುಗೊಳಿಸಲಾಗಿದೆ. ವಿವರ ಅನುಬಂಧ–2 ರಲ್ಲಿ ನೀಡಲಾಗಿದೆ. ಈ ಸಂಬಂಧ ಸರ್ಕಾರದ ಉನ್ನತ ಮಟ್ಟದ ಸಮಿತಿಯ ನಿರ್ಣಯದಂತೆ ಕೇವಲ "ಗ್ರೂಫ್–ಸಿ" ನಲ್ಲಿ ವಾಹನ ಚಾಲಕರು ಮತ್ತು ಗ್ರೂಫ್–ಡಿ ಹುದ್ದೆಗಳನ್ನು ಬಾಹ್ಯಮೂಲಗಳ ಮುಖಾಂತರ ಪೂರೈಸಬೇಕೆಂದು ದಿನಾಂಕ 26–07–2005ರ ಸುತ್ತೋಲೆ ಸಂಖ್ಯೆ ಸಿಆಸುಇ 137 ಈಕಾಅ 2005 ರಲ್ಲಿ ಸೂಚಿಸಲಾಗಿದೆ.

ಇ) ಬಂದಿದೆ.

ಈ) ಪರಿಶೀಲನೆಯಲ್ಲಿದೆ

ಉ) ಮೇಲಿನ ಈ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಅನುಬಂಧ-1

Nos. In Units

**Employees Strength**
**State Sector & District Sector**
**Plan & Non Plan**

| Sl No. | Department | 2011-12 | | | | | |
|---|---|---|---|---|---|---|---|
| | | Officers-Sanctioned | Staff-Sanctioned | Sanctioned Posts | Officers-Vacant | Staff-Vacant | Vacant Posts |
| 1 | Legislature Secretriat | 146 | 1086 | 1232 | 0 | 0 | 0 |
| 2 | Governor's Secretariat | 17 | 139 | 156 | 3 | 26 | 29 |
| 3 | Judiciary | 2228 | 20239 | 22467 | 282 | 7234 | 7516 |
| 4 | Commercial Tax | 1124 | 6454 | 7578 | 165 | 1186 | 1351 |
| 5 | Revenue | 593 | 26619 | 27212 | 149 | 5959 | 6108 |
| 6 | Stamps & Registration | 195 | 1446 | 1641 | 28 | 125 | 153 |
| 7 | Excise | 299 | 4863 | 5162 | 180 | 2154 | 2334 |
| 8 | Motor Vehicles | 174 | 2294 | 2468 | 19 | 437 | 456 |
| 9 | Karnataka Public Service Commission | 67 | 265 | 332 | 6 | 69 | 75 |
| 10 | Secretariat | 529 | 2243 | 2772 | 44 | 460 | 504 |
| 11 | Treasury & SAD | 417 | 2963 | 3380 | 58 | 535 | 593 |
| 12 | Police | 2131 | 93340 | 95471 | 411 | 16539 | 16950 |
| 13 | Jails | 69 | 2136 | 2205 | 21 | 736 | 757 |
| 14 | Government Press | 33 | 1961 | 1994 | 5 | 871 | 876 |
| 15 | Public Works | 2095 | 11612 | 13707 | 396 | 1577 | 1973 |
| 16 | Education | 26683 | 244816 | 271499 | 5596 | 18922 | 24518 |
| 17 | Technical Education | 3555 | 6057 | 9612 | 2031 | 4570 | 6601 |
| 18 | Youth Services | 65 | 1121 | 1186 | 28 | 319 | 347 |
| 19 | Kannada & Culture | 206 | 2017 | 2223 | 73 | 340 | 413 |
| 20 | Medical Education | 8958 | 52102 | 61060 | 2494 | 17919 | 20413 |
| 21 | Health & Family Welfare | 746 | 13564 | 14310 | 182 | 2493 | 2675 |
| 22 | Information & Publicity | 78 | 487 | 565 | 8 | 58 | 66 |
| 23 | Social Welfare | 426 | 22887 | 23313 | 135 | 10411 | 10546 |
| 24 | Labor & Employement | 407 | 5840 | 6247 | 67 | 2175 | 2242 |
| 25 | Women & Children Development | 526 | 7896 | 8422 | 103 | 1886 | 1989 |
| 26 | Agriculture & Horticulture | 3368 | 16005 | 19373 | 1387 | 5976 | 7363 |
| 27 | Animal Husbandry | 1412 | 15863 | 17275 | 462 | 4902 | 5364 |
| 28 | Fisheries | 170 | 1087 | 1257 | 46 | 451 | 497 |
| 29 | Forest | 475 | 12153 | 12628 | 24 | 2172 | 2196 |
| 30 | Food & Civil Supplies | 211 | 1763 | 1974 | 42 | 316 | 358 |
| 31 | Co-operation | 321 | 3572 | 3893 | 60 | 1453 | 1513 |
| 32 | Major Irrigation | 650 | 2804 | 3454 | 174 | 407 | 581 |
| 33 | Minor Irrigation | 611 | 3059 | 3670 | 107 | 400 | 507 |
| 34 | Industries | 885 | 6398 | 7283 | 136 | 958 | 1094 |
| 35 | Tourism | 22 | 138 | 160 | 6 | 47 | 53 |
| 36 | Others | 2802 | 36259 | 39061 | 670 | 12649 | 13319 |
| | Grand Total | 62694 | 633548 | 696242 | 15598 | 126732 | 142330 |

# ಅನುಬಂಧ–೩

## ಹಾರನಹಳ್ಳಿ ರಾಮಸ್ವಾಮಿ ಆಯೋಗದ ಶಿಫಾರಸ್ಸಿನಂತೆ ಶೇ. 20, 50 ಹಾಗೂ 80ರಷ್ಟು ರದ್ದುಗೊಳಿಸಿದ ಹುದ್ದೆಗಳ ವಿವರ

| ಕ್ರಮ ಸಂಖ್ಯೆ | ಇಲಾಖೆ | ದಿನಾಂಕ:1/4/2000ರಂದು ಖಾಲಿಯಿದ್ದ ಹುದ್ದೆಗಳ ಪೈಕಿ ಶೇ.20, 50 ಹಾಗೂ 80 ರಂತೆ ಕಡಿತಗೊಳಿಸಬೇಕಾದ ಹುದ್ದೆಗಳ ಸಂಖ್ಯೆ | | | | | ಈಗಾಗಲೇ ಕಡಿತಗೊಳಿಸಿದ ಹುದ್ದೆಗಳ ಸಂಖ್ಯೆ ಎಷ್ಟು | | | | | ಕಡಿತ ಮಾಡಲು ಬಾಕಿ ಇರುವ ಹುದ್ದೆಗಳ ಸಂಖ್ಯೆ | ಷರಾ |
|---|---|---|---|---|---|---|---|---|---|---|---|---|---|
| | | ಗ್ರೂಪ್–ಎ | ಗ್ರೂಪ್–ಬಿ | ಗ್ರೂಪ್–ಸಿ | ಗ್ರೂಪ್–ಡಿ | ಒಟ್ಟು | ಗ್ರೂಪ್–ಎ | ಗ್ರೂಪ್–ಬಿ | ಗ್ರೂಪ್–ಸಿ | ಗ್ರೂಪ್–ಡಿ | ಒಟ್ಟು | | |
| 1 | ಕೃಷಿ | – | – | 607 | 51 | 658 | 01 | – | 498 | 64 | 563 | – | |
| | ತೋಟಗಾರಿಕೆ ಇಲಾಖೆ | – | – | 17 | 26 | 43 | – | – | 17 | 26 | 43 | – | |
| 2 | ಪಶುಸಂಗೋಪನೆ ಮತ್ತು ಮೀನುಗಾರಿಕೆ | 41 | 57 | 1694 | 193 | 1985 | 41 | 57 | 1694 | 193 | 1985 | = | |
| 3 | ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ | 17 | 129 | 586 | 302 | 1034 | 1 | 59 | 305 | 92 | 457 | 677 | |
| 4 | ಸಹಕಾರ | 09 | 44 | 467 | 596 | 1116 | 0 | 02 | 159 | 146 | 307 | 62 | |
| 5 | ಸಿಆಸುಇ | – | 44 | 531 | 200 | 775 | – | – | – | – | – | ವಿನಾಯಿತಿ ನೀಡಿದೆ. | |
| 6 | ಸಾರ್ವಜನಿಕ ಉದ್ದಿಮೆಗಳ | – | – | – | – | – | – | – | – | – | – | – | |
| 7 | ಶಿಕ್ಷಣ (ಪ್ರಾಥಮಿಕ ಮತ್ತು ಪ್ರೌಢ) | 01 | 03 | 86 | 403 | 493 | 01 | 03 | 86 | 403 | 493 | – | |

| | | | | | | | | | | | | | |
|---|---|---|---|---|---|---|---|---|---|---|---|---|---|
| | ಉನ್ನತ ಶಿಕ್ಷಣ | 01 | 88 | 269 | 401 | 759 | 01 | 88 | 269 | 401 | 759 | – | |
| 8 | ಇಂಧನ | 01 | 0 | 16 | 29 | 46 | 01 | – | 16 | 29 | 46 | – | |
| 9 | ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ | 24 | 37 | 519 | 252 | 832 | 23 | 38 | 519 | 252 | 832 | – | |
| 10 | ಆಹಾರ ಮತ್ತು ನಾಗರೀಕ ಸರಬರಾಜು | – | – | 33 | 42 | 75 | – | – | 47 | 42 | 89 | – | |
| 11 | ಆರ್ಥಿಕ | 106 | 150 | 4238 | 209 | 4703 | 0 | 22 | 348 | 163 | 533 | 3948 | |
| 12 | ವಸತಿ | – | – | – | – | – | – | – | – | – | – | – | – |
| 13 | ಒಳಾಡಳಿತ | 01 | 01 | 89 | 70 | 161 | 01 | 01 | 89 | 70 | 161 | – | |
| 14 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ | – | – | – | – | – | — | – | – | – | – | — | |
| 15 | ಮೂಲಭೂತ ಸೌಲಭ್ಯ | – | – | — | – | – | – | – | – | – | – | – | – |
| 16 | ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ | 10 | 40 | 17 | 01 | 68 | – | – | – | – | – | 68 | |
| 17 | ಕನ್ನಡ ಮತ್ತು ಸಂಸ್ಕೃತಿ | 01 | 05 | 99 | 34 | 139 | – | 03 | 86 | 60 | 149 | – | |
| 18 | ಕಾರ್ಮಿಕ | 206 | 46 | 1078 | 440 | 1770 | 117 | 42 | 599 | 332 | 1090 | – | |
| 19 | ಕಾನೂನು | 0 | 1 | 6 | 8 | 15 | – | 1 | 6 | 8 | 15 | – | |
| 20 | ಲೋಕೋಪಯೋಗಿ | – | – | 17 | 24 | 41 | – | – | 17 | 24 | 41 | – | |
| 21 | ಯೋಜನಾ | 02 | – | 24 | 05 | 31 | 02 | – | 24 | 05 | 31 | – | |
| 22 | ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ | 01 | 03 | 06 | 02 | 12 | 01 | 03 | 06 | 02 | 12 | – | |
| 23 | ಕಂದಾಯ | 3 | 05 | 557 | 685 | 1250 | 3 | 5 | 557 | 685 | 1250 | – | – |

3

| | | | | | | | | | | | | | |
|---|---|---|---|---|---|---|---|---|---|---|---|---|---|
| 24 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ | 78 | 28 | 1303 | 117 | 1526 | 22 | 02 | 556 | 117 | 697 | 642 | |
| 25 | ಸಮಾಜ ಕಲ್ಯಾಣ | 06 | 24 | 936 | 730 | 1696 | 0 | 05 | 582 | 53 | 640 | - | |
| 26 | ಸಾರಿಗೆ | - | - | 40 | 49 | 89 | - | - | 40 | 49 | 89 | - | |
| 27 | ಪ್ರವಾಸೋದ್ಯಮ | - | 04 | 38 | 06 | 48 | - | 04 | 38 | 06 | 48 | 02 | |
| 28 | ನಗರಾಭಿವೃದ್ಧಿ | 16 | 10 | 88 | 4 | 118 | 3 | 2 | 59 | 14 | 78 | - | |
| 29 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | - | 26 | 427 | 338 | 791 | 01 | 10 | 384 | 303 | 698 | - | |
| 30 | ಜಲಸಂಪನ್ಮೂಲ | 124 | 632 | 1963 | 525 | 3244 | 124 | 632 | 1963 | 525 | 3244 | - | |
| 31 | ಸಣ್ಣ ನೀರಾವರಿ | 03 | 0 | 171 | 07 | 181 | 03 | 0 | 148 | 07 | 158 | 23 | |
| 32 | ಯುವಜನ ಸೇವಾ | - | - | 12 | 17 | 29 | - | - | - | - | - | 29 | |
| | ಒಟ್ಟು | 651 | 1377 | 15,934 | 5,766 | 23,728 | 346 | 979 | 9112 | 4071 | 14,508 | 5451 | |

**ಬಿ.ಬಿ.ಎಂ.ಪಿ. ವತಿಯಿಂದ ನೆಟ್ಟಿರುವ ಸಸಿಗಳ ಕುರಿತು**

**18; ಡಾ॥ ಎಂ.ಆರ್. ದೊರೆಸ್ವಾಮಿ (ನಾಮ ನಿರ್ದೇಶಿತರು)**

ಅ) ಬೆಂಗಳೂರು ನಗರದಲ್ಲಿ 2010–11ನೇ ಸಾಲಿನಲ್ಲಿ ನಗರ ಪಾಲಿಕೆ ವತಿಯಿಂದ ರಸ್ತೆ ಬದಿಯಲ್ಲಿ ಹೊಸದಾಗಿ ನೆಟ್ಟಿರುವ ಸಸಿಗಳ ಸಂಖ್ಯೆ ಎಷ್ಟು:

ಆ) ಈ ಸಸಿಗಳ ರಕ್ಷಣೆಗೆ (Trees Guard) ಗಳನ್ನು ಕೆಲವು ಕಡೆ ಬಳಸದೇ ಇರುವುದು ಹಾಗೂ ನೆಟ್ಟಿರುವ ಸಸಿಗಳಿಗೆ ನೀರು ಹಾಯಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಇ) ಬಂದಿದ್ದಲ್ಲಿ, ಸಸಿಗಳನ್ನು ರಕ್ಷಿಸಲು ಕೈಗೊಂಡಿರುವ ಕ್ರಮಗಳೇನು?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಯವರು)**

ಅ) ಬೆಂಗಳೂರು ನಗರದಲ್ಲಿ 2010–11ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆವತಿಯಿಂದ ರಸ್ತೆ ಬದಿಯಲ್ಲಿ ಹೊಸದಾಗಿ 3.11 ಲಕ್ಷ ಸಸಿಗಳನ್ನು ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯ ಬಡಾವಣೆಗಳಾದ ಅಂಜನಾಪುರ, ಬನಶಂಕರಿ 6ನೇ ಹಂತ ಮತ್ತು ಎರ್.ಎಂ. ವಿಶ್ವೇಶ್ವರಯ್ಯ ಬಡಾವಣೆಯ ರಸ್ತೆ ಬದಿಯಲ್ಲಿ 23,150 ಸಸಿಗಳನ್ನು ನೆಡಲಾಗಿರುತ್ತದೆ.

ಆ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಸಸಿಗಳಿಗೆ ಬಿದಿರಿನ ವೃಕ್ಷ ಕವಚಗಳನ್ನು ಅಳವಡಿಸಲಾಗಿದ್ದು, ಕೆಲವೊಂದು ಭಾಗಗಳಲ್ಲಿ ದನಕರುಗಳಿಂದ ವೃಕ್ಷ ಕವಚಗಳು ಹಾಳಾಗಿದ್ದು, ನೆಟ್ಟಿರುವ ಸಸಿಗಳಿಗೆ ಕಾಲಕಾಲಕ್ಕೆ ಅಗತ್ಯತೆ ಆಧರಿಸಿ ನೀರನ್ನು ಹಾಯಿಸಲಾಗುತ್ತಿದೆ. ಬಿ.ಡಿ.ಎ.ಗೆ ಸಂಬಂಧಿಸಿದಂತೆ ನೆಡುತೋಪಿನ ನಿರ್ಮಾಣ ಕಾರ್ಯದ ಅಂದಾಜು ಪಟ್ಟಿಯಲ್ಲಿ ಟ್ರೀ ಗಾರ್ಡ್‌ಗಳ ಅಳವಡಿಕೆಗೆ ಹಣ ನಿಗಧಿ ಮಾಡಿರುವುದಿಲ್ಲವಾದ್ದರಿಂದ ಟ್ರೀ ಗಾರ್ಡ್‌ಗಳನ್ನು ಅಳವಡಿಸಿರುವುದಿಲ್ಲ ಹಾಗೂ ನೆಟ್ಟ ಎಲ್ಲಾ ಸಸಿಗಳಿಗೂ ನೀರು ಹಾಯಿಸುವ ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸಿದೆ.

ಇ) ಸಸಿಗಳನ್ನು ರಕ್ಷಿಸಲು ಕಾವಲುಗಾರರನ್ನು ನೇಮಿಸಿಕೊಂಡಿದ್ದು, ಸಕಾಲದಲ್ಲಿ ಗಿಡಗಳಿಗೆ ನೀರಿನ ಟ್ಯಾಂಕರ್ ಮೂಲಕ ಗಿಡಗಳ ಅಗತ್ಯಕ್ಕನುಗುಣವಾಗಿ ನೀರುಣಿಸಲಾಗುತ್ತಿದೆ.

**ಬಿ.ಬಿ.ಎಂ.ಪಿ. ವ್ಯಾಪ್ತಿಯ ಸುಬ್ರಹ್ಮಣ್ಯಪುರ ಕೆರೆ ಕುರಿತು**

**20 ಡಾ॥ ಎಂ.ಆರ್. ದೊರೆಸ್ವಾಮಿ (ನಾಮ ನಿರ್ದೇಶಿತರು)**

**ಅ)** ಬಿಬಿಎಂಪಿ ವ್ಯಾಪ್ತಿಗೆ ಒಳಪಟ್ಟಿರುವ ಸುಬ್ರಹ್ಮಣ್ಯಪುರ ಕೆರೆಯು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

**ಆ)** ಈ ಕೆರೆಯು ಈಗಾಗಲೇ ಒತ್ತುವರಿಯಾಗಿರುವುದನ್ನು ತೆರವುಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಈ ಕೆರೆಯನ್ನು ಸುಸ್ಥಿತಿಗೆ ತರಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಯವರು)**

**ಅ)** ಬಂದಿದೆ.

**ಆ)** ಕೆರೆಯಲ್ಲಿ ಒತ್ತುವರಿ ಇರುವುದು ಕಂಡು ಬಂದಿದ್ದು, ಕೆರೆಯನ್ನು ಖಾಸಗಿ ಸಂಸ್ಥೆಯಾದ ಮೆಸ: ಆಲ್ಕಾನ್ ರವರಿಂದ ಸರ್ವೆ ಮಾಡಿಸಿ ಸರ್ವೆ ನಕ್ಷೆಗೆ ಬೆಂಗಳೂರು ದಕ್ಷಿಣ ತಾಲ್ಲೂಕು ತಹಶೀಲ್ದಾರ್‌ರಿಂದ ದೃಢೀಕರಿಸಲಾಗಿದೆ. ಕೆರೆ ಒತ್ತುವರಿ ಮಾಡಿರುವವರನ್ನು ಗುರ್ತಿಸಿದ್ದು, ಸದರಿಯವರಿಗೆ ಭೂ ಕಂದಾಯ ಅಧಿನಿಯಮ 1964 ಪ್ರಕರಣ 94/3 ಅಡಿ ಬೆಂಗಳೂರು ದಕ್ಷಿಣ ತಾಲ್ಲೂಕು ತಹಶೀಲ್ದಾರ್‌ರವರಿಂದ ತೆರವುಗೊಳಿಸುವ ನೋಟಿಸನ್ನು ಜಾರಿ ಮಾಡಲಾಗಿರುತ್ತದೆ. ಈ ಬಗ್ಗೆ ತಹಶೀಲ್ದಾರ್ ರವರ ಕಛೇರಿಯಲ್ಲಿ ಫಿರ್ಯಾದು ನಡೆಯುತ್ತಿದ್ದು, ಅಂತಿಮ ಆದೇಶವನ್ನು ತಹಶೀಲ್ದಾರ್ ರವರು ಹೊರಡಿಸಿದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಇ) ಒತ್ತುವರಿ ಇಲ್ಲದ ಭಾಗಕ್ಕೆ ಈಗಾಗಲೇ ಸುಮಾರು 300 ಮೀಟರ್ ಜಾಗಕ್ಕೆ ಚೈನ್‌ಲಿಂಕ್ ಫೆನ್ಸಿಂಗ್ ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆ. ಒತ್ತುವರಿಯನ್ನು ತೆರವುಗೊಳಿಸಿದ ನಂತರ ಕೆರೆಯನ್ನು ಜೀರ್ಣೋದ್ಧಾರ ಮಾಡಲು ಕ್ರಮ ಕೈಗೊಳ್ಳಲಾಗುವುದು.

**ಕೊಡಗು ಜಿಲ್ಲಾಧಿಕಾರಿಯವರ ನೂತನ ಕಛೇರಿ ನಿರ್ಮಾಣದ ಬಗ್ಗೆ**

**30; ಶ್ರೀ ಟಿ. ಜಾನ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರು)**

ಅ) ಕೊಡಗು ಜಿಲ್ಲೆಯ ಜಿಲ್ಲಾಧಿಕಾರಿಯವರ ನೂತನ ಕಛೇರಿಯನ್ನು ನಿರ್ಮಾಣ ಮಾಡಲು ಬಿಡುಗಡೆಗೊಂಡಿರುವ ಮೊತ್ತವೆಷ್ಟು;

ಆ) ಜಿಲ್ಲಾಧಿಕಾರಿಯವರ ಈ ಕಛೇರಿಯನ್ನು ಕಟ್ಟಲು ಗುರುತಿಸಲಾದ ಜಾಗ ಯಾವುದು;

ಇ) ಗುರುತಿಸಲಾದ ಜಾಗವು ಜಿಲ್ಲಾಧಿಕಾರಿಗಳ ಕಛೇರಿ ನಿರ್ಮಾಣ ಮಾಡಲು ಸೂಕ್ತವಾದ ಸ್ಥಳವೇ;

ಈ) ಗುರುತಿಸಲಾದ ಈ ಜಾಗದಲ್ಲಿ ಈ ಕಛೇರಿಯು ನಿರ್ಮಾಣಗೊಂಡರೆ ಮುಂದೆ ಆಗಬಹುದಾದ ತೊಂದರೆ ಮತ್ತು ಅನಾಹುತಗಳ ಬಗ್ಗೆ ಸರಕಾರವು ಚಿಂತನೆ ನಡೆಸಿದೆಯೇ? (ಪೂರ್ಣ ಮಾಹಿತಿಯನ್ನು ನೀಡುವುದು)

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)**

ಅ) ರೂ. 315.85 ಲಕ್ಷ.

ಆ) ಮಡಿಕೇರಿ ನಗರದ ಕರ್ಣಂಗೇರಿಯ ಸರ್ವೆ ನಂ. 471/1 ರ 2.20 ಎಕರೆ.

ಇ) ಹೌದು.

ಈ) ಗುರುತಿಸಲಾದ ಜಾಗವು ಹೆದ್ದಾರಿಗಳು ಬಂದು ಸೇರುವ ಕೇಂದ್ರ, ಸ್ಥಳವಾಗಿದ್ದು ಸಾರ್ವಜನಿಕರಿಗೆ ಅನುಕೂಲಕರವಾದ ಸ್ಥಳವಾಗಿರುತ್ತದೆ, ಆದಕಾರಣ ಯಾವುದೇ ತೊಂದರೆ/ಅನಾಹುತಗಳಿಗೆ ಆಸ್ಪದವಿರುವುದಿಲ್ಲ.

**ಕ್ರಿಶ್ಚಿಯನ್ ಸಮುದಾಯದ ಅಭಿವೃದ್ದಿಗೆ ಬಜೆಟ್‌ನಲ್ಲಿ ಕಾಯ್ದಿರಿಸಿದ ಹಣದ ಬಗ್ಗೆ.**

**32; ಶ್ರೀ ಟಿ. ಜಾನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) 2011–12ನೇ ಸಾಲಿನ ಬಜೆಟ್‌ನಲ್ಲಿ ಕ್ರಿಶ್ಚಿಯನ್ ಸಮುದಾಯದ ಅಭಿವೃದ್ಧಿಗೆ ಮೀಸಲಿಟ್ಟ ರೂ.50.00 ಕೋಟಿಗಳಲ್ಲಿ ಸಮುದಾಯದ ಅಭಿವೃದ್ಧಿಗೆ ಕೈಗೊಂಡ ಕಾರ್ಯಕ್ರಮಗಳು ಯಾವುವು; (ಜಿಲ್ಲಾವಾರು, ತಾಲ್ಲೂಕುವಾರು ವಿವರ ಒದಗಿಸುವುದು)

ಆ) ಸದರಿ ಸಮುದಾಯದ ಅಭಿವೃದ್ಧಿಗೆ ಹಣ ಮಂಜೂರಾತಿಗೆ ಸರ್ಕಾರ ಹೊರಡಿಸಿದ ಮಾರ್ಗಸೂಚಿಗಳು ಯಾವುವು;

ಇ) ಬಜೆಟ್‌ನಲ್ಲಿ ಕಾಯ್ದಿರಿಸಿದ ಹಣವನ್ನು ಮಂಜೂರಾತಿ ಮಾಡಲು ಪ್ರತ್ಯೇಕ ಸಮಿತಿಯನ್ನು ರಚಿಸಲಾಗಿದೆಯೇ;

ಈ) ಹಾಗಿದ್ದಲ್ಲಿ ಸಮಿತಿಯ ಪದಾಧಿಕಾರಿಗಳ ವಿವರಗಳನ್ನು ನೀಡುವುದು?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)**

ಅ) 2011–12ನೇ ಸಾಲಿನ ಬಜೆಟ್‌ನಲ್ಲಿ ಕ್ರಿಶ್ಚಿಯನ್ ಸಮುದಾಯದ ಅಭಿವೃದ್ಧಿಗಾಗಿ ಮೀಸಲಿಟ್ಟ ರೂ.50.00 ಕೋಟಿಗಳಲ್ಲಿ ಸಮುದಾಯದ ಅಭಿವೃದ್ಧಿಗಾಗಿ ಕೈಗೊಂಡ ಕಾರ್ಯಕ್ರಮಗಳ ವಿವರ ಕೆಳಕಂಡಂತಿದೆ.

1) ಕ್ರಿಶ್ಚಿಯನ್ ಸಮುದಾಯಕ್ಕೆ ಪ್ರತ್ಯೇಕವಾಗಿ ಸಮುದಾಯ ಭವನಗಳ ನಿರ್ಮಾಣ
2) ಅರಿವು ಯೋಜನೆ
3) ಶ್ರಮ ಶಕ್ತಿ ಯೋಜನೆ
4) ಸಣ್ಣ ಸಾಲದ ಯೋಜನೆ

5) ಕೌಶಲ್ಯ ಅಭಿವೃದ್ಧಿ ಯೋಜನೆ
6) ವಿದ್ಯಾರ್ಥಿಗಳಿಗೆ ಉತ್ತೇಜನ ಕಾರ್ಯಕ್ರಮ
7) ಚರ್ಚ್‌ಗಳ ದುರಸ್ತಿ ಮತ್ತು ನವೀಕರಣಗೊಳಿಸುವುದಕ್ಕೆ ಅನುದಾನ
8) ಅನಾಥಾಶ್ರಮ ಮತ್ತು ವೃದ್ಧಾಶ್ರಮಗಳ ಮೂಲ ಸೌಕರ್ಯಗಳಿಗೆ ಅನುದಾನ
9) ಕ್ರಿಶ್ಚಿಯನ್ ಸಮುದಾಯದವರು ಮನೆ ಕಟ್ಟಲು ಗರಿಷ್ಠ ರೂ.5.00 ಲಕ್ಷ ಮತ್ತು ಅದಕ್ಕಿಂತ ಕಡಿಮೆ ಇರುವ ಸಾಲಕ್ಕೆ ರೂ.1.00 ಲಕ್ಷಕ್ಕೆ ಮೀರದಂತೆ ಬಡ್ಡಿಯಲ್ಲಿ ರಿಯಾಯಿತಿ

ಸದರಿ ಕಾರ್ಯಕ್ರಮಗಳಲ್ಲಿ ಜಿಲ್ಲಾವಾರು ಗುರಿಗಳನ್ನು ನಿಗದಿಪಡಿಸಿರುವ ವಿವರ ಲಗತ್ತಸಿದೆ.

ಆ)

1. ಚರ್ಚ್‌ಗಳ ದುರಸ್ತಿ ಮತ್ತು ನವೀಕರಣಗೊಳಿಸುವುದಕ್ಕೆ ಅನುದಾನ ಬಿಡುಗಡೆ ಮಾಡುವ ಕಾರ್ಯಕ್ರಮಕ್ಕೆ ಸರ್ಕಾರವು ಮಾರ್ಗಸೂಚಿಯನ್ನು ಹೊರಡಿಸಲಾಗಿದೆ. (ಪ್ರತಿ ಲಗತ್ತಿಸಿದೆ)
2. ಅನಾಥಶ್ರಮ ಮತ್ತು ವೃದ್ಧಾಶ್ರಮಗಳ ಮೂಲ ಸೌಕರ್ಯಗಳಿಗೆ ಸರ್ಕಾರವು ಮಾರ್ಗಸೂಚಿಯನ್ನು ಹೊರಡಿಸಲಾಗಿದೆ. (ಪ್ರತಿ ಲಗತ್ತಿಸಿದೆ)
3. ಕ್ರಿಶ್ಚಿಯನ್ ಸಮುದಾಯದವರು ಮನೆಕಟ್ಟಲು ಗರಿಷ್ಠ ರೂ.5.00 ಲಕ್ಷ ಮತ್ತು ಅದಕ್ಕಿಂತ ಕಡಿಮೆ ಇರುವ ಸಾಲಕ್ಕೆ ರೂ.1.00 ಲಕ್ಷಕ್ಕೆ ಮೀರದಂತೆ ಬಡ್ಡಿಯಲ್ಲಿ ರಿಯಾಯಿತಿ ಈ ಯೋಜನೆಗೆ ಸರ್ಕಾರವು ಮಾರ್ಗಸೂಚಿಯನ್ನು ಹೊರಡಿಸಲಾಗಿದೆ. (ಪ್ರತಿ ಲಗತ್ತಸಿದೆ)

ಇ) ಹೌದು.

ಈ) ಸಮಿತಿಯ ಪದಾಧಿಕಾರಿಗಳ ವಿವರವನ್ನು ಲಗತ್ತಿಸಿದೆ.

## ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ

### 2011–12ನೇ ಸಾಲಿಗೆ ಕ್ರಿಶ್ಚಿಯನ್ ಸಮುದಾಯದ ಅಭಿವೃದ್ಧಿ ಕಾರ್ಯಕ್ರಮದಡಿ ಕ್ರಿಶ್ಚಿಯನ್ ವಿದ್ಯಾರ್ಥಿಗಳಿಗೆ ಉತ್ತೇಜನ ಕಾರ್ಯಕ್ರಮದಡಿಯಲ್ಲಿ ನಿಗದಿಪಡಿಸಿರುವ ಜಿಲ್ಲಾವಾರು ತಾತ್ಕಾಲಿಕ ಆರ್ಥಿಕ ಗುರಿ

(ರೂ ಲಕ್ಷಗಳಲ್ಲಿ)

| ಕ್ರ.ಸಂ | ಜಿಲ್ಲೆ | ಆರ್ಥಿಕ ಗುರಿ |
|---|---|---|
| 1 | ಬೆಂಗಳೂರು(ನ) | 62.00 |
| 2 | ಬೆಂಗಳೂರು(ಗ್ರಾ) | 3.00 |
| 3 | ಬಾಗಲಕೋಟೆ | 2.00 |
| 4 | ಬೆಳಗಾವಿ | 4.40 |
| 5 | ಬಳ್ಳಾರಿ | 7.00 |
| 6 | ಬೀದರ್ | 30.00 |
| 7 | ಬಿಜಾಪುರ | 1.00 |
| 8 | ಚಾಮರಾಜನಗರ | 23.00 |
| 9 | ಚಿಕ್ಕಮಗಳೂರು | 25.00 |
| 10 | ಚಿತ್ರದುರ್ಗಾ | 2.00 |
| 11 | ಚಿಕ್ಕಬಳ್ಳಾಪುರ | 7.00 |
| 12 | ದಕ್ಷಿಣ ಕನ್ನಡ | 90.00 |
| 13 | ದಾವಣಗೆರೆ | 4.00 |
| 14 | ಧಾರವಾಡ | 18.00 |
| 15 | ಗದಗ | 3.51 |
| 16 | ಗುಲ್ಬರ್ಗಾ | 3.09 |
| 17 | ಹಾಸನ | 10.00 |
| 18 | ಹಾವೇರಿ | 2.00 |
| 19 | ಕೊಡಗು | 35.00 |
| 20 | ಕೋಲಾರ | 8.00 |
| 21 | ಕೊಪ್ಪಳ | 4.00 |
| 22 | ಮಂಡ್ಯ | 5.00 |
| 23 | ಮೈಸೂರು | 14.00 |
| 24 | ರಾಯಚೂರು | 8.00 |
| 25 | ರಾಮನಗರ | 3.00 |
| 26 | ಶಿವಮೊಗ್ಗ | 18.00 |
| 27 | ತುಮಕೂರು | 5.00 |
| 28 | ಉಡುಪಿ | 63.00 |
| 29 | ಉತ್ತರ ಕನ್ನಡ | 35.00 |
| 30 | ಯಾದಗಿರಿ | 5.00 |
| | ಒಟ್ಟು | 500.00 |

**ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ**

**2011–12ನೇ ಸಾಲಿಗೆ ಕ್ರಿಶ್ಚಿಯನ್ ಸಮುದಾಯದ ಅಭಿವೃದ್ಧಿ ಕಾರ್ಯಕ್ರಮದಡಿ ಕ್ರಿಶ್ಚಿಯನ್ ವಿದ್ಯಾರ್ಥಿಗಳಿಗೆ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ನರ್ಸಿಂಗ್ ತರಬೇತಿಗಾಗಿ ನಿಗದಿಪಡಿಸಿರುವ ಜಿಲ್ಲಾವಾರು ತಾತ್ಕಾಲಿಕ ಆರ್ಥಿಕ ಗುರಿ**

(ರೂ ಲಕ್ಷಗಳಲ್ಲಿ)

| ಕ್ರ.ಸಂ | ಜಿಲ್ಲೆ | ಆರ್ಥಿಕ ಗುರಿ |
|---|---|---|
| 1 | ಬೆಂಗಳೂರು(ನ) | 13.50 |
| 2 | ಬೆಂಗಳೂರು(ಗ್ರಾ) | 0.50 |
| 3 | ಬಾಗಲಕೋಟೆ | 0.35 |
| 4 | ಬೆಳಗಾವಿ | 0.90 |
| 5 | ಬಳ್ಳಾರಿ | 1.50 |
| 6 | ಬೀದರ್ | 6.00 |
| 7 | ಬಿಜಾಪುರ | 0.18 |
| 8 | ಚಾಮರಾಜನಗರ | 4.68 |
| 9 | ಚಿಕ್ಕಮಗಳೂರು | 5.13 |
| 10 | ಚಿತ್ರದುರ್ಗಾ | 0.30 |
| 11 | ಚಿಕ್ಕಬಳ್ಳಾಪುರ | 1.38 |
| 12 | ದಕ್ಷಿಣ ಕನ್ನಡ | 18.13 |
| 13 | ದಾವಣಗೆರೆ | 0.65 |
| 14 | ಧಾರವಾಡ | 3.65 |
| 15 | ಗದಗ | 0.70 |
| 16 | ಗುಲ್ಬರ್ಗಾ | 0.63 |
| 17 | ಹಾಸನ | 1.95 |
| 18 | ಹಾವೇರಿ | 0.35 |
| 19 | ಕೊಡಗು | 7.00 |
| 20 | ಕೋಲಾರ | 1.50 |
| 21 | ಕೊಪ್ಪಳ | 0.75 |
| 22 | ಮಂಡ್ಯ | 1.00 |
| 23 | ಮೈಸೂರು | 3.00 |
| 24 | ರಾಯಚೂರು | 1.50 |
| 25 | ರಾಮನಗರ | 0.50 |
| 26 | ಶಿವಮೊಗ್ಗ | 3.50 |
| 27 | ತುಮಕೂರು | 0.65 |
| 28 | ಉಡುಪಿ | 12.50 |
| 29 | ಉತ್ತರ ಕನ್ನಡ | 7.00 |
| 30 | ಯಾದಗಿರಿ | 0.65 |
| | ಒಟ್ಟು | 100.00 |

**ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ:-** ಅಕ್ರಮ-ಸಕ್ರಮ ಸಮಿತಿಯಲ್ಲಿ ಅರ್ಹರಾದವರಿಗೆ ಕೊಡಲಿಕ್ಕೆ ನಮ್ಮದೇನೂ ಆಕ್ಷೇಪ ಇಲ್ಲ. ಆದರೆ ಅಕ್ರಮ-ಸಕ್ರಮದ ಹೆಸರಿನಲ್ಲಿ ಸರ್ಕಾರದ ಭೂಮಿಯನ್ನು ಕೊಳ್ಳೆ ಹೊಡೆಯುವಂಥದ್ದನ್ನು ನಿಲ್ಲಿಸಬೇಕಾಗುತ್ತದೆ. ಇಲ್ಲದಿದ್ದರೆ ನಾಳೆ ಒಂದು ಸೆಂಟ್ ಜಾಗ ಸಹ ಈ ರಾಜ್ಯದಲ್ಲಿ ಸಿಗದೆ ಇರತಕ್ಕಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. 22 ವರ್ಷಗಳಿಂದ ಸತತವಾಗಿ ಈ ಲೂಟಿ ನಡೆಯುತ್ತಿದೆ. ನಾವು ಯಾರಿಗೋಸ್ಕರ ಈ ಅಕ್ರಮ-ಸಕ್ರಮ ಸಮಿತಿಯ ರಚನೆಯ ಬಗ್ಗೆ, ಈ ಭೂ ಮಂಜೂರಾತಿಯ ಬಗ್ಗೆ ಹೋರಾಟ ಮಾಡಿದ್ದೇವೆ ಅವರಿಗೆ ಇದರ ಪ್ರಯೋಜನ ಸಿಗುತ್ತಿಲ್ಲ. ಏಕೆಂದರೆ ಅವರು ಧ್ವನಿ ಇಲ್ಲದವರು. ಇವೊತ್ತು ಯಾರು ಶಕ್ತಿಶಾಲಿಗಳು, ಯಾರು ದುಡ್ಡು ಕೊಡುತ್ತಾರೆ ಅವರಿಗೆ ಮಾತ್ರ ಭೂಮಿಯ ಮಂಜೂರಾತಿ ಆಗುತ್ತಿದೆ. ಆದ್ದರಿಂದ ತಕ್ಷಣ ಅರ್ಹರಿಗೆ ಭೂಮಿಯನ್ನು ಮಂಜೂರು ಮಾಡುವ ವಿಚಾರದಲ್ಲಿ ನಮ್ಮ ಆಕ್ಷೇಪಣೆ ಏನೂ ಇಲ್ಲ. ಆದರೆ ಲೂಟಿ ಮಾಡುವಂತಹವರಿಗೆ ಕಡಿವಾಣ ಹಾಕಬೇಕೆಂಬುದು ನಮ್ಮ ವಿನಂತಿ.

**ಶ್ರೀ ಡಿ.ವಿ. ಸದಾನಂದಗೌಡ:-** ಮಾನ್ಯ ಸಭಾಪತಿಯವರೇ, ಇರಬಹುದು. ಅಂಥದ್ದೇನೂ ಇಲ್ಲ ಎಂದು ನಾನು ಎಲ್ಲವನ್ನೂ ಸಾರಾಸಗಟಾಗಿ ತಳ್ಳಿಹಾಕುವುದಕ್ಕಾಗುವುದಿಲ್ಲ. ಆದರೆ ಇವೆಲ್ಲವನ್ನೂ ಪರಿಶೀಲನೆ ಮಾಡುವುದಕ್ಕಾಗಿಯೇ ಈ ಸಮಿತಿಯನ್ನು ರಚನೆ ಮಾಡಿರುವುದು. ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು ಶಿಫಾರಸ್ಸು ಮಾಡಿದ ನಂತರ ಆ ಶಿಫಾರಸ್ಸಿನ ಆಧಾರದ ಮೇಲೆಯೇ ಅದಕ್ಕೆ ಬೇಕಾದಂತಹ ಹಕ್ಕುಪತ್ರಗಳನ್ನು ವಿತರಿಸುವಂತಹ ಕೆಲಸಕಾರ್ಯಗಳನ್ನು ಮಾಡಲಾಗುತ್ತದೆ. ಆ ರೀತಿ ಎಲ್ಲಿಯಾದರೂ ನಡೆದಿರುವಂಥದ್ದರ ಬಗ್ಗೆ ನಿರ್ದಿಷ್ಟವಾದ ಮಾಹಿತಿ ಇದ್ದರೆ ಅದನ್ನು ನನ್ನ ಗಮನಕ್ಕೆ ತಂದರೆ ಖಂಡಿತವಾಗಿಯೂ ನಾನು ಅದರ ಮೇಲೆ ಕ್ರಮ ತೆಗೆದುಕೊಳ್ಳುವಂತಹ ಕೆಲಸವನ್ನು ಮಾಡುತ್ತೇನೆ.

SL. NO. 04
2.2.12

KARNATAKA MINORITIES DEVELOPMENT CORPORATION LIMITED, BANGALORE-1

TARGET FOR THE YEAR 2011-12 UNDER CHRISTIAN DEVELOPMENT PROGRAMME.

| Sl. No | Name of the District | Arivu (Educational Loan) Scheme Target | | Sharama Shakthi Loan Scheme Target | | Micro Loan Scheme Target | | | TOTAL TARGET | |
|---|---|---|---|---|---|---|---|---|---|---|
| | | Physical | Financial | Physical | Financial | Physical | Financial | | Physical | Financial |
| | | | | | | | Loan | Subsidy | | |
| A | BANGALORE DIVISION | | | | | | | | | |
| 1 | Bangalore-U | 939 | 18780000 | 1232 | 18485000 | 1878 | 14085000 | 4695000 | 4049 | 56045000 |
| 2 | Bangalore -R | 11 | 220000 | 15 | 225000 | 21 | 157500 | 52500 | 47 | 655000 |
| 3 | Ramanagaram | 11 | 220000 | 15 | 225000 | 21 | 157500 | 52500 | 47 | 655000 |
| 4 | Kolar | 40 | 800000 | 53 | 795000 | 80 | 600000 | 200000 | 173 | 2395000 |
| 5 | Chikkaballapur | 40 | 800000 | 53 | 795000 | 80 | 600000 | 200000 | 173 | 2395000 |
| 6 | Chitradurga | 6 | 120000 | 15 | 225000 | 12 | 90000 | 30000 | 33 | 465000 |
| 7 | Tumkur | 19 | 380000 | 25 | 375000 | 38 | 285000 | 95000 | 82 | 1135000 |
| 8 | Shimoga | 65 | 1300000 | 86 | 1290000 | 131 | 982500 | 327500 | 282 | 3900000 |
| 9 | Davangere | 13 | 260000 | 18 | 270000 | 26 | 195000 | 65000 | 57 | 790000 |
| | | | | | | | | | | |
| B | GULBARGA DIVISION | | | | | | | | | |
| | | | | | | | | | | |
| 1 | Raichur | 31 | 620000 | 41 | 615000 | 61 | 457500 | 152500 | 133 | 1845000 |
| 2 | Koppal | 10 | 200000 | 15 | 225000 | 20 | 150000 | 50000 | 45 | 625000 |
| 3 | Bellary | 33 | 660000 | 43 | 645000 | 65 | 487500 | 162500 | 141 | 1955000 |
| 4 | Bidar | 107 | 2140000 | 141 | 2115000 | 213 | 1597500 | 532500 | 461 | 6385000 |
| 5 | Gulbarga | 23 | 460000 | 31 | 465000 | 46 | 345000 | 115000 | 100 | 1385000 |
| 6 | Yadgir | 23 | 460000 | 31 | 465000 | 46 | 345000 | 115000 | 100 | 1385000 |

| | | | | | | | | | |
|---|---|---|---|---|---|---|---|---|---|
| **MYSORE DIVISION** | | | | | | | | | |
| | | | | | | | | | |
| Chickmagalur | 68 | 1360000 | 90 | 1350000 | 136 | 1020000 | 340000 | 294 | 4070000 |
| Hassan | 39 | 780000 | 51 | 765000 | 77 | 577500 | 192500 | 167 | 2315000 |
| Kodagu | 44 | 880000 | 59 | 885000 | 89 | 667500 | 222500 | 192 | 2655000 |
| Mysore | 86 | 1720000 | 114 | 1710000 | 173 | 1297500 | 432500 | 373 | 5160000 |
| Mandya | 20 | 400000 | 26 | 390000 | 40 | 300000 | 100000 | 86 | 1190000 |
| D.Kannada | 409 | 8180000 | 540 | 8100000 | 817 | 6127500 | 2042500 | 1766 | 24450000 |
| Chamarajanagar | 52 | 1040000 | 69 | 1035000 | 105 | 787500 | 262500 | 226 | 3125000 |
| Udupi | 162 | 3240000 | 215 | 3225000 | 325 | 2437500 | 812500 | 702 | 9715000 |
| | | | | | | | | | |
| **BELGAUM DIVISION** | | | | | | | | | |
| | | | | | | | | | |
| Belgaum | 44 | 880000 | 58 | 870000 | 87 | 652500 | 217500 | 189 | 2620000 |
| Bijapur | 5 | 100000 | 15 | 225000 | 12 | 90000 | 30000 | 32 | 445000 |
| Dharwad | 69 | 1380000 | 90 | 1350000 | 137 | 1027500 | 342500 | 296 | 4100000 |
| Uttara kannada | 111 | 2220000 | 147 | 2205000 | 222 | 1665000 | 555000 | 480 | 6645000 |
| Haveri | 5 | 100000 | 15 | 225000 | 12 | 90000 | 30000 | 32 | 445000 |
| Gadag | 8 | 160000 | 15 | 225000 | 16 | 120000 | 40000 | 39 | 545000 |
| Bagalkote | 7 | 140000 | 15 | 225000 | 14 | 105000 | 35000 | 36 | 505000 |
| | | | | | | | | | |
| **TOTAL** | 2500 | 50000000 | 3333 | 50000000 | 5000 | 37500000 | 12500000 | 10833 | 150000000 |

**ಅನುಬಂಧ**

ಕರ್ನಾಟಕದಲ್ಲಿ ವಾಸಿಸುತ್ತಿರುವ ಕ್ರಿಶ್ಚಿಯನ್ ಸಮುದಾಯದವರಿಗೆ ಮನೆ ನಿರ್ಮಾಣ ಮಾಡಲು ಸಹಾಯಾನುದಾನ ನೀಡುವ ಕುರಿತ ಯೋಜನೆಯ ಮಾರ್ಗಸೂಚಿಗಳು.

**ಯೋಜನೆ:**

ಕ್ರಿಶ್ಚಿಯನ್ ಸಮುದಾಯದವರಿಗೆ ಮನೆ ನಿರ್ಮಾಣ ಮಾಡಲು ಗೃಹ ಸಾಲದ ಮೇಲಿನ ಗರಿಷ್ಠ ಒಂದು ಲಕ್ಷ ರೂ.ಗಳ ಬಡ್ಡಿ ರಿಯಾಯಿತಿ ಸಹಾಯಧನದ ಯೋಜನೆ.

**ಉದ್ದೇಶ:**

ರಾಜ್ಯದಲ್ಲಿನ ಕ್ರಿಶ್ಚಿಯನ್ ಸಮುದಾಯದ ಸಮಗ್ರ ಅಭಿವೃದ್ಧಿಗಾಗಿ 2011–12ನೇ ಸಾಲಿನಲ್ಲಿ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಘೋಷಿಸಿರುವಂತೆ ರಾಜ್ಯದ ಕ್ರಿಶ್ಚಿಯನ್ ಸಮುದಾಯದವರ ಜನರು ಮನೆ ನಿರ್ಮಾಣ ಮಾಡಲು ಪಡೆಯುವ ರಾಷ್ಟ್ರೀಕೃತ ಬ್ಯಾಂಕುಗಳು ಹಾಗೂ ಇತರೆ ಅಂಗೀಕೃತ ಹಣಕಾಸು ಸಂಸ್ಥೆಗಳಿಂದ ಗರಿಷ್ಠ ಐದು ಲಕ್ಷ ರೂಪಾಯಿಗಳ ಮತ್ತು ಅದಕ್ಕಿಂತ ಕಡಿಮೆ ಪಡೆದ ಗೃಹ ಸಾಲಕ್ಕೆ ಗರಿಷ್ಠ ಒಂದು ಲಕ್ಷ ರೂಪಾಯಿಗಳಿಗೆ ಮೀರದಂತೆ ಗೃಹ ಸಾಲದ ಮೇಲಿನ ಬಡ್ಡಿಯಲ್ಲಿ ರಿಯಾಯಿತಿ ನೀಡಲು ಉದ್ದೇಶಿಸಲಾಗಿದೆ.

**ಅನುಷ್ಠಾನ:**

ಈ ಯೋಜನೆಯು 1–4–2011ರಿಂದ ಜಾರಿಗೊಳಿಸಲಾಗಿದ್ದು ಈಗಾಗಲೇ 1–4–2007ರಿಂದ ರಾಷ್ಟ್ರೀಕೃತ ಬ್ಯಾಂಕ್ ಮತ್ತು ಅಂಗೀಕೃತ ಹಣಕಾಸು ಸಂಸ್ಥೆಗಳಿಂದ ಗರಿಷ್ಠ ಐದು ಲಕ್ಷ ರೂಪಾಯಿಗಳಿಗೆ ಗೃಹ ಸಾಲ ಪಡೆದಿರುವ ಎಲ್ಲಾ ಅರ್ಹ ಕ್ರಿಶ್ಚಿಯನ್ ಸಮುದಾಯದ ಫಲಾನುಭವಿಗಳು ಈ ಯೋಜನೆಯ ಸೌಲಭ್ಯ ಪಡೆಯಬಹುದು. ಮೊದಲು ಬಂದ ಅರ್ಹ

ಫಲಾನುಭವಿಗಳಿಗೆ ಆಯವ್ಯಯದಲ್ಲಿ ಒದಗಿಸಿರುವ ಅನುದಾನದ ಮಿತಿಯೊಳಗೆ ಸೌಲಭ್ಯ ಒದಗಿಸಲಾಗುವುದು.

**ಯೋಜನೆಯ ಪ್ರಯೋಜನ:**

ಈ ಯೋಜನೆಯಡಿಯಲ್ಲಿ ಕನಿಷ್ಠ 15 ವರ್ಷಗಳಿಂದ ಕರ್ನಾಟಕ ರಾಜ್ಯದ ನಿವಾಸಿಯಾಗಿರುವ ಕ್ರಿಶ್ಚಿಯನ್ ಸಮುದಾಯದವರು ಸದರಿ ಯೋಜನೆಯ ಸೌಲಭ್ಯವನ್ನು ಪಡೆಯಬಹುದು. ಕಳೆದ ಐದು ವರ್ಷಗಳಿಂದ ಈವರೆಗೆ ಐದು ಲಕ್ಷ ರೂಪಾಯಿಗಳ ಮರುಪಾವತಿ ಮಾಡುತ್ತಿರುವ ಗೃಹ ಸಾಲದ ಮೇಲಿನ ಬಡ್ಡಿಯ ಮೊತ್ತವನ್ನು ಗೃಹ ಸಾಲ ಯೋಜನೆಯ ಬಡ್ಡಿ ರಿಯಾಯಿತಿ ಸಹಾಯಾನುದಾನ ಯೋಜನೆಯಡಿಯಲ್ಲಿ ಪಡೆದುಕೊಳ್ಳಬಹುದು. ಬಡ್ಡಿ ಸಹಾಯಾನುದಾನವು ಗೃಹ ಸಾಲ ಮತ್ತು ಬಡ್ಡಿಯನ್ನು ಮರುಪಾವತಿಸುತ್ತಿರುವ ಸಾಲಗಾರರಿಗೆ ಮಾತ್ರ ದೊರೆಯಲಿದೆ.

ಬಡ್ಡಿ ಸಹಾಯಾನುದಾನವನ್ನು ಕ್ರಿಶ್ಚಿಯನ್ ಸಮುದಾಯದವರ ಸಾಲ ವಸೂಲಾತಿ ಆಧಾರದಲ್ಲಿ ಆರ್ಥಿಕ ನೆರವು ನೀಡುವ ಸಂಸ್ಥೆಗಳು ಬಿಲ್ಲನ್ನು ಸಿದ್ದಪಡಿಸಿ ಆಡಿಟರ್‌ರವರಿಂದ ದೃಢೀಕರಿಸಿ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ಸಲ್ಲಿಸಬೇಕು.

**ಅರ್ಹತೆಗಳು:**

1. ಫಲಾನುಭವಿಯು ಕ್ರಿಶ್ಚಿಯನ್ ಸಮುದಾಯದವರಾಗಿದ್ದು ಕನಿಷ್ಠ 15 ವರ್ಷಗಳಿಂದ ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.
2. ನಿವೇಶನ ಹೊಂದಿದ್ದು ವಸತಿ ರಹಿತರಾಗಿರಬೇಕು.
3. ಫಲಾನುಭವಿಯ ಆದಾಯದ ಮಿತಿ ರೂ.1,50,000 ಒಳಗಿರಬೇಕು.
4. ಗೃಹ ಸಾಲದ ಮೊತ್ತ ಗರಿಷ್ಠ ರೂ.5.00 ಲಕ್ಷದ ಮಿತಿ ಒಳಗಿರಬೇಕು.

5. ಫಲಾನುಭವಿಯು ಕಾಲ ಕಾಲಕ್ಕೆ ನಿಗಮವು ನಿರ್ಧರಿಸುವ ನಿಯಮಗಳನ್ನು ಅನುಸರಿಸಬೇಕು.

**ಅನುಷ್ಠಾನಾಧಿಕಾರ:**

ಜಿಲ್ಲಾ ಸಮಿತಿಯು ಫಲಾನುಭವಿಗಳು ಸಲ್ಲಿಸಿರುವ ಪ್ರಸ್ತಾವನೆಯನ್ನು ಮಂಜೂರಾತಿ ಮಾಡುವ ಅಧಿಕಾರ ಹೊಂದಿರುತ್ತದೆ. ಅನುಮೋದನೆ ಪಡೆದಿರುವ ಪ್ರಸ್ತಾವನೆಗಳಿಗೆ ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಇವರು ಅನುಮೋದನೆ ಹಾಗೂ ಮಂಜೂರಾತಿ ನೀಡುವ ಅಧಿಕಾರ ಹೊಂದಿರುತ್ತಾರೆ.

**ಸಹಾಯಾನುದಾನದ ಮಿತಿ:**

ಗೃಹ ಸಾಲದ ಮೇಲೆ ಫಲಾನುಭವಿಗೆ ಗರಿಷ್ಠ ರೂ.1.00 ಲಕ್ಷಗಳವರೆಗೆ ಬಡ್ಡಿ ಸಹಾಯಧನ ರೂಪದಲ್ಲಿ ನೀಡಲಾಗುತ್ತದೆ.

**ಯೋಜನೆಯ ವಿಧಿ ವಿಧಾನ:**

ಈ ಯೋಜನೆಯಡಿಯಲ್ಲಿ ವಿವಿಧ ಬ್ಯಾಂಕುಗಳು/ಹಣಕಾಸು ಸಂಸ್ಥೆಗಳ ಮೂಲಕ ಕ್ರಿಶ್ಚಿಯನ್ ಸಮುದಾಯದ ಜನರು ಮನೆ ಕಟ್ಟಲು ಪಡೆಯುವ ಸಾಲದ ಗರಿಷ್ಠ ಮೊತ್ತ ರೂ. ಐದು ಲಕ್ಷಗಳವರೆಗೆ ಪಡೆದ ಸಾಲಕ್ಕೆ ಬ್ಯಾಂಕು/ಹಣಕಾಸು ಸಂಸ್ಥೆಗಳ ಮೂಲಕ ಬಂದಿರುವ ಪ್ರಸ್ತಾವನೆಗಳಿಗೆ ಸಹಾಯಾನುದಾನ ಬಡ್ಡಿ ರಿಯಾಯಿತಿ ರೂಪದಲ್ಲಿ ನೀಡಲಾಗುವುದು. ಫಲಾನುಭವಿಗಳ ಕುಟುಂಬದ ವಾರ್ಷಿಕ ವರಮಾನ ರೂ.1,50,000/-ಗಳನ್ನು ಮೀರಿರಬಾರದು.

ಸರ್ಕಾರದಿಂದ ಆಯವ್ಯಯದಲ್ಲಿ ಅಳವಡಿಸಿರುವ ಮೊತ್ತಕ್ಕೆ ಅನುಗುಣವಾಗಿ ಹಾಗೂ ಕ್ರೈಸ್ತ ಸಮುದಾಯದ ಆದಾರದ ಮೇಲೆ ಭೌತಿಕ ಮತ್ತು ಆರ್ಥಿಕ ಗುರಿಯನ್ನು ನಿಗದಿಪಡಿಸಲಾಗುತ್ತಿದೆ. ಇದರನ್ವಯ ಆಯಾ ಜಿಲ್ಲಾ ವ್ಯವಸ್ಥಾಪಕರು ಅರ್ಜಿಗಳನ್ನು ಆಹ್ವಾನಿಸುವ ಜಾಹಿರಾತನ್ನು ದಿನಪತ್ರಿಕೆಯಲ್ಲಿ ಪ್ರಕಟಿಸಿ ಅರ್ಜಿಗಳನ್ನು ಆಹ್ವಾನಿಸುತ್ತಾರೆ. ಬಡ್ಡಿ

ಸಹಾಯಾನುದಾನವನ್ನು ಕ್ರಿಶ್ಚಿಯನ್ ಸಮುದಾಯದವರ ಸಾಲ ವಸೂಲಾತಿ ಆಧಾರದಲ್ಲಿ ಆರ್ಥಿಕ ನೆರವು ನೀಡುವ ಸಂಸ್ಥೆಗಳು ಬಿಲ್ಲನ್ನು ಸಿದ್ದಪಡಿಸಿ ಆಡಿಟರ್‌ರವರಿಂದ ದೃಢೀಕರಿಸಿ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ದಿ ನಿಗಮಕ್ಕೆ ಫಲಾನುಭವಿಯ ಮೂಲಕ ಸಲ್ಲಿಸಬೇಕು.

ಫಲಾನುಭವಿಗಳಿಂದ ಸ್ವೀಕೃತವಾದ ಅರ್ಜಿಯನ್ನು ಪರಿಶೀಲಿಸಿ ಬಡ್ಡಿ ರಿಯಾಯಿತಿ ಸಹಾಯಾನುದಾನವನ್ನು ಅನುಮೋದನೆ ಮಾಡಲು ಜಿಲ್ಲಾ ಸಮಿತಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗುತ್ತದೆ. ಈ ಪ್ರಸ್ತಾವನೆಯನ್ನು ಕ್ರೋಢೀಕರಿಸಿ ಆಯಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಿರುವ ಜಿಲ್ಲಾ ಆಯ್ಕೆ ಸಮಿತಿಯಲ್ಲಿ ಮಂಡಿಸಿ ಅನುಮೋದನೆಯನ್ನು ಪಡೆದುಕೊಂಡು ಕೇಂದ್ರ ಕಛೇರಿಗೆ ಬಡ್ಡಿ ರಿಯಾಯಿತಿ ಸಹಾಯಾನುದಾನ ಬಿಡುಗಡೆಗಾಗಿ ಪ್ರಸ್ತಾವನೆಯನ್ನು ಕಳುಹಿಸುತ್ತಾರೆ. ಕೇಂದ್ರ ಕಛೇರಿಯಿಂದ ನೇರವಾಗಿ ಬಡ್ಡಿ ರಿಯಾಯಿತಿ ಸಹಾಯಾನುದಾನದ ಮೊತ್ತವನ್ನು ಸಂಬಂಧಪಟ್ಟ ಬ್ಯಾಂಕುಗಳಿಗೆ ಬಿಡುಗಡೆ ಮಾಡಲಾಗುತ್ತದೆ.

**ಮಡಿಕೇರಿ ಜಿಲ್ಲಾ ಆಸ್ಪತ್ರೆಯಲ್ಲಿ ತುರ್ತು ಚಿಕಿತ್ಸೆ ನೀಡಲು ವಿಫಲವಾಗುತ್ತಿರುವ ಬಗ್ಗೆ**

**31; ಶ್ರೀ ಟಿ. ಜಾನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ಕೊಡಗು ಜಿಲ್ಲೆಯ ಮಡಿಕೇರಿ ಜಿಲ್ಲಾ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರುಗಳ ಮತ್ತು ದಾದಿಯರುಗಳ ಸಂಖ್ಯೆ ಎಷ್ಟು;

**ಆ)** ಸದರಿ ಆಸ್ಪತ್ರೆಯಲ್ಲಿ ಖಾಲಿ ಇರುವ ವೈದ್ಯರುಗಳು ಮತ್ತು ದಾದಿಯರುಗಳ ಹುದ್ದೆ ಎಷ್ಟು; (ವಿವರಗಳನ್ನು ಒದಗಿಸುವುದು)

**ಇ)** ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರಕಾರ ತೆಗೆದುಕೊಂಡ ಕ್ರಮಗಳೇನು;

**ಈ)** ಸದರಿ ಆಸ್ಪತ್ರೆಯಲ್ಲಿ ತುರ್ತು ಚಿಕಿತ್ಸೆ ಪಡೆಯಲು ವಿಫಲವಾದ ರೋಗಿಗಳ ಪರವಾಗಿ ಸಾರ್ವಜನಿಕರು ಆಗಿಂದಾಗ್ಗಿ ಪ್ರತಿಭಟನೆಗಳನ್ನು ನಡೆಸುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೆ;

**ಉ)** ಹಾಗಿದ್ದಲ್ಲಿ, ಆಸ್ಪತ್ರೆಯಲ್ಲಿ ರೋಗಿಗಳಿಗೆ ಆಗುವ ಈ ಅನಾನುಕೂಲತೆಯನ್ನು ಪರಿಹರಿಸಲು ಸರಕಾರವು ತೆಗೆದುಕೊಂಡ ಕ್ರಮಗಳೇನು?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)**

**ಅ)** **ಮತ್ತು ಆ)** ಕೊಡಗು ಜಿಲ್ಲೆಯ ಮಡಿಕೇರಿ ಜಿಲ್ಲಾ ಆಸ್ಪತ್ರೆಯಲ್ಲಿ ಒಟ್ಟು 34 ತಜ್ಞ ವೈದ್ಯರ / ವೈದ್ಯರ ಹುದ್ದೆಗಳು ಮಂಜೂರಾಗಿದ್ದು, 23 ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ ಹಾಗು 11 ತಜ್ಞ ವೈದ್ಯರ ಹುದ್ದೆಗಳು ಖಾಲಿಯಿವೆ. ಮುಂದುವರೆದು, ಸದರಿ ಆಸ್ಪತ್ರೆಯಲ್ಲಿ ಶುಶ್ರೂಷಕಿಯರ ಒಟ್ಟು 69 ಹುದ್ದೆಗಳು ಮಂಜೂರಾಗಿದ್ದು, 65 ಹುದ್ದೆಗಳು ಭರ್ತಿಯಾಗಿವೆ ಹಾಗು 04 ಹುದ್ದೆಗಳು ಖಾಲಿಯಿವೆ.

**ಇ)** ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ತೆಗೆದುಕೊಂಡ ಕ್ರಮದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

**ಈ)** ಬಂದಿದೆ

**ಉ)** ಆಸ್ಪತ್ರೆಯಲ್ಲಿ ಇರುವ ವೈದ್ಯರು / ತಜ್ಞ ವೈದ್ಯರು ಹಾಗೂ ಇತರೇ ಸಿಬ್ಬಂದಿಗಳಿಂದ ರೋಗಿಗಳಿಗೆ ತೊಂದರೆಯಾಗದಂತೆ ಚಿಕಿತ್ಸೆ ನೀಡಲು ಕ್ರಮವಹಿಸಲಾಗಿದೆ.

## ಅನುಬಂಧ

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಬರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ತುಂಬಲು ತೆಗೆದುಕೊಂಡ ಕ್ರಮಗಳ ವಿವರಗಳು:

1. ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ (ಎನ್.ಆರ್.ಹೆಚ್.ಎಂ) ಮತ್ತು ವಿಶ್ವ ಬ್ಯಾಂಕ್ ನೆರವಿನ ಕರ್ನಾಟಕ ಆರೋಗ್ಯ ಪದ್ಧತಿ ಅಭಿವೃದ್ಧಿ ಸುಧಾರಣೆ ಯೋಜನೆ (ಕೆ.ಹೆಚ್.ಎಸ್.ಡಿ.ಆರ್.ಪಿ.) ಅಡಿಯಲ್ಲಿ ಸ್ತ್ರೀರೋಗ ತಜ್ಞತೆ, ಅರವಳಿಕೆ ಹಾಗೂ ಮಕ್ಕಳ ತಜ್ಞತೆಯಲ್ಲಿ ಗೌರವಧನದ ಆಧಾರದ ಮೇಲೆ ತಜ್ಞ ವೈದ್ಯರನ್ನು ನೇಮಿಸಿಕೊಳ್ಳಲು ಸಿ–ಗುಂಪಿನ ಜಿಲ್ಲೆಗಳು ಹಾಗೂ ಉತ್ತರ ಕನ್ನಡ, ಕೊಡಗು ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಅನ್ವಯಿಸುವಂತೆ ಮಾಸಿಕ ₹. 70,000 ಹಾಗೂ ಇತರೆ ಎಲ್ಲಾ ಜಿಲ್ಲೆಗಳಿಗೆ ₹. 50,000 ದಂತೆ ನೀಡಲು ಅವಕಾಶ ಕಲ್ಪಿಸಲಾಗಿದೆ.

2. ಇತರೆ ತಜ್ಞತೆಗಳಿಗೆ (ಮಕ್ಕಳ ತಜ್ಞರು, ಸ್ತ್ರೀರೋಗ ತಜ್ಞರು ಹಾಗೂ ಅರವಳಿಕೆ ತಜ್ಞರನ್ನು ಹೊರತುಪಡಿಸಿ) ಸಂಬಂಧಪಟ್ಟಂತೆ, ಮೇಲೆ ತಿಳಿಸಿದ ಜಿಲ್ಲೆಗಳಲ್ಲಿ ಕ್ರಮವಾಗಿ ಮಾಸಿಕ ₹. 65,000 ಹಾಗೂ ₹. 50,000 ದಂತೆ ಗೌರವಧನ ನೀಡಲಾಗುತ್ತಿದೆ. ಮುಂದುವರೆದು, ರೀಟೈನರ್‌ಷಿಪ್ ಆಧಾರದಲ್ಲಿ ನೇಮಕ ಮಾಡುವ ಎಲ್ಲಾ ತಜ್ಞ ವೈದ್ಯರಿಗೆ ಸಂಬಂಧಿಸಿದಂತೆ ನೀಡಲಾಗುತ್ತಿದ್ದ ಗೌರವಧನವನ್ನು ಸಿ–ಗುಂಪಿನ ಜಿಲ್ಲೆಗಳು ಹಾಗೂ ಉತ್ತರ ಕನ್ನಡ, ಕೊಡಗು ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಅನ್ವಯಿಸುವಂತೆ ಮಾಸಿಕ ₹. 5,000 ದಿಂದ ₹. 10,000 ಕ್ಕೆ ಹೆಚ್ಚಿಸಿ ಹಾಗೂ ಇತರೆ ಎಲ್ಲಾ ಜಿಲ್ಲೆಗಳಿಗೆ ₹. 8,000 ದಂತೆ ನೀಡಿ ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಮುಂದುವರೆದು, ಸದರಿ ತಜ್ಞರು ಹೊರ ರೋಗಿ ವಿಭಾಗದಲ್ಲಿ

ಕಾರ್ಯನಿರ್ವಹಿಸಿದ್ದಲ್ಲಿ ದಿನವೊಂದಕ್ಕೆ ₹. 1,000 ದಂತೆ ಗೌರವ ಧನ ನೀಡಲು ಅವಕಾಶ ಕಲ್ಪಿಸಲಾಗಿದೆ. ಆದಾಗ್ಯೂ, ಅನೇಕ ಜಿಲ್ಲೆಗಳಲ್ಲಿ ತಜ್ಞರು ಮುಂದೆ ಬರುತ್ತಿಲ್ಲ.

3. ಎಂ.ಬಿ.ಬಿ.ಎಸ್. ವೈದ್ಯರಿಗೆ ಅರವಳಿಕೆ ಹಾಗೂ ಸಿಜೇರಿಯನ್ ಶಸ್ತ್ರಚಿಕಿತ್ಸೆಗಳಿಗೆ ತರಬೇತಿ ನೀಡಲಾಗುತ್ತಿದ್ದು, ಈ ಮೂಲಕ ಸ್ತ್ರೀರೋಗ ಹಾಗೂ ಅರವಳಿಕೆ ತಜ್ಞರ ಕೊರತೆಯನ್ನು ನೀಗಿಸಲು ಕ್ರಮವಹಿಸಲಾಗಿದೆ.

4. ಕರ್ನಾಟಕ ಲೋಕಸೇವಾ ಆಯೋಗದ ಮೂಲಕ 600 ತಜ್ಞ ವೈದ್ಯರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗಿ ಒಟ್ಟು 252 ತಜ್ಞ ವೈದ್ಯರನ್ನು ನೇಮಕಾತಿ ಮಾಡಲು ಆಯ್ಕೆ ಪಟ್ಟಿಯನ್ನು ಸರ್ಕಾರಕ್ಕೆ ಕಳುಹಿಸಿದ್ದು, ಪ್ರಸ್ತುತ ನೇಮಕಾತಿ ಆದೇಶ ನೀಡುವ ಪ್ರಕ್ರಿಯೆ ಜಾರಿಯಲ್ಲಿದೆ.

5. ಪ್ರಸ್ತುತ 735 ಹಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ಹಾಗು 314 ಕಿರಿಯ ಆರೋಗ್ಯ ಪುರುಷ ಸಹಾಯಕರ ಹುದ್ದೆಗಳನ್ನು ವಿಶೇಷ ನೇಮಕಾತಿ ಸಮಿತಿ ಮೂಲಕ ಭರ್ತಿ ಮಾಡಲು ಮೇ 2011 ರಂದು ಅರ್ಜಿಗಳನ್ನು ಆಹ್ವಾನಿಸಿದ್ದು, ಆಯ್ಕೆ ಪ್ರಕ್ರಿಯೆಯು ಜಾರಿಯಲ್ಲಿದೆ.

**ಬೆಂಗಳೂರು ನಗರದ ಕೆರೆಗಳ ಸುತ್ತ ಚೈನ್‌ಲಿಂಕ್ ಫೆನ್ಸಿಂಗ್ ಅಳವಡಿಸುವ ಬಗ್ಗೆ**

**46; ಶ್ರೀ ಮೋಹನ್ ಎ ಲಿಂಬೀಕಾಯಿ**

ಅ) ಬೆಂಗಳೂರು ನಗರದ ಕೆರೆಗಳ ಸುತ್ತ ಚೈನ್‌ಲಿಂಕ್ ಫೆನ್ಸಿಂಗ್ ಅಳವಡಿಸುವ ಕಾಮಗಾರಿಗಳಿಗೆ ಕನ್ಸಲ್ಟೆಂಟ್‌ಗಳನ್ನು ನೇಮಿಸಲಾಗಿದೆಯೇ;

ಆ) ಹಾಗಿದ್ದಲ್ಲಿ, ಅವರಿಗೆ ಪಾವತಿಸುತ್ತಿರುವ ಹಣವೆಷ್ಟು?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಯವರು)**

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಕೆರೆ ಅಭಿವೃದ್ಧಿ ಪ್ರಾಧಿಕಾರದ ವಶದಲ್ಲಿರುವ ಕೆರೆಗಳ ಸುತ್ತ ಚೈನ್ ಲಿಂಕ್ ಫೆನ್ಸಿಂಗ್ ಅಳವಡಿಸುವ ಕಾಮಗಾರಿಗಾಗಿಯೇ ಪ್ರತ್ಯೇಕವಾಗಿ ಕನ್ಸಲ್ಟೆಂಟ್‌ಗಳನ್ನು ನೇಮಿಸಿರುವುದಿಲ್ಲ.

ಆ) ಅನ್ವಯಿಸುವುದಿಲ್ಲ.

**ನಗರದ ರಸ್ತೆ ಎರಡು – ಬದಿಗಳಲ್ಲಿ ದೀಪ ಅಳವಡಿಸುವ ಬಗ್ಗೆ**

**48; ಶ್ರೀ ಮೋಹನ್ ಎ. ಲಿಂಬೀಕಾಯಿ (ಪದವೀಧರರ ಕ್ಷೇತ್ರ)**

ಅ) ನಗರಗಳಲ್ಲಿ ರಸ್ತೆ ಬದಿ ದೀಪಗಳನ್ನು ಎಷ್ಟು ಅಂತರದಲ್ಲಿ ಅಳವಡಿಸಬೇಕು ಎಂಬ ಬಗ್ಗೆ ನಿಯಮಗಳು ಇವೆಯೆ;

ಆ) ಇದ್ದಲ್ಲಿ, ನಿಯಮಗಳಿಗಿಂತಲೂ ಕಡಿಮೆ ಅಂತರದಲ್ಲಿ ಬೀದಿ ದೀಪಗಳನ್ನು ಅಳವಡಿಸಿ ವಿದ್ಯುಚ್ಛಕ್ತಿಯ ದುರ್ಬಳಕೆಯಾಗುತ್ತಿರುವುದನ್ನು ತಪ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

**ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು)**

ಅ) ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿ ಬರುವ ಎಸ್ಕಾಂ ವಿದ್ಯುತ್ ಕಂಬಗಳನ್ನು ಬೀದಿ ದೀಪ ಅಳವಡಿಸಲು ಬಳಸಿಕೊಳ್ಳುವುದರಿಂದ ದೀಪಗಳ ಅಂತರವನ್ನು ಸ್ಥಳೀಯ ಸಂಸ್ಥೆಗಳು ನಿರ್ಧಾರ ಮಾಡಲು ಸಾಧ್ಯವಾಗುವುದಿಲ್ಲ. ರಸ್ತೆಯ ಉದ್ದ ಮತ್ತು ಅಗಲಗಳನ್ನು ಪರಿಗಣಿಸಿ ಬೀದಿ ದೀಪಗಳನ್ನು ರಸ್ತೆಯ ಮೇಲೆ ಸರಾಸರಿ 30 ಲಕ್ಸ್‌ಗಳ ಇಲ್ಯೂಮಿನೇಷನ್ ಡಿಜೈನ್ ಮಾಡಿ ಎರಡು ಬೀದಿ ದೀಪಗಳ ಮಧ್ಯೆ ಅಂತರವನ್ನು ನಿಗದಿಪಡಿಸಿಕೊಳ್ಳಲಾಗುತ್ತದೆ. ಈ ಅಂತರವು ಆಯ್ಕೆ ಮಾಡಿಕೊಂಡ ದೀಪಗಳ ಮೇಲೆ ಅವಲಂಬಿಸಿರುತ್ತದೆ. ಸಾಮಾನ್ಯವಾಗಿ

ಮುಖ್ಯ ರಸ್ತೆಗಳಲ್ಲಿ 30 ಮೀಟರ್ ಅಂತರದಲ್ಲಿ 8 ರಿಂದ 9 ಮೀಟರ್ ಎತ್ತರದಲ್ಲಿ 250 ವ್ಯಾಟ್ ಸಾಮರ್ಥ್ಯದ ಸೋಡಿಯಂ ವೇಪರ್ ಲ್ಯಾಂಪ್ ಬೀದಿ ದೀಪಗಳನ್ನು ಅಳವಡಿಸಲಾಗುತ್ತದೆ ಮತ್ತು ಇತರೆ ಒಳರಸ್ತೆಗಳಲ್ಲಿ 40 ವ್ಯಾಟ್ಸ್ ಟ್ಯೂಬ್ ಲೈಟ್ ಬೀದಿ ದೀಪಗಳನ್ನು 30 ಮೀಟರ್ ಅಂತರದಲ್ಲಿ 8 ಮೀಟರ್ ಎತ್ತರದಲ್ಲಿ ಅಳವಡಿಸಲಾಗುತ್ತದೆ. ಬೀದಿ ದೀಪದ ಅಂತರವು ಅಡ್ಡ ರಸ್ತೆ, ಜಂಕ್ಷನ್ ಪಾಯಿಂಟ್, ಮತ್ತು ಇಂಟರಸೆಕ್ಷನ್‌ಗಳ ಮೇಲೆ ಜನ ಸಂಧಣಿ ಮತ್ತು ಟ್ರಾಫಿಕ್ ಅನುಗುಣವಾಗಿ ಲಕ್ಸ್‌ಲೆವೆಲ್‌ನ್ನು ಹೆಚ್ಚಿಸಲು ಅಂತರವನ್ನು ಕಡಿಮೆಗೊಳಿಸಲಾಗುತ್ತದೆ.

**ಆ)** ಇಂಧನ ಉಳಿತಾಯ ನೀತಿಯನ್ವಯ ಸುತ್ತೋಲೆ ಸಂಖ್ಯೆ: ಪೌನಿ/ತಾಂತ್ರಿಕ/ಬೀದಿ ದೀಪಗಳು/271/2009-10, ದಿನಾಂಕ 25.05.2011ರಲ್ಲಿ ಬೀದಿ ದೀಪಗಳ ವಿದ್ಯುತ್ ಬಿಲ್ಲಿನ ಮೊತ್ತವನ್ನು ಕಡಿಮೆಗೊಳಿಸುವ ಸಲುವಾಗಿ ಎಲ್ಲಾ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲು ನಗರ ಸ್ಥಳೀಯ ಸಂಸ್ಥೆಗಳಿಗೆ ಸೂಚನೆ ನೀಡಲಾಗಿದೆ.

ಮೈಸೂರು ಮಹಾನಗರಪಾಲಿಕೆಯ ವ್ಯಾಪ್ತಿಯಲ್ಲಿ ಕನಿಷ್ಟ ಶೇ. 30ರಷ್ಟು ಇಂಧನ ಉಳಿತಾಯ ಸಾಧಿಸಲು ಬೀದಿ ದೀಪಗಳ ಕಾರ್ಯ ಮತ್ತು ಪಾಲನೆಯಲ್ಲಿ ಇಂಧನ ಕಾರ್ಯಕ್ಷಮತೆ ಯೋಜನೆಯನ್ನು ಅನುಷ್ಠಾನಿಸಲು ಎಸ್ಕೋ ಕಂಪನಿಗಳಿಂದ ಮಹಾನಗರಪಾಲಿಕೆಗೆ ಯಾವುದೇ ಹಣಕಾಸಿನ ಹೊರೆ ಇಲ್ಲದೇ ಬಿ.ಓ.ಟಿ ಆಧಾರದ ಮೇಲೆ ತೆಗೆದುಕೊಳ್ಳಲು ಈಗಾಗಲೇ ಟೆಂಡರ್ ಕರೆಯಲಾಗಿದೆ. ಮುಂದುವರೆದಂತೆ 6 ಮಹಾನಗರಪಾಲಿಕೆಗಳಾದ ದಾವಣಗೆರೆ, ಮಂಗಳೂರು, ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ಬಳ್ಳಾರಿ ಮತ್ತು ಗುಲ್ಬರ್ಗಾಗಳಿಗೂ ಸಹ ಎಸ್ಕೋ ಕಂಪನಿಗಳಿಂದ ಮಹಾನಗರಪಾಲಿಕೆಗಳಿಗೆ ಯಾವುದೇ ಹಣಕಾಸಿನ ಹೊರೆ ಇಲ್ಲದೇ ಬಿ.ಓ.ಟಿ ಆಧಾರದ ಮೇಲೆ ತೆಗೆದುಕೊಳ್ಳಲು ಕೆ.ಯು.ಐ.ಡಿ.ಎಫ್.ಸಿ. ವತಿಯಿಂದ ಕ್ರಮ ಕೈಗೊಳ್ಳಲಾಗುತ್ತಿದೆ.

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ವೈದ್ಯರುಗಳನ್ನು ನಿಮ್ಹಾನ್ಸ್ ಆಸ್ಪತ್ರೆಗಳಿಗೆ ನಿಯೋಜನೆ ಮಾಡಿರುವ ಬಗ್ಗೆ**

**45; ಶ್ರೀ ಮೋಹನ್ ಎ. ಲಿಂಬಿಕಾಯಿ (ಪದವೀಧರರ ಕ್ಷೇತ್ರ)**

**ಅ)** ಮಾನಸಿಕ ರೋಗಿಗಳ ಆಸ್ಪತ್ರೆಗಳಲ್ಲಿ ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿರುವ ವೈದ್ಯರುಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಹಿಂದಿರುಗಿಸಲು ಸರ್ಕಾರದ ಆದೇಶವಾಗಿದ್ದರೂ ಸಹ ಅಲ್ಲಿಯೇ ಕಾರ್ಯನಿರ್ವಹಿಸುತ್ತಿರುವ ವೈದ್ಯರುಗಳ ಸಂಖ್ಯೆ ಎಷ್ಟು.

**ಆ)** ಅವರುಗಳನ್ನು ಅವರ ಮಾತೃ ಇಲಾಖೆಗೆ ಹಿಂತಿರುಗಿಸಲು ಕೈಗೊಂಡಿರುವ ಕ್ರಮಗಳೇನು? (ಮಾಹಿತಿ ನೀಡುವುದು)

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿ)**

**ಅ)** ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗೆ ಇಬ್ಬರು ವೈದ್ಯರು ಧಾರವಾಡ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ, ಇಲ್ಲಿ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ.

**ಆ)** ಸದರಿ ಇಬ್ಬರು ವೈದ್ಯರ ಸೇವೆಯನ್ನು ಮಾತೃ ಇಲಾಖೆಗೆ ಹಿಂಪಡೆದು ಆದೇಶ ಹೊರಡಿಸಲಾಗಿದೆ. ಆದರೆ, ಅವರು ಇದುವರೆವಿಗೆ ಮಾತೃ ಇಲಾಖೆಯಲ್ಲಿ ಕಾರ್ಯ ವರದಿ ಮಾಡಿಕೊಂಡಿರುವುದಿಲ್ಲ. ಆದ್ದರಿಂದ, ಸದರಿ ವೈದ್ಯರ ವಿರುದ್ಧ ಕರ್ನಾಟಕ ನಾಗರೀಕ ಸೇವಾ ನಿಯಮಗಳು (ಸಿ.ಸಿ.ಎ) ರಡಿಯಲ್ಲಿ ಶಿಸ್ತು ಕ್ರಮ ಪ್ರಾರಂಭಿಸಲಾಗಿದೆ.

**ಬೆಂಗಳೂರು ಮತ್ತು ಹುಬ್ಬಳ್ಳಿ ನಗರದಲ್ಲಿ ಪೆರಿಫೆರಲ್ ರಿಂಗ್ ರಸ್ತೆ ನಿರ್ಮಾಣದ**

**47; ಶ್ರೀ ಮೋಹನ್ ಎ. ಲಿಂಬೀಕಾಯಿ (ಪದವೀಧರರ ಕ್ಷೇತ್ರ)**

ಅ) ಬೆಂಗಳೂರು ಮತ್ತು ಹುಬ್ಬಳ್ಳಿ ನಗರಗಳಿಗೆ ಫೆರಿಫೆರಲ್ ರಿಂಗ್ ರಸ್ತೆ ನಿರ್ಮಿಸುವ ಯೋಜನೆಗಳು ಯಾವ ಹಂತದಲ್ಲಿದೆ.

ಆ) ಸದರಿ ಯೋಜನೆಗಳು ಸ್ಥಗಿತಗೊಂಡಿದ್ದರೆ, ಅದಕ್ಕೆ ಕಾರಣಗಳೇನು? (ಅವುಗಳ ಅಂದಾಜು ವೆಚ್ಚ ಮತ್ತು ವಿವರಗಳನ್ನು ನೀಡುವುದು)

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)**

ಅ) ಫೆರಿಫೆರಲ್ ರಿಂಗ್ ರಸ್ತೆ ಪ್ರಥಮ ಹಂತದಲ್ಲಿ 65 ಕಿ.ಮೀ ಉದ್ದವುಳ್ಳ ರಸ್ತೆಯನ್ನು ತುಮಕೂರು ರಸ್ತೆಯಿಂದ ಬಳ್ಳಾರಿ ರಸ್ತೆ, ಹಳೇ ಮದ್ರಾಸ್ ರಸ್ತೆ, ಸರ್ಜಾಪುರದ ರಸ್ತೆ ಹಾದು ಹೊಸೂರು ರಸ್ತೆಯವರೆಗೆ ನಿರ್ಮಿಸಲು, ಹಾಗೂ ದ್ವಿತಿಯ ಹಂತದಲ್ಲಿ 51 ಕಿ.ಮೀ. ಉದ್ದವುಳ್ಳ ರಸ್ತೆಯನ್ನು ಹೊಸೂರು ರಸ್ತೆಯಿಂದ ಕನಕಪುರ ರಸ್ತೆ, ಮೈಸೂರು ರಸ್ತೆ, ಮಾಗಡಿ ರಸ್ತೆ ಮುಖೇನ ತುಮಕೂರು ರಸ್ತೆವರೆಗೆ, ಮೊದಲ ಹಂತದ ರಸ್ತೆಯನ್ನು ಪೂರ್ಣಗೊಳಿಸಿದ ನಂತರ ಕೈಗೊಳ್ಳಲು ಯೋಜಿಸಲಾಗಿದೆ. ಫೆರಿಫೆರಲ್ ರಿಂಗ್ ರಸ್ತೆ ಭಾಗ-1 ರ ರಸ್ತೆ ನಿರ್ಮಾಣಕ್ಕಾಗಿ ಒಟ್ಟು ವಿಸ್ತೀರ್ಣದ 1810 ಎಕರೆ 18.5 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಸಂಖ್ಯೆ: ಯುಡಿಡಿ 399 ಎಂಎನ್ಎಕ್ಸ್ 2006, ದಿನಾಂಕ: 29-06-2007 ರಲ್ಲಿ ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಪ್ರಥಮ ಹಂತದ ಫೆರಿಫೆರಲ್ ರಿಂಗ್ ರಸ್ತೆ ಭಾಗ-1 ನ್ನು ರೂ.1750.00 ಕೋಟಿಗಳ ಅಂದಾಜು ಮೊತ್ತದಲ್ಲಿ ನಿರ್ಮಾಣ, ನಿರ್ವಹಣೆ ಮತ್ತು ಹಸ್ತಾಂತರ (PPP mode/ D Boot basis) ಆಧಾರದ ಮೇಲೆ ಗೆತ್ತಿಕೊಳ್ಳಲು ಯೋಜಿಸಲಾಗಿದೆ. ಈ ಯೋಜನೆಯನ್ನು ಅನುಷ್ಟಾನಗೊಳಿಸಲು ಪೂರ್ವಾರ್ಹತೆಗಾಗಿ ಅರ್ಹ ಏಜೆನ್ಸಿಗಳಿಂದ

ಅರ್ಜಿ ಪಡೆಯಲು ದಿನಾಂಕ: 26-02-2009 ರಂದು ಜಾಗತಿಕ ಟೆಂಡರ್ ನೋಟಿಫಿಕೇಷನ್ ಹೊರಡಿಸಲಾಗಿದ್ದು, 10 ಏಜೆನ್ಸಿಗಳು ಪೂರ್ವಾರ್ಹತೆಗಾಗಿ ಅರ್ಜಿ ಸಲ್ಲಿಸಿದ್ದು, 09 ಏಜೆನ್ಸಿಗಳು RFP ಹಂತಕ್ಕೆ ಅರ್ಹತೆಗೊಂಡಿರುತ್ತಾರೆ.

ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿದ್ದ ರಿಟ್ ಪಿಟಿಷನ್‌ಗಳ ಪೈಕಿ ರಿಟ್ ಪಿಟಿಷನ್ ಸಂಖ್ಯೆ: 21920-22/2011 ನ್ನು ವಿಚಾರಣೆ ಮಾಡಿದ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 08-09-2011 ರಂದು ಆದೇಶ ಹೊರಡಿಸಿ, ಪೆರಿಪೆರಲ್ ರಿಂಗ್ ರಸ್ತೆ ಯೋಜನೆಗೆ ಸಂಬಂಧಪಟ್ಟ ಭೂಸ್ವಾಧೀನ ಅಧಿಸೂಚನೆಗಳನ್ನು ರದ್ದುಗೊಳಿಸಿರುತ್ತದೆ. ಈ ಹಿನ್ನೆಲೆಯಲ್ಲಿ ಏಕ ಪೀಠದ ಆದೇಶ ವಿರುದ್ಧ ವಿಭಾಗೀಯ ಪೀಠದ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಇದನ್ನು ಅಂಗೀಕರಿಸಿದ ವಿಭಾಗೀಯ ಪೀಠವು ಏಕ ಪೀಠವು ನೀಡಿದ ತೀರ್ಪಿಗೆ ತಡೆಯಾಜ್ಞೆ ನೀಡಿರುತ್ತದೆ.

ಹುಬ್ಬಳ್ಳಿ ಫೆರಿಫರಲ್ ರಿಂಗ್ ರಸ್ತೆ ನಿರ್ಮಾಣದ ಯೋಜನೆ ಪ್ರಾರಂಭಿಕ ಹಂತದಲ್ಲಿರುತ್ತದೆ.

ಆ) ಸ್ಥಗಿತಗೊಂಡಿರುವುದಿಲ್ಲ.

**ಹಾಸನ ನಗರದಲ್ಲಿ ಪಾರ್ಕುಗಳ ಅಭಿವೃದ್ಧಿಗೆ ಮತ್ತು ಸಂಪರ್ಕ ರಸ್ತೆ ಕಲ್ಪಿಸಲು ಕೈಗೊಂಡಿರುವ ಕ್ರಮಗಳ ಕುರಿತು**

**75; ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ಹಾಸನ ನಗರದ ಪ್ರತಿಷ್ಠಿತ ಮಹಾರಾಜ ಪಾರ್ಕ್ ಅಭಿವೃದ್ಧಿಗೆ ಕೈಗೊಂಡಿರುವ ಕ್ರಮಗಳೇನು;

ಆ) ಮಹಾರಾಜ ಪಾರ್ಕ್‌ನ ಮಧ್ಯಭಾಗದಲ್ಲಿ ಹಾದು ಹೋಗಿರುವ ಕೊಳಚೆ ನೀರಿನ ಚರಂಡಿಯ ದುರ್ನಾತದಿಂದ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದ್ದು ಇದನ್ನು ನಿವಾರಿಸಲು ಸದರಿ ಚರಂಡಿಗೆ ಮೇಲ್ಹಾವಣಿ ಹೊದಿಸಲು ಕೈಗೊಂಡಿರುವ ಕ್ರಮಗಳೇನು;

ಇ) ಹಾಸನ ನಗರದಲ್ಲಿ ಬಿ.ಎಂ. ರಸ್ತೆಯಿಂದ ರಾಜಘಟ್ಟ ಗವೇನಹಳ್ಳಿ, ರಾಜಘಟ್ಟ ಕೊಪ್ಪಲು, ಪ್ರಗತಿನಗರ ಗ್ರಾಮಗಳಿಗೆ ಹೋಗಲು ಸಂಪರ್ಕ ರಸ್ತೆ ಕಲ್ಪಿಸಲು ಕೈಗೊಂಡಿರುವ ಕ್ರಮಗಳೇನು?

**ಶ್ರೀ ಬಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿ (ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು)**

ಅ) ಹಾಸನ ನಗರದ ಮಹಾರಾಜ ಪಾರ್ಕಿನಲ್ಲಿ ನಡೆದಾಡಲು ಪಾತ್‌ವೇಗಳನ್ನು ನಿರ್ಮಿಸಿ ಹಾಗೂ ಮರಗಿಡಗಳನ್ನು ಸಹ ನಡೆಲಾಗಿರುತ್ತದೆ. ರೂ. 48 ಲಕ್ಷಗಳ ವೆಚ್ಚದಲ್ಲಿ ಅಮ್ಯೂಸೆಮೆಂಟ್ ಪಾರ್ಕ್ ನಿರ್ಮಿಸಲು ಹಾಗೂ ರೂ. 30 ಲಕ್ಷಗಳ ವೆಚ್ಚದಲ್ಲಿ ಆರ್ನಮೆಂಟಲ್ ಲೈಟ್‌ಗಳನ್ನು ಅಳವಡಿಸಲು ಕ್ರಮವಹಿಸಲಾಗುತ್ತಿದೆ. ರೂ. 19 ಲಕ್ಷಗಳಲ್ಲಿ ವಿವಿಧ ಪಾರ್ಕ್‌ಗಳಿಗೆ ಫ್ರಿಕಾಸ್ಟ್ ಕಾಂಕ್ರೀಟ್ ಬೆಂಚ್‌ಗಳನ್ನು ಮತ್ತು ರೂ. 3.5 ಲಕ್ಷಗಳ ವೆಚ್ಚದಲ್ಲಿ ಅಂಬ್ರಲಾ ಹೌಸ್ ನಿರ್ಮಾಣ ಕಾಮಗಾರಿಗೆ ಕಾರ್ಯಾದೇಶ ನೀಡಲಾಗಿದೆ.

ಆ) ಮಹಾರಾಜ ಪಾರ್ಕಿನ ಮಧ್ಯಭಾಗದಲ್ಲಿ ಹಾದು ಹೋಗಿರುವ ಕೊಳಚೆ ನೀರಿನ ಚರಂಡಿಯಲ್ಲಿರುವ ಹೂಳನ್ನು ತೆಗೆದು ಫ್ರಿಕಾಸ್ಟ್ ಸ್ಲ್ಯಾಬ್ ಹಾಕಿ ಮುಚ್ಚಲು ರೂ. 18 ಲಕ್ಷಗಳ ಅಂದಾಜು ಪಟ್ಟಿ ತಯಾರಿಸಿದ್ದು, ಸದರಿ ಕಾಮಗಾರಿಯನ್ನು ನಿರ್ವಹಿಸಲು ಕ್ರಮವಹಿಸಲಾಗುತ್ತಿದೆ.

ಇ) ರಾಜಘಟ್ಟ ಬಡಾವಣೆ ಹಾಗೂ ಪ್ರಗತಿ ನಗರ ಬಡಾವಣೆ ಮತ್ತು ರಾಜಘಟ್ಟ ಕೊಪ್ಪಲು ರಸ್ತೆಗೆ ಕೊಡುವಂತಹ ರಸ್ತೆಗೆ ಬಿ.ಎಂ. ರಸ್ತೆಯಿಂದ ಸಂಪರ್ಕ ಹೊಂದುವಂತಹ ರೈಲ್ವೆ ಜಾಗದಲ್ಲಿ, ರೈಲ್ವೆ ಇಲಾಖೆಯಿಂದ ಕಾಂಕ್ರಿಟ್ ರಸ್ತೆ ನಿರ್ಮಿಸಲಾಗಿದ್ದು, ತದನಂತರ ಬೈಪಾಸ್ ರಸ್ತೆವರೆವಿಗೂ ಡಾಂಬರ ರಸ್ತೆಯನ್ನು ನಿರ್ಮಿಸಲಾಗಿರುತ್ತದೆ. ಗವೇನಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

## ಹಾಸನ ನಗರದ ಸುತ್ತಮುತ್ತಲಿನ ಭೂಮಿಯನ್ನು ಪರಿವರ್ತನೆ ಮಾಡಿರುವ ಕುರಿತು

**86; ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ಹಾಸನ ನಗರದಲ್ಲಿ 2009–10 ರಿಂದ 2011–12ನೇ ಸಾಲಿನ ವರೆಗೆ ಅನ್ಯ ಸಂಕ್ರಮಣ ಮಾಡಿ ನಿವೇಶನಗಳನ್ನಾಗಿ ಪರಿವರ್ತನೆ ಮಾಡಿದ ಭೂಮಿ ಎಷ್ಟು;

**ಆ)** ಹಾಸನ ನಗರದ ಗ್ರೀನ್ ಬೆಲ್ಟ್ ಹೊರತುಪಡಿಸಿ ಭೂಪರಿವರ್ತನೆ ಕೋರಿ ಎಷ್ಟು ಅರ್ಜಿಗಳನ್ನು ಸಲ್ಲಿಸಲಾಗಿದೆ; ಇವುಗಳು ಯಾವ ಹಂತದಲ್ಲಿರುತ್ತವೆ;

**ಇ)** ಹಾಸನ ನಗರದಲ್ಲಿ ಸರ್ಕಾರದ ನಿಯಮಾವಳಿಗಳಂತೆ ಭೂ ಪರಿವರ್ತನೆ ಮಾಡಿ ನಿವೇಶನಗಳ ಬೆಲೆಗಳ ಜನ ಸಾಮಾನ್ಯರಿಗೆ ಎಟುಕುವಂತೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಯವರು)**

**ಅ)**

| | |
|---|---|
| 2009–10 | 39–28 1/4 ಎಕರೆ |
| 2010–11 | 21–04 1/2 ಎಕರೆ |
| 2011–12 | 0.3–13 ಎಕರೆ |
| **ಒಟ್ಟು** | **64 ಎಕರೆ 06 3/4 ಗುಂಟೆ** |

**ಆ)**

| | |
|---|---|
| 2009–10 | 11 ಅರ್ಜಿಗಳು |
| 2010–11 | 26 ಅರ್ಜಿಗಳು |
| 2011–12 | 13 ಅರ್ಜಿಗಳು |
| **ಒಟ್ಟು** | **50 ಅರ್ಜಿಗಳು** |

ಇ) ಕರ್ನಾಟಕ ಗೃಹಮಂಡಳಿ ವತಿಯಿಂದ ಹಾಸನ ನಗರ ವ್ಯಾಪ್ತಿಗೆ ಬರುವ ಹಾಸನ ಹಾಗೂ ಚನ್ನಪಟ್ಟಣ ಗ್ರಾಮಗಳ 149 ಎಕರೆ ಜಮೀನುಗಳನ್ನು ಭೂ ಸ್ವಾದೀನಪಡಿಸಿಕೊಂಡು 2009–10ನೇ ಸಾಲಿನಲ್ಲಿ 200 ಮನೆಗಳನ್ನು ನಿರ್ಮಿಸಿ ಹಾಗೂ 1674 ನಿವೇಶನಗಳನ್ನು ರಚಿಸಿ ಸಾರ್ವಜನಿಕರಿಗೆ ಚದುರ ಅಡಿಗೆ ರೂ. 550 ರಂತೆ ಹಂಚಿಕೆ ಮಾಡಲಾಗಿದೆ.

ಹಾಸನ ನಗರ ವ್ಯಾಪ್ತಿಗೆ ಒಳಪಡುವ ಸಂಕೇನಹಳ್ಳಿ, ಬೂವನಹಳ್ಳಿ ಮತ್ತು ದೊಡ್ಡಪುರ ಗ್ರಾಮಗಳ ಒಟ್ಟು 453 ಎಕರೆ ಜಮೀನು ಹಾಸನ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ 2002–03ರಲ್ಲಿ ಭೂಸ್ವಾದೀನವಾಗಿದ್ದು, ಸಂಬಂಧಿಸಿದ ಭೂ ಮಾಲೀಕರುಗಳು, ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲಿಸಿದ್ದು ಸದರಿ ಪ್ರಕರಣದ ವಿಚಾರಣೆ ಮುಗಿದಿದ್ದು, ಅಂತಿಮ ತೀರ್ಪು ಕಾಯ್ದಿರಿಸಲಾಗಿದೆ. ಈ ನಿವೇಶನಗಳು ಲಭ್ಯವಾದಲ್ಲಿ ಜನಸಾಮಾನ್ಯರೂ ಸಹ ಪಡೆಯಬಹುದಾದ ದರದಲ್ಲಿ ಹಂಚಿಕೆ ಮಾಡಲು ಕ್ರಮ ವಹಿಸಬಹುದಾಗಿದೆ.

## ಮಂಗಳೂರು ತಾಲ್ಲೂಕು ಸೋಮನಾಥೇಶ್ವರ ದೇವಾಲಯದ ಸನಿಹ ಆಗುತ್ತಿರುವ ಕಾಮಗಾರಿ ಕುರಿತು

### 91; ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಅ) ಮಂಗಳೂರು ತಾಲ್ಲೂಕು, ಕಡಲತಡಿಯ ಸೋಮೇಶ್ವರ ಗ್ರಾಮದ ಸೋಮನಾಥೇಶ್ವರ ದೇವಾಲಯದ ಸನಿಹ ಪ್ರವಾಸೋದ್ಯಮ ಇಲಾಖೆಯಿಂದ ಯಾವ ಯಾವ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗಿದೆ;

ಆ) ಈ ಯೋಜನೆಯ ಒಟ್ಟು ವೆಚ್ಚ ಎಷ್ಟು;

ಇ) ದೇವಳದ ಸಂಪರ್ಕ ರಸ್ತೆ ಪೂರ್ಣಗೊಳ್ಳದಿರಲು ಕಾರಣವೇನು;

**ಈ)** ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)**

**ಅ)** ಮಂಗಳೂರು ತಾಲ್ಲೂಕು, ಸೋಮೇಶ್ವರ ಗ್ರಾಮದ ಶ್ರೀ ಸೋಮನಾಥೇಶ್ವರ ದೇವಾಲಯದ ಬಳಿ ಇಲಾಖೆಯು ಯಾವ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ. ಆದರೆ ಈ ದೇವಾಲಯಕ್ಕೆ ಹೊಂದಿಕೊಂಡಿರುವ ಬೀಚ್ ಬಳಿ ಲ್ಯಾಂಡ್ ಸ್ಕೇಪಿಂಗ್, ಪಾಥ್ ವೇ ನಿರ್ಮಾಣ, ಪಾರ್ಕಿಂಗ್ ಸೌಲಭ್ಯ, ಗಜೆಬೋ ನಿರ್ಮಾಣ, ಸ್ಟೆಪ್‌ಗಳ ನಿರ್ಮಾಣ, ಆಸನಗಳ ವ್ಯವಸ್ಥೆ, ಎರಡು ಹೈಮಾಸ್ಟ್ ಲೈಟುಗಳ ಅಳವಡಿಕೆ ಮುಂತಾದ ಸೌಲಭ್ಯಗಳನ್ನು ಕೇಂದ್ರದ ಅನುದಾನದಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಯೋಜನೆ ಪೂರ್ಣಗೊಂಡಿರುತ್ತದೆ.

**ಆ)** ಈ ಯೋಜನೆಯ ವೆಚ್ಚ ರೂ.76.80 ಲಕ್ಷಗಳಾಗಿರುತ್ತದೆ.

**ಇ)** ದೇವಳದ ಸಂಪರ್ಕ ರಸ್ತೆಯನ್ನು ಇಲಾಖೆಯಿಂದ ಕೈಗೆತ್ತಿಕೊಂಡಿರುವುದಿಲ್ಲ.

**ಈ)** ಉದ್ಭವಿಸುವುದಿಲ್ಲ.

**ರಾಜ್ಯದಲ್ಲಿ ಯುವಕ, ಯುವತಿ ಮಂಡಲಗಳ ನೋಂದಾವಣೆಯ ಮಾಹಿತಿ ಬಗ್ಗೆ**

**108; ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ರಾಜ್ಯದಲ್ಲಿ ಯುವಕ ಮತ್ತು ಯುವತಿ ಮಂಡಲಗಳ ನೋಂದಾವಣೆಗೆ ಇರುವ ಮಾನ ದಂಡವೇನು? ಮತ್ತು ಅಗತ್ಯವಿರುವ ದಾಖಲೆಗಳು ಯಾವುವು?

**ಆ)** ರಾಜ್ಯದಲ್ಲಿ ಯುವಕ ಮತ್ತು ಯುವತಿ ಮಂಡಲಗಳ ನೊಂದಾವಣೆಯನ್ನು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯಲ್ಲಿ ಈ ಹಿಂದೆ ನೊಂದಾಯಿಸಲಾಗುತ್ತಿದ್ದು, ಈಗ ಸಹಕಾರಿ ಇಲಾಖೆಯಲ್ಲಿ ನೊಂದಾವಣೆ ಕಡ್ಡಾಯದಿಂದ ನೊಂದಾವಣೆ ಸಂಖ್ಯೆಗಳು ಕಡಿಮೆಯಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದಲ್ಲಿ ಇದರ ಸರಳೀಕರಣಕ್ಕೆ ಸರಕಾರ ಕೈಗೊಂಡ ಕ್ರಮಗಳೇನು?

**ಶ್ರೀ ಡಿ.ವಿ. ಸದಾನಂದಗೌಡ (ಮಾನ್ಯಮಂತ್ರಿಯವರು)**

**ಅ)** ಅನುಬಂಧದಲ್ಲಿ ಒದಗಿಸಿದೆ

**ಆ)** ಬಂದಿದೆ

ಇ) ಕರ್ನಾಟಕ ಸಂಘ –ಸಂಸ್ಥೆಗಳ ನೊಂದಾವಣೆ ಕಾಯ್ದೆಯಡಿಯಲ್ಲಿ ಯುವಜನ ಸಂಸ್ಥೆಗಳು ಹೆಚ್ಚಿನ ಸಂಖ್ಯೆಯಲ್ಲಿ ನೊಂದಾಯಿಸಿಕೊಳ್ಳಲು ಅನುವಾಗಲು ಸಹಕಾರಿ ಸಂಘಗಳ ಇಲಾಖೆಯು ಶುಲ್ಕದಲ್ಲಿ ರಿಯಾಯಿತಿ ನೀಡುವ ಕುರಿತು ಸರ್ಕಾರ ಪರಿಶೀಲಿಸುತ್ತಿದೆ.

**ಅನುಬಂಧ**

**ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯಿಂದ ಕರ್ನಾಟಕ ರಾಜ್ಯದ ಯುವ ಸಂಸ್ಥೆಗಳಿಗೆ ಮಾನ್ಯತೆ ನೀಡುವ ವಿಧಿವಿಧಾನಗಳು ಮತ್ತು ಮಾರ್ಗದರ್ಶಿ ಸೂತ್ರಗಳು.**

1. ಶೈಕ್ಷಣಿಕ ಕ್ರೀಡಾ ಸಾಂಸ್ಕೃತಿಕ ಹಾಗೂ ಸಮುದಾಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು 15 ರಿಂದ 35 ವರ್ಷ ವಯೋಮಿತಿಯ ಯುವಜನರು ಸ್ಥಾಪಿಸಿ ಕಾನೂನು ಬದ್ಧವಾಗಿ ನೊಂದಾಯಿಸಲ್ಪಟ್ಟ ಯುವಜನ ಸಂಸ್ಥೆಗಳಿಗೆ ಮಾನ್ಯತೆ ನೀಡಬಹುದು,

2. ಯುವಜನರ ಸಾಂಸ್ಕೃತಿಕ ಸಾಹಿತ್ಯಿಕ ಕೌಶಲ್ಯಾಭಿವೃದ್ಧಿ ಮುಂತಾದ ಯುವ ಸಬಲೀಕರಣ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಕಾನೂನು ಬದ್ಧವಾಗಿ ನೋಂದಾಯಿಸಲ್ಪಟ್ಟಿರುವ ಸರ್ಕಾರೇತರ ಸಂಘ ಸಂಸ್ಥೆಗಳಿಗೆ ಮಾನ್ಯತೆ ನೀಡಬಹುದು.

3. 15 ರಿಂದ 35 ವರ್ಷ ವಯೋಮಿತಿಯ ಯುವಜನರಿಂದ ಸ್ಥಾಪಿತವಾಗಿ ಇಲಾಖೆಯಿಂದ ಮಾನ್ಯತೆ ಪಡೆದ ಸರ್ಕಾರೇತರ ಸಂಸ್ಥೆಗಳನ್ನು ಹೊರತುಪಡಿಸಿ ಆಯಾ ತಾಲ್ಲೂಕಿನ ಶೇ.50% ಕ್ಕೂ ಹೆಚ್ಚು ಯುವಜನ ಸಂಸ್ಥೆಗಳು ಕೂಡಿ ಸ್ಥಾಪಿಸಿದ ತಾಲ್ಲೂಕು ಯುವಕ ಸಂಘಗಳ ಒಕ್ಕೂಟಕ್ಕೂ ಮಾನ್ಯತೆ ನೀಡಬಹುದು.

4. ಎಲ್ಲಾ ತಾಲ್ಲೂಕುಗಳ ತಾಲ್ಲೂಕು ಯುವ ಒಕ್ಕೂಟಗಳು ಒಂದಾಗಿ ಸ್ಥಾಪಿಸಿದ ಜಿಲ್ಲಾ ಯುವಕ ಸಂಘಗಳ ಒಕ್ಕೂಟಕ್ಕೂ ಮಾನ್ಯತೆ ನೀಡಬಹುದು.

5. ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಮಾನ್ಯತೆ ಕೋರುವ ಯುವಜನ ಸಂಸ್ಥೆಗಳು ಮತ್ತು ಯುವಜನ ಸಬಲೀಕರಣ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ಸರ್ಕಾರೇತರ ಸಂಘ ಸಂಸ್ಥೆಗಳು, ತಾಲ್ಲೂಕು ಯುವಜನ ಸಂಸ್ಥೆಗಳ ಒಕ್ಕೂಟ ಹಾಗೂ ಜಿಲ್ಲಾ ಯುವಜನ ಸಂಸ್ಥೆಗಳ ಒಕ್ಕೂಟಗಳು ನಿಗದಿತ ಅರ್ಜಿ ನಮೂನೆಯಲ್ಲಿ ಕೆಳ ಕಾಣಿಸಿದ ದಾಖಲೆಗಳನ್ನು ಆಯಾ ಜಿಲ್ಲೆಗಳ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಿಗೆ ಕೆಳ ಕಾಣಿಸಿದ ದಾಖಲೆಗಳೊಂದಿಗೆ ಸಲ್ಲಿಸತಕ್ಕದ್ದು:–

ಅ) ಸಂಸ್ಥೆಯ ಬೈಲಾ, ದೃಢೀಕರಿಸಲ್ಪಟ್ಟ ಬೈಲಾ ಪ್ರತಿ

ಆ) ಮಾನ್ಯತೆ ಕೋರುವ ಸಂಸ್ಥೆಯ ಪದಾಧಿಕಾರಿಗಳ ಹೆಸರು, ವಯಸ್ಸು ಮತ್ತು ವಿಳಾಸದ ಪಟ್ಟಿ

ಇ) ಯುವಜನ ಸಂಸ್ಥೆಯ ಸಾಮಾನ್ಯ ಸದಸ್ಯರ ಸಭೆಯ ನಡವಳಿಗಳ ಪ್ರತಿ. ಸಾಮಾನ್ಯ ಸಭೆ ನಡೆದು 6 ತಿಂಗಳಿಗೂ ಹೆಚ್ಚು ಕಾಲವಾಗಿದ್ದಲ್ಲಿ, ಹೊಸದಾಗಿ ಸಾಮಾನ್ಯ ಸಭೆಯನ್ನು ನಡೆಸಿ ನಡವಳಿಗಳನ್ನು ಸಲ್ಲಿಸತಕ್ಕದ್ದು.

ಈ) ತಾಲ್ಲೂಕು ಯುವಜನ ಒಕ್ಕೂಟಗಳು ಮಾನ್ಯತೆಗಾಗಿ ನಿಗದಿತ ಅರ್ಜಿ ನಮೂನೆಯೊಂದಿಗೆ ಒಕ್ಕೂಟದ ಬೈಲಾ ಪ್ರತಿಗಳು ಹಾಗೂ ಒಕ್ಕೂಟಕ್ಕೆ ಸೇರಲು ಸಮ್ಮತಿ ಸೂಚಿಸಿರುವ ಎಲ್ಲಾ ಯುವಜನ ಸಂಘಗಳ ಸಮ್ಮತಿ ಪತ್ರ.

ಉ) ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ಮಾನ್ಯತೆ ಕೋರುವ ಜಿಲ್ಲಾ ಯುವಜನ ಒಕ್ಕೂಟಗಳು ಬೈಲಾ ಪ್ರತಿ ಪದಾಧಿಕಾರಿಗಳ ಹೆಸರು, ವಯಸ್ಸು ಮತ್ತು ವಿಳಾಸದ ಪ್ರತಿ ಹಾಗೂ ಜಿಲ್ಲಾ ಒಕ್ಕೂಟದಲ್ಲಿ ಸೇರಲು ಎಲ್ಲಾ ತಾಲ್ಲೂಕು ಯುವ ಒಕ್ಕೂಟಗಳ ಸಮ್ಮತಿ ಪತ್ರ.

ಊ) ಮಾನ್ಯತೆ ಕೋರುವ ಸಂಸ್ಥೆಯು ಒಂದು ವರ್ಷಕ್ಕೂ ಹಿಂದೆ ಸ್ಥಾಪಿತವಾಗಿದ್ದಲ್ಲಿ ಹಿಂದಿನ ವರ್ಷದ ಲೆಕ್ಕಪತ್ರಗಳ ಪರಿಶೀಲನಾ ವರದಿ.

ಋ) ಯುವಜನ ಸಂಸ್ಥೆಯು ಕರ್ನಾಟಕ ರಾಜ್ಯ ಸಂಘಸಂಸ್ಥೆಗಳ ನೊಂದಾವಣೆ ಕಾಯಿದೆ 1960ರ ಅಡಿಯಲ್ಲಿ ನೋಂದಾವಣೆಯಾಗಿರುವುದಕ್ಕೆ ನೀಡಲ್ಪಟ್ಟ ನೊಂದಾವಣೆ ಪತ್ರದ ದೃಢೀಕೃತ ಪ್ರತಿ.

ೠ) ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ನಿರ್ದೇಶಕರು ಅಥವಾ ಆಯುಕ್ತರು ಕಾಲಕಾಲಕ್ಕೆ ನಿಗದಿಪಡಿಸಿದ ಮಾನ್ಯತಾ ಶುಲ್ಕವನ್ನು ಸರ್ಕಾರದ ಖಜಾನೆಗೆ ಪಾವತಿಸತಕ್ಕದ್ದು.

6. ಜಿಲ್ಲಾ ಯುವ ಒಕ್ಕೂಟ, ತಾಲ್ಲೂಕು ಯುವ ಒಕ್ಕೂಟ, ಯುವಜನ ಸಂಸ್ಥೆಗಳು ಹಾಗೂ ಯುವಜನ ಅಭಿವೃದ್ಧಿಯಲ್ಲಿ ತೊಡಗಿಸಿಕೊಂಡಿರುವ ಯುವಜನ ಸಂಸ್ಥೆಗಳಿಗೆ ಮಾನ್ಯತೆ ನೀಡುವ

ಅಧಿಕಾರವನ್ನು ಆಯಾ ಜಿಲ್ಲೆಯ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಿಗೆ ಪ್ರತ್ಯಾಯೋಜಿಸಲಾಗಿದೆ.

7. ಮಾನ್ಯತೆ ಕೋರಿ ಸಲ್ಲಿಸಿದ ಸಂಸ್ಥೆಯ 15 ರಿಂದ 35 ವರ್ಷದ ಒಳಗಿನ ಯುವಜನರ ಅಭಿವೃದ್ಧಿಗೆ ಮತ್ತು ಸಬಲೀಕರಣಕ್ಕೆ ತೊಡಗಿಸಿಕೊಂಡಿರುವ ಬಗ್ಗೆ ದೃಢೀಕರಿಸಿಕೊಂಡು ಸಹಾಯಕ ನಿರ್ದೇಶಕರು ದೃಢೀಕರಿಸಿಕೊಳ್ಳತಕ್ಕದ್ದು ಮತ್ತು ಕರ್ನಾಟಕ ಸಂಘ ಸಂಸ್ಥೆಗಳ ನೊಂದಾವಣೆ ಕಾಯಿದೆ 1960ರ ಅಡಿಯಲ್ಲಿ ನೊಂದಾಯಿಸಲ್ಪಟ್ಟಿದ್ದರೆ ಮಾತ್ರ ಮಾನ್ಯತೆ ನೀಡತಕ್ಕದ್ದು.

8. ಮಾನ್ಯತೆ ಪಡೆದ ಸಂಘ ಸಂಸ್ಥೆಗಳ ಬೈಲಾದಲ್ಲಿ ಯಾವುದೇ ರೀತಿಯಾದ ಬದಲಾವಣೆಗಳನ್ನು ಸಾಮಾನ್ಯ ಸಭೆಯಲ್ಲಿ ನಿರ್ಣಯ ಕೈಗೊಂಡಿದ್ದಲ್ಲಿ ಈ ಬದಲಾವಣೆಗಳು ಸಹಾಯಕ ನಿರ್ದೇಶಕರ ಕಚೇರಿಗೆ ಸಲ್ಲಿಸತಕ್ಕದ್ದು. ಹೀಗೆ ಮಾರ್ಪಡಿಸಿದ ನಿಯಮಗಳು ಕಾನೂನು ಬದ್ಧವಾಗಿದ್ದಲ್ಲಿ ಹಾಗೂ ಒಟ್ಟಾರೆ ಯುವ ಚಟುವಟಿಕೆಗಳ ಉದ್ದೇಶ ಸಾಧನೆಗಾಗಿ ಪರಿಷ್ಕೃತವಾಗಿದ್ದಲ್ಲಿ ಮಾತ್ರ ಸಹಾಯಕ ನಿರ್ದೇಶಕರು ಈ ಮಾರ್ಪಾಡಿಗೆ ಸಮ್ಮತಿ ಸೂಚಿಸಿ ಕಚೇರಿಯಲ್ಲಿ ದಾಖಲಿಸಿಕೊಳ್ಳತಕ್ಕದ್ದು.

9. ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯಿಂದ ನೀಡಲ್ಪಟ್ಟ ಮಾನ್ಯತೆಯ ಆಯಾ ಆರ್ಥಿಕ ವರ್ಷದ ಅಂತ್ಯದವರೆಗೆ ಮಾತ್ರ ಚಾಲ್ತಿಯಲ್ಲಿರತಕ್ಕದ್ದು.

10. ಹೊಸ ಆರ್ಥಿಕ ವರ್ಷದ 90 ದಿನಗಳೊಳಗಾಗಿ ಮಾನ್ಯತೆಯನ್ನು ನವೀಕರಿಸದಿದ್ದಲ್ಲಿ ಮಾನ್ಯತೆಯು ರದ್ದಾಗಿದೆಯೆಂದು ಭಾವಿಸತಕ್ಕದ್ದು.

11. ಹೊಸ ವರ್ಷದ 90 ದಿನಗಳ ನಂತರ ಮಾನ್ಯತೆಯನ್ನು ಕೋರುವ ನವೀಕರಣದ ಅರ್ಜಿಯನ್ನು ತಿರಸ್ಕರಿಸತಕ್ಕದ್ದು ಮತ್ತು ಅಂತಹ ಸಂಸ್ಥೆಗಳು ಮತ್ತೆ ಹೊಸದಾಗಿ ಮಾನ್ಯತೆಗಾಗಿ ಅರ್ಜಿ ಸಲ್ಲಿಸತಕ್ಕದ್ದು.

12. ಹೊಸ ಆರ್ಥಿಕ ವರ್ಷದಲ್ಲಿ ಮಾನ್ಯತೆಯನ್ನು ನವೀಕರಿಸುವ ಸಂದರ್ಭದಲ್ಲಿ ಆಯಾ ಸಂಸ್ಥೆಗಳು ಕೆಳ ಕಾಣಿಸಿದ ದಾಖಲೆಗಳನ್ನು ಸಲ್ಲಿಸತಕ್ಕದ್ದು:–

ಅ) ಇತ್ತೀಚೆಗೆ ನಡೆದ ಸಾಮಾನ್ಯ ಸಭೆಯ ದೃಢೀಕೃತ ನಡವಳಿಗಳ ಪ್ರತಿಗಳು

ಆ) ಹಿಂದಿನ ವರ್ಷದ ಲೆಕ್ಕ ಪತ್ರಗಳ ಪರಿಶೀಲನಾ ವರದಿ

ಇ) ಹೊಸ ಆರ್ಥಿಕ ವರ್ಷಕ್ಕೆ ಆಯ್ಕೆಯಾಗಿರುವ ಪದಾಧಿಕಾರಿಗಳ ಹೆಸರು, ವಯಸ್ಸು ಮತ್ತು ವಿಳಾಸಗಳ ಪಟ್ಟಿ.

ಈ) ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ಮುಖ್ಯಸ್ಥರು ಕಾಲ ಕಾಲಕ್ಕೆ ನಿಗದಿಪಡಿಸಿದ ನವೀಕರಣ ಶುಲ್ಕ.

13. ಮಾನ್ಯತೆ ಪಡೆದ ಯಾವುದೇ ಯುವಜನ ಸಂಸ್ಥೆ, ಯಾವುದೇ ವ್ಯಕ್ತಿ ಅಥವಾ ಗುಂಪುಗಳಿಗೆ ಸದಸ್ಯತ್ವ ನಿರಾಕರಿಸಿದಲ್ಲಿ; ತಾಲ್ಲೂಕು ಯುವ ಒಕ್ಕೂಟಗಳು ಯಾವುದೇ ಮಾನ್ಯತೆ ಪಡೆದ ಸಂಸ್ಥೆಗೆ ಸದಸ್ಯತ್ವ ನಿರಾಕರಿಸಿದಲ್ಲಿ, ಜಿಲ್ಲಾ ಯುವ ಒಕ್ಕೂಟವು ಯಾವುದೇ ತಾಲ್ಲೂಕು ಒಕ್ಕೂಟಕ್ಕೆ ಸದಸ್ಯತ್ವ ನಿರಾಕರಿಸಿದ್ದಲ್ಲಿ ಸದಸ್ಯತ್ವ ನಿರಾಕರಿಸುವ ಸಂಸ್ಥೆಯ ಮಾನ್ಯತೆಯನ್ನು ಸಹಾಯಕ 3 ನಿರ್ದೇಶಕರು ಹಿಂಪಡೆಯತಕ್ಕದ್ದು.

14. ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ಮಾನ್ಯತೆ ಪಡೆಯದ ಯಾವುದೇ ಸಂಸ್ಥೆಯು ಇಲಾಖೆಯ ವತಿಯಿಂದ ಯಾವುದೇ ಅನುದಾನಕ್ಕೆ ಸವಲತ್ತು, ಸೌಲಭ್ಯಗಳಿಗೆ ಅರ್ಹವಾಗಿರುವುದಿಲ್ಲ.

15. ಮಾನ್ಯತಾ ಶುಲ್ಕ ಮತ್ತು ನವೀಕರಣ ಶುಲ್ಕಗಳನ್ನು ಸರ್ಕಾರದ ಲೆಕ್ಕ ಶೀರ್ಷಿಕೆ "0202 ಶಿಕ್ಷಣ, ಕ್ರೀಡೆ ಮತ್ತು ಸಂಸ್ಕೃತಿ 03 ಕ್ರೀಡೆಗಳು ಮತ್ತು ಯುವಜನ ಸೇವೆಗಳು 800 ಇತರೆ ಜಮೆಗಳು 2 ಇತರೆ ಜಮೆಗಳು" ಅಡಿಯಲ್ಲಿ ಖಜಾನೆಗೆ ಜಮಾ ಮಾಡತಕ್ಕದ್ದು. ಈ ಬಗ್ಗೆ ಪರಿಪೂರ್ಣವಾದ ಮಾನ್ಯತಾ ಶುಲ್ಕ ಮತ್ತು ನವೀಕರಣ ಶುಲ್ಕ ನಿಗದಿಪಡಿಸಿ ಹೊರಡಿಸುವ ಆದೇಶದಲ್ಲಿ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ಮುಖ್ಯಸ್ಥರು ಕಾರ್ಯವಿಧಾನವನ್ನು ನಿಗದಿಪಡಿಸತಕ್ಕದ್ದು.

16. ಯಾವುದೇ ಮಾನ್ಯತೆ ಪಡೆದ ಸಂಸ್ಥೆಯ ಚಟುವಟಿಕೆಗಳ ಬಗ್ಗೆ ಅಥವಾ ಹಣಕಾಸು ನಿರ್ವಹಣೆಯ ಬಗ್ಗೆ ದೂರುಗಳು ಬಂದಲ್ಲಿ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ವಿಚಾರಣೆಯನ್ನು ಆರಂಭಿಸತಕ್ಕದ್ದು. ಸಂಸ್ಥೆಯ ಕಾರ್ಯಕಾರಿ ಸಮಿತಿಯ ಸದಸ್ಯರ ಸಂಖ್ಯೆಯ ಅರ್ಧಕ್ಕೂ ಹೆಚ್ಚಿನ ಸದಸ್ಯರು ಅಥವಾ ಸಂಸ್ಥೆಯ ಒಟ್ಟಾರೆ ಸದಸ್ಯರ ಸಂಖ್ಯೆಯ ಶೇ.34ರಷ್ಟು ಸದಸ್ಯರು ದೂರು ಸಲ್ಲಿಸಿದಲ್ಲಿ ಈ ವಿಚಾರಣೆಯನ್ನು ಕೈಗೆತ್ತಿಕೊಳ್ಳಬಹುದು.

17. ಈ ವಿಚಾರಣೆಯ ಸಂದರ್ಭದಲ್ಲಿ ಸಂಸ್ಥೆಯ ಚಟುವಟಿಕೆಗೆ ಸಂಬಂಧಿಸಿದ ಯಾವುದೇ ದಾಖಲೆಗಳನ್ನು ಪಡೆಯಲು ಅಥವಾ ಯಾವುದೇ ವ್ಯಕ್ತಿಯನ್ನು ವಿಚಾರಿಸಲು ಸಹಾಯಕ ನಿರ್ದೇಶಕರು ಅಥವಾ ಅವರಿಂದ ನಾಮ ನಿರ್ದೇಶನ ಮಾಡಲ್ಪಟ್ಟ ಅಧಿಕಾರಿಗೆ ಪೂರ್ಣ ಅಧಿಕಾರ ನೀಡಲಾಗಿದೆ.

18. ವಿಚಾರಣೆಯ ಸಂದರ್ಭದಲ್ಲಿ ಸಂಸ್ಥೆಯ ಒಳಿತಿಗಾಗಿ ಮತ್ತು ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ನಡೆಸಲು ಅಗತ್ಯವೆಂದು ಕಂಡುಬಂದಲ್ಲಿ ಸಹಾಯಕ ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಇವರು ಸಂಸ್ಥೆಯ ಎಲ್ಲಾ ಸದಸ್ಯರ ಸಾಮಾನ್ಯ ಸಭೆ ಕರೆಯಲು ಮತ್ತು ಹೊಸ ಪದಾಧಿಕಾರಿಗಳನ್ನು ಆಯ್ಕೆ ಮಾಡಲು ಆದೇಶಿಸಬಹುದಾಗಿರುತ್ತದೆ.

19. ಮಾನ್ಯತೆ ಪಡೆದ ಯಾವುದೇ ಸಂಸ್ಥೆಯು ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿದ್ದು ಅಥವಾ ಸಂಸ್ಥೆಯ ಉದ್ದೇಶ ಸಾಧನೆಗಾಗಿ ಪೂರಕವಾಗಿ ಕಾರ್ಯನಿರ್ವಹಿಸದೆ ಇದ್ದ ಪಕ್ಷದಲ್ಲಿ ಆ ಸಂಸ್ಥೆಗೆ ನೀಡಲಾದ ಮಾನ್ಯತೆಯನ್ನು ಹಿಂಪಡೆಯಲು ಆಯಾ ಜಿಲ್ಲೆಯ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಿಗೆ ಅಧಿಕಾರ ನೀಡಲಾಗಿದೆ.

20. ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯಿಂದ ಮಾನ್ಯತೆ ನೀಡುವ ಅರ್ಜಿಯನ್ನು ಸಕಾರಣ ನೀಡದೆ ತಿರಸ್ಕರಿಸಿದಲ್ಲಿ ಅಥವಾ ಮಾನ್ಯತೆಯನ್ನು ನವೀಕರಿಸಲು ನಿರಾಕರಿಸಿದಲ್ಲಿ ಅಥವಾ ಮಾನ್ಯತೆಯನ್ನು ಹಿಂದಕ್ಕೆ ಪಡೆಯಲು ಆದೇಶಿಸಿದಲ್ಲಿ ಆ ಆದೇಶಗಳ ಬಗ್ಗೆ ಸಂಸ್ಥೆಯು ಅಥವಾ ವ್ಯಕ್ತಿಯು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ನಿರ್ದೇಶಕರಿಗೆ ಅಪೀಲು ಸಲ್ಲಿಸಬಹುದಾಗಿರುತ್ತದೆ ಮತ್ತು ಈ ಬಗ್ಗೆ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ಮುಖ್ಯಸ್ಥರ ಆದೇಶ ಅಂತಿಮವಾಗಿರುತ್ತದೆ

**ರಾಜ್ಯದಲ್ಲಿ ಅಕ್ರಮ-ಸಕ್ರಮ ಯೋಜನೆಯನ್ವಯ ನಮೂನೆ 50 ಹಾಗೂ 53 ರಂತೆ ಭೂ ಮಂಜೂರಾತಿಗೆ ಸಂಬಂಧಿಸಿದ ಮಾಹಿತಿ ಕೋರಿ.**

**104; ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ರಾಜ್ಯದಲ್ಲಿ ಅಕ್ರಮ-ಸಕ್ರಮ ಯೋಜನೆಯನ್ವಯ ನಮೂನೆ 50 ಹಾಗೂ 53ರಂತೆ ಭೂ ಮಂಜೂರಾತಿಗೆ ಸಂಬಂಧಿಸಿದಂತೆ ಯೋಜನೆ ಜಾರಿ ದಿನಾಂಕದಿಂದ ಇಲ್ಲಿಯವರೆಗೆ ಸರಕಾರ ಹೊರಡಿಸಿದ ಎಲ್ಲಾ ಸುತ್ತೋಲೆಯಗಳ ಪ್ರತಿಯು ತಾಲ್ಲೂಕು ಕಛೇರಿಯಲ್ಲಿ ಲಬ್ಯವಿಲ್ಲದೆ ಇರುವ ವಿಚಾರ ಸರಕಾರದ ಗಮನಕ್ಕೆ ಬಂದಿದೆಯೇ; (ಸರಕಾರ ಹೊರಡಿಸಿದ ಎಲ್ಲಾ ಸುತ್ತೋಲೆಗಳ ಪ್ರತಿ ಒದಗಿಸುವುದು)

**ಆ)** ಬಂದಿದ್ದಲ್ಲಿ, ಸರಕಾರದ ನಿಯಮಾವಳಿಯನ್ನು ಪಾಲಿಸದೆ ಭೂ ಮಂಜೂರಾತಿ ಮಾಡಿದ ಎಷ್ಟು ಪ್ರಕರಣಗಳು ದಾಖಲಾಗಿವೆ?

**ಶ್ರೀ ಡಿ.ವಿ. ಸದಾನಂದ ಗೌಡ (ಮಾನ್ಯಮಂತ್ರಿಯವರು)**

**ಅ)** ಇಲ್ಲ

ಸರ್ಕಾರಿ ಜಮೀನಿನಲ್ಲಿ ಅನಧಿಕೃತವಾಗಿ ಸಾಗುವಳಿ ಮಾಡುತ್ತಿದ್ದು, ಸಕ್ರಮಿಕರಣ ಕೋರಿ ನಮೂನೆ 50 ಹಾಗೂ 53ರಲ್ಲಿ ಸಲ್ಲಿಸಲಾಗಿರುವ ಅರ್ಜಿಗಳ ಭೂ ಮಂಜೂರಾತಿಗೆ ಸಂಬಂಧಿಸಿದಂತೆ, ಸರಕಾರದಿಂದ ಹೊರಡಿಸಲಾದ ಸುತ್ತೋಲೆಗಳ ಪ್ರತಿಗಳನ್ನು ಮಾನ್ಯ ಸದಸ್ಯರಿಗೆ ಒದಗಿಸಿದೆ.

**ಆ)** ಇಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಆದಾಗ್ಯೂ ನಿಯಮಾವಳಿಗಳ ವಿರುದ್ಧ ಭೂ ಮಂಜೂರಾತಿ ಮಾಡಿರುವ ಪ್ರಕರಣಗಳಲ್ಲಿ ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ನಿಯಮ 108 (ಕೆ)ರನ್ವಯ ರದ್ದುಪಡಿಸಲು ಅವಕಾಶ ಕಲ್ಪಿಸಲಾಗಿದೆ.

**ಉಡುಪಿ ಜಿಲ್ಲೆಯಲ್ಲಿ ಕಳೆದ 2 ವರ್ಷಗಳಲ್ಲಿ ಆರೋಗ್ಯ ರಕ್ಷಾ ಸಮಿತಿಗೆ ಬಿಡುಗಡೆಯಾದ ಹಣದ ಮಾಹಿತಿ ಕುರಿತು.**

**106; ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ಕಳೆದ ಎರಡು ವರ್ಷಗಳಿಂದ ಉಡುಪಿ ಜಿಲ್ಲೆಯಲ್ಲಿ ಆರೋಗ್ಯ ರಕ್ಷಾ ಸಮಿತಿಗೆ ಬಿಡುಗಡೆಯಾದ ಹಣವೆಷ್ಟು; (ತಾಲ್ಲೂಕುವಾರು, ಪ್ರಾಥಮಿಕ ಆರೋಗ್ಯ ಕೇಂದ್ರವಾರು, ವರ್ಷವಾರು ವಿವರ ನೀಡುವುದು)

**ಆ)** ಆರೋಗ್ಯ ರಕ್ಷಾ ಸಮಿತಿಗೆ ಬಿಡುಗಡೆಯಾದ ಹಣದಲ್ಲಿ ವೆಚ್ಚವಾದ ಹಾಗೂ ವೆಚ್ಚ ಮಾಡದೆ ಉಳಿದ ಹಣವೆಷ್ಟು; (ತಾಲ್ಲೂಕುವಾರು, ಪ್ರಾಥಮಿಕ ಆರೋಗ್ಯ ಕೇಂದ್ರವಾರು ವಿವರ ನೀಡುವುದು)

**ಇ)** ಆರೋಗ್ಯ ರಕ್ಷಾ ಸಮಿತಿಗೆ ಬಿಡುಗಡೆಯಾದ ಹಣ ವೆಚ್ಚ ಮಾಡದಿದ್ದಲ್ಲಿ ಅದನ್ನು ವೆಚ್ಚ ಮಾಡದಿರಲು ಕಾರಣವೇನು?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿ)**

**ಅ)** **ಮತ್ತು ಆ)** ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

**ಇ)** ಆರೋಗ್ಯ ರಕ್ಷಾ ಸಮಿತಿಗಳಿಗೆ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದಡಿಯಲ್ಲಿ ಎಲ್ಲಾ ಹಂತದ ಆರೋಗ್ಯ ಕೇಂದ್ರಗಳು / ಆಸ್ಪತ್ರೆಗಳಿಗೆ ನಿಗದಿಪಡಿಸಿದ ಅನುದಾನವನ್ನು ವಾರ್ಷಿಕವಾಗಿ ಬಿಡುಗಡೆ ಮಾಡಲಾಗುತ್ತಿದೆ. ಬಿಡುಗಡೆ ಮಾಡಿದ ಹಣವನ್ನು ನಿರ್ದಿಷ್ಟ ಬಾಬುಗಳಿಗೆ ವೆಚ್ಚ ಮಾಡಲು ವಿವರವಾದ ಮಾರ್ಗಸೂಚಿಗಳನ್ನು ನೀಡಲಾಗಿದೆ. ಉದಾಹರಣೆಗೆ ಸದರಿ ಅನುದಾನವನ್ನು ಅವಶ್ಯಕತೆಗನುಗುಣವಾಗಿ ಔಷಧಿ, ರಾಸಾಯನಿಕ ಮತ್ತು ಸಣ್ಣಪುಟ್ಟ ಉಪಕರಣಗಳ ಖರೀದಿ, ಆಸ್ಪತ್ರೆಗಳ ಕಟ್ಟಡಗಳ ದುರಸ್ತಿ ಮತ್ತು ನಿರ್ವಹಣೆ, ಆಸ್ಪತ್ರೆಯ ಸ್ವಚ್ಛತೆ ನಿರ್ವಹಣೆ ಇತ್ಯಾದಿಗಳಿಗಾಗಿ ಉಪಯೋಗಿಸಿಕೊಳ್ಳಬಹುದಾಗಿದೆ. ಆರೋಗ್ಯ ರಕ್ಷಾ ಸಮಿತಿಯು ಈ ಬಗ್ಗೆ ಸ್ವತಂತ್ರವಾಗಿ ನಿರ್ಧಾರ ಕೈಗೊಳ್ಳಲು ಸಂಪೂರ್ಣ ಅಧಿಕಾರ ನೀಡಲಾಗಿದೆ. ಆಯಾಯ ಆರೋಗ್ಯ ರಕ್ಷಾ ಸಮಿತಿಗಳು ತನ್ನ ವಿವೇಚನೆಗೆ ಒಳಪಟ್ಟು ಮಾರ್ಗಸೂಚಿಗಳ ಪ್ರಕಾರ ಸದರಿ ಅನುದಾನವನ್ನು ಉಪಯೋಗಿಸಿಕೊಳ್ಳಬಹುದಾಗಿದೆ.

## ಅನುಬಂಧ

### ಉಡುಪಿ ಜಿಲ್ಲೆಯಲ್ಲಿ ಆರೋಗ್ಯ ರಕ್ಷಾ ಸಮಿತಿಗೆ ಬಿಡುಗಡೆಯಾದ ಅನುದಾನ ಮತ್ತು ವೆಚ್ಚದ ವಿವರ (₹ ಗಳಲ್ಲಿ)

| ಕ್ರ. ಸಂ. | ಸಂಸ್ಥೆಗಳ ಹೆಸರು | 2009-10 | | | 2010-11 | | |
|---|---|---|---|---|---|---|---|
| | | ಬಿಡುಗಡೆಯಾದ ಅನುದಾನ | ವೆಚ್ಚ | ಬಾಕಿ | ಬಿಡುಗಡೆಯಾದ ಅನುದಾನ | ವೆಚ್ಚ | ಬಾಕಿ |
| ಉಡುಪಿ ತಾಲ್ಲೂಕು | | | | | | | |
| 1 | ಸ.ಆ.ಕೇಂದ್ರ ಬ್ರಹ್ಮಾವರ | 300590.00 | 198954.00 | 101636.00 | 251211.00 | 247744.00 | 3467.00 |
| 2 | ಸ.ಆ.ಕೇಂದ್ರ ಸಿರ್ವ | 502272.00 | 407449.00 | 94823.00 | 203070.00 | 199295.00 | 3775.00 |
| 3 | ಆವರ್ಸೆ | 175001.00 | 171514.34 | 3486.66 | 155270.00 | 86651.00 | 68619.00 |
| 4 | ಬಾರ್ಕೂರು | 218614.00 | 218264.00 | 350.00 | 155038.00 | 154678.00 | 360.00 |
| 5 | ಹಿರೆಬೆಟ್ಟು | 151886.00 | 95407.00 | 56479.00 | 163788.00 | 145282.00 | 18506.00 |
| 6 | ಹರಿಯಡ್ಕ | 199358.00 | 199851.00 | -493.00 | 154650.00 | 153775.00 | 875.00 |
| 7 | ಕಾಪು | 164366.00 | 163667.00 | 699.00 | 155139.00 | 154666.00 | 473.00 |
| 8 | ಕೆಮ್ಮಣ್ಣು | 175000.00 | 173007.00 | 1993.00 | 155000.00 | 153500.00 | 1500.00 |
| 9 | ಕೊಕ್ಕರ್ಣೆ | 171754.00 | 167274.15 | 4479.85 | 155395.00 | 155267.00 | 128.00 |
| 10 | ಕೋಡಿ ಬೆಂಗ್ರೆ | 206984.00 | 95867.00 | 111117.00 | 135840.00 | 74740.00 | 61100.00 |
| 11 | ಕೋಟ | 249025.00 | 30589.00 | 218436.00 | 247372.00 | 247218.00 | 154.00 |
| 12 | ಕೊಲಾಲ್‌ಗಿರಿ | 178436.00 | 178436.00 | 0.00 | 155000.00 | 133042.00 | 21958.00 |
| 13 | ಕುಕ್ಕೆಹಳ್ಳಿ | 170879.00 | 65902.00 | 104977.00 | 169036.00 | 163736.00 | 5300.00 |
| 14 | ಮಲ್ಪೆ | 175385.00 | 175385.00 | 0.00 | 155000.00 | 155000.00 | 0.00 |
| 15 | ಮಂದರ್ತಿ | 174412.00 | 174447.00 | -35.00 | 154945.00 | 152236.00 | 2709.00 |
| 16 | ಮಣಿಪುರ | 173671.00 | 120467.00 | 53204.00 | 162949.00 | 162610.00 | 339.00 |
| 17 | ಮುದರಂಗಡಿ | 138899.00 | 138454.00 | 445.00 | 155000.00 | 148699.00 | 6301.00 |
| 18 | ಮೂಡ್‌ಬೆಟ್ಟು | 174500.00 | 132160.00 | 42340.00 | 163283.00 | 163283.00 | 0.00 |
| 19. | ಪಡುಬಿದ್ರಿ | 175000.00 | 170245.00 | 4755.00 | 155949.00 | 32776.00 | 123173.00 |
| 20 | ಪೆರ್ನಾನ್‌ಕಿಲ | 189885.00 | 188131.00 | 1754.00 | 155141.00 | 113161.00 | 41980.00 |
| 21 | ಪೆತ್ರಿ | 174333.00 | 174091.00 | 242.00 | 155048.00 | 73675.00 | 81373.00 |
| 22 | ಸೈಬರಕಟ್ಟೆ | 24355.00 | -70490.00 | 94845.00 | 164547.00 | 147288.00 | 17259.00 |
| 23 | ಸಾಲಿಗ್ರಾಮ | 214800.00 | 109959.00 | 104841.00 | 167506.00 | 149012.00 | 18494.00 |
| 24 | ಸಾಸ್ತಾನ | 247533.00 | 247505.00 | 28.00 | 125008.00 | 125008.00 | 0.00 |
| 25 | ಜಿಲ್ಲಾ ಆಸ್ಪತ್ರೆ | 494327.00 | 494327.00 | 0.00 | 500000.00 | 500000.00 | 0.00 |
| 26 | ಮಹಿಳಾ ಮತ್ತು ಮಕ್ಕಳ | 500000.00 | 500000.00 | 0.00 | 0.00 | 0.00 | 0.00 |
| 27 | ನಗರ ಆರ್‌ಸಿಹೆಚ್ | 50000.00 | 43242.00 | 6758.00 | 50000.00 | 46610.00 | 3390.00 |

| | | | | | | | |
|---|---|---|---|---|---|---|---|
| ಕುಂದಾಪುರ ತಾಲ್ಲೂಕು | | | | | | | |
| 28 | ಆಲೂರು | 191200.00 | 189401.00 | 1799.00 | 155000.00 | 152087.00 | 2913.00 |
| 29 | ಬೈಂದೂರು | 321252.00 | 306564.40 | 14687.60 | 230699.00 | 223264.00 | 7435.00 |
| 30 | ಬಸ್ರೂರು | 173463.00 | 171380.00 | 2083.00 | 155184.00 | 154509.00 | 675.00 |
| 31 | ಬೆಳ್ವೆ | 207679.00 | 198443.00 | 9236.00 | 155000.00 | 152917.00 | 2083.00 |
| 32 | ಬಿದ್ಕಲ್ಕಟ್ಟೆ | 179745.00 | 177005.00 | 2740.00 | 155548.00 | 154048.00 | 1500.00 |
| 33 | ಗಂಗೊಳ್ಳಿ | 172468.00 | 132536.00 | 39932.00 | 162493.00 | 162374.00 | 119.00 |

| | | | | | | | |
|---|---|---|---|---|---|---|---|
| 34 | ಹಾಲಾಡಿ | **266070.00** | 254461.00 | 11609.00 | 156183.00 | 141231.00 | 14952.00 |
| 35 | ಕೆದೂರು | **184065.00** | 184065.00 | 0.00 | 155000.00 | 155000.00 | 0.00 |
| 36 | ಕಿರಿಮಂಜೇಶ್ವರ | **286784.00** | 279076.00 | 7708.00 | 155884.00 | 155884.00 | 0.00 |
| 37 | ಕೊಲ್ಲೂರು | **138653.00** | 114782.00 | 23871.00 | 159610.00 | 159223.00 | 387.00 |
| 38 | ಕೊರ್ಗಿ | **196346.00** | 194561.00 | 1785.00 | 155096.00 | 155096.00 | 0.00 |
| 39 | ಕುಂಬಸಿ | **159980.00** | 157525.00 | 2455.00 | 155483.00 | 153841.00 | 1642.00 |
| 40 | ಮರವಂತೆ | **168267.00** | 165604.00 | 2663.00 | 155108.00 | 155015.00 | 93.00 |
| 41 | ನಡ | **204026.00** | 204026.00 | 0.00 | 155000.00 | 155000.00 | 0.00 |
| 42 | ಶಂಕರನಾರಾಯಣ | **193443.00** | 186343.00 | 7100.00 | 155042.00 | 152702.00 | 2340.00 |
| 43 | ಶಿರೂರು | **241600.00** | 240909.00 | 691.00 | 155000.00 | 150982.00 | 4018.00 |
| 44 | ಸಿದ್ದಾಪುರ | **248420.00** | 185276.00 | 63144.00 | 158216.00 | 157856.00 | 360.00 |
| 45 | ವಂಡ್ಸೆ | **173145.00** | 84763.00 | 88382.00 | 172022.00 | 171090.00 | 932.00 |
| 46 | ಹಕ್ಲಡಿ | **175445.00** | 171935.00 | 3510.00 | 155548.00 | 153983.00 | 1565.00 |
| 47 | ಹಲ್ಲಿಹೊಳೆ | **174750.00** | 13050.00 | 161700.00 | 190000.00 | 174450.00 | 15550.00 |
| 48 | ಕೋಟೇಶ್ವರ | **200187.00** | 199797.00 | 390.00 | 155060.00 | 155053.00 | 7.00 |
| 49 | ಕಂದ್ಲೂರು | **175000.00** | 169867.00 | 5133.00 | 155561.00 | 155561.00 | 0.00 |
| 50 | ಕೋಡಿ | **245455.00** | 235568.00 | 9887.00 | 156367.00 | 147965.00 | 8402.00 |
| 51 | ತಾಲ್ಲೂಕು ಆಸ್ಪತ್ರೆ, ಕುಂದಾಪುರ | **900000.00** | 794610.00 | 105390.00 | 235390.00 | 235390.00 | 0.00 |

| | | | | | | | |
|---|---|---|---|---|---|---|---|
| ಕಾರ್ಕಳ ತಾಲ್ಲೂಕು | | | | | | | |
| 52 | ಸ.ಆ.ಕೇಂದ್ರ ಹೆಬ್ರಿ | 338898.00 | 64286.00 | 274612.00 | 332733.00 | 332120.00 | 613.00 |
| 53 | ಸ.ಆ.ಕೇಂದ್ರ ನಿಟ್ಟೆ | 700000.00 | 696513.00 | 3487.00 | 229095.00 | 210350.00 | 18745.00 |
| 54 | ಅಜೇಕರ್ | 175000.00 | 169765.00 | 5235.00 | 155000.00 | 147344.00 | 7656.00 |
| 55 | ಬಜಗುಳಿ | 174569.00 | 81599.00 | 92970.00 | 169877.00 | 164204.00 | 5673.00 |
| 56 | ಬೆಳ್ಮಣ್ಣು | 175000.00 | 169460.00 | 5540.00 | 155645.00 | 155206.00 | 439.00 |
| 57 | ಬೈಲೂರು | 219809.00 | 203990.00 | 15819.00 | 166362.00 | 166302.00 | 60.00 |
| 58 | ದೋಂಡರಂಗಡಿ | 175558.00 | 78952.00 | 96606.00 | 166777.00 | 50312.00 | 116465.00 |
| 59 | ಹಿರ್ಗಣ | 164450.00 | 134425.00 | 30025.00 | 137372.00 | 51814.00 | 85558.00 |
| 60 | ಇರ್ವತೂರು | 175135.00 | 122361.00 | 52774.00 | 160830.00 | 144919.00 | 15911.00 |
| 61 | ಮಾಳ | 173889.00 | 52693.00 | 121196.00 | 175000.00 | 166666.00 | 8334.00 |
| 62 | ಪಳ್ಳಿ | 175000.00 | 169493.00 | 5507.00 | 156411.00 | 140504.00 | 15907.00 |
| 63 | ಸಚೇರಿಪೇಟೆ | 254148.00 | 244254.80 | 9893.20 | 176430.00 | 168743.00 | 7687.00 |
| 64 | ಇದು | 161135.00 | 65654.50 | 95480.50 | 162240.50 | 106683.50 | 55557.00 |
| 65 | ದುರ್ಗ | 175000.00 | 4130.00 | 170870.00 | 200000.00 | 199803.00 | 197.00 |
| 66 | ಇನ್ನು | 175000.00 | 169879.00 | 5121.00 | 155000.00 | 155000.00 | 0.00 |
| 67 | ಕುಕ್ಕಂದೂರು | 174410.00 | 42702.00 | 131708.00 | 175000.00 | 78351.32 | 96648.68 |
| 68 | ನಂದಳಿಕೆ | 175000.00 | 170755.00 | 4245.00 | 155250.00 | 155250.00 | 0.00 |
| 69 | ತಾಲ್ಲೂಕು ಆಸ್ಪತ್ರೆ, ಕಾರ್ಕಳ | 900000.00 | 717915.00 | 182085.00 | 362085.00 | 325325.00 | 36760.00 |
| | ಒಟ್ಟು | 16010709.00 | 13134479.19 | 2876229.81 | 11860786.50 | 10842369.82 | 1018416.68 |

## ಇಂಟರ್ ಮಿಡಿಯೆಟ್ ರಿಂಗ್ ರಸ್ತೆ ದೊಮ್ಮಲೂರು ಇದರ ಅನಾನುಕೂಲತೆಯ ಕುರಿತು

**107; ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರು)**

**ಅ)** ಬೆಂಗಳೂರು ನಗರದ ಇಂಟರ್ ಮಿಡಿಯೇಟ್ ರಿಂಗ್ ರಸ್ತೆ ದೊಮ್ಮಲೂರು ಈ ರಸ್ತೆಯಲ್ಲಿ ವಾಹನ ಸಂಚಾರ ದಟ್ಟವಾಗಿದ್ದು ಪಾದಚಾರಿಗಳಿಗೆ ರಸ್ತೆ ದಾಟಲು ಅನಾನುಕೂಲವಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೇ; ಬಂದಿದಲ್ಲಿ ಈ ಸಮಸ್ಯೆಯನ್ನು ಪರಿಹರಿಸಲು ಸರಕಾರ ತೆಗೆದುಕೊಂಡ ಕ್ರಮಗಳೇನು:

**ಆ)** ಇಲ್ಲವಾದಲ್ಲಿ, ಈ ಬಗ್ಗೆ ಸರಕಾರ ತೆಗೆದುಕೊಳ್ಳುವ ಕ್ರಮಗಳೇನು?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಯವರು)**

**ಅ) ಮತ್ತು ಆ)** ಬೆಂಗಳೂರು ನಗರದ ಇಂಟರ್ ಮಿಡಿಯೇಟ್ ರಿಂಗ್ ರಸ್ತೆಯಲ್ಲಿ ವಾಹನ ಸಂಚಾರ ದಟ್ಟಣೆ ಹೆಚ್ಚಾಗಿದ್ದು ಸದರಿ ರಸ್ತೆಯಲ್ಲಿ ಪಾದಚಾರಿಗಳಿಗೆ ರಸ್ತೆ ದಾಟಲು ಅನಾನುಕೂಲವಾಗಿರುವುದು ಗಮನಕ್ಕೆ ಬಂದಿದ್ದು, ಈ ಸಮಸ್ಯೆಯನ್ನು ಪರಿಹರಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆವತಿಯಿಂದ ಸದರಿ ಸ್ಥಳದಲ್ಲಿ ಅಂದರೆ ಎಂಬೆಸಿ ಸ್ಕ್ವೆರ್ ಹತ್ತಿರ ಪಾದಾಚಾರಿ ಮೇಲು ಸೇತುವೆಯನ್ನು ನಿರ್ಮಿಸಲು ಯೋಜನೆಯನ್ನು ರೂಪಿಸಲಾಗಿದೆ. ಈ ಯೋಜನೆಯನ್ನು ಪಿ.ಪಿ.ಪಿ ಮಾದರಿ ಅಡಿಯಲ್ಲಿ ನಿರ್ಮಿಸಲು ತೀರ್ಮಾನಿಸಿದ್ದು, ಸಧ್ಯದಲ್ಲಿಯೇ ಟೆಂಡರ್ ಕರೆಯಲು ಕ್ರಮವಹಿಸಲಾಗಿದೆ ಮತ್ತು ಪಾದಚಾರಿಗಳಿಗೆ ಅನುಕೂಲವಾಗುವಂತೆ ಅಗತ್ಯ ಸಿಬ್ಬಂದಿಗಳನ್ನು ನೇಮಕ ಮಾಡಿ ಕ್ರಮ ಕೈಗೊಳ್ಳಲಾಗುತ್ತಿದೆ.

**ಆಡಳಿತಾಧಿಕಾರಿ ಹುದ್ದೆ ನೇಮಕಾತಿ ಬಗ್ಗೆ**

**111; ಡಾ॥ ಎಸ್.ಆರ್. ಲೀಲಾ (ನಾಮ ನಿರ್ದೇಶನ ಹೊಂದಿದವರು)**

ಅ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯದಲ್ಲಿ ಖಾಲಿ ಇರುವ ಆಡಳಿತಾಧಿಕಾರಿಗಳ ಹುದ್ದೆಗಳು ಎಷ್ಟು; ಅವು ಎಷ್ಟು ವರ್ಷದಿಂದ ಖಾಲಿ ಇರುತ್ತದೆ;

ಆ) ಹಾಗಿದ್ದಲ್ಲಿ, ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಇರುವ ತೊಂದರೆಗಳೇನು; ಎಷ್ಟು ದಿನಗಳೊಳಗೆ ಭರ್ತಿ ಮಾಡಲಾಗುವುದು?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)**

ಅ) ದಿನಾಂಕ: 31–01–2012 ರಂದು ವಯೋ ನಿವೃತ್ತಿಯಂದ 2 ಆಡಳಿತಾಧಿಕಾರಿಗಳ ಹುದ್ದೆಗಳು ಖಾಲಿಯಾಗಿವೆ.

ಆ) ಈ ಹುದ್ದೆಗಳನ್ನು ಬಡ್ತಿ ಮೂಲಕ ಭರ್ತಿ ಮಾಡಬೇಕಾಗಿದ್ದು, ಬಡ್ತಿ ನೀಡುವ ಪ್ರಕ್ರಿಯೆ ಪ್ರಾರಂಭಿಸಲಾಗಿದೆ.

**ಮರಳು ದಂಧೆ ಬಗ್ಗೆ**

**112; ಶ್ರೀಮತಿ ಡಾ॥ ಎಸ್.ಆರ್. ಲೀಲಾ (ನಾಮನಿರ್ದೇಶನ ಹೊಂದಿದವರು)**

ಅ) ಕಳೆದ ಒಂದು ವರ್ಷದಿಂದ ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿನ ಮಾಗೊಂದಿ ಗ್ರಾಮ ಪಂಚಾಯ್ತಿಗೆ ಸೇರಿದ ವರದಾಪುರ ಕೆರೆಯಲ್ಲಿ ಮರಳು, ದಂಧೆ ಅವ್ಯಾಹತವಾಗಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದರೆ, ಅದನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಇ) ಮರಳು ದಂಧೆ ತಡೆಗಟ್ಟುವಲ್ಲಿ ವಿಫಲವಾದ ಅಧಿಕಾರಿಗಳ ವಿರುದ್ಧ ತೆಗೆದುಕೊಂಡಿರುವ ಕ್ರಮಗಳೇನು?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಯವರು)**

**ಅ)** ಹೌದು.

**ಆ)** ಸ್ಥಳೀಯ ಗ್ರಾಮಸ್ಥರು ಅವರ ಉಪಯೋಗಕ್ಕಾಗಿ ಸ್ವಲ್ಪ ಪ್ರಮಾಣದ ಮರಳು ಗಣಿಗಾರಿಕೆಯನ್ನು ಮಾಡಿದ್ದು, ಈ ವಿಷಯ ತಿಳಿದ ತಕ್ಷಣ ಇಲಾಖೆಯ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ, ಮರಳು ಗಣಿಗಾರಿಕೆಗೆ ಉಪಯೋಗಿಸುತ್ತಿದ್ದ ಸಲಕರಣೆಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಮರಳು ಗಣಿಗಾರಿಕೆ ನಡೆಸುತ್ತಿದ್ದ ವ್ಯಕ್ತಿಗಳು ಪರಾರಿಯಾಗಿರುತ್ತಾರೆ. ಈ ಪ್ರದೇಶಕ್ಕೆ ಇಲಾಖೆಯ ಅಧಿಕಾರಿಗಳು ಮತ್ತು ಮರಳು ಉಸ್ತುವಾರಿ ಸಮಿತಿಯ ಸದಸ್ಯ ಇಲಾಖೆಯ ಅಧಿಕಾರಿಗಳು ಆಗಾಗ್ಗೆ ಭೇಟಿ ನೀಡಿ ಅಕ್ರಮ ಮರಳು ಗಣಿಗಾರಿಕೆಯನ್ನು ಸ್ಥಗಿತಗೊಳಿಸಲಾಗಿದೆ.

**ಇ)** ಈ ಕೆರೆಯಲ್ಲಿ ನಡೆಯುತ್ತಿದ್ದ ಅಕ್ರಮ ಮರಳು ಗಣಿಗಾರಿಕೆಯನ್ನು ತಡೆಗಟ್ಟಿರುವುದರಿಂದ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳುವ ಅವಶ್ಯಕತೆಯಿರುವುದಿಲ್ಲ.

**ಹುದ್ದೆ ರದ್ದಾಗಿದ್ದರೂ ನೌಕರರನ್ನು ಬಿಡುಗಡೆ ಮಾಡದಿರುವ ಬಗ್ಗೆ**

**109; ಡಾ॥ ಎಸ್.ಆರ್. ಲೀಲಾ (ನಾಮನಿರ್ದೇಶನ ಹೊಂದಿದವರು)**

**ಅ)** ಜಿಲ್ಲಾ ಆಸ್ಪತ್ರೆ ಬೀದರ್ ಇಲ್ಲಿ 2003ರಲ್ಲೇ ಶೇ. 5ರಷ್ಟು ಹುದ್ದೆ ರದ್ದತಿಯಲ್ಲಿ ಎಲೆಕ್ಟ್ರೀಷಿನ್ ಹುದ್ದೆ ರದ್ದಾಗಿದ್ದರೂ ಇದುವರೆವಿಗೂ ಆ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯನ್ನು ಬಿಡುಗಡೆಗೊಳಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

**ಆ)** ಹಾಗಿದ್ದರೆ, ನೌಕರರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸದಿರುವುದಕ್ಕೆ ಇರುವ ತೊಡಕುಗಳೇನು; ಈ ನೌಕರರ ವೇತನವನ್ನು ಯಾವ ಲೆಕ್ಕಶೀರ್ಷಿಕೆಯಡಿಯಲ್ಲಿ ಭರಿಸಲಾಗುತ್ತಿದೆ;

**ಇ)** ಹುದ್ದೆ ರದ್ದಾಗಿದ್ದರೂ ನೌಕರರನ್ನು ಬಿಡುಗಡೆಗೊಳಿಸದೇ ಸರ್ಕಾರದ ಆದೇಶವನ್ನು ಉಲ್ಲಂಘನೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

**ಈ)** ಹಾಗಿದ್ದರೆ, ಉಲ್ಲಂಘನೆ ಮಾಡಿರುವವರ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು? (ವಿವರ ಒದಗಿಸುವುದು)

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)**

**ಅ)** ಶೇಕಡ 5 ರಷ್ಟು ಹುದ್ದೆ ರದ್ಧತಿ ಸಂಬಂಧಪಟ್ಟಂತೆ ಬೀದರ್ ಜಿಲ್ಲೆಯಲ್ಲಿ ಒಂದು ಎಲೆಕ್ಟ್ರೀಷಿಯನ್ ಹುದ್ದೆ ರದ್ದುಗೊಂಡಿದೆ. ಅದರನ್ವಯ ಬೀದರ್ ಜಿಲ್ಲಾ ಆಸ್ಪತ್ರೆಯ ಎಲೆಕ್ಟ್ರೀಷಿಯನ್ ಹುದ್ದೆಯನ್ನು ರದ್ದುಪಡಿಸಲು ತೀರ್ಮಾನಿಸಲಾಗಿತ್ತು. ತದನಂತರ ಬೀದರ್ ಜಿಲ್ಲಾ ಆಸ್ಪತ್ರೆಯ ಕರ್ತವ್ಯನಿರತ ಎಲೆಕ್ಟ್ರೀಷಿಯನ್ ಹುದ್ದೆಯ ಬದಲಿಗೆ ಬೀದರ್ ಜಿಲ್ಲೆಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಕಛೇರಿಯ ಖಾಲಿ ಇರುವ ಎಲೆಕ್ಟ್ರೀಷಿಯನ್ ಹುದ್ದೆ ರದ್ದುಪಡಿಸಲು ತೀರ್ಮಾನಿಸಲಾಗಿದೆ. ಆದುದರಿಂದ ಬೀದರ್ ಜಿಲ್ಲಾ ಆಸ್ಪತ್ರೆಯ ಎಲೆಕ್ಟ್ರೀಷಿಯನ್ ಹುದ್ದೆಯಿಂದ ಕರ್ತವ್ಯ ನಿರ್ವಹಿಸುವವರನ್ನು ಬಿಡುಗಡೆಗೊಳಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

**ಆ)** ಉದ್ಭವಿಸುವುದಿಲ್ಲ

**ಇ)** ಅನ್ವಯಿಸುವುದಿಲ್ಲ

**ಈ)** ಅನ್ವಯಿಸುವುದಿಲ್ಲ

## ಬೆಂಗಳೂರು ನಗರದ ರಸ್ತೆ ಅಭಿವೃದ್ಧಿ ಬಗ್ಗೆ

**113; ಡಾ॥ ಎಸ್.ಆರ್. ಲೀಲಾ (ನಾಮನಿರ್ದೇಶಿತರು)**

ಅ) ಮೈಸೂರು ಸರ್ಕಲ್‌ನಿಂದ ರಾಜರಾಜೇಶ್ವರಿ ನಗರದ ಕಡೆಗೆ ಹೋಗುವ ಮೈಸೂರು ರಸ್ತೆಯಲ್ಲಿ ವಾಹನಗಳು ಓಡಾಡಲು ಅಸಾಧ್ಯವಾಗುವಷ್ಟು ತೀರ ದುಃಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದರೆ, ಇದುವರೆಗೂ ರಸ್ತೆ ದುರಸ್ತಿ ಮಾಡದಿರುವುದಕ್ಕೆ ಇರುವ ತೊಡಕುಗಳೇನು;

ಇ) ಎಷ್ಟು ದಿನಗಳೊಳಗೆ ಈ ರಸ್ತೆ ದುರಸ್ತಿ ಮಾಡಿಸಿ ವಾಹನಗಳು ಸರಾಗವಾಗಿ ಓಡಾಡಲು ಅನುಕೂಲವಾಗುವಂತೆ ಮಾಡಲಾಗುವುದು?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಯವರು)**

ಅ) ಮೈಸೂರು ಸರ್ಕಲ್‌ನಿಂದ ರಾಜರಾಜೇಶ್ವರಿ ನಗರದವರೆಗಿನ ಮೈಸೂರು ರಸ್ತೆಯು ರಾಜ್ಯ ಹೆದ್ದಾರಿಯಾಗಿದ್ದು ವಾಹನ ದಟ್ಟಣೆಯು ಅತಿ ಹೆಚ್ಚು ಇರುವುದನ್ನು ಮನಗಂಡು ಮೈಸೂರು ರಸ್ತೆಯ ಸಿರ್ಸಿ ವೃತ್ತದಿಂದ ಪಶ್ಚಿಮ ಕಾರ್ಡ್ ರಸ್ತೆಯ ಜಂಕ್ಷನ್‌ವರೆಗೆ ಬಿ.ಬಿ.ಎಂ.ಪಿ ವತಿಯಿಂದ ರಸ್ತೆ ಅಗಲೀಕರಣ ಕಾಮಗಾರಿಯನ್ನು ನಿರ್ವಹಿಸಲಾಗುತ್ತಿದೆ. ಪಶ್ಚಿಮ ಕಾರ್ಡ್ ರಸ್ತೆಯ ಜಂಕ್ಷನ್‌ನಿಂದ ಹೊರವರ್ತುಲ ರಸ್ತೆಯ ಜಂಕ್ಷನ್ ನಂತರದಲ್ಲಿ ಬರುವ ಪಂತರಪಾಳ್ಯದವರೆಗೆ ಮೆಟ್ರೋ ರೈಲು ಕಾಮಗಾರಿ ಮತ್ತು ನಾಯಂಡನಹಳ್ಳಿಯ ಜಂಕ್ಷನ್‌ನಲ್ಲಿ ಬಿ.ಡಿ.ಎ ವತಿಯಿಂದ ಗ್ರೇಡ್ ಸೆಪರೇಟರ್ ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. ಈ ರೀತಿಯ ಯೋಜನೆಗಳು ನಡೆಯುತ್ತಿರುವುದರಿಂದ ಸದರಿ ರಸ್ತೆಯು ಅಲ್ಲಲ್ಲಿ ಶಿಥಿಲಗೊಂಡಿರುವುದು ಗಮನಕ್ಕೆ ಬಂದಿರುತ್ತದೆ.

ಆ) ಪಾಲಿಕೆವತಿಯಿಂದ ಮೈಸೂರು ರಸ್ತೆಯ ಅಗಲೀಕರಣ ಕಾಮಗಾರಿಯನ್ನು ಸಿರ್ಸಿ ವೃತ್ತದಿಂದ ಪಶ್ಚಿಮ ಕಾರ್ಡ್ ರಸ್ತೆಯವರೆಗೆ ಯೋಜಿಸಲಾಗಿದ್ದು ಪ್ರಸ್ತುತ 1 ನೇ ಕಿ.ಮೀ. ನಲ್ಲಿ ರಸ್ತೆ ಅಗಲೀಕರಣ

ಕಾಮಗಾರಿಯನ್ನು ನಿರ್ವಹಿಸಲಾಗುತ್ತಿದೆ ಮತ್ತು ರಸ್ತೆ ಅಗಲೀಕರಣ ಜಾಗದಲ್ಲಿ ಹಾಲಿ ಇರುವ ಬೆಸ್ಕಾಂ, ಬಿ.ಡಬ್ಲ್ಯೂ.ಎಸ್.ಎಸ್.ಬಿ. ಮತ್ತು ಬಿ.ಎಸ್.ಎನ್.ಎಲ್ ಅನುಸಾಧನಗಳನ್ನು ಸ್ಥಳಾಂತರಿಸುವ ಕಾಮಗಾರಿಗಳು ಸಂಬಂಧಪಟ್ಟ ಇಲಾಖೆಗಳಿಂದ ನಿಧಾನಗತಿಯಲ್ಲಿ ಸಾಗಿದ್ದು ಮೈಸೂರು ರಸ್ತೆ ಅಗಲೀಕರಣ ಕಾಮಗಾರಿಯು ನಿಧಾನಗತಿಯಲ್ಲಿ ಮುಂದುವರೆದಿದೆ. ಆದಾಗ್ಯೂ ರಸ್ತೆಯನ್ನು ಆಗಾಗ್ಗೆ ದುರಸ್ಥಿಗೊಳಿಸಿ ವಾಹನ ಸಂಚಾರಕ್ಕೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಪಾಲಿಕೆ ವತಿಯಿಂದ ನಿರ್ವಹಿಸಲಾಗುತ್ತಿರುವ ರಸ್ತೆ ಅಗಲೀಕರಣ ಕಾಮಗಾರಿಯನ್ನು ಶೀಘ್ರವಾಗಿ ಮುಗಿಸಲು ವಿವಿಧ ಇಲಾಖೆಗಳ ಸಹಕಾರದೊಂದಿಗೆ ಇನ್ನು ಆರು ತಿಂಗಳ ಅವಧಿಯಲ್ಲಿ ಪೂರ್ಣಗೊಳಿಸಿ ವಾಹನಗಳು ಸರಾಗವಾಗಿ ಓಡಾಡಲು ಅನುಕೂಲವಾಗುವಂತೆ ಮಾಡಲಾಗುವುದು. ಮೆಟ್ರೋ ಮತ್ತು ಬಿ.ಡಿ.ಎ ನಿರ್ಮಿಸುತ್ತಿರುವ ಯೋಜನೆಗಳನ್ನು ಸಹ ಆದಷ್ಟು ಶೀಘ್ರವಾಗಿ ಪೂರ್ಣಗೊಳಿಸಿ ರಸ್ತೆ ದುರಸ್ಥಿಗೊಳಿಸುವಂತೆ ಪಾಲಿಕೆವತಿಯಿಂದ ಕೋರಲಾಗಿದೆ.

**ಬರ ಪರಿಹಾರ ಮತ್ತು ಗೋ ಶಾಲೆಗಳ ಬಗ್ಗೆ**

**212; ಶ್ರೀ ಮಹಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ)**

ಅ) ರಾಜ್ಯದಲ್ಲಿ ಯಾವ ಯಾವ ಜಿಲ್ಲೆ ಮತ್ತು ತಾಲ್ಲೂಕುಗಳನ್ನು ಪ್ರಸ್ತುತ ಬರಪೀಡಿತವಾಗಿವೆ ಎಂದು ಘೋಷಿಸಲಾಗಿದೆ.

ಆ) ಹಾಗಿದ್ದಲ್ಲಿ, ಬರಪರಿಹಾರಕ್ಕಾಗಿ ಸರ್ಕಾರವು ಕೈಗೊಂಡ ಕ್ರಮಗಳೇನು: ಸದರಿ ಕಾಮಗಾರಿಗಳಿಗಾಗಿ ಒದಗಿಸಲಾದ ಅನುದಾನವೆಷ್ಟು: ಈಗಾಗಲೇ ಮಂಜೂರಾದ ಹಣವೆಷ್ಟು?

ಇ) ಬರಪೀಡಿತ ಪ್ರದೇಶಗಳಲ್ಲಿ ಸಾಕಷ್ಟು ಗೋ ಶಾಲೆಗಳಿಲ್ಲದೆಯೇ ರೈತರು ಹತಾಶರಾಗಿ ದನ–ಕರುಗಳನ್ನು ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಈ ದಿಶೆಯಲ್ಲಿ ಸರ್ಕಾರವು ಕೈಗೊಳ್ಳಲಿರುವ ಪರಿಹಾರ ಕಾಮಗಾರಿಗಳೇನು?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)**

ಅ) ಅನುಬಂದದಲ್ಲಿ ನೀಡಿದೆ.

ಆ) ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಗ್ರಾಮೀಣಾಭಿವೃದ್ದಿ ಮತ್ತು ಪಂಚಾಯತ್ ರಾಜ್ ಇಲಾಖೆ ವತಿಯಿಂದ ಮಲ್ಟಿ ವಾಟರ್ ಸಪ್ಲೈ, ಹೈಡ್ರೋಫ್ರಕ್ಚ್ ರಿಂಗ್ ಮತ್ತು ಕೊಳವೆ ಬಾವಿಗಳನ್ನು ಅಳವಡಿಸುವುದು ಹಾಗೂ ಹೊಸ ಕೊಳವೆ ಬಾವಿಗಳನ್ನು ಕೊರೆಯಲು ರೂ. 122.04 ಕೋಟಿಗಳ ಕ್ರಿಯಾ ಯೋಜನೆಗಳಿಗೆ ಅನುಮೋದನೆ ನೀಡಲಾಗಿದ್ದು. ರೂ. 52.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಕಂದಾಯ ಇಲಾಖೆಯ ವತಿಯಿಂದ ನೀರು ಕೊಳವೆಗಳ ದುರಸ್ಥಿ ಮತ್ತು ಕೊಳವೆ ಬಾವಿಗಳ ದುರಸ್ಥಿ ಮಾಡಲು ಹಾಗೂ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲು ರೂ. 54.26 ಕೋಟಿಗಳ ಕಾಮಗಾರಿಗಳಿಗೆ ಅನುಮೋದನೆಯನ್ನು ನೀಡಲಾಗಿದ್ದು ರೂ. 26.90 ಕೋಟಿಗಳನ್ನು ಬಿಡುಗಡೆ ಮಾಡಿದೆ.

ಪಶುಸಂಗೋಪನೆ ಇಲಾಖೆಯ ವತಿಯಿಂದ ಜಾನುವಾರುಗಳ ಸಂರಕ್ಷಣೆಗೆ ಮೇವು ಹಾಗೂ ಔಷಧಿ ಪೂರೈಕೆಗಾಗಿ ರೂ. 5.15 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

ಇ) ಬರಪೀಡಿತ ಪ್ರದೇಶಗಳಲ್ಲಿ ಒಟ್ಟು 20 ಗೋಶಾಲೆಗಳನ್ನು ತೆರೆಯಲಾಗಿದ್ದು, ಅವುಗಳು ಕಾರ್ಯ ನಿರ್ವಹಿಸುತ್ತಿವೆ. ಅಗತ್ಯವಿರುವ ಕಡೆ ಗೋಶಾಲೆಗಳನ್ನು ತೆರೆಯಲು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಹಾಗೂ ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆಯಲ್ಲಿರುವ ಹಣವನ್ನು ಬಳಸಿಕೊಳ್ಳಲು ಅನುಮತಿ ನೀಡಲಾಗಿದೆ.

ಅನುಬಂಧ

| ಕ್ರ.ಸಂ. | ಜಿಲ್ಲೆ | ತಾಲ್ಲೂಕು | ತಾಲ್ಲೂಕುಗಳ ಸಂಖ್ಯೆ |
|---|---|---|---|
| 1 | ರಾಮನಗರ | ಚನ್ನಪಟ್ಟಣ<br>ಕನಕಪುರ | 02 |
| 2 | ಕೋಲಾರ | ಬಂಗಾರಪೇಟೆ<br>ಕೋಲಾರ<br>ಶ್ರೀನಿವಾಸಪುರ<br>ಮುಳಬಾಗಿಲು | 04 |
| 3 | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ<br>ಚಿಂತಾಮಣಿ<br>ಗೌರಿಬಿದನೂರು<br>ಬಾಗೇಪಲ್ಲಿ | 04 |
| 4 | ತುಮಕೂರು | ಕುಣಿಗಲ್<br>ಮಧುಗಿರಿ<br>ಶಿರಾ<br>ತುಮಕೂರು<br>ಚಿಕ್ಕನಾಯಕನಹಳ್ಳಿ | 06 |
| 5 | ಚಿತ್ರದುರ್ಗ | ಚಳ್ಳಕೆರೆ<br>ಚಿತ್ರದುರ್ಗ<br>ಹೊಸದುರ್ಗ<br>ಮೊಳಕಾಲ್ಮೂರು<br>ಹಿರಿಯೂರು<br>ಹೊಳಲ್ಕೆರೆ | 06 |
| 6 | ಚಾಮರಾಜನಗರ | ಚಾಮರಾಜನಗರ<br>ಗುಂಡ್ಲುಪೇಟೆ<br>ಕೊಳ್ಳೇಗಾಲ<br>ಯಳಂದೂರು | 04 |
| 7 | ಮೈಸೂರು | ಕೆ.ಆರ್.ನಗರ<br>ನಂಜನಗೂಡು<br>ಟಿ.ನರಸೀಪುರ | 05 |

| | | | |
|---|---|---|---|
| | | ಪಿರಿಯಾಪಟ್ಟಣ<br>ಮೈಸೂರು | |
| 8 | ಮಂಡ್ಯ | ಕೆ.ಆರ್.ಪೇಟೆ<br>ಮದ್ದೂರು<br>ಮಳವಳ್ಳಿ<br>ಮಂಡ್ಯ<br>ನಾಗಮಂಗಲ<br>ಪಾಂಡವಪುರ<br>ಶ್ರೀರಂಗಪಟ್ಟಣ | 07 |
| 9 | ಬಳ್ಳಾರಿ | ಬಳ್ಳಾಋಇ<br>ಹೊಸಪೇಟೆ<br>ಹೆಚ್.ಬಿ.ಹಳ್ಳಿ<br>ಕೂಡ್ಲಗಿ<br>ಸಂಡೂರು<br>ಸಿರಗುಪ್ಪ<br>ಹಡಗಲಿ | 07 |
| 10 | ಕೊಪ್ಪಳ | ಗಂಗಾವತಿ<br>ಕೊಪ್ಪಳ<br>ಕುಷ್ಟಗಿ<br>ಯಲ್ಬುರ್ಗಾ | 04 |
| 11 | ರಾಯಚೂರು | ದೇವದುರ್ಗ<br>ಲಿಂಗಸಗೂರು<br>ಮಾನ್ವಿ<br>ರಾಯಚೂರು<br>ಸಿಂಧನೂರು | 05 |
| 12 | ಗುಲ್ಬರ್ಗಾ | ಅಫಜಲಪುರ<br>ಆಳಂದ<br>ಚಿಂಚೋಳಿ<br>ಗುಲ್ಬರ್ಗಾ<br>ಜೇವರ್ಗಿ<br>ಸೇಡಂ | 07 |

| | | | |
|---|---|---|---|
| 13 | ಯಾದಿಗಿರಿ | ಶಹಾಪುರ<br>ಶೋರಾಪುರ<br>ಯಾದಗಿರಿ | 03 |
| 14 | ಬೀದರ್ | ಬೀದರ್ | 01 |
| 15 | ಬಾಗಲಕೋಟೆ | ಬೀಳಗಿ<br>ಜಮಖಂಡಿ<br>ಮುಧೋಳ್<br>ಬಾದಾಮಿ<br>ಹುನಗುಂದ | 05 |
| 16 | ಬಿಜಾಪುರ | ಬಸವನ ಬಾಗೇವಾಡಿ<br>ಬಿಜಾಪುರ<br>ಇಚಿಡಿ<br>ಸಿಂಧಗಿ<br>ಮುದ್ದೇಬಿಹಾಳ್ | 05 |
| 17 | ಗದಗ್ | ಗದಗ್<br>ಮುಂಡರಗಿ<br>ರೋಣ<br>ಶಿರಹಟ್ಟಿ | 04 |
| 18 | ಧಾರವಾಡ | ನವಲಗುಂದ<br>ಹುಬ್ಬಳ್ಳಿ<br>ಕುಂದಗೋಳ<br>ಧಾರವಾಡ | 04 |
| 19 | ಹಾಸನ | ಅರಸೀಕೆರೆ<br>ಚನ್ನರಾಯಪಟ್ಟಣ<br>ಹಾಸನ<br>ಹೊಳೆನರಸೀಪುರ<br>ಅರಕಲಗೂಡು<br>ಬೇಲೂರು | 06 |
| 20 | ಚಿಕ್ಕಮಗಳೂರು | ಕಡೂರು | 01 |

| | | | |
|---|---|---|---|
| 21 | ಬೆಳಗಾಂ | ಅಥಣಿ<br>ಸೌದತ್ತಿ<br>ಚಿಕ್ಕೋಡಿ<br>ರಾಮದುರ್ಗ | 04 |
| 22 | ದಾವಣಗೆರೆ | ಜಗಳೂರು<br>ಹರಪನಹಳ್ಳಿ<br>ದಾವಣಗೆರೆ | 03 |
| 23 | ಹಾವೇರಿ | ರಾಣೆಬೆನ್ನೂರು<br>ಶಿಗ್ಗಾಂವ್ | 02 |
| | ಒಟ್ಟು | | 99 |

**ಅನಧಿಕೃತ ಪ್ಯಾಕೇಜ್ ಕುಡಿಯುವ ನೀರು ಕುರಿತು**

**208; ಶ್ರೀ ಮತ್ತಿಕಟ್ಟಿ ವೀರಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು)**

ಅ) ಕರ್ನಾಟಕ ರಾಜ್ಯದಲ್ಲಿ 2000ಕ್ಕೂ ಹೆಚ್ಚು ಅನಧಿಕೃತ ಪ್ಯಾಕೇಜ್ ಕುಡಿಯುವ ನೀರಿನ ಘಟಕಗಳು ಕಾರ್ಯನಿರ್ವಹಿಸುತ್ತಿದ್ದು, ವಿಷಕಾರಿ ಹಾಗೂ ಅನಾರೋಗ್ಯಕರ ನೀರು ಸರಬರಾಜು ಮಾಡುತ್ತಾ ತೆರಿಗೆ ವಂಚನೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸದರಿ ನಕಲಿ ಕುಡಿಯುವ ನೀರಿನ ಘಟಕಗಳನ್ನು ಮುಚ್ಚಿ ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಪಡಿಸಲು ಸರ್ಕಾರವು ಕೈಗೊಳ್ಳುವ ಕ್ರಮಗಳೇನು?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)**

ಅ) ಭಾರತೀಯ ಗುಣಮಟ್ಟ ಮಾಪಕ (Bureau of Indian Standards) ದಲ್ಲಿ ನೊಂದಾಯಿಸದೆ ಅನಧಿಕೃತವಾಗಿ ಪ್ಯಾಕೇಜ್ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪನೆ ಮಾಡಿ ನೀರು ಸರಬರಾಜು ಮಾಡುತ್ತಿರುವ ಕುರಿತಂತೆ ಸರ್ಕಾರದ ಗಮನಕ್ಕೆ ಬಂದಿದೆ.

ಆ) ಅಂತಹ ಘಟಕಗಳ ವಿರುದ್ಧ ಆಹಾರ ಸುರಕ್ಷತೆ ಮತ್ತು ಗುಣಮಟ್ಟದ ಕಾಯ್ದೆಯಡಿ ಕ್ರಮ ಜರುಗಿಸಲಾಗಿದೆ. ಇದುವರೆವಿಗೆ 5 ಘಟಕಗಳಿಗೆ ಸಂಬಂಧಿಸಿದಂತೆ, ಮೊಕದ್ದಮೆಗಳನ್ನು ಸಂಬಂಧಪಟ್ಟ ನ್ಯಾಯಾಲಯಗಳಲ್ಲಿ ದಾಖಲಿಸಲಾಗಿದೆ ಹಾಗೂ ಸದರಿ 5 ಘಟಕಗಳನ್ನು ಮುಚ್ಚಲಾಗಿದೆ. ಮುಂದುವರೆದು, 87 ಪ್ರಕರಣಗಳಲ್ಲಿ ನೋಟಿಸ್‌ಗಳನ್ನು ಜಾರಿ ಮಾಡಲಾಗಿದೆ.

## ಮಹಾನಗರದ ಬೀದಿಗಳಲ್ಲಿ ವೈನಲ್ ಫಲಕ ಅಳವಡಿಸಿ ಪರಿಸರಕ್ಕೆ ಹಾನಿ ಮಾಡಿರುವ ಬಗ್ಗೆ

**269; ಶ್ರೀ ಮತ್ತಿಕಟ್ಟಿ ವೀರಣ್ಣ (ವಿಧಾನಸಭಾ ಕ್ಷೇತ್ರ)**

ಅ) ಪ್ರತಿಷ್ಠಿತ ವ್ಯಕ್ತಿಗಳ, ರಾಜಕಾರಣಿಗಳ ಜನ್ಮ ದಿನಾಚರಣೆಗೆ ಸಂಬಂಧಿಸಿದಂತೆ ಬೆಂಗಳೂರು ಮಹಾನಗರದಾದ್ಯಂತ ಬೀದಿ ಬೀದಿಗಳಲ್ಲಿ ವೈನಲ್ ಫಲಕ (ಹೋರ್ಡಿಂಗ್) ಹಾಕುವ ಮೂಲಕ ಪರಿಸರಕ್ಕೆ ಹಾನಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ವೈನಲ್ ಫಲಕಗಳನ್ನು ಹಾಕುವುದನ್ನು ನಿಷೇಧಿಸಲಾಗಿದೆಯೇ; ಹಾಗಿದ್ದಲ್ಲಿ, ಸದರಿ ಕಾಯ್ದೆಯನ್ನು ಯಾವಾಗ ಕ್ರಮಬದ್ಧವಾಗಿ ಜಾರಿಗೊಳಿಸಲಾಗುವುದು;

ಇ) ಪ್ಲಾಸ್ಟಿಕ್ ಕ್ಯಾರಿಬ್ಯಾಗ್‌ಗಳನ್ನು ನಿಷೇದಿಸಿ ಪ್ಲಾಸ್ಟಿಕ್‌ನಿಂದ ರಸ್ತೆ ಡಾಂಬರೀಕರಣ ಮಾಡಿ ಪರಿಸರ ರಕ್ಷಿಸಲಾಗುವುದೇ?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಯವರು)**

ಅ) ಬಂದಿದೆ

ಆ) ಫ್ಲೆಕ್ಸ್ ಬ್ಯಾನರ್ಸ್ ಮತ್ತು ವಿನೈಲ್‌ಗಳನ್ನು ಅಳವಡಿಸುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿರುವುದಿಲ್ಲ. ಆದರೆ, ಜಾಹೀರಾತು ಬೈಲಾ–2006ರ ನಿಯಮ ಭಾಗ–2 3ಐ (Vii) ನಂತೆ ನಿಷೇಧಿತ ಸ್ಥಳಗಳಾದ ವಿಧಾನಸೌಧದ ಸುತ್ತಮುತ್ತಲಿನ ಒಂದು ಕಿ.ಮೀ ವ್ಯಾಪ್ತಿಯಲ್ಲಿ, ಹೈಕೋರ್ಟ್ ಸುತ್ತಮುತ್ತ ಹಾಗೂ ಶಾಸಕರ ಭವನ ಹಾಗೂ ರಾಜಭವನ ಸುತ್ತಮುತ್ತ ಹಾಗೂ ಹಡ್ಸನ್ ಸರ್ಕಲ್, ರೇಸ್ ಕೋರ್ಸ್ ರಸ್ತೆ, ಜಿ.ಪಿ.ಓ. ವೃತ್ತ, ಎಂ.ಜಿ.ರಸ್ತೆ, ಏರ್‌ಪೋರ್ಟ್ ರಸ್ತೆ, ಬ್ರಿಗೇಡ್ ರಸ್ತೆ, ಕಬ್ಬನ್‌ರಸ್ತೆ, ಚಾಮರಾಜರಸ್ತೆ ಮತ್ತು ಡಿಕನ್ಸನ್ ರಸ್ತೆ ಜಂಕ್ಷನ್ ಬಳಿಯಲ್ಲಿ ಪಾಲಿಕೆಯ ಕೇಂದ್ರ ಕಛೇರಿಯ ಎದುರು, ಕೆ.ಆರ್.ವೃತ್ತ, ಬಸವೇಶ್ವರ ವೃತ್ತ, ಕೆ.ಜಿ.ವೃತ್ತ, ಸರ್ಕಾರಿ ಕಛೇರಿಗಳ

ಆವರಣ, ಪಾಲಿಕೆ ಕಛೇರಿ ಆವರಣ, ಟೌನ್‌ಹಾಲ್ ಸರ್ಕಲ್ ಹಾಗೂ ವಿಧಾನಸೌಧದ ಎಲ್ಲಾ ಪ್ರವೇಶ ದ್ವಾರಗಳಲ್ಲಿ ಫ್ಲೆಕ್ಸ್ ಬ್ಯಾನರ್ಸ್‌ಗಳನ್ನು ಅಳವಡಿಸುವುದನ್ನು ನಿಷೇಧಿಸಲಾಗಿದೆ. ಹಾಗೂ ಹುಟ್ಟು ಹಬ್ಬದ ಶುಭಾಶಯಗಳು ಹಾಗೂ ಹಬ್ಬದ ಶುಭಾಶಯಗಳನ್ನು ಕುರಿತು ಅಳವಡಿಸುವ ಫ್ಲೆಕ್ಸ್ ಬ್ಯಾನರ್ ಹಾಗೂ ವಿನೈಲ್‌ಗಳನ್ನು ಅಳವಡಿಸಲು ಯಾವುದೇ ರೀತಿಯ ಅನುಮತಿ ನೀಡಿರುವುದಿಲ್ಲ.

ಮೇಲ್ಕಂಡ ನಿಯಮಗಳನ್ನು ಮೀರಿ ಅನಧಿಕೃತವಾಗಿ ಜಾಹೀರಾತು ಸಾಮಗ್ರಿಗಳನ್ನು ಅಳವಡಿಸುವ ವ್ಯಕ್ತಿಗಳ ಮೇಲೆ ನಿರ್ದಾಕ್ಷಿಣ್ಯವಾಗಿ ಕಾನೂನಿನಡಿಯಲ್ಲಿ ಕ್ರಮ ಕೈಗೊಳ್ಳುವುದು ಅನಿವಾರ್ಯವಾಗಿದ್ದು, ಈ ಹಿನ್ನೆಲೆಯಲ್ಲಿ "ದಿ ಕರ್ನಾಟಕ ಓಪನ್ ಪ್ಲೇಸಸ್ (ಪ್ರಿವೆನ್ಷನ್ ಆಫ್ ಡಿಸ್‌ಫಿಗರ್ ಮೆಂಟ್) ಆಕ್ಟ್ 1981" ಕಾಯಿದೆ ಅಡಿ ಇಂತಹ ವ್ಯಕ್ತಿಗಳ ಮೇಲೆ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುತ್ತಿದೆ.

ಇ) 40 ಮೈಕ್ರಾನ್‌ಗಳಿಗಿಂತಲೂ ಕಡಿಮೆ ಇರುವ ಪ್ಲಾಸ್ಟಿಕ್ ಬ್ಯಾಗ್ ಬಳಕೆಯನ್ನು ನಿಷೇಧಿಸಲಾಗಿದೆ. ತ್ಯಾಜ್ಯಾ ಪ್ಲಾಸ್ಟಿಕ್‌ನ್ನು ಬಳಸಿ ರಸ್ತೆ ಡಾಂಬರೀಕರಣ (ಮೇಲ್ಪದರ) ಮಾಡಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದ್ದು, ಹಲವಾರು ರಸ್ತೆಗಳನ್ನು ತ್ಯಾಜ್ಯಾ ಪ್ಲಾಸ್ಟಿಕ್ ಬಳಸಿ ರಸ್ತೆ ಡಾಂಬರೀಕರಣ ಮಾಡಲಾಗಿದೆ.

**ಮಹಾನಗರಗಳಲ್ಲಿ ರಸ್ತೆ ಉಬ್ಬುಗಳು ಅವೈಜ್ಞಾನಿಕವಾಗಿ ನಿರ್ಮಿಸಿರುವ ಬಗ್ಗೆ**

**268; ಶ್ರೀ ಮತ್ತಿಕಟ್ಟೆ ವೀರಣ್ಣ (ವಿಧಾನಸಭಾ ಕ್ಷೇತ್ರ)**

ಅ) ಬೆಂಗಳೂರು ಮಹಾನಗರದಲ್ಲಿ ಅನಗತ್ಯವಾಗಿ ಅವೈಜ್ಞಾನಿಕ ರೀತಿಯಲ್ಲಿ ನಿರ್ಮಿಸಲಾದ ರಸ್ತೆ ಉಬ್ಬುಗಳಿಂದಾಗಿ (Road humps) ಹಲವಾರು ವಾಹನ ಚಾಲಕರು ಅಪಘಾತಕ್ಕೀಡಾಗಿ ಸಾವು-ನೋವುಗಳನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ನಿರ್ದಿಷ್ಟ ನಿಯಮಗಳನ್ನು ರಚಿಸಿ ವೈಜ್ಞಾನಿಕ ರೀತಿಯಲ್ಲಿ ಮಾತ್ರ ರಸ್ತೆ ಉಬ್ಬುಗಳನ್ನು ನಿರ್ಮಿಸುವ ಬಗ್ಗೆ ಸರ್ಕಾರವು ಯಾವಾಗ ಕ್ರಮಗಳನ್ನು ಕೈಗೊಳ್ಳುವುದು;

ಇ) ಬೆಂಗಳೂರು ಮಹಾನಗರದ ಎಲ್ಲಾ ಮುಖ್ಯ ವೃತ್ತಗಳಲ್ಲಿ ಸಿಸಿಟಿವಿಗಳನ್ನು ಅಳವಡಿಸುವ ಮೂಲಕ ಸಂಚಾರಿ ನಿಯಮಗಳ ಉಲ್ಲಂಘನೆ ಮಾಡುವುದನ್ನು ನಿಯಂತ್ರಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)**

ಅ) ಬಂದಿದೆ.

ಆ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯು ಸುಮಾರು 800 ಚ.ಕಿ.ಮೀ. ವಿಸ್ತೀರ್ಣವಾಗಿದ್ದು, ಒಟ್ಟು ರಸ್ತೆಗಳ ಉದ್ದವು ಸುಮಾರು 10,000 ಕಿ.ಮೀ ಇರುತ್ತದೆ. ಅಲ್ಲದೆ, ಬೆಂಗಳೂರು ನಗರಾದ್ಯಂತ ಸುಮಾರು 40,000 ಕ್ಕೂ ಹೆಚ್ಚು ರಸ್ತೆ ಜಂಕ್ಷನ್‌ಗಳಿರುತ್ತವೆ. ನಗರದಲ್ಲಿನ ವಾಹನಗಳ ಸಂಖ್ಯೆಯು ಸಹ 40 ಲಕ್ಷ ದಾಟಿರುತ್ತದೆ. ನಗರಾದ್ಯಂತ ಇರುವ ಅವೈಜ್ಞಾನಿಕ ರಸ್ತೆ ಉಬ್ಬುಗಳನ್ನು ತೆಗೆಯಲು ಕ್ರಮ ವಹಿಸಲಾಗಿದೆ ಹಾಗೂ ಅವಶ್ಯಕತೆ ಇರುವಲ್ಲಿ ಹಾಲಿ ಇರುವ ರಸ್ತೆ ಉಬ್ಬುಗಳನ್ನು ವೈಜ್ಞಾನಿಕವಾಗಿ ಪರಿವರ್ತಿಸಲಾಗಿದೆ. ಇಲ್ಲಿಯವರೆಗೆ ವೈಜ್ಞಾನಿಕವಾಗಿ ಸುಮಾರು 1,573 ರಸ್ತೆ ಉಬ್ಬುಗಳನ್ನು ನಗರ ಸಂಚಾರಿ ಪೋಲೀಸ್ ಇಲಾಖೆ ಸಹಯೋಗದೊಂದಿಗೆ ನಿರ್ಮಿಸಲಾಗಿರುತ್ತದೆ. ಉಳಿದಂತೆ ವಾರ್ಡ್ ಮಟ್ಟದಲ್ಲಿ ಇರುವ ಅವೈಜ್ಞಾನಿಕ ರಸ್ತೆ ಉಬ್ಬುಗಳನ್ನು ತೆರವುಗೊಳಿಸಲು ಕ್ರಮವಹಿಸಲಾಗಿದೆ.

ಇ) ಈಗಾಗಲೇ ಬೆಂಗಳೂರು ನಗರದಲ್ಲಿ 179 ಸಿ.ಸಿ. ಟಿ.ವಿ ಮತ್ತು 5 ಎನ್‌ಫೋರ್ಸ್‌ಮೆಂಟ್ ಕ್ಯಾಮೆರಾಗಳನ್ನು ನಗರದ ವಿವಿಧ ಮುಖ್ಯರಸ್ತೆಗಳಲ್ಲಿ ಅಳವಡಿಸಲಾಗಿದೆ. ಪ್ರಕರಣಗಳನ್ನು ದಾಖಲಿಸಿ

ಸಂಚಾರಿ ನಿಯಮಗಳ ಉಲ್ಲಂಘನೆ ಮಾಡುವುದನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಲಾಗಿದೆ. ದಾಖಲಿಸಿದ ಪ್ರಕರಣಗಳು ಕೆಳಕಂಡಂತಿದೆ:

1. 2010ನೇ ಇಸವಿಯಲ್ಲಿ : 1,11,519.

2. 2011ನೇ ಇಸವಿಯಲ್ಲಿ : 2,22,726.

**ದ್ವಿತೀಯ ಹಂತದ ಮೆಟ್ರೋ ರೈಲು ವ್ಯವಸ್ಥೆಯ ಬಗ್ಗೆ**

**207; ಶ್ರೀ ಮತ್ತಿಕಟ್ಟಿ ವೀರಣ್ಣ (ವಿಧಾನಸಭಾ ಕ್ಷೇತ್ರ)**

**ಅ)** ಬೆಂಗಳೂರು ಮಹಾನಗರ ಮೆಟ್ರೋ ರೈಲು ವ್ಯವಸ್ಥೆಯ ದ್ವಿತೀಯ ಹಂತದಲ್ಲಿ ಯಾವ ಯಾವ ಸ್ಥಳಗಳಿಗೆ ರೈಲು ಸೌಲಭ್ಯಗಳನ್ನು ವಿಸ್ತರಿಸಲಾಗುವುದು; (ವಿವರಗಳನ್ನು ನೀಡುವುದು)

**ಆ)** ಮೆಟ್ರೋ ರೈಲು ಸ್ಟೇಷನ್‌ಗಳಿಗೆ ಹತ್ತಿರದಲ್ಲಿರುವ ರಸ್ತೆಗಳ ಅಗಲೀಕರಣಗೊಳಿಸಿ ಸುಗಮ ಸಂಚಾರ ವ್ಯವಸ್ಥೆಯನ್ನು ಒದಗಿಸಲಾಗುವುದೇ?

**ಇ)** ನಮ್ಮ ಮೆಟ್ರೋ ರೈಲು ವ್ಯವಸ್ಥೆಗೆ ಪೂರಕವಾಗುವಂತೆ ಮೋನೋ ರೈಲು ಸೌಲಭ್ಯ ಒದಗಿಸುವ ಯೋಜನೆಯನ್ನು ಸರ್ಕಾರವು ಹೊಂದಿದೆಯೇ?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)**

**ಅ)** ದ್ವಿತೀಯ ಹಂತದಲ್ಲಿ, ನಾಲ್ಕು ವಿಸ್ತರಣಾ ಮಾರ್ಗಗಳು ಮತ್ತು ಎರಡು ಹೊಸ ಮಾರ್ಗಗಳನ್ನು ಒಳಗೊಂಡಿದೆ. (ಕರ್ನಾಟಕ ಸರ್ಕಾರವು, ಈ ಆರು ಮಾರ್ಗಗಳಿಗೆ ತಾತ್ವಿಕವಾಗಿ ಅನುಮೋದನೆಯನ್ನು ನೀಡಿದ್ದು, ಪ್ರಸ್ತಾವನೆಯನ್ನು ಭಾರತ ಸರ್ಕಾರದ ಹಣಕಾಸಿನ ಸಹಭಾಗಿತ್ವ ಮತ್ತು ಅನುಮೋದನೆಗಾಗಿ ಕಳುಹಿಸಲಾಗುತ್ತಿದೆ.)

ನಾಲ್ಕೂ ವಿಸ್ತರಣಾ ಮಾರ್ಗಗಳು ಪ್ರಯಾಣಿಕರಿಗೆ ಕೊನೆಯ ಹಂತದ ಸಂಪರ್ಕದ ಸೌಲಭ್ಯವನ್ನು ಒದಗಿಸುತ್ತವೆ. ಹಾಗೆಯೇ, ಉಳಿದ ಎರಡು ಹೊಸ ಮಾರ್ಗಗಳು, ಬೆಂಗಳೂರಿನ ಕೆಲವು ಅತ್ಯಂತ ಜನನಿಬಿಡ ಮತ್ತು ಅತಿಯಾದ ಸಂಚಾರದಟ್ಟಣೆಯಿಂದ ತಲ್ಲಣಗೊಂಡ ಮಾರ್ಗದಲ್ಲಿ ಹಾಯ್ದುಹೋಗುತ್ತವೆ. ಎಲೆಕ್ಟ್ರಾನಿಕ್ಸ್ ಕೈಗಾರಿಕಾ ಪ್ರದೇಶಕ್ಕೆ ಸಂಪರ್ಕವನ್ನು ಹಂತ–2 ಒದಗಿಸುತ್ತದೆ. ಹಂತ–2ರ ನಾಲ್ಕು ವಿಸ್ತರಣಾ ಮಾರ್ಗಗಳು ಮತ್ತು ಎರಡು ಹೊಸ ಮಾರ್ಗಗಳು ಯಾವ ಯಾವ ಸ್ಥಳಗಳಿಗೆ ಸೌಲಭ್ಯವನ್ನು ಒದಗಿಸಲಿವೆ ಎಂಬ ಬಗ್ಗೆ ಮಾರ್ಗವಾರು ವಿವರಗಳನ್ನು ಈ ಕೆಳಗೆ ನೀಡಿದೆ:

| ಕ್ರ.ಸಂ | ಮಾರ್ಗ | ಮಾರ್ಗದ ಉದ್ದ (ಕಿ.ಮೀ.ಗಳಲ್ಲಿ) | ಆಯಾ ಮಾರ್ಗದಲ್ಲಿ ಬರುವ ನಿಲ್ದಾಣಗಳು |
|---|---|---|---|
| 1. | **ಪೂರ್ವ–ಪಶ್ಚಿಮ ಮಾರ್ಗ ವಿಸ್ತರಣೆ:** ಮೈಸೂರು ರಸ್ತೆ ಟರ್ಮಿನಲ್‌ನಿಂದ ಕೆಂಗೇರಿವರೆಗೆ | 6.465 | ನಾಯಂಡಹಳ್ಳಿ, ರಾಜರಾಜೇಶ್ವರಿನಗರ, ಬೆಂಗಳೂರು ವಿಶ್ವವಿದ್ಯಾನಿಲಯ ಕ್ರಾಸ್, ಆರ್.ವಿ. ಕಾಲೇಜ್ ಆಫ್ ಇಂಜಿನಿಯರಿಂಗ್ ಮತ್ತು ಕೆಂಗೇರಿ, |
| 2. | **ಪೂರ್ವ–ಪಶ್ಚಿಮ ಮಾರ್ಗ ವಿಸ್ತರಣೆ:** ಬಯ್ಯಪ್ಪನಹಳ್ಳಿಯಿಂದ ಐ.ಟಿ.ಪಿ.ಎಲ್– ವೈಟ್‌ಫೀಲ್ಡ್ ವರೆಗೆ | 15.50 | ಜ್ಯೋತಿಪುರಂ, ಕೆ.ಆರ್.ಪುರಂ, ನಾರಾಯಣಪುರ, ಮಹದೇವಪುರ, ಗರುಡಾಚಾರ್ಯಪಾಳ್ಯ, ದೊಡ್ಡನೆಕ್ಕುಂದಿ, ವಿಶ್ವೇಶ್ವರಯ್ಯ ಇಂಡಸ್ಟ್ರಿಯಲ್ ಎಸ್ಟೇಟ್, ಕುಂಡಲಹಳ್ಳಿ, ವೈದೇಹಿ ಆಸ್ಪತ್ರೆ, ಸತ್ಯ ಸಾಯಿ ಮೆಡಿಕಲ್ ಇನ್‌ಸ್ಟಿಟ್ಯೂಟ್, |

| | | | |
|---|---|---|---|
| | | | ಐ.ಟಿ.ಪಿ.ಎಲ್. ಕಾಡುಗೋಡಿ, ಉಜ್ವಲ ವಿದ್ಯಾಲಯ ಮತ್ತು ವೈಟ್‌ಫೀಲ್ಡ್, |
| 3. | **ಉತ್ತರ–ದಕ್ಷಿಣ ಮಾರ್ಗ ವಿಸ್ತರಣೆ:** ಹೆಸರಘಟ್ಟ ಕ್ರಾಸ್‌ನಿಂದ ಬಿ.ಐ.ಇ.ಸಿ.ವರೆಗೆ | 3.77 | ಮಂಜುನಾಥನಗರ, ಜಿಂದಾಲ್ ಮತ್ತು ಬಿ.ಐ.ಇ.ಸಿ. ಟರ್ಮಿನಲ್ |
| 4. | **ಉತ್ತರ–ದಕ್ಷಿಣ ಮಾರ್ಗ ವಿಸ್ತರಣೆ:** ಪುಟ್ಟೇನಹಳ್ಳಿಕ್ರಾಸ್‌ನಿಂದ ಅಂಜನಾಪುರ ಟೌನ್‌ಶಿಪ್‌ವರೆಗೆ (ನೈಸ್ ರಸ್ತೆವರೆಗೆ) | 6.29 | ಅಂಜನಾಪುರ ರಸ್ತೆ ಕ್ರಾಸ್, ಕೃಷ್ಣಲೀಲಾ ಪಾರ್ಕ್ (ಇಸ್ಕಾನ್), ವಾಜರಹಳ್ಳಿ, ತಲಘಟ್ಟಪುರ ಮತ್ತು ಅಂಜನಾಪುರ ಟೌನ್‌ಶಿಪ್, |
| 5. | **ಉತ್ತರ–ದಕ್ಷಿಣ–ಹೊಸ ಮಾರ್ಗ** ಐ.ಐ.ಎಮ್.ಬಿ.ಯಿಂದ ನಾಗವಾರ | 21.25 | ಗೊಟ್ಟಿಗೆರೆ, ಹುಳಿಮಾವು, ಐ.ಐ.ಎಮ್.ಬಿ. ಜೆ.ಪಿ.ನಗರ 4ನೇ ಹಂತ, ಜಯದೇವ ಆಸ್ಪತ್ರೆ (ಆರ್.ವಿ.ರಸ್ತೆ ಟರ್ಮಿನಲ್ ನಿಲ್ದಾಣದಿಂದ ಬೊಮ್ಮಸಂದ್ರ ಮಾರ್ಗಕ್ಕೆ ಮಾರ್ಗಬದಲಾವಣೆ ನಿಲ್ದಾಣ) ಮತ್ತು ಸ್ವಾಗತ್ ರಸ್ತೆ ಕ್ರಾಸ್ ಇವುಗಳು ಮೇಲ್ಮಾರ್ಗದ ನಿಲ್ದಾಣಗಳು. ಡೈರಿ ವೃತ್ತ, ಮೈಕ್ರೋ ಇಂಡಸ್ಟ್ರೀಸ್, ಲ್ಯಾಂಗ್ ಫೋರ್ಡ್ ಟೌನ್, ವೆಲ್ಲಾರ ಜಂಕ್ಷನ್, ಮಹಾತ್ಮಾ ಗಾಂಧಿ ರಸ್ತೆ (ಹಂತ–1ರ ಪೂರ್ವ – ಪಶ್ಚಿಮ ಕಾರಿಡಾರ್‌ನ ಮಾರ್ಗಬದಲಾವಣೆ ನಿಲ್ದಾಣ) ಶಿವಾಜಿನಗರ, |

| | | | |
|---|---|---|---|
| | | | ಕಂಟೋನ್‌ಮೆಂಟ್ ರೈಲ್ವೆ ನಿಲ್ದಾಣ, ಪಾಟರಿ ಟೌನ್, ಟ್ಯಾನರಿ ರಸ್ತೆ, ವೆಂಕಟೇಶಪುರ, ಅರೇಬಿಕ್ ಕಾಲೇಜ್ ಮತ್ತು ನಾಗವಾರ, ಇವು 12 ಸುರಂಗ ನಿಲ್ದಾಣಗಳು. |
| 6. | **ಪೂರ್ವ–ಪಶ್ಚಿಮ–ಹೊಸ ಮಾರ್ಗ:** ಆರ್.ವಿ. ರಸ್ತೆಯಿಂದ ಬೊಮ್ಮಸಂದ್ರ | 18.82 | ಆರ್.ವಿ.ರಸ್ತೆ, ರಾಗಿಗುಡ್ಡ ದೇವಸ್ಥಾನ, ಜಯದೇವ ಆಸ್ಪತ್ರೆ (ಗೊಟ್ಟಿಗೆರೆ–ಐಐಎಮ್‌ಬಿ–ನಾಗಾವರ ಮಾರ್ಗದ ಇಂಟರ್ ಚೇಂಜ್ ಸ್ಟೇಷನ್), ಬಿ.ಟಿ.ಎಮ್ ಲೇಔಟ್, ಸಿಲ್ಕ್ ಬೋರ್ಡ್, ಹೆಚ್.ಎಸ್.ಆರ್. ಲೇಔಟ್, ಆಕ್ಸ್‌ಫರ್ಡ್ ಕಾಲೇಜ್, ಮುನೇಶ್ವರ ನಗರ, ಚಿಕ್ಕಬೇಗೂರು, ಬಸಾಪುರ ರಸ್ತೆ, ಹೊಸ ರಸ್ತೆ, ಎಲೆಕ್ಟ್ರಾನಿಕ್ಸ್ ಸಿಟಿ–1, ಎಲೆಕ್ಟ್ರಾನಿಕ್ಸ್ ಸಿಟಿ, ಹುಸ್ಕೂರು ರಸ್ತೆ, ಹೆಬ್ಬಗೋಡಿ ಮತ್ತು ಬೊಮ್ಮಸಂದ್ರ. |
| | **ಒಟ್ಟು** | **72.095** | |

**ಆ)** ಮೆಟ್ರೋ ರೈಲು ಸ್ಟೇಷನ್‌ಗಳಿಗೆ ಹತ್ತಿರದಲ್ಲಿರುವ ರಸ್ತೆಗಳ ಅಗಲೀಕರಣಗೊಳಿಸಿ ಸುಗಮ ಸಂಚಾರ ವ್ಯವಸ್ಥೆಯನ್ನು ಒದಗಿಸಲು ಪರಿಶೀಲಿಸಿ ಕ್ರಮವಹಿಸಲಾಗುವುದು.

ಇ) ಸರ್ಕಾರವು Comprehensive Traffic and Transportation Plan (CTTP) ವರದಿಯ ಪ್ರಕಾರ ಎರಡು ಕಾರಿಡಾರ್‌ಗಳಲ್ಲಿ ಮೊನೋ ರೈಲು / ಲೈಟ್ ರೈಲುಗಳನ್ನು ಅಳವಡಿಸಲು ಸರ್ಕಾರದ ಆದೇಶ ಸಂಖ್ಯೆ: ಐಡಿಡಿ 90 ಐಟಿಎಸ್ 2010 (ಪಿ) ಬೆಂಗಳೂರು, ದಿನಾಂಕ:18–05–2010ರಲ್ಲಿ ಹೊರಡಿಸಿರುತ್ತದೆ. ಸದರಿ ಆದೇಶದಂತೆ ಈ ಕಾರಿಡಾರ್‌ಗಳಲ್ಲಿ ವಿವರವಾದ ಯೋಜನಾ ವರದಿಯನ್ನು ತಯಾರಿಸಲು ಗ್ಲೋಬಲ್ ಟೆಂಡರ್ ಕರೆದು M/s. Capita Symonds, London, ತಾಂತ್ರಿಕ ಸಲಹೆಗಾರರು ಇವರಿಗೆ ವಹಿಸಲಾಗಿದೆ. ಪ್ರಸ್ತುತ ವಿವರವಾದ ಯೋಜನಾ ವರದಿ ತಯಾರಿಸುವ ಕಾರ್ಯವು ಪ್ರಗತಿಯಲ್ಲಿದೆ. ಸರ್ಕಾರದಿಂದ ಅನುಮೋದಿಸಲಾದ ಕಾರಿಡಾರ್‌ಗಳ ವಿವರ ಕೆಳಕಂಡಂತಿದೆ:

**ಕಾರಿಡಾರ್–1:**

ಜೆ.ಪಿ.ನಗರ ದಿಂದ ಹೆಬ್ಬಾಳ–ಗಣಪತಿ ದೇವಸ್ಥಾನದಿಂದ ಪ್ರಾರಂಭಿಸಿ ಬನ್ನೇರುಘಟ್ಟ ರಸ್ತೆ ಹಾದು ಹೊರವಲಯ ವರ್ತುಲ ರಸ್ತೆ ಮೂಲಕ ಕನಕಪುರ ರಸ್ತೆಯಿಂದ ಮೈಸೂರು ರಸ್ತೆಗೆ ಕತ್ರಿಗುಪ್ಪೆ ಮೂಲಕ ಮೈಸೂರು ರಸ್ತೆಯಿಂದ ಹಾದು ಪೀಣ್ಯಾ ಕೈಗಾರಿಕಾ ಪ್ರದೇಶ ಸೇರುವುದು. ಅನಂತರ, ಪೀಣ್ಯಾ ಕೈಗಾರಿಕಾ ಪ್ರದೇಶದ ಹತ್ತಿರವಿರುವ ತುಮಕೂರು ರೋಡ್ ಜಂಕ್ಷನ್‌ನಿಂದ ಬಿ.ಇ.ಎಲ್. ಸರ್ಕಲ್ ಮತ್ತು ಲೊಟ್ಟೆಗೊಲ್ಲಹಳ್ಳಿ ಮೂಲಕ ಹಾದು ಹೆಬ್ಬಾಳದವರೆಗೆ (ಹೆಬ್ಬಾಳದಲ್ಲಿರುವ ಉದ್ದೇಶಿತ ಹೆಚ್.ಎಸ್.ಆರ್.ಎಲ್ ಸ್ಟೇಷನ್ ಹತ್ತಿರ) 31 ಕಿ.ಮೀ. ತಲುಪುವುದು.

**ಕಾರಿಡಾರ್–2:**

ಫೆರಿಫೆರಲ್ ರಿಂಗ್ ರಸ್ತೆಯಿಂದ ಮಾಗಡಿ ರಸ್ತೆ ಟೋಲ್‌ಗೇಟ್ ವರೆಗೆ ಮಾಗಡಿ ರಸ್ತೆಯಲ್ಲಿ 9.00 ಕಿ.ಮೀ. ದೂರದವರೆಗೆ,

ಇದಲ್ಲದೆ Swiss Challenge ನೀತಿಯಲ್ಲಿ ಮೊನೋ ರೈಲನ್ನು ಅಗರದಿಂದ ಮೆಜೆಸ್ಟಿಕ್‌ವರೆಗೆ ಅಳವಡಿಸಲು M/s. Scomi Geodesic ರವರು ಪ್ರಸ್ತಾವನೆ ನೀಡಿದ್ದು, ಈ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

**ಹಿಂದುಳಿದ ಸಮಾಜಕ್ಕೆ ಜಮೀನು ಮಂಜೂರಾತಿ ನೀಡುವ ಬಗ್ಗೆ**

**210; ಶ್ರೀ ವಿ.ಆರ್. ಸುದರ್ಶನ್ (ವಿಧಾನ ಸಭೆಯಿಂದ ಚುನಾಯಿತರಾದವರು)**

**ಅ)** ದಿನಾಂಕ:13–02–2011ರ ಗಾಣಿಗರ ಸಮಾವೇಶದಲ್ಲಿ ಹಿಂದಿನ ಮುಖ್ಯ ಮಂತ್ರಿಗಳು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 10 ಎಕರೆ ಜಮೀನನ್ನು ಸಮಾಜದ ಅಭಿವೃದ್ಧಿಗೆ ನೀಡುವುದಾಗಿ ಘೋಷಣೆಯನ್ನು ಮಾಡಿದ್ದು, ಈ ಜಮೀನು ಮಂಜೂರಾತಿ ಆಗಿದೆಯೇ; (ಆಗಿದ್ದಲ್ಲಿ ವಿವರ ಒದಗಿಸುವುದು)

**ಆ)** ಈ ಜಮೀನನ್ನು ಪಡೆಯಲು ಯಾವ ಯಾವ ಸಂಸ್ಥೆಗಳು ಮನವಿಯನ್ನು ಸಲ್ಲಿಸಿರುತ್ತವೆ? (ಮಾಹಿತಿಯನ್ನು ಒದಗಿಸುವುದು)

**ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಯವರು)**

**ಅ)** ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಗಾಣಿಯರ ಸಮಾಜಕ್ಕೆ ಸರ್ಕಾರಿ ಜಮೀನು ಮಂಜೂರು ಮಾಡಿರುವುದಿಲ್ಲ. ಆದರೆ ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ನಗಲೂರು ಗ್ರಾಮದ ಸರ್ವೆ ನಂ:112ರಲ್ಲಿ 10 ಎಕರೆ ಜಮೀನನ್ನು ವಿಶ್ವಗಾಣಿಗರ ಸಮುದಾಯ ಟ್ರಸ್ಟ್ ರವರಿಗೆ ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡಲಾಗಿದೆ.

**ಆ)** ಉದ್ಭವಿಸುವುದಿಲ್ಲ.

**ಇಂಡೋರ್ ಸ್ಟೇಡಿಯಂ ನಿರ್ಮಾಣ ಬಗ್ಗೆ**

**209; ಶ್ರೀ ವಿ.ಆರ್. ಸುದರ್ಶನ್ (ವಿಧಾನಸಭೆಯಿಂದ ಚುನಾಯಿತರಾದವರು)**

ಅ) ಕೋಲಾರ ನಗರದಲ್ಲಿ ಯುವಜನ ಸೇವಾ ಇಲಾಖೆಯ ವತಿಯಿಂದ ಇಂಡೋರ್ ಸ್ಟೇಡಿಯಮ್ ನಿರ್ಮಾಣಕ್ಕೆ ಯಾವ ಯಾವ ಯೋಜನೆಯಡಿ ಹಣವನ್ನು ಒದಗಿಸಲಾಗಿದೆ?

ಆ) ಮುಖ್ಯಮಂತ್ರಿಗಳು ಈ ಕಾರ್ಯಕ್ರಮವನ್ನು ಉದ್ಘಾಟಿಸಿದ್ದು, ಯುವ ಜನತೆಗೆ ಇದರ ಪ್ರಯೋಜನ ದೊರೆಕಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು? (ವಿವರವಾಗಿ ಒದಗಿಸುವುದು)

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಯವರು)**

ಅ) ಕೋಲಾರ ನಗರದಲ್ಲಿ ಒಳಾಂಗಣ ಸ್ಟೇಡಿಯಂ ನಿರ್ಮಾಣ ಮಾಡಲು ರೂ. 224.00 ಲಕ್ಷಗಳನ್ನು ಒದಗಿಸಲಾಗಿದ್ದು, ಅದರ ವಿವರ ಈ ಕೆಳಕಂಡಂತಿದೆ:

| | |
|---|---|
| ಕೇಂದ್ರ ಸರ್ಕಾರದ ಅನುದಾನ | – ರೂ. 23.00 ಲಕ್ಷ |
| ಸಂಸದರ ನಿಧಿಯಿಂದ | – ರೂ. 22.50 ಲಕ್ಷ |
| **12ನೇ ಹಣಕಾಸು ಆಯೋಗದ ಅನುದಾನದಿಂದ** | |
| 2007–08ನೇ ಸಾಲಿನಲ್ಲಿ | – ರೂ. 75.00 ಲಕ್ಷ |
| 2009–10ನೇ ಸಾಲಿನಲ್ಲಿ | – ರೂ. 103.50 ಲಕ್ಷ |
| | **ಒಟ್ಟು ರೂ. 224.00 ಲಕ್ಷ** |

ಆ) ಯುವ ಜನತೆಗೆ ಪ್ರಯೋಜನ ದೊರೆಕಿಸಲು ಎಲ್ಲಾ ಸೂಕ್ತ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ನಡೆಸಲಾಗುವುದು.

## ರಾಜ್ಯದಲ್ಲಿ ನಿರ್ಮಿಸಲಾದ ವಿಮಾನ ನಿಲ್ದಾಣಗಳ ವಿವರ

## 213; ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

**ಅ)** ಕಳೆದ 10 ವರ್ಷಗಳಲ್ಲಿ ರಾಜ್ಯದಲ್ಲಿ ನಿರ್ಮಿಸಲಾದ ವಿಮಾನ ನಿಲ್ದಾಣಗಳು ಎಷ್ಟು;

**ಆ)** ಸರ್ಕಾರ ಇದಕ್ಕೆ ಮಾಡಿದ ವೆಚ್ಚವೆಷ್ಟು; (ನಿಲ್ದಾಣವಾರು ಮಾಹಿತಿ ಒದಗಿಸುವುದು)

**ಇ)** ಸದರಿ ವಿಮಾನ ನಿಲ್ದಾಣಕ್ಕೆ ರೈತರಿಂದ ವಶಪಡಿಸಿಕೊಂಡಿರುವ ಜಮೀನು ಎಷ್ಟು; ಅದಕ್ಕೆ ಪರಿಹಾರ ಒದಗಿಸಲಾಗಿದೆಯೇ;

**ಈ)** ಈಗ ಎಷ್ಟು ಇಮಾನ ನಿಲ್ದಾಣಗಳು ಕಾರ್ಯನಿರ್ವಹಿಸುತ್ತಲಿವೆ;

**ಉ)** ಸ್ಥಗಿತಗೊಂಡಿರುವ ವಿಮಾನ ನಿಲ್ದಾಣಗಳು ಪುನರ್ ಕಾರ್ಯನಿರ್ವಹಿಸುವ ಬಗ್ಗೆ ಸರ್ಕಾರ ಏನಾದರೂ ಕ್ರಮ ಕೈಗೊಂಡಿದೆಯೇ?

### ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)

**ಅ)** ಕಳೆದ 10 ವರ್ಷಗಳಲ್ಲಿ ರಾಜ್ಯದಲ್ಲಿ ಬೆಂಗಳೂರು, ಮಂಗಳೂರು, ಹುಬ್ಬಳ್ಳಿ, ಮೈಸೂರು, ಬೆಳಗಾಂನಲ್ಲಿ ವಿಮಾನ ನಿಲ್ದಾಣಗಳು ಸ್ಥಾಪನೆಗೊಂಡಿರುತ್ತದೆ. ಬೀದರ್‌ನಲ್ಲಿರುವ ವಾಯು ಸೇನೆ ವಿಮಾನ ನಿಲ್ದಾಣದಲ್ಲಿ ಸಾರ್ವಜನಿಕ ವಿಮಾನಯಾನ ಸೌಲಭ್ಯ ಕಲ್ಪಿಸಲು ತಾತ್ಕಾಲಿಕ ಟರ್ಮಿನಲ್ ಕಟ್ಟಡವನ್ನು ನಿರ್ಮಿಸಲಾಗಿದೆ.

ಆ) ಈ ಮೇಲಿನ ವಿಮಾನ ನಿಲ್ದಾಣಗಳನ್ನು (ಬೆಂಗಳೂರು ಹೊರತುಪಡಿಸಿ) ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದಿಂದ ನಿರ್ಮಿಸಲಾಗಿದೆ. ರಾಜ್ಯ ಸರ್ಕಾರದಿಂದ ಈ ವಿಮಾನ ನಿಲ್ದಾಣಗಳಿಗೆ ಯಾವುದೇ ವೆಚ್ಚ ಮಾಡಿರುವುದಿಲ್ಲ. ಆದಾಗ್ಯೂ ಈ ವಿಮಾನ ನಿಲ್ದಾಣಗಳ ಅಭಿವೃದ್ಧಿಗೆ ಅಗತ್ಯವಿದ್ದ ಜಮೀನುಗಳನ್ನು ರಾಜ್ಯ ಸರ್ಕಾರದಿಂದ ಭೂಸ್ವಾಧೀನಪಡಿಸಿ ವರ್ಗಾಯಿಸಲಾಗಿದೆ. ಬೆಂಗಳೂರು ವಿಮಾನ ನಿಲ್ದಾಣವನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ನಿರ್ಮಿಸಲಾಗಿದ್ದು ಈ ವಿಮಾನ ನಿಲ್ದಾಣಕ್ಕೆ ಅಗತ್ಯವಿದ್ದ ಜಮೀನನ್ನು ಭೂಸ್ವಾಧೀನಪಡಿಸಿ ಗುತ್ತಿಗೆ ಆಧಾರದ ಮೇಲೆ ಅಭಿವೃದ್ಧಿದಾರರಿಗೆ ನೀಡಲಾಗಿದೆ ಹಾಗೂ ಈಕ್ವಿಟಿ ಹೂಡಿಕೆಯಾಗಿ ರೂ.350.00 ಕೋಟಿಗಳನ್ನು ನೀಡಿದೆ. ಬೀದರ್ ವಿಮಾನ ನಿಲ್ದಾಣದಲ್ಲಿ ತಾತ್ಕಾಲಿಕ ಟರ್ಮಿನಲ್ ಕಟ್ಟಡ ನಿರ್ಮಿಸಲು ರೂ.3.00 ಕೋಟಿಗಳನ್ನು ನೀಡಿದೆ.

ಇ)

| ಸ್ಥಳ | ರೈತರಿಂದ ಸ್ವಾಧೀನಪಡಿಸಿಕೊಂಡಿರುವ ಜಮೀನಿನ ವಿಸ್ತೀರ್ಣ | ಪರಿಹಾರ ನೀಡಲಾಗಿದೆಯೇ? |
|---|---|---|
| ಬೆಂಗಳೂರು | 2593–07½ | ನೀಡಲಾಗಿದೆ |
| ಮೈಸೂರು | 171.04 | ನೀಡಲಾಗಿದೆ |
| ಹುಬ್ಬಳ್ಳಿ | 710.36 | ನೀಡಲಾಗಿದೆ |
| ಬೆಳಗಾಂ | 370 | ನೀಡಲಾಗಿದೆ |
| ಮಂಗಳೂರು | 396.69 | ನೀಡಲಾಗಿದೆ |

ಈ) ಈ ಮೇಲಿನ ಎಲ್ಲಾ ವಿಮಾನ ನಿಲ್ದಾಣಗಳು ಕಾರ್ಯಾಚರಣೆಗೆ ಯೋಗ್ಯವಾಗಿದ್ದು, ಬೆಂಗಳೂರು, ಮಂಗಳೂರು, ಹುಬ್ಬಳ್ಳಿಯಲ್ಲಿ ವಿಮಾನ ಹಾರಾಟ ಸೇವೆ ನಡೆಯುತ್ತಿದೆ.

ಉ) ಸ್ಥಗಿತಗೊಂಡಿರುವ ವಿಮಾನ ನಿಲ್ದಾಣಗಳಲ್ಲಿ ವಿಮಾನಯಾನ ಸೇವೆ ಪುನರ್ ಪ್ರಾರಂಭಿಸಲು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರಕ್ಕೆ ಪತ್ರ ಬರೆಯಲಾಗಿದೆ. ಬೀದರ್ ವಿಮಾನ ನಿಲ್ದಾಣದಲ್ಲಿ ಸಾರ್ವಜನಿಕ ವಿಮಾನಯಾನ ಸೇವೆ ಪ್ರಾರಂಭಿಸಲು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದಿಂದ ಅನುಮೋದನೆಯನ್ನು ನಿರೀಕ್ಷಿಸಿದೆ.

**ಬಿ.ಬಿ.ಎಂ.ಪಿ. ಯಲ್ಲಿ ನಡೆದಿರುವ ಭ್ರಷ್ಟಾಚಾರದ ಬಗ್ಗೆ**

**233; ಡಾ॥ ಶ್ರೀನಾಥ್ (ನಾಮನಿರ್ದೇಶಿತರು)**

ಅ) ಬಿಬಿಎಂಪಿಯಲ್ಲಿ ದಿನಾಂಕ 01–04–2008 ರಿಂದ ನಡೆದಿರುವ ಭ್ರಷ್ಟಾಚಾರದ ಪ್ರಕರಣಗಳ ಮಾಹಿತಿಯು ಸರ್ಕಾರದ ಬಳಿ ಇದೆಯೇ;

ಆ) ಹಾಗಿದ್ದಲ್ಲಿ ಯಾವ ಯಾವ ಪ್ರಕರಣಗಳಲ್ಲಿ ಭ್ರಷ್ಟಾಚಾರವು ನಡೆದಿದೆ;

ಇ) ಇಲ್ಲಿಯವರೆಗೂ ತೆಗೆದುಕೊಂಡಿರುವ ಕ್ರಮಗಳೇನು?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಯವರು)**

ಅ) ಹೌದು, ಇದೆ.

ಆ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಗಾಂಧೀನಗರ, ಮಲ್ಲೇಶ್ವರಂ ಮತ್ತು ರಾಜರಾಜೇಶ್ವರಿನಗರ ಇಂಜಿನಿಯರಿಂಗ್ ವಿಭಾಗಗಳ ವ್ಯಾಪ್ತಿಯಲ್ಲಿ 2008–09 ರಿಂದ ಇದುವರೆಗೆ ನಡೆದಿರುವ ಕಾಮಗಾರಿಗಳ ಅನುಷ್ಠಾನದ ಬಗ್ಗೆ ಪ್ರಾಥಮಿಕ ತನಿಖೆ ನಡೆಸಿದಾಗ ಈ ವಿಭಾಗಗಳಲ್ಲಿ 1539.62 ಕೋಟಿ ರೂಪಾಯಿ ಮೊತ್ತದ ಕಾಮಗಾರಿಗಳನ್ನು ನಿರ್ವಹಿಸಲಾಗಿದ್ದು ಈ ಪೈಕಿ 153 ಕಡತಗಳಿಗೆ ಸಂಬಂಧಿಸಿದ ಕಾಮಗಾರಿಗಳ ಸ್ಥಳ ಪರಿಶೀಲನೆ ನಡೆಸಿದಾಗ ಸುಮಾರು ರೂ. 5.22 ಕೋಟಿ ಮೊತ್ತದ ಕಾಮಗಾರಿಗಳನ್ನು ನಿರ್ವಹಿಸದೇ ಹಣ ಪಾವತಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

ಜೊತೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಗಾಂಧೀನಗರ, ಮಲ್ಲೇಶ್ವರಂ ಮತ್ತು ರಾಜರಾಜೇಶ್ವರಿನಗರ ಇಂಜಿನಿಯರಿಂಗ್ ವಿಭಾಗಗಳ ವ್ಯಾಪ್ತಿಯಲ್ಲಿ ನಡೆದಿದೆ ಎನ್ನಲಾದ ಕಾಮಗಾರಿಗಳಲ್ಲಿನ ಅಕ್ರಮ ಹಾಗೂ ಅವ್ಯವಹಾರಗಳ ಸಮಗ್ರ ತನಿಖೆ ನಡೆಸಲು ಪ್ರಕರಣವನ್ನು ಸರ್ಕಾರದ ಆದೇಶ ಸಂಖ್ಯೆ: ಒಇ 130 ಸಿಐಡಿ 2011, ದಿನಾಂಕ 07-12-2011ರಲ್ಲಿ ಸಿ.ಐ.ಡಿ.ಗೆ ವಹಿಸಲಾಗಿದೆ.

ಹಾಗೂ ಮಾನ್ಯ ಲೋಕಾಯುಕ್ತರು ಮತ್ತು ವಿಚಾರಣಾಧಿಕಾರಿಗಳು ನೀಡುವ ವರದಿಯನ್ವಯ ಕ್ರಮ ಕೈಗೊಳ್ಳಲಾಗುವುದು. ಆಡಳಿತ ಪಾರದರ್ಶಕತೆ ಮತ್ತು ಜವಾಬ್ದಾರಿಗಳನ್ನು ವಿವಿಧ ಹಂತದಲ್ಲಿ ಜಾರಿಗೊಳಿಸಲು ಹಲವಾರು ಆಡಳಿತಾತ್ಮಕ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಲೋಕಾಯುಕ್ತ ಟ್ರಾಪ್/ದಾಳಿಗೆ ಒಳಗಾಗಿರುವ ಪಾಲಿಕೆಯ ಅಧಿಕಾರಿ/ನೌಕರರುಗಳ ವಿರುದ್ಧ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಿರುವ ಪ್ರಕರಣಗಳ ವಿವರ

| ಕ್ರ. ಸಂ. | ಅಧಿಕಾರಿ/ನೌಕರರ ಹೆಸರು ಮತ್ತು ಪದನಾಮ | ಕರ್ತವ್ಯಲೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಕ್ಷಿಪ್ತ ವರದಿ | ಮಾನ್ಯ ಲೋಕಾಯುಕ್ತ ರವರಿಗೆ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೊಳಪಡಿಸಲು ತೆಗೆದುಕೊಂಡಿರುವ ಕ್ರಮ | ಷರಾ |
|---|---|---|---|---|
| | | ಸಾಮಾನ್ಯ ಆಡಳಿತ | | |
| 1. | ಶ್ರೀ ಟಿ.ಕೆ. ರಮೇಶ್‌ಕುಮಾರ್, ದ್ವಿ.ದ.ಗು | ಸ.ಕಂ.ಅ (ಜೆ.ಬಿ.ನಗರ) ಉಪ ವಲಯದಲ್ಲಿ ಖಾತಾ ನೋಂದಾವಣೆ ಮಾಡಲು ಅಕ್ರಮ ಸಂಭಾವನೆ ಪಡೆಯುತ್ತಿದ್ದಾಗ ಲೋಕಾಯುಕ್ತ ಟ್ರಾಪ್ ಆಗಿರುತ್ತಾರೆ. | ಸದರಿ ನೌಕರರ ವಿರುದ್ಧ ವಿಶೇಷ ನ್ಯಾಯಾಲಯದಲ್ಲಿ ಮಾನ್ಯ ಲೋಕಾಯುಕ್ತರವರು ಸಲ್ಲಿಸಿದ ಆರೋಪವು ಸಾಬೀತಾದ ಹಿನ್ನೆಲೆಯಲ್ಲಿ ಸದರಿ ನೌಕರರನ್ನು ಕೆಲಸದಿಂದ ವಜಾ ಮಾಡಲಾಗಿರುತ್ತದೆ. ಸದರಿಯವರು ವಜಾ ಆದೇಶದ ವಿರುದ್ಧ ಉಚ್ಛ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುತ್ತಾರೆ. | ನ್ಯಾಯಾಲಯದ ತಡೆಯಾಜ್ಞೆಯನ್ನು ತೆರವುಗೊಳಿಸಲು ಕಡತವನ್ನು ಕಾನೂನು ವಿಭಾಗಕ್ಕೆ ಕಳುಹಿಸಲಾಗಿದೆ. |
| 2. | ಶ್ರೀ ಬಿ. ಈ. ಗಂಗಾಧರ್, ದ್ವಿ.ದ.ಗು, | ಸಹಾಯಕ ಕಂದಾಯ ಅಧಿಕಾರಿ (ಬಾಣಸವಾಡಿ) ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಇವರು ಖಾತಾ ವರ್ಗಾವಣೆ ಮಾಡಲು ಅಕ್ರಮ ಸಂಭಾವನೆ ಪಡೆಯುವಾಗ ಲೋಕಾಯುಕ್ತ ಟ್ರಾಪ್ ಆಗಿರುತ್ತಾರೆ. | ಮಾನ್ಯ ಲೋಕಾಯುಕ್ತ ಕಛೇರಿಯಿಂದ ಅಭಿಯೋಜನೆಗೆ ಒಳಪಡಿಸಲು ಅನುಮತಿ ಕೋರಿರುವುದಿಲ್ಲ. | |
| 3. | ಅಂತೋಣಿ ರಾಜೇಶ್, ದ್ವಿ.ದ.ಗು, | ಸಹಾಯಕ ಕಂದಾಯ ಅಧಿಕಾರಿ (ಜಾಹೀರಾತು–ಪೂರ್ವ) ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಇವರು ಜಾಹೀರಾತು ಅನುಮತಿ ನೀಡಲು ಅಕ್ರಮ ಸಂಭಾವನೆ ಪಡೆಯುವಾಗ ಲೋಕಾಯುಕ್ತ ಟ್ರಾಪ್ ಆಗಿರುತ್ತಾರೆ. | ಮಾನ್ಯ ಲೋಕಾಯುಕ್ತ ಕಛೇರಿಯಿಂದ ಅಭಿಯೋಜನೆಗೆ ಒಳಪಡಿಸಲು ಅನುಮತಿ ಕೋರಿರುವುದಿಲ್ಲ. | |
| | | ಕಂದಾಯ ಇಲಾಖೆ | | |
| 1. | ಟಿ.ಎನ್.ಗುರುಮೂರ್ತಿ ಕಂದಾಯ ಪರಿವೀಕ್ಷಕರು | ಖಾತಾ ಬದಲಾವಣೆ ಮಾಡುವ ಸಂಬಂಧ ಅಕ್ರಮ ಸಂಭಾವನೆ ಪಡೆಯುವಾಗ ಲೋಕಾಯುಕ್ತ ಟ್ರಾಪ್ ಆಗಿರುತ್ತಾರೆ. | ಮಾನ್ಯ ಲೋಕಾಯುಕ್ತರವರಿಗೆ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆ ಗೊಳಪಡಿಸಲು ಅನುಮತಿ ನೀಡಲಾಗಿರುತ್ತದೆ. ಪ್ರಕರಣ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ. | |

| | | | | |
|---|---|---|---|---|
| 2. | ಎಸ್.ಆರ್ಮುಗಂ ಕಂದಾಯ ವಸೂಲಿಗಾರರು | ಖಾತಾ ಬದಲಾವಣೆ ಮಾಡುವ ಸಂಬಂಧ ಅಕ್ರಮ ಸಂಭಾವನೆ ಪಡೆಯುವಾಗ ಲೋಕಾಯುಕ್ತ ಟ್ರಾಪ್ ಆಗಿರುತ್ತಾರೆ. | ಮಾನ್ಯ ಲೋಕಾಯುಕ್ತರವರಿಗೆ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆ ಗೊಳಪಡಿಸಲು ಅನುಮತಿ ನೀಡಲಾಗಿರುತ್ತದೆ. ಪ್ರಕರಣ ಇತ್ಯರ್ಥವಾಗಿರುವುದಿಲ್ಲ. | |
| 3. | ನರಸಿಂಹಯ್ಯ ಕಂದಾಯ ಪರಿವೀಕ್ಷಕರು | ಖಾತಾ ನೋಂದಾವಣೆ ಮಾಡುವ ಸಂಬಂಧ ಅಕ್ರಮ ಸಂಭಾವನೆ ಪಡೆಯುವಾಗ ಲೋಕಾಯುಕ್ತ ಟ್ರಾಪ್ ಆಗಿರುತ್ತಾರೆ. | ಮಾನ್ಯ ಲೋಕಾಯುಕ್ತರವರಿಗೆ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೊಳಪಡಿಸಲು ಅನುಮತಿ ನೀಡಲಾಗಿ-ರುತ್ತದೆ. ಪ್ರಕರಣ ವಿಚಾರಣಾ ಹಂತದಲ್ಲಿರುತ್ತದೆ. | |
| 4. | ಎಸ್.ವಿಶ್ವನಾಥ್ ಕಂದಾಯ ವಸೂಲಿಗಾರರು | ಖಾತಾ ಬದಲಾವಣೆ ಮಾಡುವ ಸಂಬಂಧ ಅಕ್ರಮ ಸಂಭಾವನೆ ಪಡೆಯುವಾಗ ಲೋಕಾಯುಕ್ತ ಟ್ರಾಪ್ ಆಗಿರುತ್ತಾರೆ. | ಮಾನ್ಯ ಲೋಕಾಯುಕ್ತರವರಿಗೆ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೊಳಪಡಿಸಲು ಅನುಮತಿ ನೀಡಲಾಗಿ-ರುತ್ತದೆ. ಪ್ರಕರಣ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ. | |
| 5. | ಎಂ.ಸಿ. ಹೊಂಬಾಳಯ್ಯ ಕಂದಾಯ ವಸೂಲಿಗಾರರು | ಖಾತಾ ಬದಲಾವಣೆ ಮಾಡುವ ಸಂಬಂಧ ಅಕ್ರಮ ಸಂಭಾವನೆ ಪಡೆಯುವಾಗ ಲೋಕಾಯುಕ್ತ ಟ್ರಾಪ್ ಆಗಿರುತ್ತಾರೆ. | ಮಾನ್ಯ ಲೋಕಾಯುಕ್ತರವರಿಗೆ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೊಳಪಡಿಸಲು ಅನುಮತಿ ನೀಡಲಾಗಿ-ರುತ್ತದೆ. ಪ್ರಕರಣ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ. | |
| 6. | ಹೆಚ್.ಎಲ್.ರಾಮಮೂರ್ತಿ ಕಂದಾಯ ವಸೂಲಿಗಾರ | ಖಾತಾ ನೋಂದಾವಣೆ ಮಾಡುವ ಸಂಬಂಧ ಅಕ್ರಮ ಸಂಭಾವನೆ ಪಡೆಯುವಾಗ ಲೋಕಾಯುಕ್ತ ಟ್ರಾಪ್ ಆಗಿರುತ್ತಾರೆ. | ಮಾನ್ಯ ಲೋಕಾಯುಕ್ತರವರಿಗೆ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಅನುಮತಿ ನೀಡಲಾಗಿರುತ್ತದೆ. ಪ್ರಕರಣ ಬಾಕಿ ಇರುತ್ತದೆ. | |
| 7. | ಆರ್.ಯತಿರಾಜ್ ಮೌಲ್ಯಮಾಪಕರು | ಖಾತಾ ವರ್ಗಾವಣೆ ಮಾಡುವ ಸಂಬಂಧ ಅಕ್ರಮ ಸಂಭಾವನೆ ಪಡೆಯುವಾಗ ಲೋಕಾಯುಕ್ತ ಟ್ರಾಪ್ ಆಗಿರುತ್ತಾರೆ. | ಮಾನ್ಯ ಲೋಕಾಯುಕ್ತರವರಿಗೆ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಅನುಮತಿ ನೀಡಲಾಗಿರುತ್ತದೆ. ಪ್ರಕರಣ ಬಾಕಿ ಇರುತ್ತದೆ. | |
| 8. | ಸತೀಶ್ ಕಂದಾಯ ವಸೂಲಿಗಾರರು | ಖಾತಾ ಬದಲಾವಣೆ ಮಾಡುವ ಸಂಬಂಧ ಅಕ್ರಮ ಸಂಭಾವನೆ ಪಡೆಯುವಾಗ ಲೋಕಾಯುಕ್ತ ಟ್ರಾಪ್ ಆಗಿರುತ್ತಾರೆ. | ಮಾನ್ಯ ಲೋಕಾಯುಕ್ತರವರಿಗೆ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಅನುಮತಿ ನೀಡಲಾಗಿರುತ್ತದೆ. ಪ್ರಕರಣ ಬಾಕಿ ಇರುತ್ತದೆ. | |

| | | | | |
|---|---|---|---|---|
| 9. | ಜೆ.ಶಿವಣ್ಣ ಕಂದಾಯ ವಸೂಲಿಗಾರರು | ಖಾತಾ ನೋಂದಾವಣೆ ಮಾಡುವ ಸಂಬಂಧ ಅಕ್ರಮ ಸಂಭಾವನೆ ಪಡೆಯುವಾಗ ಲೋಕಾಯುಕ್ತ ಟ್ರಾಪ್ ಆಗಿರುತ್ತಾರೆ. | ಮಾನ್ಯ ಲೋಕಾಯುಕ್ತರವರಿಗೆ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಅನುಮತಿ ನೀಡಲಾಗಿರುತ್ತದೆ. ಪ್ರಕರಣ ಬಾಕಿ ಇರುತ್ತದೆ. | |
| 10. | ನಂಜುಂಡಯ್ಯ ಪ್ರಥಮ ದರ್ಜೆ ಕಂದಾಯ ಪರಿವೀಕ್ಷಕರು (ಪೌರಾಡಳಿತ ಇಲಾಖೆ) | ಖಾತಾ ಬದಲಾವಣೆ ಮಾಡುವ ಸಂಬಂಧ ಅಕ್ರಮ ಸಂಭಾವನೆ ಪಡೆಯುವಾಗ ಲೋಕಾಯುಕ್ತ ಟ್ರಾಪ್ ಆಗಿರುತ್ತಾರೆ. | ಮಾನ್ಯ ಲೋಕಾಯುಕ್ತರವರಿಗೆ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಅನುಮತಿ ನೀಡಲಾಗಿರುತ್ತದೆ. ಪ್ರಕರಣ ಬಾಕಿ ಇರುತ್ತದೆ. | |
| 11. | ತಿಬ್ಬೇಗೌಡ, ಕಂದಾಯ ವಸೂಲಿಗಾರ | ಖಾತಾ ನೋಂದಾವಣೆ ಮಾಡುವ ಸಂಬಂಧ ಅಕ್ರಮ ಸಂಭಾವನೆ ಪಡೆಯುವಾಗ ಲೋಕಾಯುಕ್ತ ಟ್ರಾಪ್ ಆಗಿರುತ್ತಾರೆ. | ಮಾನ್ಯ ಲೋಕಾಯುಕ್ತರವರಿಗೆ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಅನುಮತಿ ನೀಡಲಾಗಿರುತ್ತದೆ. ಪ್ರಕರಣ ಬಾಕಿ ಇರುತ್ತದೆ. | |
| | | **ಆರೋಗ್ಯ ಇಲಾಖೆ** | | |
| 1. | ಎಂ. ಮುನ್ನರಸಯ್ಯ, ಹಿ.ಆ.ಪ | ಕೋಳಿ ಮತ್ತು ಕೋಳಿ ಮಾಂಸದ ಅಂಗಡಿ ಲೈಸೆನ್ಸ್ ನೀಡಲು ಅಕ್ರಮ ಸಂಭಾವನೆ ಪಡೆಯುವಾಗ ಲೋಕಾಯುಕ್ತ ಟ್ರಾಪ್ ಆಗಿರುತ್ತಾರೆ. | ಅಭಿಯೋಜನೆಗೊಳಿಸಲು ಅನುಮತಿ ನೀಡಲಾಗಿರುತ್ತದೆ. | ಪ್ರಕರಣ ಬಾಕಿ ಇರುತ್ತದೆ. |
| 2. | ಪುಳ್ಳಾಯಪ್ಪ, ಹಿ.ಆ.ಪ | ಕಸ ವಿಲೇವಾರಿ ಆಟೋ ವರ್ಕ್ ಆರ್ಡರ್‌ಗಾಗಿ ಅಕ್ರಮ ಸಂಭಾವನೆ ಪಡೆಯುವಾಗ ಲೋಕಾಯುಕ್ತ ಟ್ರಾಪ್ ಆಗಿರುತ್ತಾರೆ. | ಅಭಿಯೋಜನೆಗೊಳಿಸಲು ಅನುಮತಿ ನೀಡಲಾಗಿರುತ್ತದೆ. | ಪ್ರಕರಣ ಬಾಕಿ ಇರುತ್ತದೆ. |
| 3. | ಜನಾರ್ಧನ ರೆಡ್ಡಿ, ಉಪ ನೊಂದಣಿಗಾರ | ಜನನ ಮತ್ತು ಮರಣ ನೋಂದಣಿ ಕಛೇರಿಯಲ್ಲಿ ಪ್ರಮಾಣ ಪತ್ರ ನೀಡಲು ಅಕ್ರಮ ಸಂಭಾವನೆ ಪಡೆಯುವಾಗ ಲೋಕಾಯುಕ್ತ ಟ್ರಾಪ್ ಆಗಿರುವುದು. | ಅಭಿಯೋಜನೆಗೊಳಿಸಲು ಅನುಮತಿ ನೀಡಲಾಗಿರುತ್ತದೆ. | ಪ್ರಕರಣ ಬಾಕಿ ಇರುತ್ತದೆ. |
| 4. | ನಾರಾಯಣಸ್ವಾಮಿ, ಕಿ.ಆ.ಪ | --- | --- | ಸದರಿ ನೌಕರರನ್ನು ಮಾತೃ ಇಲಾಖೆಗೆ ಹಿಂದಿರುಗಿಸಲಾಗಿರುತ್ತದೆ. |
| 5. | ಎಂ. ದೇವರಾಜ್ ಕಿ.ಆ.ಪ | --- | ಮಾನ್ಯ ಲೋಕಾಯುಕ್ತ ಕಛೇರಿಯಿಂದ ಅಭಿಯೋಜನೆಗೆ ಒಳಪಡಿಸಲು ಅನುಮತಿ ಕೋರಿರುವುದಿಲ್ಲ. | ಸದರಿ ನೌಕರರ ಸೇವಾ ವಿವರಗಳನ್ನು ಅವರ |

| | | | | |
|---|---|---|---|---|
| | | | | ಮಾತೃ ಇಲಾಖೆಯಾದ ಪೌರಾಡಳಿತ ಇಲಾಖೆಗೆ ಕಳುಹಿಸಿಕೊಡಲು ಜಂಟಿ ಆಯುಕ್ತರು (ಮಹದೇವಪುರ) ರವರನ್ನು ಆಂತರಿಕ ಕಛೇರಿ ಟಿಪ್ಪಣಿ ಮೂಲಕ ಕೋರಲಾಗಿರುತ್ತದೆ. |
| ಕಾಮಗಾರಿ ಇಲಾಖೆ | | | | |
| 1. | ಎಮ್. ವೆಂಕಟೇಶ್ ಪ್ರಭಾರ ಕಿರಿಯ ಅಭಿಯಂತರರು | ಲಾಂಗ್‌ಫೋರ್ಡ್ ರಸ್ತೆಯಲ್ಲಿರುವ ಕ್ಲಾರೆನ್ಸ್ ಅಪಾರ್ಟ್‌ಮೆಂಟ್ಸ್‌ನ ಮನೆ ನಂ.3ರ ದುರಸ್ತಿ ಕಾರ್ಯಕ್ಕಾಗಿ ಅನುಮತಿ ನೀಡಲು ಅಕ್ರಮ ಸಂಭಾವನೆ ಪಡೆಯುವಾಗ ಲೋಕಾಯುಕ್ತ ಟ್ರಾಪ್ ಆಗಿರುವುದು. | ಬಿ12(6)/ಪಿಆರ್/212/2005-06 ದಿ: 03-07-2008ರ ನಡವಳಿಗಳಂತೆ ಮಾನ್ಯ ಲೋಕಾಯುಕ್ತ ರವರಿಗೆ ಸಕ್ಷಮ ಅಭಿಯೋಜನೆಗೊಳಪಡಿಸಲು ಅನುಮತಿ ನೀಡಲಾಗಿರುತ್ತದೆ. | ಪ್ರಕರಣ ಬಾಕಿ ಇರುತ್ತದೆ. |
| 2. | ಎಂ.ಸಿ. ಪ್ರಕಾಶ್, ಕಾರ್ಯಪಾಲಕ ಅಭಿಯಂತರರು | ಅಕ್ರಮ ಆಸ್ತಿ ಹೊಂದಿರುವ ಕಾರಣ ನಡೆದಿರುವ ದಾಳಿ ಪ್ರಕರಣ | ಬಿ12(6)/ಪಿಆರ್/190/2005-06 ರಲ್ಲಿನ ನಡವಳಿ-ಗಳಂತೆ ಮಾನ್ಯ ಲೋಕಾಯುಕ್ತ ರವರಿಗೆ ಸಕ್ಷಮ ಅಭಿಯೋಜನೆಗೊಳಪಡಿಸಲು ಅನುಮತಿ ನೀಡಲಾಗಿರುತ್ತದೆ. | ಪ್ರಕರಣ ಬಾಕಿ ಇರುತ್ತದೆ. |

ಲೋಕಾಯುಕ್ತ ಟ್ರ್ಯಾಪ್/ದಾಳಿಗೆ ಒಳಗಾಗಿರುವ ಪಾಲಿಕೆಯ ಅಧಿಕಾರಿ/ನೌಕರರುಗಳ ವಿರುದ್ಧ 1957ರ ಕೆ.ಸಿ.ಎಸ್ (ಸಿ.ಸಿ.ಎ.) ನಿಯಮಾವಳಿ ನಿಯಮ 14(ಎ)ರನ್ವಯ ಇಲಾಖಾ ವಿಚಾರಣೆ ನಡೆಸಲು ಉಪಲೋಕಾಯುಕ್ತರಿಗೆ ವಹಿಸಿರುವ ಪ್ರಕರಣಗಳ ವಿವರಗಳು:-

| ಕ್ರ. ಸಂ. | ಅಧಿಕಾರಿ/ನೌಕರರ ಹೆಸರು ಮತ್ತು ಪದನಾಮ | ಕರ್ತವ್ಯಲೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಕ್ಷಿಪ್ತ ವರದಿ | ಮಾನ್ಯ ಉಪ ಲೋಕಾಯುಕ್ತ ರವರಿಗೆ ಇಲಾಖಾ ವಿಚಾರಣೆ ನಡೆಸಲು ನಿಯಮ 14(ಎ) ಪ್ರಕಾರ ಅನುಮತಿ ನೀಡುವ ಸಂಬಂಧ ತೆಗೆದುಕೊಂಡಿರುವ ಕ್ರಮ | ಷರಾ |
|---|---|---|---|---|
| | | ಸಾಮಾನ್ಯ ಆಡಳಿತ | | |
| 1. | ಶ್ರೀ ಮಂಜುನಾಥ್, ದ್ವಿ.ದ.ಗು | ಯಲಹಂಕ ಉಪ ವಲಯದಲ್ಲಿ ಕಾರ್ಯ-ನಿರ್ವಹಿಸುತ್ತಿರುವಾಗ ಇವರು ಖಾತಾ ಮಾಡಲು ಅಕ್ರಮ ಸಂಭಾವನೆ ಪಡೆಯುವಾಗ ಲೋಕಾಯುಕ್ತ ಟ್ರ್ಯಾಪ್ ಆಗಿರುತ್ತಾರೆ. | ಶ್ರೀ ಮಂಜುನಾಥ್, ದ್ವಿ.ದ.ಗು ರವರ ವಿರುದ್ಧ ಕೆ.ಎಸ್.ಸಿ. (ಸಿ.ಸಿ.ಎ) ರೂಲ್ 1957 14-ಎ ಅನ್ವಯ ಇಲಾಖಾ ವಿಚಾರಣೆ ನಡೆಸಲು ಗೌರವಾನ್ವಿತ ಉಪ ಲೋಕಾಯುಕ್ತರವರಿಗೆ ವಹಿಸಲಾಗಿದೆ. | ಅಭಿಯೋಜನೆಗೊಳಪಡಿಸಲು ಮಂಜೂರಾತಿ ನೀಡಲಾಗಿದೆ. ಪ್ರಕರಣ ಬಾಕಿ ಇರುತ್ತದೆ. |
| | | ಕಂದಾಯ ಇಲಾಖೆ | | |
| 1. | ಮೌಲಾಸಾಬ್ ಬುಕ್ಕಿಟ್‌ಗಾರ್ ಕಂದಾಯ ಪರಿವೀಕ್ಷಕರು | ಖಾತಾ ಬದಲಾವಣೆ ಮಾಡುವ ಸಂಬಂಧ ಅಕ್ರಮ ಸಂಭಾವನೆ ಪಡೆಯುವಾಗ ಲೋಕಾಯುಕ್ತ ಟ್ರ್ಯಾಪ್ ಆಗಿರುತ್ತಾರೆ. | ಶ್ರೀ ಮೌಲಾಸಾಬ್ ಬುಕ್ಕಿಟ್‌ಗಾರ್, ದ್ವಿತೀಯ ದರ್ಜೆ ಕಂದಾಯ ಪರಿವೀಕ್ಷಕರು ರವರ ವಿರುದ್ಧ ಕೆ.ಎಸ್.ಸಿ. (ಸಿ.ಸಿ.ಎ) ರೂಲ್ 1957 14-ಎ ಅನ್ವಯ ಇಲಾಖಾ ವಿಚಾರಣೆ ನಡೆಸಲು ಗೌರವಾನ್ವಿತ ಉಪ ಲೋಕಾಯುಕ್ತರವರಿಗೆ ವಹಿಸಲಾಗಿದೆ. | ಮಾನ್ಯ ಲೋಕಾಯುಕ್ತರವರಿಗೆ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೊಳಪಡಿಸಲು ಅನುಮತಿ ನೀಡಲಾಗಿರುತ್ತದೆ. ಪ್ರಕರಣ ಇತ್ಯರ್ಥವಾಗಿರುವುದಿಲ್ಲ. |
| 2. | ಬಾಬು ಕಂದಾಯ ಪರಿವೀಕ್ಷಕರು | ಖಾತಾ ನೋಂದಾವಣೆ ಮಾಡುವ ಸಂಬಂಧ ಅಕ್ರಮ ಸಂಭಾವನೆ ಪಡೆಯುವಾಗ ಲೋಕಾಯುಕ್ತ ಟ್ರ್ಯಾಪ್ ಆಗಿರುತ್ತಾರೆ. | ಶ್ರೀ ಬಾಬು, ಕಂದಾಯ ಪರಿವೀಕ್ಷಕರು ರವರ ವಿರುದ್ಧ ಕೆ.ಎಸ್.ಸಿ. (ಸಿ.ಸಿ.ಎ) ರೂಲ್ 1957 14-ಎ ಅನ್ವಯ ಇಲಾಖಾ ವಿಚಾರಣೆ ನಡೆಸಲು ಗೌರವಾನ್ವಿತ ಉಪ ಲೋಕಾಯುಕ್ತರವರಿಗೆ ವಹಿಸಲಾಗಿದೆ. | ಮಾನ್ಯ ಲೋಕಾಯುಕ್ತ ರವರಿಗೆ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೊಳಪಡಿಸಲು ಅನುಮತಿ ನೀಡಲಾಗಿರುತ್ತದೆ. ಪ್ರಕರಣ ಇತ್ಯರ್ಥವಾಗಿರುವುದಿಲ್ಲ. |

| | | | | |
|---|---|---|---|---|
| 3. | ಕೆ. ನಾಗರಾಜ್<br>ಕಂದಾಯ ಪರಿವೀಕ್ಷಕರು | ಖಾತಾ ಬದಲಾವಣೆ ಮಾಡುವ ಸಂಬಂಧ ಅಕ್ರಮ ಸಂಭಾವನೆ ಪಡೆಯುವಾಗ ಲೋಕಾಯುಕ್ತ ಟ್ರಾಪ್ ಆಗಿರುತ್ತಾರೆ. | ಸದರಿಯವರ ವಿರುದ್ಧ ಕೆ.ಸಿ.ಎಸ್ (ಸಿಸಿಎ) ನಿಯಮ 14ಎ ಪ್ರಕಾರ ಮಾನ್ಯ ಲೋಕಾಯುಕ್ತರವರಿಗೆ ಇಲಾಖಾ ವಿಚಾರಣೆ ವಹಿಸಲು ಕಡತ ವ್ಯವಹರಣೆಯಲ್ಲಿರುತ್ತದೆ. | ಮಾನ್ಯ ಲೋಕಾಯುಕ್ತರವರಿಗೆ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೊಳಪಡಿಸಲು ಅನುಮತಿ ನೀಡಲಾಗಿರುತ್ತದೆ. ಪ್ರಕರಣ ಬಾಕಿ ಇರುತ್ತದೆ. |
| 4. | ಎನ್.ಗಜೇಂದ್ರ<br>ಮೌಲ್ಯಮಾಪಕರು | ಖಾತಾ ನೋಂದಾವಣೆ ಮಾಡುವ ಸಂಬಂಧ ಅಕ್ರಮ ಸಂಭಾವನೆ ಪಡೆಯುವಾಗ ಲೋಕಾಯುಕ್ತ ಟ್ರಾಪ್ ಆಗಿರುತ್ತಾರೆ. | ಗಜೇಂದ್ರ, ಮೌಲ್ಯಮಾಪಕರು ರವರ ವಿರುದ್ಧ ಕೆ.ಎಸ್.ಸಿ. (ಸಿ.ಸಿ.ಎ) ರೂಲ್ 1957 14–ಎ ಅನ್ವಯ ಇಲಾಖಾ ವಿಚಾರಣೆ ನಡೆಸಲು ಗೌರವಾನ್ವಿತ ಉಪ ಲೋಕಾಯುಕ್ತರವರಿಗೆ ವಹಿಸಲಾಗಿದೆ. | ಮಾನ್ಯ ಲೋಕಾಯುಕ್ತರವರಿಗೆ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಅನುಮತಿ ನೀಡಲಾಗಿರುತ್ತದೆ. ಪ್ರಕರಣ ಬಾಕಿ ಇರುತ್ತದೆ. |
| 5. | ಅಶೋಕ್<br>ಪ್ರಭಾರ ಸಹಾಯಕ ಕಂದಾಯ ಅಧಿಕಾರಿ | ಖಾತಾ ನೋಂದಾವಣೆ ಮಾಡುವ ಸಂಬಂಧ ಅಕ್ರಮ ಸಂಭಾವನೆ ಪಡೆಯುವಾಗ ಲೋಕಾಯುಕ್ತ ಟ್ರಾಪ್ ಆಗಿರುತ್ತಾರೆ. | ಶ್ರೀ ಅಶೋಕ್, ಪ್ರಭಾರ ಸಹಾಯಕ ಕಂದಾಯ ಅಧಿಕಾರಿ ರವರ ವಿರುದ್ಧ ಕೆ.ಎಸ್.ಸಿ. (ಸಿ.ಸಿ.ಎ) ರೂಲ್ 1957 14–ಎ ಅನ್ವಯ ಇಲಾಖಾ ವಿಚಾರಣೆ ನಡೆಸಲು ಗೌರವಾನ್ವಿತ ಉಪ ಲೋಕಾಯುಕ್ತರವರಿಗೆ ವಹಿಸಲಾಗಿದೆ. | ಮಾನ್ಯ ಲೋಕಾಯುಕ್ತರವರಿಗೆ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಅನುಮತಿ ನೀಡಲಾಗಿರುತ್ತದೆ. ಪ್ರಕರಣ ಬಾಕಿ ಇರುತ್ತದೆ. |
| 6. | ಕೆ.ಎಸ್.ನಂಜೇಗೌಡ<br>ಸಮಾನ ಕೆಲಸಕ್ಕೆ ಸಮಾನ ವೇತನದ ಬಿಲ್‌ಕಲೆಕ್ಟರ್ (ಪೌರಾಡಳಿತ ಇಲಾಖೆ) | ಕಂದಾಯ ಪಾವತಿಸುವ ಸಂಬಂಧ ಅಕ್ರಮ ಸಂಭಾವನೆ ಪಡೆಯುವಾಗ ಲೋಕಾಯುಕ್ತ ಟ್ರಾಪ್ ಆಗಿರುತ್ತಾರೆ. | ಸದರಿ ನೌಕರರನ್ನು ಪಾಲಿಕೆಯ ಸೇವೆಯಿಂದ ವಜಾ ಮಾಡಲಾದ ಆದೇಶದ ವಿರುದ್ಧ ತಡೆಯಾಜ್ಞೆ ತಂದು ಸೇವೆಯಲ್ಲಿ ಮುಂದುವರೆದಿರುತ್ತಾರೆ. | ಮಾನ್ಯ ಲೋಕಾಯುಕ್ತರವರಿಗೆ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಅನುಮತಿ ನೀಡಲಾಗಿರುತ್ತದೆ. ಪ್ರಕರಣ ಬಾಕಿ ಇರುತ್ತದೆ. |
| 7. | ಎನ್.ಜಿ.ನಟರಾಜ್<br>ಸಮಾನ ಕೆಲಸಕ್ಕೆ ಸಮಾನ ವೇತನದ ಬಿಲ್‌ಕಲೆಕ್ಟರ್ (ಪೌರಾಡಳಿತ ಇಲಾಖೆ) | ಖಾತಾ ನೋಂದಾವಣೆ ಮಾಡುವ ಸಂಬಂಧ ಅಕ್ರಮ ಸಂಭಾವನೆ ಪಡೆಯುವಾಗ ಲೋಕಾಯುಕ್ತ ಟ್ರಾಪ್ ಆಗಿರುತ್ತಾರೆ. | ಸದರಿ ನೌಕರರನ್ನು ಪಾಲಿಕೆಯ ಸೇವೆಯಿಂದ ವಜಾ ಮಾಡಲಾದ ಆದೇಶದ ವಿರುದ್ಧ ತಡೆಯಾಜ್ಞೆ ತಂದು ಸೇವೆಯಲ್ಲಿ ಮುಂದುವರೆದಿರುತ್ತಾರೆ. | ಮಾನ್ಯ ಲೋಕಾಯುಕ್ತರವರಿಗೆ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಅನುಮತಿ ನೀಡಲಾಗಿರುತ್ತದೆ. ಪ್ರಕರಣ ಬಾಕಿ ಇರುತ್ತದೆ. |

| | | | | |
|---|---|---|---|---|
| 8. | ಪಿ. ಸೀತಾರಾಮಮೂರ್ತಿ ನಿವೃತ್ತ ಸಹಾಯಕ ಕಂದಾಯ ಅಧಿಕಾರಿ | ಖಾತಾ ವರ್ಗಾವಣೆ ಮಾಡುವ ಸಂಬಂಧ ಅಕ್ರಮ ಸಂಭಾವನೆ ಪಡೆಯುವಾಗ ಲೋಕಾಯುಕ್ತ ಟ್ರಾಪ್ ಆಗಿರುತ್ತಾರೆ. | ಸದರಿ ನಿವೃತ್ತಿ ಅಧಿಕಾರಿಯವರ ವಿರುದ್ಧ ಕೆ.ಸಿ.ಎಸ್. (ಸಿ.ಸಿ.ಎ) ರೂಲ್ 157 14-ಎ ರನ್ವಯ ಇಲಾಖಾ ವಿಚಾರಣೆ ನಡೆಸಲು ಗೌರವಾನ್ವಿತ ಉಪ ಲೋಕಾಯುಕ್ತ ರವರಿಗೆ ವಹಿಸಲು 1958ರ ಕೆ.ಸಿ.ಎಸ್.ಆರ್. ನಿಯಮ 214(2)(ಬಿ)(1)ರನ್ವಯ ಸರ್ಕಾರದ ಮಂಜೂರಾತಿಯನ್ನು ಕೋರಿದೆ. | -- |
| **ಆರೋಗ್ಯ ಇಲಾಖೆ** | | | | |
| 1. | ಕೆ.ಎಸ್. ಸುಂದರ್‌ರಾಜ್ ಹಿ.ಆ.ಪ. | ಕಸ ವಿಲೇವಾರಿ ಬಿಲ್ಲಿಗೆ ಸಂಬಂಧಿಸಿದಂತೆ ಅಕ್ರಮ ಸಂಭಾವನೆ ಪಡೆಯುವಾಗ ಲೋಕಾಯುಕ್ತ ಟ್ರಾಪ್ ಆಗಿರುತ್ತಾರೆ. | ಸದರಿ ನೌಕರರ ವಿರುದ್ಧ ಕೆ.ಎಸ್.ಸಿ (ಸಿಸಿಎ) ರೂಲ್ 1957 14-ಎ ಅನ್ವಯ ಇಲಾಖಾ ವಿಚಾರಣೆ ನಡೆಸಲು ಗೌರವಾನ್ವಿತ ಉಪ ಲೋಕಾಯುಕ್ತರವರಿಗೆ ವಹಿಸಲಾಗಿದೆ. | ಅಭಿಯೋಜನೆಗೊಳಿಸಲು ಅನುಮತಿ ನೀಡಲಾಗಿರುತ್ತದೆ. ಪ್ರಕರಣ ಇತ್ಯರ್ಥವಾಗಿರುವುದಿಲ್ಲ. |
| 2. | ಎಂ. ಶಂಕರ್ ಆಹಾರ ಪರಿವೀಕ್ಷಕ ಸಹಾಯಕ | ಬೇಕರಿ ಲೈಸನ್ಸ್ ವಿಷಯಕ್ಕೆ ಸಂಬಂಧಿಸಿದಂತೆ ಅಕ್ರಮ ಸಂಭಾವನೆ ಪಡೆಯುವಾಗ ಲೋಕಾಯುಕ್ತ ಟ್ರ್ಯಾಪ್ ಆಗಿರುತ್ತಾರೆ. | ಸದರಿ ನೌಕರರ ವಿರುದ್ಧ ಕೆ.ಎಸ್.ಸಿ (ಸಿಸಿಎ) ರೂಲ್ 1957 14-ಎ ಅನ್ವಯ ಇಲಾಖಾ ವಿಚಾರಣೆ ನಡೆಸಲು ಗೌರವಾನ್ವಿತ ಉಪ ಲೋಕಾಯುಕ್ತರವರಿಗೆ ವಹಿಸಲಾಗಿದೆ | ಅಭಿಯೋಜನೆಗೊಳಿಸಲು ಅನುಮತಿ ನೀಡಲಾಗಿರುತ್ತದೆ. ಪ್ರಕರಣ ಬಾಕಿ ಇರುತ್ತದೆ. ಮೂಲ ಕಡತವು ನಗರ ಸಿವಿಲ್ ನ್ಯಾಯಾಲಯದಲ್ಲಿ ಇರುತ್ತದೆ. |
| 3. | ಆರ್. ದೇವರಾಜ್ ಉಪ ನೊಂದಣಿಗಾರ (ದ್ವಿ.ದ.ಸ.) | ಜನನ ಮತ್ತು ಮರಣ ನೋಂದಣಿ ಕಛೇರಿಯಲ್ಲಿ ಪ್ರಮಾಣ ಪತ್ರ ನೀಡಲು ಅಕ್ರಮ ಸಂಭಾವನೆ ಪಡೆಯುವಾಗ ಲೋಕಾಯುಕ್ತ ಟ್ರಾಪ್ ಆಗಿರುವುದು. | ಸದರಿ ನೌಕರರ ವಿರುದ್ಧ ಕೆ.ಎಸ್.ಸಿ (ಸಿಸಿಎ) ರೂಲ್ 1957 14-ಎ ಅನ್ವಯ ಇಲಾಖಾ ವಿಚಾರಣೆ ನಡೆಸಲು ಗೌರವಾನ್ವಿತ ಉಪ ಲೋಕಾಯುಕ್ತರವರಿಗೆ ವಹಿಸಲಾಗಿದೆ. | ಅಭಿಯೋಜನೆಗೊಳಿಸಲು ಅನುಮತಿ ನೀಡಲಾಗಿರುತ್ತದೆ. ಪ್ರಕರಣ ಇತ್ಯರ್ಥವಾಗಿರುವುದಿಲ್ಲ. |

ವಿಶೇಷ ಆಯುಕ್ತರು (ಯೋಜನೆ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸರ್ಕಾರ ನೇಮಿಸಿದ್ದ ಎ.ಟಿ. ರಾಮಸ್ವಾಮಿ ವರದಿ ಬಗ್ಗೆ**

**273; ಶ್ರೀ ಅಲ್ಲಮ ಪ್ರಭುಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ಸರ್ಕಾರ ನೇಮಿಸಿದ್ದ ಎ.ಟಿ. ರಾಮಸ್ವಾಮಿ ವರದಿಯಲ್ಲಿ ಗುರುತಿಸಿದ್ದ ಸರ್ಕಾರಿ ಜಮೀನಿನಲ್ಲಿ ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಒತ್ತುವರಿ ಆಗಿದ್ದರೇ ತಪ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

**ಆ)** ಈಗ ಲಭ್ಯವಿರುವ ಸರ್ಕಾರಿ ಜಮೀನನ್ನು ಬಡವರಿಗೆ ನಿವೇಶನ ಹಂಚಲು ಸರ್ಕಾರ ಯೋಚಿಸಿದೆಯೇ; ಎಲ್ಲಾ ಜಮೀನನ್ನು ಹರಾಜು ಮಾಡಲಾಗುವುದೇ; ಉಳಿಸಿಕೊಳ್ಳಲಾಗುವುದೇ ಅಥವಾ ಒತ್ತುವರಿಗೆ ಅವಕಾಶ ಮಾಡಿಕೊಡಲಾಗುವುದೇ;

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಯವರು)**

**ಅ)** ಬಂದಿದೆ.

ಸರ್ಕಾರಿ ಜಮೀನು ಒತ್ತುವರಿ ನಿಯಂತ್ರಿಸುವ ಉದ್ದೇಶದಿಂದ ಕರ್ನಾಟಕ ಭೂ ಕಂದಾಯ ಅಧಿನಿಯಮ 1964ಕ್ಕೆ ತಿದ್ದುಪಡಿ ತಂದು, ಕಲಂ 192ಎ ಮತ್ತು 192ಬಿ ಗಳನ್ನು ಸೇರ್ಪಡೆ ಮಾಡಲಾಗಿದೆ. ಈ ತಿದ್ದುಪಡಿ ಆದೇಶದಂತೆ ಒತ್ತುವರಿದಾರರ ಮೇಲೆ ಹಾಗೂ ಒತ್ತುವರಿಯಲ್ಲಿ ಭಾಗಿಯಾದ ಸರ್ಕಾರಿ ನೌಕರರು ಮತ್ತು ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಅವಕಾಶ ಕಲ್ಪಿಸಲಾಗಿದೆ. ಬೆಂಗಳೂರು ನಗರ ಜಿಲ್ಲೆಯಲ್ಲಿ ಇಲ್ಲಿಯವರೆಗೆ 357 ಪ್ರಕರಣಗಳನ್ನು ದಾಖಲು ಮಾಡಲಾಗಿದೆ. ಇದಲ್ಲದೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸರ್ಕಾರಿ ಜಮೀನು ಒತ್ತುವರಿ ಆಗಿರುವ ಬಗ್ಗೆ ತನಿಖೆ ನಡೆಸಿ ವರದಿ ನೀಡಲು ಶ್ರೀ ವಿ. ಬಾಲಸುಬ್ರಮಣಿಯನ್, ನಿವೃತ್ತ ಅಪರ ಮುಖ್ಯ ಕಾರ್ಯದರ್ಶಿಗಳು ಇವರ ಅಧ್ಯಕ್ಷತೆಯಲ್ಲಿ ಸರ್ಕಾರಿ ಜಮೀನು ಸಂರಕ್ಷಣಾ ಕಾರ್ಯಪಡೆಯನ್ನು ರಚಿಸಲಾಗಿತ್ತು. ಈ ಕಾರ್ಯಪಡೆಯ

ಅಧ್ಯಕ್ಷರು ದಿನಾಂಕ: 04-07-2011 ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ವರದಿ ಸಲ್ಲಿಸಿರುತ್ತಾರೆ.

ಈ ವರದಿಯನ್ನು ಆಧರಿಸಿ, ಸರ್ಕಾರಿ ಜಮೀನುಗಳ ರಕ್ಷಣೆ ಮಾಡುವ ಬಗ್ಗೆ ಪರಾಮರ್ಶಿಸಿ ಸೂಕ್ತ ಸಲಹೆ ನೀಡಲು ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ 188 ಎಲ್‌ಜಿಪಿ 2011 ದಿನಾಂಕ:19-09-2011ರಲ್ಲಿ ಕಂದಾಯ ಇಲಾಖೆ, ಅರಣ್ಯ ಇಲಾಖೆ, ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಮೂರು ಸಮಿತಿಗಳನ್ನು ರಚಿಸಲಾಗಿದೆ. ಈ ಸಮಿತಿಗಳು ಶ್ರೀ ವಿ. ಬಾಲಸುಬ್ರಮಣಿಯನ್ ರವರ ವರದಿಯ ಶಿಫಾರಸ್ಸುಗಳನ್ನು ಪರಿಶೀಲಿಸಿ Curative action, Preventive action and Disciplinary action ಗಳನ್ನು ಕೈಗೊಳ್ಳುವ ಬಗ್ಗೆ ಪರಾವರ್ಶಿಸಿ ಕ್ರಮ ವಹಿಸಲಾಗುತ್ತಿವೆ. ಈಗಾಗಲೇ ಈ ಸಮಿತಿಗಳು ಹಲವು ಸಭೆಗಳನ್ನು ನಡೆಸಿ, ಮಾಹಿತಿ ಸಂಗ್ರಹಣೆ ಕಾರ್ಯ ನಿರ್ವಹಿಸುತ್ತಿವೆ. ಅಲ್ಲದೇ, ದಿನಾಂಕ:21-01-2012ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಮೂರು ಇಲಾಖೆಗಳ ಸಮಿತಿಯ ಜಂಟಿ ಸಭೆಯನ್ನು ಕರೆದು ಚರ್ಚಿಸಲಾಗಿದೆ.

ಕರ್ನಾಟಕ ಭೂ ಕಬಳಿಕೆ ನಿಷೇಧ ಕಾಯ್ದೆಯನ್ನು ಜಾರಿಗೆ ತರುವ ಸಲುವಾಗಿ ಮಸೂದೆಯನ್ನು 2007ರಲ್ಲಿ ರಾಜ್ಯ ಸರ್ಕಾರ ಅನುಮೋದಿಸಿ ಘನತೆವೆತ್ತ ರಾಷ್ಟ್ರಪತಿಯವರ ಅಂಗೀಕಾರಕ್ಕಾಗಿ ಕಳುಹಿಸಿತ್ತು ಈ ಮಸೂದೆಯಲ್ಲಿ ವಕ್ಫ್ ಸ್ವತ್ತುಗಳನ್ನು ಸಹ ಸೇರ್ಪಡಿಸುವ ಸಲುವಾಗಿ ರಾಷ್ಟ್ರಪತಿಗಳ ಕಛೇರಿಯಿಂದ ಹಿಂದಿರುಗಿಸಲಾಗಿರುತ್ತದೆ. ತದನಂತರ ಸಂಪುಟ ಸಭೆಯು ವಕ್ಫ್ ಮತ್ತು ಮುಜರಾಯಿಗೆ ಸೇರಿದ ಸ್ವತ್ತುಗಳನ್ನು ಸಹ ಸೇರ್ಪಡೆ ಮಾಡಲು ಒಪ್ಪಿಗೆ ನೀಡಿರುತ್ತದೆ. ಇದರನ್ವಯ ಇತ್ತೀಚೆಗೆ ಕರ್ನಾಟಕ ಭೂ ಕಬಳಿಕೆ ನಿಷೇಧ ಕಾಯ್ದೆ ಬಿಲ್ 2011ನ್ನು ಎರಡೂ ಸದನಗಳಲ್ಲಿ ಅನುಮೋದನೆ ಪಡೆಯಲಾಗಿದೆ. ಪ್ರಸ್ತುತ ಈ ಮಸೂದೆಗೆ ರಾಷ್ಟ್ರಪತಿಯವರ ಅಂಗೀಕಾರ ಪಡೆಯಬೇಕಾಗಿದೆ.

ಆ) ಹೌದು

ಬಡವರಿಗೆ/ವಸತಿ ರಹಿತರಿಗೆ ವಸತಿ ಸೌಲಭ್ಯಕ್ಕಾಗಿ ಈಗ ಕಾಲಕಾಲಕ್ಕೆ ಅತಿಕ್ರಮಣ/ ಒತ್ತುವರಿಯಿಂದ ತೆರವುಗೊಳಿಸುತ್ತಿರುವ ಸರ್ಕಾರಿ ಜಮೀನನ್ನು ಆದ್ಯತೆಯ ಮೇರೆಗೆ ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 18ಎ ರನ್ವಯ ಆಶ್ರಯ ಬಡಾವಣೆಗಳಿಗಾಗಿ ಹಾಗೂ ಕೊಳಚೆ ಪ್ರದೇಶಗಳ ಪುನರ್ ವಸತಿ ಅಗತ್ಯವಿರುವ ಸಂದರ್ಭಗಳಲ್ಲಿ G+2 ವಸತಿ ಸಮುಚ್ಚಯಗಳ ನಿರ್ಮಾಣಕ್ಕಾಗಿ RGRHCL & Slum Board ಗಳಿಗೆ ಮಂಜೂರು ಮಾಡಲಾಗುತ್ತಿದೆ.

ಒತ್ತುವರಿ/ಅತಿಕ್ರಮದಿಂದ ಖುಲ್ಲಾಪಡಿಸಿದ ಸರ್ಕಾರಿ ಜಮೀನನ್ನು ಈಗ ಹರಾಜಿಗೆ ಒಳಪಡಿಸುವುದನ್ನು ಸ್ಥಗಿತಗೊಳಿಸಲಾಗಿದೆ. ಏಕೆಂದರೆ ಕೆಲವು ಬಡವರ್ಗದ/ ದಲಿತ ಸಂಘರ್ಷ ಪರ ಹೋರಾಟಗಾರರು ಈ ಜಮೀನನ್ನು ಬಡವರ ವಸತಿಗಾಗಿ ಮೀಸಲಿಡಲು ಒತ್ತಾಯಿಸುತ್ತಿದ್ದಾರೆ. ಬೆಂಗಳೂರು ಜಿಲ್ಲೆಯಲ್ಲಿ ಜಮೀನು ಲಭ್ಯತೆ ಅತ್ಯಂತ ದುರ್ಲಭವಾಗಿದೆ.

ಸರ್ಕಾರಿ ಜಮೀನುಗಳ ರಕ್ಷಣೆಗಾಗಿ ಈ ಕೆಳಕಂಡ ಕ್ರಮ ಕೈಗೊಳ್ಳಲಾಗಿದೆ.

ಎ) ಸರ್ಕಾರಿ ಜಮೀನುಗಳನ್ನು ಸಂರಕ್ಷಿಸಲು ಹಾಗೂ ವಿಲೆ ಮಾಡಲು ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ 388 ಎಲ್‌ಜಿಬಿ 2008 ದಿನಾಂಕ:29–08–2008ರ ಆದೇಶದಲ್ಲಿ ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮವನ್ನು ಸ್ಥಾಪಿಸಲಾಗಿದೆ.

ಬಿ) ರಾಜ್ಯ, ಜಿಲ್ಲಾ, ಮತ್ತು ತಾಲ್ಲೂಕು ಮಟ್ಟದ ಪ್ರಾಧಿಕಾರವನ್ನು ಸರ್ಕಾರದ ಆದೇಶ ಸಂಖ್ಯೆ:ಕಂಇ 82 ಎಲ್‌ಜಿಕ್ಯೂ 99 (ಪಿ–1) ದಿನಾಂಕ:13–11–2008ರಲ್ಲಿ ನೇಮಿಸಲಾಗಿದೆ.

ಯಾವುದೇ ಕಾರಣಕ್ಕೂ ಸರ್ಕಾರಿ ಜಮೀನುಗಳ ಅತಿಕ್ರಮಣ ಒತ್ತುವರಿಗೆ ಅವಕಾಶ ನೀಡಲಾಗುವುದಿಲ್ಲ.

ಸರ್ಕಾರಿ ಜಮೀನುಗಳ ಒತ್ತುವರಿ/ ಅತಿಕ್ರಮಣ ಮಾಡುವವರ ಹಾಗೂ ಇದಕ್ಕೆ ಸಹಕರಿಸಿದ ಅಧಿಕಾರಿ/ನೌಕರರ ವಿರುದ್ಧ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 192ಎ ಮತ್ತು 192ಬಿ ರನ್ವಯ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಲಾಗುತ್ತಿದೆ.

**ಸರ್ಕಾರಿ ಡಾಕ್ಟರುಗಳಿಗೆ ಗ್ರಾಮೀಣ ಸೇವೆ ಕಡ್ಡಾಯ ಕುರಿತು**

**271; ಶ್ರೀಮತಿ ಅಲ್ಲಮ ಪ್ರಭುಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ಸರ್ಕಾರಿ ವೈದ್ಯರುಗಳಿಗೆ ಗ್ರಾಮೀಣ ಸೇವೆ ಕಡ್ಡಾಯವೆಂಬ ಕಾನೂನು ಜಾರಿಯಲ್ಲಿದೆಯೇ;

**ಆ)** ಈ ಕಾಯ್ದೆ ಪ್ರಕಾರ ಎಲ್ಲಾ ಸರ್ಕಾರಿ ವೈದ್ಯರು ಕಡ್ಡಾಯವಾಗಿ ಗ್ರಾಮೀಣ ಸೇವೆ ಮಾಡುತ್ತಿದ್ದಾರೆಯೇ;

**ಇ)** ಗ್ರಾಮೀಣ ಭಾಗದಲ್ಲಿ ಸೇವೆ ಸಲ್ಲಿಸುತ್ತಿರುವ ವೈದ್ಯರಲ್ಲಿ ಎಷ್ಟು ಜನ ಗ್ರಾಮೀಣ ಭಾಗದಲ್ಲಿಯೇ ವಾಸಿಸುತ್ತಿದ್ದಾರೆ;

**ಈ)** ಗ್ರಾಮೀಣ ಆಸ್ಪತ್ರೆಗಳಲ್ಲಿ ವಾಸ ಗೃಹಗಳ ಸೌಲಭ್ಯವಿದೆಯೇ; ಹಾಗಿಲ್ಲದಿದ್ದರೆ ನಿರ್ಮಿಸುವ ಯೋಜನೆ ಸರ್ಕಾರಕ್ಕಿದೆಯೇ;

**ಉ)** ಎಷ್ಟು ಗ್ರಾಮೀಣ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರು ಇರುವುದಿಲ್ಲ: ಯಾವ ಕಾಲಮಿತಿಯಲ್ಲಿ ವೈದ್ಯರನ್ನು ಭರ್ತಿ ಮಾಡಲಾಗುವುದು?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)**

**ಅ)** ಹೌದು

**ಆ)** ಇಲ್ಲ

ಸುಮಾರು 160 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು ಕಡ್ಡಾಯ ಗ್ರಾಮೀಣ ಸೇವೆಯನ್ನು ಸಲ್ಲಿಸಬೇಕಾಗಿದೆ.

ಇ) ಗ್ರಾಮೀಣ ಭಾಗದಲ್ಲಿ ಸೇವೆ ಸಲ್ಲಿಸುತ್ತಿರುವ ವೈದ್ಯರ ಪೈಕಿ ಎಷ್ಟು ವೈದ್ಯರು ಗ್ರಾಮೀಣ ಭಾಗದಲ್ಲಿಯೇ ವಾಸಿಸುತ್ತಿದ್ದಾರೆ ಎಂಬ ಬಗ್ಗೆ ನಿಖರವಾದ ಮಾಹಿತಿ ಇರುವುದಿಲ್ಲ.

ಈ) ಎಲ್ಲಾ ಗ್ರಾಮೀಣ ಆಸ್ಪತ್ರೆಗಳಲ್ಲಿ ವಾಸ ಗೃಹಗಳ ಸೌಲಭ್ಯವಿರುವುದಿಲ್ಲ. ಅನುದಾನ ಲಭ್ಯತೆ ಆಧಾರದ ಮೇಲೆ ಸ್ವಂತ ಕಟ್ಟಡಗಳು ಇಲ್ಲದೇ ಇರುವ ಆರೋಗ್ಯ ಕೇಂದ್ರಗಳು / ಆಸ್ಪತ್ರೆಗಳಿಗೆ ಕಟ್ಟಡ ಒದಗಿಸಲು ಮೊದಲ ಆದ್ಯತೆ ನೀಡಲಾಗುತ್ತಿದೆ.

ಉ) ರಾಜ್ಯಾದ್ಯಂತ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಒಟ್ಟು 361 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗಳು ಖಾಲಿಯಿದ್ದು, ಆ ಪೈಕಿ ಈಗಾಗಲೇ 332 ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಸರ್ಕಾರವು ಮಂಜೂರಾತಿಯನ್ನು ನೀಡಿದೆ.

**ಬರ ಪರಿಹಾರದ ಯೋಜನೆಗಳ ಬಗ್ಗೆ**

**354; ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ಮಂಡ್ಯ ಜಿಲ್ಲೆಯ ಎಲ್ಲಾ ವಿಧಾನಸಭಾ ಕ್ಷೇತ್ರಗಳಿಗೆ ಬರ ಪರಿಹಾರ ಯೋಜನೆಯಡಿಯಲ್ಲಿ ಸರ್ಕಾರದಿಂದ ಅನುದಾನ ಬಿಡುಗಡೆ ಮಾಡಲಾಗಿದೆಯೇ;

ಆ) ಹಾಗಿದ್ದಲ್ಲಿ ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ: (ವಿಧಾನಸಭಾ ಕ್ಷೇತ್ರಗಳವಾರು ವಿವರಗಳನ್ನು ನೀಡುವುದು)

ಇ) ಈ ಅನುದಾನವನ್ನು ಯಾವ ಉದ್ದೇಶಗಳಿಗಾಗಿ ವಿನಿಯೋಗಿಸಲಾಗಿದೆ? (ವಿಧಾನಸಭಾ ಕ್ಷೇತ್ರಗಳವಾರು ಪೂರ್ಣ ಮಾಹಿತಿ ನೀಡುವುದು)

**ಈ)** ಸರ್ಕಾರ ಬಿಡುಗಡೆ ಮಾಡಿರುವ ಅನುದಾನದಲ್ಲಿ ಇದುವರಿವಿಗೂ ಬರ ಪರಿಹಾರದ ಯಾವ ಯಾವ ಕಾಮಗಾರಿಗಳಿಗಾಗಿ ಹಣ ವಿನಿಯೋಜಿಸಲಾಗಿದೆ? ಕಾಮಗಾರಿವಾರು ವಿವರಗಳನ್ನು ನೀಡುವುದು.

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)**

**ಅ)** ಹೌದು.

**ಆ)** ಒಟ್ಟು 296.00 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿದ್ದು, ವಿಧಾನಸಭಾ ಕ್ಷೇತ್ರವಾರು ವಿವರ ಕೆಳಕಂಡಂತಿದೆ.

| ವಿಧಾನ ಸಭಾ ಕ್ಷೇತ್ರ | ಕಂದಾಯ ಇಲಾಖೆಯಿಂದ (ರೂ. ಲಕ್ಷಗಳಲ್ಲಿ) | ಗ್ರಾ ಅ ಮತ್ತು ಪಂ. ರಾಜ್ ಇಲಾಖೆಯಿಂದ | ಒಟ್ಟು |
|---|---|---|---|
| ಮಂಡ್ಯ | 30.00 | 30.00 | 60.00 |
| ಮದ್ದೂರು | 30.00 | 30.00 | 60.00 |
| ಮಳವಳ್ಳಿ | 30.00 | -- | 30.00 |
| ಮೇಲುಕೋಟೆ | 30.00 | -- | 30.00 |
| ಶ್ರೀರಂಗಪಟ್ಟಣ | 30.00 | -- | 30.00 |
| ಕೆ.ಆರ್.ಪೇಟೆ | 30.00 | 26.00 | 56.00 |
| ನಾಗಮಂಗಲ | 30.00 | -- | 30.00 |
| **ಒಟ್ಟು** | **210.00** | **86.00** | **296.00** |

ಇ) ಈ ಅನುದಾನವನ್ನು ಕುಡಿಯುವ ನೀರು ಕಾಮಗಾರಿಗಳಿಗೆ ವಿನಿಯೋಗಿಸಲು ಉದ್ದೇಶಿಸಲಾಗಿದೆ. ವಿಧಾನಸಭಾ ಕ್ಷೇತ್ರವಾರು ವಿವರ ಕೆಳಕಂಡಂತಿದೆ.

| ವಿಧಾನ ಸಭಾ ಕ್ಷೇತ್ರ | ಕಂದಾಯ ಇಲಾಖೆಯಿಂದ | | ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆಯಿಂದ | |
|---|---|---|---|---|
| | ಕಾಮಗಾರಿಗಳ ಸಂಖ್ಯೆ | ಅನುದಾನ (ರೂ. ಲಕ್ಷಗಳಲ್ಲಿ) | ಕಾಮಗಾರಿಗಳ ಸಂಖ್ಯೆ | ಅನುದಾನ (ರೂ. ಲಕ್ಷಗಳಲ್ಲಿ) |
| ಮಂಡ್ಯ | 15 | 30.00 | 40 | 30.00 |
| ಮದ್ದೂರು | 15 | 30.00 | 41 | 30.00 |
| ಮಳವಳ್ಳಿ | 15 | 30.00 | -- | -- |
| ಮೇಲುಕೋಟೆ | 15 | 30.00 | -- | -- |
| ಶ್ರೀರಂಗಪಟ್ಟಣ | 15 | 30.00 | -- | -- |
| ಕೆ.ಆರ್.ಪೇಟೆ | 33 | 30.00 | 26 | 26.00 |
| ನಾಗಮಂಗಲ | 15 | 30.00 | -- | -- |
| **ಒಟ್ಟು** | **123** | **210.00** | **107** | **86.00** |

ಈ) ಸರ್ಕಾರದಿಂದ ಬಿಡುಗಡೆ ಮಾಡಿರುವ ಅನುದಾನಕ್ಕೆ ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳು ಅನುಷ್ಠಾನ ಪ್ರಕ್ರಿಯೆಯಲ್ಲಿರುತ್ತದೆ.

## ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸ್ವಂತ ಕಟ್ಟಡ ಹಾಗೂ ವೈದ್ಯರು ಇಲ್ಲದಿರುವ ಬಗ್ಗೆ

## 286; ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಅ) ಮಂಡ್ಯ ಜಿಲ್ಲೆಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಆರೋಗ್ಯ ಘಟಕಗಳ ಸಂಖ್ಯೆ ಎಷ್ಟು;

ಆ) ಇವುಗಳಲ್ಲಿ ಸ್ವಂತ ಕಟ್ಟಡ ಹೊಂದಿರುವ ಹಾಗೂ ಕಟ್ಟಡ ಹೊಂದಿಲ್ಲದಿರುವ ಆರೋಗ್ಯ ಕೇಂದ್ರಗಳೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು)

ಇ) ಮಂಡ್ಯ ಜಿಲ್ಲೆಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರ ಗಳಲ್ಲಿ ಮತ್ತು ಘಟಕಗಳಲ್ಲಿ ಕೊರತೆಯಿರುವ ವೈದ್ಯರ/ಮಹಿಳಾ ವೈದ್ಯರ ಸಂಖ್ಯೆ ಎಷ್ಟು; (ಆರೋಗ್ಯ ಕೇಂದ್ರಗಳವಾರು ಮಾಹಿತಿ ನೀಡುವುದು)

ಈ) ವೈದ್ಯರ/ಮಹಿಳಾ ವೈದ್ಯರ ಕೊರತೆಯಿರುವ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಆರೋಗ್ಯ ಘಟಕಗಳಲ್ಲಿ ವೈದ್ಯರು/ಮಹಿಳಾ ವೈದ್ಯರನ್ನು ನೇಮಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಉ) ಮಂಡ್ಯ ಜಿಲ್ಲೆಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಘಟಕಗಳಲ್ಲಿ ಕರ್ತವ್ಯ ನಿರ್ವಹಿಸುವ ವೈದ್ಯರು ಮತ್ತು ಶುಶ್ರೂಷಕಿಯರಿಗೆ ವಸತಿ ಸೌಲಭ್ಯವಿದ್ದರೂ ಅದನ್ನು ಸದುಪಯೋಗಪಡಿಸಿ ಕೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಹಾಗಿದ್ದಲ್ಲಿ, ವಸತಿ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳದಿರುವವರ ಮೇಲೆ ಸರ್ಕಾರ ಯಾವ ರೀತಿಯ ಕ್ರಮ ಕೈಗೊಂಡಿದೆ? (ಪೂರ್ಣ ಮಾಹಿತಿ ನೀಡುವುದು)

**ಶ್ರೀ ಡಿ.ವಿ. ಸದಾನಂದ ಗೌಡ (ಮುಖ್ಯಮಂತ್ರಿಗಳು)**

ಅ) ಮಂಡ್ಯ ಜಿಲ್ಲೆಯಲ್ಲಿ 114 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇರುತ್ತವೆ. ಪ್ರಾಥಮಿಕ ಆರೋಗ್ಯ ಘಟಕಗಳು ಇರುವುದಿಲ್ಲ.

ಆ) 102 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸ್ವಂತ ಕಟ್ಟಡಗಳಿದ್ದು, 12 ಕೇಂದ್ರಗಳಿಗೆ ಸ್ವಂತ ಕಟ್ಟಡಗಳು ಇರುವುದಿಲ್ಲ. ಸ್ವಂತ ಕಟ್ಟಡಗಳು ಇಲ್ಲದೇ ಇರುವುಗಳ ಪೈಕಿ, 07 ಕೇಂದ್ರಗಳ ಕಟ್ಟಡ ಕಾಮಗಾರಿಗಳು ಪ್ರಗತಿಯಲ್ಲಿವೆ ಹಾಗು 02 ಕೇಂದ್ರಗಳಿಗೆ ಸಂಬಂಧಿಸಿದಂತೆ ಕಾಮಗಾರಿಯ ಅಂದಾಜು ಪಟ್ಟಿಗೆ ಅನುಮೋದನೆ ನೀಡಲಾಗಿದೆ. ಉಳಿದಂತೆ 03 ಕೇಂದ್ರಗಳಿಗೆ ಕಟ್ಟಡಗಳು ಇರುವುದಿಲ್ಲ.

ಇ) ಮಂಡ್ಯ ಜಿಲ್ಲೆಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 148 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳು ಮಂಜೂರಾಗಿದ್ದು, 135 ವೈದ್ಯರು ಕಾರ್ಯನಿರ್ವಹಿಸುತ್ತಿದ್ದಾರೆ ಹಾಗು 13 ಹುದ್ದೆಗಳು ಖಾಲಿ ಇವೆ.

ಇಲಾಖೆಯ ವೃಂದ ಮತ್ತು ನೇಮಕಾತಿಯ ನಿಯಮಗಳ ಪ್ರಕಾರ, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ವೃಂದ ಅಸ್ತಿತ್ವದಲ್ಲಿದೆ. ಸದರಿ ಹುದ್ದೆಗಳನ್ನು ಭರ್ತಿ ಮಾಡುವಾಗ ಮಹಿಳಾ ವೈದ್ಯಾಧಿಕಾರಿ ಹುದ್ದೆಯೆಂದು ಸ್ಪಷ್ಟವಾಗಿ ತುಂಬಲು ಅವಕಾಶ ಕಲ್ಪಿಸಿರುವುದಿಲ್ಲ.

ಈ ಕೆಳಕಂಡ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗಳು ಖಾಲಿಯಿವೆ:–

1) ಮುಳ್ಳಳ್ಳಿ 2) ನವಿಲೆ 3) ಹಿರಿಕಳಲೆ 4) ಸಿಂದು ಘಟ್ಟ 5) ಸಾಸಲು 6) ಆಘಾಲಯ 7) ಹೊನ್ನಾವರ 8) ಗೊಂಡೇನ ಹಳ್ಳಿ 9) ಹೊಳಲು 10) ಮಂಗಳ 11) ಕಿರುಗಾವಲು 12) ಬೆಳಕೊಳ 13) ಕೆ.ಆರ್. ಸಾಗರ

ಈ) ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಖಾಲಿ ಹುದ್ದೆಗಳನ್ನು ನಿಯಮಾನುಸಾರ ಕಾಲಕಾಲಕ್ಕೆ ಭರ್ತಿ ಮಾಡಲಾಗುತ್ತಿದೆ. ಆದಾಗ್ಯೂ ನೇಮಕಾತಿ ಆದೇಶ ನೀಡಿದ ಕೆಲವು ವೈದ್ಯರು ಕಾರ್ಯವರದಿ ಮಾಡಿಕೊಳ್ಳಲು ಮುಂದೆ ಬರುತ್ತಿಲ್ಲವಾದ್ದರಿಂದ ಎಲ್ಲಾ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸಾಧ್ಯವಾಗಿಲ್ಲ. ಮುಂದುವರೆದು, ದಿನಾಂಕ: 07–01–2012 ರಂದು ಮಂಡ್ಯ ಜಿಲ್ಲೆಯಲ್ಲಿ 8 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಲು ಸರ್ಕಾರವು ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಿದೆ.

ಉ) ಬಂದಿದೆ

ಊ) ವಸತಿ ಗೃಹಗಳಲ್ಲಿ ಕಡ್ಡಾಯವಾಗಿ ವಾಸವಿರಲು ವೈದ್ಯಾಧಿಕಾರಿಗಳಿಗೆ/ ಶುಶೂಷಕರಿಗೆ ಕಟ್ಟು ನಿಟ್ಟಾಗಿ ಸೂಚನೆ ನೀಡಲಾಗಿದೆ.

**ಕೊಕ್ಕರೆಬೆಳ್ಳೂರು ಪಕ್ಷಿಧಾಮವನ್ನು ಅಭಿವೃದ್ಧಿಪಡಿಸುವ ಬಗ್ಗೆ**

**274; ಶ್ರೀ ಬಿ ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನಲ್ಲಿರುವ ಕೊಕ್ಕರೆ ಬೆಳ್ಳೂರು ಪಕ್ಷಿಧಾಮವು ಜಿಲ್ಲೆಗೆ ಹೆಸರುವಾಸಿಯಾದ ಪಕ್ಷಿಧಾಮವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

**ಆ)** ಹಾಗಿದ್ದಲ್ಲಿ, ಸದರಿ ಪಕ್ಷಿಧಾಮದ ಹದಗೆಟ್ಟ ರಸ್ತೆಗಳಿಂದಾಗಿ ಇಲ್ಲಿಗ್ಾಗಮಿಸುವ ಪ್ರವಾಸಿಗರಿಗೆ ತೊಂದರೆಯಾಗಿರುವುದರಿಂದ ರಸ್ತೆ ಹಾಗೂ ಪಕ್ಷಿಧಾಮದ ಅಭಿವೃದ್ಧಿಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

**ಇ)** ಇದರ ಅಭಿವೃದ್ಧಿಗಾಗಿ ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗುವುದು? (ಮಾಹಿತಿ ನೀಡುವುದು)

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)**

**ಅ)** ಹೌದು

**ಆ)** ಬೆಂಗಳೂರು–ಮೈಸೂರು ಹೆದ್ದಾರಿಯಿಂದ ಕೊಕ್ಕರೆ ಬೆಳ್ಳೂರಿಗೆ ಹೋಗುವ 9.15 ಕಿ.ಮೀ. ಉದ್ದದ ರಸ್ತೆಯನ್ನು (ಕಿ.ಮೀ. 0.00 ಯಿಂದ 8.10 ಕಿ.ಮೀ. ವರೆಗೆ) ರೂ. 328.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ನಬಾರ್ಡ್ ಧನಸಹಾಯದಡಿ ಅಭಿವೃದ್ಧಿಪಡಿಸಲಾಗಿದೆ. ಮುಂದುವರಿದು ಇದೇ ರಸ್ತೆಯನ್ನು ಕಿ.ಮೀ. 8.10 ರಿಂದ ಕಿ.ಮೀ. 13.00 ರವರೆಗೆ ರೂ.440.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ವಿಶೇಷಾಭಿವೃದ್ಧಿ ಯೋಜನೆ ಅಡಿಯಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಈ ಸಂಬಂಧ ಮೊದಲ ಕಂತಾಗಿ ರೂ.69.59 ಲಕ್ಷಗಳನ್ನು ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಮಂಡ್ಯ ರವರಿಗೆ 2011–12ನೇ ಸಾಲಿನಲ್ಲಿ ದಿನಾಂಕ: 25/8/2011 ರಂದು ಬಿಡುಗಡೆ ಮಾಡಲಾಗಿದೆ. ಕಾಮಗಾರಿ ಪ್ರಗತಿಯಲ್ಲಿದೆ. ಉಳಿದ ಹಣವನ್ನು

ಬಿಡುಗಡೆ ಮಾಡಲು ಕ್ರಮವಹಿಸಲಾಗುವುದು. ಸದರಿ ಪಕ್ಷಿಧಾಮದ ಬಳಿ ರೂ.88.05 ಲಕ್ಷಗಳ ಅಂದಾಜು ವೆಚ್ಚದಲ್ಲಿ ಇಂಟರ್ ಪ್ರಿಟೇಷನ್ ಸೆಂಟರ್, ಗಿಡಗಳನ್ನು ಬೆಳೆಸುವುದು, ಕುಡಿಯುವ ನೀರಿನ ಸೌಲಭ್ಯ, ಸ್ವಾಗತ ಕಛೇರಿ ಹಾಗೂ ಕಾಂಪೌಂಡ್ ಗೋಡೆಯನ್ನು ನಿರ್ಮಿಸಿ ಪೂರ್ಣಗೊಳಿಸಲಾಗಿದೆ.

ಇ) ಪ್ರಸ್ತುತ ನಿರ್ಮಿಸಿರುವ ಇಂಟರ್ ಪ್ರಿಟೇಷನ್ ಸೆಂಟರ್ ಬಳಿ ಪ್ರವಾಸಿಗರಿಗೆ ಪಕ್ಷಿಗಳ ವಿವರಗಳನ್ನು ಒಳಗೊಂಡ ಪ್ಯಾನಲ್‌ಗಳನ್ನು, ಪಕ್ಷಿಗಳ 3ಡಿ ಮಾಡಲ್‌ಗಳನ್ನು, ಸ್ವಾಗತಕೇಂದ್ರದ ಸಜ್ಜುಗೊಳಿಸುವಿಕೆ, ಆಂಪಿ ಥಿಯೇಟರ್ ಸುತ್ತ ಫೋಕಸ್ ಲೈಟುಗಳ ಅಳವಡಿಕೆ ಮುಂತಾದ ಕಾಮಗಾರಿಗಳನ್ನು ರೂ. 19.76 ಲಕ್ಷಗಳ ಅಂದಾಜು ವೆಚ್ಚದಲ್ಲಿ 2012–13ನೇ ಸಾಲಿನಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

**ಅಕ್ರಮ ಗಣಿಗಾರಿಕೆಯ ಕೆ. ಜೈರಾಜ್ ನೇತೃತ್ವದ ಸಮಿತಿ ಕುರಿತು**

**298; ಶ್ರೀ ಕೆ.ಸಿ. ಕೊಂಡಯ್ಯ (ವಿಧಾನಸಭೆಯಿಂದ ಚುನಾಯಿತರಾದವರು)**

ಅ) ಅಕ್ರಮ ಗಣಿಗಾರಿಕೆಯ ಕುರಿತು ಲೋಕಾಯುಕ್ತರು ಸಲ್ಲಿಸಿರುವ ವರದಿಯ ಮೇಲೆ ಪರಾಮರ್ಶಿಸಲು ಸರಕಾರ ನೇಮಿಸಿದ್ದ ಕೆ.ಜೈರಾಜ್ ನೇತೃತ್ವದ ಸಮಿತಿ ಸರ್ಕಾರಕ್ಕೆ ವರದಿ ಸಲ್ಲಿಸಿದೆಯೇ; ವರದಿ ಮಾಡಿರುವ ಶಿಫಾರಸ್ಸುಗಳಾವುವು; (ವರದಿಯ ಪ್ರತಿಯೊಂದಿಗೆ ವಿವರ ಒದಗಿಸುವುದು)

ಆ) ಸದರಿ ವರದಿಯ ಬಗ್ಗೆ ಸರಕಾರ ತೆಗೆದುಕೊಂಡಿರುವ ಕ್ರಮಗಳೇನು; (ವಿವರ ಒದಗಿಸುವುದು)

ಇ) ಅಕ್ರಮ ಗಣಿಗಾರಿಕೆಯನ್ನು ತಡೆಯಲು ಹಾಗೂ ಗಣಿಗಾರಿಕೆಯಲ್ಲಿ ಪಾರದರ್ಶಕತೆ ಕಾಪಾಡಲು ಸರಕಾರ ತೆಗೆದುಕೊಂಡಿರುವ ಕ್ರಮಗಳೇನು?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಯವರು)**

**ಅ)** ಮಾನ್ಯ ಲೋಕಾಯುಕ್ತರು ದಿನಾಂಕ:27.07.2011ರಂದು ತಮ್ಮ ತನಿಖೆಯ ಭಾಗ–2ರ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಮಾನ್ಯ ಲೋಕಾಯುಕ್ತರ ವರದಿಯಲ್ಲಿನ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ತೆಗೆದುಕೊಳ್ಳಬಹುದಾದ: ಬೇಕಾದ ಕ್ರಮಗಳ ಬಗ್ಗೆ ವರದಿಯನ್ನು ನೀಡಲು, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗಿದ್ದಿತು. ಉನ್ನತ ಮಟ್ಟದ ಸಮಿತಿಯು ವಿವಿಧ ಸಂಬಂಧಪಟ್ಟ ಇಲಾಖೆಗಳ ಮುಖ್ಯಸ್ಥರುಗಳೊಂದಿಗೆ ಸಮಾಲೋಚಿಸಿ: ಚರ್ಚಿಸಿ, ತನ್ನ ಅಂತಿಮ ವರದಿಯನ್ನು ದಿನಾಂಕ:24.10.2011 ರಂದು ಕೆಲವೊಂದು ನಿರ್ದಿಷ್ಠ ಶಿಫಾರಸ್ಸು: ಸಲಹೆಗಳೊಂದಿಗೆ ಸರ್ಕಾರಕ್ಕೆ ಸಲ್ಲಿಸಿರುತ್ತದೆ. ಸದರಿ ವರದಿಯನ್ನು ಸರ್ಕಾರವು ಅಂಗೀಕರಿಸಿರುತ್ತದೆ.

ಉನ್ನತ ಮಟ್ಟದ ಸಮಿತಿಯು ಈ ಕೆಳಕಂಡ ಶಿಫಾರಸ್ಸುಗಳನ್ನು ಮಾಡಿರುತ್ತದೆ:

(i) ವಿಶೇಷ ತನಿಖಾದಳವನ್ನು (SIT) ರಚಿಸುವುದು ಅಥವಾ ತನಿಖೆಯನ್ನು ಮುಂದುವರೆಸಲು ಸೂಕ್ತ ಏಜೆನ್ಸಿಯನ್ನು ಪದನಾಮೀಕರಿಸುವುದು, ವಿಶೇಷ ತನಿಖಾ ದಳದ ಮುಖ್ಯಸ್ಥರು ಐ.ಜಿ.ಪಿ. ಮಟ್ಟದ ಪೊಲೀಸ್ ಅಧಿಕಾರಿ ಆಗಿರಬೇಕಿದ್ದು, ಇದರಲ್ಲಿ ಸಂಬಂಧಪಟ್ಟ ಇಲಾಖೆಗಳ ಪರಿಣಿತರಿರಬೇಕು;

(ii) ಗಣಿ ಮತ್ತು ಭೂವಿಜ್ಞಾನ ಇಲಾಖೆ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಒಳಗೊಂಡಂತೆ ಪ್ರಮುಖ ಇಲಾಖೆಗಳನ್ನು ಕ್ಷೇತ್ರ ಮಟ್ಟದಲ್ಲಿ ಬಲಪಡಿಸುವುದು;

(iii) ಜಿಲ್ಲಾ ಮಟ್ಟದಲ್ಲಿ ವಿವಿಧ ಇಲಾಖೆಗಳ ಸಹಯೋಗಕ್ಕಾಗಿ ಗಣಕೀಕರಣಗೊಳಿಸುವುದು ಹಾಗೂ ಕಂದಾಯ, ಗಣಿ ಮತ್ತು ಭೂವಿಜ್ಞಾನ, ಅರಣ್ಯ ಮತ್ತು ವಾಣಿಜ್ಯ ತೆರಿಗೆ ಇಲಾಖೆಗಳಿಗೆ

ಇ–ಆಡಳಿತ ಪದ್ಧತಿ/ ತಂತ್ರಾಂಶವನ್ನು ರೂಪಿಸಿ/ಅಳವಡಿಸಿ ಜಾರಿಗೊಳಿಸಲು ರಾಜ್ಯ ಮಟ್ಟದಲ್ಲಿ ಇ–ಆಡಳಿತದಲ್ಲಿ ಕಾರ್ಯದರ್ಶಿಯವರ ನೇತೃತ್ವದಲ್ಲಿ ರಾಜ್ಯಮಟ್ಟದ ಟಾಸ್ಕ್‌ಫೋರ್ಸ್‌ನ್ನು ರಚಿಸುವುದು;

(iv) ಹೇರಳವಾಗಿ ಖನಿಜ ಸಂಪತ್ತನ್ನು ಹೊಂದಿರುವ ಜಿಲ್ಲೆಗಳಲ್ಲಿ ಗಣಿಗುತ್ತಿಗೆಗಳ ಉಸ್ತುವಾರಿಗಾಗಿ ಜಿಲ್ಲಾಧಿಕಾರಿ ಮಟ್ಟದಲ್ಲಿ/ನೇತೃತ್ವದಲ್ಲಿ ಏಕಗವಾಕ್ಷಿ ವ್ಯವಸ್ಥೆ ರಚಿಸುವುದು;

(V) ರಾಜ್ಯ ಸರ್ಕಾರಕ್ಕೆ ಆಗಿರುವ ನಷ್ಟವನ್ನು ತಪ್ಪಿಸಲು, ಮಾನ್ಯ ಲೋಕಾಯುಕ್ತ ವರದಿಯಲ್ಲಿ ತಪ್ಪಿತಸ್ಥರೆಂದು ಹೆಸರಿಸಲಾಗಿರುವವರ ವಿರುದ್ಧ ಸಿವಿಲ್ ನ್ಯಾಯಾಲಯಗಳಲ್ಲಿ ಮೊಕದ್ದಮೆಗಳನ್ನು ಹೂಡುವುದು;

(Vi) ಗಣಿ ಮತ್ತು ಭೂವಿಜ್ಞಾನ ಇಲಾಖೆ, ಅರಣ್ಯ, ಸಾರಿಗೆ, ಗೃಹ, ಕಂದಾಯ, ವಾಣಿಜ್ಯ ತೆರಿಗೆಗಳ ಇಲಾಖೆ, ಪರಿಸರ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇಲಾಖೆಗಳಲ್ಲಿ 2008 ಮತ್ತು 2011ರ ಅವಧಿಯಲ್ಲಿ ಕೆಳಹಂತದಲ್ಲಿ ಕಾರ್ಯನಿರ್ವಹಿಸಿದ ಅಧಿಕಾರಿಗಳು ಈಗಲೂ ಅದೇ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಲ್ಲಿ, ಅಂತಹವರನ್ನು ತಕ್ಷಣವೇ ಬೇರೆಡೆಗೆ ವರ್ಗಾಯಿಸುವುದು;

(Vii) ವಿವಿಧ ಇಲಾಖೆಗಳು ಉದ್ದೇಶಿಸಿರುವ ಉತ್ತಮ ಆಡಳಿತ ಕ್ರಮಗಳನ್ನು ಜಾರಿಗೊಳಿಸಲು ಹೆಚ್ಚುವರಿ ಆರ್ಥಿಕ ಸಹಾಯವನ್ನು ಆ ಇಲಾಖೆಗಳಿಗೆ ಒದಗಿಸುವುದು, ಸೂಕ್ತವಿದ್ದಲ್ಲಿ, 2012–13ನೇ ಆರ್ಥಿಕ ವರ್ಷದ ಆಯವ್ಯಯದಲ್ಲಿ ಒಟ್ಟು ಅನುದಾನವನ್ನು ಒದಗಿಸುವುದು.

(Viii) ವಿವಿಧ ಇಲಾಖೆಗಳು ಕೈಗೊಂಡ ಕ್ರಮಗಳು/ ಕೈಗೊಳ್ಳಲು ಬಾಕಿ ಇರುವ ಕ್ರಮಗಳನ್ನು ಪರಾಮರ್ಶಿಸಲು ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿಸಿರುವ ರಾಜ್ಯ ಮಟ್ಟದ ಕೋ–ಆರ್ಡಿನೇಷನ್–ಕಂ–ಎಂಪವರ್ಡ್ ಕಮಿಟಿಗೆ ವಹಿಸುವುದು.

ಉನ್ನತಮಟ್ಟದ ಸಮಿತಿಯು ನೀಡಿರುವ ವರದಿಯ ಪ್ರತಿಯನ್ನು ಮಾನ್ಯ ಸದಸ್ಯರಿಗೆ ಒದಗಿಸಿದೆ.

ಆ)

1. ಮಾನ್ಯ ಲೋಕಾಯುಕ್ತರವರು ತಮ್ಮ ವರದಿಯಲ್ಲಿ ವಿವಿಧ ಅಕ್ರಮಗಳಿಗೆ ಹೊಣೆಗಾರರೆಂದು ಹೆಸರಿಸಲ್ಪಟ್ಟ ಜನಪ್ರತಿ ನಿಧಿಗಳ/ಅಧಿಕಾರೇತರರಿಗೆ ಸಂಬಂಧಿಸಿದಂತೆ ನಾಲ್ಕು ಅಂಶಗಳಿಗೆ ದಿನಾಂಕ:19.10.2011ರ ಪತ್ರದಲ್ಲಿ ಸ್ಪಷ್ಟೀಕರಣವನ್ನು ಮಾನ್ಯ ಲೋಕಾಯುಕ್ತರವರನ್ನು ಕೋರಲಾಗಿದೆ.

2. ಅಖಿಲ ಭಾರತ ಸೇವೆಗೆ ಸೇರಿದ ಅಧಿಕಾರಿಗಳಿಗೆ ಸಂಬಂಧಿಸಿದಂತೆ, ಶ್ರೀ ಎಸ್. ಮುತ್ತಯ್ಯ, ಐ.ಎಫ್.ಎಸ್. ಅಧಿಕಾರಿ, ಇವರನ್ನು ದಿನಾಂಕ 20.10.2011ರಂದು ಅಮಾನತ್ತುಗೊಳಿಸಲಾಗಿದೆ. ಹಾಗೂ ಐ.ಎಫ್.ಎಸ್. ಸೇವೆಗೆ ಸೇರಿದ ಮೂರು ಅಧಿಕಾರಿಗಳಿಗೆ ಹಾಗೂ ಐ.ಎ.ಎಸ್. ಸೇವೆಗೆ ಸೇರಿದ ಮೂರು ಅಧಿಕಾರಿಗಳಿಗೆ ಕಾರಣ ಕೇಳುವ ನೋಟೀಸನ್ನು ಜಾರಿಮಾಡಲಾಗಿದೆ.

3. ಲೋಕಾಯುಕ್ತರ ವರದಿಯಲ್ಲಿ ಹಲವು ಅಕ್ರಮಗಳ ಕುರಿತು ಹೊಣೆಗಾರರೆಂದು ಹೆಸರಿಸಲ್ಪಟ್ಟಿರುವ ರಾಜ್ಯ ಸರ್ಕಾರದ ಸೇವೆಗೆ ಸೇರಿದ ಅಧಿಕಾರಿ: ನೌಕರರ ಪೈಕಿ, 40 ಅಧಿಕಾರಿ: ನೌಕರರನ್ನು ಅಮಾನತ್ತುಗೊಳಿಸಲಾಗಿದೆ. ವಿವಿಧ ಇಲಾಖೆಗಳ ಒಟ್ಟು 257 ಅಧಿಕಾರಿ : ನೌಕರರಿಗೆ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಲಾಗಿದೆ ಮತ್ತು ಲೋಕಾಯುಕ್ತರ ವರದಿಯಲ್ಲಿ ಶಿಫಾರಸ್ಸು ಮಾಡಿದಂತೆ ಗಣಿ ಅಕ್ರಮದ ಅವಧಿಯಲ್ಲಿ ಬಳ್ಳಾರಿಯಲ್ಲಿ ಕೆಲಸ

ನಿರ್ವಹಿಸುತ್ತಿದ್ದ ವಿವಿಧ ಇಲಾಖೆಗಳ ಒಟ್ಟು 66 ಅಧಿಕಾರಿ : ನೌಕರರನ್ನು ಆ ಜಿಲ್ಲೆಯಿಂದ ಬೇರೆಡೆಗೆ ವರ್ಗಾವಣೆ ಮಾಡಲಾಗಿದೆ. ಅಧಿಕಾರಿಗಳು: ನೌಕರರು ನೀಡಿರುವ ಉತ್ತರ: ಹೇಳಿಕೆಗಳು ಸರ್ಕಾರದ ಪರಿಶೀಲನೆಯಲ್ಲಿದ್ದು, ಶಿಸ್ತುಕ್ರಮ ತೆಗೆದುಕೊಳ್ಳುವ ಬಗ್ಗೆ ಮುಂದಿನ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

4. ಮಾನ್ಯ ಲೋಕಾಯುಕ್ತರವರ ತನಿಖಾ ವರದಿಯಲ್ಲಿ ಮುಂದುವರೆದ ವಿಚಾರಣೆಯ ಅವಶ್ಯಕತೆ ಇರುತ್ತದೆ ಎಂದು ಶಿಫಾರಸ್ಸು ಮಾಡಿರುವ ಪ್ರಕರಣಗಳಲ್ಲಿ, ಮುಂದುವರೆದ ತನಿಖೆಯನ್ನು ನಡೆಸಲು ದಿನಾಂಕ: 09.01.2012ರ ಸರ್ಕಾರೀ ಆದೇಶದಲ್ಲಿ ವಿಶೇಷ ತನಿಖಾ ದಳವನ್ನು ಅಪರ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರ ನೇತೃತ್ವದಲ್ಲಿ ರಚಿಸಲಾಗಿರುತ್ತದೆ.

5. ಗಣಿಗುತ್ತಿಗೆಗಳ ಉಸ್ತುವಾರಿಗಾಗಿ ಜಿಲ್ಲಾಧಿಕಾರಿ ಮಟ್ಟದಲ್ಲಿ: ನೇತೃತ್ವದಲ್ಲಿ ಏಕಗವಾಕ್ಷಿ ವ್ಯವಸ್ಥೆ (Single Window Agency) ಯನ್ನು ದಿನಾಂಕ:21.01.2012 ರ ಸರ್ಕಾರೀ ಆದೇಶದಲ್ಲಿ ರಚಿಸಲಾಗಿರುತ್ತದೆ.

6. ಸರ್ಕಾರಕ್ಕೆ ಆಗಿರುವ ನಷ್ಟವನ್ನು ವಸೂಲಿ ಮಾಡುವ ನಿಟ್ಟಿನಲ್ಲಿ, ಸಂಬಂಧಪಟ್ಟ ಸಂಸ್ಥೆ/ವ್ಯಕ್ತಿಗಳ ವಿರುದ್ಧ ಸಿವಿಲ್ ದಾವೆಗಳನ್ನು ಹೂಡಲು ಕ್ರಮ ವಹಿಸಲಾಗುತ್ತಿದೆ.

7. ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿಸಿರುವ Co-ordination-cum-Empowered Committee ಸಭೆಯನ್ನು ನಿಗದಿತ ಅವಧಿಗಳಲ್ಲಿ ಏರ್ಪಡಿಸಿ ಅನಧಿಕೃತ ಗಣಿಗಾರಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಚರ್ಚಿಸಿ ಅಗತ್ಯ ಕ್ರಮಕೈಗೊಳ್ಳಲಾಗುತ್ತಿದೆ.

8. ಪ್ರಸ್ತುತ ಗುರುತಿಸಲಾಗದೇ ಇರುವಂತಹ ಅಧಿಕಾರಿ:ನೌಕರರನ್ನು ಗುರುತಿಸುವಂತಹ ಕಾರ್ಯವನ್ನು ವಿಶೇಷ ತನಿಖಾ ತಂಡಕ್ಕೆ ವಹಿಸಬಹುದಾಗಿದ್ದು, ತದನಂತರ ಗುರುತಿಸಿದಲ್ಲಿ, ನಿಯಮಾನುಸಾರ ಕ್ರಮ ಜರುಗಿಸಲಾಗುವುದು.

9. ಲೋಕಾಯುಕ್ತರ ವರದಿಯಲ್ಲಿನ ಶಿಫಾರಸ್ಸುಗಳ ಮೇಲೆ ಕೇಂದ್ರ ಸರ್ಕಾರದ ವಿವಿಧ ಮಂತ್ರಾಲಯಗಳಿಗೆ ಸಂಬಂಧಿಸಿದ ವಿಷಯಗಳಿಗೆ ಕುರಿತಂತೆ ಸಂಬಂಧಪಟ್ಟ ಮಂತ್ರಾಲಯಗಳಿಗೆ ದಿನಾಂಕ:15.10.2011ರ ಪತ್ರದಲ್ಲಿ ಅಗತ್ಯ ಕ್ರಮವನ್ನು ಕೈಗೊಳ್ಳುವಂತೆ ಕೋರಲಾಗಿರುತ್ತದೆ.

10. ನಿಯಮಗಳನ್ನು ಉಲ್ಲಂಘಿಸಿರುವ 24 ಗಣಿ ಗುತ್ತಿಗೆಗಳನ್ನು ರದ್ದುಪಡಿಸುವ ಕುರಿತು ಕ್ರಮ ವಹಿಸಲಾಗುತ್ತಿದೆ.

11. ಬೇಲಿಕೇರಿ ಬಂದರಿನಿಂದ ಅದಿರನ್ನು ರಫ್ತು ಮಾಡುತ್ತಿದ್ದ ಸಂಸ್ಥೆಗಳ ಗುತ್ತಿಗೆಗಳನ್ನು ಹಾಗೂ 2 ಸಂಸ್ಥೆಯ Stevedore ಲೈಸೆನ್ಸ್‌ನ್ನು ರದ್ದುಪಡಿಸಲಾಗಿದೆ.

12. ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ರಾಮ್‌ಗಡ್ ಗ್ರಾಮದ 265–00 ಎಕರೆ ಪ್ರದೇಶವನ್ನು ಅರಣ್ಯೇತರ ಪ್ರದೇಶವೆಂದು ಘೋಷಿಸಿ, Forest Settlement Officer ಇವರು ಹೊರಡಿಸಿದ್ದ ಆದೇಶವನ್ನು ರದ್ದುಪಡಿಸಲಾಗಿದೆ ಹಾಗೂ, ಜಿಲ್ಲಾಧಿಕಾರಿ, ಬಳ್ಳಾರಿ ಇವರನ್ನು Forest Settlement Officer ಎಂದು ಉಪ ಆಯುಕ್ತರ ಬದಲಿಗೆ ನೇಮಿಸಲಾಗಿದೆ. ಈ ಗ್ರಾಮದಲ್ಲಿ ಅನಧಿಕೃತವಾಗಿ ಸರ್ವೇ ನಂ. 5–35 ಗಳನ್ನು ಸೃಷ್ಟಿಸಿರುವ ಕುರಿತು ತನಿಖೆಯನ್ನು ನಡೆಸಲು ಜಿಲ್ಲಾಧಿಕಾರಿ, ಬಳ್ಳಾರಿ ಇವರಿಗೆ ಸೂಚಿಸಲಾಗಿದೆ.

13. ತೋರಣಗಲ್ಲಿನಲ್ಲಿ ಇರುವ ಮೆ: ಜೆ.ಎಸ್.ಡಬ್ಲ್ಯೂ ಸ್ಟೀಲ್ ಕಾರ್ಖಾನೆಗೆ ಅನಧಿಕೃತವಾಗಿ ಅದಿರು ಸಾಗಾಣಿಕೆ ಮಾಡಿರುವ ಸಾಗಾಣಿಕೆದಾರರ ವಿರುದ್ಧ ಕಾನೂನಿನ ಪ್ರಕಾರ ಕ್ರಮ ಜರುಗಿಸಲು

ಮಾಹಿತಿಯನ್ನು ಸಂಗ್ರಹಿಸಲು ಮತ್ತು ತನಿಖೆಯನ್ನು ನಡೆಸಲು ಉಪ ಸಾರಿಗೆ ಆಯುಕ್ತರು, ಗುಲ್ಬರ್ಗಾ ಇವರ ನೇತೃತ್ವದಲ್ಲಿ ಸಾರಿಗೆ ಇಲಾಖೆ ತಂಡವನ್ನು ರಚಿಸಿದೆ. ಹಾಗೆಯೇ 1.4.2009ರಿಂದ 31.7.2010 ರವರೆವಿಗೂ ಬಳ್ಳಾರಿ ಜಿಲ್ಲೆಯಿಂದ ಬೇಲಿಕೆರೆಗೆ ಅದಿರು ಸಾಗಾಣಿಕೆ ಮಾಡಿರುವುದರಲ್ಲಿ ತೊಡಗಿದ್ದ ಲಾರಿ ಮಾಲೀಕರ ಮತ್ತು ಮತ್ತಿತರೆ ವಿವರಗಳನ್ನು ಸಂಗ್ರಹಿಸಲು ಉಪ ಸಾರಿಗೆ ಆಯುಕ್ತರು, ಶಿವಮೊಗ್ಗ ಇವರ ನೇತೃತ್ವದಲ್ಲಿ ತಂಡವನ್ನು ರಚಿಸಲಾಗಿದೆ.

14. ಅದಿರಿನ ವಹಿವಾಟುಗಳಲ್ಲಿ ತೊಡಗಿರುವ ವ್ಯಾಪಾರಿಗಳ ಬ್ಯಾಂಕ್ ಖಾತೆ ಮತ್ತಿತರೆ ದಾಖಲಾತಿಗಳನ್ನು ಪರಿಶೀಲಿಸಲು ಮತ್ತು ಹೆಚ್ಚುವರಿ ಮಾಹಿತಿಯನ್ನು ಸಂಗ್ರಹಿಸಲು ವಾಣಿಜ್ಯ ತೆರಿಗೆ ಇಲಾಖೆಯಲ್ಲಿ 12 ತಂಡಗಳನ್ನು ರಚಿಸಲಾಗಿದೆ.

ಇ)

1. ಅಕ್ರಮ ಗಣಿಗಾರಿಕೆಯನ್ನು ತಡೆಗಟ್ಟಲು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸಂಬಂಧಪಟ್ಟ ವಿವಿಧ ಇಲಾಖೆಗಳನ್ನೊಳಗೊಂಡಂತೆ ಟಾಸ್ಕ್ ಫೋರ್ಸ್ ಸಮಿತಿಯನ್ನು ಜಿಲ್ಲಾ ಮಟ್ಟದಲ್ಲಿ ರಚಿಸಲಾಗಿರುತ್ತದೆ. ಈ ಸಮಿತಿಯು ಆಗಿಂದ್ದಾಗೆ ಸಭೆಗಳನ್ನು ನಡೆಸಿ ಅಕ್ರಮ ಗಣಿಗಾರಿಕೆಯನ್ನು ತಡೆಗಟ್ಟಲು ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿದೆ.
2. ಪ್ರಮುಖ ಸ್ಥಳಗಳಲ್ಲಿ 13 composite check-post ಗಳನ್ನು ರಚಿಸಲಾಗಿರುತ್ತದೆ.
3. ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಸಂಬಂಧಪಟ್ಟ ಪ್ರಮುಖ ಇಲಾಖೆಗಳ ಮುಖ್ಯಸ್ಥರುಗಳನ್ನೊಳಗೊಂಡಂತೆ ವಿಶೇಷ ಕೋಶವನ್ನು ರಚಿಸಲಾಗಿದ್ದು ಈ ಕೋಶವು ಅಕ್ರಮ ಗಣಿಗಾರಿಕೆಯನ್ನು ತಡೆಗಟ್ಟಲು ತೆಗೆದುಕೊಳ್ಳಬಹುದಾದಂತಹ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ.

4. MM(D&R) ಕಾಯ್ದೆ 1957 ರ ಕಲಂ 23 (ಸಿ)ರ ಪ್ರಕಾರ The Karnataka (Prevention of illegal mining transportation and storage of mineral) Rules 2011 ರನ್ನು ದಿನಾಂಕ 1/4/2011 ರಂದು ಜಾರಿಗೆ ತಂದಿದ್ದು, ಈ ನಿಯಮಾವಳಿಗಳ ಪ್ರಕಾರ ಅನಧಿಕೃತ ಗಣಿಗಾರಿಕೆ/ ಸಾಗಾಣಿಕೆಯನ್ನು ತಡೆಗಟ್ಟಲು ಅವಶ್ಯಕವಾದ ನಿಯಮಗಳನ್ನು/ಆಸ್ಪದಗಳನ್ನು ಅಳವಡಿಸಿಕೊಳ್ಳಲಾಗಿದೆ. (ಉದಾಹರಣೆಗೆ: ಖನಿಜಗಳನ್ನು ಸಾಗಿಸಲು ಪರವಾನಿಗೆಗಳನ್ನು Distance ಆಧರಿಸಿ ನೀಡುವುದು, ಸ್ಟಾಕ್ ಯಾರ್ಡ್‌ಗಳನ್ನು ಗಣಿಗುತ್ತಿಗೆದಾರರುಗಳಿಗೆ ಮಾತ್ರ ಸೀಮಿತಗೊಳಿಸುವುದು ಹಾಗೂ ಕಠಿಣವಾದ ದಂಡ ಪ್ರಕ್ರಿಯೆ) ಈ ನಿಯಮಾವಳಿಗಳು ಅನಧಿಕೃತ ಗಣಿಗಾರಿಕೆಯನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ಸಹಕಾರಿಯಾಗುತ್ತದೆ.

5. ರಾಜ್ಯದಲ್ಲಿ ಎಲ್ಲಾ ಮುಖ್ಯ ಖನಿಜಗಳ ಗಣಿಗುತ್ತಿಗೆಗಳಿಗೆ ಆನ್–ಲೈನ್ ಪರ್ಮಿಟ್ ಮುಖಾಂತರ ಖನಿಜ ರವಾನೆ ಪರವಾನಗಿ ನೀಡುವುದನ್ನು ಈಗಾಗಲೇ ಅನುಷ್ಠಾನಗೊಳಿಸಲಾಗಿದೆ. ಶೀಘ್ರದಲ್ಲಿಯೇ ಉಪ ಖನಿಜಗಳಿಗೂ ಇ–ಪರ್ಮಿಟ್‌ನ್ನು ಜಾರಿಗೊಳಿಸಲು ಉದ್ದೇಶಿಸಲಾಗಿದೆ.

6. ಗಣಿಗುತ್ತಿಗೆಗಳು ಹಾಗೂ ಅದಿರು ಸಾಗಾಣಿಕೆಯನ್ನು ಪರಿಶೀಲಿಸಿ, ತಪ್ಪಿತಸ್ಥರ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳಲು ಇಲಾಖೆಯಿಂದ ಈಗಾಗಲೇ 5 ಚಾಲಿತ ದಳಗಳನ್ನು ರಚಿಸಲಾಗಿದೆ. ಈ ಚಾಲಿತ ದಳಗಳು 26,962 ವಾಹನಗಳ ತಪಾಸಣೆ ನಡೆಸಿ, 53 ದೂರುಗಳನ್ನು ದಾಖಲಿಸಿ, 13.52 ಲಕ್ಷ ರೂಪಾಯಿಗಳನ್ನು ದಂಡದ ರೂಪದಲ್ಲಿ ವಸೂಲಿ ಮಾಡಲಾಗಿದೆ. ಹಾಗೂ 3.46 ಲಕ್ಷ ಟನ್ ಕಬ್ಬಿಣದ ಅದಿರನ್ನು ವಶಪಡಿಸಿಕೊಳ್ಳಲಾಗಿದೆ.

7. ವಿವಿಧ ಇಲಾಖೆಗಳು ಅನಧಿಕೃತ ಗಣಿಗಾರಿಕೆಯನ್ನು ತಡೆಗಟ್ಟಲು ತೆಗೆದುಕೊಂಡಿರುವ ಕ್ರಮಗಳನ್ನು ಪರಾಮರ್ಶಿಸಿ, ಸೂಕ್ತ ಮಾರ್ಗದರ್ಶನವನ್ನು ನೀಡಲು ರಾಜ್ಯಮಟ್ಟದಲ್ಲಿ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ Co-ordination cum Empowered Committee ಅನ್ನು ರಚಿಸಲಾಗಿರುತ್ತದೆ. ಈ ಸಮಿತಿಯು ಆಗಿಂದಾಗ್ಗೆ ಸಭೆಗಳನ್ನು ನಡೆಸಿ ಅವಶ್ಯಕ ಕ್ರಮಗಳನ್ನು ಕೈಗೊಳ್ಳುತ್ತಿದೆ.

8. ಇದುವರೆರವಿಗೂ ಚೆಕ್‌ಪೋಸ್ಟ್ ಮತ್ತು ವಿಚಕ್ಷಣ ದಳದಿಂದ 2,22,694 ವಾಹನಗಳನ್ನು ತನಿಖೆ ಮಾಡಿ, ರೂ.4.67 ಕೋಟಿ ದಂಡ ವಸೂಲಿ ಮಾಡಿ 119 ದೂರು ದಾಖಲಿಸಲು ಕ್ರಮಕೈಗೊಳ್ಳಲಾಗಿರುತ್ತದೆ.

9. On line mining tenement system ಅನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗಿದ್ದು, ತತ್ಸಂಬಂದ ಇಲಾಖೆಯಲ್ಲಿ ಕಛೇರಿ ಕಾರ್ಯಗಳನ್ನು ನಿರ್ವಹಿಸಲು ಗಣಕೀಕೃತಗೊಳಿಸಲಾಗುತ್ತದೆ. ಇದರಿಂದಾಗಿ ಗಣಗಾರಿಕೆಯಲ್ಲಿ ಸಂಪೂರ್ಣ ಪಾರದರ್ಶಕತೆ ನಿರ್ವಹಿಸಲು ಕ್ರಮವಹಿಸಲಾಗುತ್ತಿದೆ.

10. ಕಬ್ಬಿಣದ ಅದಿರನ್ನು ರಫ್ತು ಮಾಡುವ ಉದ್ದೇಶಕ್ಕೆ ಪರವಾನಿಗೆಗಳನ್ನು ನೀಡುವುದನ್ನು ನಿಷೇಧಿಸಲಾಗಿದೆ.

**ಬಿ.ಬಿ.ಎಂ.ಪಿ. ಚೆಕ್ ಬೌನ್ಸ್ ಪ್ರಕರಣ**

**300; ಶ್ರೀ ಕೆ.ಸಿ. ಕೊಂಡಯ್ಯ (ವಿಧಾನಸಭಾ ಕ್ಷೇತ್ರ)**

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಾಸರಹಳ್ಳಿ ವಿಭಾಗದ ಕಚೇರಿಯಲ್ಲಿ 2009–10ನೇ ಸಾಲಿಗೆ ಮಾರಾಟ ತೆರಿಗೆ ಇಲಾಖೆಗೆ ಪಾಲಿಕೆ ನೀಡಿದ್ದ ಚೆಕ್ ಬೌನ್ಸ್ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಪ್ರಕರಣದ ವಿವರ ಕಾರಣಗಳೊಂದಿಗೆ ನೀಡುವುದು.

ಆ) ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಯವರು)**

ಅ) ಬಂದಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಾಸರಹಳ್ಳಿ ವಲಯದಲ್ಲಿ ಜೂನ್ 2011ರ ಮಾಹೆಯಲ್ಲಿ ಗುತ್ತಿಗೆದಾರರ ಬಿಲ್ಲುಗಳಲ್ಲಿ ಕಟಾಯಿಸಿದ ಮಾರಾಟ ತೆರಿಗೆ ಬಾಬ್ತು ರೂ. 1,30,87,469.00 ಗಳಿಗೆ ಚೆಕ್ ಅನ್ನು ವಾಣಿಜ್ಯ ತೆರಿಗೆ ಇಲಾಖೆಗೆ ನೀಡಲಾಗಿತ್ತು. ಈ ಮಧ್ಯೆ ಮುಖ್ಯ ಲೆಕ್ಕಾಧಿಕಾರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಇವರು ಈ ವಿಭಾಗದ ಖಾತೆಯಲ್ಲಿದ್ದ ಮೊತ್ತ ರೂ. 1.50 ಕೋಟಿಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮುಖ್ಯ ಲೆಕ್ಕಾಧಿಕಾರಿಗಳ ಖಾತೆಗೆ ಹಿಂಪಡೆದಿರುತ್ತಾರೆ. ಹೀಗಾಗಿ ವಾಣಿಜ್ಯ ತೆರಿಗೆ ಇಲಾಖೆಗೆ ನೀಡಿದ್ದ ಚೆಕ್ ಬೌನ್ಸ್ ಆಗಿರುವುದು ಕಂಡುಬಂದ ಕೂಡಲೇ ಹಾಗೂ ವಾಣಿಜ್ಯ ತೆರಿಗೆ ಅಧಿಕಾರಿಗಳು ನಿಯಮಾನುಸಾರ ಚೆಕ್ ಬೌನ್ಸ್‌ಗೆ ನೋಟಿಸ್ ನೀಡಿದ ಹಿನ್ನೆಲೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಿಂಪಡೆಯಲಾಗಿದ್ದ 1.50 ಕೋಟಿ ರೂಪಾಯಿಗಳನ್ನು ದಾಸರಹಳ್ಳಿ ವಿಭಾಗಕ್ಕೆ ಮರು ಜಮೆ ಮಾಡಿ ದಿನಾಂಕ 26–08–2011ರಂದು ಡಿ.ಡಿ. ಮೂಲಕ ಮಾರಾಟ ತೆರಿಗೆ ಬಾಬ್ತು ಗುತ್ತಿಗೆದಾರರಿಂದ ಕಟಾಯಿಸಲಾಗಿದ್ದ ಹಣವನ್ನು ವಾಣಿಜ್ಯ ತೆರಿಗೆ ಇಲಾಖೆಗೆ ಪಾವತಿಸಲಾಗಿದೆ.

ಆ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಗುತ್ತಿಗೆದಾರರಿಂದ ಕಟಾಯಿಸಲಾಗಿದ್ದ ಮಾರಾಟ ತೆರಿಗೆಯನ್ನು ವಾಣಿಜ್ಯ ಇಲಾಖೆಗೆ ಪಾವತಿಸಿರುವುದರಿಂದ ಸರ್ಕಾರದ ಹಂತದಲ್ಲಿ ಯಾವುದೇ ಕ್ರಮ ಇರುವುದಿಲ್ಲ.

**ಬಾಲಸುಬ್ರಮಣ್ಯಂ ನೇತೃತ್ವದ ಕಾರ್ಯಪಡೆ ವರದಿ**

**301; ಶ್ರೀ ಕೆ.ಸಿ. ಕೊಂಡಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು)**

ಅ) ಸರಕಾರಿ ಭೂಮಿ ಒತ್ತುವರಿ ಸಂಬಂಧಿಸಿದಂತೆ ಬಾಲಸುಬ್ರಮಣ್ಯಂ ನೇತೃತ್ವದ ಕಾರ್ಯಪಡೆ ಸಮಿತಿ ಸರಕಾರಕ್ಕೆ ವರದಿ ಸಲ್ಲಿಸಿದೆಯೇ; ವರದಿಯಲ್ಲಿ ಮಾಡಿರುವ ಶಿಫಾರಸ್ಸುಗಳಾವುವು; (ವರದಿ ಪ್ರತಿಯೊಂದಿಗೆ ವಿವರ ಒದಗಿಸುವುದು)

ಆ) ವರದಿಯ ಆಧಾರದ ಮೇಲೆ ಸರಕಾರ ತೆಗೆದುಕೊಂಡಿರುವ ಕ್ರಮಗಳೇನು? (ವಿವರ ಒದಗಿಸುವುದು)

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಯವರು)**

ಅ) ಸಲ್ಲಿಸಿದ್ದಾರೆ.

ವರದಿಯಲ್ಲಿನ ಶಿಫಾರಸ್ಸುಗಳು ಈ ಕೆಳಕಂಡಂತಿವೆ.

1) ಸರ್ಕಾರಿ ಜಮೀನುಗಳ ಸಂರಕ್ಷಣೆಗಾಗಿ ಖಾಯಂ ಸ್ವರೂಪದ ವಿಧಾನ ಮಂಡಲದ ಸಮಿತಿ.

2) ಸರ್ಕಾರಿ ಜಮೀನುಗಳ ಸಂರಕ್ಷಣೆ ಬಗ್ಗೆ ಸರ್ಕಾರದ ಕಾರ್ಯದರ್ಶಿಯವರಿಂದ ನಿಯತ ಪುನರಾವಲೋಕನ.

3) ರಾಷ್ಟ್ರಾಧ್ಯಕ್ಷರ ಅನುಮತಿ ಪಡೆದು, ಭೂ ಕಬಳಿಕೆ (ನಿಷೇಧ) ಅಧಿನಿಯಮ 2007ನ್ನು ಅನುಷ್ಠಾನಕ್ಕೆ ತರುವುದು.

4) ಕಂದಾಯ, ಅರಣ್ಯ, ಮುಜರಾಯಿ ಮತ್ತು ವಕ್ಫ್ ಇಲಾಖೆಗಳಲ್ಲಿ ಸರ್ಕಾರಿ ಜಮೀನು ಪ್ರಕರಣಗಳ ಪ್ರತಿರಕ್ಷೆಗಾಗಿ, ವಾಣಿಜ್ಯ ತೆರಿಗೆ ಇಲಾಖೆಯಲ್ಲಿರುವಂತೆಯೇ ಒಂದು ಕಾನೂನು ವಿಭಾಗವನ್ನು ರಚಿಸುವುದು.

5) ಬೆಂಗಳೂರು ನಗರ ಜಿಲ್ಲೆಯಲ್ಲಿ, ಕಂದಾಯ ಇಲಾಖೆಯ ವಿಶೇಷ ಡೆಪ್ಯೂಟಿ ಕಮಿಷನರಾಗಿ ಭಾರತೀಯ ಆಡಳಿತ ಸೇವೆಗೆ ಸೇರಿದ ಚಿಕ್ಕವಯಸ್ಸಿನ ಅಧಿಕಾರಿಗಳನ್ನು ನೇಮಕಮಾಡುವುದು.

6) ಬೆಂಗಳೂರು ಮಹಾನಗರ ಅಭಿವೃದ್ಧಿ ಪ್ರದೇಶದಲ್ಲಿ ನಗರ ಸರ್ವೆ ಕಾರ್ಯವನ್ನು ಕೈಗೊಳ್ಳುವ ಅಗತ್ಯತೆ.

7) ಜೀವ ಪರಿಸರ ಕಾರಣಗಳಿಗಾಗಿಯೇ ಅಲ್ಲದೇ ಬೆಂಗಳೂರು ನಗರಕ್ಕೆ ಕುಡಿಯುವ ನೀರಿನ ಪೂರೈಕೆಗಾಗಿಯೂ ಕೆರೆಗಳನ್ನು ಸುಸ್ಥಿತಿಗೆ ತರುವುದು.

8) ಒತ್ತುವರಿದಾರರು ಮತ್ತು ಅಪರಾಧವನ್ನು ದುಷ್ಪ್ರೇರಿಸುವ ಸರ್ಕಾರಿ ಅಧಿಕಾರಿಗಳ ವಿರುದ್ಧ ಕಾನೂನಿನ ಅಡಿಯಲ್ಲಿ ಉಪಬಂಧಿಸಿರುವಂತೆ ಕ್ರಮಕೈಗೊಳ್ಳುವುದು.

**ಆ)** ಶ್ರೀ ವಿ. ಬಾಲಸುಬ್ರಮಣಿಯನ್, ರವರ ವರದಿಯಲ್ಲಿನ ಶಿಫಾರಸ್ಸಿನಂತೆ ಸರ್ಕಾರಿ ಜಮೀನಿನ ಅತಿಕ್ರಮಣವನ್ನು ತೆರವುಗೊಳಿಸಿ ಸರ್ಕಾರಿ ಜಮೀನು ರಕ್ಷಣೆ ಮಾಡುವ ಸಂಬಂಧ ಸಮಿತಿಯ ವರದಿಯನ್ನು ಪರಾಮರ್ಶಿಸಿ ಸೂಕ್ತ ಸಲಹೆ/ಸೂಚನೆ ನೀಡಲು ಸರ್ಕಾರದ ಆದೇಶ ಸಂಖ್ಯೆ:ಕಂಇ 188 ಎಲ್‌ಜಿಪಿ 2011 ದಿನಾಂಕ:19–09–2011 ರಲ್ಲಿ ಕಂದಾಯ ಇಲಾಖೆ, ಅರಣ್ಯ ಇಲಾಖೆ, ಮತ್ತು ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಇಲಾಖಾವಾರು ಮೂರು ಸಮಿತಿಗಳನ್ನು ರಚಿಸಲಾಗಿದೆ. ಈ ಸಮಿತಿಗಳು ಶ್ರೀ ವಿ. ಬಾಲಸುಬ್ರಮಣಿಯನ್ ರವರ ವರದಿಯಲ್ಲಿನ ಶಿಫಾರಸ್ಸುಗಳ ಬಗ್ಗೆ Curative action, Preventive action and Disciplinary action ನಂತೆ ಪರಾಮರ್ಶಿಸಿ ಕ್ರಮ ವಹಿಸಲಾಗುತ್ತಿದೆ. ಈಗಾಗಲೇ ಈ ಸಮಿತಿಗಳು ಹಲವು ಸಭೆಗಳನ್ನು ನಡೆಸಿ, ಮಾಹಿತಿ ಸಂಗ್ರಹಣೆ ಕಾರ್ಯ ನಿರ್ವಹಿಸುತ್ತಿವೆ. ಅಲ್ಲದೇ, ದಿನಾಂಕ: 21–01–2012ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಯವರ

ಅಧ್ಯಕ್ಷತೆಯಲ್ಲಿ ಮೂರು ಇಲಾಖೆಗಳ ಸಮಿತಿಯ ಜಂಟಿ ಸಭೆಯನ್ನು ಕರೆದು ಚರ್ಚಿಸಲಾಗಿದೆ.

ಇದಲ್ಲದೇ ಶ್ರೀ ವಿ. ಬಾಲಸುಬ್ರಮಣಿಯನ್, ರವರ ವರದಿ ಆದಾರದ ಮೇಲೆ ಈಗಾಗಲೇ 40 ಅಧಿಕಾರಿ/ನೌಕರರ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ಹಾಗೂ 33 ಅಧಿಕಾರಿ/ನೌಕರರ ವಿರುದ್ಧ ಸಿ.ಸಿ.ಎ ನಿಯಮಗಳ ಪ್ರಕಾರ ಇಲಾಖಾ ವಿಚಾರಣೆಗೆ ಆದೇಶ ನೀಡಲಾಗಿದೆ.

**ಕಾನೂನು ಕಾಲೇಜುಗಳಿಗೆ ವೇತನಾನುದಾನ ನೀಡುವ ಬಗ್ಗೆ**

**323; ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)**

**ಅ)** ರಾಜ್ಯದಲ್ಲಿರುವ ಸರ್ಕಾರಿ ಅನುದಾನಿತ, ಅನುದಾನ ರಹಿತ ಕಾನೂನು ಕಾಲೇಜುಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)

**ಆ)** ಈ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಭೋದಕ–ಭೋದಕೇತರರ ಸಂಖ್ಯೆ ಎಷ್ಟು? ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)

**ಇ)** ಅನುದಾನರಹಿತ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಭೋದಕ ಸಿಬ್ಬಂದಿಗೆ ವೇತನಾನುದಾನವನ್ನು ನೀಡಲು ಸರ್ಕಾರ ಚಿಂತಿಸಿರುವುದೇ:

**ಈ)** ಹಾಗಾದರೆ ವೇತನಾನುದಾನ ನೀಡುವ ಸಂಬಂಧ ರೂಪಿಸಿರುವ ಕಾರ್ಯ ಕ್ರಮವೇನು; ಯಾವ ಕಾಲಮಿತಿಯಲ್ಲಿ ವೇತನಾನುದಾನ ನೀಡಲಾಗುವುದು?

**ಶ್ರೀ ಎಸ್. ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಪೌರಾಡಳಿತ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು)**

**ಅ)** ರಾಜ್ಯದಲ್ಲಿರುವ ಸರ್ಕಾರಿ, ಅನುದಾನಿತ ಹಾಗೂ ಅನುದಾನರಹಿತ ಕಾನೂನು ಕಾಲೇಜುಗಳ ಸಂಖ್ಯೆ ಒಟ್ಟು 89

ಕಾನೂನು ವಿಶ್ವವಿದ್ಯಾಲಯದ ಕಾನೂನು ಕಾಲೇಜು–1

ಸರ್ಕಾರಿ ಕಾನೂನು ಕಾಲೇಜುಗಳು– 05

ಖಾಸಗಿ ಅನುದಾನಿತ ಕಾನೂನು ಕಾಲೇಜುಗಳು–08

ಖಾಸಗಿ ಅನುದಾನರಹಿತ ಕಾನೂನು ಕಾಲೇಜುಗಳು–75

(ಕಾನೂನು ಕಾಲೇಜುಗಳ ವಿಳಾಸ ಸಹಿತ ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ಒದಗಿಸಲಾಗಿದೆ.)

**ಆ)** ಈ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ:

ಭೋದಕರ ಸಂಖ್ಯೆ–372

ಭೋದಕೇತರ ಸಂಖ್ಯೆ–440

ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ–9735.

**ಇ)** ಹೌದು, ಪರಿಶೀಲಿಸುತ್ತಿದೆ.

**ಈ)** ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

**ಸಮುದಾಯ ಬಾನುಲಿ ಕೇಂದ್ರಗಳ ಸ್ಥಾಪನೆ**

**344; ಡಾ॥ ದೊಡ್ಡರಂಗೇಗೌಡ (ನಾಮ ನಿರ್ದೇಶನ ಹೊಂದಿರುವವರು)**

**ಅ)** ರಾಜ್ಯದಲ್ಲಿರುವ ಸಮುದಾಯ ಬಾನುಲಿ ಕೇಂದ್ರಗಳ ಸಂಖ್ಯೆ ಎಷ್ಟು;

**ಆ)** ರಾಜ್ಯದಲ್ಲಿ ಈ ವರ್ಷ ಸಮುದಾಯ ಬಾನುಲಿ ಕೇಂದ್ರಗಳ ಸ್ಥಾಪನೆಗೆ ಸರ್ಕಾರಕ್ಕೆ ಬಂದಿರುವ ಪ್ರಸ್ತಾವನೆಗಳು ಎಷ್ಟು;

**ಇ)** ಹೊಸ ಸಮುದಾಯ ಬಾನುಲಿ ಕೇಂದ್ರಗಳ ಸ್ಥಾಪನೆಗೆ ಸರ್ಕಾರದ ಪ್ರೋತ್ಸಾಹ ಯೋಜನೆಗಳು ಯಾವುವು?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಯವರು)**

**ಅ)** ಸಮುದಾಯ ಬಾನುಲಿ ಕೇಂದ್ರಗಳ ಸ್ಥಾಪನೆಗೆ ಲೈಸನ್ಸ್ ನೀಡುವ ಅಧಿಕಾರ ಕೇಂದ್ರ ಸರ್ಕಾರದ ವಾರ್ತಾ ಮತ್ತು ಪ್ರಸಾರ ಮಂತ್ರಾಲಯದ ವ್ಯಾಪ್ತಿಗೆ ಬರುವುದರಿಂದ ರಾಜ್ಯದಲ್ಲಿರುವ ಸಮುದಾಯ ಬಾನುಲಿ ಕೇಂದ್ರಗಳ ಪೂರ್ಣ ಮಾಹಿತಿ ಒದಗಿಸಲು ಸಾಧ್ಯವಾಗುವುದಿಲ್ಲ.

**ಆ)** ಸಮುದಾಯ ಬಾನುಲಿ ಕೇಂದ್ರಗಳ ಸ್ಥಾಪನೆಗೆ ಪ್ರಸ್ತಾವನೆ ಸಲ್ಲಿಸುವ ವಿಷಯ ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುವುದರಿಂದ ರಾಜ್ಯದಲ್ಲಿ ಈ ವರ್ಷ ಸಮುದಾಯ ಬಾನುಲಿ ಕೇಂದ್ರಗಳ ಸ್ಥಾಪನೆಗೆ ಅನುಮತಿ ಕೋರಿ ರಾಜ್ಯ ಸರ್ಕಾರಕ್ಕೆ ಯಾವುದೇ ಸಂಘ ಸಂಸ್ಥೆಗಳಿಂದ ಅರ್ಜಿ ಬಂದಿರುವುದಿಲ್ಲ.

**ಇ)** ಸಮುದಾಯ ಬಾನುಲಿ ಕೇಂದ್ರಗಳ ಸ್ಥಾಪನೆಗೆ ಕೇಂದ್ರ ಸರ್ಕಾರದಿಂದ ಸಮುದಾಯ ರೇಡಿಯೋ ಕೇಂದ್ರ ಸ್ಥಾಪನೆಗೆ ಮಂಜೂರಾತಿ ಪಡೆದು ತದನಂತರ ರಾಜ್ಯ ಸರ್ಕಾರದಿಂದ ಆರ್ಥಿಕ ಸಹಾಯ ಕೋರಿ ಅರ್ಜಿ ಸಲ್ಲಿಸುವ ಸರ್ಕಾರೇತರ ಸಂಘ ಸಂಸ್ಥೆ/ಶಿಕ್ಷಣ ಸಂಸ್ಥೆಗಳಿಗೆ ತಲಾ ರೂ.10.00 ಲಕ್ಷ ದಂತೆ ಆರ್ಥಿಕ ಸಹಾಯಧನವನ್ನು ರಾಜ್ಯ ಸರ್ಕಾರ ನೀಡುವ ಯೋಜನೆ ಇದೆ. ಅದರಂತೆ ಪ್ರತಿ ಸಂಸ್ಥೆಗೆ ಪ್ರಥಮ ವರ್ಷದಲ್ಲಿ ರೂ.5.00 ಲಕ್ಷ, ಎರಡನೇ ವರ್ಷದಲ್ಲಿ ರೂ.3.00 ಲಕ್ಷ ಹಾಗೂ ಅಂತಿಮವಾಗಿ ರೂ.2.00 ಲಕ್ಷಗಳ ಆರ್ಥಿಕ ಸಹಾಯ ನೀಡಲಾಗುವುದು.

## ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಕುರಿತು

**343; ಡಾ॥ ದೊಡ್ಡರಂಗೇಗೌಡ (ನಾಮನಿರ್ದೇಶಿತರು)**

**ಅ)** ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ವಿವಿಧ ದರ್ಜೆಯ ಖಾಲಿ ಹುದ್ದೆಗಳ ಮಾಹಿತಿಯನ್ನು ಇಲಾಖಾವಾರು ದರ್ಜೆವಾರು ವಿವರ ನೀಡುವುದು.

**ಆ)** ಖಾಲಿ ಇರುವ ವಿವಿಧ ಹುದ್ದೆಗಳ ಭರ್ತಿಗೆ ಸರ್ಕಾರ ಕ್ರಮ ಕೈಗೊಂಡಿದೆಯೇ, ಹಾಗಿದ್ದಲ್ಲಿ, ಕೈಗೊಂಡ ಕ್ರಮದ ಮಾಹಿತಿಯನ್ನು ನೀಡುವುದು?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)**

**ಅ)** ರಾಜ್ಯದ ವಿವಿಧ ಸರಕಾರಿ ಇಲಾಖೆಗಳಲ್ಲಿ ವಿವಿಧ ದರ್ಜೆಯ ಒಟ್ಟು 1,42,330 ಖಾಲಿ ಹುದ್ದೆಗಳಿರುತ್ತವೆ. (ಅನುಬಂಧ ಲಗತ್ತಿಸಿದೆ)

**ಆ)** ಹಂತ ಹಂತವಾಗಿ ಖಾಲಿ ಹುದ್ದೆಗಳನ್ನು ಅಗತ್ಯಗನುಗುಣವಾಗಿ ತುಂಬಲು ಕ್ರಮ ತೆಗೆದುಕೊಳ್ಳಲಾಗುವುದು.

# ಅನುಬಂಧ

| ಕ್ರಮ ಸಂಖ್ಯೆ | ಇಲಾಖೆ | ಖಾಲಿ ಹುದ್ದೆಗಳು |
|---|---|---|
| 1. | ವಿಧಾನಸಭೆ /ಸಚಿವಾಲಯ | 0 |
| 2. | ರಾಜ್ಯಪಾಲರ ಸಚಿವಾಲಯ | 29 |
| 3. | ನ್ಯಾಯಾಂಗ ಇಲಾಖೆ | 7516 |
| 4. | ವಾಣಿಜ್ಯ ತೆರಿಗೆ ಇಲಾಖೆ | 1351 |
| 5. | ಕಂದಾಯ ಇಲಾಖೆ | 6108 |
| 6. | ನೋಂದಣಿ ಮತ್ತು ಮುದ್ರಾಂಕ ಇಲಾಖೆ | 153 |
| 7. | ಅಬಕಾರಿ ಇಲಾಖೆ | 2334 |
| 8. | ಸಾರಿಗೆ ಇಲಾಖೆ | 456 |
| 9. | ಕರ್ನಾಟಕ ಲೋಕಸೇವಾ ಆಯೋಗ | 75 |
| 10. | ಸಚಿವಾಲಯ | 504 |
| 11. | ಖಜಾನೆ ಇಲಾಖೆ | 593 |
| 12. | ಪೊಲೀಸ್ ಇಲಾಖೆ | 16950 |
| 13. | ಬಂಧೀಖಾನೆ | 757 |
| 14. | ಸರ್ಕಾರಿ ಮುದ್ರಣಾಲಯ ಇಲಾಖೆ | 876 |
| 15. | ಲೋಕೋಪಯೋಗಿ ಇಲಾಖೆ | 1973 |
| 16 | ಶಿಕ್ಷಣ ಇಲಾಖೆ | 24518 |
| 17. | ತಾಂತ್ರಿಕ ಶಿಕ್ಷಣ ಇಲಾಖೆ | 6601 |
| 18. | ಯುವಜನಸೇವೆ ಇಲಾಖೆ | 347 |
| 19. | ಕನ್ನಡ ಮತ್ತು ಸಂಸ್ಕೃತಿ ಇಲಾಖೆ | 413 |
| 20. | ವೈದ್ಯಕೀಯ ಶಿಕ್ಷಣ ಇಲಾಖೆ | 20413 |
| 21. | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | 2675 |
| 22. | ಮಾಹಿತಿ ಮತ್ತು ಪ್ರಚಾರ ಇಲಾಖೆ | 66 |
| 23. | ಸಮಾಜ ಕಲ್ಯಾಣ ಇಲಾಖೆ | 10546 |
| 24. | ಕಾರ್ಮಿಕ ಇಲಾಖೆ | 2242 |
| 25. | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | 1989 |
| 26. | ಕೃಷಿ, ಮತ್ತು ತೋಟಗಾರಿಕೆ ಇಲಾಖೆ | 7363 |
| 27. | ಪಶುಸಂಗೋಪನೆ ಇಲಾಖೆ | 5364 |
| 28. | ಮೀನುಗಾರಿಕೆ ಇಲಾಖೆ | 497 |
| 29. | ಅರಣ್ಯ ಇಲಾಖೆ | 2196 |
| 30. | ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ | 358 |
| 31. | ಸಹಕಾರ ಇಲಾಖೆ | 1513 |
| 32. | ಜಲಸಂಪನ್ಮೂಲ ಇಲಾಖೆ | 581 |
| 33. | ಸಣ್ಣ ನೀರಾವರಿ ಇಲಾಖೆ | 507 |
| 34. | ಕೈಗಾರಿಕಾ ಇಲಾಖೆ | 1094 |
| 35. | ಪ್ರವಾಸೋದ್ಯಮ ಇಲಾಖೆ | 53 |
| 36. | ಇತರೆ | 13319 |
| | ಒಟ್ಟು | **142330** |

**347; ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ವೈದ್ಯರ ಕೊರತೆಯಿಂದ ಜನಸಾಮಾನ್ಯರು ಅನಾರೋಗ್ಯದಿಂದ ನರಳುತ್ತಿದ್ದು, ಕಾಯಿಲೆಯಿಂದ ನರಳುತ್ತಿರುವವರಿಗೆ ಸೂಕ್ತ ಚಿಕಿತ್ಸೆ ದೊರಕದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದರೆ, ಖಾಲಿ ಇರುವ ವೈದ್ಯರ ನೇಮಕಕ್ಕೆ ಸರ್ಕಾರ ಯಾವ ಕ್ರಮ ಕೈಗೊಂಡಿರುತ್ತದೆ;

ಇ) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಮಂಜೂರಾಗಿರುವ 'ಡಿ' ದರ್ಜೆಯ ನೌಕರರ 128 ಹುದ್ದೆಗಳಲ್ಲಿ ಭರ್ತಿಯಾಗಿರುವುದು ಕೇವಲ 28 ಹುದ್ದೆಗಳು ಮಾತ್ರ ಈ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಮಂಜೂರಾಗಿರುವ ಉಳಿದ ಹುದ್ದೆಗಳನ್ನು ಭರ್ತಿ ಮಾಡುವಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿರುತ್ತದೆ?

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)**

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಒಟ್ಟು 59 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳು ಮಂಜೂರಾಗಿದ್ದು, 57 ವೈದ್ಯಾಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ ಹಾಗು 2 ಹುದ್ದೆಗಳು ಖಾಲಿ ಇವೆ.

ಮುಂದುವರೆದು, ಸದರಿ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ತಾಲ್ಲೂಕು ಆಸ್ಪತ್ರೆಗಳು / ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಒಟ್ಟು 44 ವೈದ್ಯರ / ತಜ್ಞ ವೈದ್ಯರ ಹುದ್ದೆಗಳು ಮಂಜೂರಾಗಿದ್ದು, 24 ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ ಹಾಗು 20 ಹುದ್ದೆಗಳು ಖಾಲಿ ಇವೆ. ಲಭ್ಯವಿರುವ ವೈದ್ಯರು ಮತ್ತು ಇತರೇ ಸಿಬ್ಬಂದಿಗಳಿಂದ ಸಾರ್ವಜನಿಕರಿಗೆ ತೊಂದರೆಯಾಗದಂತೆ ಚಿಕಿತ್ಸೆ ನೀಡಲು ಕ್ರಮವಹಿಸಲಾಗಿದೆ.

ಆ) ಖಾಲಿಯಿರುವ ವೈದ್ಯರ ಹುದ್ದೆಗಳನ್ನು ತುಂಬಲು ಸರ್ಕಾರವು ತೆಗೆದುಕೊಂಡ ಕ್ರಮಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವ್ಯಾಪ್ತಿಯಡಿ ಬರುವ ಆಸ್ಪತ್ರೆ / ಆರೋಗ್ಯ ಕೇಂದ್ರಗಳಲ್ಲಿ ಒಟ್ಟು 188 ಗ್ರೂಪ್ –ಡಿ ವೃಂದದ ಹುದ್ದೆಗಳು ಮಂಜೂರಾಗಿದ್ದು, 114 ಗ್ರೂಪ್–ಡಿ ದರ್ಜೆಯ ನೌಕರರು ಕರ್ತವ್ಯ ನಿರ್ವಹಿಸುತ್ತಿದ್ದಾರೆ

ಈ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಬರುವ ಆಸ್ಪತ್ರೆ / ಕೇಂದ್ರಗಳಲ್ಲಿ ಖಾಲಿ ಇರುವ ಗ್ರೂಪ್ 'ಡಿ; ಹುದ್ದೆಗಳ ಪೈಕಿ ಒಟ್ಟು 2323 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸರ್ಕಾರವು ಈಗಾಗಲೇ ಅನುಮೋದನೆ ನೀಡಿದೆ.

**ಅನುಬಂಧ**

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಬರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿಯಿರುವ ತಜ್ಞ ವೈದ್ಯರ ಹುದ್ದೆಗಳನ್ನು ತುಂಬಲು ತೆಗೆದುಕೊಂಡ ಕ್ರಮಗಳ ವಿವರಗಳು:**

1. ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ (ಎನ್.ಆರ್.ಹೆಚ್.ಎಂ) ಮತ್ತು ವಿಶ್ವ ಬ್ಯಾಂಕ್ ನೆರವಿನ ಕರ್ನಾಟಕ ಆರೋಗ್ಯ ಪದ್ಧತಿ ಅಭಿವೃದ್ಧಿ ಸುಧಾರಣೆ ಯೋಜನೆ (ಕೆ.ಹೆಚ್.ಎಸ್.ಡಿ.ಆರ್.ಪಿ.) ಅಡಿಯಲ್ಲಿ ಸ್ತ್ರೀರೋಗ ತಜ್ಞತೆ, ಅರವಳಿಕೆ ಹಾಗೂ ಮಕ್ಕಳ ತಜ್ಞತೆಯಲ್ಲಿ ಗೌರವಧನದ ಆಧಾರದ ಮೇಲೆ ತಜ್ಞ ವೈದ್ಯರನ್ನು ನೇಮಿಸಿಕೊಳ್ಳಲು ಸಿ–ಗುಂಪಿನ ಜಿಲ್ಲೆಗಳು ಹಾಗೂ ಉತ್ತರ ಕನ್ನಡ, ಕೊಡಗು ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಅನ್ವಯಿಸುವಂತೆ ಮಾಸಿಕ ₹. 70,000 ಹಾಗೂ ಇತರೆ ಎಲ್ಲಾ ಜಿಲ್ಲೆಗಳಿಗೆ ₹. 50,000 ದಂತೆ ನೀಡಲು ಅವಕಾಶ ಕಲ್ಪಿಸಲಾಗಿದೆ.

2. ಇತರೆ ತಜ್ಞತೆಗಳಿಗೆ (ಮಕ್ಕಳ ತಜ್ಞರು, ಸ್ತ್ರೀರೋಗ ತಜ್ಞರು ಹಾಗೂ ಅರವಳಿಕೆ ತಜ್ಞರನ್ನು ಹೊರತುಪಡಿಸಿ) ಸಂಬಂಧಪಟ್ಟಂತೆ, ಮೇಲೆ ತಿಳಿಸಿದ ಜಿಲ್ಲೆಗಳಲ್ಲಿ ಕ್ರಮವಾಗಿ ಮಾಸಿಕ ₹. 65,000 ಹಾಗೂ ₹. 50,000 ದಂತೆ ಗೌರವಧನ ನೀಡಲಾಗುತ್ತಿದೆ. ಮುಂದುವರೆದು, ರೀಟೈನರ್‌ಷಿಪ್ ಆಧಾರದಲ್ಲಿ ನೇಮಕ ಮಾಡುವ ಎಲ್ಲಾ ತಜ್ಞ ವೈದ್ಯರಿಗೆ ಸಂಬಂಧಿಸಿದಂತೆ ನೀಡಲಾಗುತ್ತಿದ್ದ ಗೌರವಧನವನ್ನು ಸಿ–ಗುಂಪಿನ ಜಿಲ್ಲೆಗಳು ಹಾಗೂ ಉತ್ತರ ಕನ್ನಡ, ಕೊಡಗು ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಅನ್ವಯಿಸುವಂತೆ ಮಾಸಿಕ ₹. 5,000 ದಿಂದ ₹. 10,000 ಕ್ಕೆ ಹೆಚ್ಚಿಸಿ ಹಾಗೂ ಇತರೆ ಎಲ್ಲಾ ಜಿಲ್ಲೆಗಳಿಗೆ ₹. 8,000 ದಂತೆ ನೀಡಿ ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಮುಂದುವರೆದು, ಸದರಿ ತಜ್ಞರು ಹೊರ ರೋಗಿ ವಿಭಾಗದಲ್ಲಿ ಕಾರ್ಯನಿರ್ವಹಿಸಿದ್ದಲ್ಲಿ ದಿನವೊಂದಕ್ಕೆ ₹. 1,000 ದಂತೆ ಗೌರವ ಧನ ನೀಡಲು ಅವಕಾಶ ಕಲ್ಪಿಸಲಾಗಿದೆ. ಆದಾಗ್ಯೂ, ಅನೇಕ ಜಿಲ್ಲೆಗಳಲ್ಲಿ ತಜ್ಞರು ಮುಂದೆ ಬರುತ್ತಿಲ್ಲ.

3. ಎಂ.ಬಿ.ಬಿ.ಎಸ್. ವೈದ್ಯರಿಗೆ ಅರವಳಿಕೆ ಹಾಗೂ ಸಿಜೇರಿಯನ್ ಶಸ್ತ್ರಚಿಕಿತ್ಸೆಗಳಿಗೆ ತರಬೇತಿ ನೀಡಲಾಗುತ್ತಿದ್ದು, ಈ ಮೂಲಕ ಸ್ತ್ರೀರೋಗ ಹಾಗೂ ಅರವಳಿಕೆ ತಜ್ಞರ ಕೊರತೆಯನ್ನು ನೀಗಿಸಲು ಕ್ರಮವಹಿಸಲಾಗಿದೆ.

4. ಕರ್ನಾಟಕ ಲೋಕಸೇವಾ ಆಯೋಗದ ಮೂಲಕ 600 ತಜ್ಞ ವೈದ್ಯರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗಿ ಒಟ್ಟು 252 ತಜ್ಞ ವೈದ್ಯರನ್ನು ನೇಮಕಾತಿ ಮಾಡಲು ಆಯ್ಕೆ ಪಟ್ಟಿಯನ್ನು ಸರ್ಕಾರಕ್ಕೆ ಕಳುಹಿಸಿದ್ದು, ಪ್ರಸ್ತುತ ನೇಮಕಾತಿ ಆದೇಶ ನೀಡುವ ಪ್ರಕ್ರಿಯೆ ಜಾರಿಯಲ್ಲಿದೆ.

## ನೈಸ್ ಸಂಸ್ಥೆಯವರ ಅನಾವಶ್ಯಕ ಕಿರುಕುಳದ ಬಗ್ಗೆ

## 345; ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಅ) ನೈಸ್ ಸಂಸ್ಥೆಯವರು ಗೊಟ್ಟಿಗೆರೆಯಲ್ಲಿನ ನೈಸ್ ರಸ್ತೆ ನಿರ್ಮಾಣಕ್ಕಾಗಿ ಭೂಸ್ವಾಧಿನ ಕಾರ್ಯಾಚರಣೆ ವೇಳೆ ರೈತರ ಜಮೀನಿನಲ್ಲಿದ್ದ ತೆಂಗಿನ ಮರಗಳು ಹಾಗೂ ಮನೆಗಳನ್ನು ಅನಾವಶ್ಯಕವಾಗಿ ಜೆ.ಸಿ.ಬಿ.ಗಳ ಮೂಲಕ ನೆಲಸಮಗೊಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದನ್ನು ಕಾನೂನು ರೀತಿಯಲ್ಲಿ ತಡೆಗಟ್ಟುವ ಬಗ್ಗೆ ಸರ್ಕಾರ ಯಾವ ರೀತಿ ಕ್ರಮ ಕೈಗೊಂಡಿದೆ;

ಆ) ಗೊಟ್ಟಿಗೆರೆ ಬಳಿ ನೈಸ್ ರಸ್ತೆ ನಿರ್ಮಾಣಕ್ಕೆ ಸುಪ್ರೀಂ ಕೋರ್ಟ್ ಆದೇಶವನ್ನು ಉಲ್ಲಂಘಿಸಿ ಭೂಸ್ವಾಧೀನ ಮಾಡಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ರೀತಿ ನ್ಯಾಯಾಲಯದ ಆದೇಶ ಉಲ್ಲಂಘನೆ ಮಾಡುತ್ತಿರುವವರ ಮೇಲೆ ಸರ್ಕಾರ ಯಾವ ಕ್ರಮ ಕೈಗೊಂಡಿರುತ್ತದೆ?

## ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಗೊಟ್ಟಿಗೆರೆ ಗ್ರಾಮದ ಹಲವು ಸರ್ವೆ ನಂಬರ್ ಜಮೀನುಗಳನ್ನು ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆ ಅನುಷ್ಠಾನದ ಉದ್ದೇಶಕ್ಕಾಗಿ ಭೂಸ್ವಾಧೀನಪಡಿಸಿಕೊಂಡು, ಯೋಜನಾ ಅನುಷ್ಠಾನಕ್ಕಾಗಿ ಮೆ: ನೈಸ್ ಕಂಪನಿಗೆ ಈಗಾಗಲೇ ಹಸ್ತಾಂತರಿಸಲಾಗಿದೆ. ಈ ಜಮೀನುಗಳಲ್ಲಿ ಮೆ: ನೈಸ್ ಕಂಪನಿಯವರು ಕಾಮಗಾರಿ ಪ್ರಕ್ರಿಯೆಯನ್ನು ಪ್ರಾರಂಭಿಸಿರುತ್ತಾರೆ.

ಆ) ಇಂತಹ ಯಾವುದೇ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

## ವಿಮಾನ ನಿಲ್ದಾಣಕ್ಕೆ ಕೆಂಪೇಗೌಡರವರ ಹೆಸರಿಡುವ ಬಗ್ಗೆ

### 346; ಶ್ರೀ ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

**ಅ)** ದೇವನಹಳ್ಳಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ನಾಡಪ್ರಭು ಕೆಂಪೇಗೌಡರ ಹೆಸರಿಡುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

**ಆ)** ದೇವನಹಳ್ಳಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಾಡಪ್ರಭು ಕೆಂಪೇಗೌಡರವರ ಸ್ಮಾರಕ ನಿರ್ಮಿಸುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

### ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)

**ಅ)** ಬಂದಿದೆ.

ದೇವನಹಳ್ಳಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ನಾಡಪ್ರಭು ಕೆಂಪೇಗೌಡರವರ ಹೆಸರಿಡಲು ರಾಜ್ಯ ಸರ್ಕಾರದ ಸಚಿವ ಸಂಪುಟವು ತೆಗೆದುಕೊಂಡಿರುವ ನಿರ್ಧಾರವನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಈ ಬಗ್ಗೆ ಕೇಂದ್ರ ಸರ್ಕಾರದಿಂದ ಉತ್ತರವನ್ನು ನಿರೀಕ್ಷಿಸಿದೆ.

**ಆ)** ದೇವನಹಳ್ಳಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಾಡಪ್ರಭು ಕೆಂಪೇಗೌಡರವರ ಸ್ಮಾರಕ ನಿರ್ಮಿಸುವ ಬಗ್ಗೆ ಪ್ರಸ್ತಾವನೆ ಬಂದಿರುವುದಿಲ್ಲ. ಆದಾಗ್ಯೂ ದೇವನಹಳ್ಳಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಟ್ರಂಪೆಟ್ ಇಂಟರ್‌ಚೇಂಜ್ ಫ್ಲೈ ಓವರ್ ಮತ್ತು ರಾಷ್ಟ್ರೀಯ ಹೆದ್ದಾರಿ – 07 ಕೂಡುವ ವೃತ್ತದಲ್ಲಿ ನಾಡಪ್ರಭು ಕೆಂಪೇಗೌಡರವರ ಸ್ಮಾರಕ ನಿರ್ಮಿಸುವ ಬಗ್ಗೆ ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ ಇವರಿಂದ ಪ್ರಸ್ತಾವನೆ ಸ್ವೀಕೃತವಾಗಿದ್ದು, ವಿಷಯವು ಪರಿಶೀಲನೆಯಲ್ಲಿದೆ.

## ಬಡಜನರ ಹೃದಯ ಚಿಕಿತ್ಸೆಗೆ ಸರ್ಕಾರದಿಂದ ಸಹಾಯ ನೀಡುವ ಕುರಿತು

## 348; ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಅ) ಜಯದೇವ ಹೃದಯ ಚಿಕಿತ್ಸಾ ಸಂಸ್ಥೆಯಿಂದ ರಾಜ್ಯದಲ್ಲಿನ ಪ್ರತಿ ಜಿಲ್ಲೆಯಲ್ಲಿ ತಿಂಗಳಿಗೊಮ್ಮೆ ಹೃದಯ ಖಾಯಿಲೆಯಿಂದ ನರಳುತ್ತಿರುವ ಬಡ ರೈತರಿಗೆ ಚಿಕಿತ್ಸೆ ನೀಡಲು ಸರ್ಕಾರದ ವತಿಯಿಂದ ಜಯದೇವ ಹೃದಯ ಸಂಸ್ಥೆಗೆ ಹೆಚ್ಚಿನ ಪ್ರೋತ್ಸಾಹ ನೀಡಿ ಬಡ ಜನರ ಹೃದಯ ಚಿಕಿತ್ಸೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

### ಶ್ರೀ ಎಸ್.ಎ. ರಾಮದಾಸ್ (ವೈದ್ಯಕೀಯ ಶಿಕ್ಷಣ ಸಚಿವರು)

ಅ) ಹಣ ವ್ಯಯ ಮಾಡಲು ಶಕ್ತಿ ಇಲ್ಲದ ರೋಗಿಗಳಿಗೂ ಸಹ ಉತ್ತಮ ಗುಣಮಟ್ಟದ ಚಿಕಿತ್ಸೆಯನ್ನು ನೀಡುವ ಧ್ಯೇಯದಿಂದ ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯು ಕಾರ್ಯನಿರ್ವಹಿಸುತ್ತಿದೆ. ಸಂಸ್ಥೆಯಲ್ಲಿ ಬಡ ಹೃದ್ರೋಗಿಗಳಿಗೆ ಉಚಿತ / ರಿಯಾಯಿತಿ ದರ / ಸಹಾಯ ಧನದಲ್ಲಿ ಚಿಕಿತ್ಸೆ ನೀಡುತ್ತಿರುವ ವಿವರ ಈ ಕೆಳಕಂಡಂತಿದೆ:

**1. ಹೃದಯ ಸಂಜೀವಿನಿ ಯೋಜನೆ:–** ಹೃದಯ ಸಂಜೀವಿನಿ ಯೋಜನೆಯನ್ನು ಸಂಸ್ಥೆಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಯೋಜನೆ ಅಡಿಯಲ್ಲಿ ಅರ್ಹ ಬಡ ರೋಗಿಗಳಿಗೆ ಉಚಿತವಾಗಿ ಚಿಕಿತ್ಸೆಯನ್ನು ನೀಡಿರುವ ವಿವರ ಈ ಕೆಳಕಂಡಂತಿವೆ:

| ಕ್ರಮ ಸಂಖ್ಯೆ | ಹಣಕಾಸು ವರ್ಷ | ಅನುಕೂಲ ಪಡೆದ ರೋಗಿಗಳ ಸಂಖ್ಯೆ | ಚಿಕಿತ್ಸೆಗೆ ವೆಚ್ಚವಾದ ಹಣ (ರೂಗಳಲ್ಲಿ) |
|---|---|---|---|
| 1. | 2009–10 | 1196 | 6,93,27,678/– |
| 2. | 2010–11 | 1253 | 7,33,99,085/– |

**2. ಸುವರ್ಣ ಆರೋಗ್ಯ ಚೈತನ್ಯ ಯೋಜನೆ:–** 1 ನೇ ತರಗತಿಯಿಂದ 10 ನೇ ತರಗತಿಯವರೆಗೆ ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳ ಚಿಕಿತ್ಸೆಗಾಗಿ ಸರ್ಕಾರವು ತಂದಿರುವ ಈ ಯೋಜನೆಯನ್ನು ಸಂಸ್ಥೆಯಲ್ಲಿ ಅನುಷ್ಠಾನಗೊಳಿಸುತ್ತಿದ್ದು, ಈ ಯೋಜನೆಯಡಿ ಚಿಕಿತ್ಸೆಯನ್ನು ನೀಡಿರುವ ವಿವರ ಈ ಕೆಳಕಂಡಂತಿದೆ:

| **ಕ್ರಮ ಸಂಖ್ಯೆ** | **ಹಣಕಾಸು ವರ್ಷ** | **ಅನುಕೂಲ ಪಡೆದ ರೋಗಿಗಳ ಸಂಖ್ಯೆ** | **ಚಿಕಿತ್ಸೆಗೆ ವೆಚ್ಚವಾದ ಹಣ (ರೂ.ಗಳಲ್ಲಿ)** |
|---|---|---|---|
| 1. | 2008–09 | 298 | 72,06,698/– |
| 2. | 2009–10 | 566 | 1,97,55,074/– |
| 3. | 2010–11 | 499 | 2,20,75,818/– |

**3. ಯಶಸ್ವಿನಿ ಯೋಜನೆ:–** ಸರ್ಕಾರವು ಜಾರಿಗೆ ತಂದಿರುವ ಈ ಯೋಜನೆಯನ್ನು ಸಂಸ್ಥೆಯಲ್ಲಿ ಅನುಷ್ಠಾನಗೊಳಿಸುತ್ತಿದ್ದು, ಈ ಯೋಜನೆ ಅಡಿಯಲ್ಲಿ ಚಿಕಿತ್ಸೆಯನ್ನು ನೀಡಿರುವ ವಿವರ ಈ ಕೆಳಕಂಡಂತಿದೆ:

| **ಕ್ರಮ ಸಂಖ್ಯೆ** | **ಹಣಕಾಸು ವರ್ಷ** | **ಅನುಕೂಲ ಪಡೆದ ರೋಗಿಗಳ ಸಂಖ್ಯೆ** | **ಚಿಕಿತ್ಸೆಗೆ ವೆಚ್ಚವಾದ ಹಣ (ರೂ.ಗಳಲ್ಲಿ)** |
|---|---|---|---|
| 1. | 2005–06 | 544 | 1,92,40,500/– |
| 2. | 2006–07 | 1552 | 4,82,06,900/– |
| 3. | 2007–08 | 1928 | 4,45,25,500– |
| 4. | 2008–09 | 2621 | 6,06,83,500/– |
| 5. | 2009–10 | 2785 | 6,48,52,850/– |
| 6. | 2010–11 | 3157 | 5,91,21,350/– |

**4. ಮುಖ್ಯ ಮಂತ್ರಿಗಳ ವೈದ್ಯಕೀಯ ಪರಿಹಾರ ಸಂಘ ನಿಧಿ:–** ಈ ಯೋಜನೆಯನ್ನು ಬಡ ಹೃದ್ರೋಗಿಗಳಿಗೆ ಚಿಕಿತ್ಸೆಯನ್ನು ನೀಡಲು ಸಂಸ್ಥೆಯಲ್ಲಿ ಅನುಷ್ಠಾನಗೊಳಿಸುತ್ತಿದ್ದು, ಈ ಯೋಜನೆ ಅಡಿ ಚಿಕಿತ್ಸೆಯನ್ನು ನೀಡಿರುವ ವಿವರ ಈ ಕೆಳಕಂಡಂತಿದೆ:

| ಕ್ರಮ ಸಂಖ್ಯೆ | ಹಣಕಾಸು ವರ್ಷ | ಅನುಕೂಲ ಪಡೆದ ರೋಗಿಗಳ ಸಂಖ್ಯೆ | ಚಿಕಿತ್ಸೆಗೆ ವೆಚ್ಚವಾದ ಹಣ (ರೂ.ಗಳಲ್ಲಿ) |
|---|---|---|---|
| 1. | 2005–06 | 9572 | 2,15,31,636/– |
| 2. | 2006–07 | 10884 | 2,80,74,283/– |
| 3. | 2007–08 | 17199 | 4,14,36,803/– |
| 4. | 2008–09 | 22720 | 4,53,35,910/– |
| 5. | 2009–10 | 23950 | 6,02,11,262/– |
| 6. | 2010–11 | 25956 | 6,20,86,449/– |

**5. ಮಾನ್ಯ ಮುಖ್ಯಮಂತ್ರಿಗಳ ವೈದ್ಯಕೀಯ ಪರಿಹಾರ ನಿಧಿ:–** ಈ ಯೋಜನೆಯನ್ನು ಬಡ ಹೃದ್ರೋಗಿಗಳಿಗೆ ಚಿಕಿತ್ಸೆಯನ್ನು ನೀಡಲು ಸಂಸ್ಥೆಯಲ್ಲಿ ಅನುಷ್ಠಾನಗೊಳಿಸುತ್ತಿದ್ದು, ಈ ಯೋಜನೆ ಅಡಿ ಚಿಕಿತ್ಸೆಯನ್ನು ನೀಡಿರುವ ವಿವರ ಈ ಕೆಳಕಂಡಂತಿದೆ:

| ಕ್ರಮ ಸಂಖ್ಯೆ | ಹಣಕಾಸು ವರ್ಷ | ಅನುಕೂಲ ಪಡೆದ ರೋಗಿಗಳ ಸಂಖ್ಯೆ | ಚಿಕಿತ್ಸೆಗೆ ವೆಚ್ಚವಾದ ಹಣ (ರೂ.ಗಳಲ್ಲಿ) |
|---|---|---|---|
| 1. | 2005–06 | 226 | 19,25,195/– |
| 2. | 2006–07 | 710 | 84,03,707/– |
| 3. | 2007–08 | 471 | 62,15,108/– |
| 4. | 2008–09 | 454 | 62,33,613/– |
| 5. | 2009–10 | 313 | 64,62,978/– |
| 6. | 2010–11 | 319 | 83,12,222/– |

ರಾಜ್ಯದಲ್ಲಿ ಹೃದಯ ಖಾಯಿಲೆಯಿಂದ ನರಳುತ್ತಿರುವ ಬಡ ಕೂಲಿ ಕಾರ್ಮಿಕರಿಗೆ / ಬಡ ರೈತರಿಗೆ / ನಿರ್ಗತಿಕರಿಗೆ ಹೃದಯ ಚಿಕಿತ್ಸೆಯನ್ನು ನೀಡಲು, ಸರ್ಕಾರವು ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಗೆ ಹಣಕಾಸಿನ ನೆರವನ್ನು ನೀಡಿ ಪ್ರೋತ್ಸಾಹಿಸುತ್ತಿದೆ.

ಮೇಲೆ ಹೇಳಿದ ಯೋಜನೆಗಳಲ್ಲದೆ ಸಂಸ್ಥೆಯ ನಿಧಿಯಿಂದಲೂ ರಾಜ್ಯದ ಬಡ ಹೃದ್ರೋಗಿಗಳಿಗೆ ರಿಯಾಯಿತಿ ದರದಲ್ಲಿ / ಉಚಿತವಾಗಿ ಚಿಕಿತ್ಸೆಯನ್ನು ನೀಡಲಾಗುತ್ತಿದೆ. ಸಂಸ್ಥೆಯ ನಿಧಿಯಿಂದ 2009–10 ನೇ ಸಾಲಿನಲ್ಲಿ 501 ರೋಗಿಗಳಿಗೆ ರೂ.90,18,429/– ಗಳ ವೆಚ್ಚದಲ್ಲಿ, 2010–11 ನೇ ಸಾಲಿನಲ್ಲಿ 699 ರೋಗಿಗಳಿಗೆ ರೂ.93,65,574/– ಗಳ ವೆಚ್ಚದಲ್ಲಿ ಉಚಿತವಾಗಿ ಹಾಗೂ ರಿಯಾಯಿತಿ ದರದಲ್ಲಿ ಚಿಕಿತ್ಸೆಯನ್ನು ನೀಡಲಾಗಿದೆ.

ಅಲ್ಲದೆ, ಸಂಸ್ಥೆಯು ದಾನಿಗಳಿಂದ ಸಂಗ್ರಹಿಸಿದ ದೇಣಿಗೆಯಿಂದಲೂ ಬಡ ಹೃದ್ರೋಗಿಗಳಿಗೆ ಉಚಿತವಾಗಿ / ರಿಯಾಯಿತಿ ದರದಲ್ಲಿ ಚಿಕಿತ್ಸೆಯನ್ನು ನೀಡುತ್ತಿದೆ.

**ಪ್ರವಾಸೋದ್ಯಮ ಇಲಾಖೆಯ ಸ್ಥಳಗಳಿಗೆ ಸೌಕರ್ಯ ಒದಗಿಸುವ ಬಗ್ಗೆ.**

**351; ಶ್ರೀ ಎಸ್. ನಾಗರಾಜು (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಯಲ್ಲಿ ಪ್ರವಾಸೋದ್ಯಮ ಇಲಾಖೆಗೆ ಸೇರಿದ ಸ್ಥಳಗಳು ಯಾವುವು;

ಆ) ಈ ಸ್ಥಳಗಳ ಅಭಿವೃದ್ಧಿಗೆ ಮತು ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಕಳೆದ 2 ವರ್ಷಗಳಿಂದ ಒದಗಿಸಲಾಗಿರುವ ಅನುದಾನವೆಷ್ಟು;

ಇ) ಈ ಅನುದಾನದಲ್ಲಿ ಎಷ್ಟು ಹಣವನ್ನು ಖರ್ಚು ಮಾಡಿ ಮೂಲಭೂತ ಸೌಕರ್ಯವನ್ನು ಯಾವ ಯಾವ ಪ್ರವಾಸಿ ಸ್ಥಳಗಳಿಗೆ ಒದಗಿಸಿಕೊಡಲಾಗಿದೆ ಹಾಗೂ ಬಾಕಿ ಇರುವ ಅಭಿವೃದ್ಧಿ ಕಾಮಗಾರಿಗಳ ಮತ್ತು ಮೂಲಭೂತ ಸೌಕರ್ಯಗಳ ಬಗ್ಗೆ ಈ 2 ಜಿಲ್ಲೆಗಳ ಸ್ಥಳಗಳ ತಾಲ್ಲೂಕುವಾರು ವಿವರ ನೀಡುವುದು;

**ಈ)** ಉಳಿದ ಕಾಮಗಾರಿಗಳು ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸಲು ತಕ್ಷಣವೇ ಕ್ರಮ ವಹಿಸಲಾಗುವುದೇ? (ವಿವರ ನೀಡುವುದು)

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)**

**ಅ)** ಚಾಮರಾಜನಗರ ಜಿಲ್ಲೆಯಲ್ಲಿ ಭರಚುಕ್ಕಿ, ಬಂಡಿಪುರ, ಹಿಮವದ್ ಗೋಪಾಲಸ್ವಾಮಿ ಬೆಟ್ಟ, ಮಧ್ಯರಂಗ, ಹೊಗೇನಕಲ್ ಜಲಪಾತ, ಗೋಪಿನಾಥಮ್, ಚಿಕ್ಕಲ್ಲೂರು, ಹಜರತ್ ಮರ್ದಾನೆ ಗೈಬ್ ದರ್ಗಾ, ಕನಕಗಿರಿ, ಚಿಕ್ಕಹೊಳೆ ಜಲಾಶಯ, ಕರಿವರದರಾಜಬೆಟ್ಟ, ತೆರಕಣಾಂಬಿ, ಬಿಳಿಗಿರಿ ರಂಗನಬೆಟ್ಟ, ಮಲೆಮಹದೇಶ್ವರ ಬೆಟ್ಟ, ಮುಂತಾದವುಗಳನ್ನು ಪ್ರವಾಸಿ ತಾಣಗಳೆಂದು ಗುರುತಿಸಲಾಗಿದೆ.

ಮೈಸೂರು ಜಿಲ್ಲೆಯಲ್ಲಿ ಮೈಸೂರು, ಚಾಮುಂಡಿಬೆಟ್ಟ, ತಲಕಾಡು, ಸೋಮನಾಥಪುರ, ನಂಜನಗೂಡು, ಕಾರಾಪುರ, ಗೊಮ್ಮಟಗಿರಿ ಮತ್ತು ಬೈಲುಕುಪ್ಪೆ ಗೋಲ್ಡನ್ ಟೆಂಪಲ್, ಚಿಕ್ಕದೇವಮ್ಮನ ಬೆಟ್ಟ, ಚುಂಚನಕಟ್ಟೆ, ಗದ್ದಿಗೆ, ಮುಂತಾದವುಗಳನ್ನು ಪ್ರವಾಸಿ ಸ್ಥಳಗಳಾಗಿ ಗುರುತಿಸಲಾಗಿದೆ.

**ಆ)** ಕಳೆದ 2 ವರ್ಷಗಳಲ್ಲಿ ಒದಗಿಸಲಾಗಿರುವ ಅನುದಾನ:

**(ರೂ.ಲಕ್ಷಗಳಲ್ಲಿ)**

| **ಜಿಲ್ಲೆಯ ಹೆಸರು** | **ಕೇಂದ್ರ** | | **ರಾಜ್ಯ** | |
|---|---|---|---|---|
| | **ಮಂಜೂರಾದ ಅನುದಾನದ** | **ಬಿಡುಗಡೆ ಮಾಡಲಾದ ಅನುದಾನ** | **ಮಂಜೂರಾದ ಅನುದಾನದ** | **ಬಿಡುಗಡೆ ಮಾಡಲಾದ ಅನುದಾನ** |
| ಚಾಮರಾಜನಗರ | 431.85 | 140.00 | 971.14 | 821.48 |
| ಮೈಸೂರು | 3945.00 | 789.00 | 1143.97 | 626.08 |

**ಇ)** ಈ ಎರಡೂ ಜಿಲ್ಲೆಗಳಲ್ಲಿ ಕೈಗೆತ್ತಿಕೊಂಡಿರುವ ಕಾಮಗಾರಿಗಳ ವಿವರವನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

**ಈ)** ಉಳಿದ ಕಾಮಗಾರಿಗಳನ್ನು ಅನುದಾನ ಹಾಗೂ ನಿವೇಶನಗಳ ಲಭ್ಯತೆಯನ್ನಾಧರಿಸಿ ಅನುಷ್ಠಾನಗೊಳಿಸಲು ಕ್ರಮವಹಿಸಲಾಗುವುದು.

## ಅನುಬಂಧ

### ಚಾಮರಾಜನಗರ ಹಾಗೂ ಮೈಸೂರು ಜಿಲ್ಲೆಗಳಲ್ಲಿ ಕೈಗೆತ್ತಿಕೊಂಡಿರುವ ಕಾಮಗಾರಿಗಳ ವಿವರ

(ರೂ. ಲಕ್ಷಗಳಲ್ಲಿ)

| ಕ್ರ.ಸಂ. | ಯೋಜನೆಯ ಹೆಸರು | ಯೋಜನೆಯ ಅಂದಾಜು ಮೊತ್ತ | ಬಿಡುಗಡೆ ಮಾಡಿದ ಅನುದಾನ | ಷರಾ |
|---|---|---|---|---|
| | ಚಾಮರಾಜನಗರ ಜಿಲ್ಲೆ | | | |
| 1. | ಚಾಮರಾಜನಗರ ಜಿಲ್ಲೆಯ ಮಲೆ ಮಹದೇಶ್ವರ ಬೆಟ್ಟದಲ್ಲಿ ಯಾತ್ರಿನಿವಾಸ ನಿರ್ಮಾಣ. | 100.00 | 100.00 | ಕಾಮಗಾರಿ ಅಂತಿಮ ಹಂತದಲ್ಲಿದೆ. |
| 2. | ಚಾಮರಾಜನಗರ ಜಿಲ್ಲೆ, ಯಳಂದೂರು ತಾಲ್ಲೂಕಿನ ಬಿಳಿಗಿರಿ ರಂಗನ ಬೆಟ್ಟದ ಪ್ರದೇಶದಲ್ಲಿ ಪ್ರವಾಸಿ ಸೌಲಭ್ಯ | 100.00 | 100.00 | ಕಾಮಗಾರಿ ಅಂತಿಮ ಹಂತದಲ್ಲಿದೆ. |
| 3. | ಚಾಮರಾಜನಗರ ಜಿಲ್ಲೆಯ, ಹೊಗೇನಕಲ್ ಜಲಪಾತದಲ್ಲಿ ಪ್ರವಾಸಿ ಸೌಲಭ್ಯ ಅಭಿವೃದ್ಧಿ. | 100.89 | 100.89 | ಕಾಮಗಾರಿ ಅಂತಿಮ ಹಂತದಲ್ಲಿದೆ. |
| 4. | ಚಾಮರಾಜನಗರ ಜಿಲ್ಲೆಯ ಕರಿವರದರಾಜ ಬೆಟ್ಟದಲ್ಲಿ ಪ್ರವಾಸಿ ಸೌಲಭ್ಯ ಅಭಿವೃದ್ಧಿಪಡಿಸುವ ಬಗ್ಗೆ. | 30.00 | 30.00 | ಕಾಮಗಾರಿ ಪೂರ್ಣಗೊಂಡಿದೆ. |
| 5. | ಚಾಮರಾಜನಗರ ಜಿಲ್ಲೆ, ಕೊಳ್ಳೇಗಾಲ ತಾ। ಶಿವನಸಮುದ್ರದ ಮಧ್ಯರಂಗ ದೇವಾಲಯದ ಬಳಿ ಯಾತ್ರಿನಿವಾಸ ನಿರ್ಮಾಣ. | 50.00 | 50.00 | ಕಾಮಗಾರಿ ಅಂತಿಮ ಹಂತದಲ್ಲಿದೆ. |
| 6. | ಚಾಮರಾಜನಗರ ಜಿಲ್ಲೆ, ಕೊಳ್ಳೆಗಾಲ ತಾಲ್ಲೂಕಿನ ಸಿದ್ಧಪ್ಪಾಜಿ ಕ್ಷೇತ್ರದ ಬಳಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ. | 50.00 | 50.00 | ಕಾಮಗಾರಿ ಪ್ರಗತಿಯಲ್ಲಿದೆ. |
| 7. | ಚಾಮರಾಜನಗರ ಬಸ್ ನಿಲ್ದಾಣದಿಂದ ಬಿಳಿಗಿರಿ ರಂಗನ ಬೆಟ್ಟಕ್ಕೆ ಸೇರುವ ರಸ್ತೆಯ ಅಭಿವೃದ್ಧಿ ಕಾಮಗಾರಿ | 211.00 | 211.00 | ಕಾಮಗಾರಿ ಪೂರ್ಣಗೊಂಡಿದೆ. |
| 8. | ಚಾಮರಾಜನಗರ ಜಿಲ್ಲೆ, ಗೋಪಿನಾಥಮ್ ಪ್ರದೇಶದಲ್ಲಿ ಜಂಗಲ್ ಕ್ಯಾಂಪ್ಸ್ ಅಭಿವೃದ್ಧಿ | 104.43 | 104.43 | ಕಾಮಗಾರಿ ಪೂರ್ಣಗೊಂಡಿದೆ. |
| 9. | ಚಾಮರಾಜನಗರ ಜಿಲ್ಲೆ, ಕಸಬಾ . ಹೋಬಳಿ, ಮಲೆಯೂರು ಗ್ರಾಮದಲ್ಲಿರುವ ಕನಕಗಿರಿ ಕ್ಷೇತ್ರದಲ್ಲಿ ಯಾತ್ರಿನಿವಾಸ ನಿರ್ಮಾಣ | 150.00 | 25.00 | ಕಾಮಗಾರಿ ಪ್ರಾರಂಭಿಸಬೇಕಿದೆ. |
| 10. | ಕೊಳ್ಳೆಗಾಲ ತಾಲ್ಲೂಕಿನ ಭರಚುಕ್ಕಿ ಹಾಗೂ ಮಹದೇಶ್ವರಬೆಟ್ಟಗಳಲ್ಲಿ ಶೌಚಾಲಯ | 45.00 | 28.00 | ಕಾಮಗಾರಿ ಪ್ರಗತಿಯಲ್ಲಿದೆ. |
| 11. | ಶಿವನಸಮುದ್ರದ ಬಳಿ ಇರುವ ಹಜರತ್ ದರ್ಗಾ ಬಳಿ ಶೌಚಾಲಯ | 15.32 | 7.66 | ಕಾಮಗಾರಿ ಪ್ರಗತಿಯಲ್ಲಿದೆ. |
| 12. | ಗುಂಡ್ಲುಪೇಟೆ ತಾಲ್ಲೂಕು, ಹುಲುಗನಮರಡಿ ಬಳಿ ಶೌಚಾಲಯ | 14.50 | 14.50 | ಕಾಮಗಾರಿ ಪೂರ್ಣಗೊಂಡಿದೆ. |
| | ಒಟ್ಟು | 971.14 | 821.48 | |
| | ಕೇಂದ್ರದ ಯೋಜನೆಗಳು | | | |
| 13. | ಚಾಮರಾಜನಗರ ಜಿಲ್ಲೆಗೆ ಸೇರಿದ ಭರಚುಕ್ಕಿ ಪ್ರದೇಶವನ್ನು ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸುವ ಯೋಜನೆ | 431.85 | 140.00 | ಕಾಮಗಾರಿ ಪ್ರಗತಿಯಲ್ಲಿದೆ. |
| | ಗ್ರ್ಯಾಂಡ್ ಟೋಟಲ್ | 1402.99 | 961.48 | |

| ಕ್ರ. ಸಂ. | ಯೋಜನೆಯ ಹೆಸರು | ಯೋಜನೆಯ ಅಂದಾಜು ಮೊತ್ತ | ಬಿಡುಗಡೆ ಮಾಡಿದ ಅನುದಾನ | ಷರಾ |
|---|---|---|---|---|
| | **ಮೈಸೂರು ಜಿಲ್ಲೆ** | | | |
| 1. | ಮೈಸೂರಿನಲ್ಲಿ ಇಲಾಖೆಯ ಕಛೇರಿ ಕಟ್ಟಡ ನಿರ್ಮಾಣ. | 499.89 | 176.00 | ಕಾಮಗಾರಿ ಪ್ರಗತಿಯಲ್ಲಿದೆ |
| 2. | ಮೈಸೂರು ಜಿಲ್ಲೆಯ ಜಯ ಚಾಮರಾಜೇಂದ್ರ ಮೃಗಾಲಯದಲ್ಲಿ ಪ್ರವಾಸಿ ಸೌಲಭ್ಯಗಳ ಅಭಿವೃದ್ಧಿ. | 30.00 | 30.00 | ಕಾಮಗಾರಿ ಪೂರ್ಣಗೊಂಡಿದೆ. |
| 3. | ಬೆಂಗಳೂರು-ಮೈಸೂರು-ತಲಕಾಡು ಮಾರ್ಗದಲ್ಲಿ ಸೈನೇಜುಗಳ ಅಳವಡಿಕೆ | 37.83 | 37.83 | ಕಾಮಗಾರಿ ಪೂರ್ಣಗೊಂಡಿದೆ. |
| 4. | ಮೈಸೂರಿನ ಜಯ ಚಾಮರಾಜೇಂದ್ರ ಮೃಗಾಲಯ ಪ್ರದೇಶದಲ್ಲಿ 2 ಹೈಟೆಕ್ ಶೌಚಾಲಯಗಳ ನಿರ್ಮಾಣ | 25.00 | 25.00 | ಕಾಮಗಾರಿ ಪೂರ್ಣಗೊಂಡಿದೆ. |
| 5. | ತಲಕಾಡಿನ ಮುಡುಕುತೊರೆ ಪ್ರದೇಶದಲ್ಲಿ ಯಾತ್ರಿನಿವಾಸ ನಿರ್ಮಾಣ | 98.75 | 98.75 | ಕಾಮಗಾರಿ ಪೂರ್ಣಗೊಂಡಿದೆ. |
| 6. | ಮೈಸೂರಿನ ಚಾಮುಂಡಿ ಬೆಟ್ಟ ಪ್ರದೇಶದಲ್ಲಿ ಹೈಟೆಕ್ ಶೌಚಾಲಯ ನಿರ್ಮಾಣ | 12.50 | 12.50 | ಕಾಮಗಾರಿ ಪೂರ್ಣಗೊಂಡಿದೆ. |
| 7. | ಮೈಸೂರು ನಗರದ ಕುಕ್ಕರಹಳ್ಳಿ ಕೆರೆ ಪ್ರದೇಶವನ್ನು ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸುವ ಯೋಜನೆ | 200.00 | 150.00 | ಕಾಮಗಾರಿ ಪ್ರಗತಿಯಲ್ಲಿದೆ. |
| 8. | ಮೈಸೂರಿನ ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್‌ಗೆ ನೀರಿನ ವ್ಯವಸ್ಥೆ ಒದಗಿಸುವ ಕಾಮಗಾರಿಗೆ ಅನುದಾನ ಬಿಡುಗಡೆ ಮಾಡಿರುವ ಬಗ್ಗೆ. | 10.00 | 10.00 | ಕಾಮಗಾರಿ ಪ್ರಗತಿಯಲ್ಲಿದೆ. |
| 9. | ಮೈಸೂರು ಜಿಲ್ಲೆಯ ಕೆ.ಆರ್.ನಗರ ತಾಲ್ಲೂಕಿನ ಶ್ರೀ ಕೋದಂಡರಾಮ ದೇವಾಲಯದ ಬಳಿ ಮೂಲಭೂತ ಸೌಲಭ್ಯಗಳ ಅಭಿವೃದ್ಧಿ | 30.00 | 10.00 | ಕಾಮಗಾರಿ ಪ್ರಗತಿಯಲ್ಲಿದೆ. |
| 10. | ಮೈಸೂರು ಜಿಲ್ಲೆಯ ಕೆ.ಆರ್. ನಗರ ತಾಲ್ಲೂಕಿನ ಶ್ರೀ ಅರ್ಕೇಶ್ವರ ದೇವಾಲಯದ ಬಳಿ ಮೂಲಭೂತ ಸೌಲಭ್ಯಗಳ ಅಭಿವೃದ್ಧಿ | 31.00 | 31.00 | ಕಾಮಗಾರಿ ಅಂತಿಮ ಹಂತದಲ್ಲಿದೆ. |
| 11. | ಮೈಸೂರು ರೈಲು ನಿಲ್ದಾಣದಲ್ಲಿ ಪ್ರವಾಸಿ ಮಾಹಿತಿ ಕೇಂದ್ರ ತೆರೆಯುವ ಬಗ್ಗೆ. | 10.00 | 10.00 | ಕಾಮಗಾರಿ ಪೂರ್ಣಗೊಂಡಿದೆ. |
| 12. | ಮೈಸೂರು ಜಿಲ್ಲೆ, ಹೆಚ್.ಡಿ.ಕೋಟೆ ತಾಲ್ಲೂಕು, ಸರಗೂರು ಹೋಬಳಿ, ಕುಂದೂರು ಗ್ರಾಮದ ಚಿಕ್ಕದೇವಮ್ಮ ಬೆಟ್ಟದಲ್ಲಿ ಡಾರ್ಮಿಟರಿ ಹಾಗೂ ಇತರೆ ಮೂಲಭೂತ ಸೌಲಭ್ಯಗಳನ್ನು ನಿರ್ಮಿಸುವ ಬಗ್ಗೆ. | 159.00 | 35.00 | ಕಾಮಗಾರಿ ಪ್ರಾರಂಭಿಸಲಾಗಿದೆ. |
| | **ಒಟ್ಟು** | **1143.97** | **626.08** | |
| | **ಕೇಂದ್ರದ ಯೋಜನೆಗಳು** | | | |
| 13. | ಮೈಸೂರು ನಗರದ ಅಂಬಾವಿಲಾಸ ಅರಮನೆಯ ಸುತ್ತ ಇರುವ ಹೆರಿಟೇಜ್ ಕೋರ್ ಪ್ರದೇಶದಲ್ಲಿ ಹೆರಿಟೇಜ್ ರಸ್ತೆ, ಕಾಲುಪಥ, ಶೌಚಾಲಯ, ಮಾಹಿತಿ ಕೇಂದ್ರ, ಆಸನಗಳ ವ್ಯವಸ್ಥೆ, ಸೈನೇಜಸ್, ಫುಡ್ ಕಿಯಾಸ್ಕ್, ಬ್ಯಾರಿಕೇಡಿಂಗ್, ಲ್ಯಾಂಡ್‌ಸ್ಕೇಪಿಂಗ್, ಮುಂತಾದ ಸೌಲಭ್ಯಗಳ ಅಭಿವೃದ್ಧಿ | 3945.00 | 789.00 | ಕಾಮಗಾರಿ ಪ್ರಗತಿಯಲ್ಲಿದೆ. |
| | **ಗ್ರ್ಯಾಂಡ್ ಟೋಟಲ್** | **5088.97** | **1415.08** | |

## 108 ಆರೋಗ್ಯ ಕವಚ ಯೋಜನೆಯಡಿ ಆಂಬ್ಯುಲೆನ್ಸ್ ನೀಡುವ ಬಗ್ಗೆ

## 352; ಶ್ರೀ ಎಸ್. ನಾಗರಾಜು (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಅ) 108 ಆರೋಗ್ಯ ಕವಚ ಯೋಜನೆಯಡಿ ಆಂಬುಲೆನ್ಸ್‌ಗಳನ್ನು ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಗಳ ಪ್ರತಿ ತಾಲ್ಲೂಕಿನಾದ್ಯಂತ ಎಷ್ಟು ಆಸ್ಪತ್ರೆಗಳಿಗೆ ಒದಗಿಸಲಾಗಿದೆ;

ಆ) ತಾಲ್ಲೂಕಿನ ಮತ್ತು ಹೋಬಳಿಯ ಕೇಂದ್ರ ಸ್ಥಳದಿಂದ ಹಳ್ಳಿಗಳು ತುಂಬಾ ದೂರವಿದ್ದು ಹಾಗೂ ರಸ್ತೆಗಳು ಸರಿಯಿಲ್ಲದಿರುವುದರಿಂದ, ಸಮಯಕ್ಕೆ ಸರಿಯಾಗಿ ಆಂಬುಲೆನ್ಸ್ ಬಾರದೆ ಹಳ್ಳಿಗಳ ರೋಗಿಗಳು ಸಾವನ್ನಪ್ಪುತ್ತಿರುವ ಹಿನ್ನೆಲೆಯಲ್ಲಿ ಪ್ರತಿ 3 ಅಥವಾ 4 ಆರೋಗ್ಯ ಕೇಂದ್ರಗಳನ್ನು ಅಥವಾ ಆರೋಗ್ಯ ಘಟಕಗಳನ್ನು ಸೇರಿಸಿ ಒಂದು ಆಂಬುಲೆಲ್ಸ್ ನೀಡಲಾಗುವುದೇ;

ಇ) ಹಾಗಿದ್ದಲ್ಲಿ ಯಾವಾಗಿನಿಂದ ಈ ಆರೋಗ್ಯ ಕೇಂದ್ರಗಳಿಗೆ ಆಂಬುಲೆನ್ಸ್ ನೀಡಲಾಗುವುದು ಎಂಬುದರ ಬಗ್ಗೆ ಸರ್ಕಾರ ಖಚಿತವಾದ ಭರವಸೆ ನೀಡಲಾಗುವುದು?

### ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)

ಅ) ಆರೋಗ್ಯ ಕವಚ ಯೋಜನೆಯಡಿ ಚಾಮರಾಜನಗರ ಜಿಲ್ಲೆಯಲ್ಲಿ ಒಟ್ಟು 9 ಆಂಬ್ಯುಲೆನ್ಸ್‌ಗಳು ಹಾಗೂ ಮೈಸೂರು ಜಿಲ್ಲೆಯಲ್ಲಿ ಒಟ್ಟು 26 ಆಂಬ್ಯುಲೆನ್ಸ್‌ಗಳನ್ನು ಒದಗಿಸಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಆರೋಗ್ಯ ಕವಚ "108" ಯೋಜನೆಯಡಿಯಲ್ಲಿ ಒಂದು ಲಕ್ಷದಿಂದ ಒಂದು ಲಕ್ಷದ ಹತ್ತು ಸಾವಿರ ಜನಸಂಖ್ಯೆಗೆ ಒಂದು ಆಂಬ್ಯುಲೆನ್ಸ್‌ನಂತೆ ಎಲ್ಲಾ ಜಿಲ್ಲೆಗಳಿಗೆ ಜಿಲ್ಲೆಯ ಜನಸಂಖ್ಯಾ ಅನುಗುಣವಾಗಿ ಆಂಬ್ಯುಲೆನ್ಸ್ ಸೌಲಭ್ಯ ಒದಗಿಸಲಾಗಿದೆ. ತಾಲ್ಲೂಕುಗಳಿಗೆ ಒದಗಿಸಲಾಗಿರುವ ಪ್ರತಿ ಆಂಬ್ಯುಲೆನ್ಸ್ ತನ್ನ ಕಾರ್ಯ ವ್ಯಾಪ್ತಿಗೆ ಒಳಪಟ್ಟ ಎಲ್ಲಾ ಸ್ಥಳಗಳಿಗೆ ಗರಿಷ್ಠ

30 ನಿಮಿಷಗಳ ಒಳಗೆ ತಲುಪುವ ರೀತಿ ಏರ್ಪಾಡು ಮಾಡಲಾಗಿದೆ. ಚಾಮರಾಜನಗರ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಸುಮಾರು 25 ನಿಮಿಷಗಳಿಂದ 31 ನಿಮಿಷಗಳ ಸರಾಸರಿ ಗರಿಷ್ಠ ಅವಧಿಯಲ್ಲಿ ಈ ಯೋಜನೆಯಡಿ ಅಂಬ್ಯಲೆನ್ಸ್ ಸೇವೆಯನ್ನು ನೀಡಲಾಗುತ್ತಿದೆ. ಪಟ್ಟಣ ಪ್ರದೇಶಗಳಲ್ಲಿ ಸದರಿ ಗರಿಷ್ಠ ಸರಾಸರಿ ಅವಧಿಯು 14 ನಿಮಿಷಗಳಿಂದ 20 ನಿಮಿಷಗಳಾಗಿವೆ. ಅದೇ ರೀತಿ ಮೈಸೂರು ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲು ಸಹ ಆಂಬ್ಯುಲೆನ್ಸ್ ಸೇವೆಯನ್ನು ಸರಾಸರಿ 26 ನಿಮಿಷಗಳಿಂದ 32 ನಿಮಿಷಗಳ ಅವಧಿಯೊಳಗೆ ಹಾಗೂ ಪಟ್ಟಣ ಪ್ರದೇಶಗಳಲ್ಲಿ 13 ನಿಮಿಷಗಳಿಂದ 20 ನಿಮಿಷಗಳಲ್ಲಿ ನೀಡಲಾಗುತ್ತಿದೆ. ಸೂಕ್ತ ಸಮಯದಲ್ಲಿ ಆಂಬ್ಯುಲೆನ್ಸ್ ಬಾರದಿದ್ದ ಕಾರಣ ರೋಗಿಗಳು ಸಾವನಪ್ಪುತ್ತಿರುವ ಕುರಿತಂತೆ ದೂರುಗಳು ವರದಿಯಾಗಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

<u>ಅನುಬಂಧ</u>

ಆರೋಗ್ಯ ಕವಚ ಯೋಜನೆಯಡಿ ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಗಳಲ್ಲಿ ಪ್ರತಿ ತಾಲ್ಲೂಕಿನಾದ್ಯಂತ ಒದಗಿಸಿರುವ ಅಂಬ್ಯುಲೆನ್ಸ್‌ಗಳ ವಿವರಗಳು.

**ಚಾಮರಾಜನಗರ:-**

| | ತಾಲ್ಲೂಕು | ನಿಲುಗಡೆ ಸ್ಥಳ |
|---|---|---|
| 1 | ಚಾಮರಾಜನಗರ | ಜಿಲ್ಲಾ ಆಸ್ಪತ್ರೆ |
| 2 | ಯಳಂದೂರು | ತಾಲ್ಲೂಕು ಆಸ್ಪತ್ರೆ |
| 3 | ಗುಂಡ್ಲುಪೇಟೆ | ತಾಲ್ಲೂಕು ಆಸ್ಪತ್ರೆ |
| 4 | ಕೊಳ್ಳೆಗಾಲ | ತಾಲ್ಲೂಕು ಆಸ್ಪತ್ರೆ |
| 5 | ಕೊಳ್ಳೆಗಾಲ | ಪಿ.ಹೆಚ್.ಸಿ. ಹನೂರು |
| 6 | ಗುಂಡ್ಲುಪೇಟೆ | ಬೇಗೂರು ಸಿ.ಹೆಚ್.ಸಿ |
| 7 | ಗುಂಡ್ಲುಪೇಟೆ | ಕಬ್ಬಳ್ಳಿ ಸಿ.ಹೆಚ್.ಸಿ |
| 8 | ಕೊಳ್ಳೆಗಾಲ | ಕೌದಳ್ಳಿ ಪಿ.ಹೆಚ್.ಸಿ |
| 9 | ಚಾಮರಾಜನಗರ | ಅರಕವಾಡಿ ಪಿ.ಹೆಚ್.ಸಿ |

**ಮೈಸೂರು:-**

| | ತಾಲ್ಲೂಕು | ನಿಲುಗಡೆ ಸ್ಥಳ |
|---|---|---|
| 1 | ಹೆಗ್ಗಡದೇವನಕೋಟೆ | ಸಾರ್ವಜನಿಕ ಆಸ್ಪತ್ರೆ |
| 2 | ಮೈಸೂರು | ಕುವೆಂಪುನಗರ, ಅಶೋಕಪುರ ಪೋಲೀಸ್ ಠಾಣೆ |
| 3 | ಮೈಸೂರು | ವಿಜಯನಗರ, ಚಂದ್ರಕಲಾ ಆಸ್ಪತ್ರೆ |
| 4 | ಮೈಸೂರು | ಉದಯಗಿರಿ, ಕ್ಯಾತಮಾರನಹಳ್ಳಿ ಸರ್ಕಾರಿ ಆಸ್ಪತ್ರೆ |
| 5 | ಮೈಸೂರು | ಎಸ್.ಎಂ.ಟಿ. ಆಸ್ಪತ್ರೆ ಕೃಷ್ಣಮೂರ್ತಿಪುರಂ |
| 6 | ಹುಣಸೂರು | ಸಾರ್ವಜನಿಕ ಆಸ್ಪತ್ರೆ |
| 7 | ಕೃಷ್ಣರಾಜನಗರ | ಸಾರ್ವಜನಿಕ ಆಸ್ಪತ್ರೆ |
| 8 | ಮೈಸೂರು | ಕೆ.ಆರ್. ಆಸ್ಪತ್ರೆ |
| 9 | ನಂಜನಗೂಡು | ಸಾರ್ವಜನಿಕ ಆಸ್ಪತ್ರೆ |
| 10 | ಟಿ. ನರಸೀಪುರ | ಸಾರ್ವಜನಿಕ ಆಸ್ಪತ್ರೆ |
| 11 | ಪಿರಿಯಾಪಟ್ಟಣ | ಸಾರ್ವಜನಿಕ ಆಸ್ಪತ್ರೆ |
| 12 | ಟಿ. ನರಸೀಪುರ | ಮೂಗೂರು ಪಿ.ಹೆಚ್.ಸಿ |
| 13 | ಕೃಷ್ಣರಾಜನಗರ | ಸಾಲಿಗ್ರಾಮ ಸಿ.ಹೆಚ್.ಸಿ |
| 14 | ಮೈಸೂರು | ಜಯಪುರ ಪಿ.ಹೆಚ್.ಸಿ |
| 15 | ಹೆಗ್ಗಡದೇವನಕೋಟೆ | ಬಿ. ಮತಕೆರೆ ಪಿ.ಹೆಚ್.ಸಿ |
| 16 | ಹೆಗ್ಗಡದೇವನಕೋಟೆ | ಪಿ.ಹೆಚ್.ಸಿ ಸರಗೂರು |
| 17 | ಪಿರಿಯಾಪಟ್ಟಣ | ಪಿ.ಹೆಚ್.ಸಿ. ಬೆಟ್ಟದಪುರ |
| 18 | ಹುಣಸೂರು | ಹನಗೂಡು ಪಿ.ಹೆಚ್.ಸಿ |
| 19 | ನಂಜನಗೂಡು | ತಗಡೂರು ಪಿ.ಹೆಚ್.ಸಿ |
| 20 | ಟಿ. ನರಸೀಪುರ | ಬನ್ನೂರು ಸಿ.ಹೆಚ್.ಸಿ |
| 21 | ನಂಜನಗೂಡು | ಹುಳ್ಳಳ್ಳಿ ಪಿ.ಹೆಚ್.ಸಿ |
| 22 | ಟಿ. ನರಸೀಪುರ | ಸಿ.ಹೆಚ್.ಸಿ. ತಲಕಾಡು |
| 23 | ನಂಜನಗೂಡು | ಯಡಿಯಾಳ ಪಿ.ಹೆಚ್.ಸಿ |
| 24 | ಹೆಗ್ಗಡದೇವನಕೋಟೆ | ಗಿರಿಜನ ಸಂಚಾರಿ ಆಸ್ಪತ್ರೆ |
| 25 | ಕೃಷ್ಣರಾಜನಗರ | ಹನಸೋಗೆ ಪಿ.ಹೆಚ್.ಸಿ |
| 26 | ಪಿರಿಯಾಪಟ್ಟಣ | ರವದೂರ ಪಿ.ಹೆಚ್.ಸಿ |

ಶ್ರೀ ಧ್ರುವನಾರಾಯಣ್ ಆರ್. ಮಾಂಡಲಿಕ ನಿಲಯಾಬಾದ್

**3. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯ.**

ಬೆಂಗಳೂರು ಮಹಾನಗರದ ಸಾರ್ವಜನಿಕರ ಸೇವೆಗೆ ಮೀಸಲಾಗಿಟ್ಟಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಂಬುಲೆನ್ಸ್‌ಗಳು ದುಸ್ಥಿತಿಯಲ್ಲಿರುವ ಹಾಗೂ ರಾಜ್ಯದ ವಿವಿದೆಡೆ 108 ಆರೋಗ್ಯ ಸೇವೆ ಅಂಬುಲೆನ್ಸ್‌ಗಳು ಸಾಕಷ್ಟಿಲ್ಲದೇ ಸಾರ್ವಜನಿಕರಿಗೆ ತೊಂದರೆ ಆಗಿರುವ ಬಗ್ಗೆ

**ಶ್ರೀ ಆರ್.ವಿ. ವೆಂಕಟೇಶ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಗಳೇ, ಬೆಂಗಳೂರು ಮಹಾ ನಗರದ ಸಾರ್ವಜನಿಕರ ಸೇವೆಗೆ ಮೀಸಲಾಗಿಟ್ಟಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಂಬುಲೆನ್ಸ್‌ಗಳು ಸಾಕಷ್ಟಿಲ್ಲದೇ ಸಾರ್ವಜನಿಕರಿಗೆ ತೊಂದರೆ ಆಗಿರುವ ಬಗ್ಗೆ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುತ್ತೇನೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು, ಬೆಂಗಳೂರು ನಾಗರಿಕರ ಸೇವೆಗೆ ಕೇವಲ 14 ಅಂಬುಲೆನ್ಸ್‌ಗಳನ್ನು ಹೊಂದಿರುತ್ತದೆ. ಇವುಗಳ ಪೈಕಿ 8 ಮಾತ್ರ ಸುಸ್ಥಿತಿಯಲ್ಲಿದ್ದು, ಮಿಕ್ಕುಳಿದ ಅಂಬುಲೆನ್ಸ್‌ಗಳ ಸ್ಥಿತಿಯು ಬಹಳ ಚಿಂತಾಜನಕವಾಗಿದೆ ಎಂದು ವರದಿ ಆಗಿದೆ. ಸುಮಾರು 80 ಲಕ್ಷ ಜನಸಂಖ್ಯೆಯಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಕೇವಲ ಬಿ.ಬಿಎಂ.ಪಿಯಿಂದ 14 ಅಂಬುಲೆನ್ಸ್‌ಗಳು ಇದ್ದು, ಅವು ದುಸ್ಥಿತಿಯಲ್ಲಿರುವುದು ದುರಾದೃಷ್ಟಕರ. ಆದ್ದರಿಂದ ನಾನು ಬೃಹತ್ ಬೆಂಗಳೂರು ಮಹಾನಗರದಲ್ಲಿ ಜನಸಂಖ್ಯೆಯು ಹೆಚ್ಚಾಗಿರುವ ಕಾರಣ ಹಾಗೂ ಸಂಚಾರ ದಟ್ಟಣೆ ಇರುವುದರಿಂದ ನಾಗರಿಕರಿಗೆ ಅಂಬುಲೆನ್ಸ್‌ಗಳು ತಕ್ಕ ಸಮಯಕ್ಕೆ ತಲುಪಲು ಸಮಯವು ತೆಗೆದುಕೊಳ್ಳುವುದರಿಂದ ಪಾಲಿಕೆಗೆ ಹಂತ ಹಂತವಾಗಿ ಇವುಗಳ ಸಂಖ್ಯೆ ಹೆಚ್ಚಿಸಿ ಕನಿಷ್ಠ ಎರಡು ವಾರ್ಡ್‌ಗಳಿಗೆ ಎರಡು ಅಂಬುಲೆನ್ಸ್‌ನ್ನು ಕಾಯ್ದಿರಿಸಬೇಕಾಗಿರುತ್ತದೆ.

ಇದೇ ರೀತಿ ಬೆಂಗಳೂರು, ಇತರೆ ನಗರ ಪಟ್ಟಣಗಳು ಹಾಗೂ ರಾಜ್ಯದ ಸಾವಿರಾರು ಹಳ್ಳಿಗಳಿಗೆ ಆರೋಗ್ಯ ಕವಚ 108 ಯೋಜನೆಯಡಿ ಕೇವಲ 518 ಅಂಬುಲೆನ್ಸ್‌ಗಳು ಇರುವುದಾಗಿ ಹಾಗೂ ಅವುಗಳಿಗೆ ಸಾಕಷ್ಟು ಸಂಖ್ಯೆಯ ಸಿಬ್ಬಂದಿಗಳಿಲ್ಲದಿರುವುದು ವರದಿಯಾಗಿದೆ. ಅನೇಕ ಸಂದರ್ಭಗಳಲ್ಲಿ 108 ಆಂಬುಲೆನ್ಸ್‌ಗಳ ಸಂಖ್ಯೆಯ ಕೊರತೆ, ಸಿಬ್ಬಂದಿ ಕೊರತೆಯಿಂದ ತುರ್ತು ಕರೆಯ ವೇಳೆ ಸಮಯಕ್ಕೆ ಸರಿಯಾಗಿ ರೋಗಿಗಳನ್ನು ಆಸ್ಪತ್ರೆಗಳಿಗೆ ರವಾನಿಸಲು ವಿಫಲವಾಗಿ ಕೆಲವೊಂದು ರೋಗಿಗಳು ಮೃತಪಟ್ಟಿರುವುದು ವರದಿಯಾಗಿದೆ. ಇದಲ್ಲದೇ ಬಹುತೇಕ ಸಿಬ್ಬಂದಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿದ್ದು ಅವರು ಜವಾಬ್ದಾರಿಯಿಂದ ಸ್ಪಂದಿಸದೇ ಕೆಲವೊಮ್ಮೆ ರೋಗಿಗಳು ಮೃತಪಟ್ಟಿರುವುದು ವರದಿಯಾಗಿದೆ. ಆದ್ದರಿಂದ ಸರ್ಕಾರವು ಕೂಡಲೇ ಅಂಬುಲೆನ್ಸ್‌ಗಳ ಸಂಖ್ಯೆಯನ್ನು ಹೆಚ್ಚಿಸಿ, ಹಳ್ಳಿಗಳ ಬಡಜನಗಳಿಗೆ ತುರ್ತು ಪರಿಸ್ಥಿತಿಯಲ್ಲಿ ಈ ವಾಹನಗಳು ಲಭ್ಯವಾಗುವಂತೆ ಹಾಗೂ ಈ ಅಂಬುಲೆನ್ಸ್‌ಗಳು ಸರಿಯಾದ ರೀತಿಯಲ್ಲಿ ನಿರ್ವಹಿಸಲು ಖಾಯಂ ಚಾಲಕ ಹಾಗೂ ಸಿಬ್ಬಂದಿಗಳನ್ನು ನೇಮಕ ಮಾಡಲು ಒತ್ತಾಯಿಸುತ್ತೇನೆ.

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಗಳೇ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ 6 ರೆಫರಲ್ ಆಸ್ಪತ್ರೆಗಳು ಮತ್ತು 64 ಆರೋಗ್ಯ ಕೇಂದ್ರಗಳು ಕುಟುಂಬ ಕಲ್ಯಾಣ ಕೇಂದ್ರಗಳು ಮತ್ತು ಔಷಧಾಲಯಗಳು ಸೇರಿ 94 ಆಸ್ಪತ್ರೆಗಳು ಬೆಂಗಳೂರಿನಲ್ಲಿ ಅಸ್ತಿತ್ವದಲ್ಲಿವೆ. ಪಾಲಿಕೆಯ ವತಿಯಿಂದ ಆರೋಗ್ಯ ಸೇವೆಯನ್ನು ಒದಗಿಸಲು ಒಟ್ಟು 29 ಅಂಬುಲೆನ್ಸ್‌ಗಳನ್ನು ಈಗಾಗಲೇ ಬಳಸಿಕೊಳ್ಳಲಾಗುತ್ತಿದೆ. ಒಂದು ಅಂಬುಲೆನ್ಸ್ ದುರಸ್ಥಿಯಲ್ಲಿದೆ. ಇನ್ನುಳಿದ 19 ಅಂಬುಲೆನ್ಸ್‌ಗಳು ಸುಸ್ಥಿತಿಯಲ್ಲಿದ್ದು ಅದರ ಸೇವೆಯನ್ನು ಜನರಿಗೆ ಒದಗಿಸಲಾಗುತ್ತಿದೆ. ಇದರ ಜೊತೆಗೆ ಆರೋಗ್ಯ ಕವಚ ಯೋಜನೆಯಡಿ 108 ಅಂಬುಲೆನ್ಸ್ ಸೇವೆಯನ್ನು ಪಾಲಿಕೆ ವ್ಯಾಪ್ತಿಯಿಂದ 58 ಅಂಬುಲೆನ್ಸ್‌ಗಳನ್ನು ಸಾರ್ವಜನಿಕರ ಸಲುವಾಗಿ ಬಳಕೆ ಮಾಡಲಾಗುತ್ತಿದೆ. ಇನ್ನು ಹೆಚ್ಚಿನ ತುರ್ತು ಸೇವೆಯನ್ನು ಪಾಲಿಕೆಯ ವ್ಯಾಪ್ತಿಯಿಂದ ಒದಗಿಸುವ ದೃಷ್ಟಿಯಿಂದ ಮುಂದಿನ ದಿವಸಗಳಲ್ಲಿ ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ಅಂಬುಲೆನ್ಸ್‌ಗಳನ್ನು ಒದಗಿಸಲು ಪ್ರಯತ್ನವನ್ನು ಮಾಡಲಾಗುವುದು.

108 ಆರೋಗ್ಯ ಕವಚ ಯೋಜನೆಯಡಿಯಲ್ಲಿ ಸಿಬ್ಬಂದಿ ನೇಮಕಾತಿ ಬಾಕಿಯಿರುವ ಬಗ್ಗೆ ಹೇಳಿದರು. ಅದನ್ನು GVK-EMRI (Emergency Management and Research Institute) ಸಹಭಾಗಿತ್ವದಲ್ಲಿ ನವೆಂಬರ್ 8 ರಿಂದ ಈ ಒಂದು ತುರ್ತು ಸೇವೆಯನ್ನು ಜಾರಿಗೊಳಿಸುತ್ತಿದ್ದೇವೆ. ಸುಮಾರು 1.1 ಲಕ್ಷ ಜನಸಂಖ್ಯೆಗೆ ಅನುಸಾರವಾಗಿ 517 ಅಂಬುಲೆನ್ಸ್‌ಗಳನ್ನು ರಾಜ್ಯದಲ್ಲಿ ಒದಗಿಸಲಾಗಿದೆ. ಯಾವುದೇ ಅಪಘಾತ ನಡೆದ ಸ್ಥಳಕ್ಕೆ 30 ನಿಮಿಷಗೊಳಗಾಗಿ ಮುಟ್ಟಬೇಕೆನ್ನುವ ಯೋಜನೆಯನ್ನು ಮಾಡಲಾಗಿದೆ. ಸಿಬ್ಬಂದಿ ಕೊರತೆ ಇದ್ದುದರಿಂದ GVK-EMRI ಇವರೇ ನೇಮಕವನ್ನು ಮಾಡಿಕೊಂಡಿರುವ ಕಾರಣ ಈಗ ಸಿಬ್ಬಂದಿಯ ಕೊರತೆ ಇರುವುದಿಲ್ಲ. ಈ ಯೋಜನೆ ಎಲ್ಲಾ ಸಮುದಾಯದವರ ಮೆಚ್ಚುಗೆಯನ್ನು ಪಡೆದುಕೊಂಡಿದ್ದು ಬಹಳ ಒಳ್ಳೆಯ ರೀತಿಯಲ್ಲಿ ನಡೆಯುತ್ತಿದೆ. ಅಂಬುಲೆನ್ಸ್‌ಗಳ ಸಂಖ್ಯೆಯನ್ನು ಹೆಚ್ಚಿಗೆ ಮಾಡುವ ಯಾವುದೇ ಪ್ರಸ್ತಾಪಗಳು ಈಗ ನಮ್ಮ ಸರ್ಕಾರದ ಮುಂದೆ ಇರುವುದಿಲ್ಲ. ಸಿಬ್ಬಂದಿಯನ್ನು GVK-EMRI ಯವರ ನೇಮಕ ಮಾಡಿರುವ ಕಾರಣ ಸರ್ಕಾರದಿಂದ ಖಾಯಂ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುವ ಅಗತ್ಯವಿರುವುದಿಲ್ಲ. ಸಿಬ್ಬಂದಿ ಮತ್ತು ಅಂಬುಲೆನ್ಸ್ ಕಾರಣದಿಂದ ಯಾವುದೇ ರೋಗಿ ಮೃತಪಟ್ಟ ವರದಿ ಕಳೆದ ಮೂರು ವರ್ಷದಲ್ಲಿ ಎಲ್ಲಿಯೂ ವರದಿಯಾಗಿಲ್ಲ. ಕಳೆದ ವರ್ಷದಲ್ಲಿ ರೋಗಿಯೊಬ್ಬರು ಮೃತಪಟ್ಟಿರುವ ಬಗ್ಗೆ ಮಾಧ್ಯಮಗಳು ವರದಿಯನ್ನು ಮಾಡಿದ್ದವು. ಇದರ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ನಡೆಸಲಾಗುವುದು.

## 4. ನಿಯಮ 59ರ ಮೇರೆಗೆ ಪ್ರಸ್ತಾಪಿಸಲು ಅನುಮತಿ ಕೋರಿ ಚರ್ಚೆ ಲೋಕಾಯುಕ್ತರ ನೇಮಕಾತಿ ಬಗ್ಗೆ.

**ಸಭಾಪತಿಯವರು:–** ನಾಣಯ್ಯನವರು ನಿಯಮ 59ರ ಅಡಿಯಲ್ಲಿ ಒಂದು ವಿಚಾರವನ್ನು ಪ್ರಸ್ತಾಪಿಸುವುದಕ್ಕೆ ಅನುಮತಿಯನ್ನು ಕೋರಿದ್ದಾರೆ. ಇದು ಯಾಔ ರೀತಿಯಲ್ಲಿ ನಿಯಮ 59ರ ಅಡಿಯಲ್ಲಿ ಬರುತ್ತದೆ ಎನ್ನುವುದನ್ನು ವಿವರಿಸಬೇಕು.

**ಶ್ರೀ ಯಂ.ಸಿ. ನಾಣಯ್ಯ:- (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಸಂದರ್ಭದಲ್ಲಿ ತಮ್ಮಲ್ಲಿ ಹಾಗೂ ಮಾನ್ಯ ಮುಖ್ಯಮಂತ್ರಿಗಳಲ್ಲಿ ಬಹಳ ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ದಯವಿಟ್ಟು ಯಾವುದೇ ತಾಂತ್ರಿಕವಾಗಿರುವ ವಿಚಾರವನ್ನು ಪ್ರಸ್ತಾಪಿಸಿ ಅಥವಾ ಈ ವಿಚಾರ ನ್ಯಾಯಾಲಯದಲ್ಲಿದೆ ಎನ್ನುವುದನ್ನು ಪರಿಗಣಿಸಿ ರಾಜ್ಯಕ್ಕೆ ಅವಶ್ಯಕವಾಗಿ ಬೇಕಾಗಿರತಕ್ಕ ಲೋಕಾಯುಕ್ತದಂತಹ ಸಂಸ್ಥೆ ಬಗ್ಗೆ ಚರ್ಚೆ ಅವಕಾಶ ಸಿಗದಂತಾಗಬಾರದು. ಈ ವಿಚಾರದ ಬಗ್ಗೆ ರಾಜ್ಯದ ಉದ್ದಗಲಕ್ಕೂ ಇಂದು ಚರ್ಚೆ ನಡೆಯುತ್ತಿದೆ. ಯಾವುದೇ ರಾಜ್ಯ ಸರ್ಕಾರವಾಗಲೀ ಅಥವಾ ಯಾವುದೇ ಕೇಂದ್ರ ಸರ್ಕಾರವಾಗಲೀ, ಯಾರೇ ಮುಖ್ಯಮಂತ್ರಿಗಳಾಗಲೀ ಅಥವಾ ಯಾರೇ ಸರ್ಕಾರ ನಡೆಸುವವರಾದರೂ ಸಹ ಇವತ್ತು ಭ್ರಷ್ಟಾಚಾರ ಎನ್ನುವುದು ರಾಷ್ಟ್ರವ್ಯಾಪ್ತಿಯಾಗಿ ಹಬ್ಬಿದೆ. ಈ ಹಿನ್ನೆಲೆಯಲ್ಲಿ ಇಡೀ ರಾಷ್ಟ್ರವನ್ನು ಭ್ರಷ್ಟಾಚಾರ ಮುಕ್ತರನ್ನಾಗಿ ಮಾಡತಕ್ಕ ವಿಚಾರದ ಬಗ್ಗೆ ನಮ್ಮ ಸಂಸತ್ತಿನಲ್ಲಿ ಬಹಳ ಚರ್ಚೆ ನಡೆದಿರುವ ಬಗ್ಗೆ ಮುಖ್ಯಮಂತ್ರಿಗಳಿಗೂ ಹಾಗೂ ನಮಗೆಲ್ಲರಿಗೂ ಸಹ ತಿಳಿದಿದೆ. ನಾನಿಲ್ಲಿ ಯಾರ ಪರವಾಗಿಯೂ ಇಲ್ಲ ಅಥವಾ ಯಾರ ವಿರೋಧವಾಗಿಯೂ ಇಲ್ಲ. ನಮ್ಮ ರಾಷ್ಟ್ರದಲ್ಲಿ ಭ್ರಷ್ಟಾಚಾರ ಬಹಳ ನೇರವಾಗಿದೆ ಎನ್ನುವ ವಿಚಾರ ಎಲ್ಲರಿಗೂ ಸಹ ತಿಳಿದಿದೆ. ಅದನ್ನು ಮಾನ್ಯ ಮುಖ್ಯಮಂತ್ರಿಗಳು ಸಹ ಒಪ್ಪಿಕೊಂಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ತಾವು ಮುಖ್ಯಮಂತ್ರಿಗಳಾಗಿ ಅಧಿಕಾರವನ್ನು ಸ್ವೀಕರಿಸತಕ್ಕ ಸಂದರ್ಭದಲ್ಲಿ ಆಡಿರತಕ್ಕ ಮಾತುಗಳನ್ನು ಅವರಿಗೆ ಮತ್ತೊಮ್ಮೆ ನೆನಪಿಸುವ ಅವಶ್ಯಕತೆ ಇಲ್ಲ. ಕೆಲವು ದಿವಸಗಳ ಹಿಂದೆ ಯಾವುದೋ ಒಂದು ಧಾರ್ಮಿಕ ಕ್ಷೇತ್ರಕ್ಕೆ ಮಾನ್ಯ ಮುಖ್ಯಮಂತ್ರಿಗಳು ಹೋಗಿದಂತಹ ಸಂದರ್ಭದಲ್ಲಿ ಅವರು ಆಡಿರತಕ್ಕ ಮಾತುಗಳನ್ನು ಪುನಃ ಅವರ ಗಮನಕ್ಕೆ ತರತಕ್ಕ ಅವಶ್ಯಕತೆ ಇಲ್ಲ. ಅವರು ಆಡಿರತಕ್ಕ ಮಾತುಗಳು ಏನೆಂದರೆ "ನಾನು ಎಲ್ಲಿಯವರೆಗೆ ಮುಖ್ಯಮಂತ್ರಿಯಾಗಿ ಕೆಲಸವನ್ನು ಮಾಡುತ್ತೇನೆ. ಅಲ್ಲಿಯವರೆಗೆ ರಾಜ್ಯಕ್ಕೆ ಪ್ರಾಮಾಣಿಕವಾಗಿ ಮತ್ತು ಭ್ರಷ್ಟಾಚಾರ ಮುಕ್ತ ಆಡಳಿತವನ್ನು ಮಾಡಿ, ಒಂದು ಹೊಸ ಆಯಾಮವನ್ನು ಕೊಡಲಿಕ್ಕೆ ಮತ್ತು ಅಂತಹ ಪ್ರಯತ್ನವನ್ನು ಮಾಡಲಿಕ್ಕೆ

ನಾನು ಕಟಿಬದ್ಧ. ನಾನು ಎಷ್ಟು ದಿವಸಗಳ ಕಾಲ ಈ ಸ್ಥಾನದಲ್ಲಿರುತ್ತೇನೆ ಎನ್ನುವುದು ಮುಖ್ಯವಲ್ಲ, ಆದರೆ ನಾವು ಹಾಕತಕ್ಕ ಹೆಜ್ಜೆಗಳು ಯಾವುದಿದೆ, ಆ ಹೆಜ್ಜೆಗಳು ಈ ರಾಜ್ಯದ ಜನತೆಗೆ ಎಷ್ಟರಮಟ್ಟಿಗೆ ಆಡಳಿತದಲ್ಲಿ ವಿಶ್ವಾಸವನ್ನು ಮೂಡಿಸಲಿಕ್ಕೆ ಸಾಧ್ಯ ಎನ್ನುವುದರ ಬಗ್ಗೆ ಮಾತ್ರ ನಾನು ನನ್ನ ಗಮನವನ್ನು ಹರಿಸುತ್ತೇನೆ." ಎನ್ನುವ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಆದ್ದರಿಂದ ದಯವಿಟ್ಟು ಸರ್ಕಾರ ಈ ಒಂದು ಪ್ರಮುಖವಾದ ಸಂಸ್ಥೆಯನ್ನು ತುಂಬಲೇಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಇತರರಿಗಿಂತಲೂ ಹೆಚ್ಚಾಗಿ ಅಧಿಕಾರವನ್ನು ಸ್ವೀಕಾರ ಮಾಡಿದ ನಂತರ ಅವರು ನಾನು ಆಡಳಿತದಲ್ಲಿ ಇರುವ ತನಕ ಒಂದು ಹೊಸ ಬದಲಾವಣೆಯನ್ನು ಮತ್ತು ಗುಣಾತ್ಮಕವಾದ ಚಿಂತನೆಯನ್ನು ಮಾಡುತ್ತೇನೆ ಎಂದು ಹೇಳಿರುವ ಹಿನ್ನೆಲೆಯಲ್ಲಿ ನಾನು ಮುಖ್ಯಮಂತ್ರಿಗಳಿಂದ ಬಯಸುವುದು ಇಷ್ಟೆ, ನಾನು ಕೇವಲ ಮಾತನಾಡಬೇಕೆನ್ನುವ ಉದ್ದೇಶದಿಂದ ಈ ವಿಚಾರವನ್ನು ಪ್ರಸ್ತಾಪಿಸಿರುವುದಿಲ್ಲ. ಈ ವಿಚಾರದ ಬಗ್ಗೆ ಹತ್ತಾರು ವರ್ಷಗಳಿಂದಲೂ ರಾಷ್ಟ್ರದ ಉದ್ದಗಲಕ್ಕೂ ಚರ್ಚೆ ನಡೆಯುತ್ತಿದೆ. ಇಡೀ ರಾಷ್ಟ್ರದ ಜನತೆ 'ಅಣ್ಣಾ ಹಜಾರೆ'ಯವರ ಹಿಂದೆ ಬಿದ್ದಿರುವ ವಿಚಾರವನ್ನು ನಾವು ನೋಡಿದ್ದೇವೆ. ಸಂಸತ್ತಿನಲ್ಲಿ ಬಹಳ ದೊಡ್ಡ ದೊಡ್ಡ ಮಾತುಗಳನ್ನು ಎಲ್ಲರೂ ಸಹ ಮಾತನಾಡಿದ್ದಾರೆ. ಯಾರೇ ಮುಖ್ಯಮಂತ್ರಿಗಳಾಗಲೀ ಸಚಿವರಾಗಲಿ, ಶಾಸಕರಾಗಲೀ, ವಿರೋಧ ಪಕ್ಷದ ನಾಯಕರಾದರೂ ಸಹ ಭ್ರಷ್ಟಾಚಾರವನ್ನು ತೊಡೆದು ಹಾಕಬೇಕೆಂದು ಹೇಳಿಕೊಂಡೇ ಬಂದಿದ್ದಾರೆ. ಆದರೆ ಜೈಲಿಗೆ ಹೋಗುವವರ ಸಾಲಿನಲ್ಲಿ ಬಹಳ ಮಂದಿ ರಾಜಕಾರಣಿಗಳು ಮತ್ತು ಅಧಿಕಾರಿಗಳು ನಮ್ಮಲ್ಲಿದ್ದಾರೆ. 1985ರಲ್ಲಿ ಶ್ರೀಮಾನ್ ರಾಮಕೃಷ್ಣ ಹೆಗ್ಗಡೆಯವರು ಒಂದು ಚಿಂತನೆಯನ್ನು ಮಾಡಿ ಈ ಒಂದು ಲೋಕಾಯುಕ್ತ ಕಾಯಿದೆಯನ್ನು ಜಾರಿಗೆ ತಂದರು. ಇದಕ್ಕಿಂತ ಮೊದಲು ಒಂದೆರಡು ರಾಜ್ಯಗಳಲ್ಲಿ ಈ ಕಾಯಿದೆಯನ್ನು ಜಾರಿಗೆ ತರಲಾಗಿತ್ತು. ದೇವರಾಜ ಅರಸ್‌ರವರು ಒಂದು ಸುಗ್ರೀವಾಜ್ಞೆಯನ್ನು ತಂದು ಈ ಕಾಯಿದೆಯನ್ನು ಜಾರಿಗೆ ತರಬೇಕೆನ್ನುವ ಚಿಂತನೆಯನ್ನು ಮಾಡಿದ್ದು ನಿಜ. ಆದರೆ, ಸರ್ಕಾರ ಪತನವಾಗಿ ಅವರು ರಾಜಿನಾಮೆಯನ್ನು ನೀಡಿದ ಕಾರಣ

ಈ ಕಾಯಿದೆಯನ್ನು ಆ ಸಂದರ್ಭದಲ್ಲಿ ತರಲಿಕ್ಕೆ ಸಾಧ್ಯವಾಗಲಿಲ್ಲ. ಆ ಸಂದರ್ಭದಲ್ಲಿ ನಾನು ಕೂಡ ದೇವರಾಜ ಅರಸ್‌ರವರ ಜೊತೆಯಲ್ಲಿದ್ದೆನು. ಆ ಸಂದರ್ಭದಲ್ಲಿ ಏನಾಯಿತು ಎನ್ನುವುದು ಒಂದು ಇತಿಹಾಸ. ಅದು ಎಲ್ಲರಿಗೂ ಸಹ ಗೊತ್ತಿದೆ. ನಂತರ 1985ನೇ ಇಸವಿಯಲ್ಲಿ ಈ ಕಾಯಿದೆಯನ್ನು ಜಾರಿಗೆ ತಂದಾರ ಮೇಲೆ ಲೋಕಾಯುಕ್ತ ಸಂಸ್ಥೆ ಪರಿಣಾಮಕಾರಿಯಾಗಿ ಕೆಲಸ ಮಾಡಲಿಲ್ಲ ಎನ್ನುವುದು ಎಲ್ಲರಿಗೂ ತಿಳಿದಿರತಕ್ಕ ವಿಚಾರ. ಇವತ್ತು ಈ ದೇಶದಲ್ಲಿ ರಾಜಕಾರಣಿಗಳೆಲ್ಲ ಭ್ರಷ್ಟರು ಎನ್ನುವ ಚಿತ್ರಣವನ್ನು ಎಲ್ಲರೂ ನೀಡುತ್ತಿದ್ದಾರೆ. ಆದರೆ ನಾನು ಹೇಳುವುದು ಏನೆಂದರೆ ದಯವಿಟ್ಟು ಇಲ್ಲಿರತಕ್ಕ ಯಾವುದೇ ಅಧಿಕಾರಿಗಳಾಗಲೀ, ಹಿರಿಯ ಅಧಿಕಾರಿಗಳಾಗಲೀ ಅಪಾರ್ಥ ಭಾವಿಸಿಕೊಳ್ಳಬಾರದು. ಈ ರಾಷ್ಟ್ರದಲ್ಲಿ, ಅಥವಾ ರಾಜ್ಯದಲ್ಲಿ ರಾಜ್ಯಕಾರಣಿಗಳಿಂತಲೂ ನಮ್ಮ ಅಧಿಕಾರಿಗಳು, ಈ bureaucratic system ಏನಿದೆ, ಅದು ಈ ರಾಷ್ಟ್ರದ ಆಡಳಿತವನ್ನು, ಈ ರಾಷ್ಟ್ರದ ಸಂಪತ್ತನ್ನು ಮತ್ತು ಈ ರಾಷ್ಟ್ರ ನಡೆಯಬೇಕಾದ ದಾರಿಯನ್ನು ಸಂಪೂರ್ಣವಾಗಿ ಹದಗೆಡಿಸಿ ಅದರ ಹಳಿ ತಪ್ಪಿಸತಕ್ಕ ಪರಿಸ್ಥಿತಿಯನ್ನು ಸೃಷ್ಟಿ ಮಾಡಿದ್ದಾರೆ. ಅವರನ್ನು ಆ ಮಟ್ಟಕ್ಕೆ ತಂದವರು ಯಾರು? ಆ ಹಿನ್ನೆಲೆಯಲ್ಲಿ ನಾನು ಕೇಳುತ್ತೇನೆ, ಎಲ್ಲಾ ಸಮಯದಲ್ಲಿಯೂ ಲೋಕಾಯುಕ್ತರನ್ನು ನೇಮಕ ಮಾಡಬೇಕು. ನ್ಯಾಯಮೂರ್ತಿ ವೆಂಕಟಾಚಲರವರನ್ನು ಲೋಕಾಯುಕ್ತಕ್ಕೆ ನೇಮಕ ಮಾಡಿದ ಮೇಲೆ ಅವರು ಆ ಸಂಸ್ಥೆಗೆ ಚಾಲನೆಯನ್ನು ಕೊಟ್ಟರು. ಅದನ್ನು ನಾವೆಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ಇದಕ್ಕೆ ಒಂದು ಅಧಿಕಾರವಿದೆ. ಪ್ರಾಮಾಣಿಕರಲ್ಲದ ರಾಜಕಾರಣಿಗಳ ಮತ್ತು ಅಧಿಕಾರಿಗಳ ವಿರುದ್ಧ ಯಾವುದೇ ಸಂದರ್ಭದಲ್ಲಿಯಾದರೂ ಅವರ ಮನೆಗಳಿಗೆ ಹೋಗಿ ಜಪ್ತಿ ಮಾಡಿ ಅವರನ್ನು ಬಂಧಿಸುವಂತಹ ಅಧಿಕಾರ ಈ ಸಂಸ್ಥೆಗೆ ಇದೆ ಎನ್ನುವುದನ್ನು ತೋರಿಸಿಕೊಟ್ಟಿರುವ ಶ್ರೀಮಾನ್ ವೆಂಕಟಾಚಲರವರನ್ನು ನಾವು ಇಲ್ಲಿ ನೆನೆಪಿಸಿಕೊಳ್ಳಬೇಕಾಗುತ್ತದೆ. ನಂತರ ಸಂತೋಷ ಹೆಗಡೆಯವರು ಬಂದರು. ಅವರೇನು ಅರ್ಜಿ ಹಾಕಿಕೊಂಡು ಬಂದವರಲ್ಲ. ಆಗಲೇ ಅವರು ಕೇಂದ್ರ ಸರ್ಕಾರದ ಒಂದು tribunal ನ ಛೇರ್ಮನ್ ಆಗಿ ಕೆಲಸ ಮಾಡುತ್ತಿದ್ದರು.

ಉತ್ತಮವಾದ, ಪ್ರಮಾಣಿಕವಾದ, ದಕ್ಷನಾದ ಒಬ್ಬ ನ್ಯಾಯಮೂರ್ತಿಯನ್ನು ಲೋಕಾಯುಕ್ತಕ್ಕೆ ನೇಮಕ ಮಾಡಬೇಕು ಎನ್ನುವ ಹಿನ್ನೆಲೆಯಲ್ಲಿ, ಅಂದಿನ 20–20 ಸರ್ಕಾರ, ಅದು ದುರಂತವೊ, ಮಾರಕವೊ ಅಥವಾ ಒಳ್ಳೆಯದೊ ಎನ್ನುವುದನ್ನು ಮುಂದಿನ ದಿನಗಳಲ್ಲಿ ಅದರ ಬಗ್ಗೆ ವಿಶ್ಲೇಷಣೆ ಮಾಡೋಣ. ಸಂತೋಷ ಹೆಗಡೆಯವರು ಉತ್ತಮವಾಗಿ ಆ ಸ್ಥಾನವನ್ನು ನಿರ್ವಹಿಸಿದರು. 1993ನೇ ಸಾಲಿನಲ್ಲಿ ನಾನು ವಿರೋಧ ಪಕ್ಷದ ನಾಯಕನಾಗಿದ್ದೆ. ಆಗ ಆಚಾರ್ಯರವರು ಮತ್ತು ನಾನು ಒಂದೇ ಸಾಲಿನಲ್ಲಿ ಕೂಡುತ್ತಿದ್ದೆವು. ಆಗ ಲೋಕಾಯುಕ್ತರ ನೇಮಕವಾಯಿತು. ಲೋಕಾಯುಕ್ತ ಸಂಸ್ಥೆಯನ್ನು ನಡೆಸುವವರು ಯಾರಾಗಿರಬೇಕು ಎನ್ನುವುದು ಬಹಳ ಮುಖ್ಯ. ನಮ್ಮ ದೇಶದಲ್ಲಿ, ರಾಜ್ಯದಲ್ಲಿರುವ ಎಲ್ಲಾ ನಿವೃತ್ತ ನ್ಯಾಯಮೂರ್ತಿಗಳು, ನಮ್ಮ ರಾಜ್ಯದ ಮುಖ್ಯ ನ್ಯಾಯಮೂರ್ತಿಗಳಾಗಿ ನಿವೃತ್ತರಾದವರಾಗಲೀ, ಹೊರ ರಾಜ್ಯದಲ್ಲಿ ನಿವೃತ್ತರಾದ ಮುಖ್ಯ ನ್ಯಾಯಮೂರ್ತಿಗಳಾಗಲೀ ಅಥವಾ ಸರ್ವೋಚ್ಚ ನ್ಯಾಯಾಲಯದಲ್ಲಿ ಕೆಲಸ ಮಾಡಿ ನಿವೃತ್ತರಾದ ನ್ಯಾಯಮೂರ್ತಿಗಳಾಗಲೀ ಅವರೆಲ್ಲರೂ ಒಂದೇ ಪ್ಲಾಟ್‌ಫಾರ್ಮ್‌ನಲ್ಲಿ ಬಹಳ ಪ್ರಾಮಾಣಿಕರು ಎಂದು ನಾನು ಹೇಳಲು ತಯಾರಿಲ್ಲ. ನ್ಯಾಯಮೂರ್ತಿಗಳಲ್ಲಿಯೂ ಭ್ರಷ್ಟರಿದ್ದಾರೆ. ಈ ಮಾತನ್ನು ಹೇಳಿದವರು ಸರ್ವೋಚ್ಚ ನ್ಯಾಯಾಲಯದಲ್ಲಿರುವಂತಹ ಮುಖ್ಯ ನ್ಯಾಯಾಧೀಶರಾದ Justice Barucha ರವರು. ಅವರು ನಮ್ಮ ರಾಜ್ಯದಲ್ಲಿ ಮುಖ್ಯ ನ್ಯಾಯಮೂರ್ತಿಗಳಾಗಿದ್ದರು. ಇವರು ನಿವೃತ್ತರಾದಾಗ ಒಂದು ಮಾತನ್ನು ಹೇಳಿದರು, "There is, to the extent of 80%, honest judicial officers in

higher judiciary" It means, to the extent of 20%, there are judicial officers in higher judiciary who are corrupt. ಈ ಸಂಸ್ಥೆಗೆ ಲೋಕಾಯುಕ್ತರನ್ನು ನೇಮಕ ಮಾಡುವ ಸಂದರ್ಭದಲ್ಲಿ ಪ್ರಮಾಣಿಕರನ್ನು ನಾವು ಹುಡುಕಬೇಕಾಗುತ್ತದೆ. 1993ರಲ್ಲಿ ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದರು. ಆ ಸಂದರ್ಭದಲ್ಲಿ ಅಧಿಕಾರದಲ್ಲಿದ್ದ ಲೋಕಾಯುಕ್ತರು ನಿವೃತ್ತರಾದರು ನಂತರ ಇನ್ನೊಬ್ಬ ಲೋಕಾಯುಕ್ತರನ್ನು

ನೇಮಕ ಮಾಡಬೇಕಾದ ಸಂದರ್ಭ ಬಂತು. ಹಿಂದಿನ ಮುಖ್ಯಮಂತ್ರಿಗಳು ಕಾನೂನಿನ ಅಡಿಯಲ್ಲಿ ಯಾವ ಪ್ರಕ್ರಿಯೆಯನ್ನು ಮಾಡಿಕೊಂಡು ಬಂದಿದ್ದಾರೆ, ಅದೇ ಕೆಲಸವನ್ನು ನಾನು ಮುಂದುವರೆಸಿಕೊಂಡು ಬಂದು ಈ ನೇಮಕಾತಿಯನ್ನು ಮಾಡಿದ್ದೇನೆ ಎಂದು ತಾವು ಪತ್ರಿಕೆಯಲ್ಲಿಯೂ ಹೇಳಿದ್ದೀರಿ, ಸಾರ್ವಜನಿಕವಾಗಿಯೂ ಹೇಳಿದ್ದೀರಿ. ಲೋಕಾಯುಕ್ತ ಕಾಯಿದೆಯ ಸೆಕ್ಷನ್ 3ರ ಅಡಿಯಲ್ಲಿ ಈ ನೇಮಕಾತಿಯನ್ನು ಮಾಡಲು ಅಧಿಕಾರ ಇದೆ. The Lokayukta shall be appointed by the Governor. ಇಲ್ಲಿ ಒಂದು ಚಿಂತನೆ ಇದೆ, ರಾಜ್ಯ ಸರ್ಕಾರ ಕಳುಹಿಸಿರುವಂತಹ ಶಿಫಾರಸ್ಸನ್ನು ತಿರಸ್ಕಾರ ಮಾಡುವ ಅಧಿಕಾರ ರಾಜ್ಯಪಾಲರಿಗೆ ಇದೆಯೇ? ಇದರ ಬಗ್ಗೆ ಬಹಳಷ್ಟು ಜನ ಹೇಳುತ್ತಿದರು. The appointment of Lokayukta is not by the Government. It is not the Government at all. The Cabinet has not say in the appointment of Lokayukta. ಲೋಕಾಯುಕ್ತರನ್ನು ನೇಮಕ ಮಾಡಲು ನಮ್ಮ ಕಾನೂನಿನ ಸೆಕ್ಷನ್ 3ರ ಅಡಿಯಲ್ಲಿ .... ಈ ಕಾನೂನನ್ನು ರಚನೆ ಮಾಡುವಲ್ಲಿ ನಮ್ಮ ಪಾತ್ರವೂ ಸ್ವಲ್ಪ ಇತ್ತು. 1985 ಡಿಸೆಂಬರ್‌ನಲ್ಲಿ ಈ ಕಾನೂನಿಗೆ ರಾಷ್ಟ್ರಪತಿಗಳು ಅಂಕಿತವನ್ನು ಹಾಕಿದ್ದರು. 1986ರಲ್ಲಿ ಅದು ಜಾರಿಗೆ ಬಂತು. ಮೂರು ರಾಜ್ಯಗಳಲ್ಲಿ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಒಂದು ಸಮಿತಿ ಮಾಡಲಾಗುತ್ತಿದೆ. ಆ ಸಮಿತಿಯಲ್ಲಿ ಸಭಾಪತಿಗಳು, ಸಭಾಧ್ಯಕ್ಷರು, ವಿರೋಧ ಪಕ್ಷದ ನಾಯಕಿಯವರಾದ ಶ್ರೀಮತಿ ಮೋಟಮ್ಮನವರು ಇದ್ದಾರೆ, ಆದರೆ ಇವರೇ ಖಾಯಂ ಅಲ್ಲ, ವಿರೋಧ ಪಕ್ಷದ ನಾಯಕಿಯವರು ಅಥವಾ ನಾಯಕರು ಯಾರು ಇರುತ್ತಾರೆ ಅವರು, ವಿಧಾನಸಭೆಯ ವಿರೋಧ ಪಕ್ಷದ ನಾಯಕರು ಮತ್ತು ಮುಖ್ಯ ನ್ಯಾಯಮೂರ್ತಿಗಳು ಅದರಲ್ಲಿ ಇರುತ್ತಾರೆ.

**ಶ್ರೀ ಉಮೇಶ್ ಕತ್ತಿ:-** ಮೋಟಮ್ಮನವರೆ ಖಾಯಂ ಅಲ್ಲ ಎಂದು ಹೇಳುತ್ತಿದ್ದಾರೆ.

**ಶ್ರೀ ಎಂ.ಸಿ. ನಾಣಯ್ಯ:-** ನಾನು 'not by name' ಎಂದು ಹೇಳಿದೆ.

**ಶ್ರೀಮತಿ ಮೋಟಮ್ಮ:–** ಯಾರು ಯಾವ ಹುದ್ದೆಯಲ್ಲಿಯೂ ಖಾಯಂ ಆಗಿ ಇರುವುದಿಲ್ಲ.

**ಶ್ರೀ ಎಂ.ಸಿ. ನಾಣಯ್ಯ:–** ಆದರೆ ಉಮೇಶ ಕತ್ತಿಯವರು ಯಾವುದೇ ಸರ್ಕಾರವಿರಲಿ ಖಾಯಂ ಆಗಿ ಮಂತ್ರಿಗಳಾಗಿರುತ್ತಾರೆ. He will be member of the ruling party. ಯಾವ ಸರ್ಕಾರ ಅಧಿಕಾರಕ್ಕೆ ಬರುತ್ತದೆ ಆ ಸರ್ಕಾರದ ಜೊತೆಯಲ್ಲಿ ಹೋಗುತ್ತಾರೆ. ನಮ್ಮ ಪಕ್ಷದಲ್ಲಿದ್ದವರು ಇನ್ನೊಂದು ಪಕ್ಷಕ್ಕೆ ಹೋದರು. ಅಲ್ಲಿಂದ ಇನ್ನೊಂದು ಪಕ್ಷಕ್ಕೆ ಹೋದರು. ಹೀಗೆ ನಮ್ಮ ಪಕ್ಷದಿಂದ ನಿಮ್ಮ ಕಡೆ ಬಂದವರು ಬಹಳ ಜನ ಇದ್ದಾರೆ. ಅವರೆಲ್ಲರೂ deputation ಆಗಿ ಕಳುಹಿಸಿ ಕೊಟ್ಟವರು.

**ಶ್ರೀ ಉಮೇಶ ಕತ್ತಿ:–** ಅದೆಲ್ಲವನ್ನು ಹಣೆಬರಹದಲ್ಲಿ ಬರೆದುಕೊಂಡು ಬಂದಿರಬೇಕು.

**ಶ್ರೀ ಎಂ.ಸಿ. ನಾಣಯ್ಯ:–** ಗೌರವ, ನೈತಿಕತೆ, ಗುಣ ಎಲ್ಲವನ್ನು ಬಿಟ್ಟು ಲಜ್ಜೆಗೆಟ್ಟವರು ಮಾತ್ರ ಈ ಕೆಲಸವನ್ನು ಮಾಡುತ್ತಾರೆಯೇ ಹೊರತು, ಗೌರವದಿಂದ ಇರುವವರು ಯಾರು ಈ ಕೆಲಸವನ್ನು ಮಾಡುವುದಿಲ್ಲ.

**ಶ್ರೀ ಉಮೇಶ ಕತ್ತಿ:–** ನಾನು ಮೊನ್ನೆಯೂ ಹೇಳಿದ್ದೇನೆ, ಇವತ್ತೂ ಹೇಳುತ್ತಿದ್ದೇನೆ ನಾನು 6 ಸಾರಿ ಆರಿಸಿ ಬಂದಿದ್ದೇನೆ. ಲಜ್ಜೆಗೆಟ್ಟವರನ್ನು ಜನ ಆಶೀರ್ವಾದ ಮಾಡುವುದಿಲ್ಲ. ಲಜ್ಜೆಗೆಟ್ಟವರನ್ನು ವಿಧಾನಸೌಧಕ್ಕೆ ಬರುವುದಕ್ಕೆ ಬಿಡುವುದಿಲ್ಲ. ನಾನು 6 ಬಾರಿ 6 ಚಿನ್ಹೆಗಳ ಮೂಲಕ ಜನರ ಆಶೀರ್ವಾದದಿಂದ ಆರಿಸಿ ಬಂದವನು.

**ಸಭಾಪತಿಯವರು:–** ಇನ್ನು ಆ ವಿಚಾರಬಿಡಿ. ನಾಣಯ್ಯನವರೆ, ಈ ನೋಟಿಸ್‌ನ್ನು ನಾನು ಏಕೆ ಒಪ್ಪಿಕೊಳ್ಳಬೇಕು ಎನ್ನುವುದನ್ನು ತಾವು ಹೇಳಲಿಲ್ಲ.

**ಡಾ॥ ಎ.ಎಚ್. ಶಿವಯೋಗಿಸ್ವಾಮಿ:-** ನಿಯಮ 59ರ ಅಡಿಯಲ್ಲಿ ಏಕೆ ಚರ್ಚೆಗೆ ತೆಗೆದುಕೊಳ್ಳಬೇಕು ಎಂದು ಹೇಳುವುದನ್ನು ಬಿಟ್ಟು ಉಳಿದೆಲ್ಲವನ್ನು ಮಾನ್ಯ ನಾಣಯ್ಯನವರು ಹೇಳುತ್ತಿದ್ದಾರೆ. ಮಾನ್ಯ ನಾಣಯ್ಯನವರು ಬಹಳ ಅನುಭವಿಗಳು, ಹಾಗೆಂದ ಮಾತ್ರಕ್ಕೆ ಹೇಳುವುದನ್ನು ಬಿಟ್ಟು ಉಳಿದೆಲ್ಲವನ್ನು ಹೇಳುತ್ತಾ ಹೊರಟರೆ ಹೇಗೆ?

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಗಳೇ, ನಾವು ಮಾತನಾಡಲು ನಿಂತರೆ ಕುಳಿತುಕೊಳ್ಳಿ ಸಾಕು ಎನ್ನುತ್ತೀರಾ, ಅವರಿಗೆ ಮಾತ್ರ ಸಾಕಷ್ಟು ಸಮಯವನ್ನು ಕೊಡುತ್ತೀರಿ, ಅವರಿಗೆ ಏಕೆ ಸಮಯದ ನಿಗದಿ ಇಲ್ಲ. ನಮಗೆ ಮಾತನಾಡಲು ಬಿಡುವುದೇ ಇಲ್ಲ. ಎಷ್ಟು ಸಮಯದಲ್ಲಿ Preliminary Submission ಮಾಡಬೇಕು ಎಂದು ಸಮಯ ನಿಗದಿ ಮಾಡಿ.

**ಸಭಾಪತಿಯವರು:-** ನಿಯಮ 59ರಲ್ಲಿ ಏಕೆ ತೆಗೆದುಕೊಳ್ಳಬೇಕು ಎನ್ನುವುದನ್ನು ಹೇಳುತ್ತಿದ್ದಾರೆ ಅವರು.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಅವರು ಹಿರಿಯರು ಎಂದು ಗೌರವವನ್ನು ಕೊಡುತ್ತೇವೆ ಅದರಲ್ಲಿ ಏನು ಸಮಸ್ಯೆ ಇಲ್ಲ. ಆದರೆ ಅವರಿಗೂ ನಮಗೂ ಒಂದೇ ಕಾನೂನು ಅನ್ವಯವಾಗಬೇಕು.

**ಸಭಾಪತಿಯವರು:-** ಈಗ 1989ರಿಂದ 2012ಕ್ಕೆ ಬರುತ್ತಾರೆ ಇರಿ.

**Sri M.C. NANAIAH:-** Any parliamentary debate should not be a drab debate. There should be humour, there should be repertoire, there should be sarcasm and there should be some type of penchant.

**ಸಭಾಪತಿಯವರು:-** ಅದಕ್ಕೆ ಕತ್ತಿಯವರು ನಿಮಗೆ ಸ್ಪಂದಿಸಿದರು.

Sri M.C. NANAIAH:- There should be parliamentary repertoire. ಆಗಲೇ ಅದಕ್ಕೆ ಒಂದು ಬೆಲೆ ಬರುವುದು.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಮಂತ್ರಿಗಳಿಗೆ ಲಜ್ಜೆಗೆಟ್ಟವರು ಎಂದು ಹೇಳಿದರೆ ಹೇಗೆ? ಅವರು ಕೂಡ 6 ಬಾರಿ ಗೆದ್ದು ಬಂದಿದ್ದಾರೆ. ಯಾರಿಗೆ ಯಾವ ಮಾತನ್ನು ಉಪಯೋಗ ಮಾಡಬೇಕು ಎನ್ನುವುದು... ಅವರು ಮಂತ್ರಿಗಳಾಗಿದ್ದಾರೆ.

**ಶ್ರೀ ಎಂ.ಸಿ. ನಾಣಯ್ಯ:-** ರಾಜಕೀಯವಾಗಿ ಇರುವುದರಲ್ಲಿ ನನ್ನ ಅನಿಸಿಕೆ ಅದು. ನಾನು ಯಾರನ್ನು ಬೊಟ್ಟು ಮಾಡಿ ಹೇಳುವುದಿಲ್ಲ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಅನಿಸಿಕೆ ಹೇಳುವಾಗಲೂ decent ಆಗಿ ಹೇಳುವುದಕ್ಕೆ ಸಾಧ್ಯ ಇದೆ. ಮಂತ್ರಿಗಳ ಹೆಸರನ್ನು ಉಲ್ಲೇಖ ಮಾಡಿ ಹೇಳಿದ್ದಾರೆ. ಇದು ಸರಿಯಲ್ಲ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಗಳೇ, ನನಗೆ ಒಂದು ಘಟನೆ ನೆನೆಪಾಗುತ್ತಿದೆ. ಒಬ್ಬ ಕೋರ್ಟ್‌ನಲ್ಲಿ ಸಾಕ್ಷಿ ಹೇಳಲು ಬರುತ್ತಾನೆ. ಕೋರ್ಟ್‌ನಲ್ಲಿ ವಾದ ನಡೆದಾಗ ಲಾಯರ್‌ರವರು 'ನರ್ಮದಾ' ಎನ್ನುವ ಒಂದು ಹೆಸರು, ಆ 'ನರ್ಮದಾ' ಎನ್ನುವವರು ಎಷ್ಟು ದೊಡ್ಡವರಿದ್ದರು ಎಂದು ಕೇಳುತ್ತಾರೆ. ಆಗ ಆ ಸಾಕ್ಷಿ ಅವರು ಸಾಧಾರಣ ಇಷ್ಟು ಎತ್ತರ ಇದ್ದರು ಎಂದು ಹೇಳುತ್ತಾನೆ.

(1.00 ಗಂಟೆ)

ಸನ್ಮಾನ್ಯ ಸಭಾಪತಿಯವರೇ, ಆಗ ವಕೀಲರು, 'ಅದೊಂದು ಕೋಳಿ ಅದು ಇಷ್ಟು ಎತ್ತರ ಇರುವುದಕ್ಕೆ ಹೇಗೆ ಸಾಧ್ಯ? ಎಂದು ಕೇಳುತ್ತಾರೆ. ನಾನು ಇನ್ನೊಂದು ಕೈಯನ್ನು ತೋರಿಸಿಲ್ಲ ಅದು ಸುಮಾರು ಇಷ್ಟು ಎತ್ತರ ಇರಬಹುದು ಎಂದು ಸಾಕ್ಷಿದಾರನು ನುಡಿಯುತ್ತಾನೆ. ಹಾಗೆ ಮಾನ್ಯ ನಾಣಯ್ಯನವರು ಲಜ್ಜೆಗೆಟ್ಟವರು ಎಂದು ಹೇಳುತ್ತಾರೆ. ಆದರೆ, ನಾನು ಆ ರೀತಿ ಹೇಳಲಿಲ್ಲ, ಈ ರೀತಿ ಹೇಳಿದೆ ಎಂದು ಹೇಳುತ್ತಿದ್ದಾರೆ. ಅವರೊಬ್ಬರು ವಕೀಲರು, ಅನುಭವಸ್ಥರು, ಹಿರಿಯರು ಅವರು ಹೇಗೆ ಬೇಕಾದರೂ ಮಾತನ್ನು ತಿರುಚುತ್ತಾರೆ. ಅವರ ಉದ್ದೇಶ ಏನು ಎನ್ನುವುದು ನಮಗೆ ಅರ್ಥವಾಗಿದೆ.

**ಶ್ರೀ ಎಂ.ಸಿ. ನಾಣಯ್ಯ:-** ಸನ್ಮಾನ್ಯ ಸಭಾಪತಿಯವರೇ, ಸಹೋದರಿ ಭಾರತಿ ಶೆಟ್ಟಿಯವರಿಗೆ ನನ್ನ ಅನಂತ ನಮನಗಳು. ಆ ಸಂದರ್ಭದಲ್ಲಿ ಮಾನ್ಯ ಬಂಗಾರಪ್ಪನವರು ದೆಹಲಿ ಹೈಕೋರ್ಟಿನ ನಿವೃತ್ತ ಮುಖ್ಯ ನ್ಯಾಯಾಧೀಶರಾಗಿದ್ದ ರವೀಂದ್ರನಾಥ ಪೈನೇ ಎನ್ನುವವರ ಹೆಸರನ್ನು ಶಿಫಾರಸ್ಸು ಮಾಡಿದ್ದರು. ನಾನು ಏತಕ್ಕಾಗಿ ಇದನ್ನು ಉಲ್ಲೇಖ ಮಾಡುತ್ತಿದ್ದೇನೆ ಎಂದರೆ, ಇದು ಈಗಿನ ಮುಖ್ಯಮಂತ್ರಿಗಳಿಗೆ ಅನ್ವಯಿಸಬಹುದು. ಆ ಮುಖ್ಯ ನ್ಯಾಯಾಧೀಶರು ನಿವೃತ್ತರಾದ ಸಂದರ್ಭದಲ್ಲಿ ನಾನೇ ದೆಹಲಿಗೆ ಹೋಗಿ ಅವರ ಬಗ್ಗೆ ಮಾಹಿತಿಯನ್ನು ಪಡೆದುಕೊಂಡೆ. ಅವರು ದೆಹಲಿಯ ಮುಖ್ಯ ನ್ಯಾಯಾಧೀಶರಾಗಿ ಕಾರ್ಯನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ನಡೆದಿದ್ದ ಘಟನೆಗಳು ದೆಹಲಿ ಹೈಕೋರ್ಟಿನಲ್ಲಿಯೇ ಬಹಳ ದೊಡ್ಡ ಚರ್ಚೆಗೆ ಗ್ರಾಸವಾಗಿದ್ದವು. ಆ ಮಾಹಿತಿಗಳನ್ನು ಸಂಗ್ರಹ ಮಾಡಿಕೊಂಡು ಬಂದೆ. ಆ ಮೇಲೆ ಮಾನ್ಯ ಬಂಗಾರಪ್ಪನವರು, 'ನನ್ನ ಚಿಂತನೆ ಈ ರೀತಿ ಇದೆ. ಇಂತಹವರನ್ನು ನೇಮಕ ಮಾಡಬೇಕೆಂದಿರುವೆ, ತಮ್ಮ ಅಭಿಪ್ರಾಯವೇನು' ಎಂದು ನನಗೆ ಒಂದು ಪತ್ರವನ್ನು ಬರೆದಿದ್ದರು. ಆ ಪತ್ರ ಈಗಲೂ ನನ್ನ ಬಳಿ ಇದೆ. ಆಗ ನಾನು ದೆಹಲಿಗೆ ಹೋಗಿ ಸಂಗ್ರಹಿಸಿದ್ದ ಮಾಹಿತಿಗಳ ಆಧಾರದ ಮೇಲೆ ನೇರವಾಗಿ ಎರಡು ಘಟಕಗಳನ್ನು ಉಲ್ಲೇಖ ಮಾಡಿ, 'ಅವರನ್ನು ನೇಮಕ ಮಾಡಬಾರದು' ಎಂದು ಹೇಳಿದ್ದೆ. ಆಗ ಅವರು, Mr. Nanaiah, I am helpless. I am under political pressure to make this appointment. ಅದು ಆದ ಮೇಲೆ I gave it in writing to the Governor; this is what has happened and this is the background of the man, this is antecedence of the former Chief Justice. Kindly, don't appoint. ದುರಾದೃಷ್ಟವಶಾತ್ ಅದಕ್ಕೆ ಬೆಲೆ ಸಿಗಲಿಲ್ಲ. ಅವರು ನೇಮಕಗೊಂಡರು. ಆ ಕಾಲವನ್ನು ಸಹ ನಾವು ನೋಡಿದ್ದೇವೆ. ಈ ಹಿನ್ನೆಲೆಯಲ್ಲಿ ನಾನು ಹೇಳುವುದೇನೆಂದರೆ, ಸೆಕ್ಷನ್ 3ರಲ್ಲಿ ಏನನ್ನು ಹೇಳುತ್ತಾರೆ ಎನ್ನುವುದು ಮುಖ್ಯವಾಗುತ್ತದೆ. ನಾನು ಯಾರ ಮೇಲೂ ಆರೋಪವನ್ನು ಹೊರಿಸುವುದಿಲ್ಲ. ಮೊದಲು ನ್ಯಾಯಮೂರ್ತಿ ಶಿವರಾಜ್ ಪಾಟೀಲ್‌ರವರನ್ನು ಲೋಕಾಯುಕ್ತ ನ್ಯಾಯಮೂರ್ತಿಗಳ ಹುದ್ದೆಗೆ

ನೇಮಕ ಮಾಡಲಾಗಿತ್ತು. Justice, Shivaraj Patil is my contemporary. With pride I can say he is my contemporary. 1960ರಲ್ಲಿ ನಾನು ಮತ್ತು ಅವರು ಒಟ್ಟಿಗೆ ಕೆಲಸ ಮಾಡಿದ್ದೇವೆ. ಅವರು ಲೋಕಾಯುಕ್ತ ನ್ಯಾಯಮೂರ್ತಿಗಳ ಹುದ್ದೆಯನ್ನು ಅಲಂಕರಿಸಿದ ಮೇಲೆ certain matters came up in the press. ಈ ರೀತಿಯ ವಿಚಾರಗಳು ಸುಮಾರು ಹತ್ತಾರು ವರ್ಷಗಳಿಂದ ನಡೆದುಕೊಂಡು ಬಂದಿರುವ ಹೈಕೋರ್ಟಿನ ಸುಮಾರು 84 ನ್ಯಾಯಾಧೀಶರಿಗೆ ಅನ್ವಯವಾಗುತ್ತದೆ ಎಂದು ಬಂದಿದೆ. ಸರ್ವೋಚ್ಚ ನ್ಯಾಯಾಲಯದಲ್ಲಿ ನ್ಯಾಯಾಮೂರ್ತಿಗಳಾಗಿ ಕೆಲಸ ಮಾಡಿರುವವರು ಬಂದು ಆ ಹುದ್ದೆಯನ್ನು ಅಲಂಕರಿಸಿ ಕೇವಲ 19 ದಿವಸಗಳು ಮಾತ್ರ ಆಗಿತ್ತು. ಅವರ ಬಗ್ಗೆ ಪತ್ರಿಕೆಗಳಲ್ಲಿ ಕೆಲವು ವಿಚಾರಗಳು ಪ್ರಕಟವಾದವು. ಪತ್ರಿಕೆಗಳು ಅವರನ್ನು, "What decision you will take now?" ಎಂದು ಕೇಳಿದಾಗ, ಅವರು ಬಹಳ ಮಾರ್ಮಿಕವಾಗಿ, 'wait for another 24 hours' ಎಂದು ಹೇಳಿದರು. Give me sometime to introspect, let me chair myself inside. ಇದು ಅವರು ಆಡಿರತಕ್ಕ ಮಾತು. The very next day he submitted the resignation. ಲೋಕಾಯುಕ್ತ ನ್ಯಾಯಮೂರ್ತಿಗಳ ಹುದ್ದೆಯನ್ನು ಅಲಂಕರಿಸುವವರು ಸಂಶಯಾತೀತರಾಗಿರಬೇಕು. Caesar's wife shall be above suspicion. 'ಆ ಹುದ್ದೆಯನ್ನು ಅಲಂಕರಿಸುವ ಸಂದರ್ಭದಲ್ಲಿ ನಾನು ಸಂಶಯಾತೀತರಾಗಿರಬೇಕು' ಎಂದು ಅವರು ಆ ಹುದ್ದೆಗೆ ರಾಜೀನಾಮೆಯನ್ನು ನೀಡಿದರು. ನಮ್ಮ ರಾಜ್ಯದ ನಿವೃತ್ತ ನ್ಯಾಯಮೂರ್ತಿಗಳಾಗಿ, ಬಹಳ ದೊಡ್ಡ ಚಿಂತಕರಾಗಿ, ಆಡಳಿತ ಪಕ್ಷದ ರಾಜ್ಯಸಭಾ ಸದಸ್ಯರಾಗಿರುವ ಮತ್ತು ನಾನು ಬಹಳ ಗೌರವಿಸುವಂತಹ ಮತ್ತೊಬ್ಬ ಹಿರಿಯ ತಜ್ಞರಿದ್ದಾರೆ, a very great individual and a good thinker; ಅವರೇ ಶ್ರೀಮಾನ್ ನ್ಯಾಯಮೂರ್ತಿ ರಾಮಜೋಯಿಸ್‌ರವರು. ಈ ನೇಮಕಾತಿಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಕಛೇರಿ ಮತ್ತು ರಾಜ್ಯಪಾಲರ ಕಛೇರಿಗಳಲ್ಲಿ ನಡೆದಿರುವಂತಹ ವಿದ್ಯಮಾನಗಳಿಗೆ ಸಂಬಂಧಪಟ್ಟಂತೆ ಅವರ ಮಾತುಗಳನ್ನು ಎಲ್ಲರೂ ಕೇಳಿರಬಹುದು. ಅದು ಪತ್ರಿಕೆಗಳಲ್ಲಿಯೂ ಪ್ರಕಟವಾಗಿವೆ. ಅವರು ಬಹಳ ಮಾರ್ಮಿಕವಾಗಿ, this is

not an issue which should be debated in the open. Because, the importance of the position of the Lokayukta and the person who occupies the office, if there are allegations against any individual and it has talked in the press by and large. ನಾನು ಹೇಳಿದಂತಹ ಮಾತುಗಳನ್ನೇ ಅವರು ಹೇಳಿದ್ದಾರೆ. ಪುನ: ಇಲ್ಲಿ 'Caesar's wife shall be above suspicion' ಈ ಅರ್ಥ ಬರುವ ರೀತಿಯಲ್ಲಿಯೇ ಬೇರೆ ಅರ್ಥದಲ್ಲಿ ಹೇಳಿದ್ದಾರೆ. Why should you not himself withdraw? ಯಾರನ್ನು ಈ ಸರ್ಕಾರ ನೇಮಕ ಮಾಡಿ ಕಳುಹಿಸಿಕೊಟ್ಟಿದೆ ಅವರ ಬಗ್ಗೆ ಶ್ರೀ ರಾಮಜೋಯಿಸ್‌ರವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ; why should you not himself withdraw this person who has this much of controversy? What is the essence..

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಚರ್ಚೆಯಲ್ಲಿ ಬೇರೆ ವಿಷಯಗಳು ಪ್ರಸ್ತಾಪ ಆಗುತ್ತಿವೆ. ಯಾವ ವಿಷಯವನ್ನು ಹೇಳಬೇಕು ಆ ವಿಷಯವನ್ನು ಬಿಟ್ಟು ಬೇರೆ ಎಲ್ಲ ಪ್ರಸ್ತಾಪ ಆಗುತ್ತಿದೆ. ಆದ್ದರಿಂದ ತಾವು ಈ ಚರ್ಚೆಗೆ ಒಂದು ಕಾಲಮಿತಿಯನ್ನು ನಿಗದಿಪಡಿಸಬೇಕಾಗುತ್ತದೆ. ನಾವು ಇನ್ನು ಎಷ್ಟು ಹೊತ್ತು ಕೇಳಬೇಕೆನ್ನುವುದು ನಮಗೆ ಗೊತ್ತಿಲ್ಲ. ನಿಯಮ 59ರ ಅಡಿಯಲ್ಲಿ ಈ ವಿಚಾರವನ್ನು ಏತಕ್ಕೋಸ್ಕರ ಮಂಡನೆ ಮಾಡಲಾಗುತ್ತಿದೆ ಎನ್ನುವುದನ್ನು ಹೇಳುವುದು ಬಿಟ್ಟು ಬೇರೆ ವಿಚಾರಗಳನ್ನು ಹೇಳುತ್ತಿದ್ದಾರೆ. ಈ ಬಗ್ಗೆ ತಾವೇ ಹೇಳಬೇಕಾಗಿದೆ.

**ಸಭಾಪತಿಯವರು:-** ನಾನು ಗಡಿಯಾರವನ್ನು ನೋಡುತ್ತಿದ್ದೇನೆ. ಇನ್ನೊಂದು 5 ನಿಮಿಷಗಳ ಕಾಲ ಅವರು ಮಾತನಾಡುತ್ತಾರೆ. ಆಮೇಲೆ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾರೆ, ಅನಂತರ ನಾನು ನಿನ್ನ ನಿರ್ಣಯವನ್ನು ತಿಳಿಸುತ್ತೇನೆ.

(ಗೊಂದಲ)

**ಶ್ರೀ ವಿ.ಆರ್. ಸುದರ್ಶನ್:-** ಸನ್ಮಾನ್ಯ ಸಭಾಪತಿಯವರೇ, ಸಬ್‌ಮಿಷನ್‌ಗೆ allow ಮಾಡದಿದ್ದರೆ ಹೇಗೆ?

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಸನ್ಮಾನ್ಯ ಸಭಾಪತಿಯವರೇ, ಸಬ್‌ಮಿಷನ್‌ಗೆ allow ಮಾಡುವುದು ಬೇಡ ಎಂದು ಹೇಳುತ್ತಿಲ್ಲ.

**ಶ್ರೀ ಎಂ.ಸಿ. ನಾಣಯ್ಯ:-** ಸನ್ಮಾನ್ಯ ಸಭಾಪತಿಯವರೇ, ನಾನು ಮಾತನಾಡುವುದು ಅವರಿಗೆ ಪಥ್ಯವಾಗದಿದ್ದರೆ, I am helpless.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಸನ್ಮಾನ್ಯ ಸಭಾಪತಿಯವರೇ, ಅವರು ಮಾತುಗಳು ಪಥ್ಯವಾಗುವ ಪ್ರಶ್ನೆ ಅಲ್ಲ. ಯಾವ ಮಾತುಗಳನ್ನು ಆಡಬೇಕು, ಆ ಮಾತುಗಳನ್ನು ಮಾತ್ರ ಅವರು ಆಡಬೇಕಾಗುತ್ತದೆ.

**Sri. M.C. NANAIAH:-** I am not here to convince you. I am here only to satisfy the Chief Minister. Why should you intervene?

**ಡಾ|| ಎ.ಹೆಚ್. ಶಿವಯೋಗಿಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ಪ್ರಶ್ನೆ ಇರುವುದೇ ಬೇರೆ, ಬೇರೆ ಎಲ್ಲವನ್ನೂ ಹೇಳುತ್ತಿದ್ದಾರೆ. ನಿಯಮ 59ರ ಅಡಿಯಲ್ಲಿ ಏತಕ್ಕೋಸ್ಕರ ಈ ವಿಚಾರವನ್ನು ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಹೇಳುತ್ತಿಲ್ಲ.

(ಗೊಂದಲ)

**ಸಭಾಪತಿಯವರು:-** ಇದಕ್ಕೆ ಸ್ವಲ್ಪ ಸಮಯವನ್ನು ನಿಗದಿ ಮಾಡೋಣ.

**ಶ್ರೀ ಎಂ.ಸಿ. ನಾಣಯ್ಯ:-** ಸನ್ಮಾನ್ಯ ಸಭಾಪತಿಯವರೇ, ನಾನು ಹೇಳುತ್ತಿರುವಂತಹ ವಿಚಾರಗಳು ಎಲ್ಲಾದರು ಸಂವಿಧಾನದ ಚೌಕಟ್ಟಿನ ಹೊರಗಡೆ ಇದ್ದರೆ ಅಥವಾ ವಿಷಯಾಂತರವಾಗುತ್ತಿದ್ದರೆ, I can understand. I am sorry, if you are unable to hear me. Let there be some good debate on this. I want every one of you to participate in it.

**ಡಾ॥ ಎ.ಹೆಚ್. ಶಿವಯೋಗಿಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, ಈ ವಿಚಾರದ ಮೇಲೆ ಚರ್ಚೆ ಮಾಡುವುದಕ್ಕೆ ನಿಯಮದ ಅಡಿಯಲ್ಲಿ ಅಲೋ ಮಾಡಿದರೆ, ನಾವು ಸಹ ಚರ್ಚೆ ಮಾಡುವುದಕ್ಕೆ ಸಿದ್ಧರಿದ್ದೇವೆ.

**ಸಭಾಪತಿಯವರು:–** ಮಾನ್ಯ ನಾಣಯ್ಯನವರೇ, ಈಗ ಸಮಯದ ಪ್ರಶ್ನೆ. ನೀವು ಏನು ಹೇಳಬೇಕೆಂದು ಇರುವಿರಿ. ಅದನ್ನು ಬೇಗ ಹೇಳಿ. ನಾನು ಒಂದು ವಿಷಯಕ್ಕೆ ಎಷ್ಟು ಹೊತ್ತು ಸಮಯ ಕೊಡಬಹುದು ಎಂದು ಯೋಚನೆ ಮಾಡುತ್ತಿದ್ದೆ. ತಾವು ಈಗಾಗಲೇ 15 ನಿಮಿಷಗಳ ಕಾಲ ಮಾತನಾಡಿದ್ದೀರಿ. ಇನ್ನು 5–6 ನಿಮಿಷಗಳಲ್ಲಿ ತಮ್ಮ ಮಾತುಗಳನ್ನು ಮುಗಿಸಿ.

**ಶ್ರೀ ಹೆಚ್.ಸಿ. ನೀರಾವರಿ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ನಾಣಯ್ಯನವರು ಮಾತನಾಡಿ ಮುಗಿಸಿದ ಮೇಲೆ ನಾನು ಒಂದು 5 ನಿಮಿಷಗಳ ಕಾಲ ಮಾತನಾಡುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕಾಗುತ್ತದೆ. ಯಾವ ವಿಷಯವನ್ನು ನಾನು ಪುನರಾವರ್ತನೆ ಮಾಡುವುದಿಲ್ಲ.

**ಸಭಾಪತಿಯವರು:–** ನಮ್ಮ ಪದ್ಧತಿಯನ್ನೇ ತಾವು ಅರ್ಥ ಮಾಡಿಕೊಳ್ಳುವುದಿಲ್ಲ.

**ಶ್ರೀ ಹೆಚ್.ಸಿ. ನೀರಾವರಿ:–** ಸನ್ಮಾನ್ಯ ಸಭಾಪತಿಯವರೇ, ಯಾವ ಕಾರಣಗಳಿಗಾಗಿ ಈ ವಿಚಾರವನ್ನು ನಿಯಮ 59ರ ಅಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಮಾತ್ರ ಹೇಳುತ್ತೇನೆ. ನಾನು ಸಹ ಆ ನೋಟೀಸ್‌ಗೆ ಸಹಿ ಮಾಡಿದ್ದೇನೆ. ನನಗೆ ಮಾತನಾಡಲು 5 ನಿಮಿಷಗಳ ಕಾಲಾವಕಾಶವನ್ನು ನೀಡಿದರೆ ಸಾಕು.

**ಸಭಾಪತಿಯವರು:–** ಪೂರ್ವಭಾವಿ ಪ್ರಸ್ತಾವನೆಯಲ್ಲಿ ಇಬ್ಬರು ಸದಸ್ಯರು ಮಾತನಾಡಲು ಅವಕಾಶವನ್ನು ನೀಡುವುದಕ್ಕೆ ಸಾಧ್ಯವಾಗುವುದಿಲ್ಲ. ಮಾನ್ಯ ನಾಣಯ್ಯನವರು ತಮ್ಮ ಮಾತುಗಳನ್ನು ನಿಲ್ಲಿಸಿದರೆ ತಾವು ಮಾತನಾಡಬಹುದು. ಅವರು ಮಾತನಾಡಿ ಮುಗಿಸಿದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾರೆ. ಆಮೇಲೆ ನೋಡೋಣ.

**ಶ್ರೀ ಹೆಚ್.ಸಿ. ನೀರಾವರಿ:–** ಸನ್ಮಾನ್ಯ ಸಭಾಪತಿಯವರೇ, ಆ ನೋಟೀಸ್‌ಗೆ ನಾನು ಸಹ ಸಹಿ ಮಾಡಿದ್ದೇನೆ.

**ಸಭಾಪತಿಯವರು:–** ಸಹಿ ಮಾಡಿರುವುದು ನಿಜ. ಈ ವಿಚಾರ ಚರ್ಚೆಗೆ ಬಂದಾಗ ನಿಮಗೆ ಅವಕಾಶವನ್ನು ನೀಡಬಹುದು. ಆದರೆ, ಈಗ ಮಾನ್ಯ ನಾಣಯ್ಯನವರು ಇದು ಇಂತಹ ವಿಷಯ, ಇದನ್ನು ನಿಯಮ 59ರ ಅಡಿಯಲ್ಲಿ ತೆಗೆದುಕೊಳ್ಳುವುದಕ್ಕೆ ಅವಕಾಶವನ್ನು ನೀಡಿ ಎಂದು ಕೇಳಿಕೊಳ್ಳುತ್ತಿದ್ದಾರೆ. ಎಲ್ಲರಿಗೂ ಚರ್ಚೆಗೆ ಅವಕಾಶವನ್ನು ನೀಡಿದರೆ ಸಂಜೆ ಆಗುತ್ತದೆ. ಅದು ಆಗುವುದಿಲ್ಲ. I have to restrict. ದಯವಿಟ್ಟು ಕ್ಷಮಿಸಿ. ನೀವು ನಾಣಯ್ಯನವರ ಹತ್ತಿರ ಪರ್ಮಿಷನ್ ತೆಗೆದುಕೊಂಡು ಅವರ ಬದಲು ನೀವೇ ಮಾತನಾಡಿದ್ದರೆ ನಿಮಗೇ ಅಲೋ ಮಾಡುತ್ತಿದ್ದೆ. ನಾನು ಇಬ್ಬರ ಹೆಸರೂ ಕರೆದೆ. ನೀವು ನಾಣಯ್ಯನವರಿಗೆ ಮಾತನಾಡಲು ಅವಕಾಶ ಬಿಟ್ಟುಕೊಟ್ಟು ಕಾರಣ ಅವರು ಮಾತನಾಡುತ್ತಿದ್ದಾರೆ. ನೀವು ಮಾತನಾಡುವುದಿದ್ದರೆ ನೀವೇ ಮಾತನಾಡಬಹುದಾಗಿತ್ತು ನನ್ನ ಅಭ್ಯಂತರವೇನು ಇಲ್ಲ.

**ಶ್ರೀ ಹೆಚ್.ಸಿ. ನೀರಾವರಿ:–** ಸನ್ಮಾನ್ಯ ಸಭಾಪತಿಯವರೇ, ವಿಷಯ ಚರ್ಚೆಗೆ ಬರಬೇಕು, ಮಾನ್ಯ ಮುಖ್ಯಮಂತ್ರಿಗಳು ಹೊರಗಡೆ, 'ನಾನು ಯಾವುದೇ ಪ್ರಶ್ನೆಗೆ ಉತ್ತರ ಕೊಡಲು ಸಿದ್ಧನಿದ್ದೇನೆ' ಎಂದು ಹೇಳುತ್ತಾರೆ. ತಾವು 'ನೋಟೀಸ್ ಕೊಡಿ ಅವಕಾಶವನ್ನು ಕೊಡುತ್ತೇನೆ' ಎಂದು ಹೇಳುತ್ತೀರಿ. ನೋಟೀಸ್‌ಗೆ ಸಹಿ ಮಾಡಿರುವವರಿಗೆ 5 ನಿಮಿಷ ಮಾತನಾಡುವುದಕ್ಕೆ ಅವಕಾಶವನ್ನು ಕೊಡುವುದಿಲ್ಲವೆಂದರೆ ಹೇಗೆ, 5 ನಿಮಿಷಕ್ಕಿಂತ ಹೆಚ್ಚಿಗೆ ನಾನು ಮಾತನಾಡಿದರೆ ತಾವು ಬೆಲ್ ಮಾಡಿ ನಾನು ಕುಳಿತುಕೊಳ್ಳುತ್ತೇನೆ.

**ಸಭಾಪತಿಯವರು:–** ನಾನು ಬೆಲೆ ಹೊಡೆಯುವ ಅಭ್ಯಾಸವನ್ನು ಇಟ್ಟುಕೊಂಡಿಲ್ಲ.

**ಶ್ರೀ ಹೆಚ್.ಸಿ. ನೀರಾವರಿ:-** ಸನ್ಮಾನ್ಯ ಸಭಾಪತಿಯವರೇ, ನಾನು ನೋಟೀಸ್ ಕೊಟ್ಟು ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶ ಸಿಗಲಿಲ್ಲವೆಂದರೆ ಏನು ಪ್ರಯೋಜನ?

**ಸಭಾಪತಿಯವರು:-** ಮಾನ್ಯ ನಾಣಯ್ಯನವರು ಇನ್ನು ವಿಷಯಕ್ಕೆ ಬಂದಿಲ್ಲ. ಅಷ್ಟರಲ್ಲಿಯೇ ತಾವು ಅಡಚಣೆ ಉಂಟು ಮಾಡಿದ್ದೀರಿ.

**ಶ್ರೀ ಎಂ.ಸಿ. ನಾಣಯ್ಯ:-** ಸನ್ಮಾನ್ಯ ಸಭಾಪತಿಯವರೇ, ತಮ್ಮನ್ನು ಆಗಲೇ ನಾನು ಕೇಳಿಕೊಂಡಿದ್ದೇನೆ. ನಾವು ನಿಯಮ 59ರ ಅಡಿಯಲ್ಲಿ ಬೇಕಾದಷ್ಟು ವಿಚಾರಗಳ ಬಗ್ಗೆ ಚರ್ಚೆಗೆ ಅವಕಾಶವನ್ನು ನೀಡಿ ಎಂದು ನಾವು ನೋಟೀಸ್ ಕೊಡುವುದಿಲ್ಲ. ಆದರೆ, ಈ ವಿಚಾರವನ್ನೇ ನಿಯಮ 59 ರ ಅಡಿಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ನೋಟೀಸ್ ಕೊಟ್ಟಿದ್ದೇನೆ. ಏಕೆಂದರೆ, ತಾವು ನಿಯಮ 59ರ ಅಡಿಯಲ್ಲಿ ಇದಕ್ಕೆ ಅವಕಾಶವನ್ನು ನೀಡುವುದಿಲ್ಲವೆಂದು ನನಗೆ ಗೊತ್ತಿದೆ. ಈ ನಿಯಮದಲ್ಲಿ ಏಕೆ ತಂದರು? Kindly, hear me. ನಿಯಮ 59 ಎನ್ನುವುದು ಸಂಸತ್ತಿನಲ್ಲಿಯೂ ಇದೆ, ಇಲ್ಲಿಯೂ ಇದೆ. ಏನಾಗುತ್ತದೆ ಎಂದರೆ, ಎಲ್ಲಾದರೂ ನಿಲುವಳಿ ಸೂಚನೆಗೆ ಅವಕಾಶವನ್ನು ಮಾಡಿಕೊಟ್ಟರೆ it would amount to censuring of the Government. ಲಂಡನ್‌ನಲ್ಲಿರುವ West Minister System ಅನ್ನು ನಾವುಗಳು ಇವತ್ತು ಪಾಲನೆ ಮಾಡಿಕೊಂಡು ಬರುತ್ತಿದ್ದೇವೆ. It has to have a re-look now. ಅದನ್ನು re- look ಮಾಡಬೇಕೆನ್ನುವ ಯೋಚನೆಯನ್ನೇ ನಾವು ಇವತ್ತು ಮಾಡುತ್ತಿರುವುದು. For the first time in the history of Karnataka Legislature, when Mr. S.M. Krishna was the Chief Minister, let adjournment motion be taken for discussion ಎಂದು ಅವರೇ ಹೇಳಿದ ಮೇಲೆ ಒಂದು ಪೂರ್ತಿ ದಿವಸ ನಿಲುವಳಿ ಸೂಚನೆಯ ಮೇಲೆ ಚರ್ಚೆಯಾಯಿತು. I do not know on what issue. ನಾನು ಏಕೆ ಇದನ್ನು ತೆಗೆದುಕೊಂಡು ಬಂದೆ ಎಂದರೆ let there be a finality. ನಾನು ಪ್ರಿಲಿಮಿನರಿ ಸಬ್ಮಿಶನ್‌ನಲ್ಲಿ ಚರ್ಚೆ ಮಾಡುತ್ತಿರುವುದು ಅಂತಿಮವಾದುದು. ಅದೇ ರೀತಿ ಮಾನ್ಯ ಮುಖ್ಯಮಂತ್ರಿಗಳು ಕೊಡುತ್ತಿರುವ ಉತ್ತರ ಕೂಡ on this particular

issue, let it become a final issue. Kindly, give the message to the people of Karnataka, what you want to do? And it is my responsibility sitting in the opposition to tell the people of Karnataka, what the Government should do? Therefore, the subject has been taken under Rule.59. ನಾಳೆಯ ದಿವಸ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಟ್ಟ ನಂತರ, I think, the submission is disallowed. But, by that time message has gone. ನಾನು ಹೇಳುತ್ತಿರುವ ಮಾತು, ಮಾನ್ಯ ಮುಖ್ಯಮಂತ್ರಿಗಳು ಕೊಡುತ್ತಿರುವ ಉತ್ತರ ರಾಜ್ಯದ ಜನತೆಗೆ ಮುಟ್ಟಲಿ ಎನ್ನುವುದೇ ಉದ್ದೇಶ ಹೊರತು ಮತ್ತೇನು ಅಲ್ಲ.

**ಶ್ರೀ ಗೋ. ಮಧುಸೂದನ್:-** ನಾನು ಒಂದು ನಿಮಿಷ ಮಾತನಾಡುತ್ತೇನೆ. ನಾನು ಖಂಡಿತವಾಗಿ ನಿಮಗೆ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ. You will appreciate me.

**Sri M.C. NANAIAH:-** Sir, subject to the condition..

**ಶ್ರೀ ಗೋ. ಮಧುಸೂದನ್:-** ಮಾನ್ಯ ಸಭಾಪತಿಯವರೇ, ಮಾನ್ಯ ನಾಣಯ್ಯನವರು ಬಹಳ ಮೌಲಿಕವಾದ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಏನೆಂದರೆ, ನಿಯಮ 59ರಲ್ಲಿ ಒಂದು ಸಾರಿ ಪ್ರಿಲಿಮಿನರಿ ಸಬ್ಮಿಶನ್ ಎಂದು ಅವಕಾಶವನ್ನು ಕೊಡುವಂಥಾದ್ದು, ನಂತರ finality ಎಂದು ಅವಕಾಶವನ್ನು ಕೊಡುವಂಥಾದ್ದು ಮತ್ತು ಇದನ್ನು ನಾವು censure motion ಎಂದು ತರುವ ಕಾರಣಕ್ಕೋಸ್ಕರವಾಗಿ, ಇದರ ಮೇಲೆ voting ಆಗುತ್ತದೆ ಎನ್ನುವ ಕಾರಣಕ್ಕೋಸ್ಕರವಾಗಿ ಇದನ್ನು allow ಮಾಡದೇ ಇರುವಂಥಾದ್ದು only on technical grounds. ನಾಳೆಯ ದಿವಸ voting ಆಗುತ್ತದೆ, ಸರ್ಕಾರ ಬಿದ್ದು ಹೋಗುತ್ತದೆ ಎಂದು. Even, otherwise ವಿಧಾನ ಪರಿಷತ್ತಿನಲ್ಲಿ voting ಮಾಡಿದರೆ ಇದರಲ್ಲಿ ಸರ್ಕಾರ ಬಿದ್ದು ಹೋಗುವಂಥ ಯಾವುದೇ ಪ್ರಶ್ನೆ ಇಲ್ಲ. ಈ ಕಾರಣಕ್ಕೋಸ್ಕರವಾಗಿ ನಿಯಮ 59ಕ್ಕೆ, ಇನ್ನು ಮುಂದೆ ನಿಯಮ 59ರಲ್ಲಿಯೇ ಅವಕಾಶವನ್ನು ಕೊಡಬೇಕು ಅಥವಾ preliminary

submissionಗೆ ಸಂಬಂಧಿಸಿದಂತೆ ಹೇಳುವುದಾದರೆ, ಈಗ ಮಾನ್ಯ ನಾಣಯ್ಯನವರು ಒಬ್ಬರೇ ಮಾತನಾಡುತ್ತಿದ್ದಾರೆ. ಅವರು ಒಬ್ಬರು ಮಾತ್ರ ನಿಮಗೆ convince ಮಾಡುತ್ತಾರೆ. ಇನ್ಯಾರಿಗೂ ಮಾತನಾಡುವುದಕ್ಕೆ ಅವಕಾಶವಿಲ್ಲ. ಇದು ಒಬ್ಬ ವ್ಯಕ್ತಿಯ ಸ್ವತ್ತಾಗಿದೆ. ವ್ಯಕ್ತಿ ಮತ್ತು ಪೀಠದದ ನಡುವೆ ಮಾತ್ರ ಚರ್ಚೆಯಾಗುತ್ತಿದೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರೆ. ನಾವುಗಳ್ಯಾರು ಈ ಚರ್ಚೆಯಲ್ಲಿ ಭಾಗವಹಿಸುವುದಕ್ಕಾಗುತ್ತಿಲ್ಲ. ಆ ಕಾರಣಕ್ಕೋಸ್ಕರ ನಾನು ಹೇಳುತ್ತಿದ್ದೇನೆ; if there is a need, let there be an amendment to Rule.59. ಆ ಚರ್ಚೆಯಲ್ಲಿ ಎಲ್ಲರೂ ಭಾಗವಹಿಸಲಿಕ್ಕೆ ಅವಕಾಶವಿರಬೇಕು. ಇಂತಹ ಮಹತ್ವದ ವಿಷಯ ಚರ್ಚೆಗೆ ಬಂದಂತಹ ಸಮಯದಲ್ಲಿ ಲೋಕಾಯುಕ್ತರ ನೇಮಕಾತಿಗೆ ಸಂಬಂಧಪಟ್ಟ ವಿಷಯ, ನಮ್ಮದು ಕೆಲ ಅಭಿಪ್ರಾಯಗಳಿವೆ. ಇಲ್ಲವೆಂದೇನೂ ಇಲ್ಲ. ಹಾಗಾಗಿ ಅದಕ್ಕೆ ಅವಕಾಶವಿದ್ದರೆ ದಯಮಾಡಿ ನಮ್ಮ ಸದನದಲ್ಲಿಯೇ ತೆಗೆದುಕೊಂಡು ಬನ್ನಿ. There should be an amendment to Rule.59. ಆ ಕಾರಣಕ್ಕೋಸ್ಕರ ನಾನು ಮಾನ್ಯ ನಾಣಯ್ಯನವರಿಗೆ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ.

**ಸಭಾಪತಿಯವರು:–** ಒಂದು ವಿಷಯವನ್ನು ಮಾನ್ಯ ನಾಣಯ್ಯನವರು ಹೇಳುತ್ತಾರೆಂದು ಭಾವಿಸಿದ್ದೆ. ಅವರು ಹೇಳಲಿಲ್ಲ. ಅದನ್ನು ನಾನೇ ಹೇಳಿಬಿಡುತ್ತೇನೆ. ನಮ್ಮದೊಂದು ರೂಲ್ಸ್ ಕಮಿಟಿ ಇದೆ. ಮಾನ್ಯ ನಾಣಯ್ಯನವರು, ಮಾನ್ಯ ಸುದರ್ಶನ್‌ರವರು ಮತ್ತು ನಾನು ಈ ಸದನದ ಸದಸ್ಯರಾಗಿ ರೂಲ್ಸ್ ಕಮಿಟಿ ಸದಸ್ಯರಾಗಿದ್ದೆವು. ಆಗ ನಿಯಮ 59ನ್ನು ತೆಗೆದು ಹಾಕಬೇಕೆನ್ನುವ ಒಂದು ಪ್ರಸ್ತಾಪ ಬಂತು. ಇದು ಸರಿಯಲ್ಲ, ಇದು ವಿಧಾನ ಪರಿಷತ್ತಿಗೆ fit ಆಗುವುದಿಲ್ಲ. ಬೇರೆ ಯಾವುದಾದರೂ ರೀತಿಯಲ್ಲಿ ಪ್ರಮುಖವಾದ ವಿಷಯಗಳು ಚರ್ಚೆಯಾಗಬೇಕು ಎಂದು ಬಂತು. ನಿಯಮ 59ರ ಬಗ್ಗೆ ತುಂಬಾ ಚರ್ಚೆಯಾಗಿ ಒಂದು ಹಂತದಲ್ಲಿ ನಿಯಮ 59 delete ಆಗಿಬಿಡುತ್ತದೆ ಎನ್ನುವಂಥ ಸಂದರ್ಭ ಬಂದಾಗ ಪ್ರಮುಖವಾಗಿ ನಾವೆಲ್ಲರೂ ನಿಯಮ 59 ಇರಲಿ, ಅದನ್ನು ನಿಯಂತ್ರಣ ಮಾಡುವ ಅಧಿಕಾರ

ಸಭಾಪತಿಗಳಿಗೆ ಇರಲಿ. ನಿಯಮ 59 ಇಲ್ಲದೇ ಹೋದರೆ ಸದನದಲ್ಲಿ ಕೆಲವು ಮಹತ್ವದ ವಿಷಯಗಳು ಚರ್ಚೆಯಾಗುವುದೇ ನಿಂತು ಹೋಗಿಬಿಡುತ್ತದೆ, ಇದರಿಂದ ಕಷ್ಟವಾಗುತ್ತದೆ ಎನ್ನತಕ್ಕಂಥ ಮಾತುಗಳನ್ನು ಹೇಳಿ ನಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿದಂಥ ಹಿನ್ನೆಲೆ ಯಲ್ಲಿ ಆವತ್ತಿನ ರೂಲ್ಸ್ ಕಮಿಟಿ ನಿಯಮ 59 ಈಗ ಇರುವ ಹಾಗೆ ಇರಲಿ ಎಂದು ಬಿಟ್ಟಿದೆ. ಇವತ್ತು ಹೊಸದಾಗಿ ಬದಲಾದ ಪರಿಸ್ಥಿತಿಯಲ್ಲಿ ಮಾನ್ಯ ಮಧುಸೂದನ್‌ರವರು ಒಂದು ಸಲಹೆಯನ್ನು ಕೊಟ್ಟಿದ್ದಾರೆ. ಅದೇ ರೀತಿ ಮಾನ್ಯ ನಾಣಯ್ಯನವರು ಮಾರ್ಮಿಕವಾಗಿ ಕೆಲವು ಸಂಗತಿಗಳನ್ನು ಈ ಸದನದ ಮುಂದಿಟ್ಟಿದ್ದಾರೆ. ಆ ಹಿನ್ನೆಲೆಯಲ್ಲಿ ನಮ್ಮ ಸದನದ ರೂಲ್ಸ್ ಕಮಿಟಿ ಮತ್ತೊಮ್ಮೆ ಅದನ್ನು ಪುನರ್ ಪರಿಶೀಲನೆ ಮಾಡಿ, ಅದನ್ನು ಬದಲಾವಣೆ ಮಾಡಿದರೆ ತಪ್ಪಿಲ್ಲ. ಆದರೆ ಈಗ ನನ್ನ ಪರಿಮಿತಿಯೊಳಗೆ ನಿಯಮ 59 ಇವತ್ತು ಹೇಗಿದೆಯೋ ಅದನ್ನು ಹಾಗೆಯೇ ನಡೆಸಬೇಕೇ ಹೊರತು ಬೇರೆ ತರಹ ನಡೆಸಲಿಕ್ಕೆ ನನಗೆ ಅಧಿಕಾರವಿಲ್ಲ.

**ಶ್ರೀ ಗೋ. ಮಧುಸೂದನ್:-** ಮಾನ್ಯ ಸಭಾಪತಿಯವರೇ, ಒಂದು ತರಹ ನಿಯಮ 330ಕ್ಕಿಂತ ಸ್ವಲ್ಪ ಭಿನ್ನವಾಗಿರಬೇಕು. ನಿಯಮ 330ರಲ್ಲಿ ನಾವು ನೋಟಿಸ್‌ನ್ನು ಕೊಟ್ಟಿರುತ್ತೇವೆ, ಅವರು ತಯಾರಾಗಿ ಬಂದಿರುತ್ತಾರೆ. ಆದರೆ ನಿಯಮ 59ರಲ್ಲಿ short notice ಆಗಿ ನಾವು ಬೆಳಿಗ್ಗೆ ಕೊಟ್ಟಿದ್ದು ಈಗ ಚರ್ಚೆಗೆ ಬರುತ್ತದೆ.

**ಸಭಾಪತಿಯವರು:-** ಆ ಚರ್ಚೆಗೆ ಇಲ್ಲಿ ಬೇಡ. ನಾವು ರೂಲ್ಸ್ ಕಮಿಟಿಯಲ್ಲಿ ಆ ಬಗ್ಗೆ ಚರ್ಚೆಯನ್ನು ಮಾಡೋಣ. ಮಾನ್ಯ ನಾಣಯ್ಯನವರೆ, ಈಗ ನನಗಿರುವ ಒಂದು ತಾಪತ್ರಯವನ್ನು ಹೇಳಿಕೊಳ್ಳುತ್ತೇನೆ. ನಾನು ಒಪ್ಪಿಕೊಂಡಿರುವ ಬೇರೆ ಒಂದು ಕಾರ್ಯಕ್ರಮಕ್ಕೆ ಹೋಗಬೇಕಾಗಿದೆ. ತಾವು 5 ನಿಮಿಷಗಳಲ್ಲಿ ತಮ್ಮ ಮಾತುಗಳನ್ನು ಮುಗಿಸಿದರೆ, ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಹೇಳಿದರೆ ಈ ವಿಷಯ ಮುಗಿದ ನಂತರ ಮಾನ್ಯ ಉಪ ಸಭಾಪತಿಯವರು ಸದನವನ್ನು ನಡೆಸುತ್ತಾರೆ. ನಾನು ಕಾರ್ಯಕ್ರಮಕ್ಕೆ ಹೋಗುವುದಕ್ಕೆ ಅವಕಾಶವಾಗುತ್ತದೆ.

**ಶ್ರೀ ಎಂ.ಸಿ. ನಾಣಯ್ಯ:-** ಮಾನ್ಯ ಸಭಾಪತಿಯವರೇ, ನಾನು ತಮ್ಮನ್ನು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತಿದ್ದೇನೆ. ತಾವು ದಯಮಾಡಿ ಸದನದಲ್ಲಿ ಇರಬೇಕಾಗುತ್ತದೆ. ಬಹಳ ಪ್ರಮುಖವಾಗಿರತಕ್ಕಂಥ ಈ ವಿಚಾರ. ಅಂದರೆ ಮಾನ್ಯ ಉಪ ಸಭಾಪತಿಯವರು ಸದನವನ್ನು ನಡೆಸಬಾರದು ಎಂದಲ್ಲ. ಈ ಚರ್ಚೆ ನಿಮ್ಮ ಸಮ್ಮುಖದಲ್ಲಿಯೇ ಆಗಲಿ. ಮಾನ್ಯ ಮುಖ್ಯಮಂತ್ರಿಯವರು ಇಲ್ಲಿರಬೇಕಾಗುತ್ತದೆ. ತಮ್ಮ ಸಮ್ಮುಖದಲ್ಲಿಯೇ ಇದು ತೀರ್ಮಾನವಾಗಲಿ.

ನಾನು ಏನನ್ನು ಹೇಳುತ್ತಿದ್ದೆ ಎಂದರೆ, ಮಾನ್ಯ ಮುಖ್ಯಮಂತ್ರಿಗಳು ಒಂದು ಹೆಸರನ್ನು ಕಳುಹಿಸಿದರು. ಮಾನ್ಯ ರಾಜ್ಯಪಾಲರಿಗೆ ಈ ಒಂದು ಪ್ರಶ್ನೆ ಬರಬಹುದು. Whether the Governor has the power to say No? ನಮ್ಮ ರಾಜ್ಯಾಂಗದಲ್ಲಿ discretionary power vested with the Governor either under Aricle.239 or 236 or under Article.371, ಅದಕ್ಕೆ ಸಂಬಂಧಪಟ್ಟ ಹಾಗೆ predominant under Article.163. ಆ ಸಂದರ್ಭದಲ್ಲಿ Article.163. confines only to the council of Ministers. Because, there is a Governor, there should be council of Minister to aid and advice the Governor. That is only in relation to the Government, relation to Cabinet proceedings and relation to functioning of the Government. But, even under such circumstances where there is an element of bias, subtle bias in respect of any recommendation laid by the Cabinet. The Governor has got the inherent power to take it up and send it for a decision. ಇದಕ್ಕೆ ನಮ್ಮ ಸರ್ವೋಚ್ಚ ನ್ಯಾಯಾಲಯದಲ್ಲಿ ಎರಡು-ಮೂರು ತೀರ್ಮಾನಗಳು ಬಂತು. ನಾನು ಆ ಹಿನ್ನೆಲೆಯಲ್ಲಿ ಹೇಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳನ್ನು ನಾನು ಈ ಸಂದರ್ಭದಲ್ಲಿ ಕೇಳುತ್ತಿದ್ದೇನೆ; why should the Government insists? ನಾನು ಅವರು ಅಥವಾ ಇವರು ಎಂದು ಹೇಳಲಿಕ್ಕೆ ತಯಾರಿಲ್ಲ. My only point is, ಇವತ್ತು ನಾನು ಈ ರಾಜ್ಯದ ಜನತೆಯ ಪರವಾಗಿ ಕೇಳಿಕೊಳ್ಳುತ್ತಿದ್ದೇನೆ. ಆ ಸಂಸ್ಥೆಯ ಹಿರಿಮೆ ಮತ್ತು ಗರಿಮೆಯ ದೃಷ್ಟಿಯಿಂದ ಹೇಳುತ್ತಿದ್ದೇನೆ. ಇಷ್ಟು ದೊಡ್ಡ ವಿವಾದಾತ್ಮಕವಾದ

ಪ್ರಶ್ನೆ ಬಂದ ಮೇಲೆ any person who then has been proposed, I think in all phrases ಜಸ್ಟೀಸ್ ರಾಮಾಜೋಯಿಸ್‌ರವರು ಹೇಳಿದ ಹಾಗೆ Ok, I do not want to be blame ಎಂದು ಹೇಳತಕ್ಕಂಥಾದ್ದನ್ನು ಮಾಡಿದರೆ I think the matter ends. ಆದರೆ ಅದು ಆಗುವುದಿಲ್ಲವೆಂದಾದರೆ, ಏನಾಗುತ್ತದೆಂದರೆ somewhere I think sticking on to the position and the Government sticking on to the position. ಸನ್ಮಾನ್ಯ ರಾಜ್ಯಪಾಲರು ಮಾನ್ಯ ಮುಖ್ಯಮಂತ್ರಿಗಳಿಗೆ ಸುಮಾರು ಎರಡು ಪುಟಗಳ ಒಂದು ಪತ್ರವನ್ನು ಬರೆದಿದ್ದಾರೆ. ಅದರಲ್ಲಿ ಏನಿದೆ ಎಂಬುದು ನನಗೆ ಗೊತ್ತಿಲ್ಲ. If, the Chief Minister would like to place on record, placed on the table of the House, the letter written by the Governor, why he should not be appointed and whatever reservations, I think, I little happy to have the Chief Minister laid record on the table of the House. ಅದು ಎಲ್ಲಾದರೂ confidential ಎಂದಾದರೆ I don't insist. ನಮಗೆ ಇವತ್ತು ಬೇಕಾಗಿರತಕ್ಕಂಥ ಮಾಹಿತಿ ಏನೆಂದರೆ, ಮಾನ್ಯ ಮುಖ್ಯಮಂತ್ರಿಯವರೆ, how long you want to keep the post of Lokayukta, pending? ಇವತ್ತಿಗೆ 105 ದಿವಸಗಳಾಯಿತು. ಇವತ್ತು ಲೋಕಾಯುಕ್ತರು ಇಲ್ಲ. With the result what happened? ಲೋಕಾಯುಕ್ತರಿಗೆ, ಮಾನ್ಯ ಮುಖ್ಯಮಂತ್ರಿಗಳು, ಮಂತ್ರಿಗಳ ಮತ್ತು ಶಾಸಕರುಗಳ ಮೇಲೆ ಮತ್ತು secretaries level and above. ಇವರುಗಳ ಮೇಲೆ ಮಾತ್ರ ಅವರಿಗೆ ತನಿಖೆ ಮಾಡುವ ಅಧಿಕಾರವಿದೆ. ಇದರ ಪರಿಣಾಮ ಎಲ್ಲಿಗೆ ಮುಟ್ಟಿತು? Now private complaints are filed before the Lokayukta Court. These complaints are against MLAs, Ministers, and Public functionaries and against bureaucrats above the level of secretaries. ಇದು ಏನಾಗುತ್ತದೆ ಎಂದರೆ, now it goes to Lokayukta Police. Unfortunately, there is no Lokayukta. ಮಾನ್ಯ ಮುಖ್ಯಮಂತ್ರಿಗಳು ಇವತ್ತು ಬೆಳಿಗ್ಗೆ ಒಂದು ಪ್ರಶ್ನೆಯನ್ನು ಕೇಳಿದಾಗ ಅದಕ್ಕೆ ಒಂದು ಉತ್ತರವನ್ನು ಕೊಟ್ಟರು. ಉತ್ತರದಲ್ಲಿ ಅವರು, 'ಲೋಕಾಯುಕ್ತರು ಇಲ್ಲದೇ ಹೋದರೆ

Senior Upalokayukta ಇದನ್ನು ನೋಡಿಕೊಳ್ಳುತ್ತಾರೆ' ಎಂದು ಹೇಳಿದರು. Senior Upalokayukta has got the power only in respect of the administration. He can't function as Lokayukta. ಲೋಕಾಯುಕ್ತರು ಯಾವ ಕೆಲಸವನ್ನು ಮಾಡುವುದಕ್ಕೆ ಅಧಿಕಾರ ಇದೆಯೋ ಆ ಕೆಲಸವನ್ನು ಉಪ ಲೋಕಾಯುಕ್ತರು ಮಾಡುವ ಅಧಿಕಾರವನ್ನು ನಾವು ನಮ್ಮ ಕಾಯ್ದೆಯಲ್ಲಿ ಕೊಟ್ಟಿಲ್ಲ. ಆದರೆ ಉಪ ಲೋಕಾಯುಕ್ತರು ಎಲ್ಲಾದರೂ ಗೈರುಹಾಜರಿದ್ದರೆ ಅಂತಹ ಕೆಲಸವನ್ನು ಲೋಕಾಯುಕ್ತರು ಮಾಡುವುದಕ್ಕೆ ನಾವು ಅಧಿಕಾರವನ್ನು ಕೊಟ್ಟಿದ್ದೇವೆ. ಇದರ ಪರಿಣಾಮ ಏನಾಗುತ್ತದೆ ಎಂದರೆ, ಲೋಕಾಯುಕ್ತರು ಇಲ್ಲದೇ ಇರತಕ್ಕಂಥ ಸಂದರ್ಭದಲ್ಲಿ ಲೋಕಾಯುಕ್ತ ಪೊಲೀಸ್‌ನವರು ಯಾರಿರುತ್ತಾರೆ, ಅವರು directly under the control of the Government, today. ನಮ್ಮ ಲೋಕಾಯುಕ್ತ ಪೋಲಿಸರು ಯಾರಿದ್ದಾರೆ, they are functioning independently. Lokayukta doesn't have direct control; Lokayukta doesn't have control over the investigation of the Lokayukta police. But, Lokayukta has got the power to call for the files and find out how the investigation is going on. He may not have the power to conduct the investigation in his fashion. But, he has got the power to call for it and find out whether the Lokayukta police is conducting the investigation on right lines or not. ಆ ಅಧಿಕಾರವನ್ನು ನೋಡಲಿಕ್ಕೆ ಇರುವಂಥದ್ದಕ್ಕೆ ಇವತ್ತು ಲೋಕಾಯುಕ್ತ ಇಲ್ಲ. ಇದರ ಪರಿಣಾಮ ಏನಾಗುತ್ತದೆ ಎಂದರೆ we arte seeing the 'B' reports. Then again in the Court this matter should be agitated. ನಾನು ಇದನ್ನು ಜಾಸ್ತಿ ವಿಸ್ತಾರ ಮಾಡಿ ಹೇಳುವುದಕ್ಕೆ ಹೋಗುವುದಿಲ್ಲ. ಆದ್ದರಿಂದ, ದಯವಿಟ್ಟು ವಿಚಾರ ಮಾಡಿ. Don't stand on prestige issue. ಮಾನ್ಯ ಸದಾನಂದಗೌಡರು ಹೊಸದಾಗಿ ಮುಖ್ಯಮಂತ್ರಿಗಳಾಗಿದ್ದಾರೆ. ಅವರ ಮನಸ್ಸಿನಲ್ಲಿ ಆಡಳಿತಕ್ಕೆ ಹೊಸ ಆಯಾಮ ಕೊಡುವ ವಿಚಾರಗಳಿರಬಹುದು, ಹಿಂದೆ ನಡೆದಿರುವಂತಹ ಘಟನೆಗಳು ಸ್ವಲ್ಪಮಟ್ಟಿಗೆ ಮಾಸಿ, ಹೊಸ ಚರಿತ್ರೆ ನಿರ್ಮಾಣವಾಗಬೇಕೆನ್ನುವ

ವಿಚಾರ ಇರಬಹುದು. ಮಾನ್ಯ ಮುಖ್ಯಮಂತ್ರಿಗಳ ಮನಸ್ಸು ನನಗೆ ತಿಳಿದಿದೆ. ನಾನು ಮತ್ತು ಅವರು ಬಹಳ ವರ್ಷಗಳ ಕಾಲ ಒಟ್ಟಿಗಿದ್ದೆವು. ಅವರ ಮನಸ್ಸಿನ ಅಂತರಾಳದಲ್ಲಿ ಏನಿದೆ ಎನ್ನುವುದು ನನಗೆ ಗೊತ್ತಿದೆ. Honestly let me tell you, he wants to propose someone who is not controversial and who is acceptable to all. ಮಾನ್ಯ ಮುಖ್ಯಮಂತ್ರಿಗಳು ಮಂಗಳೂರಿನಲ್ಲಿ ನಡೆದಂತಹ ಒಂದು ಸಭೆಗೆ ಬಂದಾಗ, ಪತ್ರಿಕಾ ಪ್ರತಿನಿಧಿಗಳ ಜೊತೆ ಮಾತನಾಡುವ ಸಂದರ್ಭದಲ್ಲಿ, ನಾವು ಒಂದು ಹೆಸರನ್ನು ಸೂಚಿಸಿ ಕಳುಹಿಸಿದ್ದೇವೆ, ರಾಜ್ಯಪಾಲರ ಜೊತೆ ಮಾತುಕತೆಯಾಡಿದ್ದೇನೆ, ಬಹುಶಃ ರಾಜ್ಯಪಾಲರು ಕೆಲವು ಕಾರಣಗಳಿಂದ ಅದು ಬೇಡ ಎಂದು ಹೇಳಿದರೆ ಬೇರೆ ಹೆಸರುಗಳನ್ನು ಸೂಚಿಸಲು ಚಿಂತನೆ ಮಾಡುವುದರ ಬಗ್ಗೆ ನಾವು ಪರಿಶೀಲನೆ ಮಾಡುತ್ತೇವೆ' ಎಂದು ಹೇಳಿದ್ದರು. ಅದು ಪತ್ರಿಕೆಯಲ್ಲಿ ಬಂತು. ರಾಜಕಾರಣಿಗಳಿರಲಿ ಅಥವಾ ಯಾರೇ ಭ್ರಷ್ಟರಿರಲಿ, ಅವರ ಬಗ್ಗೆ ಲೋಕಾಯುಕ್ತದವರು ತನಿಖೆ ಮಾಡುವ ಸಂದರ್ಭ ಬಂದಾಗ, ಲೋಕಾಯುಕ್ತ ಪೋಲಿಸರ ಮೇಲೆ ರಾಜಕೀಯದಲ್ಲಿರುವವರು ಅಥವಾ ಹೊರಗಡೆ ಇರುವವರು ಒತ್ತಡ ತರುತ್ತಾರೆ. ಆ ಪೊಲೀಸರೂ ಕೂಡ, ಮುಂದೆ ಇಂಥವರೇ ಅಧಿಕಾರಕ್ಕೆ ಬಂದುಬಿಟ್ಟರೆ ಏನು ಮಾಡಬೇಕೆಂದು ಯೋಚಿಸಿ 'ಬಿ' ರಿಪೋರ್ಟ್ ಹಾಕುವ ಪರಿಸ್ಥಿತಿ ನಿರ್ಮಾಣವಾಗಿದೆ. ಹೀಗಾಗಿ ಭ್ರಷ್ಟಾಚಾರ ನಿಯಂತ್ರಣ ಮಾಡುವುದಕ್ಕಾಗುವುದಿಲ್ಲ. Let us not do that. ಇವತ್ತು ನಾವು ಯಾವ ಮಟ್ಟಕ್ಕೆ ತಲುಪಿದ್ದೇವೆ ಎಂದರೆ we are all looked upon with contempt. ಈ ಹಿನ್ನೆಲೆಯಲ್ಲಿ ಲೋಕಾಯುಕ್ತ ಸಂಸ್ಥೆ ಇವತ್ತು ಇಲ್ಲದೇ ಹೋದರೆ ನಾಳೆ ಏನಾಗುತ್ತದೆ ಎನ್ನುವುದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕೇ ಬೇಡವೇ? ಯಾವುದೋ ಒಂದು ಕಾರಣದಿಂದ, ಯಾವುದೋ ಒಂದು ರಾಜಕೀಯ ಒತ್ತಡ ಉಂಟು ಎಂದು ಹೇಳಿ, I do not want the Chief Minister to compromise his position at any cost. ಎಷ್ಟು ದಿವಸ ನಾನು ಮುಖ್ಯಮಂತ್ರಿಯಾಗಿರುತ್ತೇನೆ ಎಂಬುದು ಮುಖ್ಯವಲ್ಲ. I am the Chief Minister and I continue to be a Chief Minister and I will continue my

full term. I am not a driver to be lead by someone else from the back ಎಂದು ನೀವು ಹೇಳಿದ್ದೀರಿ. ಆದ್ದರಿಂದ, I want you to assert yourself now. ಮಾನ್ಯ ಮುಖ್ಯಮಂತ್ರಿಗಳು ನಿನ್ನೆ ಮಾತನಾಡುತ್ತಾ, 'ನಾನು ಮುಖ್ಯಮಂತ್ರಿ ಆದಮೇಲೆ ಯಾವುದೇ ಮಂತ್ರಿಗಳ ವಿಚಾರ ಬಂದರೆ ಅವರಿಗೆ ಪತ್ರ ಬರೆದು, ಚರ್ಚೆ ಮಾಡಿ ಮುಂದುವರೆಯುತ್ತೇನೆಯೇ ಹೊರತು ನಾನಾಗಿ ತೀರ್ಮಾನ ತೆಗೆದುಕೊಳ್ಳುವುದಿಲ್ಲ' ಎಂಬ ಮಾತನ್ನು ಹೇಳಿದ್ದರು. ನಾನು ಆಗ ಮುಖ್ಯಮಂತ್ರಿಗಳಿಗೆ ಒಂದು ಮಾತನ್ನು ಹೇಳಿದೆ "Magnanimity is not seldom the truest wisdom. Great men and little minds seldom go together". ಇದನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಿ. ಇದನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳದೇ ಹೋದರೆ ಎಲ್ಲಾದರೂ ನೀವು magnanimity ಉಂಟು, ಯಾರೋ ಒಂದು ಕಡೆ ಹಿಂಭಾಗದಿಂದ ಅಥವಾ ಯಾರೋ ಹೇಳುತ್ತಿದ್ದಾರೆ ಆದ್ದರಿಂದ why should I not stick on ಎಂದು ಭಾವಿಸುವುದಾದರೆ you are compromising your position to that extent, don't try to do that. ಈ ಹಿನ್ನೆಲೆಯಲ್ಲಿ, let me tell you Governor has got the power to reject; he can exercise his power of discretion. The process of consultation ಎಂದು ಬಂದಾಗ take the instance of the case of P.J. Thomas, Chief Vigilance Commissioner of India. That was the committee headed by the Prime Minister along with the Home Minister and along with the Leader of the Opposition. Only three members. Prime Minister and the Home Minister agreed, but Smt. Sushma Swaraj, being the Leader of the Opposition; ultimately she did not accept that. ಅವರು ಬೇಡ ಎಂದು ಹೇಳಿದರು because something had taken place while he was working as a Secretary in Kerala relating to Palmolein Oil Import Scam and she said 'No, don't do that" ಅಲ್ಲಿ ಕೂಡ it was majority. The Prime Minister and the Home Minister put together they were in a majority and they appointed. Then ultimately what happened? The

matter went to the Supreme Court. ಸುಪ್ರೀಂ ಕೋರ್ಟ್‌ನವರು it is consensus ಎಂದು ಹೇಳಿದರು. Consensus ಎಂದರೇನು? Consultation means it is the question of counseling yourself and then coming to a consensus. ಅವರೊಬ್ಬರು ಹಾಗೆ ಮಾಡಿದ್ದಕ್ಕೋಸ್ಕರ Supreme Court nullified it and said 'No, he is not to be appointed as the Chief Vigilance Commissioner" even though there was no direct charge against him. ಆದರೆ ಸುಪ್ರೀಂ ಕೋರ್ಟ್‌ನವರು ಏನು ಹೇಳಿದರು ಎಂದರೆ "He is under cloud, till such time the cloud is cleared, you can't put him there." Does it not apply in this case also Mr. Chief Minister? ನಾಳೆ ಇದಕ್ಕೆ ಕೋರ್ಟಿನಿಂದ ತೀರ್ಪನ್ನು ತರಬೇಕಾದ ಪರಿಸ್ಥಿತಿಯನ್ನು ದಯವಿಟ್ಟು ನಿರ್ಮಾಣ ಮಾಡಬೇಡಿ. I do not want the Judiciary to come in the way. We are all Parliamentary functionaries, Speaker, Chairman, Leaders of the Opposition, Chief Miunister and the Chief Justice. Why should the Judiciary interfere in our functioning? Are you to say that we are incapable of taking the decisions or we are taking the decision in a partisan manner, we are taking the decision in a biased manner? Why should we arrive ourselves to be scuttled by the High Court now. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳೇ, ದಯವಿಟ್ಟು ಮೊದಲು ಲೋಕಾಯುಕ್ತ ಹುದ್ದೆಯನ್ನು ತುಂಬಿ. ಒಂದೇ ಒಂದು ಹೆಸರಿಗೆ ತಾವು ಅಂಟಿಕೊಳ್ಳುವುದಕ್ಕೆ ಹೋಗಬೇಡಿ. There are other several names. ಆ ನಿಟ್ಟಿನಲ್ಲಿ ಗಮನ ಕೊಡಿ. ನಿಮ್ಮ ಅಧಿಕಾರವನ್ನು ಚಲಾವಣೆ ಮಾಡಿ, ರಾಜ್ಯದ ಜನತೆಗೆ ಮತ್ತು ಅವರ ಮುಖಾಂತರ ರಾಷ್ಟ್ರದ ಜನತೆಗೆ ಒಂದು ಸಂದೇಶವನ್ನು ನೀಡಿ. Because, Karnataka Lokayukta and Karnataka Lokayukta Act is supposed to be the best in the country. ನಾವು ಇವತ್ತಿಗೂ ಹೇಳುತ್ತೇವೆ. There is no other Lokayukta Act which is as powerful and as good as it is now. It may require so many

amendments. ಅದನ್ನು ಆಗಲೇ ಮುಖ್ಯಮಂತ್ರಿಗಳು ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ don't stand on any formalities ಎಂದು ಹೇಳಬಯಸುತ್ತೇನೆ. ಕರ್ನಾಟಕ ರಾಜ್ಯದ ಜನತೆಯ ಮನಸ್ಸಿನಲ್ಲಿ ಲೋಕಾಯುಕ್ತ ಹುದ್ದೆಯಲ್ಲಿ ಪ್ರಮಾಣಿಕ ವ್ಯಕ್ತಿ ಇರಬೇಕು ಎನ್ನುವ ಚಿಂತನೆ ಇದೆ. ಸ್ವಲ್ಪ ಕಳಂಕ ಬಂದರೂ ಕೂಡ ಅಂಥವರು ಆ ಸ್ಥಾನದಲ್ಲಿ ಇರಬಾರದು, compromise ಆಗುವಂತಹ ವ್ಯಕ್ತಿ ಆಗಿರಬಾರದು. ಆದರೆ ಇವತ್ತು ತಾವು ಸೂಚಿಸುತ್ತಿರುವವರನ್ನು ತರುವುದರ ಮುಖಾಂತರ, ಸರ್ಕಾರದ ಮೇಲೆ ಅಥವಾ ಎಂಎಲ್‌ಎಗಳ ಮೇಲೆ ಅಥವಾ ಮಂತ್ರಿಗಳ ಮೇಲೆ, ಮಾಜಿ ಮುಖ್ಯಮಂತ್ರಿಗಳ ಮೇಲೆ ಇರುವ ಆಪಾದನೆ ಪಕ್ಕಕ್ಕಿಟ್ಟು compromise ಆಗುವಂತಹ ಪರಿಸ್ಥಿತಿ ನಿರ್ಮಾಣ ಮಾಡುವುದಕ್ಕೋಸ್ಕರ ಈ ರೀತಿ ಮಾಡುತ್ತಿದ್ದಾರೆ ಎನ್ನುವಂತಹ ಸಂಶಯದ ಭೂತವನ್ನು ನಿಮ್ಮ ತಲೆಯ ಮೇಲೆ ಹೊತ್ತುಕೊಳ್ಳುವುದಕ್ಕೆ ಹೊರಟಿದ್ದೀರಿ? ಯಾವುದೇ ಕಳಂಕವನ್ನು ಇನ್ನೊಬ್ಬರ ಪರವಾಗಿ ನೀವು ತಲೆಮೇಲೆ ಹೊತ್ತುಕೊಳ್ಳಬಾರದು. ನಿಮ್ಮ ಕಳಂಕವನ್ನು ಕಳಚಿ ಹಾಕಬೇಕಾದರೆ

you need have to send another name, acceptable to the people of Karnataka, acceptable to all the right thinking individuals of Karnataka. ಆ ಹುದ್ದೆಯಲ್ಲಿ ಕುಳಿತುಕೊಂಡಿರುವವರನ್ನು he is the most honest man ಎಂದು ಜನ ಹೇಳಬೇಕು. ಅವರ ಬಗ್ಗೆ ಯಾರೂ ಚಕರಾ ಎತ್ತರದಂತಿರಬೇಕು. ಜಸ್ಟೀಸ್ ಹೆಗಡೆಯವರು ರಾಜೀನಾಮೆ ಕೊಟ್ಟಾಗ ಎಲ್ಲರೂ ಹೋಗಿ, ರಾಜೀನಾಮೆ ವಾಪಸ್ಸು ತೆಗೆದುಕೊಳ್ಳಬೇಕೆಂದು ಕೇಳಿದ್ದೆವು. ಅಂತಹ ಪರಿಸ್ಥಿತಿ ನಿರ್ಮಾಣ ಮಾಡುವಂತಹ ವ್ಯಕ್ತಿಯನ್ನು ನೇಮಿಸಿ. ಆ ರೀತಿ ಮಾಡದೇ ಹೋದರೆ let me tell you, I need have to say Hon'ble Chief Minister ನಿಮಗೆ partisan and biased attitude ಇಲ್ಲ. ಆದರೆ ಈ ಲೋಕಾಯುಕ್ತಕ್ಕೆ ಸಂಬಂಧಪಟ್ಟ ಹಾಗೆ ನೀವು ನಿಮ್ಮ ಚಿಂತನೆಯನ್ನು ಬದಲಾವಣೆ ಮಾಡಿ ಎಲ್ಲರಿಗೂ ಬೇಕಾಗಿರುವಂತಹ, ಪ್ರಾಮಾಣಿಕವಾಗಿರುವಂತಹ, ಆ ಕೆಲಸವನ್ನು ನಿರ್ಭಯವಾಗಿ ನಿರ್ವಹಿಸುವಂತಹ ಇನ್ನೊಬ್ಬ ವ್ಯಕ್ತಿಯ ಹೆಸರನ್ನು ಸೂಚಿಸದೇ ಹೋದರೆ ನೀವು ಕೂಡ ಕಳಂಕವನ್ನು

ಹೊತ್ತುಕೊಳ್ಳುವಂತಹ ಅನಿವಾರ್ಯ ಪರಿಸ್ಥಿತಿ ಬರಬಹುದು. ಆಗ ಕರ್ನಾಟಕದ ಜನತೆ ನಿಮ್ಮನ್ನು ಕ್ಷಮಿಸುವುದಿಲ್ಲ.

(1.30 ಗಂಟೆ)

ಈ ಹಿನ್ನೆಲೆಯಲ್ಲಿ it's my request. ಆ ಸಂಸ್ಥೆಗೆ ಲೋಕಾಯುಕ್ತರನ್ನು ನೇಮಕ ಮಾಡಿ. ಯಾರೆಲ್ಲಾ ಜೈಲಿಗೆ ಹೋಗಬೇಕು ಅವರೆಲ್ಲಾ ಜೈಲಿಗೆ ಹೋಗಲಿ. ಅದರಲ್ಲಿ ನಮ್ಮ ಶಾಸಕರುಗಳು, ಮಂತ್ರಿಗಳು, ಮುಖ್ಯಮಂತ್ರಿಗಳು, ಮಾಜಿ ಮುಖ್ಯಮಂತ್ರಿಗಳು ಮತ್ತು ದಳ್ಳಾಳಿಗಳಿರಬಹುದು, ಇವರೆಲ್ಲರೂ ಜೈಲಿಗೆ ಹೋಗಬೇಕು. ಈ ಕೆಲಸವನ್ನು ಕರ್ನಾಟಕ ರಾಜ್ಯದಲ್ಲಿ ಮಾಡಿಬಿಡೋಣ. ಆ ಕೆಲಸವನ್ನು ಈಗ ಬಂದಿರುವ ಮಾನ್ಯ ಮುಖ್ಯಮಂತ್ರಿಗಳು ಮಾಡುತ್ತಾರೆ ಎನ್ನುವ ನಂಬಿಕೆ ನನಗಿದೆ. ಆದರೆ, ಅವರ ಅಧಿಕಾರ ಏನಾದರೂ ನನಗೆ ಸಿಕ್ಕಿಬಿಟ್ಟಿದ್ದರೆ ಇಷ್ಟೊತ್ತಿಗೆ ನಾನು ಆ ಕೆಲಸ ಮಾಡಿರುತ್ತಿದ್ದೆ.

**ಸಭಾಪತಿಯವರು:–** ಆ ಅಧಿಕಾರ ನಿಮಗೆ ಸಿಗುವುದಿಲ್ಲ.

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೇ, ಆ ಅಧಿಕಾರ ನನಗೆ ಸಿಗುವುದಿಲ್ಲ ಎಂಬುದು ನನಗೆ ಗೊತ್ತಿದೆ. ಆ ಅಧಿಕಾರ ಸಿಕ್ಕಿದ್ದರೆ ನಾನು 24 ಗಂಟೆಯೊಳಗೆ ಆ ಕೆಲಸವನ್ನು ಮಾಡಿ ಬಿಸಾಕುತ್ತಿದ್ದೆ. ಈ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಸಮಯವನ್ನು ಕಳೆಯುವುದು ಬೇಡ. ರಾಜ್ಯದ ಜನತೆ ಮಾನ್ಯ ಮುಖ್ಯಮಂತ್ರಿಗಳ ಮೇಲೆ ಇಟ್ಟಿರುವಂತಹ ವಿಶ್ವಾಸಕ್ಕೆ ಅರ್ಹರಾಗಿಯೇ ಕೆಲಸವನ್ನು ಮಾಡಬೇಕು. ಆ ಅರ್ಹತೆಯ ಶಕ್ತಿ ಅವರಲ್ಲಿ ಇರಬೇಕಾದರೆ ನಾನು ಅದನ್ನೆ ಹೇಳಿದೆ, How long you remain as a Chief Minister is not important. But, what footprints you have left behind on the sands of time is more important. Kindly do that, don't delay that. Send another man who is acceptable to all. ಅಂಥದ್ದನ್ನು ಕಳುಹಿಸಿದೆ ಹೋದರೆ ಕಳಂಕವನ್ನು ಅವರು ಒಪ್ಪಿಕೊಳ್ಳಲೇಬೇಕಾಗುತ್ತದೆ. This is my request.

**ಶ್ರೀ ಎಚ್.ಸಿ. ನೀರಾವರಿ:–** ಮಾನ್ಯ ಸಭಾಪತಿಯವರೇ, ನಾನು ನೋಟಿಸ್‌ಗೆ ಸಹಿ ಹಾಕಿದ್ದೇನೆ. ನನಗೆ ಕೇವಲ ಐದು ನಿಮಿಷ ಅವಕಾಶ ಕೊಡಿ.

**ಸಭಾಪತಿಯವರು:–** ನೋಟೀಸ್ ಸಹಿ ಹಾಕಿದವರಿಗೆಲ್ಲರಿಗೂ ಅವಕಾಶ ಕೊಡುವುದಕ್ಕಾಗುವುದಿಲ್ಲ. ನಾನು ಈಗ ಈ ವಿಷಯದ ಬಗ್ಗೆ ಚರ್ಚೆ ಪ್ರಾರಂಭ ಮಾಡಲಿಲ್ಲ.

**ಶ್ರೀ ಎಚ್.ಸಿ. ನೀರಾವರಿ:–** ಮಾನ್ಯ ಸಭಾಪತಿಯವರೇ, ನಾನು ಚರ್ಚೆ ಮಾಡುವುದಿಲ್ಲ.

**ಸಭಾಪತಿಯವರು:–** ಮಾನ್ಯ ನಾಣಯ್ಯನವರು ಪ್ರಿಲಿಮಿನರಿ ಸಬ್‌ಮಿಷನ್‌ಗೆ ಸ್ವಲ್ಪ ವಿಷಯಗಳನ್ನು ಹೇಳಿದರು. ನಾನು ಇನ್ನೂ ನಿಯಮ 59ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಒಪ್ಪಿದ್ದೇನೆಯೋ ಇಲ್ಲವೋ ಎಂಬುದನ್ನು ಹೇಳಿಲ್ಲ.

**ಶ್ರೀ ಹೆಚ್.ಸಿ. ನೀರಾವರಿ:–** ಮಾನ್ಯ ಸಭಾಪತಿಯವರೇ, ನಾನು ಕೂಡ ಪ್ರಿಲಿಮಿನರಿ ಸಬ್‌ಮಿಷನ್ ಮಾಡುತ್ತೇನೆ. ಕೇವಲ ಐದು ನಿಮಿಷದಲ್ಲಿ ಮಾಡುತ್ತೇನೆ.

**ಸಭಾಪತಿಯವರು:–** ಪ್ರಿಲಿಮಿನರಿ ಸಬ್‌ಮಿಷನ್‌ನ್ನು ಒಬ್ಬರೆ ಮಾಡುವುದು. ಜಾಸ್ತಿ ಜನ ಮಾಡುವುದಕ್ಕೆ ಬರುವುದಿಲ್ಲ. ಈಗ ಸಿದ್ದರಾಮಣ್ಣನವರು ತಾಂತ್ರಿಕ ವಿಷಯವನ್ನು ಹೇಳುತ್ತಿದ್ದಾರೆ.

**ಶ್ರೀ ಹೆಚ್.ಸಿ. ನೀರಾವರಿ:–** ಮಾನ್ಯ ಸಭಾಪತಿಯವರೇ, ಈಗ ಎಲ್ಲಾ ವಿಷಯಗಳು ಇಲ್ಲಿ ತಾಂತ್ರಿಕತೆಯಿಂದಲೇ ನಡೆಯುತ್ತವೆ. ಆದರೆ, ವಿಷಯದ ಗಾಂಭೀರ್ಯತೆಯ ಬಗ್ಗೆ ನಾವು ಚಿಂತೆ ಮಾಡುತ್ತಿಲ್ಲ.

**ಶ್ರೀ ವಿ.ಆರ್. ಸುದರ್ಶನ್:-** ಮಾನ್ಯ ಸಭಾಪತಿಯವರೇ, ಪ್ರಿಲಿಮಿನರಿ ಸಬ್‌ಮಿಷನ್‌ನ್ನು ಸನ್ಮಾನ್ಯ ನಾಣಯ್ಯನವರು ಮಾಡಿದ್ದಾರೆ. ಪ್ರಿಲಿಮಿನರಿ ಸಬ್‌ಮಿಷನ್‌ನಲ್ಲಿಯೇ ಹೇಳಬೇಕಾದ್ದೆಲ್ಲವೂ ಹೇಳಿದ್ದಾಗಿದೆ. ಇನ್ನೇನು ಉಳಿದಿರುತ್ತದೇ?

**ಶ್ರೀ ಎಚ್.ಸಿ. ನೀರಾವರಿ:-** ಮಾನ್ಯ ಸಭಾಪತಿಯವರೇ, ಅವರು ಹೇಳಿದ್ದನ್ನು ಬಿಟ್ಟು ನಾನು ಬೇರೆ ವಿಷಯವನ್ನು ಹೇಳುತ್ತೇನೆ.

**ಶ್ರೀ ಆರ್.ಕೆ. ಸಿದ್ದಾರಾಮಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆ ನಿಯಮದ ಪುಸ್ತಕದಲ್ಲಿರುವಂತಹ ಒಂದು ಅಂಶವನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈಗ ಸನ್ಮಾನ್ಯ ನಾಣಯ್ಯನವರು ಪ್ರಿಲಿಮಿನರಿ ಸಬ್‌ಮಿಷನ್ ಮಾಡಿದ್ದಾರೆ. ಅಪಾಯಿಂಟ್‌ಮೆಂಟ್‌ಗೆ ಸಂಬಂಧಪಟ್ಟ ಹಾಗೆ ನಾನು ಕೂಡ ಲೋಕಾಯುಕ್ತ ಸೆಕ್ಷನ್ 3 ಅನ್ನು ನೋಡಿದ್ದೇನೆ. ಆ ಮೂರರಲ್ಲಿ ಒಂದು ಭಾಗದ ಉಲ್ಲೇಖವನ್ನು ಸನ್ಮಾನ್ಯ ನಾಣಯ್ಯನವರು ಮಾಡಿದ್ದಾರೆ. ರಾಜ್ಯಪಾಲರಿಗೆ ಇರತಕ್ಕಂಥ ಅಧಿಕಾರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನೇಮಕಾತಿಯಾಗುವಂತಹ ಸಂದರ್ಭದಲ್ಲಿ ರಾಜ್ಯಪಾಲರಿಗೆ ಅಧಿಕಾರವಿದೆ ಎನ್ನುವಂತಹ ಅಂಶ ಇದೆ. ಅದೇ ರೀತಿ ಆ ಅಧಿಕಾರವನ್ನು ಯಾವ ರೀತಿ ಬಳಸಬೇಕು ಎನ್ನುವಂಥದ್ದು ಇದೆ. ಇಲ್ಲಿ ಸರ್ಕಾರದಲ್ಲಿ ನಡೆದಂತಹ ನಡವಳಿಕೆ ಬಗ್ಗೆಯೂ ಚರ್ಚೆಯಾಗಬೇಕಾಗುತ್ತದೆ ಅದೇ ರೀತಿ ಘನತೆವೆತ್ತ ರಾಜ್ಯಪಾಲರ ಕಚೇರಿಯಲ್ಲಿ ಏನು ನಡವಳಿಕೆಗಳು ನಡೆಯುತ್ತಿದೆ ಎಂಬುದರ ಬಗ್ಗೆಯೂ ಚರ್ಚೆಯಾಗಬೇಕಾಗುತ್ತದೆ. ಹಾಗಾಗಿ ಈ ಚರ್ಚೆಗೆ ಹೋಗುವುದಕ್ಕಿಂತ ಮುಂಚೆ ನನ್ನ ವಿನಂತಿ ಏನೆಂದರೆ, ರಾಜ್ಯಪಾಲರ ಕಚೇರಿಯಲ್ಲಿ ನಡೆಯತಕ್ಕಂಥ ನಡವಳಿಕೆಯ ಬಗ್ಗೆಯೂ ತಾವು ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವಂಥಿದ್ದರೆ ಚರ್ಚೆ ಮುಂದುವರೆಯಬಹುದು. ಇಲ್ಲದಿದ್ದರೆ ಚರ್ಚೆ ಮಾಡುವುದಕ್ಕೆ ಇಲ್ಲಿ ಒಂದು ಅಡ್ಡಿಯೂ ಇದೆ. ನಿಯಮ 306।(10) ರ ಅಡಿಯಲ್ಲಿ "ರಾಷ್ಟ್ರಾಧ್ಯಕ್ಷರು ಅಥವಾ ರಾಜ್ಯಪಾಲರ ಅಥವಾ ಯಾವುದೇ ನ್ಯಾಯಾಲಯದ ನಡವಳಿಕೆಯನ್ನು ಕುರಿತು ಆರೋಪಿಸತಕ್ಕದ್ದಲ್ಲ ಅಥವಾ

ಚರ್ಚೆಯನ್ನು ಪರಿಣಾಮಕಾರಿಯಾಗಿ ಮಾಡುವ ಉದ್ದೇಶಕ್ಕಾಗಿ ರಾಜ್ಯಪಾಲರ ಅಥವಾ ರಾಷ್ಟ್ರಾಧ್ಯಕ್ಷರ ಹೆಸರನ್ನು ಬಳಸತಕ್ಕದ್ದಲ್ಲ" ಎಂದು ಇದೆ. ಆದರೆ, ಈ ವಿಚಾರದಲ್ಲಿ ಹೆಸರನ್ನು ಬಳಸದೆಯೇ ನಾವು ಚರ್ಚೆ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಹಾಗಾಗಿ ಈ ಚರ್ಚೆಗೆ ಅವಕಾಶ ಕೊಡಬೇಕೋ ಬೇಡವೋ ಎನ್ನುವಂಥದ್ದನ್ನು ತಾವು ದಯಮಾಡಿ ಗಮನಿಸಬೇಕಾಗುತ್ತದೆ. ಹೊರಗಡೆ ಏನೇನು ಚರ್ಚೆಯಾಂಬೇಕು ಅದೆಲ್ಲಾ ಚರ್ಚೆಯಾಗಿದೆ.

(ಗೊಂದಲ)

**ಶ್ರೀ ಎಂ.ಸಿ. ನಾಣಯ್ಯ:-** ಅದನ್ನು ಸದನದ ಹೊರಗಡೆ ಚರ್ಚೆ ಮಾಡೋಣ.

(ಗೊಂದಲ)

**ಶ್ರೀ ವಿ. ಮನೋಹರ ಮಸ್ಕಿ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಿಯಮ 59 ರ ಅಡಿಯಲ್ಲಿ ನೋಟಿಸ್ ಕೊಟ್ಟಿದ್ದಾರೆ. ಹೊರಗಡೆ ಚರ್ಚೆ ಮಾಡೋಣ ಬನ್ನಿ ಎಂದು ಹೇಳುತ್ತಾರೆ. ಇದು ಸದನಕ್ಕೆ ಮಾಡುವ ಅವಮಾನವಲ್ಲವೇ? ನಿಯಮ 59 ರ ಅಡಿಯಲ್ಲಿ ನೋಟಿಸ್ ಏಕೆ ಕೊಟ್ಟಿದ್ದಾರೆ? ದಯವಿಟ್ಟು ಅದನ್ನು ಅವರು ವಾಪಸ್ ತೆಗೆದುಕೊಳ್ಳಬೇಕು. 'ಸದನದ ಹೊರಗಡೆ ಚರ್ಚೆ ಮಾಡೋಣ ಬನ್ನಿ' ಎಂದು ಮಾನ್ಯ ನಾಣಯ್ಯನವರು ಹೇಳಿರುವ ಮಾತನ್ನು ಕಡತದಿಂದ ತೆಗೆಸಬೇಕು. ಇಲ್ಲದಿದ್ದರೆ ಆ ಮಾತನ್ನು ಅವರು ವಾಪಸ್ ತೆಗೆದುಕೊಳ್ಳಬೇಕು. ಅವರು 59ರ ಅಡಿಯಲ್ಲಿ ಏಕೆ ನೋಟಿಸ್ ಕೊಟ್ಟಿದ್ದಾರೆ. 'ಹೊರಗಡೆ ಹೋಗೋಣ ಬನ್ನಿ' ಎಂದು ಹೇಳಿದರೆ ಅದು ಈ ಸದನಕ್ಕೆ ಅಗೌರವ ಆಗುತ್ತದೆ. ಮಾನ್ಯ ನಾಣಯ್ಯನವರು ಆ ಮಾತನ್ನು ವಾಪಸ್ ತೆಗೆದುಕೊಳ್ಳಬೇಕು. ಸದನದ ಹೊರಗಡೆ ಮಾತನಾಡುವುದಾದರೆ ಸದನದ ಒಳಗೆ ಚರ್ಚೆ ಮಾಡುವುದಕ್ಕೆ ಏಕೆ ನೋಟಿಸ್ ಕೊಟ್ಟಿದ್ದಾರೆ? ಒಂದೂವರೆ ಗಂಟೆಗಳ ಕಾಲ ಈ ಸದನದಲ್ಲಿ ಏಕೆ ಚರ್ಚೆ ಮಾಡಿದ್ದಾರೆ? ಈ ಸದನಕ್ಕೆ ಗೌರವ ಇಲ್ಲವೇ? ಹಿರಿಯರು ಎಂದು ನಾವು ಗೌರವ ಕೊಡುತ್ತೇವೆ. ಆದರೆ, ಹಿರಿಯರು ಆ ಗೌರವವನ್ನು ಎತ್ತಿಹಿಡಿಯಬೇಕು.

ಸದನದ ಘನತೆಯನ್ನು ಎತ್ತಿಹಿಡಿಯಬೇಕು. ಹೊರಗಡೆ ಚರ್ಚೆ ಮಾಡೋಣ ಬನ್ನಿ ಎಂದು ಯಾಕೆ ಹೇಳುವುದು? ಮಾನ್ಯ ಸದಸ್ಯರಾದಂತಹ ಸಿದ್ದರಾಮಣ್ಣನವರು ನಿಯಮದಲ್ಲಿರುವುದನ್ನು ತಮಗೆ ಹೇಳಿದ್ದಾರೆ. ಅಂಥ ಸಂದರ್ಭದಲ್ಲಿ ಸಿದ್ದರಾಮಣ್ಣನವರಿಗೆ ಹೊರಗಡೆ ಚರ್ಚೆ ಮಾಡೋಣ ಬನ್ನಿ ಎಂದು ಹೇಳಿದರೆ ಸದನದಲ್ಲಿ ನಾವೆಲ್ಲಾ ಏನು?

**ಶ್ರೀ ಎಂ.ಸಿ. ನಾಣಯ್ಯ:-** ಮಾನ್ಯ ಮಸ್ಕಿಯವರೇ, ದಯವಿಟ್ಟು ನಾನು ಮಾತನಾಡಿರತಕ್ಕಂಥದ್ದನ್ನು ಅಪಾರ್ಥ ಮಾಡಿಕೊಳ್ಳಬೇಡಿ.

**ಶ್ರೀ ವಿ. ಮನೋಹರ ಮಸ್ಕಿ:-** ನಾನು ಅಪಾರ್ಥ ಮಾಡಿಕೊಳ್ಳುವುದಿಲ್ಲ. ಅಪಾರ್ಥ ಮಾಡಿಕೊಳ್ಳುವ ಹಾಗೆ ತಾವು ಮಾತನಾಡುತ್ತೀರಿ.

**ಶ್ರೀ ಎಂ.ಸಿ. ನಾಣಯ್ಯ:-** ನಿಮ್ಮ ಹಾಗೆ ನಾನು ಜೋರಾಗಿ ಮಾತನಾಡಬಲ್ಲೆ. ಆದರೇ, ನಿಮ್ಮ ಹಾಗೆ ನಾನು ಜೋರು ಮಾಡುವುದಿಲ್ಲ. ಮಾನ್ಯ ಸಭಾಪತಿಯವರೇ, ನನ್ನ ಮೇಲೆ ಅಪಾದನೆ ಮಾಡಿದ್ದಾರೆ. ಅವರು ರಾಜ್ಯಪಾಲರ ಬಗ್ಗೆ, ರಾಷ್ಟ್ರಾಧ್ಯಕ್ಷರ ಬಗ್ಗೆ ಅವರ ನಡವಳಿಕೆ ವಿಚಾರದ ಬಗ್ಗೆ ಯಾವುದೇ ಸದನದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ ಎನ್ನುವುದನ್ನು ನಿಯಮ 306ರಲ್ಲಿ ಇರುವುದನ್ನು ಹೇಳಿದರು. ರಾಜ್ಯಪಾಲರ ಕಚೇರಿಯ ನಡವಳಿಕೆಯ ಬಗ್ಗೆಯೂ ನಾವು ಇಲ್ಲಿ ನಿಯಮ 306 ಅನ್ನು ಬಿಟ್ಟು ಚರ್ಚೆ ಮಾಡಬೇಕು ಎನ್ನುವಂತಹ ಮಾತನ್ನು ಹೇಳಿದಾಗ ಅಂತಹ ಮಾತುಗಳನ್ನು ಆಡುವಂತಹ ಸಂದರ್ಭ ಬಂದಾಗ ಈ ಸದನದಲ್ಲಿ ನಾವು ಅದನ್ನು ಮಾಡುವುದಕ್ಕಾಗುವುದಿಲ್ಲ, ಅದನ್ನು ಸದನದ ಹೊರಗಡೆ ಮಾಡಬಹುದು ಎಂದು ನಾನು ಹೇಳಿರತಕ್ಕಂಥದ್ದು ನಿಜ. ಇದರಲ್ಲಿ ತಪ್ಪೇನಿದೆ?

(ಗೊಂದಲ)

**ಶ್ರೀ ಎಂ.ಸಿ. ನಾಣಯ್ಯ:-** ನಾನು ಅಸಂಸದೀಯವಾಗಿ ಮಾತನಾಡುವುದಿಲ್ಲ. ಆ ರೀತಿ ಮಾತನಾಡುವ ಅಭ್ಯಾಸ ನನಗಿಲ್ಲ. ಅಂತಹ ನಡವಳಿಕೆಗಳನ್ನು ಈ ಸದನದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ. ಹೊರಗಡೆ ಚರ್ಚೆ ಮಾಡಬಹುದು ಎಂದು ಹೇಳಿದೆ. ಇದರಲ್ಲಿ ತಪ್ಪೇನಿದೆ?

**ಸಭಾಪತಿಯವರು:–** ಈಗ ನಾಣಯ್ಯನವರು ಪ್ರಸ್ತಾಪ ಮಾಡಿರುವ ವಿಚಾರದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳುತ್ತಾರೆ ಎಂಬುದನ್ನು ಕೇಳೋಣ. ಚರ್ಚೆ ಮಾಡಬೇಕೋ ಬೇಡವೋ ಎನ್ನುವ ತೀರ್ಮಾನವನ್ನು ನಾನು ಹೇಳುತ್ತೇನೆ.

**ಶ್ರೀ ವಿ. ಮನೋಹರ ಮಸ್ಕಿ:–** ಮಾನ್ಯ ಸಭಾಪತಿಯವರೇ, ನಾನು ಸದನದಲ್ಲಿ ಪ್ರಸ್ತಾಪ ಮಾಡಿರುವ ವಿಷಯ ಅದಲ್ಲ. ಸದನದಲ್ಲಿ ಚರ್ಚೆ ಮಾಡಿ ಒಂದು ವಿಷಯವನ್ನು ಘನತೆವೆತ್ತ ಸದಸ್ಯರು ಗಮನಕ್ಕೆ ತಂದಾಗ ಅದರ ಬಗ್ಗೆ ತಮ್ಮ ಜೊತೆ ಮಾತನಾಡುವಂತಹ ಸಂದರ್ಭದಲ್ಲಿ ಅದನ್ನು ಸದನದ ಹೊರಗಡೆ ಮಾತನಾಡೋಣವೆಂದರೆ ಹೇಗೆ?

**ಸಭಾಪತಿಯವರು:–** ಮಾನ್ಯ ನೀರಾವರಿಯವರೇ, ಚರ್ಚೆಗೆ ಅವಕಾಶ ಕೊಟ್ಟರೆ ತಮಗೂ ಅವಕಾಶ ಕೊಡುತ್ತೇನೆ.

**ಶ್ರೀ ಹೆಚ್.ಸಿ. ನೀರಾವರಿ:–** ಮಾನ್ಯ ಸಭಾಪತಿಯವರೇ, ನಾನು ಬೇರೆ ವಿಷಯಕ್ಕೆ ಹೋಗುವುದಿಲ್ಲ, controversy ವಿಷಯಕ್ಕೆ ಹೋಗುವುದಿಲ್ಲ. ಲೀಗಲ್ ವಿಷಯ ಮಾತ್ರ ನಾನು ಹೇಳುತ್ತೇನೆ. ಐದು ನಿಮಿಷ ಅವಕಾಶ ಕೊಡಿ. ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ನೋಟಿಸ್‌ಗೆ ಸಹಿ ಮಾಡದವರಿಗೆ ಅವಕಾಶ ಕೊಟ್ಟಿದ್ದೀರಿ. ನಾನು ನೋಟಿಸ್‌ಗೆ ಸಹಿ ಮಾಡಿದ್ದೇನೆ.

**ಸಭಾಪತಿಯವರು:–** ನಾನು ಯಾರಿಗೂ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿಲ್ಲ.

**ಶ್ರೀ ಹೆಚ್.ಸಿ. ನೀರಾವರಿ:–** ಬೇರೆಯವರು ಮಧ್ಯೆ ಮಧ್ಯೆ ಮಾತನಾಡುತ್ತಿದ್ದಾರೆ. ನನಗೆ ಕೇವಲ ಐದು ನಿಮಿಷ ಅವಕಾಶ ಕೊಡಿ.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ಈಗಾಗಲೇ ಸನ್ಮಾನ್ಯ ನಾಣಯ್ಯನವರು ತಂದಿರತಕ್ಕಂಥ ವಿಚಾರದ ಬಗ್ಗೆ submission ಮಾಡಿದ್ದಾರೆ.

**ಶ್ರೀ ಹೆಚ್.ಸಿ. ನೀರಾವರಿ:–** ಮಾನ್ಯ ಸಭಾಪತಿಯವರೇ, ಕಷ್ಟಪಟ್ಟು ತಯಾರು ಮಾಡಿಕೊಂಡು ಸದನದಲ್ಲಿ ಮಾತನಾಡಬೇಕೆಂದು ಬಂದಿದ್ದೇನೆ. ಇಲ್ಲಿ ಸಮಯ ವ್ಯರ್ಥವಾಗುತ್ತಿದೆ. ಅದಕ್ಕೋಸ್ಕರ ನಾನು ನಿನ್ನೆಯೂ ಹೇಳಿದೆ. ಇಲ್ಲಿ ತಾಂತ್ರಿಕ ವಿಷಯದ ಮೇಲೆ ಮಾತ್ರ ಚರ್ಚೆಗೆ ಹೋಗುತ್ತದೆಯೇ ಹೊರತು ವಿಷಯದ ಬಗ್ಗೆ ಹೇಳುತ್ತಿಲ್ಲ.

**ಸಭಾಪತಿಯವರು:–** ನೀವು ನೋಟೀಸ್ ಕೊಟ್ಟಾಗ ನಮ್ಮ ನಾಯಕರ ಬದಲಾಗಿ ನಾನೇ ಮಾತನಾಡುತ್ತೇನೆ ಎಂದು ಹೇಳಿದ್ದರೆ ನಾನೇನು ಬೇಡ ಎಂದು ಹೇಳುತ್ತಿರಲಿಲ್ಲ. ನಿಮಗೇ ಅವಕಾಶ ಕೊಡುತ್ತಿದ್ದೆ.

**ಶ್ರೀ ಹೆಚ್.ಸಿ. ನೀರಾವರಿ:–** ಮಾನ್ಯ ಸಭಾಪತಿಯವರೇ, ಐದು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ? ನಾನು ಆಗಿನಿಂದಲೂ ಅವಕಾಶ ಕೊಡಿ ಎಂದು ತಮ್ಮನ್ನು ಕೇಳುತ್ತಿದ್ದೇನೆ. ನಾನು ನೋಟೀಸ್ ಕೊಟ್ಟಿದ್ದೇನೆ.

(ಗೊಂದಲ)

**ಸಭಾಪತಿಯವರು:–** ಅವಕಾಶ ಕೊಡುವುದಕ್ಕಾಗುವುದಿಲ್ಲ. ದಯವಿಟ್ಟು ಕ್ಷಮಿಸಿ. ಸಹಿ ಮಾಡಿದವರಿಗೆಲ್ಲಾ ಅವಕಾಶ ಕೊಡಬೇಕೆಂದರೆ ಸದನ ನಡೆಸುವುದಕ್ಕಾಗುವುದಿಲ್ಲ.

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳ ಉತ್ತರ ಕೊಡುವ ಸಂದರ್ಭದಲ್ಲಿ ಅಥವಾ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಾದ ಮೇಲಾದರೂ ಅವರ ಮನಸ್ಸಿನಲ್ಲಿರತಕ್ಕಂಥ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಅವಕಾಶ ಕೊಡಿ.

**ಸಭಾಪತಿಯವರು:–** ಪರಿಸ್ಥಿತಿ ಯಾವ ರೀತಿ ಇರುತ್ತದೆ ಎಂಬುದನ್ನು ನೋಡೋಣ. ಏಕೆಂದರೆ, ನೋಟೀಸ್‌ಗೆ ಸಹಿ ಹಾಕಿದವರಿಗೆಲ್ಲಾ ಅವಕಾಶ ಕೊಡಬೇಕೆಂದು ಕಾನೂನನ್ನು ಮಾಡಿಬಿಟ್ಟರೆ ನಾನು ಸದನವನ್ನು ನಡೆಸುವುದಕ್ಕೇ ಆಗುವುದಿಲ್ಲ.

**ಶ್ರೀ ಹೆಚ್.ಸಿ. ನೀರಾವರಿ:–** ತಮಗೆ ಸಂಪೂರ್ಣ ಅಧಿಕಾರವಿದ್ದು, ತಾವು ಮನಸ್ಸು ಮಾಡಿದರೆ ನಮಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಡಬಹುದು. ಆ ಒಂದು ಅಧಿಕಾರವನ್ನು ತಾವು ಬಳಸಿಕೊಂಡು ನನಗೆ ಮಾತನಾಡಲಿಕ್ಕೆ ಐದು ನಿಮಿಷಗಳ ಕಾಲಾಹರಣ ಕೊಡಬೇಕೆಂದು ಕೇಳುತ್ತಿದ್ದೇನೆ.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀಯುತ ಎಂ.ಸಿ. ನಾಣಯ್ಯನವರು ಗಂಭೀರವಾದ ಒಂದು ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಸಾಕಷ್ಟು ಎತ್ತರಕ್ಕೆ ತೆಗೆದುಕೊಂಡು ಹೋಗುವಂತಹ ಪ್ರಯತ್ನಗಳನ್ನು ಮಾಡಿ, ನನ್ನ ಮೇಲೆ ಪ್ರಭಾವ ಬೀರುವಂತಹ ಕೆಲವೊಂದು ಪ್ರಯತ್ನಗಳನ್ನು ಮಾಡಿದ್ದಾರೆ. ಈ ವಿಚಾರವಾಗಿ ನಾನು ಬಹಳ ಸ್ಪಷ್ಟವಾಗಿ ಹೇಳಲಿಕ್ಕೆ ಇಚ್ಚೆಪಡುತ್ತೇನೆ. ಮಾನ್ಯ ಸದಸ್ಯರಾದ ಶ್ರೀಯುತ ವಿ.ಆರ್. ಸುದರ್ಶನ್‌ರವರು ಬೆಳಿಗ್ಗೆ ಈ ವಿಚಾರವನ್ನು ಪ್ರಸ್ತಾಪ ಮಾಡಿದಂತಹ ಸಂದರ್ಭದಲ್ಲಿಯೂ ಸಹ ಹೇಳಿದ್ದೇನೆ. ಒಂದು ಸಶಕ್ತ ಲೋಕಾಯುಕ್ತ ಸಂಸ್ಥೆ ಇರಬೇಕೆನ್ನುವುದು ನಮ್ಮ ಸರ್ಕಾರದ ಆಶಯವಾಗಿದೆ. ಯಾವುದೇ ಸಂದರ್ಭದಲ್ಲಿಯೂ ಕೂಡ ಲೋಕಾಯುಕ್ತರನ್ನು ನಿಶಕ್ತಗೊಳಿಸಬೇಕು ಅಥವಾ ಅದನ್ನು ದುರುಪಯೋಗಪಡಿಸಿಕೊಳ್ಳಬೇಕು, ಅಥವಾ ಯಾವುದೋ ಒಂದು ರೀತಿಯಲ್ಲಿ ಕಾಲಹರಣ ಮಾಡಿ ಲೋಕಾಯುಕ್ತರ ನೇಮಕಾತಿ ಪ್ರಕ್ರಿಯೆಯಲ್ಲಿ ಅಡೆತಡೆಗಳನ್ನುಂಟು ಮಾಡಬೇಕೆಂದು ಹೇಳುವಂತದ್ದು ಅಥವಾ ಅದರಿಂದ ಸ್ವಾರ್ಥ, ಲಾಭ ಪಡೆದುಕೊಳ್ಳಬೇಕೆನ್ನುವ ಯಾವುದೇ ಇರಾದೆ ನನ್ನ ಸರ್ಕಾರಕ್ಕಾಗಲೀ, ನನ್ನ ಪಕ್ಷಕ್ಕಾಗಲೀ ಇಲ್ಲ. ಕೇಂದ್ರದಲ್ಲಿ ಲೋಕಪಾಲ್ ಮಸೂದೆಯ ಬಗ್ಗೆ ನನ್ನ ಪಕ್ಷ ತೆಗೆದುಕೊಂಡಂತಹ ನಿಲುವು ಮತ್ತು ಬಾಕಿ ಪಕ್ಷ ತೆಗೆದುಕೊಂಡಂತಹ ನಿಲುವಿನ ವಿಚಾರ ಇಡೀ ಲೋಕಕ್ಕೆ ಗೊತ್ತಿದೆ. ಅದನ್ನು ನಾನು ಇಲ್ಲಿ ಚರ್ಚೆ ಮಾಡಬೇಕಾದಂತಹ ಅವಶ್ಯಕತೆಗಳಿಲ್ಲ. ಒಂದು ಸಶಕ್ತ ಲೋಕಾಯುಕ್ತ ಇರಬೇಕು, ಸಶಕ್ತ ಲೋಕಪಾಲ್ ಮಸೂದೆ ಇರಬೇಕೆನ್ನುವುದು ನಮ್ಮ ನಿಲುವು. ಇದಕ್ಕೆ ಬದ್ಧವಾಗಿ ನಿರಂತರವಾಗಿ ಕೆಲಸ ಕಾರ್ಯಗಳನ್ನು ನಾನು ಮಾಡಿದ್ದೇನೆ.

ಪ್ರಾಯಶ: ಇವತ್ತು ಬೇರೆ ಬೇರೆ ಕಾನೂನುಗಳನ್ನು ಹೇಳಿದ್ದಾರೆ. ಸನ್ಮಾನ್ಯ ಮಧುಸೂಧನ್‌ರವರು, ಸನ್ಮಾನ್ಯ ಎಂ.ಸಿ. ನಾಣಯ್ಯನವರು ಇಲ್ಲಿ ನಿಯಮ 59ರಡಿಯಲ್ಲಿ ನಿಲುವಳಿ ಸೂಚನೆಬೇಕೋ, ಬೇಡವೋ ಎನ್ನುವ ಬಗ್ಗೆ ಪ್ರಶ್ನೆ ಮಾಡಿದರು. ಪ್ರಾಯಶ: ಈ ಸದನದಲ್ಲಿ ಅದರ ಅವಶ್ಯಕತೆ ಇಲ್ಲ ಎನ್ನುವುದು ನನ್ನ ಅಭಿಪ್ರಾಯ ಏಕೆಂದರೆ, ರಾಜ್ಯಸಭೆಯಲ್ಲಿ ಈ ಅವಕಾಶವಿಲ್ಲ.

ಎರಡನೆಯದಾಗಿ, the Council of Ministers are accountable and answerable only to the lower House. ಯಾವ ವಿಚಾರದಲ್ಲಿ ಅಂದರೆ ಓಟಿಂಗ್ ಮತ್ತೊಂದು ಬರುವಂತಹ ಸಂದರ್ಭಗಳಲ್ಲಿ ಮತ್ತು ಸರ್ಕಾರ ರಚನೆ ಮಾಡುವಂತಹ ಸಂದರ್ಭಗಳಲ್ಲಿ ಇರುತ್ತದೆ. ಬಾಕಿಯೆಲ್ಲಾ ಪ್ರೊಸಿಡಿಂಗ್ಸ್‌ಗಳಲ್ಲಿ ಇಲ್ಲಿ ಭಾಗವಹಿಸಬೇಕು, ಉತ್ತರವನ್ನು ಕೊಡಬೇಕು, ಎಲ್ಲವನ್ನೂ ಮಾಡಬೇಕಾಗಿದ್ದು ಅದರ ಜವಾಬ್ದಾರಿ ಇದೆ.

**ಶ್ರೀ ಮತ್ತಿಕಟ್ಟ ವೀರಣ್ಣ:-** ಇಲ್ಲ. ನೀವು ಈ ಸರ್ಕಾರ ರಚನೆ ಮಾಡುವಾಗ ಕೆಳಮನೆಯ ಅವಶ್ಯಕತೆ ಇರುತ್ತದೆ. But, Government is answerable for this House also.

**ಶ್ರೀ ಡಿ.ವಿ. ಸದಾನಂದಗೌಡ:-** ಯಾವಾಗ ಒಂದು ಸರ್ಕಾರದ ರಚನೆ, ಯಾವಾಗ ಒಂದು ಸರ್ಕಾರದ ಆಗುಹೋಗುಗಳ ಬಗ್ಗೆ ಪರಿಣಾಮ ಬೀರುವಂತಹ ಹಿನ್ನೆಲೆಯಲ್ಲಿ ಈ ಓಟಿಂಗ್ ಮತ್ತು adjournment motion ಬರುವಂತಹದ್ದಾಗಿದೆ. ಅಂತಹ ಸಂದರ್ಭದಲ್ಲಿ ಆ ಹೌಸ್‌ನಲ್ಲಿ ಇರುವಂತಹ ವ್ಯವಸ್ಥೆಗೆ ಮಾತ್ರ ಸೀಮಿತವಾಗಿರುತ್ತದೆಯೇ ಹೊರತು adjournment motionನ ಔಚಿತ್ಯ ಇಲ್ಲಿ ಬಹಳ ಕಡಿಮೆ ಇದೆ ಎಂದು ನನ್ನ ಅಭಿಪ್ರಾಯವಾಗಿದೆ. ಏಕೆಂದರೆ, ರಾಜ್ಯಸಭೆಯಲ್ಲೂ ಕೂಡ ಇದು ಇರುವುದಿಲ್ಲ.

**ಶ್ರೀ ಎಂ.ಸಿ. ನಾಣಯ್ಯ:-** ಇಲ್ಲಿ ವೋಟಿಂಗ್ ಸಹ ಇರುವುದಿಲ್ಲ.

**ಶ್ರೀ ಡಿ.ವಿ. ಸದಾನಂದಗೌಡ:-** ಹೌದು, ಇಲ್ಲಿ ವೋಟಿಂಗ್ ವ್ಯವಸ್ಥೆಯು ಇರುವುದಿಲ್ಲ. ಆದಕಾರಣ, ನಾನು ಹೇಳುತ್ತಿರುವುದು ಏನೆಂದರೆ, ಆ ಒಂದು ಪ್ರಶ್ನೆಯನ್ನು ಗಂಭೀರವಾಗಿ ಇಡೀ ನಮ್ಮ ಹೌಸ್, ನಮ್ಮ ರೂಲ್ಸ್

ಕಮಿಟಿಯವರು ಮತ್ತು ಬಾಕಿಯೆಲ್ಲವರು ನೋಡುವಂತಹ ಅವಶ್ಯಕತೆ ಇದೆ. ಇದರ ಬಗ್ಗೆ ಒಂದು ಚರ್ಚೆ ನಡೆದರೆ ನಮ್ಮ ಕಲಾಪಗಳಿಗೆ ಬೇರೆ ಯಾವುದೋ ಒಂದು ರೀತಿಯಲ್ಲಿ ನಮಗೆ ಕೊಡುವಂತಹ ಪ್ರಯ್ನತ್ನಗಳನ್ನು ಮಾಡಬಹುದು. ಇಲ್ಲದಿದ್ದರೆ ಏನಾಗುತ್ತದೆ ಎಂದರೆ ಕೆಳಗಿನ ಹೌಸ್‌ನಲ್ಲಿ adjournment motion ಅನ್ನು ಕೊಟ್ಟರು. ಇಲ್ಲಿ ಮೇಲಿನ ಮನೆಯವರು ಕೊಟ್ಟಿಲ್ಲವೆಂದು ಹೇಳುವಂತಹದ್ದು ಒಂದು ವಿಚಾರ. ಆ ರೀತಿಯ ವ್ಯತ್ಯಾಸಗಳು ನಡೆಯುವಂತಹದ್ದನ್ನು ನಾವು ನೋಡುತ್ತಿದ್ದೇವೆ.

**ಶ್ರೀ ಎಂ.ಸಿ. ನಾಣಯ್ಯ:–** ತಾವು ಈ ಸದನದ ಸದಸ್ಯರಾಗಿ ಇಂತಹ ವಿಚಾರ ತಮ್ಮ ಬಾಯಿಯಿಂದ ಬರದಿದ್ದರೆ ಒಳ್ಳೆಯದಿತ್ತೇನೋ ನನಗೆ ಗೊತ್ತಿಲ್ಲ.

**ಶ್ರೀ ಡಿ.ವಿ. ಸದಾನಂದಗೌಡ:–** ಆ ರೀತಿಯಲ್ಲ. ನಾನು ವಾಸ್ತವಿಕ ಸಂಗತಿಗಳನ್ನು ಹೇಳಿದ್ದೇನೆ. ನಾನು ಈ ಮನೆಯ ಸದಸ್ಯನಾಗಿ ಈ ಮನೆಯ ಯಾವುದೋ ಒಂದು ಹಕ್ಕನ್ನು ಮೊಟಕುಗೊಳಿಸಬೇಕೆನ್ನುವುದಲ್ಲ. ಪ್ರಾಯಶ: ಅದು ಭಾರೀ ಪ್ರಭಾವ ಬೀರದ ಕಾರಣ ಇವತ್ತು ಇದರ ಚರ್ಚೆಯ ಬದಲು ಬೇರೆ ಯಾವುದೋ ಒಂದು ರೀತಿಯಲ್ಲಿ ಚರ್ಚೆಗೆ ತರುತ್ತಿದ್ದೆನು. ಆಗ ಇದರ ಎಲ್ಲಾ ಚರ್ಚೆಯಾಗುತ್ತಿತ್ತೇನೋ ಗೊತ್ತಿಲ್ಲ. ಶ್ರೀಯುತ ನಾಣಯ್ಯನವರ ಪ್ರೀಲಿಮನರಿ ಸಬ್‌ಮಿಷನ್ ಎಂದು ಹೇಳಿದ್ದು, ಅ ಎಲ್ಲಾ ಸಬ್‌ಮಿಷನ್ ಅವರಿಗೆ ಗೊತ್ತಿದ್ದು, ಅವರು ಕೂಡ ಹೇಳಿದ್ದರು. ಅವರು ಎಲ್ಲೆಲ್ಲಿ ತಲುಪಬೇಕಾಗಿತ್ತೋ ಅಲ್ಲೆಲ್ಲಾ ಅವರು ತಲುಪಿದ್ದಾರೆ. ಅದರಲ್ಲಿ ಏನೂ ಬಾಕಿ ಉಳಿದಿಲ್ಲ. ಆದ್ದರಿಂದ, ಅದರ ಬಗ್ಗೆ ನಾನು ಏನೂ ಹೇಳುವುದಿಲ್ಲ. ಇದು ಒಂದು ವಿಚಾರ. ಎರಡನೆಯದಾಗಿ, ಲೋಕಾಯುಕ್ತದ ಬಗ್ಗೆ ನಮ್ಮ ಲೋಕಾಯುಕ್ತರನ್ನು ಆಯ್ಕೆ ಮಾಡುವಂತಹದ್ದು, ಮತ್ತೊಂದು ಪ್ರಕ್ರಿಯೆಯನ್ನು ಮಾಡುವುದರಲ್ಲಿ ನಮ್ಮ ಸರ್ಕಾರ ಎಲ್ಲಿಯೂ ಹಿಂದೆ ಬಿದ್ದಿಲ್ಲ. ಆ ಪ್ರಕ್ರಿಯೆಗಳು ಯಾವಾಗ ಪ್ರಾರಂಭವಾಯಿತು ಎಂದರೆ ಲೋಕಾಯುಕ್ತರ ಹುದ್ದೆ ಖಾಲಿಯಾದ ತಕ್ಷಣ ನಾವು ಪ್ರಾರಂಭ ಮಾಡಿದ್ದೇವೆ. ಅದಕ್ಕೆ ಬೇಕಾದಂತಹ ಎಲ್ಲಾ ಪ್ರಕ್ರಿಯೆಗಳನ್ನು ಲೋಕಾಯುಕ್ತ ಆಕ್ಟ್ ಪ್ರಕಾರ ಏನೆಲ್ಲಾ ಇದೆ, ಕನ್ಸ್‌ಲ್ಟೇಷನ್ಸ್ ಮತ್ತೊಂದು ಮಾಡುವಂತಹದ್ದನ್ನು ಯಾವ ರೀತಿ ಮಾಡಿದ್ದೇವೆ

ಅಥವಾ ಹಿಂದಿನ ಲೋಕಾಯುಕ್ತರ ನೇಮಕಾತಿ ಯಾವಾಗ ಅಂದರೆ 1986 ರಲ್ಲಿ ಮೊದಲನೆ ಲೋಕಾಯುಕ್ತರಾಗಿ A.D. Kaushal ರವರು ನೇಮಕಾತಿ ಆಗಿದ್ದಾಗಿನಿಂದ ಇವತ್ತಿನವರೆಗೆ ಹೇಗೆ ನೇಮಕಾತಿ ಪ್ರಕ್ರಿಯೆಯಲ್ಲಿ ಆ ಹಿಂದಿನ ಸರ್ಕಾರಗಳು, ಹಿಂದಿನ ಮುಖ್ಯಮಂತ್ರಿಗಳು ನಡೆದುಕೊಂಡಿದ್ದಾರೆ, ಅದೇ ರೀತಿ ನಡೆದುಕೊಳ್ಳುವಂತಹ ಎಲ್ಲಾ ಕೆಲಸ ಕಾರ್ಯಗಳನ್ನು ಮಾಡಿದ್ದೇನೆ. ಎಲ್ಲಿಯೂ ಲ್ಯಾಪ್ಸ್ ಆಗಲಿಲ್ಲ. ಎಲ್ಲಿಯೂ ತೊಂದರೆಗಳಾಗುವಂತಹ ಪರಿಸ್ಥಿತಿಗಳನ್ನು ಮಾಡಲಿಲ್ಲ. ಈಗಾಗಲೇ ಹೇಳಿದಾಗೆ ಲೋಕಾಯುಕ್ತ ಹುದ್ದೆ ಬಹಳ ದಿನಗಳಿಂದ ಖಾಲಿ ಇದೆ.  ಇದೇನೂ ಪ್ರಥಮಬಾರಿಗೆ ಖಾಲಿಯಲ್ಲ. ಖಾಲಿ ಉಳಿಯಬೇಕೆಂದು ನಾನು ಹೇಳುತ್ತಿಲ್ಲ. ಖಾಲಿ ಉಳಿಯಬಾರದು. ಇವತ್ತು ಲೋಕಾಯುಕ್ತರ ಹುದ್ದೆ ಇಂದು ಖಾಲಿಯಾದರೆ ನಾಳೆ ಆಗಬೇಕೆನ್ನುವ ಆಶಯ. ಅದಕ್ಕಾಗಿಯೇ ನಮ್ಮ ಪ್ರಕ್ರಿಯೆಗಳನ್ನು ಅಷ್ಟು ಬೇಗ ಮಾಡಿ ನಾವು ರಾಜ್ಯಪಾಲರಿಗೆ ಕಳುಹಿಸಿಕೊಟ್ಟಿದ್ದೇವೆ. ಹಿಂದಿನ ದಿನಗಳಲ್ಲಿ ನಾವು ನೋಡಿದ್ದೇವೆ. ದಿನಾಂಕ: 24–1–1996 ರಿಂದ 2–6–1996 ರವರೆಗೆ ಸುಮಾರು 6 ತಿಂಗಳ ಕಾಲ ಲೋಕಾಯುಕ್ತರು ಇಲ್ಲದಿರುವುದನ್ನು ನಾವು ನೋಡಿದ್ದೇವೆ. ಉಪ ಲೋಕಾಯುಕ್ತರು ವರ್ಷಗಟ್ಟಲೇ ಇಲ್ಲದಿರುವು ದನ್ನು ನಾವು ನೋಡಿದ್ದೇವೆ. ಉಪ ಲೋಕಾಯುಕ್ತರು ವರ್ಷಗಟ್ಟಲೇ ಇಲ್ಲದಿರುವುದನ್ನು ನಾವು ನೋಡಿದ್ದೇವೆ. ಪ್ರಕ್ರಿಯೆಗಳಲ್ಲಿ ಎಲ್ಲಾದರೂ ನಮ್ಮಿಂದ ಲ್ಯಾಪ್ಸ್ ಆಗಿದೆ ಎಂದು ಹೇಳುವಂತಹದ್ದು ಇಲ್ಲಿರುವಂತಹ ಪ್ರಶ್ನೆ. ಆದರೆ, ನಮ್ಮ ಕಡೆಯಿಂದ ಎಲ್ಲಿಯೂ ಲ್ಯಾಪ್ಸ್ ಆಗುವಂತಹದ್ದು ಆಗಲಿಲ್ಲ. ನಾವು ಎಲ್ಲವನ್ನೂ ಅತ್ಯಂತ ಯಶಸ್ವಿಯಾಗಿ ಮಾಡಿದ್ದೇವೆ. ಒಂದು ರೀತಿಯಲ್ಲಿ ನಾನು ರಾಜ್ಯಪಾಲರ ಕಚೇರಿ ಬಗ್ಗೆ ಮಾತನಾಡಲಿಕ್ಕೆ ಇಷ್ಟಪಡುವುದಿಲ್ಲ. ಏಕೆ ಇಷ್ಟಪಡುವುದಿಲ್ಲವೆಂದರೆ ನಮ್ಮ ಕಾನೂನಿನಲ್ಲಿ ಅದಕ್ಕೆ ಅವಕಾಶಗಳಿಲ್ಲ. ಈಗಾಗಲೇ ನಾನು ಏನು ಪ್ರಸ್ತಾಪ ಮಾಡಬೇಕೆಂದು ಇದ್ದೆನು, ಅದನ್ನು ಶ್ರೀಯುತ ಸಿದ್ದರಾಮಣ್ಣನವರು ಈಗಾಗಲೇ ಅದನ್ನು ಪ್ರಸ್ತಾಪ ಮಾಡಿದ್ದಾರೆ. ಅಲ್ಲಿಯ ವಿಚಾರಗಳು, ಅಲ್ಲಿ ನಡೆದಂತಹ ವಿದ್ಯಮಾನಗಳು, ನಮಗೆ ಮತ್ತು ಅವರಿಗೆ ಆದಂತಹ interactions ಗಳು ಇದೆಲ್ಲವನ್ನೂ ಈ ಸದನದಲ್ಲಿ ಪ್ರಸ್ತಾಪ

ಮಾಡಿ ಮಾತನಾಡುವಂತಹದ್ದು ಕಾನೂನಿನಲ್ಲಿ ನಮಗೆ ಅವಕಾಶವಿಲ್ಲ. ಆದಕಾರಣ, ಕಾನೂನಿನ ಪ್ರಕಾರ ಇದನ್ನು ನಾನು ಚರ್ಚೆ ಮಾಡುವುದಿಲ್ಲ. ಈಗಾಗಲೇ 306 ಮತ್ತು ಸಬ್ ರೂಲ್ 10 ರ ಪ್ರಕಾರ ಇರುವಂತಹ ನಿಯಮಾವಳಿಗಳ ಪ್ರಕಾರ ನಾವು ಅದನ್ನು ಚರ್ಚೆ ಮಾಡುವಂತಹದ್ದು ಸೂಕ್ತವಲ್ಲ. ಆದಕಾರಣ, ಅದನ್ನು ಚರ್ಚೆ ಮಾಡಲಿಕ್ಕೆ ಕಾನೂನಿನ ಪರಿಸ್ಥಿತಿಯಲ್ಲಿ ನಾನು ಹೋಗುವುದಿಲ್ಲ.

ಎರಡನೆಯದಾಗಿ, ಈಗಾಗಲೇ ಎರಡು ವಿಚಾರಗಳಿವೆ. ಮೊದಲನೆಯದಾಗಿ ಈ ವಿಚಾರವನ್ನು ಇಲ್ಲಿ ಚರ್ಚೆ ಮಾಡಬೇಕೋ ಅಥವಾ ಬೇಡವೋ ಎನ್ನುವುದು ಒಂದು ವಿಚಾರವಾಗಿ ನಾನು ಬೆಳಿಗ್ಗೆ ಸಬ್‌ಮಿಷನ್ ಮಾಡಿದ್ದೇನೆ. ಈ ವಿಚಾರವಾಗಿ ಕಾನೂನು ಪುಸ್ತಕದಲ್ಲಿ ಹೇಳಲಾಗುತ್ತದೆ. ಸೆಕ್ಷನ್ 67 ಸಬ್ ರೂಲ್ 7 ರಲ್ಲಿ Restrictions on right to make a motion ಹೇಳಿದ್ದಾರೆ. Sub-rule (7)ರಲ್ಲಿ ಏನು ಹೇಳಲಾಗುತ್ತದೆ ಎಂದರೆ "Motion shall not deal with any matter which is under the adjudication by a court of law having jurisdiction in any part of India" It is very clear. ನಾನು ಈಗಾಗಲೇ ಉಲ್ಲೇಖ ಮಾಡಿದ್ದೇನೆ. ಎರಡು ರಿಟ್ ಅರ್ಜಿಗಳು W.P.No.3301 and W.P.No.3306 ಈಗಾಗಲೇ ಹೈಕೋರ್ಟ್‌ನಲ್ಲಿ ದಾಖಲಾಗಿವೆ. ಇದರಲ್ಲಿ Specific ಆಗಿ ಆ ಫ್ಯಾರಾಗಳಲ್ಲಿ ಏನು ಹೇಳಲಾಗಿದೆ ಎಂದು ಹೇಳಿದರೆ ಈಗ ಏನು ಮಾನ್ಯ ಹಿರಿಯ ಸದಸ್ಯರಾದ ಶ್ರೀಯುತ ಎಂ.ಸಿ. ನಾಣಯ್ಯನವರು ಪ್ರಸ್ತಾಪ ಮಾಡಿದ್ದಾರೆ, ಅದೇ ಒಂದು ಪ್ರೇಯರ್ ಅನ್ನು ಇಟ್ಟುಕೊಂಡು ಮಾಡಿರುವಂತಹದ್ದಾಗಿದೆ. ಆದಕಾರಣ, ಇದು ಕೋರ್ಟ್‌ನಲ್ಲಿ ಪೆಂಡಿಂಗ್ ಇರುವಂತಹದ್ದು ಒಂದು ವಿಚಾರ. ಎರಡನೆಯದಾಗಿ ರಾಜ್ಯಪಾಲರ ಬಗ್ಗೆ ಮತ್ತೊಂದರ ಬಗ್ಗೆ ಉಲ್ಲೇಖ ಮಾಡುವುದು ಅನಿವಾರ್ಯತೆ ಇದ್ದರೂ ಸಹ ಅದನ್ನು ಉಲ್ಲೇಖ ಮಾಡಬಾರದು ಎನ್ನುವಂತಹ ನಿಯಮಾವಳಿ ಇರುವಂತಹ ಎರಡು ಹಿನ್ನೆಲೆಯಲ್ಲಿ ಇದು ಯಾವುದೇ ಸಂದರ್ಭದಲ್ಲಿ ಇಲ್ಲಿ ಚರ್ಚೆಗೆ ತೆಗೆದುಕೊಳ್ಳುವಂತಹ ವಸ್ತುವಲ್ಲ. Till the disposal of the writ petitions

which is pending before the Hon'ble High Court, we cannot discuss this matter of the floor of the House. ಆದ್ದರಿಂದ, ಇದಕ್ಕೆ ಅವಕಾಶ ಮಾಡಿಕೊಡಬಾರದು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಹಾಗೆಯೇ ಒಂದು ಪ್ರಶ್ನೆಯನ್ನು ಅವರು ಪ್ರಸ್ತಾಪ ಮಾಡಿದರು. ಅದರ ಬಗ್ಗೆ ಮಾನ್ಯ ಕ್ಲಾರಿಫೈ ಮಾಡುವಂತಹ ಅವಶ್ಯಕತೆ ಇದೆ ಎಂದು ಆಲೋಚನೆ ಮಾಡುತ್ತಿದ್ದೇನೆ. Appointment of Lokayukta and Upa-Lokayukta, ಬಗ್ಗೆ ಅವರು ಪ್ರಸ್ತಾಪ ಮಾಡಿದರು. ಹೇಗೆ ಅದರ ನೇಮಕಾತಿಯಾಗಬೇಕು, ರಾಜ್ಯಪಾಲರಿಗೆ ಅಧಿಕಾರವಿದೆ ಎನ್ನುವುದನ್ನು ಅವರು ಹೇಳಿದರು. ಆದರೆ, ಅದು ಸರಿಯಲ್ಲ. ಏಕೆಂದರೆ, 3. Appointment of Lokayukta and Upalokayukta.

(1) For the purpose of conducting investigations and enquiries in accordance with the provisions of this Act, the Governor shall appoint a person to be known as the Lokayukta and one or more persons to be known as the Upalokayukta or Upalokayuktas.

(2) (a) A person to be appointed as the Lokayukta shall be a person who has held the office of a Judge of the Supreme Court or that of the Chief Justice of a High Court and shall be appointed on the advice tendered by the Chief Minister in consultation with the Chief Justice of the High Court of Karnataka.

It is mandatory. ಕರ್ನಾಟಕ ಲೋಕಾಯುಕ್ತ ಆಕ್ಟ್‌ನಲ್ಲಿ "and shall be appointed on the advice tendered by the Chief Minister ಎನ್ನುವುದು ಒಂದು ಇದೆ. ಆದ್ದರಿಂದ, ನಾವು ಏನು ಹೆಸರನ್ನು ಕೊಡುತ್ತೇವೆಯೋ ಅವರು ಅದನ್ನು ಮಾಡಬೇಕಾದಂತಹದ್ದು ಕಾನೂನಿನಲ್ಲಿ ಇದೆ. ಗುಜರಾತ್ ಲೋಕಾಯುಕ್ತ ಮತ್ತು ಈ ಲೋಕಾಯುಕ್ತದಲ್ಲಿ ನೇಮಕಾತಿ ರೂಲ್ಸ್‌ಗಳಲ್ಲಿ ಬಹಳ ವ್ಯತ್ಯಾಸಗಳಿವೆ. ಆದಕಾರಣ, ನಾವು ಕೊಟ್ಟಂತಹ ಹೆಸರನ್ನು

ಮಾಡಲೇಬೇಕಾದಂತಹ ಅನಿವಾರ್ಯತೆ ಮತ್ತು ಕಾನೂನು ಇರುವ ಕಾರಣ ಅದನ್ನು ಮಾಡಬೇಕು. ಇದೆಲ್ಲದರ ಹಿನ್ನೆಲೆಯಲ್ಲಿ ಹೈಕೋರ್ಟ್ ಮತ್ತು ರಾಜ್ಯಪಾಲರ ಬಗ್ಗೆ ಇಲ್ಲಿ ಮಾತನಾಡಲಿಕ್ಕೆ ಆಗದಂತಹ ಪರಿಸ್ಥಿತಿಯಲ್ಲಿ ಇದರ ಚರ್ಚೆಯನ್ನು ಮಾಡಲಿಕ್ಕೆ ಆಗುವುದಿಲ್ಲವೆನ್ನುವುದು ನನ್ನ ವಾದ.

**ಸಭಾಪತಿಯವರು:–** ಇಲ್ಲಿಯವರೆಗೆ ವಾದ–ವಿವಾದವನ್ನು ಕೇಳಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ಅದಕ್ಕೆ ಸಮಜಾಯಿಶಿಯನ್ನು ಕೊಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ನಿಯಮ 59 ರಡಿಯಲ್ಲಿ ಕೊಟ್ಟಿರುವಂತಹ ನೋಟೀಸ್ ಅನ್ನು ನಾನು ತಳ್ಳಿ ಹಾಕುತ್ತಿದ್ದೇನೆ. ಅದರ ಚರ್ಚೆಯನ್ನು ಇಲ್ಲಿಗೆ ಮುಗಿಸುತ್ತಿದ್ದೇನೆ.

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೆ, ಸರ್ಕಾರದ ಈ ನೀತಿಯನ್ನು ನಾವು ಖಂಡಿಸುತ್ತೇವೆ. ಲೋಕಾಯುಕ್ತ ಸಂಸ್ಥೆಯನ್ನು ಇವರು ಮುಗಿಸುವುದಕ್ಕೆ ಹೊರಟಿದ್ದಾರೆ. ಅದನ್ನು ಸಮಾಧಿ ಮಾಡುತ್ತಿದ್ದಾರೆ. ಇವರ ಈ ವರ್ತನೆಯನ್ನು ಖಂಡಿಸಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಸರ್ಕಾರದ ಧೋರಣೆಯನ್ನು ಪ್ರತಿಭಟಿಸಿ ಜೆ.ಡಿ.(ಎಸ್) ಪಕ್ಷದ ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು)

**ಡಾ॥ ಎ.ಹೆಚ್. ಶಿವಯೋಗಿಸ್ವಾಮಿ:–** ಮಾನ್ಯ ನಾಣಯ್ಯನವರು ಮಾತನಾಡುವಾಗ ಮಾನ್ಯ ಸಚಿವರ ಬಗ್ಗೆ ಅಗೌರವದ ಪದವನ್ನು ಉಪಯೋಗಿಸಿದ್ದಾರೆ. ಅದನ್ನು ಕಡತದಿಂದ ತೆಗೆಸಿ ಹಾಕಬೇಕೆಂದು ವಿನಂತಿಸುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ನಾಣಯ್ಯನವರು ಮಾತನಾಡುವಾಗ ಮಾನ್ಯ ಸಚಿವರ ಬಗ್ಗೆ ಅಗೌರವದ ಪದವನ್ನು ಉಪಯೋಗಿಸಿದ್ದಾರೆ. ಅದನ್ನು ಕಡತದಿಂದ ತೆಗೆದು ಹಾಕಬೇಕೆಂದು ಹೇಳುತ್ತಿದ್ದಾರೆ. ಈಗ ಸದನವನ್ನು 3–30 ರವರೆಗೆ ಮುಂದೂಡುತ್ತೇನೆ.

(1 ಗಂಟೆ 50 ನಿಮಿಷಗಳಿಗೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 3 ಗಂಟೆ 50 ನಿಮಿಷಕ್ಕೆ ಸಮಾವೇಶಗೊಂಡಿತು. ಮಾನ್ಯ ಉಪ ಸಭಾಪತಿಯವರು ಪೀಠವನ್ನಲಂಕರಿಸಿದ್ದರು.)

## 5. ಗಮನ ಸೆಳೆಯುವ ಸೂಚನೆ

**ಪಡಿತರ ಚೀಟಿ ವಿತರಣೆಯಲ್ಲಿ ಆನ್‌ಲೈನ್ ಮುಖಾಂತರ ನೋಂದಾಯಿಸುತ್ತಿರುವುದರಿಂದ ಗ್ರಾಮೀಣ ಪ್ರದೇಶದ ಜನತೆಗೆ ತೊಂದರೆಯುಂಟಾಗಿರುವ ಬಗ್ಗೆ.**

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಪಡಿತರ ಚೀಟಿ ವಿತರಣೆಯಲ್ಲಿ ಆನ್‌ಲೈನ್ ಮುಖಾಂತರ ನೋಂದಾಯಿಸುತ್ತಿರುವುದರಿಂದ ಗ್ರಾಮೀಣ ಪ್ರದೇಶದ ಜನತೆಗೆ ತೊಂದರೆಯುಂಟಾಗಿರುವ ಬಗ್ಗೆ ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರ ಗಮನ ಸೆಳೆಯುತ್ತೇನೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) (ಇಂಧನ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

'ಆನ್‌ಲೈನ್' ಮುಖಾಂತರ ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಲು ವ್ಯವಸ್ಥೆ ಮಾಡಿರುವುದು ನಿಜ. ಪಟ್ಟಣ ಪ್ರದೇಶಗಳ ಜನರು ಖಾಸಗಿ ಅಥವಾ ಸಂತ ಕಂಪ್ಯೂಟರ್ ವ್ಯವಸ್ಥೆ ಮೂಲಕ ಅರ್ಜಿ ಸಲ್ಲಿಸಬೇಕಾಗಿರುತ್ತದೆ. ಆದರೆ, ಗ್ರಾಮೀಣ ಜನರಿಗಾಗಿ ಪ್ರತ್ಯೇಕ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ.

ಗ್ರಾಮೀಣ ಪ್ರದೇಶದ ಜನರು ಅವರಿಗೆ ಸಂಬಂಧಿಸಿದ ಪಂಚಾಯತ್ ಕಛೇರಿಗಳಿಗೆ ಹೋಗಿ, ಪಂಚಾಯತ್ ಸಿಬ್ಬಂದಿಯ ಮೂಲಕ ಪಂಚಾಯತ್ ಕಛೇರಿಯಲ್ಲಿರುವ ಕಂಪ್ಯೂಟರ್ ವ್ಯವಸ್ಥೆಗೆ ಅರ್ಜಿಯನ್ನು ದಾಖಲಿಸಬೇಕಾಗಿರುತ್ತದೆ. ಹಿಂದಿನ ವರ್ಷಗಳಲ್ಲಿ ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಲು ಗ್ರಾಮೀಣ ಜನರು ದೂರದ ತಾಲ್ಲೂಕು ಕಛೇರಿಗೆ ಹೋಗಿ

ಬೇರೆಯವರ ಮೂಲಕ ಅರ್ಜಿಗಳನ್ನು ಭರ್ತಿ ಮಾಡಿ ಸಲ್ಲಿಸಬೇಕಾಗಿತ್ತು. ಈ ರೀತಿ ಸಲ್ಲಿಸಿದ ಅರ್ಜಿಗಳು ಸರಿಯಾಗಿ ದಾಖಲಾಗದೆ ಮತ್ತು ಪರಿಶೀಲನೆ ಮಾಡಲ್ಪಡದೆ ಬಡ ಜನರಿಗೆ ಮತ್ತು ಅನಕ್ಷರಸ್ತರಿಗೆ ಅನ್ಯಾಯವಾಗುತ್ತಿತ್ತು. ಆದರೆ, ಈಗ ಜನರು ಅವರ ಊರನಲ್ಲಿ ಅಥವಾ ಪಕ್ಕದ ಗ್ರಾಮದಲ್ಲಿರುವ ಪಂಚಾಯತ್ ಕಛೇರಿಗೆ ಹೋಗುವ ಮೂಲಕ ಮತ್ತು ಸ್ಥಳೀಯ ಪಂಚಾಯತ್ ಸಿಬ್ಬಂದಿಯ ಮೂಲಕ ಅರ್ಜಿ ಸಲ್ಲಿಸಬೇಕಾಗಿರುವುದರಿಂದ ಈ ರೀತಿ ಅನ್ಯಾಯವಾಗುವ ಸಾಧ್ಯತೆಗಳು ಇರುವುದಿಲ್ಲ. ಪಂಚಾಯತ್ ಕಛೇರಿಗಳಲ್ಲಿ ಕಂಪ್ಯೂಟರ್‌ಗೆ ಅರ್ಜಿದಾರರ ಮಾಹಿತಿಯನ್ನು ಪಂಚಾಯತ್ ಕಛೇರಿಯ ಸಿಬ್ಬಂದಿ ದಾಖಲು ಮಾಡುವುದರಿಂದ ಅನಾನುಕೂಲತೆ ಅಥವಾ ತಿಳುವಳಿಕೆಯ ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಇರುವ ಕುಟುಂಬಗಳ ಸಂಖ್ಯೆ ಸುಮಾರು 80 ಲಕ್ಷ ಆದರೆ ಅಸ್ತಿತ್ವದಲ್ಲಿರುವ ಪಡಿತರ ಚೀಟಿಗಳ ಸಂಖ್ಯೆ 1.13 ಲಕ್ಷಕ್ಕೂ ಮೀರಿ ಇರುತ್ತದೆ. ಅಂದರೆ, ಗ್ರಾಮೀಣ ಪ್ರದೇಶದ ಹೆಚ್ಚಿನ ಎಲ್ಲಾ ಕುಟುಂಬಗಳ ಬಳಿಯೂ ಪಡಿತರ ಚೀಟಿಗಳು ಈಗಾಗಲೇ ಇವೆ. ಈದಿನದವರೆಗೆ ರಾಜ್ಯದಲ್ಲಿ ಆನ್‌ಲೈನ್ ಆಗಿ 21.88 ಲಕ್ಷ ಅರ್ಜಿಗಳು ಸಲ್ಲಿಸಲ್ಪಟ್ಟಿರುತ್ತವೆ. ಅದರ ಪೈಕಿ, ಪಂಚಾಯತ್ ಕಛೇರಿಗಳ ಮೂಲಕ ಗ್ರಾಮೀಣ ಪ್ರದೇಶಗಳಿಂದ 'ಆನ್‌ಲೈನ್' ಆಗಿ ಒಟ್ಟು 7,00,800 ಮೀರಿ ಅರ್ಜಿಗಳು ಸ್ವೀಕೃತವಾಗಿರುತ್ತವೆ. ಈ ಮೇಲಿನ ಅಂಕಿಅಂಶಗಳನ್ನು ಪರಿಗಣಿಸಿದಾಗ ಪಡಿತರ ಚೀಟಿಯಿಲ್ಲದ ಗ್ರಾಮೀಣ ಜನರು ಸುಲಭವಾಗಿ ಅರ್ಜಿ ಸಲ್ಲಿಸುತ್ತಿದ್ದಾರೆಂದು ದೃಢವಾಗುತ್ತದೆ. ಆದಕಾರಣ, ದಲಿತರು, ಅಲ್ಪಸಂಖ್ಯಾತರು ಮತ್ತು ಹಿಂದುಳಿದ ವರ್ಗಗಳು ಪಡಿತರ ವ್ಯವಸ್ಥೆಯಿಂದ ಹೊರಗೆ ಉಳಿಯುವ ಪರಿಸ್ಥಿತಿ ಇರುವುದಿಲ್ಲ.

**ಉಪ ಸಭಾಪತಿಯವರು:-** ಮಾನ್ಯ ಸಚಿವರೇ, ಈಗ ಸರ್ಕಾರ ಕೊಟ್ಟಿರುವಂತಹ ಉತ್ತರದಲ್ಲಿ ಸಚಿವರ ಸಹಿ ಇಲ್ಲ. ಆದಕಾರಣ ಇದರ ಬಗ್ಗೆ ಸೂಕ್ಷ್ಮವಾಗಿ ಗಮನಿಸಿ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಗಮನಿಸಿ ಅದನ್ನು ಸರಿಪಡಿಸುವಂತಹ ಕ್ರಮವನ್ನು ತೆಗೆದುಕೊಳ್ಳಲಾಗುವುದು ಎಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಲಿಚ್ಛಿಸುತ್ತೇನೆ.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕಿ):–** ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ ಜವಾಬ್ದಾರಿ ಇಲ್ಲವೆಂದು ಕಾಣಿಸುತ್ತಿದೆ. ಸರ್ಕಾರ ಯಾವ ಇಲಾಖೆಯಿಂದ ಉತ್ತರ ಕೊಡುತ್ತದೆ, ಆ ಇಲಾಖೆಯ ಸಚಿವರದ್ದಾಗಲಿ ಅಥವಾ ಸಂಬಂಧಪಟ್ಟಂತಹ ಅಧಿಕಾರಿಗಳ ಸಹಿ ಆಗಲಿ ಇರಬೇಕು. ಆದರೆ ಈಗ ಕೊಟ್ಟಿರುವಂತಹ ಉತ್ತರದಲ್ಲಿ ಯಾವುದೂ ಇಲ್ಲ. ಸರ್ಕಾರಕ್ಕೆ ಇಷ್ಟೊಂದು ಬೇಜವಾಬ್ದಾರಿ ಇದ್ದರೆ ಹೇಗೆ? ಈ ವಿಷಯವನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕು. ಯಾರಿಗೋ ಒಂದು ಚೀಟಿಯಲ್ಲಿ ಕಳುಹಿಸಿದಂತೆ ಕಳುಹಿಸಿದರೆ ಹೇಗೆ? ಅದಕ್ಕೆ ಜವಾಬ್ದಾರಿ ಇಲ್ಲವೆ?

**ಉಪ ಸಭಾಪತಿಯವರು:–** ಇನ್ನು ಮುಂದೆ ಆ ರೀತಿ ಲೋಪ ಆಗದಂತೆ ನೋಡಿಕೊಳ್ಳಿ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೇ, ಜವಾಬ್ದಾರಿಯುತವಾಗಿ ಸರ್ಕಾರದ ಪರವಾಗಿ ಹೇಳಿದ್ದೇನೆ.

**ಶ್ರೀಮತಿ ಮೋಟಮ್ಮ:–** ಹೇಳುವುದು ಬೇರೆ. ಎಷ್ಟು ಸಲ ಈ ರೀತಿಯಾದಂತಹ ಕೆಲಸವನ್ನು ಮಾಡುತ್ತಿದ್ದೀರಿ ಹೇಳಿ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೇ, ಅನಿವಾರ್ಯ ಕಾರಣಗಳಿಂದಾಗಿ ನಾನೇ ಹೇಳಬೇಕಾದಂತಹ ಅಗತ್ಯತೆ ಬಂದಿದೆ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಚಿವರೇ ತಾವು ಸರ್ಕಾರದ ಉತ್ತರವನ್ನು ಓದುವಾಗಲಾದರೂ ಇದರ ಬಗ್ಗೆ ವಿಚಾರ ಮಾಡಬೇಕಾಗಿತ್ತಲ್ಲವೇ?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೇ, ಇದಕ್ಕೆ ಸಂಬಂಧಪಟ್ಟಂತಹ ಸಚಿವರು ಇದ್ದಿದ್ದರೆ ಈ ಪ್ರಶ್ನೆ ಉದ್ಭವಿಸುತ್ತಿರಲಿಲ್ಲ. ಅವರು ಇಲ್ಲದೆ ಇರುವ ಕಾರಣಕ್ಕಾಗಿ ನಾನು ಉತ್ತರ ಹೇಳಬೇಕಾದಂತಹ ಅನಿವಾರ್ಯತೆ ಬಂದಿದೆ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಎರಡು, ಮೂರು ಸಲ ಶಾಸಕರಾಗಿ ಆಯ್ಕೆಯಾಗಿ, ಈಗ ಸಚಿವರಾಗಿದ್ದಾರೆ. ಸರ್ಕಾರದ ಉತ್ತರ ಓದುವಾಗ ಸಂಬಂಧಪಟ್ಟಂತಹ ಇಲಾಖೆಯ ಅಧಿಕಾರಿಯನ್ನು ಉತ್ತರದಲ್ಲಿ ಮಾನ್ಯ ಸಚಿವರ ಸಹಿಯಾಗಲೀ ಅಥವಾ ಸಂಬಂಧಪಟ್ಟಂತಹ ಅಧಿಕಾರಿಯ ಸಹಿಯಾಗಲೀ ಏಕೆ ಇಲ್ಲವೆಂದು ಕೇಳಬೇಕಾಗಿತ್ತಲ್ಲವೆ?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ಮಾತನಾಡಿದ್ದೇನೆ. ಮಾನ್ಯ ಸಚಿವರು ಅನಿವಾರ್ಯ ಕಾರಣದಿಂದ ಉಪಸ್ಥಿತಿರಿಲ್ಲ. ಇನ್ನು ಮುಂದೆ ಈ ರೀತಿಯಾದ ಲೋಪವಾಗದಂತೆ ನೋಡಿಕೊಳ್ಳಲಾಗುವುದು ಎಂದು ತಮ್ಮ ಮೂಲಕ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ತಿಳಿಸಲಿಚ್ಛಿಸುತ್ತೇನೆ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, ಪಡಿತರ ಚೀಟಿ ವಿಷಯದಲ್ಲಿ ಆನ್‌ಲೈನ್ ಮೂಲಕ ಇದನ್ನು ಸರಿಪಡಿಸುವ ಮಟ್ಟಕ್ಕೆ ಹೋಗಿದ್ದೇವೆಂದು ಬಹಳ ಹೆಮ್ಮೆಯಿಂದ ಹೇಳಿಕೊಳ್ಳುವುದು ಮುಖ್ಯವಲ್ಲ. ಹಸಿವು ಉಂಡವನಿಗೆ ಹಸಿವಿನ ಬಗ್ಗೆ ಅರಿವಿರುತ್ತದೆ. ಹಸಿವು ಇಲ್ಲದಿದ್ದವರಿಗೆ ಇದರ ಅರಿವು ಆಗುವುದಿಲ್ಲ. ಇದು ಜನ ಸಾಮಾನ್ಯರಿಗೆ ಮಾಡುವಂತಹ ಕನಿಷ್ಠ ಒಂದು ಉತ್ತಮವಾದ ಕೆಲಸ. ನೀವು ಅಧಿಕಾರಕ್ಕೆ ಬರುವ ಮೊದಲೇ ಹೇಳಿದ್ದೀರಿ, 'ನಾವು ಅಧಿಕಾರಕ್ಕೆ ಬಂದ ತಕ್ಷಣ ಎಲ್ಲರಿಗೂ ಪಡಿತರ ಚೀಟಿಯನ್ನು ವಿತರಣೆ ಮಾಡುತ್ತೇವೆ' ಎಂದು ಹೇಳಿದ್ದೀರಿ. ಆದರೆ ಪಡಿತರಚೀಟಿ ವಿತರಣೆ ಮಾಡುವಂತಹ ವ್ಯವಸ್ಥೆ ಇನ್ನೂ ಕೂಡ ಸರಿಯಾಗಿಲ್ಲ. ಏಕೆಂದರೆ ಸುಮಾರು ಐದು ಲಕ್ಷದಷ್ಟು ಪಡಿತರ ಚೀಟಿ ರಿಜೆಕ್ಟ್ ಆಗಿವೆ. ರಿಜೆಕ್ಟ್

ಆದವರಿಗೂ ಸಹ ಪಡಿತರ ಚೀಟಿಗೆ ಪುನಃ ಅರ್ಜಿ ಸಲ್ಲಿಸುವುದಕ್ಕೆ ಪಂಚಾಯಿತಿಯಿಂದ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳುತ್ತಿದ್ದೀರಿ. ಈ ಹಿಂದೆ ಈ ರೀತಿಯಾದಂತಹ ಯಾವುದೇ ಒಂದು ವ್ಯವಸ್ಥೆ ಇಲ್ಲದಿದ್ದರೂ ಸಹ 25 ಅಂಶಗಳ ಕಾರ್ಯಕ್ರಮದಲ್ಲಿ ಆಹಾರ ಸಾಮಗ್ರಿಗಳನ್ನು ಬಡವರಿಗೆ ಸಬ್ಸಿಡಿ ದರದಲ್ಲಿ ಬಡವರಿಗೆ ಕೊಡಬೇಕು ಎನ್ನುವಂಥ ಒಂದು ಕಾಯಿದೆ ಬಂತೋ ಅಂದಿನಿಂದ ಇಂದಿನವರೆವಿಗೆ ಅಂದರೆ ಸುಮಾರು 32 ವರ್ಷಗಳಿಂದಲೂ ಹಿಂದಿನ ಸರ್ಕಾರಗಳು ವ್ಯವಸ್ಥಿತವಾಗಿ ಮಾಡಿಕೊಂಡು ಬಂದಿವೆ. ಆದರೆ ನಿಮಗೆ ಏಕೆ ಇಷ್ಟೊಂದು ಕಷ್ಟವಾಯಿತು ಎಂದು ನನಗೆ ಅರ್ಥವಾಗುತ್ತಿಲ್ಲ. ಈಗಾಗಲೇ ನಾಲ್ಕು ವರ್ಷ ಪೂರ್ಣಗೊಳಿಸಿದ್ದೀರಿ. ಆದರೆ ಇದೂವರೆವಿಗೂ ಸರಿಯಾಗಿ ಪಡಿತರ ಚೀಟಿಯನ್ನು ವಿತರಣೆ ಮಾಡಿಲ್ಲ. ಪಡಿತರ ಚೀಟಿಯೇ ಜನರಿಗೆ ಒಂದು ರೀತಿಯಲ್ಲಿ ಆಸ್ತಿ ಇದ್ದಂತೆ. ಬಿಪಿಎಲ್ ಕಾರ್ಡ್ ಇದ್ದರೆ ಮಕ್ಕಳಿಗೆ ಶಾಲೆಗೆ ಸೇರಿಸುವುದಕ್ಕಾಗಲಿ, ಸಾಲ –ಸೌಲಭ್ಯ ಪಡೆಯುವುದಕ್ಕೆ ಅಥವಾ ಇನ್ಯಾವುದೋ ಸವಲತ್ತು ಪಡೆಯುವುದಕ್ಕೆ ಅವರಿಗೆ ಸಹಾಯವಾಗುತ್ತದೆ. ಇದನ್ನು ಕೊಡುವುದಕ್ಕೇ ನಾಲ್ಕು ವರ್ಷ ತೆಗೆದುಕೊಂಡರೆ ಅವರು ಇನ್ನೆಷ್ಟು ಕಷ್ಟಪಟ್ಟಿರಬಹುದು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಲ್ಲವೆ. ತಕ್ಷಣವೇ ನೀವು ಆನ್‌ಲೈ ನ್ ಮುಖಾಂತರ ಪಡಿತರ ಚೀಟಿಯನ್ನು ನೋಂದಾಯಿಸಿಕೊಳ್ಳಬಹುದು ಎಂದು ತಿಳಿಸಿದ್ದೀರಿ. ಗ್ರಾಮಪಂಚಾಯಿತಿಯಲ್ಲಿ ಒಂದು ಕಂಪ್ಯೂಟರ್ ಇರುತ್ತದೆ, ಅಲ್ಲಿ ಆನ್‌ಲೈನ್ ಮೂಲಕ ನೋಂದಾಯಿಸಿಕೊಳ್ಳಲು ಕಂಪ್ಯೂಟರ್ ಕಲಿತಿರುವಂಥವರು ಇರಬೇಕಲ್ಲವೆ? ಮೊದಲೆಲ್ಲಾ ನೆಮ್ಮದಿ ಕೇಂದ್ರಕ್ಕೆ ಹೋಗಿ ಸಲ್ಲಿಸಿ ಎಂದು ಹೇಳಿದ್ದೀರಿ. ಈಗ ನೆಮ್ಮದಿ ಕೇಂದ್ರಗಳೆಲ್ಲಾ ಕಿತ್ತುಕೊಂಡು ಹೋಗಿವೆ, ಆ ವಿಷಯ ಸರ್ಕಾರಕ್ಕೆ ತಿಳಿದಿಲ್ಲವೆ? ನೆಮ್ಮದಿ ಕೇಂದ್ರ ಸಂಪೂರ್ಣವಾಗಿ ಮುಚ್ಚಿ ಹೋಗಿವೆ. ಯಾವುದೋ ಒಂದು ಏಜೆಸ್ಸಿಗೆ ಕೊಟ್ಟಿದ್ದರು, ಆ ಏಜೆನ್ಸಿಯವರು ಅಲ್ಲಿ ಒಂದು ಕಂಪ್ಯೂಟರ್ ಇಟ್ಟುಕೊಂಡು ನೆಮ್ಮದಿ ಕೇಂದ್ರವನ್ನು ಪ್ರಾರಂಭ ಮಾಡಿದರು. ಅವರಿಗೆ ನೀವು ಸರಿಯಾಗಿ ಸಂಬಳ ಕೊಡಲಿಲ್ಲ. ಹಾಗಾಗಿ ಅವರು ಬಡಜನರು ಏನು ಅರ್ಜಿಯನ್ನು ಕೊಟ್ಟಿದ್ದರು ಅದರ ಸಮೇತ,

ಕಂಪ್ಯೂಟರ್ ಸಮೇತ ಓಡಿ ಹೋಗಿದ್ದಾರೆ. ಈ ಪರಿಸ್ಥಿತಿಯಲ್ಲಿ ಜನರ ಗತಿ ಏನಾಗಬೇಕು? ನಾವೆಲ್ಲರೂ ನೆಮ್ಮದಿ ಕೇಂದ್ರದ ತಂದಾಗ ಅದರ ಬಗ್ಗೆ ಹೇಳಿದೆವು ಈ ನೆಮ್ಮದಿ ಕೇಂದ್ರವನ್ನು ಏಕೆ ಪ್ರಾರಂಭ ಮಾಡಿದ್ದೀರಿ, ಇದರಿಂದ ಜನರು ತಮ್ಮ ನೆಮ್ಮದಿಯನ್ನು ಕಳೆದುಕೊಳ್ಳುತ್ತಿದ್ದಾರೆ. ಅವರು ನೆಮ್ಮದಿ ಕೇಂದ್ರಕ್ಕೆ ಹೋಗಿ ಕ್ಯೂನಲ್ಲಿ ನಿಲ್ಲಬೇಕಾಗುತ್ತದೆ, 50 ರೂಪಾಯಿ ಛಾಫಾ ಕಾಗದದಲ್ಲಿ ಅವರು ಅಫಿದಾವಿತ್ತು ಕೊಡಬೇಕಾಗಿತ್ತು. ಇದೆಲ್ಲಾ ಸಮಸ್ಯೆ ಆಗುತ್ತದೆ ಎಂದು ಹೇಳಿದೆವು. ಆದರೆ ನಾವು ಹೇಳಿದಂತಹ ಮಾತನ್ನು ಸರ್ಕಾರ ಕೇಳಲೇ ಇಲ್ಲ. ಆದರೆ, ನಾವು ವಿನಾ ಕಾರಣ ನಿಮ್ಮ ಮೇಲೆ ದೋಷಾರೋಪಣೆ ಮಾಡುತ್ತೇವೆ ಎನ್ನುವ ರೀತಿಯಲ್ಲಿ ಸರ್ಕಾರ ಭಾವಿಸಿತ್ತು. ಆದರೆ ಇವತ್ತಿನ ದಿವಸ ಜನರ ಪರಿಸ್ಥಿತಿ ಏನಾಗಿದೆ ಎಂದು ಅರ್ಥವೇ ಆಗುತ್ತಿಲ್ಲ. ಆದರೆ, ಇವರಿಗೆ ಇದುವರೆವಿಗೂ ಕುರ್ಚಿ ಆಟವೇ ಆಯಿತು. ಆ ಕುರ್ಚಿ ಇದುವರೆವಿಗೂ ಅದು ಕುಳಿತಲೇ ಇದೆ. ಆದರೂ ಇವರು ಮ್ಯೂಸಿಕಲ್ ಛೇರ್ ಆಡುವುದಕ್ಕೆ ಪ್ರಾರಂಭ ಮಾಡಿದರು, ಜನರ ಎಲ್ಲಾ ತಾಪತ್ರಯಗಳನ್ನು ಮರೆತುಬಿಟ್ಟರು. ಜನರಿಗೆ ಕೊಡಬೇಕಾದ ಕನಿಷ್ಟ ಕಾರ್ಯಕ್ರಮ ಎಂದರೆ ನೀರು, ಸೂರು, ಪಡಿತರ ಚೀಟಿ. ಇದನ್ನೇ ಜನರಿಗೆ ಕೊಡುವುದಕ್ಕೆ ಆಗಲಿಲ್ಲ ಎಂದ ಮೇಲೆ ಇನ್ನೇನು ಮಾಡುವುದಕ್ಕೆ ಸಾಧ್ಯವಿದೆ? ಸರ್ಕಾರ ದಯವಿಟ್ಟು ಇದರ ಬಗ್ಗೆ ಗಂಭೀರವಾಗಿ ಚಿಂತನೆಯನ್ನು ನಡೆಸಿ, ಎಷ್ಟು ಕಾರ್ಡುಗಳನ್ನು ರಿಜೆಕ್ಟ್ ಮಾಡಲಾಗಿದೆ ಅವುಗಳನ್ನು ಮರುಪರಿಶೀಲನೆ ಮಾಡಬೇಕು. ಅದರ ಅಗತ್ಯ ಇಲ್ಲವೆಂದು ನನಗನಿಸುತ್ತದೆ. ಏಕೆಂದರೆ ಒಂದು ಚುನಾವಣೆ ನಡೆಸಲು ಬೊಕ್ಕಸದ ಹಣವೆಲ್ಲವನ್ನು ಖರ್ಚು ಮಾಡಲಾಗುವುದು. ಅಂತಹದ್ದರಲ್ಲಿ ಒಬ್ಬ ಬಡವ ಎರಡು ಕಾರ್ಡುಗಳನ್ನು ಇಟ್ಟುಕೊಳ್ಳುವುದರಿಂದ ರಾಜ್ಯವನ್ನು ಕೊಳ್ಳೆ ಹೊಡೆಯಲು ಸಾಧ್ಯವೇ? 5 ಲಕ್ಷ ಪಡಿತರ ಚೀಟಿಗಳನ್ನು ರಿಜೆಕ್ಟ್ ಮಾಡಿದಲ್ಲಿ ಆ ಜನರ ಪರಿಸ್ಥಿತಿ ಏನಾಗಬೇಕು? ಅವರ ಹೊಟ್ಟೆಬಟ್ಟೆಗಾಗಿ ಅವರು ಎಲ್ಲಿಗೆ ಹೋಗಬೇಕು?

**ಶ್ರೀ ಬಿ.ಎನ್. ಬಚ್ಚೇಗೌಡ:–** ಮಾನ್ಯ ಸಭಾಪತಿಗಳೇ, ಬೋಗಸ್ ಕಾರ್ಡುಗಳನ್ನು ಸರಿಪಡಿಸುವ ಕೆಲಸವನ್ನು ನಮ್ಮ ಸರ್ಕಾರ ಮಾಡುತ್ತಿದೆ. 1 ಲಕ್ಷ 20 ಸಾವಿರ ಕುಟುಂಬಗಳಿಗೆ 1 ಕೋಟಿ 60 ಲಕ್ಷ ಕಾರ್ಡುಗಳನ್ನು ಪಡೆದರೆ ಏನಾಗುತ್ತದೆ. ಒಂದೊಂದು ಕುಟುಂಬದವರು 5–6 ಕಾರ್ಡುಗಳನ್ನು ಪಡೆದಿದ್ದಾರೆ. ಆಯಾ ಕ್ಷೇತ್ರಗಳಲ್ಲಿ ಅದನ್ನೆಲ್ಲ ಪರಿಶೀಲನೆ ಮಾಡಿ ಸರಿಪಡಿಸಲಾಗುತ್ತಿದೆ. ಬಹಳಷ್ಟು ಬೋಗಸ್ ಕಾರ್ಡುಗಳಿವೆ.

**ಶ್ರೀಮತಿ ಮೋಟಮ್ಮ:–** ಬೋಗಸ್ ಕಾರ್ಡುಗಳು ಇಲ್ಲವೆಂದು ನಾನು ಹೇಳಲೇ ಇಲ್ಲ. ಎಲ್ಲಾ ಕಾರ್ಡುಗಳು genuine ಅಂತಲೂ ಸಹ ನಾನು ಹೇಳಲಿಲ್ಲ. ಆದರೆ, ಈ ಕಾರ್ಯಕ್ಕೆ ನಾಲ್ಕು ವರ್ಷ ತೆಗೆದುಕೊಂಡಿದ್ದು ಏಕೆ? ಇಷ್ಟು ವರ್ಷಗಳಲ್ಲಿ ಜನರು ಪಡಬಾರದ ಕಷ್ಟವನ್ನು ಪಟ್ಟಿದ್ದಾರೆ.

**ಶ್ರೀ ಬಿ.ಎನ್. ಬಚ್ಚೇಗೌಡ:–** ಬಿಪಿಎಲ್ ಕಾರ್ಡುಗಳು ಎಪಿಎಲ್ ಕಾರ್ಡುಗಳಾಗಿವೆ, ಎಪಿಎಲ್ ಕಾರ್ಡುಗಳು ಬಿಪಿಎಲ್ ಕಾರ್ಡುಗಳಾಗಿವೆ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ.

**ಶ್ರೀಮತಿ ಮೋಟಮ್ಮ:–** ಅದು ನಿಮ್ಮ ಸರ್ಕಾರ ಬಂದ ಮೇಲೆ ಆಗಿರುವುದು, ಮೊದಲಿಗೆ ಆಗಿರಲಿಲ್ಲ. ಏಕೆಂದರೆ, ಚುನಾವಣೆಗಳು ಹತ್ತಿರ ಬಂದಾಗ ಯಾರಿಗೆ ಬೇಕು ಅವರಿಗೆಲ್ಲ ಕಾರ್ಡುಗಳನ್ನು ನೀಡಿದ ಪರಿಣಾಮ ಬೋಗಸ್ ಕಾರ್ಡುಗಳು ಹೆಚ್ಚಾಗಿವೆ. ಯಾವ ವರ್ಷದಿಂದ ಬೋಗಸ್ ಕಾರ್ಡುಗಳು ಹೆಚ್ಚಾಗಿವೆ ಎನ್ನುವ ಮಾಹಿತಿಯನ್ನು ತರಿಸಿ ನೋಡಿ ಗೊತ್ತಾಗುತ್ತದೆ.

**ಶ್ರೀ ಬಿ.ಎನ್. ಬಚ್ಚೇಗೌಡ:–** ಮಾನ್ಯ ಸಭಾಪತಿಗಳೇ, ಆ ದೃಷ್ಟಿಯಿಂದಲೇ ಈಗ ಕಾರ್ಡುಗಳ ಪರಿಶೀಲನೆಯನ್ನು ನಡೆಸುತ್ತಿರುವುದು. ಪಂಚಾಯಿತಿ ವ್ಯವಸ್ಥೆಯಲ್ಲಿ 'ಆನ್‌ಲೈನ್' ಮಾಡಲಾಗಿದೆ. ತಾಲ್ಲೂಕು ಮಟ್ಟದಲ್ಲೂ ಕೂಡ 'ಆನ್‌ಲೈನ್' ಮೂಲಕ register ಮಾಡಿಸಿಕೊಳ್ಳಬಹುದು. ಅದಕ್ಕೇನೂ cut-off-date ಇರುವುದಿಲ್ಲ. ಯಾವತ್ತು ಬೇಕಾದರೂ ವಿವರಗಳನ್ನು include ಮಾಡಿಸಿ ಸರಿಪಡಿಸಿಕೊಳ್ಳಬಹುದು.

**ಶ್ರೀಮತಿ ಮೋಟಮ್ಮ:–** ಇದಕ್ಕೆ ಒಂದು ಸಮಯ ನಿಗದಿ ಮಾಡದಿದ್ದರೆ 5 ವರ್ಷಗಳಾದರೂ ಸಹ ಮುಗಿಯುವುದಿಲ್ಲ. ನೀವು ಆಟ ಆಡಬೇಕೆಂದಿರುವ 5 ವರ್ಷಗಳ ಅವಧಿ ಮುಗಿಯುವ ತನಕವೂ ಜನರು ಸಂಕಟವನ್ನು ಪಡಬೇಕಾಗುತ್ತದೆ. ಆದ್ದರಿಂದ 2–3 ತಿಂಗಳುಗಳ ಅವಧಿಯಲ್ಲಿ ಇದನ್ನೆಲ್ಲ ಸರಿಪಡಿಸಲಿಕ್ಕೆ ಸೂಕ್ತ ಕ್ರಮವನ್ನು ಕೈಗೊಳ್ಳಬೇಕು.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಗಳೇ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮಾತನಾಡಲು ಅನುಕೂಲವಾಗುವಂತೆ ಮತ್ತು ಗೊಂದಲಗಳ ಮಧ್ಯೆ ಚರ್ಚೆಯನ್ನು ಮುಂದುವರೆಸಿದಲ್ಲಿ ಮತ್ತಷ್ಟು ಗೊಂದಲ ಆಗಬಹುದೆನ್ನುವ ಹಿನ್ನೆಲೆಯಲ್ಲಿ ಒಂದು ವಿಚಾರವನ್ನು ಸ್ಪಷ್ಟಪಡಿಸಬಯಸುತ್ತೇನೆ. ಈಗ ನಾವು 'ಆನ್‌ಲೈನ್' ಮೂಲಕ ಪಡೆದಿರುವ ಅರ್ಜಿಗಳ ಪರಿಶೀಲನಾ ಕಾರ್ಯ ಈಗಷ್ಟೇ ಪ್ರಾರಂಭಗೊಂಡಿದೆ. ಆದರೆ, ಇನ್ನು ಯಾವುದೇ ಕಾರ್ಡುಗಳು rejection ಆಗಿಲ್ಲ. ವಿರೋಧ ಪಕ್ಷದ ನಾಯಕರು ಹೇಳಿದಂತೆ 5 ಲಕ್ಷ ಕಾರ್ಡುಗಳನ್ನು ಎಲ್ಲಿಯೂ rejection ಮಾಡಿರುವುದಿಲ್ಲ. ಅದು ನೆಮ್ಮದಿ ಕೇಂದ್ರಕ್ಕೆ ಸಂಬಂಧಪಟ್ಟಿದ್ದು. ಈಗ ಪಡೆದಿರುವ ಅರ್ಜಿಗಳ ಪರಿಶೀಲನಾ ಕಾರ್ಯ ನಡೆದಿದೆ. ಹಳೆಯದರಲ್ಲಿ ಆಗಿರುವ ನ್ಯೂನತೆಗಳನ್ನು ಸರಿಪಡಿಸುವ ದೃಷ್ಟಿಯಿಂದ ನಾವು ಈ ವ್ಯವಸ್ಥೆಯನ್ನು ಮಾಡಿದ್ದೇವೆ. ಹಾಗಾಗಿ ಈಗ ಪರಿಶೀಲನೆ ಆಗುತ್ತಿದೆಯೇ ವಿನಃ ಯಾವ ಕಾರ್ಡನ್ನು ಇನ್ನೂ rejection ಮಾಡಿಲ್ಲ.

**ಶ್ರೀಮತಿ ಮೋಟಮ್ಮ:–** ನಮ್ಮ ಚಿಕ್ಕಮಗಳೂರು ಜಿಲ್ಲೆಯಲ್ಲಿಯೇ 10,000 ಕಾರ್ಡುಗಳನ್ನು ರಿಜೆಕ್ಟ್ ಮಾಡಲಾಗಿದೆ. ಜಿಲ್ಲಾ ಪರಿಷತ್ ಅಧ್ಯಕ್ಷರಾಗಿದ್ದವರು ನಮ್ಮ ಸದನಲ್ಲಿಯೇ ಇದ್ದಾರೆ ಅವರನ್ನು ಬೇಕಾದಲ್ಲಿ ಕೇಳಿನೋಡಿ. ಕಳೆದ ಅಧಿವೇಶನದಲ್ಲಿ ಮಾನ್ಯ ಸದಸ್ಯರೊಬ್ಬರ ಪ್ರಶ್ನೆಗೆ ಉತ್ತರ ನೀಡತಕ್ಕ ಸಂದರ್ಭದಲ್ಲಿ 5 ಲಕ್ಷ ಕಾರ್ಡುಗಳನ್ನು rejection ಮಾಡಿರುವುದಾಗಿ ಸರ್ಕಾರದ ಪರವಾಗಿ ಹೇಳಿಕೆ ನೀಡಿದ್ದಾರೆ. ಬೆಳಗಾವಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಎಷ್ಟು ಕಾರ್ಡುಗಳನ್ನು ರಿಜೆಕ್ಟ್ ಮಾಡಲಾಗಿದೆ ಎನ್ನುವ

ವಿವರಗಳನ್ನು bifurcate ಮಾಡಿ ಹೇಳಿದ್ದಾರೆ. ಹಾಗಾಗಿ ಎಷ್ಟೇ ಕಾರ್ಡುಗಳನ್ನು ರಿಜೆಕ್ಟ್ ಮಾಡಿದ್ದರೂ ಸಹ ಅವುಗಳನ್ನು ಕೂಡಲೇ ಸರಿಪಡಿಸಿ ಅವರ ಹೊಟ್ಟೆಗೆ ಅನ್ನ ಮತ್ತು ಇತರೆ ಸವಲತ್ತುಗಳು ಸಿಗುವ ಹಾಗೆ ಮಾಡಬೇಕೆನ್ನುವುದು ನಮ್ಮ ಕಳಕಳಿ. ಮತ್ತು ಇದರ ಕಡೆಗೆ ಹೆಚ್ಚಿನ ಆದ್ಯತೆ ನೀಡುವುದು ನಮ್ಮ ಕಳಕಳಿಯ ಮನವಿ. ಆದ್ದರಿಂದ ಎಷ್ಟು ದಿವಸದ ಒಳಗೆ ರಿಜೆಕ್ಟ್ ಆಗಿರತಕ್ಕ ಕಾರ್ಡುಗಳನ್ನು ಪರಿಶೀಲಿಸಿ ಸರಿಪಡಿಸಲಾಗುವುದು ಎನ್ನುವ ಉತ್ತರವನ್ನು ಸರ್ಕಾರ ನೀಡಬೇಕು.

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಗಳೇ, ಈ ಕಾರ್ಡುಗಳನ್ನು ಪರಿಶೀಲನೆ ಮಾಡಿದಂತಹ ಸಂದರ್ಭದಲ್ಲಿ ಅರ್ಹ ಫಲಾನುಭವಿಗಳ ಬಳಿ ಮೊಬೈಲ್ ಇದೆ, ಟೆಲಿಫೋನ್ ಇದೆ ಎನ್ನುವ ಸಣ್ಣಪುಟ್ಟ ತಪ್ಪುಗಳಿಗಾಗಿ ರಿಜೆಕ್ಟ್ ಮಾಡಲಾಗಿದೆ. ದಯಮಾಡಿ ಅದನ್ನು ಪುನರ್ ಪರಿಶೀಲಿಸಬೇಕು. ಇದರಿಂದ ಬಡವರಿಗೆ ತೊಂದರೆ ಆಗುತ್ತಿದೆ.

ಇದರ ಜೊತೆಗೆ ಈ ನೆಮ್ಮದಿ ಕೇಂದ್ರಗಳನ್ನು private agency ಯವರು ನಡೆಸುತ್ತಿದ್ದಾರೆ. ಅವರು ಸಹ ಒಂದೊಂದು ಸಮಸ್ಯೆಯನ್ನು ಹೇಳುವುದರಿಂದ ಒಬ್ಬ ವ್ಯಕ್ತಿ 3-4 ಸಲ ಈ ಈ ನೆಮ್ಮದಿ ಕೇಂದ್ರಕ್ಕೆ ಹೋಗಬೇಕಾಗುತ್ತದೆ. ಅವರು ಸಹ ಸರಿಯಾದ ರೀತಿಯಲ್ಲಿ ಈ ಕೇಂದ್ರಗಳನ್ನು ನಡೆಸುವುದರ ಮೂಲಕ ಜನರಿಗೆ ಸಹಾಯ ಮಾಡುತ್ತಿಲ್ಲ. ಈಗ ಇದರ ಜೊತೆಗೆ ಆದಾಯ ಪ್ರಮಾಣ ಪತ್ರವನ್ನು ಕೂಡ ನೆಮ್ಮದಿ ಕೇಂದ್ರಕ್ಕೆ ನೀಡುವ ಬಗ್ಗೆ ಮಾತುಕತೆ ನಡೆಯುತ್ತಿದೆ. ಇನ್ನು ಪಂಚಾಯಿತಿಗೆ ಅಥವಾ ಪ್ರಾಥಮಿಕ ಸಹಕಾರಿ ಸಂಘಗಳಿಗೆ ನೀಡಬೇಕೆನ್ನುವುದು ಕೂಡ ಒಂದು ವಾದವಿದೆ.

**ಶ್ರೀ ಬಿ.ಎನ್. ಬಚ್ಚೇಗೌಡ:-** ಮಾನ್ಯ ಸಭಾಪತಿಗಳೇ, ಹೋಬಳಿಗಳು ಮಟ್ಟದಲ್ಲಿ ಈ 'ನೆಮ್ಮದಿ ಕೇಂದ್ರ' ಇರುವುದು. ಇದು ನಡೆಯುತ್ತಿರುವುದು ಗ್ರಾಮಪಂಚಾಯಿತಿಯ ವ್ಯಾಪ್ತಿಯಲ್ಲಿ ಆ ನೆಮ್ಮದಿ ಕೇಂದ್ರ ಎನ್ನುವುದನ್ನು **Comat Technologies** ಎನ್ನುವ ಸಂಸ್ಥೆಗೆ ನೀಡಲಾಗಿದ್ದು, ಅವರು ಮಾಡಿರುವ irregularities ನಿಂದ ಅವ್ಯವಹಾರ ಆಗಿದೆ. ಮಾನ್ಯ ವಿರೋಧ

ಪಕ್ಷದ ನಾಯಕರು ಹೇಳಿರುವ ಹಾಗೆ ನೆಮ್ಮದಿ ಕೇಂದ್ರಗಳು ಜನರ ನೆಮ್ಮದಿಯನ್ನು ಕೆಡಿಸಿರುವುದು ನಿಜ. 'Nemmadi Kendra' is nothing to do with these BPL cards.

**ಶ್ರೀ ಪಟೇಲ್ ಶಿವರಾಂ:–** ಮಾನ್ಯ ಸಭಾಪತಿಗಳೇ, ಈ ವಿಚಾರದಲ್ಲಿ ಮತ್ತೊಮ್ಮೆ ಪರಿಶೀಲನೆಯನ್ನು ನಡೆಸಬೇಕು. ಸಣ್ಣಪುಟ್ಟ ತಪ್ಪಿಗೆಲ್ಲ ಅರ್ಹರ ಕಾರ್ಡುಗಳನ್ನು ರಿಜೆಕ್ಟ್ ಮಾಡುವುದು ಸರಿಯಲ್ಲ. ಅನರ್ಹರಿಗೆ ಕಾರ್ಡುಗಳು ಸಿಕ್ಕಿವೆ. ಅರ್ಹರಿಗೆ ರಿಜೆಕ್ಟ್ ಮಾಡಲಾಗಿದೆ. ಇದರ ಬಗ್ಗೆ ಪರಿಶೀಲಿಸಬೇಕು. ಸಣ್ಣಪುಟ್ಟ ತಪ್ಪುಗಳನ್ನು ಹುಡುಕಿ ಕಾರ್ಡುಗಳನ್ನು ರಿಜೆಕ್ಟ್ ಮಾಡುವ ಕೆಲಸವನ್ನು ಮಾಡಬಾರದು.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಗಳೇ, ಈ ಪರಿಶೀಲನೆಯಲ್ಲಿ ಸಣ್ಣಪುಟ್ಟ ತಪ್ಪುಗಳನ್ನು ಗಣನೆಗೆ ತೆಗೆದುಕೊಳ್ಳಬಾರದು. ನಾವು ಇವತ್ತು ಚುನಾವಣೆಗಳಿಗೆ ಕೋಟ್ಯಾಂತರ ರೂಪಾಯಿಗಳನ್ನು ಕಳೆಯುತ್ತೇವೆ. ಯಾರೋ ಒಬ್ಬ ಮೊಬೈಲ್ ಇಟ್ಟುಕೊಂಡಿರುವ ಕಾರಣಕ್ಕೆ ಆತನ ಕಾರ್ಡು ರದ್ದು ಮಾಡುವುದು ಸೂಕ್ತವಲ್ಲ. ಇವತ್ತು ಮೊಬೈಲ್ ಒಂದು ಜೀವನಾವಶ್ಯಕ ವಸ್ತುವಾಗಿದೆ. ಮೊಬೈಲ್ ಬಗ್ಗೆ ಒಂದು ಜೋಕು ಇದೆ. ಅದು ಏನೆಂದರೆ, ಯಾರೋ ಒಬ್ಬ ಭಿಕ್ಷುಕ ಒಂದು ಮನೆಯ ಮುಂದೆ ಬಂದು ಭಿಕ್ಷೆ ಬೇಡತಕ್ಕ ಸಂದರ್ಭದಲ್ಲಿ ಅವರು ತಂದು ಕೊಡುವುದು ತಡವಾದಾಗ, ಆತ 'ಆಮೇಲೆ ನನಗೆ ಫೋನ್ ಮಾಡಿ ಬರುತ್ತೇನೆ' ಎಂದು ಹೇಳಿ ಹೋಗುತ್ತಾನೆ. ಅಂದರೆ, ಜನಜೀವನದಲ್ಲಿ ಮೊಬೈಲ್‌ನ ಅವಶ್ಯಕತೆ ಅಷ್ಟಿದೆ. ಹಾಗಾಗಿ ಮೊಬೈಲ್ ಫೋನ್ ಹೊಂದಿರುವವರಿಗೆ ಬಿಪಿಎಲ್ ಕಾರ್ಡು ಕೊಡಲು ಬರುವುದಿಲ್ಲ ಎಂದು ಹೇಳುವುದು ಸೂಕ್ತವಲ್ಲ.

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಗಳೇ, ಮೊದಲಿಗೆ ನಮ್ಮ ರಾಜ್ಯದಲ್ಲಿ ಬೋಗಸ್ ಎನ್ನುವುದು ಹೋಗಬೇಕು. ಬೋಗಸ್ ಕಾರ್ಡುನಿಂದ ಯಾವನೋ ಒಬ್ಬ ಎಲ್ಲಾ ಲೂಟಿ ಹೊಡೆದಲ್ಲಿ ಯಾವುದೇ ಪಕ್ಷದ ರಾಜ್ಯಸರ್ಕಾರ ಏನು ಮಾಡಲು ಸಾಧ್ಯ? ಹಾಗಾಗಿ

ಬೋಗಸ್ ಕಾರ್ಡುಗಳನ್ನು ಮೊದಲು mercilessly ಆಗಿ ಬಂದ್ ಮಾಡಬೇಕು. ಬೋಗಸ್ ಕಾರ್ಡಿನಿಂದ ಎಲ್ಲರೂ ಲೂಟಿ ಮಾಡುತ್ತಾರೆ. ಹಾಗಾಗಿ ಬೋಗಸ್ ಕಾರ್ಡುಗಳು ಇರಬಾರದು.

**ಶ್ರೀ ವೀರಣ್ಣ ಮತ್ತಿಕಟ್ಟಿ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಗಳೇ, ಈ ಬೋಗಸ್ ಕಾರ್ಡುಗಳ ಬಗ್ಗೆ ಸರ್ಕಾರ ಅತ್ಯಂತ ಹೆಚ್ಚಿನ ಜಾಗರೂಕತೆಯನ್ನು ವಹಿಸಬೇಕಾಗುತ್ತದೆ. ಏಕೆಂದರೆ, ನ್ಯಾಯಬೆಲೆ ಅಂಗಡಿಗಳ ಮಾಲೀಕರೇ ಹೆಚ್ಚುವರಿ ಕಾರ್ಡುಗಳನ್ನು ಮಾಡಿಸಿ ಇಟ್ಟಿಕೊಂಡಿರುತ್ತಾರೆ. ಇದರಿಂದ ಸಾಮಾನ್ಯರಿಗೆ ತೊಂದರೆ ಆಗುತ್ತದೆ. ಅವರು ಪ್ರಭಾವಿ ವ್ಯಕ್ತಿಗಳಾಗಿದ್ದುಕೊಂಡು ಇದನ್ನೆಲ್ಲ ಮಾಡುತ್ತಾರೆ. ಇದಕ್ಕೆಲ್ಲ ಕಡಿವಾಣವನ್ನು ಹಾಕಬೇಕು. ನಮ್ಮ ವಿರೋಧ ಪಕ್ಷದ ನಾಯಕರು ಈ ವಿಚಾರವನ್ನು ಪ್ರಸ್ತಾಪಿಸಿದ ಉದ್ದೇಶವೇನೆಂದರೆ ತೀವ್ರಗತಿಯಲ್ಲಿ ಬಡವರಿಗೆ ಸಾಮಾನ್ಯರಿಗೆ ಪಡಿತರ ಚೀಟಿಗಳನ್ನು ನೀಡಿದ್ದಲ್ಲಿ ಅವರ ಜೀವನಕ್ಕೆ ಅನುಕೂಲ ಆಗುತ್ತದೆ. ಅವರಿಗೆ ರಿಯಾಯಿತಿ ದರದಲ್ಲಿ ಆಹಾರಧಾನ್ಯಗಳು ದೊರೆಯುತ್ತವೆ. ಈ ಕೆಲಸ ನಾಲ್ಕು ವರ್ಷಗಳ ಕಾಲ ತಡವಾಗಿದೆ. ಇದನ್ನು ತೀವ್ರಗತಿಯಲ್ಲಿ ಮಾಡಬೇಕೆಂದು ಅವರು ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಇದನ್ನು ನೆಮ್ಮದಿ ಕೇಂದ್ರದಿಂದ ತೆಗೆದು ಹಾಕಿರುವುದು ಬಹಳ ಒಳ್ಳೆಯದು. ಇನ್ನು 50 ರೂಪಾಯಿಯ ಸ್ಟ್ಯಾಂಪ್ ಪೇಪರ್ ಮೇಲೆ Affidavit ಮಾಡಿಕೊಡಬೇಕಾಗಿತ್ತು, ಅದನ್ನು ಕೂಡ ತೆಗೆದು ಹಾಕಲಾಗಿದೆ. ಹಾಗಾಗಿ ಇದಕ್ಕಾಗಿ ಹಣ ಖರ್ಚು ಮಾಡುವ ಪ್ರಮೇಯ ಇರುವುದಿಲ್ಲ. ಈಗಾಗಲೇ ಗ್ರಾಮಸಭೆಗಳಿಗೆ ಸರ್ಕಾರ ಕಂಪ್ಯೂಟರ್‌ಗಳನ್ನು ಒದಗಿಸಿದೆ. ಅದನ್ನು ಆಪರೇಟ್ ಮಾಡುವುದಕ್ಕೂ ಸಹ ಹೊರಗಿನಿಂದ ಸಿಬ್ಬಂದಿಯನ್ನು ಪಡೆಯಲಾಗಿದೆ. ಅವರುಗಳು ಇದ್ದರೂ ಸಹ ತಾಲ್ಲೂಕಿಗೆ ತಹಸೀಲ್ದಾರರ ಕೆಳಗಿನ ಒಬ್ಬ ನೋಡಲ್ ಅಧಿಕಾರಿ, ರೆವಿನ್ಯೂ ಇನ್ಸ್‌ಪೆಕ್ಟರ್ ಲೆವಲ್‌ನ ಒಬ್ಬ ಅಧಿಕಾರಿಯನ್ನು ನೇಮಿಸಬೇಕು. ಇದರ ಬಗ್ಗೆ ಇನ್ನು ಹೆಚ್ಚಿನ ಆಸಕ್ತಿಯನ್ನು ವಹಿಸಿ, ಹೆಚ್ಚಿನ ಕಾಳಜಿಯಿಂದ ಕೆಲಸವನ್ನು ಮಾಡಬೇಕು. ಆಗ ಮಾತ್ರ ಅವಶ್ಯ ಇರುವವರಿಗೆ, ಅರ್ಹರಿಗೆ ಈ ಸವಲತ್ತುಗಳು ದೊರೆಯುತ್ತವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಗಳೇ, ನನಗೆ ಗೊತ್ತಿರುವ ಮಾಹಿತಿಯ ಪ್ರಕಾರ ಯಾರಾದರೂ ಬಡವರು ಗ್ರಾಮಸಭೆಗೆ ಹೋದಲ್ಲಿ ಅಲ್ಲಿ ಕಂಪ್ಯೂಟರ್ ಮತ್ತು ಅದರ ನಿರ್ವಹಣೆಗೆ ಸಿಬ್ಬಂದಿ ಇರುವುದರಿಂದ ಅರ್ಜಿ ನೀಡಿದಲ್ಲಿ ಅನುಕೂಲ ಆಗುತ್ತದೆ. ಆದರೆ ಪಟ್ಟಣಗಳಲ್ಲಿ ಸ್ವಂತ ಕಂಪ್ಯೂಟರ್‌ನಿಂದ ಅರ್ಜಿಗಳನ್ನು ಸಲ್ಲಿಸಬೇಕೆಂದು ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ 178 ಪಟ್ಟಣ ಪಂಚಾಯಿತಿಗಳಿವೆ. ಇಲ್ಲಿ ಹೆಚ್ಚಾಗಿ ಬಡವರು ಮತ್ತು ಕೃಷಿಕರು ಇದ್ದಾರೆ. ನಗರಸಭೆ, ಮತ್ತು ಪುರಸಭೆಗಳಲ್ಲಿ ಬಡವರು ಇರುವುದಿಲ್ಲವೇ? ಅವರು ಹೇಗೆ ಸ್ವಂತ ಕಂಪ್ಯೂಟರ್‌ನ್ನು ಹೊಂದಲು ಸಾಧ್ಯ? ಅವರು 'ಆನ್‌ಲೈನ್' ಮೂಲಕ ಅರ್ಜಿಯನ್ನು ಸಲ್ಲಿಸಲು ಹೇಗೆ ಸಾಧ್ಯ? ಇದನ್ನು ಇಲಾಖೆಯವರ ಗಮನಕ್ಕೆ ತಂದಾಗಲೂ ಸಹ ನಗರಸಭೆ, ಪುರಸಭೆ, ಮಹಾನಗರಪಾಲಿಕೆಗಳಿಗೆ ಮತ್ತು ಪಟ್ಟಣಪಂಚಾಯಿತಿಗಳಿಗೆ ಕಂಪ್ಯೂಟರ್ ಒದಗಿಸಲಾಗುವುದು ಎಂದು ಹೇಳಿದರೂ ಸಹ ಇಲ್ಲಿಯವರೆಗೆ ಒದಗಿಸಿರುವುದಿಲ್ಲ. ನನ್ನ ವಿನಂತಿ ಏನೆಂದರೆ, ಗ್ರಾಮಸಭೆಗಳಲ್ಲಿ ಅರ್ಜಿಗಳನ್ನು ಸ್ವೀಕರಿಸಲು ಯಾವ ರೀತಿಯ ಅನುಕೂಲತೆಗಳನ್ನು ಮಾಡಲಾಗಿದೆ, ಅದೇ ಮಾದರಿಯಲ್ಲಿ ನಗರಸಭೆ, ಪುರಸಭೆ, ಮಹಾನಗರಪಾಲಿಕೆಗಳಿಗೆ ಮತ್ತು ಪಟ್ಟಣ ಪಂಚಾಯಿತಿಗಳಿಗೂ ಸಹ ಮಾಡಬೇಕಾಗುತ್ತದೆ. ಈಗ ಪಡೆದಿರುವ ಅರ್ಜಿಗಳ ಪರಿಶೀಲನೆ ನಡೆಸಿದ ನಂತರ ಪಡಿತರ ಚೀಟಿಗಳನ್ನು ನೀಡಲಾಗುವುದು. ಆದರೆ, ಈ ಪಡಿತರ ಚೀಟಿಗಳಲ್ಲಿ ಹೆಸರುಗಳ ಬದಲಾವಣೆ ಆಗಬೇಕಾಗಿರುತ್ತದೆ. ಕೆಲವು ಹೆಸರುಗಳ ತಿದ್ದುಪಡಿ ಆಗಬೇಕಾಗಿರುತ್ತದೆ. ಒಂದು ಕುಟುಂಬದಲ್ಲಿ ಯಾರಾದರೂ ಮೃತರಾಗಿದ್ದಲ್ಲಿ ಅವರ ಹೆಸರನ್ನು ತೆಗೆಯಬೇಕಾಗುತ್ತದೆ, ಯಾರಾದರೂ ಮಕ್ಕಳು ಹುಟ್ಟಿದಲ್ಲಿ ಅವರ ಹೆಸರನ್ನು ಸೇರಿಸಬೇಕಾಗುತ್ತದೆ. ಆ ಪ್ರಕ್ರಿಯೆಯನ್ನು ಇನ್ನೂ ಸಹ ಪ್ರಾರಂಭ ಮಾಡಿರುವುದಿಲ್ಲ. ಆದಷ್ಟು ಬೇಗ ಇದನ್ನೆಲ್ಲ ಮಾಡಬೇಕೆನ್ನುವುದು ನನ್ನ ವಿನಂತಿ.

**ಶ್ರೀ ಆರ್.ವಿ. ವೆಂಕಟೇಶ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಗಳೇ, ಅಧಿಕಾರಿಗಳು ಏನು ಅಂಕಿ–ಅಂಶಗಳನ್ನು ಕೊಟ್ಟಿದ್ದಾರೆ ಅದರ ಪ್ರಕಾರ ಸಾಕಷ್ಟು ಬೋಗಸ್ ಕಾರ್ಡ್‌ಗಳು ಇವೆ. ಅದರಲ್ಲಿಯೂ ವಿಶೇಷವಾಗಿ 2008ರ ಚುನಾವಣೆ ಸಮಯದಲ್ಲಿ ತತ್ಕಾಲ್ ಕಾರ್ಡ್‌ಗಳನ್ನು ಉದಾರವಾಗಿ ಕೊಟ್ಟುಬಿಟ್ಟರು. ರಾಜಕೀಯ ವ್ಯವಸ್ಥೆಯಲ್ಲಿ ಅದನ್ನು ಕಂಟ್ರೋಲ್ ಮಾಡಲು ಆಗಲಿಲ್ಲ. ಆ ಕಾರಣದಿಂದ ಈ ಎಪಿ/ಎಂಸಿ ಗಳು ಈ ರೀತಿ ಇವೆ. ಇಲ್ಲದಿದ್ದರೆ ಸಾಕಷ್ಟು ನಿಯಂತ್ರಣದಲ್ಲಿ ಇರುತ್ತಿತ್ತು. ಪಡಿತರ ವ್ಯವಸ್ಥೆ ಬಹಳ ಸುಲಭವಾಗಿ ಇರಬೇಕು. ಆನ್‌ಲೈನ್ ಖಂಡಿತವಾಗಿ ಸುಲಭದ ವ್ಯವಸ್ಥೆಯಾಗಿದೆ. ಆದರೆ, ಅದು ಬಡಜನರಿಗೆ, ಗ್ರಾಮೀಣ ಜನರಿಗೆ ಅಲ್ಲ, ಯಾರೋ ಅಮೇರಿಕಾದಲ್ಲಿರುವವರಿಗೆ ಮತ್ತು ಕಛೇರಿ ವ್ಯವಸ್ಥೆಗೆ ಸುಲಭ. ದಿನನಿತ್ಯ ಜನಸಾಮಾನ್ಯರು ಸಣ್ಣ–ಪುಟ್ಟ ವಿಷಯಕ್ಕೆ ಓಡಾಡಲು ಆಗುವುದಿಲ್ಲ. ಇವತ್ತು ಸಣ್ಣ–ಸಣ್ಣ ವಿಷಯಗಳಿಗೆ ಕಾರ್ಡ್‌ಗಳನ್ನು reject ಮಾಡುತ್ತಿದ್ದಾರೆ. ಮತ್ತೆ ಅವರು ಸರಿಪಡಿಸಿಕೊಳ್ಳಬೇಕು ಎಂದರೆ 5–6 ತಿಂಗಳುಗಳಾಗುತ್ತವೆ. ಒಂದು ತಿಂಗಳು ಬಡವರಿಗೆ ರೇಶನ್ ಸಿಗದಿದ್ದರೆ ಕಷ್ಟವಾಗುತ್ತದೆ. ಪ್ರತಿಯೊಂದು ಕೆಲಸಕ್ಕೂ ಆನ್‌ಲೈನ್ ವ್ಯವಸ್ಥೆ ಸರಿಯಲ್ಲ. ಇದು ಹಳ್ಳಿಗಾಡಿನ ಜನರಿಗೆ ಮಾತ್ರವಲ್ಲ, ಪಟ್ಟಣದ ಜನರಿಗೂ ಆನ್‌ಲೈನ್ ವ್ಯವಸ್ಥೆ ಸರಿಯಾಗಿ ಗೊತ್ತಿರುವುದಿಲ್ಲ. ಉದಾಹರಣೆಗೆ ನಮಗೆಲ್ಲ ಕಂಪ್ಯೂಟರ್ ಕೊಟ್ಟಿದ್ದಾರೆ, ಆದರೆ ನಮಗೆ ತರಬೇತಿ ಬೇಕಾಯಿತು. ನಮಗೇ ಇನ್ನೂ ಸರಿಯಾಗಿ ಗೊತ್ತಿಲ್ಲ ಎಂದಾಗ ಸಾಮಾನ್ಯ ಜನರಿಗೆ ಇದರ ಬಗ್ಗೆ ಏನು ಗೊತ್ತಾಗುತ್ತದೆ. ಇಂತಹ ಸಂದರ್ಭದಲ್ಲಿ ಮತ್ತೆ ಮದ್ಯವರ್ತಿಗಳ ಹಾವಳಿ ಪ್ರಾರಂಭವಾಗುತ್ತದೆ. ಮಧ್ಯವರ್ತಿಗಳು ಜನರ ದಿಕ್ಕನ್ನು ತಪ್ಪಿಸಿ ತಮಗೆ ಬೇಕಾದ ರೀತಿಯಲ್ಲಿ ಮಾಡಿಕೊಳ್ಳುತ್ತಾರೆ. ಇದು ಇನ್ನು ಹೆಚ್ಚಿನ ಸಮಸ್ಯೆಯಾಗುತ್ತದೆಯೇ ಹೊರತಾಗಿ ಸಲಭವಾಗುವುದಿಲ್ಲ. ಆದ್ದರಿಂದ ಆನ್‌ಲೈನ್ ವ್ಯವಸ್ಥೆಯು ಪರ್ಯಾಯವಾಗಿ ಇರಬೇಕೇ ಹೊರತು ಅದೇ ಕಡ್ಡಾಯ ಎಂದು ಆಗಬಾರದು. ಆಲ್‌ಲೈನ್ ವ್ಯವಸ್ಥೆಯನ್ನು ಯಾರಿಗೆ ಬೇಕು ಅವರು ಉಪಯೋಗ ಮಾಡಿಕೊಳ್ಳಲಿ.

ಜನಸಾಮಾನ್ಯರು ಆನ್‌ಲೈನ್‌ನಲ್ಲಿಯೇ ಮಾಡಬೇಕು ಎಂದು ಹೇಳಿದರೆ ತಪ್ಪಾಗುತ್ತದೆ. ಅದರ ಬಗ್ಗೆ ಸರ್ಕಾರ ಯೋಚನೆ ಮಾಡಬೇಕು.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಗಳೇ, ಇಲ್ಲಿ ಇರುವ ಪ್ರಶ್ನೆ ಎಂದರೆ, ಮೂಲಭೂತವಾಗಿ ಪಡಿತರ ವ್ಯವಸ್ಥೆಯನ್ನು ಕಾರ್ಯಗತಗೊಳಿಸುವವರು ಯಾರು? ಅರ್ಜಿಯನ್ನು ಪಂಚಾಯಿತಿಗೆ ಕೊಡಬೇಕು, ನಂತರ ಕಂದಾಯ ಇಲಾಖೆ ಅರ್ಹರನ್ನು ಆಯ್ಕೆ ಮಾಡುತ್ತದೆ. ಅರ್ಜಿ ಕೊಡುವುದು ಪಂಚಾಯಿತಿಗೆ, ಯಾರೋ ಮಂಜೂರು ಮಾಡುವುದು, ಆದರೆ ಬೈಯಿಸಿಕೊಳ್ಳುವುದು ಪಂಚಾಯಿತಿ. ಇಲ್ಲಿ ಆನ್‌ಲೈನ್ ಅವಶ್ಯಕತೆ ಇಲ್ಲ. ಆಯಾ ಗ್ರಾಮದಲ್ಲಿರುವ ಗ್ರಾಮ ಪಂಚಾಯಿತಿಯವರಿಗೆ ಯಾರು ಅರ್ಹರಿದ್ದಾರೆ, ಯಾರು ಅರ್ಹರಿಲ್ಲ ಎನ್ನುವ ಸಂಪೂರ್ಣ ಮಾಹಿತಿ ಇರುತ್ತದೆ. ಕಂದಾಯ ಇಲಾಖೆಯವರು ವರಮಾನ ಬರೆಯುತ್ತಾರೆ. ಪಂಚಾಯತ್ ರಾಜ್ಯ ವಿಧೇಯಕ ಪ್ರಕಾರ ಪಡಿತರ ಚೀಟಿಗಳ ವಿತರಣೆ ಮಾಡುವ ಅಧಿಕಾರವಿರುವುದು ಗ್ರಾಮ ಪಂಚಾಯಿತಿಗಳಿಗೆ. ಆ ಅಧಿಕಾರವನ್ನು ತೆಗೆದು ಕಂದಾಯ ಇಲಾಖೆಗೆ ಕೊಟ್ಟಿದ್ದೀರಿ. ಇನ್ನು ಹೊಸ ಕಾರ್ಡ್‌ಗಳಿಗಾಗಿ ಅರ್ಜಿ ಸಲ್ಲಿಸುವ ವಿಚಾರ, ಕಾರ್ಡ್‌ಗಳ ಬದಲಾವಣೆ ಅಂದರೆ ಮನೆಯಿಂದ ಮನೆಗೆ ಬದಲಾವಣೆಯಾದಾಗ ಮೊದಲನೆಯ ಮನೆಯ ವಿಳಾಸ delete ಆಗಬೇಕು, ಹೊಸ ಮನೆಯ ವಿಳಾಸ ಸೇರ್ಪಡೆಯಾಗಬೇಕು. ಇನ್ನೊಂದು ಎಪಿಎಲ್ ನಿಂದ ಬಿಪಿಎಲ್ ಗೆ ಹೋಗಬೇಕು. ಎಪಿಎಲ್ ನಲ್ಲಿ ಕಾರ್ಡ್ ಪಡೆಯಲು ಅರ್ಹರಿಲ್ಲದಿದ್ದರೆ ಅವರು ಎಪಿಎಲ್ ಗೆ ಬರಬೇಕು. ಈ ವ್ಯವಸ್ಥೆಗೆ ತಾವು ಉತ್ತರ ಕೊಡಿ.

**ಶ್ರೀ ದಯಾನಂದ:–** ಮಾನ್ಯ ಸಭಾಪತಿಗಳೇ, ಬಹಳ ಗಂಭೀರವಾದ ವಿಷಯದ ಬಗ್ಗೆ ಬಹಳ ಗಂಭೀರವಾಗಿ ಚರ್ಚೆ ನಡೆಯುತ್ತಿದೆ. ನನಗಂತೂ ಬಹಳ ಸಂತೋಷವಾಗಿದೆ. ಈ ಚರ್ಚೆಯನ್ನು ಟಿ.ವಿ.ಯಲ್ಲಿ ನೋಡಿ ನಾನು ಭಾಗವಹಿಸಬೇಕೆಂದು ಒಳಗೆ ಓಡಿ ಬಂದೆ. ಆನ್‌ಲೈನ್‌ನಲ್ಲಿ ಮಾಡುತ್ತಿರುವುದು ಸಂತೋಷ. ಎಲ್ಲ ಮಾಹಿತಿ ಆನ್‌ಲೈನ್‌ನಲ್ಲಿ ಬರುವುದರಿಂದ ಕುಳಿತಲ್ಲೇ

ಕಂಪ್ಯೂಟರ್‌ನಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ, ಸಂಬಂಧಪಟ್ಟ ಮಂತ್ರಿಗಳಿಗೆ ಮಾಹಿತಿ ಸಿಗುವುದು. ದಿನದಿಂದ ದಿನಕ್ಕೆ ಪೇಪರ್ ಇಲ್ಲದ ಕಚೇರಿ ಮಾಡಬೇಕು ಮತ್ತು ಆನ್‌ಲೈನ್ ಮಾಡಬೇಕು ಎನ್ನುವ ವಿಚಾರದಲ್ಲಿ ನಮ್ಮ ಸ್ವಾಗತವಿದೆ. ಆದರೆ ಆನ್‌ಲೈನ್ ಹೇಗೆ ಆಗಬೇಕು ಎನ್ನುವುದನ್ನು ವಿಧಾನಸೌಧದಲ್ಲಿ ಕುಳಿತಿರುವಂತಹ ಅಧಿಕಾರಿಗಳು ಅರ್ಥಮಾಡಿಕೊಳ್ಳಬೇಕು. ಏಕೆಂದರೆ, ಈ ಅರ್ಜಿಗಳನ್ನು ಬರಿ ಆನ್‌ಲೈನ್‌ನಲ್ಲಿ ಮಾತ್ರ ಭರ್ತಿಬೇಕು, ಲಿಖಿತ ಅರ್ಜಿಗಳನ್ನು ತೆಗೆದುಕೊಳ್ಳಬಾರದು ಎಂದು ಆದೇಶ ಮಾಡಿದ್ದಾರೆ. ಆನ್‌ಲೈನ್‌ನಲ್ಲಿ ಮಾಡಲು ಹೋದರೆ ನಿಮ್ಮ ಕಂಪ್ಯೂಟರ್‌ಗಳು ವರ್ಕ್ ಆಗುತ್ತಿಲ್ಲ, ಗ್ರಾಮೀಣ ಪ್ರದೇಶದಲ್ಲಿ ನೆಟ್‌ವರ್ಕ್ ಇಲ್ಲ. ಕೂಲಿ ಮಾಡುವವನು ಪ್ರತಿದಿನ ನಿಮ್ಮ ಕಚೇರಿಗೆ ಹೋಗುತ್ತಾನೆ, ಕಚೇರಿಯಲ್ಲಿರುವವನು ಸಿಸ್ಟಮ್ ವರ್ಕ್ ಆಗುತ್ತಿಲ್ಲ ಎಂದು ಹೇಳುತ್ತಾನೆ. ಎರಡನೆ ದಿನ ಹೋಗುತ್ತಾನೆ ಆಗ ಕರೆಂಟ್ ಇಲ್ಲ ಎಂದು ಹೇಳುತ್ತಾರೆ. ಮೂರನೇ ದಿನ ಹೋಗುತ್ತಾನೆ ಸಿಸ್ಟಮ್ ಆಪರೇಟರ್ ಬಂದಿಲ್ಲ ಎಂದು ಹೇಳುತ್ತಾರೆ. ಅವನ ಮೂರು ದಿನದ ಕೂಲಿ ಹೋಯಿತು. ಗ್ರಾಮೀಣ ಪ್ರದೇಶದಲ್ಲಿ ದಿನಕ್ಕೆ ಎರಡು ಗಂಟೆಗಳ ಕಾಲ ಮಾತ್ರ ಕರೆಂಟ್ ಇರುತ್ತದೆ. ಆದ್ದರಿಂದ ನನ್ನ ಸಲಹೆ ಏನೆಂದರೆ, ಆನ್‌ಲೈನ್‌ಗೆ ಇದನ್ನು ಹೇಗೆ upload ಮಾಡಬೇಕು ಎಂದರೆ, ಇಲ್ಲಿಯವರೆಗೆ ಹೇಗೆ ಅರ್ಜಿಗಳನ್ನು ತೆಗೆದುಕೊಳ್ಳಲಾಗುತ್ತಿತ್ತು ಅದೇ ರೀತಿ ನೀವು ಅರ್ಜಿಗಳನ್ನು ತೆಗೆದುಕೊಳ್ಳಿ, ಅರ್ಜಿ ತೆಗೆದುಕೊಂಡು ಸಂಬಂಧಪಟ್ಟ ಕಛೇರಿಗೆ ಕಳುಹಿಸಿ, ನಿಮ್ಮ ಡಾಟಾಗೆ, ನಿಮ್ಮ ಅನುಕೂಲಕ್ಕೆ ಬೇಕಾದರೆ ನೀವು ಆನ್‌ಲೈನ್ ಮಾಡಿಕೊಳ್ಳಿ. ಲಿಖಿತವಾದ ಅರ್ಜಿಯನ್ನೇ ಪಡೆಯಬಾರದು ಎನ್ನುವ ಕಾನೂನು ಇದೆ. ದಯಮಾಡಿ ಈ ತಕ್ಷಣ ನಿಮ್ಮ ಅಧಿಕಾರಿಗಳಿಗೆ ನೀವು ಸೂಚನೆ ಕೊಟ್ಟು ಲಿಖಿತ ಅರ್ಜಿಗಳನ್ನು ತೆಗೆದುಕೊಂಡು ಅದಕ್ಕೆ acknowledgement ಕೊಡಲು ಹೇಳಿ. ಕನಿಷ್ಠ ಅವತ್ತು ಬಂದಿರುವ ಆ ವ್ಯಕ್ತಿಯ ಕೆಲಸವಾದರು ಮುಗಿಯಲಿ. ಮತ್ತೆ ಎರಡನೇ ದಿನ ಏಕೆ ಅವನು ಬರಬೇಕು? ಇಷ್ಟೇ ನನ್ನ ಒತ್ತಾಯ. ದಯಮಾಡಿ ಮಂತ್ರಿಗಳು ಈ ಬಗ್ಗೆ ಸೂಚನೆಯನ್ನು ಕೊಡಬೇಕು.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಗಳೇ, ಹಿಂದೆ ನಾನು ಒಮ್ಮೆ ಈ ವಿಷಯದ ಬಗ್ಗೆ ಪ್ರಶ್ನೆಯನ್ನು ಕೇಳಿದೆ, ಆಗ ಉತ್ತರ ಕೊಡುವ ಸಮಯದಲ್ಲಿ ರಾಜ್ಯದಲ್ಲಿ 1.22 ಲಕ್ಷ ಕುಟುಂಬಗಳು ಇವೆ, ಕೇಂದ್ರ ಸರ್ಕಾರದ ಅಂಕಿ–ಅಂಶಗಳ ಪ್ರಕಾರ 32% ಬಿಪಿಎಲ್ ಕಾರ್ಡ್ ಹೊಂದಿದವರು ನಮ್ಮ ರಾಜ್ಯದಲ್ಲಿ ಇರಬೇಕು. ಈಗಾಗಲೇ 63% ಜನರಿಗೆ ನಾವು ಬಿಪಿಎಲ್ ಕಾರ್ಡ್ ಕೊಟ್ಟಿದ್ದೇವೆ. ಇನ್ನು 44 ಲಕ್ಷ ಕಾರ್ಡ್ ಕೊಡುವುದು ಬಾಕಿ ಇದೆ ಎಂದು ಹೇಳಿದರು. ಇವತ್ತು ಮಾಹಿತಿ ಬಂದಿದೆ ಇನ್ನು 7 ಲಕ್ಷ ಜನರು ಅರ್ಜಿ ಹಾಕಿಕೊಂಡಿದ್ದಾರೆ ಎಂದು. ಪಡಿತರ ಕಾರ್ಡ್‌ಗಳನ್ನು ಯಾರಿಗೆ ಕೊಡಬೇಕು? ಅದಕ್ಕೆ ಏನು ಮಾನದಂಡ? ಮಾನ್ಯ ವಿರೋಧ ಪಕ್ಷದ ನಾಯಕಿಯವರು ಹೇಳಿದ ಹಾಗೆ ಇದು ಇವತ್ತು ನಡೆಯುತ್ತಿರುವುದಲ್ಲ, ಬಹಳ ಹಿಂದಿನಿಂದ ನಡೆದುಕೊಂಡು ಬರುತ್ತಿದೆ. ಕರ್ನಾಟಕ ರಾಜ್ಯದಲ್ಲಿ 30% ಅಲ್ಲದೆ ಉಳಿದ 33% ಜನರಿಗೆ ರಾಜ್ಯ ಸರ್ಕಾರ ಮಾರುಕಟ್ಟೆಯಿಂದ ಖರೀದಿ ಮಾಡಿ ಆಹಾರಧಾನ್ಯಗಳನ್ನು ಕೊಡುತ್ತಿದೆ ಎನ್ನುವ ವಿಷಯವನ್ನು ಅಂದಿನ ಮಂತ್ರಿಗಳು ಉದಾಹರಣೆ ಸಹಿತ ಹೇಳಿದರು. ಇದರ ಅರ್ಥ ಎಂದರೆ, ನಮ್ಮ ರಾಜ್ಯದಲ್ಲಿ ಇನ್ನು ಬೇಕಾದ ಒಟ್ಟು database create ಮಾಡಿರುವುದಿಲ್ಲ. ಈಗ ಗ್ರಾಮ ಪಂಚಾಯಿತಿಗೆ ಕೊಡಬೇಕೋ ಕಂದಾಯ ಇಲಾಖೆಗೆ ಕೊಡಬೇಕೋ, ತಹಸೀಲ್ದಾರ್ ಕಛೇರಿಗೆ ಕೊಡಬೇಕೋ ಎಂದು ಚರ್ಚೆ ಮಾಡುತ್ತಿದ್ದೇವೆ. ಇದರ ಒಟ್ಟು ಫಲಿತಾಂಶ ಏನೆಂದರೆ, ಎಲ್ಲೋ ದೊಡ್ಡಮಟ್ಟದಲ್ಲಿ ಅವ್ಯವಹಾರ ನಡೆಯುತ್ತಿದೆ. ಕೇಂದ್ರ ಸರ್ಕಾರದ ಅಂಕಿ–ಸಂಖ್ಯೆ ಪ್ರಕಾರ ರಾಜ್ಯದಲ್ಲಿ ಶೇಕಡಾ 30 ಅಥವಾ 32 ರಷ್ಟು ಬಿಪಿಎಲ್ ಕಾರ್ಡ್‌ದಾರರು ಇರಬೇಕಾಗಿತ್ತು. ಆದರೆ, ಈಗಾಗಲೇ 63% ಬಿಪಿಎಲ್ ಕಾರ್ಡ್‌ಗಳನ್ನು ಕೊಡಲಾಗಿದೆ. ಆದರೂ ಇನ್ನು ನಮಗೆ ಬಿಪಿಎಲ್ ಕಾರ್ಡ್‌ಗಳು ಸಿಕ್ಕಿಲ್ಲ, ಬಿಪಿಎಲ್ ಕಾರ್ಡ್ ಹಂಚಿಕೆಯಲ್ಲಿ ವಂಚನೆಯಾಗಿದೆ ಎನ್ನುವುದಾದ್ದರೆ ಇಡೀ ಇಲಾಖೆಯ ವ್ಯವಸ್ಥೆಯನ್ನೇ ಪುನರ್ ವಿಮರ್ಶೆ ಮಾಡುವ ಸಮಯ ಬಂದಿದೆ. ಇದು ಆಗುತ್ತಿರುವ ಸಮಯದಲ್ಲಿ ಸ್ವಲ್ಪ ಗೊಂದಲವಾಗಿ ತಡವಾಗಿರಬಹುದು. ಗ್ರಾಮಾಂತರ ಪ್ರದೇಶದ ಜನರಿಗೆ

ಕಂಪ್ಯೂಟರ್ ಬಗ್ಗೆ ಗೊತ್ತಿಲ್ಲದೆ ಇರಬಹುದು, ಆದರೂ ಕಂಪ್ಯೂಟರ್‌ನ್ನು ಏಕೆ ಉಪಯೋಗ ಮಾಡಬೇಕು ಎಂದರೆ, ಒಂದು database create ಮಾಡಬೇಕಾದರೆ, ನಕಲಿ ಮಾಡಿ ಪಡಿತರ ಚೀಟಿಗಳನ್ನು ತಯಾರು ಮಾಡುವುದನ್ನು ತಡೆಯಬೇಕಾದರೆ ಕಂಪ್ಯೂಟರ್ ಅವಶ್ಯಕತೆ ಇದೆ. ಇಲ್ಲ ಮಾಹಿತಿಗಳನ್ನು ಕಂಪ್ಯೂಟರ್‌ನಲ್ಲಿ ದಾಖಲಿಸುವ ಅವಶ್ಯಕತೆ ಇದೆ. ಹೀಗಾಗಿ ನಾನು ಮಂತ್ರಿಗಳಲ್ಲಿ ಕೇಳಿಕೊಳ್ಳುವುದು ಇಷ್ಟೆ, ಯಾರು ತಪ್ಪು ಮಾಡಿದರು, ಯಾವಾಗ ತಪ್ಪು ಆಯಿತು ಎನ್ನುವುದನ್ನು ಹೇಳುವುದಕ್ಕಿಂತ ಇವತ್ತು ಯಾರು ಅರ್ಹರಿದ್ದಾರೆ ಅವರಿಗೆ ಬಿಪಿಎಲ್ ಕಾರ್ಡ್ ಕೊಡುವ ಅವಶ್ಯಕತೆ ಇದೆ. ಯಾರ್‍ಯಾರು ಬಿಪಿಎಲ್ ಕಾರ್ಡ್ ತೆಗೆದುಕೊಂಡಿದ್ದಾರೆ ಗ್ರಾಮ ಪಂಚಾಯಿತಿಯಲ್ಲಿ ಅವರ ಹೆಸರನ್ನು ಪಟ್ಟಿಯಲ್ಲಿ ಹಾಕಿ. ಕೆಲವರ ಮನೆಯಲ್ಲಿ ಬೈಕ್, ಕಾರು ಎಲ್ಲ ಇರುತ್ತದೆ ಆದರೂ ಅವರಿಗೆ ಬಿಪಿಎಲ್ ಕಾರ್ಡ್ ಬೇಕು, ಇನ್ನೊಂದು ವಿಚಾರ ಎಂದರೆ, ಈ ಬಿಪಿಎಲ್ ಕಾರ್ಡ್ ಜೊತೆ ತುಂಬಾ ಸೌಲಭ್ಯಗಳನ್ನು ಜೋಡಿಸಿಕೊಂಡಿದ್ದೇವೆ. ಇದರಿಂದ ಈ ಬಿಪಿಎಲ್ ಕಾರ್ಡಿನ ದುರುಪಯೋಗವಾಗುತ್ತದೆ. ಬಿಪಿಎಲ್ ಕಾರ್ಡ್ basically ಪಡಿತರ ಚೀಟಿ ಮಾತ್ರ ಆಗಬೇಕು. ಬೇರೆ ಎಲ್ಲಾ ಸೌಲಭ್ಯಗಳನ್ನು ಕೊಡಬೇಕಾದರೆ ಅದಕ್ಕೆ ಬೇರೆ ಏನು ಮಾನದಂಡವಿದೆ ಅದನ್ನು ಮಾಡಿಕೊಳ್ಳಬೇಕು. ಇವತ್ತು ಬಿಪಿಎಲ್ ಕಾರ್ಡ್ ಇಟ್ಟುಕೊಂಡು ಎಲ್ಲವನ್ನು ತೆಗೆದುಕೊಳ್ಳುತ್ತಾರೆ. ಒಂದೊಂದು ಕುಟುಂಬಗಳಲ್ಲಿ 4-8 ಬಿಪಿಎಲ್ ಕಾರ್ಡ್‌ಗಳನ್ನು ಕೊಟ್ಟಿರುವುದನ್ನು ನಮ್ಮ ಇಲಾಖೆಯ ಅಧಿಕಾರಿಗಳು ಪತ್ತೆ ಹಚ್ಚಿದ್ದಾರೆ. ಹೀಗಾಗಿ ಒಂದು database create ಮಾಡಿಕೊಂಡು ಅರ್ಹರಿಗೆ ಮಾತ್ರ ಬಿಪಿಎಲ್ ಕಾರ್ಡ್‌ಗಳನ್ನು ಕೊಡುವ ಹಾಗೆ ಮಾಡದೆ ಹಾಗೆ ಮಾಡದೆ ಇದ್ದರೆ, ಈ ಅವ್ಯವಸ್ಥೆ ಮುಂದುವರೆಯುತ್ತಿದ್ದಾರೆ ರಾಜ್ಯದ ಬೊಕ್ಕಸಕ್ಕೆ ದೊಡ್ಡಮಟ್ಟದ ಹಾನಿಯುಂಟಾಗುತ್ತದೆ. ಈ ಅವ್ಯವಹಾರ ಗೊತ್ತಾದ ಮೇಲೆ ಈ ಸಂಗತಿಗಳನ್ನು ಸರಿಪಡಿಸುವ ಅವಶ್ಯಕತೆ ಇದೆ. ಇಲ್ಲದಿದ್ದರೆ ಪ್ರತಿ ಸಾರಿ ಪ್ರಶ್ನೆ ಕೇಳಿದಾಗ ಬೇರೆ-ಬೇರೆ ಅಂಕಿ-ಅಂಶಗಳೆ ಬರುತ್ತವೆ. ಧನ್ಯವಾದಗಳು.

**ಶ್ರೀ ಆರ್.ವಿ. ವೆಂಕಟೇಶ್:–** ಮಾನ್ಯ ಸಭಾಪತಿಗಳೇ, ನ್ಯಾಯಬೆಲೆ ಅಂಗಡಿಗಳನ್ನು ಮಂಜೂರು ಮಾಡುವಾಗ ರಾಜಕೀಯ ಒತ್ತಡವನ್ನು ಅಧಿಕಾರಿಗಳ ಮೇಲೆ ತರಬಾರದು. ಅವ್ಯವಹಾರಕ್ಕೆ ಇದು ಮುಖ್ಯವಾದ ಕಾರಣ. ರಾಜಕೀಯ ಒತ್ತಡ ತಂದು ಯಾವ ಪಕ್ಷ ಆಡಳಿತದಲ್ಲಿರುತ್ತದೆ ಆ ಪಕ್ಷದ ಸದಸ್ಯರಿಗೆ ಕೊಡುವುದರಿಂದ ಸ್ಥಳೀಯರಿಗೆ ನ್ಯಾಯ ಸಿಗುವುದಿಲ್ಲ. ಇದರಿಂದಲೇ duplication ಆಗುವುದು, ಅಧಿಕಾರಿಗಳ ಮೇಲೆ ಇವರು ತಮ್ಮ ಪ್ರಭಾವವನ್ನು ತೋರಿಸುವುದು ಆಗುತ್ತದೆ. ಆದ್ದರಿಂದ ನ್ಯಾಯಬೆಲೆ ಅಂಗಡಿಯನ್ನು ಮಂಜೂರು ಮಾಡುವಾಗ ಯಾವುದೇ ರಾಜಕೀಯ ಒತ್ತಡವನ್ನು ಅಧಿಕಾರಿಗಳ ಮೇಲೆ ತರಬಾರದು.

**ಶ್ರೀ ಎಸ್.ಎ. ರವೀಂದ್ರನಾಥ್ (ತೋಟಗಾರಿಕಾ ಸಚಿವರು):–** ನೀವು ಅದೇ ರೀತಿ ಮಾಡಿರುವುದು.

**ಶ್ರೀ ಆರ್.ವಿ. ವೆಂಕಟೇಶ್:–** ಅದು ಆಗಬಾರದು ಎಂದು ನಾನು ಹೇಳುತ್ತಿದ್ದೇನೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** 6–7 ವರ್ಷಗಳಿಂದ ಯಾರಿಗೂ ಕೊಟ್ಟಿರುವುದಿಲ್ಲ, ಅದು ಬೇರೆ ಪ್ರಶ್ನೆ. ಆ ರೀತಿಯಾಗಬಾರದು ಎನ್ನುವುದು ಮಾನ್ಯ ಸದಸ್ಯರ ಉದ್ದೇಶ. ಅದಕ್ಕೆ ಮಂತ್ರಿಗಳು ಸರಿ ಎಂದು ಹೇಳಿದರೆ ಆಯಿತು.

**ಶ್ರೀ ಎಸ್.ಎ. ರವೀಂದ್ರನಾಥ್:–** ಇವರು ಮಾಡುವುದೆಲ್ಲವನ್ನು ಮಾಡಿಬಿಟ್ಟಿದ್ದಾರೆ. ಈಗ ನೀವು ಮಾಡಬೇಡಿ ಎಂದು ಹೇಳುತ್ತಿದ್ದಾರೆ.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು):–** ನಾವೇನು ಈ ರೀತಿ ಮಾಡಿ ಗೊಂದಲವನ್ನು ಉಂಟು ಮಾಡಿರಲಿಲ್ಲ. ಎಲ್ಲರೂ ಆರಾಮವಾಗಿ ಇದ್ದರು. ಮೊದಲು ಮಾನ್ಯ ಶ್ರೀಮತಿ ಇಂದಿರಾ ಗಾಂಧಿಯವರ ಫೋಟೋವನ್ನು ಹಾಕಿ ಮಾಡಿರುವುದನ್ನು ಬದಲಾಯಿಸಿ, ಮಹಾತ್ಮ ಗಾಂಧಿಜೀಯವರ ಫೋಟೋ ಹಾಕಲು ಹೋಗಿ, ನಂತರ ಇವರು ಬಂದು ಚುನಾವಣೆ ಸಂದರ್ಭದಲ್ಲಿ ಇನ್ನಷ್ಟು ಪಡಿತರ ಚೀಟಿಗಳನ್ನು ಸೇರಿಸಿದರು.

ಇಷ್ಟೆಲ್ಲಾ ಮಾಡಿ ಈಗ ಜಾಸ್ತಿಯಾಗಿವೆ ಎಂದು ಹೇಳುತ್ತಾರೆ. ನನ್ನ ಮನವಿ ಏನು ಎಂದರೆ, ಕೇಂದ್ರ ಸರ್ಕಾರವೇ ಇರಬಹುದು ರಾಜ್ಯ ಸರ್ಕಾರವೇ ಇರಬಹುದು, ಹಾಕಿರುವ ಷರತ್ತುಗಳಲ್ಲಿ ಕೆಲವನ್ನು relax ಮಾಡಿ. ಟಿವಿ ಇದ್ದವರಿಗೆ, ಮೊಬೈಲ್ ಇದ್ದವರಿಗೆ, ಸ್ಕೂಟರ್ ಇದ್ದವರಿಗೆ ಕೊಡಬಾರದು ಎಂದು ಹೇಳಿದ್ದಾರೆ. ಆದರೆ, ಸಾಮಾನ್ಯ ಜನರಿಗೂ ಕೆಲವೊಂದು ಸೌಲಭ್ಯಗಳು ಬೇಕೇಬೇಕು. ಸಾಮಾನ್ಯ ಕೂಲಿ ಮಾಡುವವರು ಮೊಬೈಲ್‌ಗಳನ್ನು ಇಟ್ಟುಕೊಂಡಿರುತ್ತಾರೆ. ನಾಣಯ್ಯನವರ ಊರಿನಲ್ಲಿ, ನಮ್ಮ ಊರಲ್ಲಿ ಕಾಫಿ ತೋಟದಲ್ಲಿ ಕೆಲಸ ಮಾಡುವವರು ತಮ್ಮ ಮನೆಯಲ್ಲಿ ಟಿವಿ ಇಟ್ಟುಕೊಂಡಿದ್ದಾರೆ. ಸನ್ಮಾನ್ಯ ಸಭಾಪತಿಯವರೇ, ಅವರುಗಳು ಇನ್ನೂ ಕೂಲಿ ಕಾರ್ಮಿಕ ವರ್ಗದವರಾಗಿಯೇ ಇದ್ದಾರೆ. ಅವರ ಹತ್ತಿರ ಮೊಬೈಲ್ ಇದೆ. ಕಾಫಿ ತೋಟದಲ್ಲಿ ಕೆಲಸ ಮಾಡುವಂತಹ ಒಬ್ಬ ಮೇಸ್ತ್ರೀ ಸ್ಕೂಟರ್‌ನಲ್ಲಿ ಓಡಾಡುತ್ತಾನೆ. ಇದರ ಅರ್ಥ ಆತ ಬಡವನಲ್ಲ ಎಂದೇ? ಕಾಫಿ ತೋಟದಲ್ಲಿ ಕೆಲಸ ಮಾಡುವವರಿಗೆಲ್ಲ ಕೂಲಿನೇ ಸಿಗುವುದು. ಆದ್ದರಿಂದ ಕೆಲವೊಂದು ಷರತ್ತುಗಳನ್ನು ಸಡಿಲಿಸಬೇಕೆನ್ನುವುದು ನನ್ನ ಒತ್ತಾಯವಾಗಿದೆ. ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳಲ್ಲಿ ಇಷ್ಟೇ ಪ್ರಮಾಣದಲ್ಲಿ ಪಡಿತರ ಚೀಟಿಯನ್ನು ನೀಡಬೇಕೆನ್ನುವ ನಿಯಮವಿದ್ದರೂ ಸಹ ಪಡಿತರ ಚೀಟಿಗಳ ಸಂಖ್ಯೆ ಹೆಚ್ಚಾಗಿದೆ ಎಂದು ಮಾನ್ಯ ಸದಸ್ಯರಾದ ಗಣೇಶ್ ಕಾರ್ಣಿಕ್‌ರವರು ಹೇಳಿದರು. ದಿನದಿಂದ ದಿನಕ್ಕೆ ಜನಸಂಖ್ಯೆ ಮತ್ತು ಬಡವರ ಸಂಖ್ಯೆ ಎರಡೂ ಹೆಚ್ಚಾಗಿದೆ. ಈ ಸರ್ಕಾರಕ್ಕೆ ಬಡವರ ಬಗ್ಗೆ ಕಳಕಳಿ ಇದ್ದರೆ, ಬಡವರ ಹಸಿವಿನ ಅರ್ಥ ಗೊತ್ತಿದ್ದರೆ, ಪಡಿತರ ಚೀಟಿಗಳ ಸಂಖ್ಯೆ ಹೆಚ್ಚಾದರೂ ಸಹ ಬಡವರಿಗೆ ಪಡಿತರ ಚೀಟಿಗಳನ್ನು ವಿತರಣೆ ಮಾಡಲೇಬೇಕು. ಎಲ್ಲಿ ವಂಚನೆ ನಡೆದಿದೆ ಎಂದು ಕಂಡು ಬರುತ್ತದೆ ಅಂತಹ ಕಾರ್ಡುಗಳನ್ನು ಕಡಿತಗೊಳಿಸಬಹುದು. ಆದರೆ, ವಿನಾ ಕಾರಣ ಇವರು ನಮ್ಮ ಪಕ್ಷಕ್ಕೆ ಸೇರಿದವರು, ಅವರಿಗೆ ಮಾತ್ರ ಕೊಡು. ಇವರು ಈ ಪಕ್ಷಕ್ಕೆ ಸೇರದವರು ಅವರ ಮನೆಯಲ್ಲಿ ಟಿ.ವಿ. ಇದೆ ಎಂದು ರಿಪೋರ್ಟ್ ಕೊಡಿ ಎಂದು ಪಡಿತರ ಚೀಟಿಯನ್ನು ಕಡಿತಗೊಳಿಸುವಂತಹ ಕೆಲಸ ಆಗಬಾರದು. ಬಡವರು ಎಂದರೆ ಎಲ್ಲರೂ ಒಂದೇ. ಅವರ

ಪಕ್ಷದಲ್ಲಿದ್ದರೂ ಒಂದೇ, ನಮ್ಮ ಪಕ್ಷದಲ್ಲಿ ಇದ್ದರೂ ಬಡವರು ಬಡವರೇ. ಆದ್ದರಿಂದ ಕೆಲವೊಂದು ಷರತ್ತುಗಳನ್ನು ಸಡಿಲಗೊಳಿಸಬೇಕೆನ್ನುವುದು ನನ್ನ ಕಳಕಳಿಯ ಮನವಿಯಾಗಿದೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಬಹಳ ಗಂಭೀರವಾಗಿರುವಂತಹ ವಿಚಾರಗಳಾದ, ಪಡಿತರ ಚೀಟಿಯ ವಿತರಣೆಯ ಬಗ್ಗೆ ಮತ್ತು ಆನ್‌ಲೈನ್ ಮೂಲಕ ಅರ್ಜಿಯನ್ನು ಸ್ವೀಕರಿಸುತ್ತಿರುವ ಬಗ್ಗೆ ಮಾನ್ಯ ಸದಸ್ಯರು ಕೆಲವೊಂದು ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ನಮೆಲ್ಲರಿಗೂ ತಿಳಿದಿರುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮೊದಲಿನಿಂದಲೂ ಬಡವರ ಪರವಾಗಿ ತೆಗೆದುಕೊಂಡಿರುವಂತಹ ಅತ್ಯುತ್ತಮವಾಗಿರುವಂತಹ ಯೋಜನೆಗಳಲ್ಲಿ ಇದೊಂದು. ಬಡವರಿಗೆ ಪಡಿತರ ವ್ಯವಸ್ಥೆಯಲ್ಲಿ ಅಕ್ಕಿ, ಗೋಧಿ, ಎಣ್ಣೆ, ಸಕ್ಕರೆ, ಬಟ್ಟೆ ಮುಂತಾದ ದಿನನಿತ್ಯದ ಆಹಾರಧಾನ್ಯಗಳು ಕಡಿಮೆ ದರದಲ್ಲಿ ದೊರೆಯಬೇಕೆನ್ನುವುದು ನಮ್ಮ ಉದ್ದೇಶವಾಗಿತ್ತು. ಆ ಕಾರಣದ ಹಿನ್ನೆಯಲ್ಲಿ ಪಡಿತರ ವ್ಯವಸ್ಥೆಯಲ್ಲಿ ಆಹಾರಧಾನ್ಯಗಳನ್ನು ನೀಡಲಾಗುತ್ತಿದೆ. ಕೇಂದ್ರ ಸರ್ಕಾರವೂ ಸಹ ಬಹಳ ದೊಡ್ಡ ಪ್ರಮಾಣದಲ್ಲಿ ಸಹಾಯ ಮಾಡುತ್ತಿದೆ. ರಾಜ್ಯ ಸರ್ಕಾರವೂ ಸಹ ತನ್ನದೇ ಆಗಿರುವ ರೀತಿಯಲ್ಲಿ ಈ ಯೋಜನೆಯನ್ನು ಸದುಪಯೋಗಪಡಿಸಿಕೊಳ್ಳುವ ಪ್ರಯತ್ನ ಮಾಡುತ್ತಿದೆ. ನಾನು ವಿರೋಧ ಪಕ್ಷದ ನಾಯಕಿಯವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ನಾನು ನಾಲ್ಕು ಬಾರಿ ಶಾಸಕನಾಗಿ ಆಯ್ಕೆ ಹೊಂದಿದ್ದೇನೆ. ಅವರು ಸಚಿವರಾಗಿದ್ದಾಗ ನಾನು ವಿರೋಧ ಪಕ್ಷದ ಸದಸ್ಯನಾಗಿದ್ದೆ. ಪಡಿತರ ಚೀಟಿಯ ವಿತರಣೆ ಮೊದಲಿನಿಂದಲೂ ಸಹ ಗೊಂದಲದ ಗೂಡಾಗಿರುವುದನ್ನು ನಾವು ಕಾಣುತ್ತಿದ್ದೇವೆ. ನಾನು ಆ ವಿವರಗಳಿಗೆ ಹೋಗುವುದಿಲ್ಲ. ನಾನು ಶಾಸಕನಾಗಿ ಜನರ ಜೊತೆಗೆ ಇದ್ದು, ದಿನನಿತ್ಯದ ಆಗುಹೋಗುಗಳನ್ನು ನೋಡಿದ್ದೇನೆ. ಹಿಂದೆ ಆಯಾಯ ಸಂದರ್ಭಕ್ಕೆ ಆಯಾಯ ಕಾರಣಗಳಿಗಾಗಿ ಏನೋ ಆಗಿದೆ. ಇದನ್ನು ರಾಜಕೀಯ ದೃಷ್ಟಿಕೋನದಲ್ಲಿ ನೋಡುವುದಕ್ಕೆ ಹೋಗುವುದಿಲ್ಲ. ಹಿಂದೆ ಪಡಿತರ ಚೀಟಿಗಳ ವಿತರಣೆ ವ್ಯವಸ್ಥೆ ಗೊಂದಲಗಳ ಗೂಡಾಗಿತ್ತು.

ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ, ನಾವೊಂದು ಪಾರದರ್ಶಕವಾಗಿರುವಂತಹ ಮತ್ತು ವಿಶ್ವಾಸಪೂರ್ಣವಾಗಿರುವಂತಹ ವ್ಯವಸ್ಥೆಯನ್ನು ರೂಪಿಸುವುದಕ್ಕೆ ಮುಂದಾಗಿದ್ದೇವೆ. ಬಡವರ ಹೆಸರಿನಲ್ಲಿ ಇನ್ನ್ಯಾರೋ ಲಾಭ ಪಡೆದುಕೊಳ್ಳುವಂತಹ ವ್ಯವಸ್ಥೆಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ನಾವು ನಮ್ಮ ಇಚ್ಛಾಶಕ್ತಿಯನ್ನು ಪ್ರದರ್ಶಿಸುತ್ತಿದ್ದೇವೆ. ಇದು ಮೂಲಭೂತವಾಗಿರುವಂತಹ ಸಂಗತಿಯಾಗಿದೆ. ಗ್ರಾಮೀಣ ಭಾಗದಲ್ಲಿ ಬಿ.ಪಿ.ಎಲ್ ಕಾರ್ಡುದಾರರ ಸಂಖ್ಯೆ 80 ಲಕ್ಷ ಆಗಿದೆ. ಆದರೆ, 1 ಕೋಟಿ 13 ಲಕ್ಷ ಪಡಿತರ ಕಾರ್ಡುಗಳು ವಿತರಣೆ ಆಗಿವೆ. ಒಟ್ಟಾರೆ 33 ಲಕ್ಷ ಪಡಿತರ ಚೀಟಿಗಳು ಹೆಚ್ಚುವರಿಯಾಗಿ ವಿತರಣೆ ಆಗಿವೆ. ಇವುಗಳನ್ನು ಬಡವರ ಹೆಸರಿನಲ್ಲಿ ಇನ್ನ್ಯಾರೋ ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಪಡಿತರ ಅಂಗಡಿಗಳ ಬಗ್ಗೆ ಮಾನ್ಯ ಸದಸ್ಯರು ಮಾತನಾಡಿದರು. ನಮ್ಮ ರಾಜ್ಯದಲ್ಲಿ ಸುಮಾರು 22 ಸಾವಿರಕ್ಕಿಂತ ಹೆಚ್ಚು ಪಡಿತರ ಅಂಗಡಿಗಳು ಇವೆ. ಮೊದಲು ಪಡಿತರ ಅಂಗಡಿಯವರೇ ಬಡವರ ಕಾರ್ಡುಗಳನ್ನು ಇಟ್ಟುಕೊಳ್ಳುತ್ತಿದ್ದರು. ಅವರು ಕೊಟ್ಟಷ್ಟು ಬಡವರು ತೆಗೆದುಕೊಂಡು ಹೋಗಬೇಕಾದಂತಹ ಸ್ಥಿತಿ ಇತ್ತು. ಇದನ್ನು ತಡೆಗಟ್ಟುವ ಸಲುವಾಗಿ ಯಾರ್‍ಯಾರ ಕಾರ್ಡುಗಳು ಇವೆ ಅವರ ಹೆಸರುಗಳ ಪಟ್ಟಿಯನ್ನು ಅಂಗಡಿಯ ಮುಂದೆ ಹಾಕಿಸಿದ್ದೆವು. ನಾನು ಈ ಬಗ್ಗೆ ಹಿಂದಿನ ವಿವರಗಳಿಗೆ ಹೋಗುವುದಿಲ್ಲ. ಈ ವ್ಯವಸ್ಥೆಯಲ್ಲಿ ಮತ್ತು ನೆಮ್ಮದಿ ಯೋಜನೆಯಲ್ಲಿ ಏನೇನು ದೋಷಗಳು ಕಂಡು ಬಂದಿತ್ತು ಅವೆಲ್ಲವುಗಳನ್ನು ಸರಿಪಡಿಸುವುದಕ್ಕೆ ಅತ್ಯಂತ ಪಾರದರ್ಶಕವಾಗಿರುವಂತಹ ಮತ್ತು ವಿಶ್ವಾಸಪೂರ್ವಕವಾಗಿರುವಂತಹ ಒಂದು ವ್ಯವಸ್ಥೆಯನ್ನು ರೂಪಿಸುವುದಕ್ಕೆ ಮುಂದಾಗಿದ್ದೇವೆ. ಈ ಸಂದರ್ಭದಲ್ಲಿ ಚಿಕ್ಕಪುಟ್ಟ ವಿಳಂಬಗಳು, ಲೋಪದೋಷಗಳು ಮತ್ತು ತೊಂದರೆ ತೊಡಕುಗಳು ಆಗಿವೆ. ಆಗಿಲ್ಲವೆಂದು ಹೇಳುವುದಕ್ಕೆ ನಾನು ಹೋಗುವುದಿಲ್ಲ. ಯಾವುದೇ ಅಭಿವೃದ್ಧಿ ಕೆಲಸಗಳನ್ನು ಮಾಡುವಾಗಲೂ ಸಹ ವ್ಯವಸ್ಥೆಯಲ್ಲಿ ಸಣ್ಣಪುಟ್ಟ ಬದಲಾವಣೆಗಳನ್ನು ತರುವಂತಹ ಸಂದರ್ಭದಲ್ಲಿ ಸ್ವಲ್ಪ ಮಟ್ಟಿನ ಪರಿಣಾಮವಾಗುತ್ತದೆ. ನಾನು ಏನೂ ಆಗಿಯೇ ಇಲ್ಲ, ಎಲ್ಲವೂ ಸುಗಮವಾಗಿದೆ ಎಂದು ಹೇಳುವುದಕ್ಕೆ

ಹೋಗುವುದಿಲ್ಲ. ಸಣ್ಣಪುಟ್ಟ ಪರಿಣಾಮಗಳು ಆಗುತ್ತವೆ. ಆದರೆ, ಬಡವರ ಹೆಸರಿನಲ್ಲಿ ಈ ರೀತಿ ದುರುಪಯೋಗಪಡಿಸಿಕೊಳ್ಳುವುದನ್ನು ನಮ್ಮ ಇಚ್ಛಾಶಕ್ತಿಯನ್ನು ಪ್ರದರ್ಶಿಸಿ ನಿಯಂತ್ರಿಸುವುದಕ್ಕೆ ಮುಂದಾಗಿರುವುದನ್ನು ಅವರೆಲ್ಲರೂ ಗುರುತಿಸಿದ್ದಾರೆ. ಆದರೆ, ಇಲ್ಲಿರುವಂತಹ ಪ್ರಶ್ನೆ ಏನೆಂದರೆ, ವೆರಿಫಿಕೇಶನ್ ಅನ್ನು ನ್ಯಾಯಬದ್ಧವಾಗಿ ಮಾಡಬೇಕಾಗಿದೆ. ನಮ್ಮೆಲ್ಲರಿಗೂ ತಿಳಿದಿರುವಂತೆ ಈಗ ಸುಮಾರು 22 ಲಕ್ಷ ಅರ್ಜಿಗಳು ಆನ್‌ಲೈನ್ ಮೂಲಕ ಬಂದಿವೆ. ಸುಮಾರು 22 ಲಕ್ಷ ಅರ್ಜಿಗಳು ಆನ್‌ಲೈನ್ ಮೂಲಕ ಬಂದಿವೆ ಎಂದರೆ, ನಮ್ಮ ಜನ ಆನ್‌ಲೈನ್‌ನಿಂದ ಅರ್ಜಿ ಸಲ್ಲಿಸುವುದಕ್ಕೆ ಇರುವಂತಹ ವ್ಯವಸ್ಥೆಯನ್ನು ಬಳಸಿಕೊಂಡಿದ್ದಾರೆ ಎನ್ನುವುದು ಸ್ಪಷ್ಟವಾಗುತ್ತದೆ. ಗ್ರಾಮೀಣ ಭಾಗದಲ್ಲಿ ಈಗಾಗಲೇ ಸುಮಾರು 7 ಲಕ್ಷಕ್ಕೂ ಹೆಚು ಜನರು ಅರ್ಜಿಯನ್ನು ಸಲ್ಲಿಸಿದ್ದಾರೆ. ಒಟ್ಟು 21,81,000 ಅರ್ಜಿಗಳನ್ನು ನಾವು ಸ್ವೀಕರಿಸಿದ್ದೇವೆ. ವೆರಿಫಿಕೇಶನ್‌ಗೆ ಸರ್ಕಾರ ಆದೇಶವನ್ನು ಮಾಡಿದೆ. ಈಗ ವೆರಿಫಿಕೇಶನ್ ಆಗುತ್ತಿದೆ. 'ಗ್ರಾಮೀಣ ಭಾಗದ ಜನರು ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಅವರು ಬಡವರು, ಅನಕ್ಷರಸ್ಥರು ಮತ್ತು ಅಲ್ಲಿ ಸರಿಯಾದಂತಹ ವ್ಯವಸ್ಥೆ ಇಲ್ಲ' ಎನ್ನುವಂತಹ ಮಾತುಗಳನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಗ್ರಾಮೀಣ ಭಾಗದ ಜನರು ಪಂಚಾಯಿತಿಗೆ ಅರ್ಜಿಯನ್ನು ಸಲ್ಲಿಸಬೇಕಾಗಿಲ್ಲ. ನಾವು ಅವರಿಗೆ ಆ ಜವಾಬ್ದಾರಿಯನ್ನು ಕೊಟ್ಟಿಲ್ಲ. ಪಂಚಾಯಿತಿಯಲ್ಲಿರುವಂತಹ ಕಂಪ್ಯೂಟರ್ ಮೂಲಕ ಅರ್ಜಿಯನ್ನು ಸಲ್ಲಿಸುವುದಕ್ಕೆ ನಾವು ಹೇಳಿದ್ದೇವೆ. ಅಲ್ಲಿ ಅರ್ಜಿ ಸಲ್ಲಿಸಿದರೆ ಅದು ನಮಗೇ ಬರುತ್ತದೆ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಪಡಿತರ ಚೀಟಿಗಳನ್ನು ವಿತರಣೆ ಮಾಡುವಂತಹ ಅಧಿಕಾರ ಪಂಚಾಯಿತಿಗೆ ಇದೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಸನ್ಮಾನ್ಯ ಸಭಾಪತಿಯವರೇ, ಪಡಿತರ ಚೀಟಿ ವಿತರಣೆಯಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ರಾಜ್ಯ ಸರ್ಕಾರ ಬಳಸಿಕೊಳ್ಳಬೇಕೆನ್ನುವುದು ಕೇಂದ್ರ ಸರ್ಕಾರದ ಅಪೇಕ್ಷೆಯೂ ಆಗಿದೆ. ನಾವು

ಈಗ ಬಡವರಿಗೆ ಅನುಕೂಲವಾಗಲಿ ಎನ್ನುವಂತಹ ದೃಷ್ಟಿಯಿಂದ ನಮ್ಮ ಪಂಚಾಯತ್‌ನಲ್ಲಿ ಇರುವಂತಹ ಪಿ.ಡಿ.ಓ.ಗಳಿಗೆ ಮತ್ತು ಕಾರ್ಯದರ್ಶಿಗಳಿಗೆ ಮತ್ತು ಕಂಪ್ಯೂಟರ್ ಆಪರೇಟರ್‌ಗಳಿಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಹೇಗೆ ತುಂಬಬೇಕೆನ್ನುವುದನ್ನು ತಿಳಿಸಿಕೊಟ್ಟಿದ್ದೇವೆ. ಅದು ಸರಳವಾಗಿದೆ ಅವರು ಆನ್‌ಲೈನ್ ಮೂಲಕ ತುಂಬುತ್ತಿದ್ದಾರೆ. ಇದಕ್ಕೂ ಮೊದಲು ಸಹ ಗ್ರಾಮೀಣ ಭಾಗದ ಜನರು ನಗರಗಳಿಗೆ ಹೋಗಬೇಕಾಗಿತ್ತು. ಅಲ್ಲಿ ಮಧ್ಯವರ್ತಿಗಳನ್ನು ಹುಡುಕಿಕೊಂಡು ಹೋಗಿ ಅರ್ಜಿಗಳನ್ನು ಭರ್ತಿ ಮಾಡಿಸಬೇಕಾಗಿತ್ತು. ಮೊದಲು ಎಲ್ಲಾ ಊರುಗಳಲ್ಲಿಯೂ ಅರ್ಜಿ ಬರೆದು ಕೊಡುವವರೇ ಬೇರೆಯವರು ಇರುತ್ತಿದ್ದರು. ಇವರಿಗೆ 10-20 ರೂಪಾಯಿಗಳನ್ನು ಕೊಟ್ಟು ಅರ್ಜಿಯನ್ನು ಬರೆಯಿಸಿಕೊಳ್ಳಬೇಕಾಗಿತ್ತು.

**ಶ್ರೀಮತಿ ಮೋಟಮ್ಮ:-** ಸನ್ಮಾನ್ಯ ಸಭಾಪತಿಯವರೇ, ಮೊದಲು ಪಡಿತರ ಚೀಟಿಗಳನ್ನು ರೆವಿನ್ಯೂ ಇನ್ಸ್‌ಪೆಕ್ಟರ್‌ಗಳು ಹೋಗಿ ಕೊಡುತ್ತಿದ್ದರು.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:-** ಸನ್ಮಾನ್ಯ ಸಭಾಪತಿಯವರೇ, ನಾನು ಆ ವಿಚಾರವನ್ನು ಮಾತನಾಡುತ್ತಿಲ್ಲ. ರೆವಿನ್ಯೂ ಇನ್ಸ್‌ಪೆಕ್ಟರ್‌ಗಳು ಹೋಗಿ ಏನು ಮಾಡುತ್ತಿದ್ದರು ಎನ್ನುವುದು ನಮ್ಮೆಲ್ಲರಿಗೂ ಗೊತ್ತಿದೆ. ನಾನು ಅರ್ಜಿ ಬರೆದುಕೊಡುವ ಬಗ್ಗೆ ಮಾತನಾಡುತ್ತಿದ್ದೇನೆ. ಒಂದು ತಾಲ್ಲೂಕಿಗೆ ಹೋದಾಗ ಏನೇನು ಬೇಕು, ಏನೇನು ಆಗಬೇಕು ಎನ್ನುವ ಅರ್ಜಿಗಳನ್ನು ಸಾರ್ವಜನಿಕರು ಕೊಡುತ್ತಿದ್ದರು. ಆ ಎಲ್ಲ ಅರ್ಜಿಗಳಲ್ಲಿ ಒಂದೇ ಬರವಣಿಗೆ ಇರುತ್ತಿದ್ದವು. ಅಲ್ಲಿ ಅರ್ಜಿ ಬರೆದು ಕೊಡುವವನು ಒಬ್ಬನಿರುತ್ತಾನೆ. ಅವನಿಗೆ 10-20 ರೂಪಾಯಿಗಳನ್ನು ಕೊಟ್ಟರೆ ಅವನು ಅರ್ಜಿಯನ್ನು ಬರೆದು ಕೊಡುತ್ತಾನೆ. ಮೊದಲು ನಗರ ಪ್ರದೇಶಸಕ್ಕೆ ಹೋಗಿ ಗುರುತು ಇಲ್ಲದವನಿಗೆ ಹಣವನ್ನು ಕೊಟ್ಟು, ಅವನು ಅರ್ಜಿಯನ್ನು ತುಂಬಿಸಿ ಅರ್ಜಿಯನ್ನು ಸಲ್ಲಿಸುತ್ತಿದ್ದರು ಅದರ ಲೋಪದೋಷಗಳು ಏನಾಗುತ್ತಿದ್ದವು ಎನ್ನುವುದು ಗೊತ್ತಿದೆ. ಈಗ ಪಂಚಾಯಿತಿಗೆ ಹೋಗುವುದರಿಂದ ಪಂಚಾಯಿತಿಯಲ್ಲಿ ಇರುವವರೆಲ್ಲರೂ ಈ ಜನರಿಗೆ ಗೊತ್ತಿರುತ್ತಾರೆ. ಏಕೆಂದರೆ, ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಪಂಚಾಯಿತಿ ಬಹಳ ಮುಖ್ಯವಾಗಿರುವಂತಹ ಚಿಕ್ಕ ಘಟಕವಾಗಿದೆ. ಅಲ್ಲಿ

ಒಡನಾಟಗಳು ಮತ್ತು ಗುರುತು ಪರಿಚಯಗಳು ಚೆನ್ನಾಗಿ ಇರುತ್ತವೆ. ಹಾಗಾಗಿ ವಸ್ತು ಸ್ಥಿತಿ ಏನೇನಿದೆ ಅದನ್ನು ತುಂಬುವುದಕ್ಕೆ ಅನುಕೂಲವಾಗುತ್ತದೆ ಮತ್ತು ಪಾರದರ್ಶಕವಾಗಿರುತ್ತದೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಶ್ಯಾನುಭೋಗರ ಮನೆಗೆ ಹೋಗುತ್ತೇವೆ ಎಂದು ನಮ್ಮ ಅಜ್ಜಿ ಅಮ್ಮ ಹೇಳುತ್ತಿದ್ದರು. ಹಿಂದೆ ಮೊದಲು ಹಸು, ಕರು ಹಾಕಿದರೆ ಮೊದಲ ಹಾಲನ್ನು ಶ್ಯಾನುಭೋಗರಿಗೆ ಕೊಡುತ್ತಿದ್ದರು. ಅವರ ಮನೆಯನ್ನು ಗುಡಿಸಿ ಸ್ವಚ್ಛಗೊಳಿಸುವಂತಹ ಕೆಲಸವನ್ನು ಮಾಡುತ್ತಿದ್ದರು. ಪತ್ರಗಳು ಬಂದರೆ ಅಥವಾ ಪತ್ರಗಳನ್ನು ಬರೆಯಬೇಕಾದರೆ, ಅರ್ಜಿಗಳನ್ನು ಬರೆಯಬೇಕಾದರೆ, ಎಲ್ಲವನ್ನು ಅವರೇ ಬರೆದುಕೊಡುತ್ತಿದ್ದರು. ಅರ್ಜಿ ಬರೆಯುವವರಿಗೂ ಅನುಕೂಲತೆಗಳು ಇರುತ್ತವೆ. ಅವರು ಪ್ರಾಮಾಣಿಕವಾಗಿ ಕೆಲಸ ಮಾಡಬೇಕಾಗುತ್ತದೆ. ಒಬ್ಬರ ವಿಚಾರವನ್ನು ಮತ್ತೊಬ್ಬರಿಗೆ ಹೇಳಬಾರದು.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಸನ್ಮಾನ್ಯ ಸಭಾಪತಿಯವರೇ, ಬಹಳ ಹಿಂದಿನ ಕಾಲದ ಮಾತನ್ನು ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಹೇಳುತ್ತಿದ್ದಾರೆ. ಈಗ ಆ ವ್ಯವಸ್ಥೆ ಇಲ್ಲ.

**ಶ್ರೀ ಲಕ್ಷ್ಮಣ ಸವದಿ:–** ಸನ್ಮಾನ್ಯ ಸಭಾಪತಿಯವರೇ, ನಮ್ಮ ಉತ್ತರ ಕರ್ನಾಟಕ ಭಾಗದಲ್ಲಿ ಗುಮ್ಮಜೀರಾವ್ ಕಾಪ್ಸೇ ಎನ್ನುವ ವ್ಯವಸ್ಥೆ ಚಾಲ್ತಿಯಲ್ಲಿತ್ತು. ಹಿಂದಿನ ಕಾಲದಲ್ಲಿ ಅಂದರೆ, ಬ್ರಿಟಿಷರ ಕಾಲದಲ್ಲಿ ಗುಮ್ಮಜೀರಾವ್ ಕಾಪ್ಸೇ ಎನ್ನುವಂತಹ ಒಂದು ವ್ಯವಸ್ಥೆ ಇತ್ತು. ಈ ವ್ಯವಸ್ಥೆ ಹೇಗಿತ್ತು ಎಂದರೆ, ಗುಮ್ಮಜೀರಾವ್ ಕಾಪ್ಸೇ ಎನ್ನುವುದು ಒಬ್ಬ ವ್ಯಕ್ತಿಯ ಹೆಸರು. ಬಿಜಾಪುರದಲ್ಲಿ ಹಿಂದೆ ಕಲೆಕ್ಟರ್ ಆಫೀಸ್ ಇತ್ತು. ಈಗ ಅದನ್ನು ಡಿ.ಸಿ. ಆಫೀಸ್ ಎಂದು ಕರೆಯುತ್ತೇವೆ. ಗುಮ್ಮಜೀರಾವ್ ಕಾಪ್ಸೇ ಎನ್ನುವವನು ಪೂನಾ ಜಿಲ್ಲೆಯವನು. ಬಹಳ ವಿದ್ಯಾವಂತಹನಾಗಿದ್ದ, ಅವನಿಗೆ ಕೆಲಸ ಸಿಗಲಿಲ್ಲ. ಕೆಲಸ ಸಿಗಲಿಲ್ಲ ಎನ್ನುವ ಕಾರಣಕ್ಕಾಗಿ ಅವನು ಬಿಜಾಪುರಕ್ಕೆ ವಲಸೆ ಬರುತ್ತಾನೆ. ಆ ರೀತಿ ವಲಸೆ ಬಂದವನು ಕಲೆಕ್ಟರ್ ಆಫೀಸಿನ ಮುಂದೆ ಒಂದು

ಡಬ್ಬ ಇಟ್ಟುಕೊಂಡು ಕುಳಿತುಕೊಳ್ಳುತ್ತಾನೆ. ಜನರು ಕಲೆಕ್ಟರ್ ಆಫೀಸ್‌ಗೆ ಅರ್ಜಿಯನ್ನು ಕೊಡುವುದಕ್ಕೆ ಹೋದಾಗ ಅವರನ್ನು ಕರೆದು, 'ಸಿಕ್ಕಾ (ಮೊಹರು) ಹಾಕಿಸಿಕೊಂಡಿದ್ದೀಯಾ?' ಎಂದು ಕೇಳುತ್ತಿದ್ದ. ಆ ವ್ಯಕ್ತಿ 'ಇಲ್ಲ' ಎಂದು ಹೇಳಿದರೆ, 'ಸಿಕ್ಕಾ ಹಾಕಿಸಿಕೋ' ಎಂದು ಹೇಳುತ್ತಿದ್ದ. ಅವನು 'ಗುಮ್ಮಜೀರಾವ್ ಕಾಪ್ಸೇ' ಎಂದು ಸಿಕ್ಕಾ ಹಾಕುತ್ತಿದ್ದ. ಆ ಅರ್ಜಿಯನ್ನು ತೆಗೆದುಕೊಂಡು ಹೋಗಿ ಕಲೆಕ್ಟರ್ ಆಫೀಸ್‌ಗೆ ಕೊಡುತ್ತಿದ್ದರು. ಈ ರೂಢಿ ಹೇಗೆ ಬೆಳೆಯಿತು ಎಂದರೆ, ಗುಮ್ಮಜೀರಾವ್ ಕಾಪ್ಸೇ ಸಿಕ್ಕಾ ಇಲ್ಲದಿದ್ದರೆ, ಆ ಅರ್ಜಿಗಳನ್ನು ವಾಪಸ್ಸು ಕಳುಹಿಸಿ, 'ಸಿಕ್ಕಾ ಹಾಕಿಸಿಕೊಂಡು ಬನ್ನಿ' ಎಂದು ಹೇಳುತ್ತಿದ್ದರು. ಬಹಳ ದಿನಗಳ ನಂತರ ಒಬ್ಬ ಹೊಸ ಮತ್ತು ಬುದ್ಧಿವಂತ ಕಲೆಕ್ಟರ್ ಬಂದ ಮೇಲೆ, 'ಈ ಗುಮ್ಮಜೀರಾವ್ ಕಾಪ್ಸೇ ಯಾಕೇ ಸಿಕ್ಕಾ ಹಾಕುತ್ತಾನೆ?' ಎಂದು ಅಲ್ಲಿನವರನ್ನು ಕೇಳಿದಾಗ, 'ಅದು ಮೊದಲಿನಿಂದ ಬಂದ ಪರಂಪರೆ' ಎಂದು ಹೇಳಿದರು. ಆಗ ಕಲೆಕ್ಟರ್ ಗುಮ್ಮಜೀರಾವ್ ಕಾಪ್ಸೇಯನ್ನು ಕರೆದು 'ಎಷ್ಟು ಹಣ ಗಳಿಸಿರುವೆ' ಎಂದು ಕೇಳಿದಾಗ, ಲಕ್ಷಾಂತರ ರೂಪಾಯಿ ಗಳಿಸಿರುವುದಾಗಿ ಹೇಳಿದ. 'ಯಾಕೆ ಈ ರೀತಿ ಮಾಡುತ್ತೀರುವೆ' ಎಂದು ಕೇಳಿದ್ದಕ್ಕೆ, 'ನಾನು ವಿದ್ಯಾವಂತನಾಗಿದ್ದೆ, ನೌಕರಿ ಸಿಗಲಿಲ್ಲ, ಅನಿವಾರ್ಯವಾಗಿ ಈ ಕೆಲಸವನ್ನು ಮಾಡುತ್ತಿದ್ದೇನೆ' ಎಂದು ಹೇಳುತ್ತಾನೆ. ನಮ್ಮ ಹಳ್ಳಿಗಳಲ್ಲಿ ಈಗಲೂ ಸಹ 'ಏನು ದೊಡ್ಡ ಗುಮ್ಮಜೀರಾವ್ ಕಾಪ್ಸ್ ಆಗಿಬಿಟ್ಟಿತ್ತಿಯಾ?' ಎಂದು ಕೇಳುತ್ತಾರೆ. ಹೀಗೆ ಆ ವ್ಯವಸ್ಥೆ ನಡೆದುಕೊಂಡು ಬಂದಿದೆ.

(4.30 ಗಂಟೆ)

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೇ, ಹಾಗಾಗಿ ಆನ್‌ಲೈನ್ ಮೂಲಕ ಅರ್ಜಿಯನ್ನು ತುಂಬುವುದು ಬಹಳ ಪಾರದರ್ಶಕವಾದಂಥ ವ್ಯವಸ್ಥೆ. ಇದನ್ನು ಸರಳೀಕರಣಗೊಳಿಸಲಾಗಿದೆ. ವಿಕೇಂದ್ರೀಕರಣಗೊಳಿಸಲಾಗಿದೆ. ಹಾಗಾಗಿ ತೊಂದರೆಯಾಗುವುದಿಲ್ಲ. ಮಾನ್ಯ ಕೋಟಾ ಶ್ರೀನಿವಾಸ ಪೂಜಾರಿಯವರು ಪಟ್ಟಣ ಪಂಚಾಯ್ತಿ, ನಗರಸಭೆ, ಪುರಸಭೆಗಳಲ್ಲಿ ಇದನ್ನು ಮಾಡಬಹುದು ಎನ್ನುವ ಒಂದು ಮಾತನ್ನು

ಹೇಳಿದರು. ಎಲ್ಲಾ ತಹಸೀಲ್ದಾರರ ಕಛೇರಿಗಳಲ್ಲಿ ಅದನ್ನು ತುಂಬಿ ಕೊಡುವುದಕ್ಕೆ ಈಗಲು ಅವಕಾಶಗಳಿವೆ.

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಹೆಚ್ಚು ಕಡಿಮೆ 61 ಗ್ರಾಮ ಪಂಚಾಯ್ತಿಗಳಿಗೆ ಒಂದು ತಹಸೀಲ್ದಾರರ ಕಚೇರಿ ಇರುತ್ತದೆ. ಅಲ್ಲಿ ಎಲ್ಲಿ ಹೋಗುತ್ತೀರಿ ನೀವು. ಗ್ರಾಮ ಪಂಚಾಯ್ತಿಯನ್ನು ಒಂದು ಯೂನಿಟ್ ಆಗಿ ಮಾಡಿಕೊಂಡಿರುವುದು ಸರಿಯಾಗಿದೆ. ಆದರೆ ಪಟ್ಟಣ್ಣ ಪಂಚಾಯ್ತಿಯಲ್ಲಿಯೂ ಅದಕ್ಕೆ ಅವಕಾಶ ಇರಬೇಕಲ್ಲವೇ. ಅಲ್ಲಿಯೂ ಸಹ ಸಿಬ್ಬಂದಿ ಇದ್ದಾರೆ. ಅದೇ ರೀತಿ ನಗರಸಭೆ ಮತ್ತು ಮಹಾನಗರ ಪಾಲಿಕೆಯಲ್ಲಿಯೂ ಸಹ ಸಿಬ್ಬಂದಿಗಳಿದ್ದಾರೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:-** ಮಾನ್ಯ ಸಭಾಪತಿಯವರೇ, ಪಟ್ಟಣ ಪಂಚಾಯ್ತಿ ವ್ಯವಸ್ಥೆಯನ್ನು ಸೇರಿಸುವುದರ ಬಗ್ಗೆ ನಾನು ಮಾನ್ಯ ಸಚಿವರ ಜೊತೆಗೆ ಮಾತನಾಡಿ ಅದರ ಬಗ್ಗೆ ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಸೂಚಿಸುತ್ತೇನೆ. ಈಗ ತಹಸೀಲ್ದಾರರ ಕಛೇರಿಗಳಲ್ಲಿ ಅರ್ಜಿಗಳನ್ನು ತುಂಬುವುದಕ್ಕೆ ಅವಕಾಶವಿದೆ. ಹಾಗಾಗಿ ಇಷ್ಟು ವ್ಯವಸ್ಥೆಯನ್ನು ಮಾಡಲಾಗಿದೆ. ಮತ್ತು ಅರ್ಜಿಯನ್ನು ತುಂಬುವುದಕ್ಕೆ ಕೊನೆಯ ದಿನಾಂಕ ಎಂಬುದು ಇಲ್ಲ, ನಿರಂತರವಾದ ಪ್ರಕ್ರಿಯೆ ಇದೆ. ಅದು ಒಂದು ತೊಂದರೆ ಇದೆ ಎಂದು ಹೇಳಿದರು. ಬಿಪಿಎಲ್ ಕಾರ್ಡ್ ಪಡೆಯಬೇಕಾದರೆ ಮೊಬೈಲ್ ಇರಬಾರದು ಎಂಬ ಸಣ್ಣ ಪುಟ್ಟ ಷರತ್ತುಗಳನ್ನು ಹಾಕಬಾರದು ಎಂದು ಹೇಳಿದರು. ಈಗಲೂ ಸಹ ಬಿಪಿಎಲ್ ಕಾರ್ಡ್‌ನ್ನು ಪಡೆಯಬೇಕಾದರೆ ಮೊಬೈಲ್‌ನ್ನು ಹೊಂದಿರಬಾರದು ಎಂದು ಇದೆ. ಮೊಬೈಲ್ ಇದ್ದರೆ exemption ಇದೆ. ಬಿಪಿಎಲ್‌ಗೆ ಯಾವ್ಯಾವುದು ಅರ್ಹತೆ ಇರಬೇಕೆಂಬುದರ ಬಗ್ಗೆ ಹಿಂದಿನ ಸರ್ಕಾರಗಳಲ್ಲಿಯೇ ಸಾಕಷ್ಟು ವಾದ-ವಿವಾದಗಳು ನಡೆದಿದೆ. ನಾವೆಲ್ಲಾ ಏನೇನು ಆಗಬೇಕೆಂದು ಹೇಳಿದ್ದೇವೆ. ಆದರೆ ಈಗ ನಿರ್ಣಯವಾಗಿದೆ. ಹೊಸದಾಗಿ ಏನೂ ಪರಿಷ್ಕರಣೆಯನ್ನು ನಮ್ಮ ಸರ್ಕಾರದಲ್ಲಿ ಮಾಡಿಲ್ಲ. ಹಿಂದಿನಿಂದ ಯಾವ್ಯಾವ ಅರ್ಹತೆಗಳನ್ನು ಎಪಿಎಲ್ ಮತ್ತು ಬಿಪಿಎಲ್ ಕಾರ್ಡ್‌ಗೆ ಹೊಂದಿರಬೇಕೆಂದು ಇತ್ತೂ ಅದೇ ಅರ್ಹತೆಗಳು

ಈಗಲೂ ಇದೆ. ಆದರೆ ಮೊಬೈಲ್ ಅಂತಹವುಗಳನ್ನು ಅದರಲ್ಲಿ ಸೇರಿಸಿಲ್ಲ. ಸಣ್ಣಪುಟ್ಟ ಕಾರಣಕ್ಕೆ ಅರ್ಜಿಗಳು ತಿರಸ್ಕೃತಗೊಳ್ಳದ ಹಾಗೆ ಎಚ್ಚರಿಕೆಯನ್ನು ವಹಿಸುತ್ತೇವೆ. ಇದಕ್ಕೆ ಬೇಕಾದ ಅಗತ್ಯ ಸೂಚನೆಯನ್ನು ಸಹ ನಾವು ಕೊಡಿಸುತ್ತೇವೆ. ಈಗ ಈ ಒಂದು ವ್ಯವಸ್ಥೆಯನ್ನು ಸುಧಾರಿಸುವಂಥ ಪ್ರಯತ್ನವನ್ನು ನಾವು ಮಾಡಿದ್ದೇವೆ. ಬಹಳ ದೊಡ್ಡ ಪ್ರಮಾಣದ ಹಣವನ್ನು ರಾಜ್ಯ ಸರ್ಕಾರದವರು ಇದಕ್ಕೋಸ್ಕರ ಖರ್ಚು ಮಾಡುತ್ತಿದ್ದೇವೆ ಎಂಬುದು ನಿಮಗೆ ಗೊತ್ತಿದೆ. ಅದೇ ರೀತಿ ಕೇಂದ್ರ ಸರ್ಕಾರವು ಸಹ ಹಣವನ್ನು ಖರ್ಚು ಮಾಡುತ್ತಿದೆ. ಇದರ ದುರುಪಯೋಗವಾಗಬಾರದು. ಈ ಪಡಿತರ ವ್ಯವಸ್ಥೆಯ ಲಾಭವನ್ನು ಬಡವರ ಹೆಸರಿನಲ್ಲಿ ಇನ್ಯಾರೋ ತೆಗೆದುಕೊಳ್ಳಬಾರದು. ಅದಕ್ಕೋಸ್ಕರವಾಗಿ ಮಾಡಿರುವ online system, verification system ಗೆ ಜನರು ಅತ್ಯುತ್ತಮವಾಗಿ ಸ್ಪಂದಿಸುತ್ತಿದ್ದಾರೆ. ಮಾನ್ಯ ಸದಸ್ಯರು ಹೇಳಿರುವ ಹಿನ್ನೆಲೆಯಲ್ಲಿ ಪಟ್ಟಣ ಪಂಚಾಯ್ತಿ ಮುಂತಾದವುಗಳಲ್ಲಿ ಮಾಡಬೇಕೆಂಬ ಸಲಹೆ–ಸೂಚನೆಗಳು ಏನು ಬಂದಿದೆ, ಅದರ ಬಗ್ಗೆ ಸಚಿವರ ಜೊತೆಯಲ್ಲಿ ಮಾತನಾಡಿ ನಾವು ಸರ್ಕಾರವಾಗಿ ಅದಕ್ಕೂ ಸಹ ಅನುಕೂಲ ಮಾಡಿಕೊಡುತ್ತೇವೆ. ಬಡವರಿಗೆ ಅನ್ಯಾಯವಾಗದಿರುವಂತೆ, ತೊಂದರೆಯಾಗದಿರುವಂತೆ ನೋಡಿಕೊಳ್ಳುತ್ತೇನೆ. ಮಾನ್ಯ ಸದಸ್ಯರು ದಲಿತರಿಗೆ, ಅಲ್ಪಸಂಖ್ಯಾತರಿಗೆ ಮತ್ತು ಹಿಂದುಳಿದ ವರ್ಗದವರಿಗೆ ಯಾವ ರೀತಿಯಿಂದಲೂ ತೊಂದರೆಯಾಗಬಾರದೆಂದು ಹೇಳಿದರು. ನಾನು ಇವೆಲ್ಲಾ ಶಬ್ದಗಳ ಜೊತೆಯಲ್ಲಿ ಮುಖ್ಯವಾಗಿ ಯಾವ ಬಡವರಿಗೂ ಸಹ ಅನ್ಯಾಯವಾಗದೇ ಇರುವ ಹಾಗೆ ಅವರ ಪರವಾಗಿ ನಮ್ಮ ಸರ್ಕಾರದಲ್ಲಿ ಯೋಗ್ಯವಾದ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಈ ವ್ಯವಸ್ಥೆಯನ್ನು ಸಮರ್ಪಕವಾಗಿ ಜನತೆಗೆ ತಲುಪಿಸುವುದಕ್ಕೆ ನಾವು ಬದ್ಧರಾಗಿದ್ದೇವೆ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಪಂಚಾಯ್ತಿಗೆ ಇದನ್ನು ವಹಿಸಿರುವುದನ್ನು ನಾವು ಸಹ ಸ್ವಾಗತಿಸುತ್ತೇವೆ, ಅದನ್ನು ನಾವು ವಿರೋಧಿಸುತ್ತಿಲ್ಲ. ದಯಮಾಡಿ ಮಾನ್ಯ ಸಚಿವರು ಆ ಅರ್ಥದಲ್ಲಿ ಮಾತನಾಡುವುದು ಬೇಡ.

**ಉಪ ಸಭಾಪತಿಯವರು:–** ಸನ್ಮಾನ್ಯ ಮುಖ್ಯಮಂತ್ರಿಗಳು ಈಗ ಸದನದಲ್ಲಿದ್ದಾರೆ. ಅವರಿಗೆ ಬೇರೆ ಕಾರ್ಯಕ್ರಮವಿರುವುದರಿಂದ ನಿಯಮ 330ರ ಅಡಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಉತ್ತರಿಸಬೇಕಾದ ಶ್ರೀ ಎಂ.ಸಿ. ನಾಣಯ್ಯನವರು ಕಳುಹಿಸಿರುವ ವಿಷಯವನ್ನು ಮೊದಲು ಚರ್ಚೆಗೆ ತೆಗೆದುಕೊಳ್ಳೋಣ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ನಾನು ಕಳುಹಿಸಿರುವ ವಿಷಯದ ಮೇಲೆ ಚರ್ಚೆ ಮಾಡಲು ಮಾನ್ಯ ಮುಖ್ಯಮಂತ್ರಿಯವರು ಉಪಸ್ಥಿತರಿರಬೇಕು.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೇ, ನಾನು ಸಭಾಪತಿಯಾಗಿ ಆ ಪೀಠದಲ್ಲಿ ತೆಗೆದುಕೊಂಡ ನಿರ್ಣಯಗಳು ಮತ್ತು ಅದಕ್ಕಿಂತ ಮೊದಲು ಆದ ನಿರ್ಧಾರಗಳು ಸಹ movement ಆಗಲಿಲ್ಲ. ಮುಖ್ಯಮಂತ್ರಿಗಳು ಮಾಡುತ್ತೇನೆಂದು ಹೇಳಿದ್ದರು. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಸಹ ಸದನದಲ್ಲಿ ಇರಬೇಕು.

**ಉಪ ಸಭಾಪತಿಯವರು:–** ಮಾನ್ಯ ಎಂ.ಸಿ. ನಾಣಯ್ಯನವರ ವಿಷಯ ಮುಗಿದ ನಂತರ ಮಾನ್ಯ ಬಸವರಾಜ ಹೊರಟ್ಟಿಯವರ ವಿಷಯವನ್ನು ತೆಗೆದುಕೊಳ್ಳಲಾಗುವುದು.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಅಜೆಂಡಾದಲ್ಲಿ ಮೊದಲು ನಾನು ಕಳುಹಿಸಿರುವ ವಿಷಯವಿದೆ.

**ಉಪ ಸಭಾಪತಿಯವರು:–** ಅದು ನನಗೂ ಸಹ ಗೊತ್ತಿದೆ.

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ಮಾನ್ಯ ನಾಣಯ್ಯನವರು ಕಳುಹಿಸಿರುವ ವಿಷಯಕ್ಕೆ ನಾನೇ ಉತ್ತರವನ್ನು ಕೊಡಬೇಕಾಗಿದೆ. ಅದೇ ರೀತಿ ಮಾನ್ಯ ಬಸವರಾಜ ಹೊರಟ್ಟಿಯವರು ಕಳುಹಿಸಿರುವ ವಿಷಯಕ್ಕೆ ನಮ್ಮ ಮಂತ್ರಿಗಳಾದ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಉತ್ತರವನ್ನು ಕೊಡುತ್ತಾರೆ. ಕ್ಯಾಬಿನೆಟ್‌ನಲ್ಲಿ

ನಮಗೇನು ವ್ಯತ್ಯಾಸವಿಲ್ಲ. ನಾನೂ ಮತ್ತು ಅವರು ತುಂಬಾ ಚೆನ್ನಾಗಿದ್ದೇವೆ. ಅವರು ಏನು ಹೇಳುತ್ತಾರೆಯೋ ಅದು ನಾನು ಹೇಳಿದ ಹಾಗೆಯೇ. ಸಂಜೆ 5.30 ಗಂಟೆಗೆ ನಾಲ್ಕು ಜಿಲ್ಲೆಗಳಿಗೆ ಸಂಬಂಧಿಸಿದಂತೆ ಒಂದು ಸಭೆಯನ್ನು ಕರೆಯಲಾಗಿದೆ. ನಿನ್ನೆಯ ದಿವಸ ಇದೇ ಸದನದಲ್ಲಿ ಪ್ರಸ್ತಾಪವಾದ ವಿಷಯಕ್ಕೆ ಸಂಬಂಧಿಸಿದಂತೆ ಈ ಸಭೆಯನ್ನು ಕರೆಯಲಾಗಿದೆ.

**ಉಪ ಸಭಾಪತಿಯವರು:–** ಮಾನ್ಯ ಬಸವರಾಜ ಹೊರಟ್ಟಿಯವರೇ, ನೀವು ಕಳುಹಿಸಿರುವ ವಿಷಯವನ್ನು ನಾನು ಖಂಡಿತವಾಗಿಯೂ ಚರ್ಚೆಗೆ ತೆಗೆದುಕೊಳ್ಳುತ್ತೇನೆ, ದಯಮಾಡಿ ಸಹಕರಿಸಿ. ನಿಮ್ಮ ವಿಷಯವನ್ನು ಇವತ್ತು ನಾವು ಮುಗಿಸಿಯೇ ಹೋಗುವುದು.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಮುಖ್ಯಮಂತ್ರಿಗಳು ದಿನವೂ ಏಕೆ 5 ಗಂಟೆಗೆ ಹೋಗಬೇಕು?

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ನಾನು ಮುಖ್ಯಮಂತ್ರಿಯಾದ ಮೇಲೆ ಸದನವನ್ನು ನಿರಂತರವಾಗಿ ರಾತ್ರಿ 10.30 ಗಂಟೆಯವರೆವಿಗೂ ನಡೆಸಿದ್ದೇವೆ. ಇದಕ್ಕೆ ಜ್ವಲಂತ ಸಾಕ್ಷಿಗಳಿದ್ದಾವೆ. ಆದಕಾರಣ ಅವರ ಆರೋಪದಲ್ಲಿ ಯಾವುದೇ ಹುರುಳಿಲ್ಲ. ಹುರುಳಿಲ್ಲದ ಆರೋಪಗಳನ್ನು ಮಾಡಬಾರದು. ಕೆಳಮನೆಯಲ್ಲಿ ಲೋಕಾಯುಕ್ತರ ನೇಮಕಾತಿ ವಿಚಾರ ಮತ್ತು ಗಣಿಗಾರಿಕೆಯ ವಿಚಾರವಾಗಿ ಚರ್ಚೆ ನಡೆಯುತ್ತಿದೆ. ಸಂಜೆ 5.30 ಗಂಟೆಗೆ ಎತ್ತಿನಹೊಳೆ ಯೋಜನೆ ಬಗ್ಗೆ ನಾವು ಸಭೆ ಸೇರುವುದೆಂದು ನಿಶ್ಚಯ ಮಾಡಿದ್ದೇವೆ. ಕೇಂದ್ರ ಮಂತ್ರಿಗಳು ಸಹ ಈ ಸಭೆಗೆ ಬರುತ್ತೇವೆಂದು ಬೆಳಿಗ್ಗೆ ನಮಗೆ ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ನಾನು ಸಹ ಆ ಸಭೆಯಲ್ಲಿ ಹಾಜರಿರಬೇಕು.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ನಾವು ಮೂರು ದಿವಸಗಳಿಂದ ಕೇಳುತ್ತಿದ್ದೇವೆ. ಮಾನ್ಯ ನಾಣಯ್ಯನವರ ವಿಷಯ ಮುಗಿದು ನಮ್ಮ ವಿಷಯ ಚರ್ಚೆಗೆ ಬರುವಷ್ಟರಲ್ಲಿ ಸಂಜೆ 6

ಗಂಟೆಯಾಗುತ್ತದೆ. ಆಗ ನಾವು ಹೇಗೆ ಚರ್ಚೆ ಮಾಡುವುದು? ಮಾನ್ಯ ನಾಣಯ್ಯನವರು ಒಂದು ತಾಸು ಚರ್ಚೆ ಮಾಡದೇ ಇರುತ್ತಾರೆಯೇ?

**ಉಪ ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಪರಸ್ಪರ ಬಹಳ ಚೆನ್ನಾಗಿದ್ದಾರೆ. 'ಮಾಡುತ್ತೇವೆ' ಎಂದು ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರಲ್ಲ. ದಯವಿಟ್ಟು ಸಹಕರಿಸಿ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಈಗ ನೀವು ನಮಗೆ ಸಹಕರಿಸಬೇಕು, ನಾವಲ್ಲ. ನಾವು ಮೂರು ದಿವಸಗಳಿಂದ ಸಹಕರಿಸುತ್ತಿದ್ದೇವೆ. ನಾವು ಇದಕ್ಕೆ ಇನ್ನೆಷ್ಟು ಸಹಕಾರವನ್ನು ಮಾಡಬೇಕು. ಬೇಕಾದರೆ ನಾಣಯ್ಯನವರ ವಿಷಯವನ್ನು ನೀವು ನಾಳೆಯ ದಿವಸ ಚರ್ಚೆಗೆ ತೆಗೆದುಕೊಳ್ಳಿ.

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಹೊರಟ್ಟಿಯವರು ಮತ್ತು ಇತರ ಸ್ನೇಹಿತರು ಶಿಕ್ಷಕರು ಸುಮಾರು 50 ದಿವಸಗಳಿಂದ ಮುಷ್ಕರವನ್ನು ಮಾಡುತ್ತಿದ್ದಾರೆ. ಅವರಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ ಹೇಳುತ್ತಿದ್ದಾರೆ. ನಮ್ಮ ಸ್ನೇಹಿತರು ಮಾನ್ಯ ಮುಖ್ಯಮಂತ್ರಿಯವರ ಉಪಸ್ಥಿತಿಯಲ್ಲಿ ಈ ವಿಷಯ ಚರ್ಚೆಯಾದರೆ ಒಳ್ಳೆಯದು ಎಂದು ಹೇಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಯವರು ಒಪ್ಪುವುದಾದರೆ ನಾನು ನಿಯಮ 330ರ ಅಡಿಯಲ್ಲಿ ಕಳುಹಿಸಿರುವ ವಿಷಯವನ್ನು ನಾಳೆಯ ದಿವಸ ಚರ್ಚೆಗೆ ತೆಗೆದುಕೊಳ್ಳೋಣ. ಏಕೆಂದರೆ ಮಾನ್ಯ ಬಸವರಾಜ ಹೊರಟ್ಟಿಯವರು ಮಾನ್ಯ ಮುಖ್ಯಮಂತ್ರಿಗಳ ಉಪಸ್ಥಿತಿಬೇಕೆಂದು ಕೇಳುತ್ತಿದ್ದಾರೆ. ಖಂಡಿತವಾಗಿ ನಾನು ಅದನ್ನು ಒಪ್ಪುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಒಪ್ಪಿದರೆ ಈ ವಿಚಾರವನ್ನು ನಾಳೆಯ ದಿವಸ ಚರ್ಚೆಗೆ ತೆಗೆದುಕೊಳ್ಳೋಣ.

## 6. ನಿಯಮ 330ರ ಮೇರೆಗೆ ಚರ್ಚೆ

## (ಅ) ರಾಜ್ಯದಲ್ಲಿ 1994–95ರವರೆಗೆ ಪ್ರಾರಂಭಿಸಿದ ಶಾಶ್ವತ ಅನಿದಾನರಹಿತ ಶಿಕ್ಷಣ ಸಂಸ್ಥೆಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಬಗ್ಗೆ.

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬಹಳ ನೋವಿನ ಸಂಗತಿಯನ್ನು ಈ ಸದನದ ಮುಖಾಂತರ ಸರ್ಕಾರಕ್ಕೆ ಕೇಳುವುದಕ್ಕೆ ಬಯಸುತ್ತಿದ್ದೇನೆ. ಕಳೆದ 50 ದಿನಗಳಿಂದ ಧಾರವಾಡದಲ್ಲಿ ರಾಜ್ಯದ ಎಲ್ಲಾ ಭಾಗದ ಶಿಕ್ಷಕರು ಉಪವಾಸವನ್ನು ಮಾಡುತ್ತಿದ್ದಾರೆ. ಇವತ್ತು ಮಾರುಕಟ್ಟೆಯಲ್ಲೆಲ್ಲಾ ಓಡಾಡಿ ಭಿಕ್ಷೆಯನ್ನು ಬೇಡಿ ಸುಮಾರು 3,000 ರೂಪಾಯಿಗಳನ್ನು ಸಂಗ್ರಹ ಮಾಡಿ ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದ್ದಾರೆ. ಇದು ಶಿಕ್ಷಕರಿಗೆ ಆಗುತ್ತಿರುವ ಒಂದು ಅನ್ಯಾಯವಾಗಿದೆ. ಇನ್ನುಳಿದ ಸ್ನೇಹಿತರು ಇದರ ಬಗ್ಗೆ ಮಾತನಾಡುತ್ತಾರೆ. ನಾನು ಕೇವಲ preamble ನ್ನು ಮಾತ್ರ ಹೇಳುತ್ತೇನೆ. 2007ನೇ ಇಸವಿಯಲ್ಲಿ ಸಮ್ಮಿಶ್ರ ಸರ್ಕಾರ ಆಡಳಿತದಲ್ಲಿದ್ದಾಗ ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದಾಗ, ಮಾನ್ಯ ಯಡಿಯೂರಪ್ಪನವರು ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರಾಗಿದ್ದಾಗ ಆವತ್ತು ಬಹಳ ಉದಾರತನದಿಂದ ಇಬ್ಬರೂ ಕೂಡಿ ಇದಕ್ಕೆ ಒಪ್ಪಿಕೊಂಡರು. ಅವರು ಬಜೆಟ್‌ನಲ್ಲಿ ಈ ಬಗ್ಗೆ ಭಾಷಣವನ್ನು ಸಹ ಮಾಡಿ ಹಣವನ್ನು ಮೀಸಲಿಡುತ್ತಾರೆ. ಇದು ಅವರ ಬಜೆಟ್ ಪ್ರತಿಯ ಪುಟ ಸಂಖ್ಯೆ 67ರಲ್ಲಿ ಒಂದು ಅಂಶವನ್ನು ಹೇಳಿದ್ದಾರೆ. ಅದು ಈ ಕೆಳಕಂಡಂತಿದೆ;

**"2007–08ನೇ ಸಾಲಿನಲ್ಲಿ ನಾನು ಸರ್ಕಾರಿ ಪ್ರೌಢ ಶಾಲೆ ಮತ್ತು ಪಿಯು ಕಾಲೇಜುಗಳಲ್ಲಿ ಕೊಠಡಿಗಳ ನಿರ್ಮಾಣಕ್ಕಾಗಿ 70 ಕೋಟಿ ರೂಪಾಯಿಗಳನ್ನು ಒದಗಿಸಲಿದ್ದೇನೆ.**

**ಸಹಾಯಾನುದಾನದ ವಿಸ್ತರಣೆ:**

**143. ದಿನಾಂಕ 1.6.1987 ರಿಂದ ದಿನಾಂಕ 1.7.1992ರವರೆಗಿನ ನಡುವೆ ಆರಂಭವಾಗಿರುವ ಪರಿಶಿಷ್ಟ ಜಾತಿ/ಪಂಗಡಗಳ ಆಡಳಿತ ವರ್ಗಕ್ಕೆ ಸೇರಿದ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಸರ್ಕಾರಿ ಅನುದಾನಕ್ಕೆ ಒಳಪಡಿಸಲಾಗಿದೆ. ಈ ಅನುದಾನ ಸೌಲಭ್ಯವನ್ನು ಶಿಕ್ಷಣ ಇಲಾಖೆಯು ನಿಗದಿಪಡಿಸಿರುವ ಷರತ್ತುಗಳನ್ನು ಪೂರೈಸಿರುವ ಸಾಮಾನ್ಯ ವರ್ಗಕ್ಕೆ ಸೇರಿದ ಆಡಳಿತ ಮಂಡಳಿಗಳ, 1992–93 ಮತ್ತು ಅದಕ್ಕೂ ಹಿಂದೆ ಆರಂಭವಾಗಿರುವ; ಪ್ರಾಥಮಿಕ, ಪ್ರೌಢ ಶಾಲೆ ಮತ್ತು ಪಿಯು ಕಾಲೇಜುಗಳಿಗೂ ಕೂಡ ವಿಸ್ತರಿಸಲಾಗುವುದು.**

**144. ವಿದ್ಯಾರ್ಥಿಗಳ ಪ್ರಗತಿ ಆಧರಿಸಿ ನೀಡುವ ನೂತನ ನೀತಿಯನ್ನು ಸರ್ಕಾರವು ಜಾರಿಗೊಳಿಸಲು ಉದ್ದೇಶಿಸಿದೆ. ಈ ನೀತಿಯು 1993–1994ನೇ ಶೈಕ್ಷಣಿಕ ವರ್ಷದಿಂದೀಚೆಗೆ ಆರಂಭವಾಗಿರುವ ಖಾಸಗಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಅನ್ವಯವಾಗುತ್ತದೆ. ಈ ನೀತಿಯಿಂದ ಅನುದಾನಿತವಲ್ಲದ ಹಲವಾರು ಶಿಕ್ಷಣ ಸಂಸ್ಥೆಗಳಿಗೆ ಕಾರ್ಯಾಧಾರಿತ ಅನುದಾನವನ್ನು ಪಡೆಯುವ ಅವಕಾಶ ದೊರೆಯುತ್ತದೆ. ಈ ಸಂಬಂಧ ವಿವರವಾದ ಮಾರ್ಗದರ್ಶಿ ಸೂತ್ರಗಳನ್ನು ಹೊರಡಿಸಲಾಗುವುದು. ಈ ಯೋಜನೆಯ ಅನುಷ್ಠಾನಕ್ಕಾಗಿ ಸುಮಾರು 50 ಕೋಟಿ ರೂ.ಗಳನ್ನು ನಾನು ಹಂಚಿಕೆ ಮಾಡುತ್ತಿದ್ದೇನೆ.”**

ಎಂದು ಹೇಳಿದ್ದಾರೆ.

ಆವತ್ತು ಉಪಮುಖ್ಯಮಂತ್ರಿ ಹಾಗೂ ಹಣಕಾಸು ಮಂತ್ರಿಯಾಗಿದ್ದ ಮಾನ್ಯ ಯಡಿಯೂರಪ್ಪನವರು ಹೇಳಿದರು. ನಂತರ ಇದು ಕ್ಯಾಬಿನೆಟ್‌ಗೆ ಬಂದು ಸುಮಾರು ಒಂದೂವರೆ ಗಂಟೆಗಳ ಕಾಲ ಚರ್ಚೆಯಾಯಿತು. ಆಗ ಮಾನ್ಯ ಜಾರಕಿಹೊಳಿಯವರೂ ಇದ್ದರು. ಈ ಕುರಿತು ಚರ್ಚೆಯಾದಾಗ ಬಹಳಷ್ಟು ಜನ ಮಂತ್ರಿಗಳು ಇದಕ್ಕೆ ವಿರೋಧ ಮಾಡಿದರು. ಆದರೆ ಕೊನೆಗೆ

ಸರ್ವಾನುಮತದಿಂದ ತೀರ್ಮಾನ ಮಾಡಿ, 'ಇವರಿಗೆ ಅನುದಾನ ವಿಸ್ತರಣೆ ಮಾಡಬೇಕು, ನಮ್ಮ ರಾಜ್ಯದಲ್ಲಿ ಅನುದಾನರಹಿತ ಶಿಕ್ಷಣ ಸಂಸ್ಥೆಗಳು ಇರಬಾರದು' ಎಂದು ತೀರ್ಮಾನ ಮಾಡಿದರು. ಬಜೆಟ್‌ನಲ್ಲಿ ಪಾಸ್ ಆಯಿತು. ಕ್ಯಾಬಿನೆಟ್‌ನಲ್ಲಿ ಪಾಸ್ ಆಯಿತು. ಹಣಕಾಸಿನ ಇಲಾಖೆಯವರೂ ಪಾಸ್ ಮಾಡಿದರು. ನಾನು ಮಂತ್ರಿಯಾಗಿದ್ದಾಗ ಸುಮಾರು 398 ಫೈಲುಗಳನ್ನು ಕ್ಲಿಯರ್ ಮಾಡಿದ್ದೆ. ನಂತರ ಕಾಗೇರಿಯವರು ಮಂತ್ರಿಯಾಗಿ ಬಂದಮೇಲೆ ಒಂದಿಷ್ಟು ಫೈಲುಗಳನ್ನು ಕ್ಲಿಯರ್ ಮಾಡಿದರು. ಆಗ ಆರ್ಥಿಕ ಇಲಾಖೆಯ ಮಿತವ್ಯಯ ಆದೇಶ ಇರಲಿಲ್ಲ. ಈ ಫೈಲುಗಳು ಶಿಕ್ಷಣ ಮಂತ್ರಿಗಳ ಕೊಠಡಿಯಲ್ಲಿತ್ತು. ಅವುಗಳನ್ನು ಕ್ಲಿಯರ್ ಮಾಡಿದ್ದರೆ ಆ ಫೈಲುಗಳೂ ಕೂಡ ಹೋಗಿಬಿಡುತ್ತಿತ್ತು. ನಂತರ, ಪ್ರವಾಹ ಬಂದಿದೆ ಎನ್ನುವ ಹಿನ್ನೆಲೆಯಲ್ಲಿ 2009ರ ಸೆಪ್ಟೆಂಬರ್‌ನಲ್ಲಿ ಆರ್ಥಿಕ ಮಿತವ್ಯಯ ಆದೇಶ ತಂದರು. ಆಗ ಎಲ್ಲಾ ಕಡೆ ಶಿಕ್ಷಕರು ಬಹಳಷ್ಟು ಹೋರಾಟ ಮಾಡಿದ್ದರಿಂದ 1991ನೇ ಇಸವಿಯ ಪೂರ್ವದಲ್ಲಿ ಪ್ರಾರಂಭಿಸಿದ ಶಾಲೆಗಳನ್ನು ಸಹಾಯಾನುದಾನಕ್ಕೆ ಒಳಪಡಿಸುತ್ತೇವೆ ಎಂಬ ಆದೇಶ ಹೊರಡಿಸಿದರು. ನಾನು ತಮ್ಮ ಮೂಲಕ ಸರ್ಕಾರಕ್ಕೆ ಒಂದು ಮಾತನ್ನು ಕೇಳಬಯಸುತ್ತೇನೆ. ಅನುದಾನ ಕೊಡುವುದಕ್ಕೆ 2007ರಲ್ಲಿ ಒಪ್ಪಿಕೊಂಡಿದ್ದಾರೆ. 1994, 1992, ಮತ್ತು 1993ನೇ ಇಸವಿಯಲ್ಲಿ ಪ್ರಾರಂಭವಾದ ಶಾಲೆಗಳು ಅನುದಾನ ಪಡೆದುಕೊಂಡಿವೆ. 1987ರಲ್ಲಿ ಪ್ರಾರಂಭವಾದ ಕೆಲವು ಶಾಲೆಗಳು ಅನುದಾನ ತೆಗೆದುಕೊಂಡಿಲ್ಲ. ಆರ್ಥಿಕ ಮಿತವ್ಯಯ ಇದ್ದಾಗಲೂ ಸಹ ಮಾನ್ಯ ಕಾಗೇರಿಯವರು ಕೆಲವು ಶಾಲೆಗಳನ್ನು ಅನುದಾನಕ್ಕೆ ಒಳಪಡಿಸಿದ ಪಟ್ಟಿ ನನ್ನ ಹತ್ತಿರ ಇದೆ. ಈ ರೀತಿ ಭೇದ-ಭಾವ ಮಾಡಬಾರದು. ಕೆಲವು ಶಿಕ್ಷಕರು ನಿವೃತ್ತಿ ಅಂಚಿನಲ್ಲಿದ್ದಾರೆ. ನಾನು ಅವರ ಹುಟ್ಟಿದ ದಿನಾಂಕವನ್ನು ಹೇಳುತ್ತೇನೆ. ವಿಶ್ವಭಾರತಿ ಶಾಲೆ, ರಾಜೇನಹಳ್ಳಿ, ಹರಿಹರ ತಾಲ್ಲೂಕಿನ ಒಬ್ಬ ಶಿಕ್ಷಕರ ಹುಟ್ಟಿದ ದಿನಾಂಕ 1960. ಇದೇ ರೀತಿ ಅನೇಕ ಜನ ಶಿಕ್ಷಕರು ಇನ್ನು ಮೂರ್‍ನಾಲ್ಕು ವರ್ಷಗಳಲ್ಲಿ ನಿವೃತ್ತಿಯಾಗುತ್ತಾರೆ. ಮಾನ್ಯ ಸಭಾಪತಿಗಳೇ, ನಾನು ಅಮರಣಾಂತ ಉಪವಾಸ ಕುಳಿತುಕೊಂಡೆ. ಉಪವಾಸ ಕುಳಿತುಕೊಂಡಾಗ ಸ್ವತಃ ಮಾನ್ಯ ಮುಖ್ಯಮಂತ್ರಿಗಳು ದೂರವಾಣಿ

ಮೂಲಕ ವಿನಂತಿ ಮಾಡಿಕೊಂಡು, ಡಿಸಿಯವರಿಗೆ ರೈಟಿಂಗ್‌ನಲ್ಲಿ ಕಳುಹಿಸಿದ್ದರು. ಅದರಲ್ಲಿ, 'ನೀವು ಉಪವಾಸವನ್ನು ಬಿಡಬೇಕು, ನಾವು ತಕ್ಷಣ ಸಂಬಳ ಬಿಡುಗಡೆ ಮಾಡುತ್ತೇವೆ' ಎಂದು ಹೇಳಿದ್ದರು. ಆ ಪತ್ರ ಓದುತ್ತೇನೆ. "ಮುಖ್ಯಮಂತ್ರಿಯವರ ಕಾರ್ಯದರ್ಶಿಗಳು, ದಿನಾಂಕ 22.2.2011 – ಮಾನ್ಯ ಬಸವರಾಜ ಹೊರಟ್ಟಿಯವರು ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಂತೆ ಕೆಲವು ಬೇಡಿಕೆಯ ಸಂಬಂಧ ಕೆಲವು ದಿನಗಳಿಂದ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದು, ಈ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಸೂಕ್ತ ಕ್ರಮ ತೆಗೆದುಕೊಳ್ಳುವ ಬಗ್ಗೆ ದಿನಾಂಕ 25.2.2011 ರಂದು ಸಭೆ ಕರೆಯುವಂತೆ ಶ್ರೀ ವಿಶ್ವೇಶ್ವರಹೆಗಡೆ ಕಾಗೇರಿ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಹಾಗೂ ಡಾ॥ ವಿ.ಎಸ್. ಆಚಾರ್ಯ, ಉನ್ನತ ಶಿಕ್ಷಣ ಸಚಿವರು ಇವರುಗಳಿಗೆ ಮುಖ್ಯಮಂತ್ರಿಗಳು ಸೂಚನೆ ನೀಡಿದ್ದಾರೆಂದು ತಮಗೆ ತಿಳಿಸಬಯಸುತ್ತೇನೆ., ಸದರಿ ಸಭೆಗೆ ತಮ್ಮನ್ನು, ಸಂಬಂಧಪಟ್ಟ ಶಾಸಕರನ್ನು ಮತ್ತು ಎಲ್ಲಾ ಅಧಿಕಾರಿಗಳನ್ನು ಆಹ್ವಾನಿಸಲಾಗಿದೆ. ಆದ್ದರಿಂದ ತಾವು ತಮ್ಮ ಉಪವಾಸ ಸತ್ಯಾಗ್ರಹವನ್ನು ಹಿಂಪಡೆಯಬೇಕೆಂದು ತಮ್ಮನ್ನು ಕೋರಲು ಮಾನ್ಯ ಮುಖ್ಯಮಂತ್ರಿಗಳಿಂದ ನಿರ್ದೇಶಿತನಾಗಿದ್ದೇನೆ. ಎಂ. ಲಕ್ಷ್ಮೀನಾರಾಯಣ, ಮುಖ್ಯಮಂತ್ರಿಗಳ ಕಾರ್ಯದರ್ಶಿ." ಮಾನ್ಯ ಸಭಾಪತಿಗಳೇ, ಆ ದಿನ ನಮ್ಮ ಕಾಗೇರಿಯವರು ಆ ಮಾರ್ಗವಾಗಿ ಹೋದರೂ ನಮ್ಮನ್ನು ಭೇಟಿಯಾಗಲಿಲ್ಲ. ಒಂದು ದಿನ ಕೂಡ ಅವರು ಭೇಟಿಯಾಗಲಿಲ್ಲ. ಒಬ್ಬ ಶಾಸಕನಾಗಿರುವ, ಒಬ್ಬ ಮಂತ್ರಿಯಾಗಿದ್ದ ನಾನು ಉಪವಾಸ ಕುಳಿತಿದ್ದರೂ ನಮ್ಮ ಸಮೀಪ ಬರಲಿಲ್ಲ, ಅವರು ಆಗ ನಮ್ಮ ಬಾಜು ಇದ್ದರು. ಅಂದರೆ ಇವರಿಗೆ ಇರುವಂತಹ ಕಳಕಳಿ ಏನು ಎನ್ನುವುದು ಗೊತ್ತಾಗುತ್ತದೆ. ಆರ್.ಎಸ್.ಎಸ್ ಸಮಾವೇಶ ಇದ್ದಾಗ ಹೇಗೆ ಎರಡು ನಿಮಿಷ ಬಂದು ಓಡಿ ಹೋಗುತ್ತಾರೋ ಹಾಗೆ ಬಂದು ಹೋಗಿಬಿಟ್ಟರು. ಅಂದರೆ ಶಿಕ್ಷಣ ಮಂತ್ರಿಗಳಿಗೆ ಎಷ್ಟು ಕಳಕಳಿ ಇದೆ ಎಂಬುದನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸಭಾಪತಿಗಳೇ, 25ನೇ ಫೆಬ್ರವರಿಯಲ್ಲಿ ಮುಖ್ಯಮಂತ್ರಿಗಳ ಆದೇಶದಂತೆ ಮಾನ್ಯ ಸಭಾಪತಿಗಳಾದ ಡಿ.ಹೆಚ್. ಶಂಕರಮೂರ್ತಿಯವರ ಅಧ್ಯಕ್ಷತೆಯಲ್ಲಿ ಸಭೆ

ಕರೆದರು. ಆಗ ಶಿಕ್ಷಕರ ಕ್ಷೇತ್ರ ಮತ್ತು ಪದವೀಧರ ಕ್ಷೇತ್ರವನ್ನು ಪ್ರತಿನಿಧಿಸುವ ಶಾಸಕರೂ ಇದ್ದರು. ಎಲ್ಲಾ ವಿಷಯಗಳ ಬಗ್ಗೆ ಚರ್ಚೆಯಾಯಿತು. ಮಾನ್ಯ ಮಸ್ಕಿಯವರು ಅಲ್ಲಿ ಸ್ವಲ್ಪ ರಾಜಕೀಯ ಕೂಡ ಮಾಡಿದರು. ಕೊನೆಗೆ ಏನು ತೀರ್ಮಾನವಾಯಿತು ಎಂದು ಸಭೆಯ ನಡವಳಿಯನ್ನು ಓದಿ ಹೇಳುತ್ತೇನೆ. ಮಾನ್ಯ ಕಾಗೇರಿಯವರು, "ಜೂನ್ ಒಂದರ ಒಳಗೆ ಎಲ್ಲಾ ಪ್ರಕ್ರಿಯೆಗಳನ್ನು ಮುಗಿಸಿ ಆದೇಶ ಹೊರಡಿಸುತ್ತೇನೆ" ಎಂಬ ಮಾತನ್ನು ಹೇಳಿದರು. ಆಗ ಮಾನ್ಯ ಸಭಾಪತಿಗಳು, "ಪ್ರಾಥಮಿಕ ಮತ್ತು ಪ್ರೌಢ ಹಾಗೂ ಪದವೀಪೂರ್ವ ಕಾಲೇಜುಗಳನ್ನು ಅನುದಾನಕ್ಕೊಳಪಡಿಸುವ ಬಗ್ಗೆ ಮತ್ತು ಈ ಅವಧಿಯಲ್ಲಿ ವೇತನಾನುದಾನಕ್ಕೆ ಒಳಪಟ್ಟಿರುವ ಶಾಲಾ-ಕಾಲೇಜುಗಳ ವೇತನವನ್ನು ಅಕ್ಟೋಬರ್ 2009ರಲ್ಲಿ ಆರ್ಥಿಕ ಮಿತವ್ಯಯದ ಆದೇಶಕ್ಕೆ ಅನುಗುಣವಾಗಿ ವೇತನವನ್ನು ತಡೆಹಿಡಿದಿದ್ದು, ಇವುಗಳ ಆರ್ಥಿಕ ಮಿತವ್ಯಯ ಆದೇಶವನ್ನು ಸಡಿಲಿಸಿ "ಜೂನ್ ಒಂದರ ಒಳಗೆ ಎಲ್ಲಾ ಪ್ರಕ್ರಿಯೆ ಮುಗಿಸಿ ಆದೇಶ ಹೊರಡಿಸುತ್ತೇವೆ ಎಂದು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಒಪ್ಪಿಕೊಂಡಿದ್ದಾರೆ. ಆದ್ದರಿಂದ ಈ ಸಭೆಯನ್ನು ಇಲ್ಲಿಗೆ ಮುಕ್ತಾಯಗೊಳಿಸುತ್ತೇನೆ" ಎಂದು ಹೇಳಿದ್ದರು. ಮಾನ್ಯ ಸಭಾಪತಿಗಳೇ, ಇವರ ಮಾತಿಗೂ ಕೃತಿಗೂ ಸಮರಸ ಇರಬೇಡವೇ? ಆವತ್ತು ಎಲ್ಲವನ್ನೂ ಒಪ್ಪಿಕೊಂಡರು. ಆಗ ಹಣಕಾಸು ಇಲಾಖೆಯವರಿದ್ದರು, ಇಬ್ಬರು ಸಚಿವರೂ ಇದ್ದರು. ಮಾನ್ಯ ಸಭಾಪತಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಅವರಿಗಾದರೂ ಗೌರವ ಕೊಡಬಾರದೇ? ತಮ್ಮ ಹೊಟ್ಟೆ ಮೇಲೆ ಕಲ್ಲು ಹಾಕಿಕೊಂಡು ಶಿಕ್ಷಕರು 50 ದಿವಸದಿಂದ ಉಪವಾಸ ಕುಳಿತುಕೊಂಡು, ಭಿಕ್ಷೆ ಬೇಡಿದರು. ಇದು ರಾಜ್ಯಕ್ಕೆ ಶೋಭೆ ತರುವಂಥದ್ದೇ? ಸರ್ಕಾರ ಇದಕ್ಕೆ ಸುಮಾರು 200 ಕೋಟಿ ರೂಪಾಯಿಗಳು ಬೇಕಾಗುತ್ತದೆ ಎಂದು ಹೇಳಿತ್ತು. ಅದೆಷ್ಟಾಗುತ್ತದೆ ನಮಗೆ ಗೊತ್ತಿಲ್ಲ. 2007ರಲ್ಲಿ ಕೆಲವರು ಸಹಾಯಾನುದಾನ ತೆಗೆದುಕೊಂಡಿದ್ದಾರೆ. 1987ರಲ್ಲಿ ಪ್ರಾರಂಭವಾದ ಕೆಲವು ಶಾಲೆಗಳಿಗೆ ಸಹಾಯಾನುದಾನ ಸಿಕ್ಕಿಲ್ಲ. ಈ ರೀತಿ ತಾರತಮ್ಯ ಏಕೆ ಆಗುತ್ತಿದೆ? ಆವತ್ತಿನಿಂದ ಮಾನ್ಯ ಶಿಕ್ಷಣ ಸಚಿವರು ಎಷ್ಟು ಕಡತಗಳನ್ನು ಕ್ಲಿಯರ್ ಮಾಡಿದ್ದಾರೆ

ಎನ್ನುವುದನ್ನು ಹೇಳಬೇಕು. ಯಾವುದೂ ಕ್ಲಿಯರ್ ಮಾಡಿಲ್ಲ ಎಂದು ಹೇಳಲಿ ಅದನ್ನು ಒಪ್ಪುತ್ತೇನೆ. ಆದರೆ ತಮಗೆ ಬೇಕಾದವರಿಗೆ ಕ್ಲಿಯರ್ ಮಾಡಿಕೊಟ್ಟಿದ್ದಾರೆ. ಅವರು ಎಷ್ಟು ಕಡತಗಳನ್ನು ಕ್ಲಿಯರ್ ಮಾಡಿದ್ದಾರೋ ಅದರ ದಾಖಲೆ ಇದೆ. ಎಲ್ಲವನ್ನೂ ಏಕೆ ಕ್ಲಿಯರ್ ಮಾಡಲಿಲ್ಲ? ಸೀನಿಯಾರಿಟಿ ಪ್ರಕಾರವಾದರೂ ಮಾಡಬೇಕಾಗಿತ್ತು. ಏನಾದರೂ ಒಂದು ಮಾನದಂಡ ಇರಬೇಕಲ್ಲವೇ? ಮಾನ್ಯ ಸಭಾಪತಿಗಳೇ, 50 ದಿವಸಗಳಿಂದ ಮಹಿಳಾ ಶಿಕ್ಷಕರೂ ಕೂಡ ಉಪವಾಸ ಕುಳಿತುಕೊಂಡಿದ್ದಾರೆ. ಪ್ರತಿದಿನ ನಾಲ್ಕು-ನಾಲ್ಕು ಮಂದಿ ಆಸ್ಪತ್ರೆ ಸೇರುತ್ತಿದ್ದಾರೆ. ಹೀಗಾಗುತ್ತಿರುವುದು ಸರಿಯೇ? ಈ ಕುರಿತು ನಾನು ಸರ್ಕಾರದ ಗಮನ ಸೆಳೆದಾಗ ಮಾನ್ಯ ಕಾಗೇರಿಯವರು, 'ಇವರು ರಾಜಕೀಯ ಮಾಡುತ್ತಿದ್ದಾರೆ' ಎನ್ನುವ ಹೇಳಿಕೆ ಕೊಟ್ಟರು. ನಾನೇಕೆ ರಾಜಕೀಯ ಮಾಡಲಿ, ನಾನೇನು ಚುನಾವಣೆ ಎದುರಿಸಬೇಕಿಲ್ಲ ಅಥವಾ ನಾನು ಕಾಗೇರಿಯವರ ಹಾಗೆ ಚುನಾವಣೆಗೆ ನಿಲ್ಲುವುದಿಲ್ಲ. ಧಾರವಾಡದಲ್ಲಿ ಯಾರ್‍ಯಾರು ಉಪವಾಸ ಮಾಡುತ್ತಿದ್ದಾರೋ ಅವರ ಪಟ್ಟಿ ನನ್ನಲ್ಲಿದೆ. ಮಂಡ್ಯ, ಮೈಸೂರು, ಕೋಲಾರ ಮತ್ತು ಚಿತ್ರದುರ್ಗ ಹೀಗೆ ಎಲ್ಲಾ ಕಡೆಯಿಂದ ಶಿಕ್ಷಕರು ಅಲ್ಲಿಗೆ ಬಂದಿದ್ದಾರೆ. ನಾನು ಒಂದು ಮಾತನ್ನು ಹೇಳುತ್ತೇನೆ. ಏನೇ ಪರಿಸ್ಥಿತಿ ಬಂದರೂ, ಸತ್ತರೂ ಅವರು ಉಪವಾಸ ನಿಲ್ಲಿಸುವುದಿಲ್ಲ. ನೀವು ಬೇರೆ ಬೇರೆ ಕಾರ್ಯಕ್ರಮಗಳನ್ನು ಮಾಡುತ್ತಲೇ ಇದ್ದೀರಿ, ಹೆಲಿಕಾಪ್ಟರ್‌ನಲ್ಲಿ ಓಡಾಡುವುದನ್ನು ನಿಲ್ಲಿಸಿದ್ದೀರಾ? ವಿಮಾನದಲ್ಲಿ ಓಡಾಡುವುದನ್ನು ನಿಲ್ಲಿಸಿದ್ದೀರಾ? ಇಲ್ಲ. ಎಲ್ಲವನ್ನೂ ಮಾಡುತ್ತೀರಿ. ಆದರೆ, ಇಂಥದ್ದಿಕ್ಕೆ ಏಕೆ ಆರ್ಥಿಕ ಮಿತವ್ಯವಯ ಎಂದು ಹೇಳುತ್ತೀರಿ? ನಮ್ಮ ಮುಖ್ಯಮಂತ್ರಿಗಳು ಮೊದಲು ರೈಲಿನಲ್ಲಿ ಬರುತ್ತಿದ್ದರು, ಆದರೆ ಅವರೂ ಈಗ ಹೆಲಿಕಾಪ್ಟರ್ ಹತ್ತುತ್ತಿದ್ದಾರೆ. ಇಂಥದ್ದಕ್ಕೆಲ್ಲ ಖರ್ಚು ಮಾಡುವಾಗ ಶಿಕ್ಷಕರ ಬೇಡಿಕೆಗೆ ಏಕೆ ಸ್ಪಂದಿಸಬಾರದು? ನಾನು ಮುಖ್ಯಮಂತ್ರಿಗಳಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ನೀವು ಮುಖ್ಯಮಂತ್ರಿಯಾಗಿ ಬಂದನಂತರ ಇದಕ್ಕೆ ಒಂದು ಚಾಲನೆ ಕೊಡುತ್ತೀರಿ ಎನ್ನುವ ನಂಬಿಕೆ ಇದೆ. 1991ರ ತನಕ ಏನು ಕೊಟ್ಟಿದ್ದೀರೋ ಅದನ್ನು 1994ರವರೆಗೆ ಕೊಡಬೇಕು ಎಂಬ ಮಾತನ್ನು

ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸಭಾಪತಿಗಳೇ, ಕೆಲವು ಶಿಕ್ಷಣ ಸಂಸ್ಥೆಗಳು, ಸಹಾಯಾನುದಾನ ಬಂದಮೇಲೆ ಶಿಕ್ಷಕರಿಗೆ ಸಂಬಳ ಕೊಡುವುದನ್ನು ನಿಲ್ಲಿಸಿದ್ದಾರೆ. ಮೊದಲು ಏನು ಎರಡು–ಮೂರು ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದರು ಈಗ ಅದನ್ನೂ ಕೊಡುತ್ತಿಲ್ಲ. ಶಿಕ್ಷಕರ ಪರಿಸ್ಥಿತಿ ಏನಾಗಿದೆ ಎನ್ನುವುದನ್ನು ನೀವು ಪತ್ರಿಕೆಗಳಲ್ಲಿ ಅಥವಾ ದೂರದರ್ಶನ ಮಾಧ್ಯಮಗಳಲ್ಲಿ ನೋಡಿರಬಹುದು. ಕೆಲವರು ಆತ್ಮಹತ್ಯೆ ಮಾಡಿಕೊಳ್ಳುವಂಥದ್ದು, ಅಳುವಂಥದ್ದು ಮಾಡುತ್ತಿದ್ದಾರೆ. ವಯಸ್ಸಾಗಿರುವ ತಂದೆ–ತಾಯಿಗಳನ್ನು ಜೋಪಾನ ಮಾಡಬೇಕಾದ ಆ ಶಿಕ್ಷಕರನ್ನು ವಯಸ್ಸಾಗಿರುವ ಅವರ ತಂದೆ–ತಾಯಿಗಳೇ ನೋಡಿಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಎಲ್ಲಿಯವರೆಗೆ ಸರ್ಕಾರ ಅನುದಾನ ಬಿಡುಗಡೆ ಮಾಡುವುದಿಲ್ಲವೋ ಅಲ್ಲಿಯವರೆಗೂ ಈ ಹೋರಾಟ ನಡೆಯುತ್ತದೆ. ನೀವು ಯಾವುದರಲ್ಲಾದರೂ ಖರ್ಚನ್ನು ಕಡಿಮೆ ಮಾಡಿಕೊಂಡು ಈ ಶಿಕ್ಷಕರಿಗೆ ಸಂಬಳ ಬಿಡುಗಡೆ ಮಾಡುವ ಕೆಲಸ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. (ಈ ಹಂತದಲ್ಲಿ ಸದಸ್ಯರಾದ ಮಾನ್ಯ ಶಿವಯೋಗಿಸ್ವಾಮಿಯವರು ಮಾನ್ಯ ಕಾಗೇರಿಯವರ ಜೊತೆ ಮಾತನಾಡುತ್ತಿದ್ದರು) ಮಾನ್ಯ ಶಿವಯೋಗಿಸ್ವಾಮಿಗಳೆ, ನೀವು ಸಚಿವರ ಹತ್ತಿರ ಏನನ್ನೂ ಹೇಳಬೇಡಿ. ಅವರಿಗೂ ಬುದ್ಧಿ ಇದೆ. ಅವರು ಕಾರವಾರದವರು. . .

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಆದರೆ ನಾವು ಮೀನು ತಿನ್ನುವುದಿಲ್ಲ.

(ಸದನದಲ್ಲಿ ನಗು)

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಗಳೇ ನಮ್ಮ ಕಡೆ ಬ್ರಾಹ್ಮಣರು ಬಹಳ ಬುದ್ಧಿವಂತರು. ಹವ್ಯಕ ಬ್ರಾಹ್ಮಣರು ಅವರಿಗಿಂತ ಬುದ್ಧಿವಂತರು. ನಾನು ಮಾನ್ಯ ರಾಮಕೃಷ್ಣ ಹೆಗಡೆ ಅವರ ಜೊತೆ 25 ವರ್ಷಗಳ ಕಾಲ ಇದ್ದುದರಿಂದ ನನಗೆ ಆ ವಿಷಯ ಗೊತ್ತಿದೆ. ಮಾನ್ಯ ರಾಮಕೃಷ್ಣ ಹೆಗಡೆಯವರಿಗಿಂತಲೂ ನಮ್ಮ ಕಾಗೇರಿಯವರು ಎಲ್ಲದರಲ್ಲೂ ಒಂದು ಹೆಜ್ಜೆ ಮುಂದಿದ್ದಾರೆ. ನಮಗೆ ಅವರಿಗೆ ವ್ಯತ್ಯಾಸವೇನೆಂದರೆ ನಾವು

ಕುರುಡನಿಗೆ ನೇರವಾಗಿ 'ಕುರುಡ' ಎಂದು ಹೇಳುತ್ತೇವೆ. ಇವರು 'ಪಾಪ ಕಣ್ಣು ಕಾಣುವುದಿಲ್ಲ' ಎಂದು ಹೇಳುತ್ತಾರೆ. ಇವರು ಒಳ್ಳೆಯವರು ಅನಿಸಿಕೊಳ್ಳುತ್ತಾರೆ, ನಾವು ಕೆಟ್ಟವರು ಅನಿಸಿಕೊಳ್ಳುತ್ತೇವೆ ಅಷ್ಟೆ. ಅವರು ಅಷ್ಟು ಬುದ್ಧಿವಂತರಿದ್ದಾರೆ. ನಮ್ಮ ಹಿಂದಿನ ಮುಖ್ಯಮಂತ್ರಿಗಳು ಹೇಳಿಕೇಳಿ ಇವರನ್ನು ಶಿಕ್ಷಣ ಮಂತ್ರಿ ಮಾಡಿದ್ದಾರೆ. ಏಕೆಂದರೆ, ಇಂಥವುಗಳಿಗೆ ತೊಂದರೆ ಕೊಡಲಿ ಎಂದು ಮಾಡಿದ್ದಾರೆ. ಅದಕ್ಕೆ ಅವರೆಲ್ಲಾ ನಮಗೆ ತೊಂದರೆ ಕೊಡುತ್ತಾರೆ. ಆ ತೊಂದರೆಗಳನ್ನು ಸಹಿಸಿಕೊಂಡಿದ್ದೇವೆ. ಇವತ್ತು ಒಳ್ಳೆಯ ಕೆಲಸ ಮಾಡಿದರೆ ಅವರಿಗೆ ಬಹಳಷ್ಟು ಅಭಿನಂದನೆ ಸಲ್ಲಿಸುತ್ತೇವೆಂದು ಹೇಳಿ, ದಯಮಾಡಿ ತಕ್ಷಣ ಈ ಸಂಬಳವನ್ನು ಬಿಡುಗಡೆ ಮಾಡಬೇಕೆನ್ನುವ ಮಾತನ್ನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ನಿಮಗೂ ಕಲಿಸುವಂತಹ ಗುರುಗಳು ಬಹಳ ಜನರಿದ್ದಾರೆ. ಇನ್ನೂ ಶಿಕ್ಷಕರು ಜೀವಂತ ಇದ್ದಾರೆ. ದಯಮಾಡಿ ಈ ಶಿಕ್ಷಕರ ನೋವನ್ನು ಕಡಿಮೆ ಮಾಡಿ. ಮುಖ್ಯಮಂತ್ರಿಗಳಾದ ಮೇಲೆ ಬಹಳಷ್ಟು ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಬಹಳ ಜನರಿಗೆ ಸಮಾಧಾನ ಮಾಡಿದ್ದಾರೆ. ನಾವೆಲ್ಲರೂ ಮಾನ್ಯ ಮುಖ್ಯಮಂತ್ರಿಗಳ ಮೇಲೆ ಬಹಳ ಗೌರವ, ಅಭಿಯಾನ ಇಟ್ಟುಕೊಂಡಿದ್ದೇವೆ. ಶಿಕ್ಷಕರೂ ಅಷ್ಟು ಅಭಿಮಾನವನ್ನಿಟ್ಟುಕೊಳ್ಳುವ ಕೆಲಸವನ್ನು ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ವೀರಣ್ಣ ಮತ್ತಿಕಟ್ಟಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗ ಧಾರವಾಡದಲ್ಲಿ ಅನುದಾನ ರಹಿತ ಶಾಲಾ-ಕಾಲೇಜುಗಳ ಶಿಕ್ಷಕರು ಐವತ್ತು ದಿನಗಳಿಂದ ಉಪವಾಸ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ಕೆಲವು ಜನ ಆಮರಣ ಉಪವಾಸವನ್ನು ಪ್ರಾರಂಭಿಸಿದ್ದಾರೆ. ಈಗ ಸನ್ಮಾನ್ಯ ಬಸವರಾಜ ಹೊರಟ್ಟಿಯವರು ಹೇಳಿದ ಹಾಗೆ ಈ ಸಮಸ್ಯೆಗೆ ಪರಿಹಾರವನ್ನು ಮೂರು ವರ್ಷಗಳ ಹಿಂದೆಯೇ ಕೊಡುತ್ತೇವೆ ಎನ್ನುವ ಅಭಿಪ್ರಾಯವನ್ನು ಕಾಗೇರಿಯವರು ತಿಳಿಸಿದ್ದರು.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮುಖ್ಯಮಂತ್ರಿಗಳು ಸದನದಲ್ಲಿ ಅಧಿಕಾರಿಗಳ ಹತ್ತಿರ ಮಾತನಾಡುವಾಗ ಅಧಿಕಾರಿಗಳು ಕುಳಿತುಕೊಂಡು ಮಾತನಾಡುವುದು ಎಂದರೆ ಹೇಗೆ? ಅವರಿಗೆ ಎಷ್ಟು ವರ್ಷ ಸರ್ವಿಸ್ ಆಗಿದೆ?

**ಉಪ ಸಭಾಪತಿಯವರು:–** ಅಧಿಕಾರಿ ವರ್ಗದವರು ಶಿಷ್ಟಾಚಾರವನ್ನು ಪಾಲಿಸಬೇಕಾಗುತ್ತದೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೇ, ಈ ಸಮಸ್ಯೆ ಬಹಳ ದಿವಸಗಳಿಂದ ನಡೆದುಕೊಂಡು ಬಂದಿದೆ. ಈ ಸಮಸ್ಯೆ ಗಹನವಾಗಿದೆ. ಅನುದಾನ ರಹಿತ ಶಾಲಾ–ಕಾಲೇಜುಗಳನ್ನು 1994–95ರವರೆಗೆ ಅನುದಾನಕ್ಕೆ ಒಳಪಡಿಸಬೇಕೆನ್ನುವುದು ಅಂದಿನ ಸರ್ಕಾರದ ಉದ್ದೇಶವಾಗಿತ್ತು. ಆ ರೀತಿ ಮಾಡುತ್ತೇವೆನ್ನುವ ಅಭಿಪ್ರಾಯವನ್ನು ಇಲ್ಲಿ ಹೇಳಿದ್ದರು. ಎರಡು–ಮೂರು ಸಲ ಸಭೆ ನಡೆದು, ಮಾನ್ಯ ಕಾಗೇರಿಯವರೂ ಕೂಡ ಅದಕ್ಕೆ ಒಪ್ಪಿಗೆಯನ್ನು ಸೂಚಿಸಿದರು. ನಾನು ಸಭಾಪತಿಯಾಗಿದ್ದಾಗ ಎಲ್ಲಾ ಚುನಾಯಿತ ಶಿಕ್ಷಕರ ಹಾಗೂ ಪದವೀಧರ ಕ್ಷೇತ್ರದ ಪ್ರತಿನಿಧಿಗಳನ್ನು, ಸರ್ಕಾರದ ಉನ್ನತ ಶಿಕ್ಷಣ ಸಚಿವರನ್ನು ಹಾಗೂ ಪ್ರಾಥಮಿಕ ಶಿಕ್ಷಣ ಸಚಿವರನ್ನು ಎಲ್ಲರನ್ನು ಕರೆದು ವಿಚಾರಣೆ ಮಾಡಿ ಈ ಕೆಲಸ ಮಾಡುವುದಾಗಿ ಹೇಳಿದರು. ಈಗಾಗಲೇ ಅದನ್ನು ಕೊಡುವುದಕ್ಕೆ ಮಾನ್ಯ ಹೊರಟ್ಟಿಯವರು ಹೇಳಿದ ಹಾಗೇ ಪ್ರಾರಂಭ ಮಾಡಿದ್ದರು. ಆದರೆ, ದುರ್ದೈವ ಆಗ ಹದಿಮೂರು ಜಿಲ್ಲೆಗಳಲ್ಲಿ ಕಂಡು ಅರಿಯದೆ ಇರುವಂತಹ ಭೀಕರ ಪ್ರವಾಹ ದುರಂತದಿಂದ ಅಲ್ಲಿ ಆರ್ಥಿಕವಾಗಿ ತೊಂದರೆಯಾಗತಕ್ಕಂಥ ಪರಿಸ್ಥಿತಿ ಬಂದು ಮಿತವ್ಯಯವನ್ನು ಘೋಷಿಸಿದರು. ಆದರೆ, ತಕ್ಷಣ ಅನುದಾನಕ್ಕೆ ಒಳಪಡಿಸುತ್ತೇವೆ ಎನ್ನುವ ಅಭಿಪ್ರಾಯವನ್ನು ಹೇಳಿದ್ದರು. ಇವತ್ತಿನವರೆಗೆ ಆಗಿಲ್ಲ. ಹೊರಟ್ಟಿಯವರು ಅಮರಣಾಂತ ಉಪವಾಸಕ್ಕೆ ಕುಳಿತ್ತಿದ್ದಾಗ ನಾನು ಅಂದಿನ ಮುಖ್ಯಮಂತ್ರಿಗಳ ಜೊತೆ, ಸಭಾನಾಯಕರಾದ ಆಚಾರ್ಯರವರ ಜೊತೆ, ಕಾಗೇರಿಯವರ ಜೊತೆ, ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರಾದಂತಹ ಜಗದೀಶ್ ಶೆಟ್ಟರ್ ಜೊತೆ ಮಾತನಾಡಿ, 'ಇದಕ್ಕೊಂದು ಪರಿಹಾರವನ್ನು ಪಕ್ಷಾತೀತಾವಾಗಿ

ಕಂಡುಹಿಡಿಯಿರಿ, ಶಿಕ್ಷಕರ ನೋವಿಗೆ ನಾವು ಸ್ಪಂದಿಸುವ ಕೆಲಸ ಮಾಡೋಣ' ಎನ್ನುವ ಅಭಿಪ್ರಾಯವನ್ನು ಹೇಳಿದ ಮೇಲೆ, 'ಮಾನ್ಯ ಮುಖ್ಯಮಂತ್ರಿಗಳು ಸಭೆ ಕರೆಯುತ್ತಾರೆ ಎಲ್ಲರೂ ಹೋಗಿ ಚರ್ಚೆ ಮಾಡೋಣ' ಎಂದು ಅವರಿಗೆ ಹೇಳಿದ್ದೆ. ಆಮೇಲೆ ಜಿಲ್ಲಾಧಿಕಾರಿಗಳ ಮೂಲಕ ಹೊರಟ್ಟಿಯವರಿಗೆ ಪತ್ರ ಕಳುಹಿಸಿದರು. ಆಮೇಲೆ ಮುಖ್ಯಮಂತ್ರಿಗಳು ಕಾಗೇರಿಯವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಮಾಡುವುದಕ್ಕೆ ಹೇಳುತ್ತೇನೆ ಎಂದು ಹೇಳಿದರು. ಅಲ್ಲಿ ಕೆಲವು ಜನರ ಅಭಿಪ್ರಾಯದ ಮೇರೆಗೆ ನಾವು ಸಭಾಪತಿಗಳಾದ ಮಾನ್ಯ ಶಂಕರಮೂರ್ತಿಯವರಿಗೆ ವಿನಂತಿ ಮಾಡಿಕೊಂಡೆವು. ಅವರು ಸಭೆಯನ್ನು ಕರೆದರು. ಆ ಸಭೆಯಲ್ಲಿಯೂ ಈ ನಿರ್ಧಾರವಾಗಿತ್ತು. ಇವತ್ತು ಸಹ ಈ ಪ್ರಕ್ರಿಯೆ ತಡವಾಗುತ್ತಿದೆ. ಇದರಿಂದ ಏನಾಗುತ್ತದೆ ಎಂದರೆ ಬಹಳಷ್ಟು ಜನ ಶಿಕ್ಷಕರು ನಿವೃತ್ತಿ ಹೊಂದುವ ಹಂತದಲ್ಲಿದ್ದಾರೆ. ಯಾವುದೇ ರೀತಿಯ ಆರ್ಥಿಕ ಅನುಕೂಲತೆಗಳಿಲ್ಲದೆ ಬಹಳಷ್ಟು ತೊಂದರೆಗೊಳಗಾಗಿ ಸಂಕಷ್ಟದಲ್ಲಿದ್ದಾರೆ. ಈ ಸಮಸ್ಯೆಯ ತೀವ್ರಗತಿಯನ್ನು ಅರಿತು, ಮಾನ್ಯ ಕಾಗೇರಿಯವರೇ, ಹಣಕಾಸು ಇಲಾಖೆಯ ಬೆಂಬಲವಿಲ್ಲದೆ ನೀವು ಇದನ್ನು ಮಾಡುವುದಕ್ಕಾಗುವುದಿಲ್ಲ. ಈ ಸತ್ಯ ನಿಮಗೂ ಗೊತ್ತಿದೆ. ಅದಕ್ಕೋಸ್ಕರ ನಾನು ಹೇಳುತ್ತೇನೆ, ಹಣಕಾಸಿನ ಇಲಾಖೆ ಮಾನ್ಯ ಮುಖ್ಯಮಂತ್ರಿಗಳ ಕೈಯಲ್ಲಿದೆ. ಕಡೆಗೆ ಆವರ್ತ ನಿಧಿಯಿಂದಲಾದರೂ ಹಣವನ್ನು ಕೊಟ್ಟು, ಅದನ್ನು ವಿಶೇಷ ಪ್ರಕರಣವೆಂದು ಕನ್ಸಿಡರ್ ಮಾಡಿ ಈ ಸಮಸ್ಯೆಯನ್ನು ತಕ್ಷಣ ಪರಿಹಾರ ಮಾಡುವಂತಹ ವ್ಯವಸ್ಥೆಯಾಗಬೇಕು. ಈ ದಿಸೆಯಲ್ಲಿ ಉಳಿದ ವಿಚಾರಗಳನ್ನು ಇನ್ನಿತರ ಸದಸ್ಯರು ಹೇಳುತ್ತಾರೆ. ಈ ಸಮಸ್ಯೆಯ ತೀವ್ರತೆ ಇಷ್ಟಿದೆ. ಈ ನಿಟ್ಟಿನಲ್ಲಿ ಶಿಕ್ಷಣ ಸಚಿವರಿಗೆ ಮನಸ್ಸಿದ್ದರೂ ಹಣಕಾಸು ಇಲಾಖೆ, ಮತ್ತು ಮುಖ್ಯಮಂತ್ರಿಗಳ ಒಪ್ಪಿಗೆ ಇಲ್ಲದೆ ಪರಿಹರಿಸುವುದಕ್ಕಾಗುವುದಿಲ್ಲ. ಆ ದೃಷ್ಟಿಯಿಂದ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳಿಗೆ ಜನ ಸಾಮಾನ್ಯರ ಬಗ್ಗೆ ಸ್ಪಂದಿಸತಕ್ಕಂಥ ಗುಣವಿದೆ. ಮಾನ್ಯ ಮುಖ್ಯಮಂತ್ರಿಗಳು, 'ನಾನು ಬದಲಾವಣೆ ಮಾಡುತ್ತೇನೆ, ಎಲ್ಲರ ಸಮಸ್ಯೆಗಳಿಗೆ ಸ್ಪಂದಿಸುತ್ತೇನೆ, ಎರಡೂ ಸದನಗಳನ್ನು ಸುಸೂತ್ರವಾಗಿ ನಡೆಸಿ, ಉತ್ತಮವಾದ

ಚರ್ಚೆಯನ್ನು ಮಾಡುತ್ತೇವೆ' ಎನ್ನುವ ಅಭಿಪ್ರಾಯವನ್ನು ಹೇಳಿದ್ದರು. ಈ ಭಾಗದ ಎಲ್ಲಾ ನಾಯಕರು ಸಂಪೂರ್ಣವಾದ ಸಹಕಾರವನ್ನು ಕೊಡುತ್ತೇವೆಂದು. ಆವತ್ತೂ ಸಹ ನಾವು ಮಾನ್ಯ ಮುಖ್ಯಮಂತ್ರಿಗಳಿಗೆ ತಿಳಿಸಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಜನರ ಸಮಸ್ಯೆಗಳಿಗೆ ಸ್ಪಂದಿಸಲಿ. ಆ ರೀತಿಯ ಸಮಸ್ಯೆ ಇದೆ. ಇದು ಬಹಳ ತೀವ್ರಗತವಾದ ಸಮಸ್ಯೆ. ದಯಮಾಡಿ ಇದಕ್ಕೆ ಹಣಕಾಸು ಇಲಾಖೆಯ ಮಂತ್ರಿಯಾಗಿ, ಮುಖ್ಯಮಂತ್ರಿಗಳಾಗಿ ಬೆಂಬಲಿಸಿ ಶಿಕ್ಷಕರ ಸಮಸ್ಯೆಯನ್ನು ಪರಿಹರಿಸಬೇಕು, ಅನುದಾನಕ್ಕೆ ಒಳಪಡಿಸಿ ತೀವ್ರಗತಿಯಿಂದ ಕೆಲಸ ಆಗಬೇಕೆನ್ನುವ ವಿನಂತಿಯನ್ನು ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ಮಾನ್ಯ ಶಿಕ್ಷಣ ಸಚಿವರಿಗೆ ಮಾಡುತ್ತೇನೆ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಹೆಚ್ಚು ಎಳೆಯುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ವಿಷಯ ಎಲ್ಲರಿಗೂ ಗೊತ್ತಿದೆ. ಆದರೆ, ಕೇವಲ ಎರಡು ವಿಷಯಗಳನ್ನು ಹೇಳುತ್ತೇನೆ 1992-93 ರವರೆಗೆ ಅನುದಾನ ಕೊಡತಕ್ಕಂಥದ್ದು. 2007 ರ ಬಜೆಟ್‌ನಲ್ಲಿ ಪ್ರಕಟವಾಯಿತು. 1993 ರಿಂದೀಚೆಗೆ ಬಂದಿರತಕ್ಕಂಥ ಸತತವಾಗಿ ಚೆನ್ನಾಗಿ ನಡೆಯುತ್ತಿರುವಂತಹ ಶಾಲೆಗಳಿಗೆ ಅನುದಾನ ಕೊಡುತ್ತೇವೆಂದು 50 ಕೋಟಿ ರೂಪಾಯಿಗಳನ್ನು ಎತ್ತಿಟ್ಟಿದ್ದರು. ನಂತರ 1994-95 ರವರೆಗೆ ವಿಸ್ತರಣೆ ಮಾಡಿ ಆ 50 ಕೋಟಿ ರೂಪಾಯಿಗಳನ್ನು ಅದಕ್ಕೆ ಬಳಸಿಕೊಳ್ಳುವುದಕ್ಕೆ ಆದೇಶ ಹೊರಡಿಸಿದರು. ಆದರೆ, ಇವತ್ತು ಏನಾಗಿದೆ ಎಂದರೆ, ಯಾರ್‍ಯಾರು ಮೊದಲು ಬಂದರು ಅಥವಾ ಮೊದಲು ಕಡತಗಳು ಬಂದವು 1987 ರಿಂದ 1995 ರವರೆಗೆ ಎಲ್ಲಾ ಕಡತಗಳು ಕ್ಲಿಯರ್ ಆದವು. ಯಾರು ಮಾಡಿಸಿಕೊಳ್ಳುವುದಕ್ಕೆ ಶಕ್ತಿ ಇಲ್ಲವೋ ಅಂತಹ ಕಡತಗಳು ಕ್ಲಿಯರ್ ಆಗಲಿಲ್ಲ. ಅವೆಲ್ಲವೂ ಕೂಡ ಮಂತ್ರಿಗಳ ಕಚೇರಿಗಳಲ್ಲಿ, ಸಚಿವಾಲಯಗಳಲ್ಲಿ ನಿಂತು ಹೋಗಿವೆ. ನೆರೆ ಹಾವಳಿ ಬಂದ ಮೇಲೆ ಆರ್ಥಿಕ ಮಿತವ್ಯಯ ಹಾಕಿಕೊಂಡಿರುವುದನ್ನು ಪ್ರತಿ ಸಲ ಅಧಿವೇಶನ ನಡೆದಾಗಲೂ ಕೂಡ ಅತೀ ಶೀಘ್ರವಾಗಿ ಮಾಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. 'ಅತೀ ಶೀಘ್ರ' ಎನ್ನುವ ಅರ್ಥ ನನಗೆ ಗೊತ್ತಿಲ್ಲ.

'ಅತೀ ಶೀಘ್ರ' ಎನ್ನುವುದು ಯಾವ ರೀತಿ ತಿಳಿದುಕೊಂಡಿದ್ದಾರೆಯೋ ಗೊತ್ತಿಲ್ಲ. ಮಾನ್ಯ ಸಭಾಪತಿಯವರಾದ ಶಂಕರಮೂರ್ತಿಯವರ ಅಧ್ಯಕ್ಷತೆಯಲ್ಲಿ ಒಂದು ಸಭೆ ನಡೆಯಿತು. ಆ ಸಭೆಯಲ್ಲೂ ಕೂಡ' ಜೂನ್ ಒಳಗೆ ನಾವು ಆದೇಶವನ್ನು ಹೊರಡಿಸುತ್ತೇವೆ' ಎಂದು ತಾವೂ ಕೂಡ ಮಾತನಾಡಿ ಹೇಳಿದ್ದೀರಿ. ಅದಕ್ಕೂ ಕೂಡ ಯಾವುದೇ ರೀತಿಯಾದಂತಹ ಆದೇಶವಾಗಲಿ, ಮತ್ತೊಂದಾಗಲಿ ಏನು ಬರಲಿಲ್ಲ. ಇದೆಲ್ಲಾ ಆದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಅಕ್ಟೋಬರ್ 2011 ರಂದು ಒಂದು ಸಭೆಯನ್ನು ಮಾಡಿದರು. ತಾವು ಕೂಡ ಆ ಸಭೆಯಲ್ಲಿ ಇದ್ದೀರಿ. ಸುಮಾರು 500–600 ಜನ ಶಿಕ್ಷಕರು ಬಂದಿದ್ದರು. ಎಲ್ಲಾ ವಿಧಾನ ಪರಿಷತ್ತಿನ ಸದಸ್ಯರುಗಳು, ಪದವೀಧರ ಮತ್ತು ಶಿಕ್ಷಕರ ಕ್ಷೇತ್ರದ ಸದಸ್ಯರುಗಳು ಎಲ್ಲರನ್ನು ಕರೆಸಿದ್ದೀರಿ. ಅಲ್ಲೂ ಕೂಡ ಮಾನ್ಯ ಮುಖ್ಯಮಂತ್ರಿಗಳು 1994–95 ರವರೆಗೆ ವೇತನ ಅನುದಾನವನ್ನು ಕೊಡುತ್ತೇವೆಂದು ಪ್ರಕಟ ಮಾಡಿದರು. ಆದರೆ, ಇದುವರೆಗೂ ಕೂಡ ಆದೇಶವಾಗಿಲ್ಲ. ಈ ಆರ್ಥಿಕ ಮಿತವ್ಯಯ ಶಿಕ್ಷಣ ಇಲಾಖೆಯ ಶಿಕ್ಷಕರಿಗೆ ಅನುದಾನ ಕೊಡುವುದಕ್ಕೆ ಅಥವಾ ಶಿಕ್ಷಕರನ್ನು ಭರ್ತಿ ಮಾಡುವುದಕ್ಕೆ ಎಷ್ಟರಮಟ್ಟಿಗೆ ಸರಿ ಎಂಬುದನ್ನು ತಾವೇ ಯೋಚನೆ ಮಾಡಿ. ಮಕ್ಕಳಿಗೆ ಪಾಠ ಮಾಡುವುದು ಬೇಡವೇ? ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ, ಮಾನ್ಯ ಯಡಿಯೂರಪ್ಪನವರು ಉಪ ಮುಖ್ಯಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ಈ ಪೆನ್‌ಷನ್ ಸ್ಕೀಮ್ ವೇತನವನ್ನು ಪಡೆಯತಕ್ಕಂಥ ಶಿಕ್ಷಣ ಸಂಸ್ಥೆಯಲ್ಲಿ ಕೆಲಸ ಮಾಡತಕ್ಕಂಥವರಿಗೆ ಹದಿನೈದು ವರ್ಷ ಸರ್ವಿಸ್ ಬರುವುದಿಲ್ಲವೆಂದು ಹತ್ತು ವರ್ಷಕ್ಕೆ ಪೆನ್‌ಷನ್ ಸ್ಕೀಮ್‌ನ್ನು ಇಂಟ್ರಡ್ಯೂಸ್ ಮಾಡಿದರು.

(5.00 ಗಂಟೆಗಳು)

ಈಗ ನೀವು ಮಾಡುತ್ತಿರುವುದನ್ನು ನೋಡಿದರೆ ಅವರ ಸೇವಾ ಅವಧಿ 10 ವರ್ಷಗಳು ಬರುವುದಿಲ್ಲ 6–7 ವರ್ಷಗಳು ಬರುತ್ತವೆ. ಕೊನೆಗೆ ಅವರು ಏನು ಮಾಡಬೇಕು? ಈ ರೀತಿಯ ಪರಿಸ್ಥಿತಿ ಉಂಟಾಗಿದೆ. ಈ ಸಂಬಂಧ ಚಳುವಳಿಗಳು ಸಹ ಆಗಿವೆ. ಜೊತೆಗೆ ಎಲ್ಲವೂ ನಿಮಗೆ ಗೊತ್ತಿದೆ. ಗೊತ್ತಿಲ್ಲದೆ ಇರುವುದು ಏನೂ ಇಲ್ಲ. ಆದ್ದರಿಂದ, ತಮ್ಮ ಮೂಲಕ ಕೇಳುವುದೇನೆಂದರೆ

ಅನುದಾನ ಕೊಡುವುದರ ಬಗ್ಗೆ ಇವತ್ತೇ ಆದೇಶ ಮಾಡಬೇಕು. 1994–95ರವರೆಗೆ ಏನು ಅನುದಾನವನ್ನು ಕೊಡುತ್ತೇವೆಂದು ಬಜೆಟ್‌ನಲ್ಲಿ ಹೇಳಿದ್ದೀರಿ. ಸರ್ಕಾರಿ ಆದೇಶ ಮಾಡಿ ತಂದಿದ್ದೀರಿ, ಅದರ ಪ್ರಕಾರ 1994–95ರವರೆಗೆ ವೇತನ ಅನುದಾನವನ್ನು ಬಿಡುಗಡೆ ಮಾಡಲಿಕ್ಕೆ ತಾವು ಕೂಡಲೇ ಕ್ರಮವನ್ನು ಕೈಗೊಳ್ಳಬೇಕು. ಈ ಬಗ್ಗೆ ಇವತ್ತೇ ಪ್ರಕಟಿಸಬೇಕು.

ಮಾನ್ಯ ಮುಖ್ಯಮಂತ್ರಿಗಳು ನಾನು ಹೇಳುವುದನ್ನು ಗಮನಿಸಬೇಕು. ತಾವು ಕೂಡ ಆಶ್ವಾಸನೆ ಕೊಟ್ಟಿದ್ದನ್ನು ನಾನು ತಮಗೆ ನೆನಪು ಮಾಡುತ್ತಿದ್ದೇನೆ. ತಾವು ಸಹ ಸೆಮಿನಾರ್ ಹಾಲ್‌ನಲ್ಲಿ ಒಂದು ಸಭೆಯನ್ನು ಮಾಡಿ, ಆ ಸಭೆಯಲ್ಲಿ, "ನನ್ನ ಮೇಲೆ ವಿಶ್ವಾಸ ಇಡಿ 1994–95ರವರೆಗೆ ವೇತನ ಅನುದಾನಕ್ಕೆ ಒಳಪಡಿಸುತ್ತೇನೆ" ಎಂದು ತಾವು ಹೇಳಿದ್ದೀರಿ. ಆದರೆ, ಇದುವರೆವಿಗೂ ಆದೇಶ ಬರಲಿಲ್ಲ. ನಮ್ಮ ಶಿಕ್ಷಕ ಬಂಧುಗಳು ಈ ಸಂಬಂಧ ಅಮರಣಾಂತ ಉಪವಾಸ ಸತ್ಯಾಗ್ರಹ ಪ್ರಾರಂಭ ಮಾಡಿದ್ದಾರೆ. ಅದು ಈಗಾಗಲೇ 152 ದಿವಸಗಳಿಗೆ ತಲುಪಿದೆ. ಆದ್ದರಿಂದ, ದಯಮಾಡಿ ಇವತ್ತೇ ನೀವು ಕೂಡಲೇ ಒಂದು ಆದೇಶ ಮಾಡುವುದರ ಮೂಲಕ 1994–95ರವರೆಗೆ ವೇತನ ಅನುದಾನಕ್ಕೆ ಒಳಪಡಿಸುವಂತಹ ಕೆಲಸವನ್ನು ನೀವು ಮಾಡಿಕೊಡಬೇಕು. ಇಲ್ಲದಿದ್ದರೆ, ಅವರು ಅಲ್ಲಿ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದರೆ ನಾವುಗಳು ಅಧಿವೇಶನದೊಳಗೆ ಧರಣಿ ಮಾಡುವಂತಹ ಕೆಲಸವನ್ನು ನಾನು ಮಾಡುತ್ತೇನೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಉಳಿದ ವಿಚಾರವನ್ನು ನಮ್ಮ ಸ್ನೇಹಿತರು ಮಾತನಾಡುತ್ತಾರೆ.

**ಶ್ರೀ ಮಹಂತೇಶ್ ಶಿವಾನಂದ ಕೌಜಲಗಿ:–** ಮಾನ್ಯ ಸಭಾಪತಿಯವರೆ,.......

**ಉಪ ಸಭಾಪತಿಯವರು:–** ಒಂದು ನಿಮಿಷ ಮಹಂತೇಶ್‌ರವರೆ, ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ಮಾತನಾಡಲಿ, ನಂತರ ನಿಮಗೆ ಅವಕಾಶವನ್ನು ಕೊಡುತ್ತೇನೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೆ, ನಾನು ಮಾತನಾಡಬೇಕು.

**ಉಪ ಸಭಾಪತಿಯವರು:–** ಶ್ರೀಯುತ ಮರಿತಿಬ್ಬೇಗೌಡರವರೆ, ತಾವು ಈ ವಿಷಯವಾಗಿ ಮಾತನಾಡುವ ಸಂಬಂಧ ತಾವು ಸಹಿ ಮಾಡಿದ್ದೀರಿ. ನಾನು ಖಂಡಿತವಾಗಿಯೂ ಸಹ ನಿಮಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಡುತ್ತೇನೆ. ತಾವು ಸಹ ಅದೇ ಕ್ಷೇತ್ರದಿಂದ ಬಂದವರಾಗಿದ್ದೀರಿ. ಆ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದೀರಿ. ಇಲ್ಲಿ ಏನಾಗಿದೆ ಎಂದರೆ ವಿದ್ಯಾ ಕ್ಷೇತ್ರದಿಂದ ಆರಿಸಿ ಬಂದಂತಹವರು ಮತ್ತು ಅಲ್ಲಿ ಕೆಲಸ ಮಾಡುವಂತಹ ಹೆಚ್ಚು ಜನ ಜನಪ್ರತಿನಿಧಿಗಳು ಇರುವುದರಿಂದ ಎಲ್ಲರೂ ಕೈ ಎತ್ತುತ್ತಿದ್ದಾರೆ. ಎಲ್ಲರಿಗೂ ಮಾತನಾಡಲಿಕ್ಕೆ ಅವಕಾಶವನ್ನು ಕೊಡಬೇಕಾಗುತ್ತದೆ. ನೋಟೀಸ್‌ಗೆ ಸಹಿ ಮಾಡಿರುವವರು ಆದಷ್ಟು ಬೇಗ ಮಾತು ಮುಗಿಸಿದರೆ, ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿದ್ದಾಗಲೇ ಅವರಿಂದ ಆಶ್ವಾಸನೆಯನ್ನು ತೆಗೆದುಕೊಳ್ಳಬಹುದಾಗಿದೆ. ಇಲ್ಲದಿದ್ದರೆ ಕಷ್ಟವಾಗುತ್ತದೆ. ನಾನು ಮೊದಲೇ ಹೇಳಿದ್ದೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೇ, ನಿಯಮ 330ರಡಿಯಲ್ಲಿ ಮಾತನಾಡಬೇಕೆಂದು ಎದ್ದು ನಿಂತಿದ್ದೇನೆ. ಬೇಗ ಮುಗಿಸಬೇಕೆಂದು ಹೇಳುತ್ತಿದ್ದೀರಿ. ಬೆಳಿಗ್ಗೆ ಗಂಟೆಗಟ್ಟಲೆ ಮಾತನಾಡಲಿಕ್ಕೆ ಅವಕಾಶವನ್ನು ಕೊಡುತ್ತೀರಿ. ಹಿಂದುಗಡೆ ಕುಳಿತುಕೊಂಡವರಿಗೆ ಯಾವಾಗಲೋ ಒಂದು ಬಾರಿ ಮಾತನಾಡಲಿಕ್ಕೆ ಅವಕಾಶ ಸಿಗುತ್ತದೆ. ಈಗ ನಾವು ಮಾತನಾಡುವಾಗ ನೀವು ಎರಡು ನಿಮಿಷಗಳಲ್ಲಿ ಮುಗಿಸಿ ಎಂದು ಹೇಳಿದರೆ ಹೇಗೆ?

**ಉಪ ಸಭಾಪತಿಯವರು:–** ಎಲ್ಲರಿಗೂ ಅವಕಾಶ ಸಿಗಬೇಕೆಂದು ಹೇಳುತ್ತಿದ್ದೇನೆ. ನಾನು ಮಾತನಾಡಬೇಡಿ ಎಂದು ಹೇಳಲಿಲ್ಲ. ತಾವು ಏತಕ್ಕೆ ಆ ರೀತಿ ಅರ್ಥ ಮಾಡಿಕೊಳ್ಳುತ್ತೀರಿ?

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೇ, ಉಳಿದವರು ಹೇಳಬಹುದು, ಕಾರ್ಣಿಕ್ ರವರು ಆ ರೀತಿ ಹೇಳುವುದರಲ್ಲಿ ಅರ್ಥ ಇಲ್ಲ. ಏಕೆಂದರೆ, ಯಾವಾಗಲೂ ಮಾತನಾಡಿದ್ದಾರೆ ಮತ್ತು ಎಲ್ಲಾ ವಿಷಯದ ಮೇಲೂ ಮತ್ತು ಶ್ರೀಮತಿ ಭಾರತಿಶೆಟ್ಟಿಯವರು ಮಾತನಾಡಿದ್ದಾರೆ.

**ಉಪ ಸಭಾಪತಿಯವರು:–** ಆ ರೀತಿ ಅರ್ಥೈಸಿವುದು ಬೇಡ. ಎಲ್ಲರಿಗೂ ಅವಕಾಶ ಸಿಗಲೆಂದು ಹೇಳಿದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ ಅವಕಾಶ ಕೊಟ್ಟಿದ್ದಕ್ಕಾಗಿ ಮೊದಲಿಗೆ ತಮಗೆ ವಂದಿಸುತ್ತೇನೆ. ಬಹಳ ಸಂಗತಿಗಳನ್ನು ಮಾನ್ಯ ಬಸವರಾಜ ಹೊರಟ್ಟಿಯವರು, ಮಾನ್ಯ ಪುಟ್ಟಣ್ಣನವರು ಉಲ್ಲೇಖ ಮಾಡಿದ್ದಾರೆ. ಪ್ರಶ್ನೆ ಇರುವಂತಹದ್ದು ಸರ್ಕಾರ 2006–07 ಮತ್ತು 2007–08ರ ಬಜೆಟ್‌ನಲ್ಲಿ ಏನು 1995ರವರೆಗೆ ಪ್ರಾರಂಭವಾದ ಅರ್ಹ ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಕಾಲೇಜುಗಳಿಗೆ ಅನುದಾನ ಕೊಡುತ್ತೇವೆಂದು ಘೋಷಣೆ ಮಾಡಿದೆ. ಹೀಗಾಗಿ, ಅದರ ಬಗ್ಗೆ ಬದ್ಧತೆ ಇರುವಂತಹ ಪ್ರಶ್ನೆ ಇಲ್ಲಿದೆ. ಈ ರೀತಿ ಘೋಷಣೆ ಮಾಡಿ ಇಲ್ಲಿಗೆ ನಾಲ್ಕು ವರ್ಷಗಳು ಕಳೆದವು. ಪ್ರತಿಭಟನೆ ಬೇರೆ ಬೇರೆ ಹಂತದಲ್ಲಿ, ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ನಡೆದಿವೆ. ನಾವೆಲ್ಲರೂ ಸೇರಿಕೊಂಡು ಹಲವು ಬಾರಿ ಮುಖ್ಯಮಂತ್ರಿಗಳನ್ನು, ಶಿಕ್ಷಣ ಮಂತ್ರಿಗಳನ್ನು, ಮತ್ತು ಅಧಿಕಾರಿಗಳನ್ನು ಭೇಟಿಯಾದರೂ ಕೂಡ ಕೇವಲ ಆಶ್ವಾಸನೆ ಸಿಗುತ್ತದೆಯೇ ಹೊರತು, ಎಲ್ಲಿಯೂ ಕೂಡ ಇದನ್ನು ಇವತ್ತೇ ಮಾಡುತ್ತೇವೆ ಎಂದು ಸ್ಪಷ್ಟವಾಗಿ ಹೇಳಿಲ್ಲ. ಹಿಂದೆ 699 ಶಾಲೆಗಳಿಗೆ ಅನುದಾನ ಕೊಡಬೇಕಾದರೆ ಯಾವ ಒಂದು ಮಾನದಂಡವೂ ಇರಲಿಲ್ಲ. 1987 ರಿಂದ 1995ರವರೆಗೆ ಪ್ರಾರಂಭವಾದ ಶಾಲೆಗಳಿಗೆ ವೇತನ ಅನುದಾನ ಕೊಟ್ಟರು. ಆದಾದ ಮೇಲೆ ಎರಡನೆ ಹಂತಕ್ಕೆ ಬರಬೇಕಾದರೆ 1991ರವರೆಗೆ ಕೊಡುತ್ತೇವೆಂದು ಆರ್ಥಿಕ ಇಲಾಖೆಯವರು ಷರತ್ತುಗಳನ್ನು ಹಾಕುತ್ತಾರೆ. ಈ ಪ್ರಶ್ನೆ ಇರುವಂತಹದ್ದು ಶಿಕ್ಷಣ ಕ್ಷೇತ್ರದ್ದು. ಇಷ್ಟು ದುಡ್ಡು ಕೊಡುತ್ತೇವೆಂದು ಆರ್ಥಿಕ ಇಲಾಖೆಯವರು ಹೇಳಿದರೆ ನಮಗೇನೂ ಅಭ್ಯಂತರವಿಲ್ಲ. 'ಯಾರಿಗೆ ಕೊಡಬೇಕು., ಎಷ್ಟರವರೆಗೆ

ಕೊಡಬೇಕು, 1991ರವರೆಗೆ ಮಾತ್ರ ಕೊಡಿ' ಎಂದು ಷರತ್ತು ಹಾಕಿದ್ದನ್ನು ಕೇಳಿಕೊಂಡು ಶಿಕ್ಷಣ ಇಲಾಖೆ ಸುಮ್ಮನೆ ಕುಳಿತುಕೊಂಡಿದೆ.

ಮಾನ್ಯ ಸಭಾಪತಿಯವರೇ, ಯಾವತ್ತು ಅನುದಾನ ಸಿಗುತ್ತದೆ ಎಂದು ಆಯಿತು. ಅಂದಿನಿಂದ ಇಲ್ಲಿಯವರೆಗೆ ಈ ಎಲ್ಲಾ ಶಾಲೆಯ ಶಿಕ್ಷಕರುಗಳು ಬಿಇಓ ಕಚೇರಿಯಲ್ಲಿ ಡಿಡಿಪಿಐ ಆಫೀಸ್‌ನಲ್ಲಿ ಆಯುಕ್ತರ ಕಚೇರಿಯಲ್ಲಿ, ಶಿಕ್ಷಣ ಇಲಾಖೆಯಲ್ಲಿ ನೇರವಾಗಿ ಆ ಒಂದು ಫೈಲ್ ಅನ್ನು ನೋಡಿಕೊಂಡು ಅವರ್‍ಯಾರು ಸಹ ಪಾಸ್ ಮಾಡಿಸಿಕೊಂಡು ಬಂದಿಲ್ಲ. ಇಷ್ಟೊಂದು ಹಿಂಸೆಯನ್ನು ಅವರು ಅನುಭವಿಸಿದ್ದಾರೆ. ಇಷ್ಟು ದುಡ್ಡು ವೆಚ್ಚ ಮಾಡಿಕೊಂಡು ಬಂದಿದ್ದಾರೆ. ಮಾನ್ಯ ಶಿಕ್ಷಣ ಮಂತ್ರಿಗಳು ಸಹಿ ಮಾಡಿ 100-128 ಫೈಲ್‌ಗಳನ್ನಿಟ್ಟುಕೊಂಡಿದ್ದಾರೆ. ಆ ಫೈಲ್‌ಗಳನ್ನು ಇವತ್ತು ಕ್ಲಿಯರ್ ಮಾಡಲಿಕ್ಕೆ ಆಗುತ್ತಿಲ್ಲ. ಆದಕಾರಣ, ಬಜೆಟ್‌ನಲ್ಲಿ ಘೋಷಣೆ ಮಾಡಿರುವುದನ್ನು ಸರ್ಕಾರ ಅನುಷ್ಠಾನಗೊಳಿಸುವ ಬಗ್ಗೆ ತನ್ನ ಇಚ್ಛಾಶಕ್ತಿಯನ್ನು ಪ್ರದರ್ಶನ ಮಾಡುತ್ತದೆಯೇ ಎನ್ನುವುದು ಒಂದನೆಯ ಪ್ರಶ್ನೆ.

ಎರಡನೆಯದಾಗಿ, ಸದಸ್ಯರಾದ ಶ್ರೀಯುತ ಬಸವರಾಜ ಹೊರಟ್ಟಿಯವರು ಉಪವಾಸ ಕುಳಿತುಕೊಂಡಿದ್ದರು. ಈಗ 50 ದಿವಸಗಳಿಂದ ಅಲ್ಲಿ ಶಿಕ್ಷಕರು ಸರದಿ ಪ್ರಕಾರ ಎಲ್ಲಾ ಕಡೆಗಳಿಂದ ಹೋಗಿ ಉಪವಾಸವನ್ನು ಮಾಡುತ್ತಿದ್ದಾರೆ. ಅವರು ಹೇಳಿದ್ದನ್ನು ಕೇಳಿ ನನಗೆ ಗಾಬರಿಯಾಯಿತು. ನಮಗೆ ಅನುದಾನ ಸಿಗುವವರೆಗೂ ನಾವು ನಮ್ಮ ಉಪವಾಸ ಸತ್ಯಾಗ್ರಹವನ್ನು ನಿಲ್ಲಿಸುವುದಿಲ್ಲ ಎನ್ನುವಂತಹ ಮಾತನ್ನು ಹೇಳಬೇಕಾದರೆ, ಈ ರಾಜ್ಯದ ಶಿಕ್ಷಕರಿಗೆ ನಾವು ಏನು ಒಂದು ಸಂದೇಶವನ್ನು ಕಳುಹಿಸುತ್ತಿದ್ದೇವೆ. ಅವರು ಬೀದಿಗಿಳಿದು ಚಳುವಳಿ ಮಾಡಿ ಅನುದಾನವನ್ನು ಕೊಡಿ ಎಂದು ಕೇಳಿಲ್ಲ. ಇದನ್ನು ಸರ್ಕಾರವೇ ಘೋಷಣೆ ಮಾಡಿರುವಂತಹದ್ದಾಗಿದೆ. ಮೊದಲನೆ ಬಜೆಟ್‌ನಲ್ಲಿ 1992ನೇ ಸಾಲಿನವರೆಗೆ, ಎರಡನೆಯ ವರ್ಷದ ಬಜೆಟ್‌ನಲ್ಲಿ 1995ನೇ ಸಾಲಿನವರೆಗಿನ ಶಾಲೆಗಳಿಗೆ ಅನುದಾನ ಕೊಡುತ್ತೇವೆಂದು ಹೇಳಿದರು, ಆದರೆ ಕೊಡಲಿಲ್ಲ. ಮೊದಲನೆ ಎರಡು ಬಜೆಟ್‌ನಲ್ಲಿ 120 ಕೋಟಿ ರೂಪಾಯಿಗಳ ಹಣವನ್ನು ಅನುದಾನ ಕೊಡಲಿಕ್ಕೆಂದು ಎತ್ತಿಟ್ಟಿದ್ದರು. ಆದರೆ,

ಈ ವಿಚಾರದಲ್ಲಿ ಸಮಸ್ಯೆ ಎಲ್ಲಿದೆ ಎಂದು ಮಾನ್ಯ ಶಿಕ್ಷಣ ಸಚಿವರನ್ನು ಕೇಳಲಿಕ್ಕೆ ಬಯಸುತ್ತೇನೆ.

ಇದು ತಮ್ಮ ಇಲಾಖೆಯಾಗಿದ್ದು, ಇವರು ನಿಮ್ಮ ಶಿಕ್ಷಕರು, ಅವರ ಬಗ್ಗೆ ಬಜೆಟ್ ಕೊಡಬೇಕೆಂದು ಸರ್ಕಾರ ನಿರ್ಣಯವನ್ನು ತೆಗೆದುಕೊಂಡಿದೆ. ನಾವೆಲ್ಲರೂ ಹೆಚ್ಚು ಒತ್ತಾಯ ಮಾಡುವುದಕ್ಕಿಂತ ನಿಮ್ಮ ಇಲಾಖೆಗೆ, ನೀವು ಇದನ್ನು ಮಾಡಿಸಿಕೊಡಬೇಕು. ದುರದೃಷ್ಟವಶಾತ್ ಈ ಕೆಲಸ ಆಗುತ್ತಿಲ್ಲ. ಆರ್ಥಿಕ ಇಲಾಖೆಯ ಅಧಿಕಾರಿಗಳನ್ನು ಕೇಳಿದರೆ ಶಿಕ್ಷಣ ಇಲಾಖೆಯಿಂದ ನಮಗೆ ಸರಿಯಾದ ಮಾಹಿತಿ ಸಿಕ್ಕುತ್ತಿಲ್ಲವೆಂದು ಹೇಳುತ್ತಾರೆ. ಬಜೆಟ್‌ನಲ್ಲಿ 120 ಕೋಟಿ ರೂಪಾಯಿಗಳನ್ನು ಘೋಷಣೆ ಮಾಡುವಾಗ ರಾಜ್ಯದಲ್ಲಿ 1987 ರಿಂದ 1992ನೇ ಸಾಲಿನವರೆಗೆ ಎಷ್ಟು ಶಾಲೆಗಳು ಪ್ರಾರಂಭವಾಗಿವೆ ಎಷ್ಟು ಶಾಲೆಗಳಲ್ಲಿ ಎಷ್ಟು ಶಿಕ್ಷಕರುಗಳಿದ್ದಾರೆ. ಎಷ್ಟು ದುಡ್ಡುಬೇಕು, ಎನ್ನುವ ಒಂದು ಸಣ್ಣ ವಿವೇಚನೆ ಅವರ ಇಲಾಖೆಗೆ ಇರಬೇಕಾಗಿತ್ತು. ಅದನ್ನು ಮಾಡಿಕೊಳ್ಳದೇ ನಮ್ಮ ಹತ್ತಿರ ದುಡ್ಡಿಲ್ಲವೆಂದರೆ ಅದು ಎಲ್ಲಿ ಸರಿ ಹೋಗಲಿಕ್ಕೆ ಸಾಧ್ಯವಿದೆ. ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಸರ್ಕಾರ ಇದನ್ನು ಘೋಷಣೆ ಮಾಡಿಯಾಗಿದೆ. ಯಾವುದೇ ಕಾರಣಕ್ಕೂ ಕೊಡುವುದಿಲ್ಲವೆಂದು ಹೇಳಲಿ. ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಬಜೆಟ್‌ನಲ್ಲಿ ಘೋಷಣೆಯಾಗಿರುವುದರಿಂದ ಇದನ್ನು ಕೊಡಲೇ ಬೇಕು. ಹಾಗಾದರೆ, ಅದನ್ನು ಯಾವಾಗ ಕೊಡಬೇಕು? 2006–07 ಮತ್ತು 2007–08ರ ಬಜೆಟ್‌ನ ಒಂದು ಕಾರ್ಯಕ್ರಮವನ್ನು 2011–12 ರವರೆಗೂ ಅನುಷ್ಠಾನ ಮಾಡಲಿಕ್ಕೆ ಆಗಿಲ್ಲವೆಂದರೆ ನಮ್ಮ ಪದ್ಧತಿ ಬಗ್ಗೆ ನಾವೇ ಪ್ರಶ್ನೆ ಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಈ ರೀತಿಯಲ್ಲಿ ಎಷ್ಟು ಬಾರಿ ಪ್ರಶ್ನೆ ಮಾಡಬೇಕು, ಎಷ್ಟು ಬಾರಿ ಮನವಿಯನ್ನು ಸಲ್ಲಿಸಬೇಕು, ಎಷ್ಟು ಬಾರಿ ಮೀಟಿಂಗ್‌ಗಳನ್ನು ಮಾಡಬೇಕು. ಮಾನ್ಯ ಸಭಾಪತಿಗಳಿರಬಹುದು, ಅಥವಾ ಮಾನ್ಯ ಮುಖ್ಯಮಂತ್ರಿಗಳಿರಬಹುದು ಮಾನ್ಯ ಶಿಕ್ಷಣ ಮಂತ್ರಿಗಳಿರಬಹುದು ಅಥವಾ ಚುನಾಯಿತ ಪ್ರತಿನಿಧಿಗಳಾದ ನಾವುಗಳು ಇರಬಹುದು. ನಾವು ಎಷ್ಟು ಬಾರಿ ಹೋಗಿ ವಿನಂತಿ ಮಾಡಿಕೊಳ್ಳಬೇಕು. ನನ್ನ ಒಂದೇ ಒಂದು ವಿನಂತಿ ಏನೆಂದರೆ, ಸರ್ಕಾರ ಇವತ್ತು ತನ್ನ ಇಚ್ಛಾಶಕ್ತಿಯನ್ನು

ಪ್ರದರ್ಶನ ಮಾಡಲೇಬೇಕು. ಏಕೆಂದರೆ, ಇಡೀ ರಾಜ್ಯದ ಶಿಕ್ಷಕರಿಗೆ ಒಂದು ಸಂದೇಶ ಹೋಗಬೇಕು. ಈ ಸರ್ಕಾರ ಶಿಕ್ಷಕರ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡಿದೆ. ಬಜೆಟ್‌ನಲ್ಲಿ ಘೋಷಣೆ ಮಾಡಿರುವಂತಹ ಏನು ಒಂದು ಕಾರ್ಯಕ್ರಮವಿದೆ, ಅದರ ಬಗ್ಗೆ ಬದ್ಧತೆ ಇದೆ, ಅನುದಾನವನ್ನು ಕೂಡಲೇ ಬಿಡುಗಡೆ ಮಾಡುತ್ತೇವೆಂದು ಹೇಳುವಂತಹ ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕು. ಇದರ ಜೊತೆಗೆ ಯಾವುದನ್ನು ಯಾವಾಗ ಕೊಡಬೇಕೋ ಆಗ ಕೊಟ್ಟರೆ ಮಾತ್ರ ಅದಕ್ಕೆ ಮರ್ಯಾದೆ ಇರುತ್ತದೆ. 2006ಕ್ಕೆ ಹೇಳಿದಂತಹ ಸಂಗತಿಯನ್ನು ಇಷ್ಟೆಲ್ಲಾ ಪ್ರತಿಭಟನೆ ಮಾಡಿಕೊಂಡು, ಇಷ್ಟೆಲ್ಲಾ ಗೊಂದಲವನ್ನು ನಿರ್ಮಾಣ ಮಾಡಿಕೊಂಡು ಕೊಡುವುದಕ್ಕಿಂತ ಅದನ್ನು ಕೂಡಲೇ ಕೊಡಬೇಕೆಂದು ಹೇಳುತ್ತೇನೆ. ನಾವು, '1991ರವರೆಗಿನ ಶಾಲೆಗಳಿಗೆ ಅನುದಾನ ಕೊಡಲಾಗಿದೆ. 1991ರವರೆಗೆ ನೀವು ಏತಕ್ಕೆ ಷರತ್ತು ಹಾಕಿದ್ದೀರಿ? ಎಂದು ಕೇಳಿದ್ದಕ್ಕೆ ಅವರು ಕೋರ್ಟಿಗೆ ಹೋಗುತ್ತಾರೆಂದು ಹೇಳಿದರು. ಈ ಮಾತು ಪ್ರಮುಖರಿಂದ ಬಂದಿದೆ. 669 ಶಾಲೆಗಳನ್ನು ಅನುದಾನಕ್ಕೆ ಒಳಪಡಿಸಬೇಕಾದರೆ, 1987 ರಿಂದ 1995 ರವರೆಗೆ ಅನುದಾನವನ್ನು ಕೊಟ್ಟಿದ್ದೇವೆ. ಅದರ ಆಧಾರದ ಮೇಲೆ ಯಾರೂ ಸಹ ಕೋರ್ಟಿಗೆ ಹೋಗಿಲ್ಲ. ಇವತ್ತು ಯಾವ ಫೈಲ್‌ಗಳು ಮಾನ್ಯ ಮಂತ್ರಿಗಳು ಕ್ಲಿಯರ್ ಮಾಡಿದ್ದಾರೆ. ಆ ಫೈಲ್‌ಗಳಿಗೆ ಹಂತ-ಹಂತವಾಗಿ ಬಿಡುಗಡೆ ಮಾಡುತ್ತೇವೆಂದು ಹೇಳುತ್ತಾರೆ. ಹಂತ-ಹಂತವಾಗಿ ಬಿಡುಗಡೆ ಮಾಡಲಿಕ್ಕೆ ಮೊದಲು ಮಾಡಿದಂತೆ ಏತಕ್ಕೆ ಇಟ್ಟುಕೊಂಡಿಲ್ಲ. 1987ರಿಂದ 1995ರವರೆಗಿನ ಫೈಲ್ ಕೊಡುವಾಗ ನಾವು ವರ್ಷಕ್ಕೆ ಒಂದು ಬಾರಿ ಮಾಡುತ್ತೇವೆಂದು ಮಾನದಂಡವನ್ನು ಹಾಕಿಕೊಂಡಿದ್ದರೆ ಈ ಪ್ರಶ್ನೆಯೇ ಬರುತ್ತಿರಲಿಲ್ಲ. ಮೊದಲನೆ ಬಾರಿಗೆ ಬಿಡುಗಡೆ ಮಾಡಬೇಕಾದರೆ ಎಲ್ಲರಿಗೂ ಕೊಟ್ಟರು. ಈಗ ಎರಡನೆ ಹಂತಕ್ಕೆ ಬರಬೇಕಾದರೆ ಇಲ್ಲ, ನಮ್ಮ ಮಾನದಂಡ ಬೇರೆ ಇದೆ, 1991 ರವರೆಗೆ ಕೊಡುತ್ತೇವೆ ಎನ್ನುವುದು ಸರಿಯಲ್ಲ. ನಮ್ಮ ವಿನಂತಿ ಏನೆಂದರೆ, ಇದರ ಜೊತೆಗೆ ಮತ್ತೊಂದು ಗೊಂದಲ ಸೃಷ್ಟಿಯಾಗಿದೆ. ಬಿಇಓ ಕಚೇರಿಯಲ್ಲಿ ಸ್ಕ್ರೂಟನಿ ಆಗಿದೆ. ಡಿಡಿಪಿಐ ಆಫೀಸ್‌ಗೆ ಕಡತ ಬಂದಾಗ ಸಿಇಓ ಅಧ್ಯಕ್ಷತೆಯಲ್ಲಿ, ಡಿಸಿ.

ಅಧ್ಯಕ್ಷತೆಯಲ್ಲಿ Scrutiny ಆಗಿದೆ. ಕಮಿಷನರ್ ಆಫೀಸ್‌ನಲ್ಲಿಯೂ Scrutiny ಆಗಿದೆ. ಆದಾದ ಮೇಲೆ ಶಿಕ್ಷಣ ಇಲಾಖೆಗೆ ಬಂದಿದೆ. ಈಗ ಮತ್ತೊಂದು ಮೂರು ಜನ ಸದಸ್ಯರ ಕಮಿಟಿ ಎಂದು ಮಾಡಿಕೊಂಡಿದ್ದಾರೆ. ಈ ಕಮಿಟಿಯಲ್ಲಿ ಇದೇ ಅಧಿಕಾರಿಗಳು ಇರುತ್ತಾರೆ. ಎಲ್ಲ ಇಲಾಖೆಗಳಲ್ಲಿ ಕೆಲಸವಾಗಬೇಕಾದರೆ ದುಡ್ಡು ಕೊಟ್ಟು ಫೈಲ್ ಮುಂದೆ ತರಿಸಲಾಗಿದೆ. ಇನ್ನು ವಿಳಂಬ ಮಾಡುವ ಸಲುವಾಗಿ ಮೂರು ಜನಸದಸ್ಯರ ಕಮಿಟಿ ಎಂದು ಮಾಡಿಕೊಂಡಿದ್ದಾರೆ. ಈ ಕಮಿಟಿಯನ್ನು ರದ್ದು ಮಾಡಿಬಿಟ್ಟು, ಯಾವ ಫೈಲ್‌ಗಳು ಇಲಾಖೆಯ ಬೇರೆ ಬೇರೆಯ ಹಂತದಲ್ಲಿ Scrutiny ಬಂದಿದೆ, ಆ ಫೈಲ್‌ಗಳನ್ನು ನಮ್ಮ ಶಿಕ್ಷಣ ಮಂತ್ರಿಗಳು ಕ್ಲಿಯರ್ ಮಾಡಿದ್ದು, ಅವುಗಳನ್ನು ಈ ಕೂಡಲೇ ಅನುದಾನಕ್ಕೆ ಒಳಪಡಿಸಬೇಕು. ಇನ್ನು ಯಾವ್ಯಾವ ಫೈಲ್‌ಗಳು ಬರುತ್ತಿವೆ, ಆ ಎಲ್ಲಾ ಫೈಲ್‌ಗಳಿಗೂ ಸಹ ಸಾಕಷ್ಟು ಅನುದಾನವನ್ನು ಆರ್ಥಿಕ ಇಲಾಖೆಯ ಮೂಲಕ ಮಾನ್ಯ ಮುಖ್ಯಮಂತ್ರಿಗಳು ಬಿಡುಗಡೆ ಮಾಡಿ ಈ ಸಮಸ್ಯೆಗೆ ಶಾಶ್ವತ ಪರಿಹಾರವನ್ನು ಕೊಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈಗಾಗಲೇ ಸನ್ಮಾನ್ಯ ಹೊರಟ್ಟಿಯವರು, ಶ್ರೀಯುತ ಮತ್ತಿಕಟ್ಟಿಯವರು, ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು, ಶ್ರೀಯುತ ಪುಟ್ಟಣ್ಣನವರು ಅನೇಕ ವಿಷಯಗಳನ್ನು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ಹೆಚ್ಚಿಗೆ ಹೇಳಲಿಕ್ಕೆ ಹೋಗುವುದಿಲ್ಲ. ಸರ್ಕಾರದ ಧೋರಣೆ ಏನೆಂದರೆ ಆಸೆ ತೋರಿಸಿ, ಮೋಜು ಮಾಡಿದಂತೆ ಆಗುತ್ತಿದೆ. ಇವರು ಆರ್ಥಿಕ ಇಲಾಖೆಯವರೊಂದಿಗೆ ಚರ್ಚೆ ಮಾಡದೇ ಇದನ್ನು ಏತಕ್ಕೆ ಬಜೆಟ್‌ನಲ್ಲಿ ಘೋಷಣೆ ಮಾಡಬೇಕಾಗಿತ್ತು ಎನ್ನುವುದು ನನ್ನ ಪ್ರಶ್ನೆ ಧಾರವಾಡದಲ್ಲಿ ಕಳೆದ ಸುಮಾರು 50 ದಿವಸಗಳಿಂದ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ತಾವು ಅಲ್ಲಿಗೆ ಬಂದಾಗ ಮಾತ್ರ ಅಧಿಕಾರಿಗಳು ತಮ್ಮ ಜೊತೆ ಬಂದಿದ್ದಾರೆ. ಹೋಗಿ ಅವರ ಜೊತೆ ಚರ್ಚೆ ಮಾಡಿ ಅವರಿಗೆ ಒಂದು ಒಳ್ಳೆಯ ಮಾತುಗಳನ್ನು ಹೇಳುವಂತಹ ಒಂದು ಪ್ರಾಮಾಣಿಕ ಪ್ರಯತ್ನವನ್ನು ಯಾವ

ಅಧಿಕಾರಿಗಳೂ ಸಹ ಮಾಡಲಿಲ್ಲ. ಇವತ್ತು ಆರ್ಥಿಕ ಮಿತವ್ಯಯವನ್ನು ಹೇರಲಾಗಿದೆ ಎಂದು ಈಗಾಗಲೇ ಹೇಳಿದರು. ಆರ್ಥಿಕ ಮಿತವ್ಯಯ ಈ ಶಿಕ್ಷಣ ಇಲಾಖೆಗೆ ಮಾತ್ರ ಏತಕ್ಕೆ ಎನ್ನುವುದು ನನ್ನ ಪ್ರಶ್ನೆಯಾಗಿದೆ.

ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕದಲ್ಲಿ ಭಾರಿ ಮಳೆ ಆದಂತಹ ಸಂದರ್ಭದಲ್ಲಿ ದಿನಾಂಕ 21–10–2009 ರಂದು ಸರ್ಕಾರದವರು ಒಂದು ಸುತ್ತೋಲೆಯನ್ನು ಹೊರಡಿಸಿದ್ದಾರೆ. ಆರ್ಥಿಕ ಮಿತವ್ಯಯ ಯಾವ್ಯಾವುದರ ಮೇಲೆ ವಿಧಿಸಲಾಗಿದೆ ಎಂದು ಅದರಲ್ಲಿ ತಿಳಿಸಿದ್ದಾರೆ. 'ಯಾವುದೇ ಹೊಸ ಹುದ್ದೆಗಳನ್ನು ಸೃಷ್ಟಿಸುವ ಅಥವಾ ಭರ್ತಿ ಮಾಡುವುದನ್ನು ಸಂಪೂರ್ಣವಾಗಿ ತಡೆಹಿಡಯಲಾಗಿದೆ ಮತ್ತು ಹಳೆಯ ವಾಹನಗಳನ್ನು ಬದಲಾಯಿಸುವುದನ್ನು ಒಳಗೊಂಡಂತೆ ಹೊಸ ವಾಹನಗಳ ಖರೀದಿ ಮಾಡುವುದನ್ನು ಸಂಪೂರ್ಣವಾಗಿ ತಡೆಹಿಡಿಯಲಾಗಿದೆ' ಎಂದು ಹೇಳಿದ್ದಾರೆ. ನನಗನ್ನಿಸಿದ ಹಾಗೆ ಈವರೆವಿಗೂ ಕೂಡ ಹೊಸ ವಾಹನವನ್ನು ಖರೀದಿ ಮಾಡುತ್ತಲೇ ಇದ್ದಾರೆ. ಅದಕ್ಕೆ ಯಾವುದೂ ಆರ್ಥಿಕ ಮಿತವ್ಯಯ ಎನ್ನುವುದು ಅಡ್ಡಿ ಬರುವುದಿಲ್ಲ. ಯೋಜನೇತರ ವೆಚ್ಚದಲ್ಲಿ ಶೇಕಡಾ 10 ರಷ್ಟು ಕಡಿತ ಸಾಧಿಸಲು ಅಗತ್ಯ ಕ್ರಮ ಕೈಗೊಳ್ಳುವುದು. ಯೋಜನೇತರ ವೆಚ್ಚದಲ್ಲಿ ಶೇಕಡಾ 10 ರಷ್ಟು ಕಡಿತ ಸಾಧಿಸಲು ಅಗತ್ಯ ಕ್ರಮ ಕೈಗೊಳ್ಳುವುದು. ಯೋಜನೇತರ ವೆಚ್ಚ ಹೆಚ್ಚಾಗುತ್ತಲೇ ಹೋಗುತ್ತಿದೆ. 'ಯಾವುದೇ ವಿದೇಶಿ ಪ್ರವಾಸವನ್ನು ಕರ್ನಾಟಕ ಸರ್ಕಾರದ ವೆಚ್ಚದಲ್ಲಿ ಕೈಗೊಳ್ಳಬಾರದು' ಎಂದು ಇದೆ. ಆದರೆ ವಿದೇಶಿ ಪ್ರವಾಸ ಕೈಗೊಳ್ಳುತ್ತಿರುವುದು ನಡೆಯುತ್ತಿದೆ. ತಾರಾ ಹೋಟೆಲ್‌ಗಳಲ್ಲಿ ಸರ್ಕಾರದ ಯಾವುದೇ ಅಧಿಕೃತ ಸಭೆ, ಕಾರ್ಯಾಗಾರಗಳನ್ನು ನಡೆಸತಕ್ಕದ್ದಲ್ಲ ಎಂದು ಇದೆ. ಆದರೆ, ಇವತ್ತು ಯಾವುದೇ ಸರ್ಕಾರದ ಸಭೆ ಸಮಾರಂಭವಾಗಲೀ ಹೋಟೆಲ್‌ಗಳಲ್ಲಿಯೇ ಆಗುತ್ತಿದೆ. ಸಚಿವರು ಮತ್ತು ಸಚಿವ ಸ್ಥಾನ ಹೊಂದಿದ ಅಧಿಕಾರೇತರ ಸದಸ್ಯರು, ಸರ್ಕಾರ ಮುಖ್ಯ ಕಾರ್ಯದರ್ಶಿ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಸಾರ್ವಜನಿಕ ಉದ್ದಿಮೆಗಳ ಎಲ್ಲಾ ಅಧ್ಯಕ್ಷರು, ಅಧಿಕಾರಿಗಳು ಮಿತವ್ಯಯ ದರ್ಜೆಯ ವಿಮಾನ (Economy) ಪ್ರಯಾಣವನ್ನು ಮಾಡಬೇಕೆಂಬ ಒಂದು

ಕಂಡೀಷನ್‌ನ್ನು ಹಾಕಿದ್ದಾರೆ. ಆದರೆ ಇವೆಲ್ಲವೂ ಎಲ್ಲೂ ಪಾಲನೆಯಾಗುತ್ತಿಲ್ಲ. ಎಲ್ಲೂ ಕೂಡ ಆರ್ಥಿಕ ಮಿತವ್ಯಯ ಎನ್ನುವುದು ಇಲ್ಲ. ಶಿಕ್ಷಣ ಇಲಾಖೆಗೆ ಮಾತ್ರ ಏಕೆ ಈ ಆರ್ಥಿಕ ಮಿತವ್ಯಯವನ್ನು ಪಾಲನೆ ಮಾಡಬೇಕೆಂದು ಒತ್ತಾಯ ಮಾಡಿ ಹೇಳುತ್ತೀರೋ ನನಗೆ ತಿಳಿಯುತ್ತಿಲ್ಲ. ಇದನ್ನು ಯಾರೂ ನನಗೆ ಬರೆದು ಕೊಟ್ಟಿಲ್ಲ. ಇದು ಸರ್ಕಾರದ ಆದೇಶ ಆಗಿದೆ. ಇದನ್ನು ನಾನು ಇಲ್ಲಿ ಓದುತ್ತಿದ್ದೇನೆ.

**ಶ್ರೀ ಪುಟ್ಟಣ್ಣ:–** ಈ ರೀತಿಯ ಆದೇಶ ಇದ್ದರೂ ಶಿಕ್ಷಣ ಇಲಾಖೆ ಬಿಟ್ಟು ಬಾಕಿ ಎಲ್ಲಾ ಇಲಾಖೆಗಳಲ್ಲೂ ಯಥಾ ಪ್ರಕಾರವಾಗಿ ಇದು ನಡೆಯುತ್ತಿದೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ:–** ಇವತ್ತು ಮಾನ್ಯ ಸಭಾಪತಿಯವರು ಇಲ್ಲಿ ಇದ್ದಿದ್ದರೆ ಚೆನ್ನಾಗಿ ಇರುತ್ತಿತ್ತು. ಅವರ ಅಧ್ಯಕ್ಷತೆಯಲ್ಲಿ ನಡೆದಂತಹ ಒಂದು ಸಭೆಯಲ್ಲಿ ಸ್ಪಷ್ಟವಾಗಿ ಇದು ಆಗುವುದಿಲ್ಲವೆಂದು ನಾವೆಲ್ಲರೂ ಅವರಿಗೆ ಹೇಳಿದ್ದೆವು. ಆದರೆ ಆವತ್ತಿನ ಸಂದರ್ಭದಲ್ಲಿ. . .

**ಉಪ ಸಭಾಪತಿಯವರು:–** ಈ ವಿಚಾರದ ಬಗ್ಗೆ ಮಾನ್ಯ ಸಭಾಪತಿಯವರಷ್ಟೇ ಕಳಕಳಿ ನನಗೂ ಇದೆ.

**ಶ್ರೀ ಮರಿತಿಬ್ಬೇಗೌಡ:–** ತಮಗೆ ಅವರಿಗಿಂತಲೂ ಹೆಚ್ಚಾಗಿ ಕಳಕಳಿ ಇದೆ.

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ:–** 1994–95ರವರೆಗಿನ ಎಲ್ಲಾ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸುತ್ತೇವೆಂದು ತಾವು ಏನು ಆಯವ್ಯಯದಲ್ಲಿ ಘೋಷಣೆ ಮಾಡಿದ್ದೀರಿ, ಅದರ ಪ್ರಕಾರ ತಾವು ಇವತ್ತೇ ಘೋಷಣೆ ಮಾಡಿ. ಈ ಬಗ್ಗೆ ಯಾರೂ ಚರ್ಚೆ ಮಾಡುವ ಸಂದರ್ಭವೇ ಬರುವುದಿಲ್ಲ. ಆ ಘೋಷಣೆಯನ್ನು ಮಾಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ತಮ್ಮ ಮೂಲಕ ವಿನಂತಿ ಮಾಡಿಕೊಂಡು ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಉಪ ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರೇ, ಎಲ್ಲರೂ ಎಲ್ಲಾ ವಿಷಯವನ್ನು ಹೇಳಿದ್ದಾರೆ. ಅವರುಗಳು ಹೇಳದೇ ಇರುವ ವಿಷಯವನ್ನು ತಾವು ಹೇಳಿ ಬೇಗನೆ ಮುಗಿಸಿ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾತನಾಡಿದಂತಹ ಹಿರಿಯ ಸದಸ್ಯರು ಏನು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಅದಕ್ಕೆ ನನ್ನ ಸಹಮತವನ್ನು ವ್ಯಕ್ತ ಮಾಡುತ್ತೇನೆ. ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಎಲ್ಲಾ ವಿಚಾರವನ್ನು ನನ್ನ ಸಹೋದ್ಯೋಗಿಗಳು ಪ್ರಸ್ತಾಪ ಮಾಡಿದ್ದಾರೆ. ನಮ್ಮ ಶಿಕ್ಷಣ ಇಲಾಖೆಯಲ್ಲಿ ಮೊಟ್ಟ ಮೊದಲಿಗೆ ಶಾಶ್ವತ ಅನುದಾನ ರಹಿತ ಎಂಬುದನ್ನು ರದ್ದುಪಡಿಸಿದ್ದು ಮಾನ್ಯ ಹೊರಟ್ಟಿಯವರ ನೇತೃತ್ವದಲ್ಲಿ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಶಿಕ್ಷಣ ಇಲಾಖೆಯ ಅನುದಾನ ರಹಿತ ಶಾಲೆಗಳ ಬಗ್ಗೆ ಇಷ್ಟೊಂದು ಕಳಕಳಿ ಇಟ್ಟುಕೊಂಡ ಸರ್ಕಾರ, ಬಹಳ ದೀರ್ಘ ಕಾಲದಿಂದ ಇದ್ದಂತಹ ಶಾಶ್ವತ ಅನುದಾನರಹಿತ ಎನ್ನುವುದನ್ನು ರದ್ದುಪಡಿಸಿ ಅನುದಾನ ಕೊಡುವ ಪ್ರಕ್ರಿಯೆಯನ್ನು ಪ್ರಾರಂಭ ಮಾಡಿದ ಮೇಲೆ 400ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳಿಗೆ ಅನುದಾನ ಕೊಟ್ಟಿದ್ದರು. ಮಾನ್ಯ ಕಾಗೇರಿಯವರು ಹಿಂದಿನ ಸರ್ಕಾರದಲ್ಲಿ ಶಿಕ್ಷಣ ಇಲಾಖೆಯ ಸಚಿವರಾದ ಮೇಲೆ 1994–95 ನೇ ಸಾಲಿನವರೆಗೆ ಪ್ರಾರಂಭಿಸಿದ ಶಾಶ್ವತ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳನ್ನು ವೇತನಾನುದಾನಕ್ಕೆ ಒಳಪಡಿಸುತ್ತೇವೆಂದು ಘೋಷಣೆ ಮಾಡಿದ್ದರು. ಆದರೆ ಈ ಅನುದಾನ ಕೊಡುವ ಪ್ರಕ್ರಿಯೆಗೆ ಒಂದಲ್ಲ ಒಂದು ಅಡೆತಡೆಗಳು ಆಗುತ್ತಿವೆ. ಬೆಳಗಾವಿ ಅಧಿವೇಶನದ ನಂತರ ಬೆಂಗಳೂರಿನ ಬನಪ್ಪ ಪಾರ್ಕಿನಲ್ಲಿ ಮತ್ತು ಫ್ರೀಡಂ ಪಾರ್ಕಿನಲ್ಲಿ ಹುಬ್ಬಳ್ಳಿ, ಧಾರವಾಡದಲ್ಲಿ ನಿರಂತರವಾಗಿ ಚಳುವಳಿ ನಡೆಯುತ್ತದೆ. ಕಾರವಾರದಲ್ಲಿ ನಿರಂತರವಾಗಿ ಚಳುವಳಿ ನಡೆಯಿತು. ರಾಜ್ಯವ್ಯಾಪಿ ಅನುದಾನ ರಹಿತ ಶಾಲಾ ಶಿಕ್ಷಕರು ಮತ್ತು ಆಡಳಿತ ಮಂಡಳಿಯ ಸದಸ್ಯರು ನಿರಂತರವಾಗಿ ಚಳುವಳಿಯನ್ನು ನಡೆಸುತ್ತಿದ್ದಾರೆ. ನಮ್ಮ ಹಿರಿಯ ಸದಸ್ಯರು ಹೇಳಿದ ಹಾಗೆ ಕೆಲವರಿಗೆ 40–45–50 ವರ್ಷಗಳಾಗಿವೆ. ಬಹಳ ವರ್ಷಗಳಿಂದ ಅವರು ಆಡಳಿತ ಮಂಡಳಿಯವರು ಕೊಡತಕ್ಕಂಥಹ

ಒಂದೆರಡು ಸಾವಿರ ರೂಪಾಯಿ ಸಂಬಳಕ್ಕೆ ಕೆಲಸ ಮಾಡಿದ್ದಾರೆ. ಅವರೆಲ್ಲರಿಗೂ ಮದುವೆ, ಮಕ್ಕಳು, ಮೊಮ್ಮಕ್ಕಳಾಗಿವೆ. ಮೊಮ್ಮಕ್ಕಳಾದರೂ ಕೂಡ ಅವರಿಗೆ ಉದ್ಯೋಗದಲ್ಲಿ ನೆಮ್ಮದಿಯನ್ನು ಕಾಣುವುದಕ್ಕೆ ಸಾಧ್ಯವಾಗಿಲ್ಲ. ಇಂತಹ ದಾರುಣ ಪರಿಸ್ಥಿತಿ ಅವರದ್ದಾಗಿದೆ. ಈ ಎಲ್ಲಾ ಪರಿಸ್ಥಿತಿ ಗೊತ್ತಿದ್ದರೂ ಕೂಡ 1994–95ನೇ ಸಾಲಿನವರೆಗೆ ಪ್ರಾರಂಭಿಸಿದ ಶಾಶ್ವತ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳನ್ನು ವೇತನಾನುದಾನಕ್ಕೆ ಒಳಪಡಿಸುತ್ತೇವೆಂದು ಹಿಂದಿನ ಸರ್ಕಾರದಲ್ಲಿ ಘೋಷಣೆ ಆಯಿತು. ಘೋಷಣೆ ಆದ ಕೂಡಲೇ ಆರ್ಥಿಕ ಮಿತವ್ಯಯ ಜಾರಿಗೆ ಬಂತು. ಮುಂಗಡ ಪತ್ರದಲ್ಲಿ ಕಾದಿರಿಸಿದ ಹಣವನ್ನು ಖರ್ಚು ಮಾಡುವುದಕ್ಕೆ ಆರ್ಥಿಕ ಮಿತವ್ಯಯ ಅಡ್ಡ ಬರುತ್ತದೆ ಎಂದು ಮಾನ್ಯ ಕಾಗೇರಿಯವರು ಈ ಸದನದಲ್ಲಿ ಹೇಳಿದರು. ಮುಂಗಡ ಪತ್ರದಲ್ಲಿ ಕಾದಿರಿಸಿದ ಹಣವನ್ನು ಖರ್ಚು ಮಾಡುವುದಕ್ಕೆ ಆರ್ಥಿಕ ಮಿತವ್ಯಯ ಅಡ್ಡಿ ಬರುವುದಾದರೆ ಯಾವ ಇಲಾಖೆಯ ಕಾರ್ಯ ಚಟುವಟಿಕೆಗಳೂ ಕೂಡ ನಡೆಯುವ ಹಾಗಿಲ್ಲ. ಮತ್ತು ಯಾರಿಗೂ ವೇತನವನ್ನು ಕೊಡುವ ಹಾಗೇ ಇಲ್ಲ. ಯಾವ ಅಭಿವೃದ್ಧಿ ಕೆಲಸಗಳೂ ಕೂಡ ಆಗುವಂತಿಲ್ಲ. ಈ ಆರ್ಥಿಕ ಮಿತವ್ಯಯವನ್ನು ಆರೋಗ್ಯ ಮತ್ತು ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಹಿಂದಕ್ಕೆ ಪಡೆಯಬೇಕೆಂದು ಮನವಿ ಮಾಡಿದ್ದರೂ ಕೂಡ ಎರಡು ವರ್ಷಗಳ ಕಾಲ ಈ ಆರ್ಥಿಕ ಮಿತವ್ಯಯವನ್ನು ಹಿಂದಕ್ಕೆ ಪಡೆಯಲಿಲ್ಲ. ಆರ್ಥಿಕ ಮಿತವ್ಯಯ ಹೇರುವುದಕ್ಕೆ ಮೂರು ದಿವಸ ಮುಂಚಿತವಾಗಿ ಸುಮಾರು 48 ಕಡತಗಳಿಗೆ ಮಾನ್ಯ ಸಚಿವರು ಮಂಜೂರಾತಿಯನ್ನು ಕೊಟ್ಟಿದ್ದಾರೆ. ಆದರೆ, ಆ ಕಡತಗಳನ್ನು ಇಲಾಖೆಗೆ ಕಳುಹಿಸಲಿಲ್ಲ ಆದೇಶವನ್ನು ಕೂಡ ಮಾಡಲಿಲ್ಲ. 1993–94ರಲ್ಲಿ ಪ್ರಾರಂಭವಾಗಿತರಕ್ಕಂಥ ಶಿಕ್ಷಣ ಸಂಸ್ಥೆಗಳವರು ಮುಂಚಿತವಾಗಿ ಎಲ್ಲಾ ಮಾಹಿತಿಯನ್ನು ಒದಗಿಸಿದವರು ಈಗಾಗಲೇ ಅನುದಾನವನ್ನು ತೆಗೆದುಕೊಂಡಿದ್ದಾರೆ. ಈಗ ಆರ್ಥಿಕ ಮಿತವ್ಯಯವನ್ನು ತೆಗೆದ ಕೂಡಲೇ ನಾವು 1991ನೇ ಸಾಲಿನವರೆಗೆ ಪ್ರಾರಂಭವಾಗಿರತಕ್ಕಂಥ ಶಾಲಾ ಕಾಲೇಜುಗಳಿಗೆ ಮಾತ್ರ ಅನುದಾನವನ್ನು ಕೊಡುತ್ತೇವೆ ಎನ್ನುವಂತಹ ಆದೇಶವನ್ನು ತಾವು ಏತಕ್ಕೆ ಹೊರಡಿಸಬೇಕಾಗಿತ್ತು? ಮಾನ್ಯ ಗಣೇಶ್ ಕಾರ್ಣಿಕ್ ಅವರು ಹೇಳಿದ ಹಾಗೆ

ಈ ಹಂತದಲ್ಲಿ ತ್ರಿಸದಸ್ಯ ಸಮಿತಿಯನ್ನು ಏತಕ್ಕೆ ರಚನೆ ಮಾಡಬೇಕಾಗಿತ್ತು. ಈಗಾಗಲೇ ಬಹುತೇಕ ಶಾಲೆಗಳಿಗೆ ಅನುದಾನವನ್ನು ಕೊಟ್ಟಿದ್ದೀರಿ. ಈ ಹಂತದಲ್ಲಿ ಈ ತ್ರಿ ಸದಸ್ಯರ ಸಮಿತಿಯನ್ನು ಮಾಡಿರುವುದು ಸರಿಯಲ್ಲ. ಒಂದು ಶಾಲೆ ಅನುದಾನವನ್ನು ಪಡೆಯಬೇಕೆಂದರೆ ದೊಡ್ಡ ದಂಧೆ ನಡೆಯುತ್ತಿದೆ. ನನಗೆ ಸದನದಲ್ಲಿ ಇಲಾಖಾ ಕಾರ್ಯದರ್ಶಿಯವರು ಕಾಣುತ್ತಿಲ್ಲ. ಇಂತಹ ಮಹತ್ವದ ವಿಷಯದ ಬಗ್ಗೆ ಚರ್ಚೆ ನಡೆಯುತ್ತಿರುವಾಗ ಇಲಾಖಾ ಕಾರ್ಯದರ್ಶಿಯವರು ಮತ್ತು ಆಯುಕ್ತರವರೂ ಕೂಡ ಇಲ್ಲಿ ಇರುವುದಿಲ್ಲ. ನಾವು ಇಲ್ಲಿ ಇದರ ಬಗ್ಗೆ ಚರ್ಚೆ ಮಾಡುವುದರಲ್ಲಿ ಏನು ಅರ್ಥ ಬರುತ್ತದೆ. ಯಾವಾಗ ನೋಡಿದರೂ ಸಹ ಕಾರ್ಯದರ್ಶಿಯವರು ಬರೀ ಪ್ರವಾಸ... ಪ್ರವಾಸ ಎಂದು ಹೇಳುತ್ತಿರುತ್ತಾರೆ. ಹೇಳಿದ ಒಂದೂ ಕೆಲಸವನ್ನು ಮಾಡುವುದಿಲ್ಲ.

(ಗೊಂದಲ)

**ಶ್ರೀ ಬಸವರಾಜ ಹೊರಟ್ಟಿ:–** ಶಿಕ್ಷಣ ಇಲಾಖಾ ಆಯುಕ್ತರವರನ್ನು ಮತ್ತು ಕಾರ್ಯದರ್ಶಿಯವರನ್ನು ನಾನು ಇಲ್ಲಿ ಒಂದು ದಿವಸವೂ ನೋಡಿಲ್ಲ. ಅವರು ಎಲ್ಲಿ ಹೋಗುತ್ತಾರೆಯೋ ಗೊತ್ತಿಲ್ಲ. ಮಂತ್ರಿಗಳ ಮಾತು ಏನೂ ನಡೆಯುವುದಿಲ್ಲ. ಎಲ್ಲಿಗೆ ಹೋಗುತ್ತಾರೋ, ಎಲ್ಲಿಗೆ ಬರುತ್ತಾರೋ ನನಗೆ ಗೊತ್ತಿಲ್ಲ. ಇಂತಹ ಪ್ರಮುಖವಾದ ಚರ್ಚೆ ಇಲ್ಲಿ ಆಗುತ್ತಿದೆ. ಅವರಿಬ್ಬರೂ ಸದನದಲ್ಲಿ ಇಲ್ಲ. ನಾವು ಇಲ್ಲಿ ಇದ್ದೇವೆ ತಾವುಗಳೂ ಕೂಡ ಇಲ್ಲಿ ಇದ್ದೀರಿ. ಈ ಐ.ಎ.ಎಸ್ ಅಧಿಕಾರಿಗಳಿಗೆ ಏನು ಕೆಲಸ? ಇಲ್ಲಿ ಮಹತ್ವದ ಚರ್ಚೆ ನಡೆಯುತ್ತಿದೆ ಇಂತಹ ಸಂದರ್ಭದಲ್ಲಿ ಇಲಾಖಾ ಕಾರ್ಯದರ್ಶಿಗಳು ಮತ್ತು ಆಯುಕ್ತರು ಇರುವುದು ಬಿಟ್ಟು ಬೇರೆ ಏನು ಮಹತ್ವದ ಕೆಲಸ ಇದೆ. ಮಾನ್ಯ ಮುಖ್ಯಮಂತ್ರಿಗಳೇ ತಾವು ದಯವಿಟ್ಟು ಹೇಳಿ. ಇಂಥಾದ್ದು ಬಿಟ್ಟು ಬೇರೆ ಏನು ಕೆಲಸ ಇದೆ ಅವರಿಗೆ ತಾವೇ ಹೇಳಿ. ನಾವುಗಳು ದೂರವಾಣಿ ಮಾಡಿದರೂ ಒಂದು ದಿವಸ ಸಿಗುವುದಿಲ್ಲ. ಇಂತಹ ಬೇಜವಾಬ್ದಾರಿ ಕಾರ್ಯದರ್ಶಿಯವರನ್ನು ನಾನು ಬೇರೆ ಯಾವ ಇಲಾಖೆಯಲ್ಲೂ ಕೂಡ ನೋಡಲೇ ಇಲ್ಲ. ಅವರಿಗೆ ಯಾರ ಹೆದರಿಕೆ ಇಲ್ಲ. ಮಾನ್ಯ

ಮುಖ್ಯಮಂತ್ರಿಗಳಿಗೆ ಮತ್ತು ಮಾನ್ಯ ಮಂತ್ರಿಗಳಿಗೆ ಬೆಲೆ ಇಲ್ಲ. ಮಾನ್ಯ ಕಾಗೇರಿಯವರೆ, ತಾವು ಇಲಾಖೆಯನ್ನು ಹೇಗೆ ನಡೆಸುತ್ತೀರಿ? ನಿಮಗಾದರೂ ಅವರು ಸಿಗುತ್ತಾರೋ ಇಲ್ಲವೋ ಹೇಳಿ. ಇಂದು ಸದನಕ್ಕೆ ಅವರಿಬ್ಬರೂ ಏಕೆ ಬಂದಿಲ್ಲ ಎಂಬುದನ್ನು ಹೇಳಿ.

(ಗೊಂದಲ)

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಅವರು ಬರುತ್ತಿದ್ದಾರೆ.

**ಶ್ರೀ ಬಸವರಾಜ ಹೊರಟ್ಟಿ:–** ಮೂರು ದಿವಸದಿಂದ ನೋಡುತ್ತಿದ್ದೇನೆ. ಅವರು ಎಲ್ಲಿ ಬರುತ್ತಾರೆ? ಬೀಗರ ಮನೆಗೆ ಹಾಗೆ ಬರುತ್ತಾರಾ? ಮಾನ್ಯ ಕಾಗೇರಿಯವರೇ, ನೀವು ಈ ರೀತಿ ಹೇಳಬೇಡಿ.

(ಗೊಂದಲ)

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಅವರು ಇಲ್ಲಿ ಇರಬೇಕಾಗಿತ್ತು.

**ಉಪ ಸಭಾಪತಿಯವರು:–** ಮಾನ್ಯ ಸಚಿವರೇ, ಇದು ಬಹಳ ಪ್ರಮುಖವಾದಂತಹ ಸಮಸ್ಯೆಯಾಗಿದೆ. ಇದರ ಬಗ್ಗೆ ಇಲ್ಲಿ ಗಹನವಾದಂತಹ ಚರ್ಚೆಯಾಗುತ್ತಿರುವಾಗ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳು ಇರಲೇಬೇಕಾಗುತ್ತದೆ. ಇದು ಮಾನ್ಯ ಸಚಿವರ ಜವಾಬ್ದಾರಿ ಅಷ್ಟೇ ಅಲ್ಲ. ಅಧಿಕಾರಿಗಳೂ ಕೂಡ Must and should ಇರಬೇಕಾಗುತ್ತದೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಗಳೇ, ಬರುವಂತೆ ಅವರಿಗೆ ಸೂಚನೆಯನ್ನು ಕಳುಹಿಸಿದ್ದೇವೆ, ಬರುತ್ತಿದ್ದಾರೆ.

**ಉಪ ಸಭಾಪತಿಯವರು:–** ಯಾವಾಗ ಬರುತ್ತಾರೆ? ಸದನವನ್ನು ಗಂಭೀರವಾಗಿ ಪರಿಗಣಿಸಬೇಕು.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಂತ್ರಿಗಳೇ, ನೀವು ನಿಮ್ಮ ಅಧಿಕಾರಿಗಳನ್ನು ರಕ್ಷಣೆ ಮಾಡಿ, ಬೇಡ ಎನ್ನುವುದಿಲ್ಲ. ಆದರೆ, ಯಾವ ವಿಷಯ

ಕಾರ್ಯಕಲಾಪ ಪಟ್ಟಿಯಲ್ಲಿರುತ್ತದೆ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಸದನದಲ್ಲಿರಬೇಕಾಗಿದ್ದು ನ್ಯಾಯ.

**ಶ್ರೀಮತಿ ಮೋಟಮ್ಮ:-** ಅಧಿಕಾರಿಗಳ ಗ್ಯಾಲರಿಯಲ್ಲಿಯ ಮೊದಲನೆ ಸಾಲಿನ ಖುರ್ಚಿಗಳೆಲ್ಲವು ಖಾಲಿ ಇವೆ. ಮಾನ್ಯ ಮುಖ್ಯಮಂತ್ರಿಗಳು ಇಲ್ಲೇ ಕುಳಿತ್ತಿದ್ದಾರೆ, ಅಧಿಕಾರಿಗಳು ಇಲ್ಲ ಎಂದರೆ ಹೇಗೆ?

**ಶ್ರೀ ಎಂ.ಸಿ. ನಾಣಯ್ಯ:-** ಮಾನ್ಯ ಸಭಾಪತಿಗಳೇ, ನಿನ್ನೆ ಒಬ್ಬ ಮಾನ್ಯ ಮಂತ್ರಿಗಳನ್ನು ರಾಜ್ಯದ ಅಧಿಕೃತ ಕಾರ್ಯಕ್ರಮಗಳಿಗೆ ಮಾನ್ಯ ಮುಖ್ಯಮಂತ್ರಿಗಳೇ ಕಳುಹಿಸಿರುವ ಸಂದರ್ಭದಲ್ಲಿ, ಆ ಮಂತ್ರಿಗಳು ಎಲ್ಲಿ ಎಂದು ಈ ಸದನದಲ್ಲಿ ಪ್ರಶ್ನೆ ಎತ್ತಿದಾಗ, ಸಭಾಪತಿಗಳಿಗೆ ಒಂದು ಪತ್ರ ಹೋಯಿತು. ಆ ಪತ್ರವನ್ನು ಮಾನ್ಯ ಸಭಾಪತಿಯವರು ಮಾನ್ಯ ಮುಖ್ಯಮಂತ್ರಿಗಳಿಗೆ ಕಳುಹಿಸಿದರು. ಆಗ ಮಾನ್ಯ ಮುಖ್ಯಮಂತ್ರಿಗಳು ಈ ಸದನಕ್ಕೆ ಬಂದು, 'ಆ ಮಂತ್ರಿಗಳನ್ನು ನಾನೇ ಕಳುಹಿಸಿದ್ದೇನೆ' ಎಂದು ಸದನಕ್ಕೆ ಮಾಹಿತಿಯನ್ನು ಕೊಟ್ಟರು. ಮಾನ್ಯ ಮುಖ್ಯಮಂತ್ರಿಗಳು ಈ ರೀತಿ ಕಾರ್ಯನಿರ್ವಹಿಸುತ್ತಿರುವಾಗ, ನಾನು ಕೇಳುತ್ತೇನೆ, ಈ ಅಧಿಕಾರಿಗಳೇನು ಪುಗಸಟ್ಟೆ ಕಾರ್ಯನಿರ್ವಹಿಸುತ್ತಿದ್ದಾರೆಯೇ ಈ ರಾಜ್ಯದಲ್ಲಿ? ಇಲ್ಲಿ ಸದನ ನಡೆಯುತ್ತಿದೆ, ಇವತ್ತಿನ ಅಜೆಂಡಾ ನಿನ್ನೆಯೇ ಎಲ್ಲರಿಗೂ ತಲುಪಿರುತ್ತದೆ. ಬೆಳಗ್ಗೆಯೇ ಬಂದು ಇಲ್ಲಿ ಕೂಡಬೇಕಾಗಿರುವುದು ಅಧಿಕಾರಿಗಳ ಜವಾಬ್ದಾರಿ. ಅವರಿಗೆ ಹೇಳಿ ಕಳುಹಿಸಿರುವಂತಹ ಅಸಹಾಯಕತೆಯ ಪ್ರದರ್ಶನವನ್ನು ದಯಮಾಡಿ ಕಾಗೇರಿಯವರೇ ಮಾಡಬೇಡಿ. ಈ ದೇಶ, ಈ ರಾಜ್ಯ ಹಾಳಾಗಿದ್ದರೆ ಅದಕ್ಕೆ ಈ ಅಧಿಕಾರಿಗಳೇ ಕಾರಣ ಬೇರೆ ಯಾರು ಅಲ್ಲ. I demand the Chief Minister now to keep that Officer under suspension straight away. It is a breach of privilege of this House. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಕುಳಿತಿದ್ದಾರೆ, ನಾನು ಕೊಟ್ಟ ನಿಯಮ 330 ನ್ನು ತೆಗೆದುಕೊಳ್ಳಬೇಕಾಗಿತ್ತು, ಆದರೆ, ಮಾನ್ಯ ಮುಖ್ಯಮಂತ್ರಿಗಳು ಇವತ್ತು ಜರೂರು ಮೀಟಿಂಗ್‌ಗೆ ಹೋಗಬೇಕಾಗಿದೆ, ಇನ್ನೊಂದು ಕಡೆ ಶಿಕ್ಷಕರು ಮುಷ್ಕರ ಕುಳಿತ್ತಿದ್ದಾರೆ ಅವರು ಮಾನ್ಯ ಮುಖ್ಯಮಂತ್ರಿಗಳಿಂದ ಹೇಳಿಕೆಯನ್ನು

ಬಯಸಿದ್ದಾರೆ, ಅದಕ್ಕೆ ಉತ್ತರ ನೀಡಲು ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಕುಳಿತಿದ್ದಾರೆ, ಶಿಕ್ಷಣ ಸಚಿವರು ಕುಳಿತಿದ್ದಾರೆ, ಇವರಿಬ್ಬರು ಇಲ್ಲಿ ಇರುವಾಗ ಈ ಕಾರ್ಯದರ್ಶಿಗಳಿಗೆ ಅಷ್ಟು ಕಿಮ್ಮತ್ತು ಇಲ್ಲವೆ? ಈ ಸದನದ ಬಗ್ಗೆ ಕಿಮ್ಮತ್ತು ಇಲ್ಲವೆ? Sir, are we helpless? We are not helpless. We are going to move a Breach of Privilege against that Officer. Come what may, we are going to do that. I want the Chief Minister to kindly give your message to that Officer by keeping him under suspension straight away. Don't try to let off this officer. ಈ ದೇಶವನ್ನು ಈ ರಾಜ್ಯವನ್ನು ಹಾಳು ಮಾಡುತ್ತಿರುವುದು ಇಂತಹ ಅಧಿಕಾರಿಗಳೇ. They don't have concern even for this House; they don't have respect for MLAs. ಇದು ಕಾಗೇರಿಯವರ ಅಸಹಾಯಕತೆಯೇ? ಅವರನ್ನು ಬರುವಂತೆ ಕರೆಯಬೇಕೆ? ಬೀಗರ ಮನೆಗೆ ಊಟಕ್ಕೆ ಹೋಗಿದ್ದಾರೆಯೇ? I am sorry. Hon'ble Chief Minister, kindly take up this issue very seriously. ನಿಮಗೆ ಬಿಡುತ್ತೇನೆ. I have not seen such arrogance so far in this House. I am sorry.

**ಶ್ರೀ ಡಿ.ವಿ. ಸದಾನಂದಗೌಡ (ಮಾನ್ಯಮಂತ್ರಿಗಳು):-** ಮಾನ್ಯ ಸಭಾಪತಿಗಳೇ, ಮಾನ್ಯ ಮಿತ್ರ ಸದಸ್ಯರು ಎತ್ತಿರುವ ವಿಚಾರ ನಿಜವಾಗಿಯೂ ಗಂಭೀರವಾದುದ್ದು. ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸುತ್ತದೆ ಮತ್ತು ನಾನು, ನನ್ನ ಇಲಾಖೆಯ ಅಧಿಕಾರಿಗಳ ಜೊತೆ ಮಾತನಾಡಿ, ಈ ಗಂಭೀರತೆಯ ಚುರುಕನ್ನು ಮುಟ್ಟಿಸಲು ಏನು ಮಾಡಬೇಕು ಅದನ್ನು ಮಾಡುತ್ತೇನೆ. ಈ ಸದನದ ಮುಖಾಂತರ ಈ ರಾಜ್ಯದ ಎಲ್ಲ ಅಧಿಕಾರಿಗಳಿಗೆ ನಾನು ಹೇಳುತ್ತೇನೆ, ಅಜೆಂಡಾದಲ್ಲಿ ಯಾವ ಇಲಾಖೆಗೆ ಸಂಬಂಧಪಟ್ಟ ವಿಷಯಗಳು ಇರುತ್ತವೆ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳೆಲ್ಲರೂ ಇಲ್ಲಿ ಉಪಸ್ಥಿತರಿರಬೇಕು. ಯಾರು ಉಪಸ್ಥಿತರಿರುವುದಿಲ್ಲ, ಅಂತಹ ಕಾರ್ಯದರ್ಶಿಗಳ ಮೇಲೆ ನಿರ್ದಾಕ್ಷಿಣ್ಯವಾದ ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತದೆ.

**ಉಪ ಸಭಾಪತಿಯವರು:–** ಧನ್ಯವಾದಗಳು, ಮಾನ್ಯ ಮುಖ್ಯಮಂತ್ರಿಗಳು ಬೇರೆ ಕಾರ್ಯಕ್ರಮಕ್ಕೆ ಹೋಗುವುದು ಇದೆ. ಎಲ್ಲರೂ ಬೇಗ ಮಾತನಾಡಿ ಮುಗಿಸಿದರೆ ಒಳ್ಳೆಯದು.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಗಳೇ 1994–95ನೇ ಸಾಲಿನವರೆಗೆ ಅನುದಾನವನ್ನು ಕೊಡುತ್ತೇವೆ' ಎಂದು ಸರ್ಕಾರ ಈಗಾಗಲೇ ಆದೇಶ ನೀಡಿ ಒಪ್ಪಿಕೊಂಡಿದ್ದೇವೆ. ಸಂಬಳವಿಲ್ಲದೆ ಶಿಕ್ಷಕರು ತುಂಬಾ ಕಷ್ಟವನ್ನು ಅನುಭವಿಸುತ್ತಿದ್ದಾರೆ, ಅದಕ್ಕಾಗಿ ಚಳುವಳಿ, ಧರಣಿಗಳನ್ನು ಮಾಡುತ್ತಿದ್ದಾರೆ. ಇದರಿಂದ ಶಾಲೆಯಲ್ಲಿ ಓದುತ್ತಿರುವ ಮಕ್ಕಳಿಗೆ ತುಂಬಾ ತೊಂದರೆಯಾಗಿದೆ. ಆದ್ದರಿಂದ, ಈ ತಕ್ಷಣವೇ ಸರ್ಕಾರ 1994–95ನೇ ಸಾಲಿನವರೆಗೆ ಪ್ರಾರಂಭವಾದ ಎಲ್ಲಾ ಶಾಲೆಗಳಿಗೆ ನಾಳೆಯಿಂದಲೇ ಅನುದಾನವನ್ನು ಕೊಟ್ಟೆಕೊಡುತ್ತೇವೆ ಎನ್ನುವ ಆದೇಶವನ್ನು ಚಳುವಳಿ ನಿರತರಿಗೆ ಮತ್ತು ಈ ನಾಡಿಗೆ ಕೊಡಬೇಕು. ಕೊಡಲಿಲ್ಲ ಎಂದರೆ ಈ ಸದನ ಮುಗಿಯವವರೆಗೆ ನಾನು ಈ ಸದನದ ಬಾವಿಯಲ್ಲಿ ಮಲಗಿಕೊಂಡು ಧರಣಿ ಮಾಡಬೇಕಾಗುತ್ತದೆ. ದಯಮಾಡಿ ಅದಕ್ಕೆ ಅವಕಾಶ ಕೊಡಬೇಡಿ, ಈ ನೊಂದ ಶಿಕ್ಷಕರ ಅಳಲನ್ನು ಗಮನಿಸಿ, ಶಿಕ್ಷಣದ ಹಿತದೃಷ್ಟಿಯಿಂದ,

(ಈ ಸಂದರ್ಭದಲ್ಲಿ ಮಾನ್ಯ ಸಭಾಪತಿಯವರು ಸಭಾ ಪೀಠವನ್ನಲಂಕರಿಸಿದರು)

ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಈಗಾಗಲೇ ತಾವು ಘೋಷಣೆ ಮಾಡಿರುವುದನ್ನು ಪುನರುಚ್ಚಾರ ಮಾಡಿ ನಾಳೆಯಿಂದಲೇ ಸಂಬಂಧಪಟ್ಟ ಶಾಲಾ–ಕಾಲೇಜುಗಳಿಗೆ ಅನುದಾನವನ್ನು ಕೊಡುತ್ತೇವೆ ಎನ್ನುವಂತಹ ಆದೇಶವನ್ನು ಸ್ಪಷ್ಟವಾಗಿ ನೀಡಬೇಕೆಂದು ಅಂತಿಮವಾಗಿ ಅವರೆಲ್ಲರ ಪರವಾಗಿ ನಾನು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

**ಶ್ರೀ ಶಶಿಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಗಳೇ, 2009–10ನೇ ಸಾಲಿನ ಬಜೆಟ್ ಸಂದರ್ಭದಲ್ಲಿ ನಾವೆಲ್ಲ ಶಾಸಕರು ಸೇರಿ ಆಗಿನ ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ, ಇನ್ನು ಎರಡು ವರ್ಷಕ್ಕೆ

ಗ್ರ್ಯಾಂಟ್ ಕೊಡುವುದನ್ನು ವಿಸ್ತರಣೆ ಮಾಡಿ ಎಂದು ಕೇಳಿಕೊಂಡಿದ್ದಕ್ಕೆ ಆಗಿನ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಯಡಿಯೂರಪ್ಪನವರು 1993–94 ಮತ್ತು 1994–95ನೇ ಸಾಲಿನವರೆಗೆ ಗ್ರ್ಯಾಂಟ್ ಕೊಡುತ್ತೇವೆ ಎಂದು ಒಪ್ಪಿಕೊಂಡರು. ನಿರಂತರವಾಗಿ 1987ರಿಂದ 1993–94ವರೆಗೆ ಗ್ರ್ಯಾಂಟ್ ಕೊಡುತ್ತಾ ಇದ್ದರು. ಅನೇಕ ಕಡತಗಳನ್ನು ಮಾನ್ಯ ಸಚಿವರು ಕ್ಲಿಯರ್ ಮಾಡಿದ್ದಾರೆ. ಮೊನ್ನೆ ಧಾರವಾಡದಲ್ಲಿ ಶಿಕ್ಷಕರು ಧರಣಿ ಕುಳಿತರು, ನಂತರ ರಾಜ್ಯದ ಬೇರೆ–ಬೇರೆ ಕಡೆಗಳಲ್ಲಿ ಧರಣಿ ಕುಳಿತರು. ನಮ್ಮ ಮನೆಯ ಮುಂದೆಯೂ ಧರಣಿ ಕುಳಿತರು. ನಾನು ಅವರಿಗೆ, 'ನಾವೆ ಸೇರಿ ಒತ್ತಾಯ ಮಾಡಿ ಮಾನ್ಯ ಮುಖ್ಯಮಂತಿಗಳಿಂದ ಈ ರೀತಿ ಮಾಡಿಸಿದ್ದೇವೆ' ಎಂದು ಹೇಳಿದ್ದಕ್ಕೆ ಅವರು, 'ಮಾಡಿಸಿರುವುದು ತಪ್ಪಾಗಿದೆ ಸರ್' ಎಂದು ಹೇಳಿದರು. ಏಕೆಂದರೆ, ಮೊದಲು ಆಡಳಿತ ಮಂಡಳಿಯಿಂದ ಅವರಿಗೆ 2000–3000 ರೂ.ಗಳ ಸಂಬಳ ಬರುತ್ತಿತ್ತು, ಆದರೆ, ಸರ್ಕಾರ ಗ್ರ್ಯಾಂಟ್ ಕೊಡಲು ಆದೇಶ ಮಾಡಲಾಗಿದೆ ಎಂದು ಆದೇಶ ಕೊಟ್ಟ ಮೇಲೆ ಆಡಳಿತ ಮಂಡಳಿಯವರು ಶಿಕ್ಷಕರಿಗೆ ಯಾವುದೇ ಸಂಬಳವನ್ನು ಕೊಡುತ್ತಿಲ್ಲ. ಈ ವಿಚಾರದಲ್ಲಿ ಸಾಕಷ್ಟು ಭ್ರಷ್ಟಾಚಾರವೂ ಆಗಿದೆ, ಆಡಳಿತ ಮಂಡಳಿಯವರು ಯಾರ್‍ಯಾರು ದುಡ್ಡು ತೆಗೆದುಕೊಂಡಿದ್ದಾರೆ ಎನ್ನುವುದು ನಮಗೆ ಗೊತ್ತಿದೆ. ಶಿಕ್ಷಕರು 4 ರಿಂದ 5 ಲಕ್ಷ ರೂ.ಗಳನ್ನು ಬೇರೆ ಕಡೆಯಿಂದ ಸಾಲ ತೆಗೆದುಕೊಂಡು ಬಂದು ಹಣವನ್ನು ಕೊಟ್ಟಿದ್ದಾರೆ. ಇದಕ್ಕೆ ಅವರು ಬಡ್ಡಿಯನ್ನು ಕಟ್ಟಬೇಕು ಆದರೆ, ಅವರಿಗೆ ಸಂಬಳವೇ ಇಲ್ಲ. ಶಿಕ್ಷಕರು ಬಹಳ ಕಷ್ಟದಲ್ಲಿದ್ದಾರೆ. ದಯಮಾಡಿ ಇದನ್ನು ವಿಸ್ತರಣೆ ಮಾಡಿ, ಎಷ್ಟು ಆಗುತ್ತದೆ ಅಷ್ಟು ಅನುದಾನವನ್ನು ನಿರಂತರವಾಗಿ ಕೊಡಿ. ಇಲ್ಲಿ ಇನ್ನೊಂದು ದೊಡ್ಡ ತಪ್ಪು ಆಗಿದೆ There was a lack of coordination between the Finance Department and the Education Department. They have never projected the right burden. ಎಷ್ಟು ಹೊರೆ ಬೀಳುತ್ತದೆ ಎನ್ನುವುದನ್ನು ಶಿಕ್ಷಣ ಇಲಾಖೆಯವರು ಆರ್ಥಿಕ ಇಲಾಖೆಗೆ ಹೇಳಬೇಕು, ಆದರೆ, ಹೇಳುವಂತಹ ಕೆಲಸವಾಗಲಿಲ್ಲ. Financial burden ಎಷ್ಟು ಎನ್ನುವುದು ಗೊತ್ತಿಲ್ಲ. 40 ರಿಂದ 50 ಕೋಟಿ ರೂ.ಗಳಾಗಬಹುದು ಎಂದು

ನಾವು ತಿಳಿದಿದ್ದೇವೆ. ಆದರೆ, ಎಷ್ಟು ಶಾಲೆಗಳಿವೆ, total financial burden ಎಷ್ಟು ಆಗುತ್ತದೆ ಎನ್ನುವ ಲೆಕ್ಕಾಚಾರ ಮಾಡಿ ಆರ್ಥಿಕ ಇಲಾಖೆಗೆ ಕೊಡಿ ಎಂದರೆ, ಬಜೆಟ್ ಆಗಿಲ್ಲ ನಾವು ಎಲ್ಲಿಂದ ಕೊಡೋಣ ಎನ್ನುತ್ತಾರೆ. ಇದು ಬಜೆಟ್‌ನಲ್ಲಿ ಘೋಷಣೆಯಾಗಿದೆ, ಆದರೆ ಎಷ್ಟು ಹಣ ಬೇಕು ಎನ್ನುವುದು ಲೆಕ್ಕಾಚಾರ ಇಲ್ಲದ ಕಾರಣ ಈ ಎಲ್ಲ ಗೊಂದಲದಲ್ಲಿ ನಾವು ಸಿಕ್ಕಿ ಹಾಕಿಕೊಂಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳೇ ದಯಮಾಡಿ ಈ ಸಮಸ್ಯೆಯನ್ನು ತಾವೇ ನಿವಾರಣೆ ಮಾಡಬೇಕು. ಅವರ ತಾಳ್ಮೆಯನ್ನು ಇನ್ನೂ ಪರೀಕ್ಷೆ ಮಾಡಬಾರದು. ಇದಕ್ಕೆ ಒಂದು ಕೊನೆ ಹಾಡು ಹಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

(5.30 ಗಂಟೆ)

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಬೇರೆ ಒಂದು ಸಭೆಯಲ್ಲಿ ಭಾಗವಹಿಸಲು ಈ ಸಭೆಯಿಂದ ನಿರ್ಗಮಿಸಬೇಕಾಗಿದೆ. ನಮ್ಮ ಸರ್ಕಾರದಲ್ಲಿ ಶಿಕ್ಷಕರ ಬಗ್ಗೆ, ಶಿಕ್ಷಣದ ಬಗ್ಗೆ ಆದ್ಯತೆಯನ್ನು ನಿರಂತರವಾಗಿ ಕೊಡುತ್ತಾ ಬಂದಿದ್ದೇವೆ ಎನ್ನುವುದಕ್ಕೆ ನೂರೆಂಟು ಉದಾಹರಣೆಗಳನ್ನು ನಾನು ಹೇಳಬಹುದು, ಆದರೆ ಸಮಯದ ಅಭಾವದಿಂದ ಅದನ್ನು ನಾನು ಉಲ್ಲೇಖಿಸಬಯಸುವುದಿಲ್ಲ. ಕೇವಲ ಒಂದೇ ಒಂದು ಉದಾಹರಣೆಯನ್ನು ಕೊಡುವುದಾದರೆ 1994-95ನೇ ಸಾಲಿನವರೆಗೆ ಸ್ಥಾಪಿತವಾದ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳನ್ನು ಅನುದಾನಕ್ಕೆ ಒಳಪಡಿಸುವಂತಹ ನಿರ್ಣಯವನ್ನು ನಾವು ತೆಗೆದುಕೊಂಡಿದ್ದೇವೆ. ಆ ನಿರ್ಣಯದಂತೆ ಇದುವರೆಗೆ ಸುಮಾರು ಒಂದು ಸಾವಿರ ಶಾಲೆಗಳ ಆರೂವರೆ ಸಾವಿರ ಶಿಕ್ಷಕರನ್ನು ನಾವು ಅನುದಾನದ ವ್ಯಾಪ್ತಿಗೆ ಒಳಪಡಿಸಿದ್ದೇವೆ. ಇದುವರೆಗೆ ನಾವು ಹಣವನ್ನು ಕೊಟ್ಟಿದ್ದೇವೆ. ನಂತರ ಆರ್ಥಿಕ ಮಿತವ್ಯಯ ಪರಿಸ್ಥಿತಿ ಬಂತು, ಏಕೆಂದರೆ ರಾಜ್ಯದ ಸುಮಾರು 16 ಜಿಲ್ಲೆಗಳಲ್ಲಿ ಅತಿವೃಷ್ಟಿ ಉಂಟಾದ ಪರಿಣಾಮವಾಗಿ ಆರ್ಥಿಕ ಮಿತವ್ಯಯ ಬಂತು. ಅದರಿಂದಾಗಿ ಈ ಪ್ರಕ್ರಿಯೆಗಳಿಗೆ ತೊಂದರೆಯಾಯಿತು. ಇದು ನಮ್ಮೆಲ್ಲರಿಗೂ ಗೊತ್ತಿರುವಂತಹ ಸಂಗತಿ. ಅನಂತರ ನಾವೆಲ್ಲರೂ ಒಟ್ಟಾರೆಯಾಗಿ ಮಾಡಿರುವಂತಹ ಪ್ರಯತ್ನದ

ಫಲವಾಗಿ 1991ನೇ ಇಸವಿಯವರೆಗೆ ಸ್ಥಾಪಿತವಾದ ಶಿಕ್ಷಣ ಸಂಸ್ಥೆಗಳನ್ನು ಸಹ ಅನುದಾನದ ವ್ಯಾಪ್ತಿಗೆ ಒಳಪಡಿಸಬಹುದು ಎನ್ನುವಂತಹ ಮತ್ತೊಂದು ನಿರ್ಣಯ ಆಯಿತು. ಈಗ 1991ನೇ ಇಸವಿಯವರೆಗೆ ಇರುವಂತಹ ಅನುದಾನ ರಹಿತ ಸಂಸ್ಥೆಗಳಿಗೆ ನಾವು ಅನುದಾನವನ್ನು ಕೊಡುತ್ತಿದ್ದೇವೆ. ಈಗ ಪ್ರಶ್ನೆ ಇರುವುದು 1991 ರಿಂದ 1995 ರ ತನಕ ಅನುದಾನ ಕೊಡುತ್ತೇವೆಂದು ಹೇಳಿದ್ದೇವೆ. ಮೊದಲು ಅದನ್ನು ನಾವು ಅನುದಾನಕ್ಕೆ ಒಳಪಡಿಸಿದ್ದೇವೆ, ಹಾಗಾಗಿ ಮತ್ತೆ ಅದನ್ನು ನಿಲ್ಲಿಸುವುದು ಸರಿಯಲ್ಲ, ಅದನ್ನು ಮುಂದುವರೆಸಬೇಕೆನ್ನುವುದಷ್ಟೇ ಈಗ ಇರುವಂತಹ ವಿಷಯ. 1991 ರಿಂದ 1995ರವರೆಗಿನ ಶಿಕ್ಷಣ ಸಂಸ್ಥೆಗಳಿಗೆ ನಾವು ಹಿಂದೆ ಅನುದಾನ ಕೊಟ್ಟಿದ್ದೇವೆ, 1991ರವರೆಗೆ ಕೊಟ್ಟು ಮಧ್ಯದಲ್ಲಿ ನಿಲ್ಲಿಸಿದ್ದೆವು, ಅದನ್ನು 1991ರಿಂದ 1995ರವರೆಗಿನ ಕೊಡಬೇಕೆನ್ನುವುದು ಈಗಿರುವಂತಹ ವಿಷಯ. ಇದಕ್ಕೆ ಹಣಕಾಸು ಇಲಾಖೆಯ ಜೊತೆಯಲ್ಲಿ ನಿರಂತರವಾಗಿ ನಾವು ಚರ್ಚೆ ಮಾಡುತ್ತಿದ್ದೇವೆ. ಮಾನ್ಯ ಮುಖ್ಯಮಂತ್ರಿಯವರು ಕೂಡ ಈ ವಿಚಾರದಲ್ಲಿ ಸ್ವತಃ ಆಸಕ್ತಿ ವಹಿಸಿ ಜವಾಬ್ದಾರಿಯನ್ನಿಟ್ಟುಕೊಂಡು ಹಣಕಾಸು ಇಲಾಖೆಯ ಜೊತೆಯಲ್ಲಿ ಈಗಾಗಲೇ ಈ ವಿಷಯವಾಗಿ ಸಾಕಷ್ಟು ಚರ್ಚೆ ಮಾಡಿದ್ದಾರೆ. ನಾವು 1995ರವರೆಗಿನ ಅನುದಾನ ಕೊಡುವುದಕ್ಕೆ ಬದ್ಧರಾಗಿದ್ದೇವೆ. ಆ ವಿಚಾರದಲ್ಲಿ ಯಾವುದೇ ಪ್ರಶ್ನೆ ಇಲ್ಲ. ಏಕೆಂದರೆ, ಅದು ನಮ್ಮ ಬಡ್ಜೆಟ್ ಕಮಿಟ್‌ಮೆಂಟ್ ಆಗಿರುವುದರಿಂದ ಅದನ್ನು ಕೊಡುವುದಕ್ಕೆ ನಾವು ಬದ್ಧರಾಗಿದ್ದೇವೆ. ಅದನ್ನು ಯಾವಾಗಿನಿಂದ ಕೊಡಲಾಗುತ್ತದೆ ಎಂದರೆ 1991ರವರೆಗಿನ ಕೊಡುತ್ತಿದ್ದೇವೆ, ಹಂತಹಂತವಾಗಿ ಕೊಡಬೇಕೆನ್ನುವುದು ನಮ್ಮೆಲ್ಲರ ನಿರ್ಧಾರವಾಗಿದೆ. ನಾವು ಹೇಳಿರುವಂತಹ ಮಾತು ಬದ್ಧತೆಯ ವಿಷಯವಾಗಿದೆ, ಅದನ್ನು ಕೊಡುವುದಕ್ಕೆ ನಾವು ಸಿದ್ಧರಾಗಿದ್ದೇವೆ. ಆದರೆ, ಅನುದಾನ ಕೊಡುವುದರಲ್ಲಿ ನಾಲ್ಕು ದಿನ ಹೆಚ್ಚುಕಡಿಮೆಯಾಗುತ್ತಿದೆ ಎನ್ನುವಂಥದ್ದೇನಿದೆ ಇದು ಅತಿವೃಷ್ಠಿಯಿಂದಾಗಿ ಇಷ್ಟೆಲ್ಲಾ ಆಗುತ್ತಿದೆಯೇ ವಿನಃ ಅತಿವೃಷ್ಠಿಯಾಗದಿದ್ದರೆ ಈ ರೀತಿ ಆಗುತ್ತಿರಲಿಲ್ಲ. ನಿರಂತರವಾಗಿ ಆ ಪ್ರಕ್ರಿಯೆ ನಡೆಯುತ್ತಿತ್ತು. 1991ನೇ ಇಸವಿಯವರೆಗೆ ಕೊಟ್ಟ ನಂತರವೂ ಸುಮಾರು 65

ಕೋಟಿ ರೂಪಾಯಿಗಳ ಹಣಕಾಸಿನ ನೆರವನ್ನು ನಾವು ಅನುದಾನಕ್ಕೆ ಒಳಪಡಿಸುತ್ತಿದ್ದೇವೆ. ನನಗೆ ಗೊತ್ತಿರುವ ಪ್ರಕಾರ ಸುಮಾರು 171 ಸಂಸ್ಥೆಗಳಿಗೆ 1991ನೇ ಇಸವಿಯಲ್ಲಿ ಅನುದಾನವನ್ನು ಕೊಟ್ಟಿದ್ದೇವೆ. ಈಗಲೂ ಕೊಡುತ್ತಿದ್ದೇವೆ, 1995ರವರೆಗೆ ಕೊಡುವುದಕ್ಕೆ ತಾತ್ವಿಕ ಒಪ್ಪಿಗೆ ಇದೆ. ಆದರೆ ಹಣಕಾಸಿನ ಲಭ್ಯತೆಯ ಆಧಾರದ ಮೇಲೆ ನಾವು 1995ರವರೆಗೆ ವಿಸ್ತರಿಸಬೇಕಾದಂತಹ ಅಗತ್ಯತೆ ಇದೆ. ಆ ದಿಕ್ಕಿನಲ್ಲಿ ನಾವು ನಮ್ಮ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಇದರಲ್ಲಿ ಸ್ವಲ್ಪಮಟ್ಟಿಗೆ ಸೂಕ್ಷ್ಮತೆ ಇದೆ. ತಮಗೆಲ್ಲರಿಗೂ ಗೊತ್ತಿರುವಂತೆ ಇದು ಶಾಶ್ವತ ಅನುದಾನರಹಿತವಾಗಿಯೇ ಮಂಜೂರು ಮಾಡಿಕೊಂಡಿರುವಂತಹ ಶಾಲೆಗಳು. ಆದರೆ, ನಾವು ತೀರ್ಮಾನ ತೆಗೆದುಕೊಂಡ ನಂತರದಲ್ಲಿ ಆ ಶಿಕ್ಷಕರಿಗೆ ವೇತನ ಸಿಗುತ್ತಿಲ್ಲ ಎಂಬುದಾಗಿ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ವೇತನ ಕೊಡುವುದು ಮ್ಯಾನೇಜ್‌ಮೆಂಟ್‌ಗಳ ಜವಾಬ್ದಾರಿ.

(ಗೊಂದಲ)

**ಶ್ರೀ ಬಸವರಾಜ ಹೊರಟ್ಟಿ:–** ಅವರು ಕಳುಹಿಸಿದ ಕಡತವನ್ನು ನಿಮ್ಮಲ್ಲಿಯೇ ಇಟ್ಟುಕೊಂಡು ಕುಳಿತರೆ ಅವರೇನು ಮಾಡುವುದಕ್ಕಾಗುತ್ತದೆ? ನೀವು ಕಡತವನ್ನು ಕಳುಹಿಸಬೇಕಾಗಿತ್ತು. ಹೀಗಿರುವಾಗ ಮ್ಯಾನೇಜ್‌ಮೆಂಟ್‌ನವರು ಹೇಗೆ ವೇತನವನ್ನು ಕೊಡುವುದಕ್ಕಾಗುತ್ತದೆ ಹೇಳಿ ನೋಡೋಣ.

(ಗೊಂದಲ)

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ನಾವು ಅನುದಾನ ವ್ಯಾಪ್ತಿಗೆ ಕೊಟ್ಟೇ ಕೊಡುತ್ತೇವೆ. ಆದರೆ, ಅನುದಾನದ ವ್ಯಾಪ್ತಿಗೆ ಒಳಪಡಿಸುವ ತನಕ ವೇತನ ಕೊಡಬೇಕಾದುದ್ದು ಆ ಮ್ಯಾನೇಜ್‌ಮೆಂಟ್‌ನವರ ಜವಾಬ್ದಾರಿ.

(ಗೊಂದಲ)

**ಶ್ರೀ ಬಸವರಾಜ ಹೊರಟ್ಟಿ :–** ಆ ಕಡತ ನಿಮ್ಮ ಕಚೇರಿಯಲ್ಲಿಯೇ ಇದ್ದರೆ ಅವರೇನು ಮಾಡುತ್ತಾರೆ? ನಿರ್ಣಯ ಮಾಡಿದ ನಂತರ ಆ ಕಡತವನ್ನು ಅವರಿಗೆ ಕಳುಹಿಸಿಕೊಡಬೇಕಾಗಿತ್ತು. ಸುಮ್ಮನೆ ಪುರಾಣ ಹೇಳುತ್ತಾ ಕುಳಿತರೆ ಹೇಗೆ? ಇದು ಸರಿಯಲ್ಲ.

(ಗೊಂದಲ)

**ಸಭಾಪತಿಯವರು:–** ಮಾನ್ಯ ಹೊರಟ್ಟಿಯವರೇ, ದಯಮಾಡಿ ಕುಳಿತುಕೊಳ್ಳಿ. ಸಚಿವರು ಉತ್ತರ ಕೊಡುವುದಕ್ಕೆ ಬಿಡಿ. ಅವರು ಉತ್ತರ ಕೊಟ್ಟ ನಂತರ ನಾವು ಮಾತನಾಡಿ.

(ಗೊಂದಲ)

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕೊಟ್ಟಿರುವಂತಹ ಲಿಖಿತ ಉತ್ತರವನ್ನು ನಾವು ಓದಿದ್ದೇವೆ. ಅದರಲ್ಲಿ ಆಶ್ವಾಸನೆ ನೀಡಿರುವುದನ್ನು ಬಿಟ್ಟರೆ ವೇತನಾನುದಾನಕ್ಕೆ ಒಳಪಡಿಸುತ್ತೇವೆ ಎಂದು ಎಲ್ಲಿಯೂ ಹೇಳಿಲ್ಲ.

(ಗೊಂದಲ)

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೇ, ಸರ್ಕಾರ ಏನನ್ನು ಹೇಳಿದೆ ಅದನ್ನು ಕಾರ್ಯರೂಪಕ್ಕೆ ತರಬೇಕು. ಈಗ ಹಣಕಾಸು ಇಲ್ಲ ಎಂದರೆ ಹೇಳುವಾಗ ಇವರಿಗೆ ಅದು ಗೊತ್ತಿರಲಿಲ್ಲವೆ? ಈ ಮಾತನ್ನು ಯಾರಾದರೂ ಒಪ್ಪುವುದಕ್ಕಾಗುತ್ತದೆಯೇ ನೀವು ಏನನ್ನು ಮಾಡುವುದಾಗಿ ಒಪ್ಪಿಕೊಂಡಿದ್ದೀರಿ ಅದನ್ನು ಮಾಡಿ ಎಂಬುದನ್ನಷ್ಟೇ ನಾವು ಕೇಳುತ್ತಿರುವುದು. ಈ ವಿಚಾರದಲ್ಲಿ ನಾವೇನೂ ರಾಜಕೀಯ ಮಾಡುತ್ತಿಲ್ಲ. ನೀವು ಒಪ್ಪಿರುವುದನ್ನು ಕಾರ್ಯರೂಪಕ್ಕೆ ತನ್ನಿ ಎಂಬುದನ್ನಷ್ಟೇ ನಾವು ಹೇಳುತ್ತಿದ್ದೇವೆ.

(ಗೊಂದಲ)

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಸರ್ಕಾರ ಈ ರೀತಿ ಹೇಳುತ್ತಾ ಕುಳಿತರೆ ಆಗುವುದಿಲ್ಲ. ಪರಿಸ್ಥಿತಿ ಬಹಳ ಗಂಭೀರವಾಗಿದೆ.

ಮಾನ್ಯ ಸಚಿವರಿಂದ ಈ ಉತ್ತರವನ್ನು ಕೇಳಿ ಕೇಳಿ ನಮಗೆ ಸಾಕಾಗಿದೆ. ಮನುಷ್ಯನ ತಾಳ್ಮೆಗೂ ಒಂದು ಮಿತಿ ಇರುತ್ತದೆ. ದಯಮಾಡಿ ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳೇ ಉತ್ತರ ಕೊಡುವುದು ಸೂಕ್ತವೆನಿಸುತ್ತದೆ.

(ಗೊಂದಲ)

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಯವರು ಮಾತನಾಡಲು ಎದ್ದು ನಿಂತಿದ್ದಾರೆ, ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಇಲ್ಲಿ ಏನಾಗಿದೆ ಎಂದರೆ ಮಾನ್ಯ ಸಚಿವರು ನೀಡುತ್ತಿರುವಂತಹ ಕಾರಣಗಳು ನಮಗೆಲ್ಲರಿಗೂ ಅರ್ಥವಾಗುತ್ತಿದೆ. ಆದರೆ, ಇವು ಕನ್ನಡ ಮಾಧ್ಯಮದ ಶಿಕ್ಷಣ ಸಂಸ್ಥೆಗಳು. ಅವರು ಬೇರೆ ಖಾಸಗಿ ಶಾಲೆಗಳಂತೆ ಹೆಚ್ಚಿನ ಡೊನೇಷನ್ ಆಗಲಿ, ಶುಲ್ಕವನ್ನಾಗಲಿ ತೆಗೆದುಕೊಳ್ಳುವುದಿಲ್ಲ. ಹೀಗಾಗಿ ಅವರಿಗೆ ಸಂಬಳವನ್ನು ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಸರ್ಕಾರ ಗ್ರಾಂಟ್ ಕೊಡುವುದಾಗಿ ತಿಳಿಸಿದ ಕೂಡಲೇ ಆ ಸಂಸ್ಥೆಯವರು ಶಿಕ್ಷಕರಿಗೆ ವೇತನ ನೀಡುವುದನ್ನು ನಿಲ್ಲಿಸಿಬಿಟ್ಟರು. ಹೀಗಾಗಿ ಶಿಕ್ಷಕರು ವೇತನವಿಲ್ಲದ ಪರದಾಡುತ್ತಿದ್ದಾರೆ. ನಮ್ಮೆಲ್ಲರಿಗೆ ಈ ರಾಜ್ಯದಲ್ಲಿ ಎಲ್ಲರಿಗೂ ಶಿಕ್ಷಣವನ್ನು ಕೊಡಬೇಕೆನ್ನುವಂತಹ ಒಂದು ಕಮಿಟ್‌ಮೆಂಟ್ ಇದೆ. ಇಂತಹ ಸುಮಾರು 1100 ಶಾಲೆಗಳಿವೆ, ಪ್ರೈಮರಿ ಶಾಲೆಗಳಿರಬಹುದು, ಪ್ರೌಢ ಶಾಲೆಗಳಿರಬಹುದು, ಜೂನಿಯರ್ ಕಾಲೇಜ್‌ಗಳಿರಬಹುದು, ಆ ಶಾಲೆಗಳ ಅಗತ್ಯತೆ ಇದೆ, ಅಲ್ಲಿ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರಲ್ಲವೆ. ಅಲ್ಲಿ ಖಾಸಗಿಯವರು ಶಾಲೆಗಳನ್ನು ತೆರೆಯದಿದ್ದರೆ ಸರ್ಕಾರವೇ ಶಾಲೆಗಳನ್ನು ತೆರೆಯಬೇಕಾದಂತಹ ಅವಶ್ಯಕತೆ ಇಲ್ಲತ್ತವೇ, ಅಲ್ಲಿ ಶಾಲೆಯನ್ನು ತೆರೆಯಬೇಕೆಂಬ ಬೇಡಿಕೆ ಇತ್ತಲ್ಲವೆ? ಹಾಗಿದ್ದ ಮೇಲೆ ಅಲ್ಲಿ ಶಾಲೆಗಳನ್ನು ನಡೆಸಿ ಆ ಶಿಕ್ಷಕರಿಗೆ ವೇತನವನ್ನು ಕೊಡಬೇಕಾದುದು ಸರ್ಕಾರದ ಕಮಿಟ್‌ಮೆಂಟ್ ಅಲ್ಲವೆ. ಅದು ಸರ್ಕಾರದ ಆದ್ಯ ಕರ್ತವ್ಯವಲ್ಲವೆ. ದಯವಿಟ್ಟು

ತಾವು ಆ ದೃಷ್ಟಿಯಿಂದ ವಿಚಾರ ಮಾಡಿ. ಈಗ ಆ ಶಿಕ್ಷಣ ಸಂಸ್ಥೆಯವರು ನಮಗೆ ಗ್ರಾಂಟ್ಸ್ ಬೇಡ ಎಂದು ಏಕೆ ಬರೆದುಕೊಟ್ಟಿದ್ದರು, ಈಗ ಗ್ರಾಂಟ್ಸ್ ಕೊಡುವುದಾಗಿ ತಾವು ಒಪ್ಪಿಕೊಂಡಿದ್ದೀರಿ, ಆದರೆ, ಸಂಬಳ ಏಕೆ ಕೊಟ್ಟಿಲ್ಲ ಎನ್ನುವುದು ಪ್ರಶ್ನೆಯಲ್ಲ. ಸಾಯುತ್ತಿರುವವರನ್ನು ಬದುಕಿಸುವಂತಹ ಕೆಲಸ ಮಾಡಿ. ಆ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಮಕ್ಕಳಿಗೆ ಒಳ್ಳೆಯ ಶಿಕ್ಷಣ ನೀಡುವಂತಹ ಕೆಲಸವನ್ನು ಸರ್ಕಾರ ಮಾಡಬೇಕಾಗಿದೆ.

**ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಯವರು):–** ಮಾನ್ಯ ಸಭಾಪತಿಯವರೇ, ಎಲ್ಲ ಕಡೆಗಳಿಂದ ಇವರನ್ನು ಅನುದಾನಕ್ಕೆ ಒಳಪಡಿಸಬೇಕು, ತಕ್ಷಣ ಹಣ ಬಿಡುಗಡೆ ಮಾಡಬೇಕು ಎನ್ನುವಂತಹ ಒತ್ತಾಯಗಳು ಬಂದಿವೆ. ಆ ವಿಚಾರದಲ್ಲಿ ನಾನು ಹಿಂದಕ್ಕೆ ಹೋಗಲು ಇಷ್ಟಪಡುವುದಿಲ್ಲ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನೀಡಿರುವಂತಹ ಲಿಖಿತ ಉತ್ತರದ ಕೊನೆಯ ಪ್ಯಾರಾವನ್ನು ದಯಮಾಡಿ ತಾವು ಓದಬೇಕಾಗುತ್ತದೆ.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ಇದು ಅವರ ಉತ್ತರ, ನಿಮಗೆ ನನ್ನ ಬೇರೆ ಉತ್ತರ ಇದೆ. 1987 ರಿಂದ 1994–95ರವರೆಗೆ ನಾವು ಅನುದಾನಕ್ಕೆ ಒಳಪಡಿಸಬೇಕಾದಂತಹ ಒಟ್ಟು ಶಾಲೆಗಳ ಸಂಖ್ಯೆ ಸುಮಾರು 2326 ಎಂದು ಹೇಳಬಹುದು. 1994–95ನೇ ಸಾಲಿಗೆ ಈಗ ಅನುದಾನಕ್ಕೆ ಒಳಪಡಿಸಲು ಬಾಕಿ ಇರುವ ಶಾಲೆಗಳ ಸಂಖ್ಯೆ ಸುಮಾರು 1250 ಆಗಿದ್ದು, ಅವುಗಳನ್ನು ಅನುದಾನದ ವ್ಯಾಪ್ತಿಗೆ ಒಳಪಡಿಸಲು ಸರಿಸುಮಾರು 169 ಕೊಟಿ ರೂಪಾಯಿಗಳು ಬೇಕಾಗುತ್ತವೆ. 65 ಕೋಟಿ ರೂಪಾಯಿಗಳನ್ನು ಈಗಾಗಲೇ ಬಿಡುಗಡೆ ಮಾಡಿ 1991–92ರವರೆಗೆ ಕ್ರಮವಾಗಿ ಅನುದಾನ ಕೊಟ್ಟುಕೊಂಡು ಹೋಗುವಂತಹ ಕೆಲಸಕಾರ್ಯಗಳನ್ನು ನಾವು ಮಾಡಿದ್ದೇವೆ. ನಿಜ, ನಮ್ಮ ಸರ್ಕಾರ ಒಪ್ಪಿಕೊಂಡಿದೆ. ಈಗ ನಮ್ಮ ಮುಂದಿರುವಂತಹ ಪ್ರಶ್ನೆ ಏನೆಂದರೆ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ

ಮೇಲೆ ವಿದ್ಯಾ ಕ್ಷೇತ್ರಕ್ಕೆ ಅತ್ಯಂತ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟಿದೆ. ಪ್ರಾಯಶಃ ಕಳೆದ ಆಯವ್ಯಯದಲ್ಲಿ ಸುಮಾರು ಹನ್ನೆರಡೂವರೆ ಸಾವಿರ ಕೋಟಿ ರೂಪಾಯಿಗಳಷ್ಟು ಹಣವನ್ನು ವಿದ್ಯಾ ಕ್ಷೇತ್ರಕ್ಕೆ ಕೊಡುವಂತಹ ಕೆಲಸಕಾರ್ಯಗಳನ್ನು ಮಾಡಲಾಗಿದೆ. ಇಡೀ ದೇಶದಲ್ಲಿಯೇ ಈ ರಾಜ್ಯದಲ್ಲಿ ವಿದ್ಯಾ ಕ್ಷೇತ್ರಕ್ಕೆ ಕೊಡ ಮಾಡಿದಂತಹ ಒಂದು ಅನುದಾನ ಬೇರೆ ಯಾವ ರಾಜ್ಯಗಳಲ್ಲಿಯೂ ಕೊಟ್ಟಿರುವುದಿಲ್ಲ. ಆದಕಾರಣ, ವಿದ್ಯಾ ಕ್ಷೇತ್ರಕ್ಕೆ ನಮ್ಮ ಆದ್ಯತೆ ಎಷ್ಟಿದೆ ಎಂಬುದು ಸ್ಪಷ್ಟವಾಗುತ್ತದೆ. ಹೊಸ ಇಂಜಿನಿಯರಿಂಗ್ ಕಾಲೇಜುಗಳು, 6–7 ಮೆಡಿಕಲ್ ಕಾಲೇಜುಗಳು, ಪಾಲಿಟೆಕ್ನಿಕ್‌ಗಳು ಸಹ ಹೊಸದಾಗಿ ಪ್ರಾರಂಭವಾಗಿವೆ. ಆದಕಾರಣ ವಿದ್ಯಾ ಕ್ಷೇತ್ರದ ಬಗ್ಗೆ ನಮ್ಮ ಸರ್ಕಾರ ವಿಶೇಷವಾದಂತಹ ಗಮನವನ್ನು ಹರಿಸಿದೆ ಎಂಬುದು ಈ ಅಂಕಿಅಂಶಗಳ ಪ್ರಕಾರ ಮತ್ತು ಇವೊತ್ತು ನಮ್ಮ ರಾಜ್ಯದ ವಿದ್ಯಾ ಕ್ಷೇತ್ರದಲ್ಲಿ ಆಗುತ್ತಿರುವಂತಹ ಪ್ರಗತಿಯನ್ನು ನೀಡಿದರೆ ನಮಗೆಲ್ಲರಿಗೂ ಅರ್ಥವಾಗುತ್ತದೆ. ಆದಕಾರಣ, ಇದರ ಬಗ್ಗೆ ಯಾರೂ ಕೂಡ ಚರ್ಚೆ ಮಾಡುವಂಥದ್ದಿಲ್ಲ. ಈಗ ಇರುವಂಥದ್ದು ಹಣಕಾಸಿನ ವ್ಯವಸ್ಥೆಯ ವಿಚಾರ. ಬಾಕಿ ಎಲ್ಲವನ್ನೂ ಶಿಕ್ಷಣ ಸಚಿವರು ಮಾಡುತ್ತಾರೆ, ಹಣಕಾಸು ಲಭ್ಯತೆಯನ್ನು ನಾನು ಒದಗಿಸಿಕೊಡಬೇಕಾಗುತ್ತದೆ. ಪ್ರಾಯಶಃ ನಾವು 1994–95ರವರೆಗೆ ಅನುದಾನವನ್ನು ಕೊಡುವುದಾಗಿ ಏನು ಭರವಸೆ ಕೊಟ್ಟಿದ್ದೇವೆ ಅದರ ಪ್ರಕಾರ ಕೊಟ್ಟೇ ಕೊಡುತ್ತೇವೆ.

(ಮಾನ್ಯ ಉಪಸಭಾಪತಿಯವರು ಸಭಾಪೀಠವನ್ನಲಂಕರಿಸಿದರು)

ಈ ವರ್ಷದಲ್ಲಿ ಏನಾಗಿದೆ ಎಂದರೆ ಆರ್ಥಿಕ ಮಿತವ್ಯಯ ಮತ್ತು ಈಗಾಗಲೇ ವೇತನ ಆಯೋಗದ ಶೇಕಡಾ 15ರಷ್ಟು ಅಂದರೆ ಸುಮಾರು 600 ಕೋಟಿ ರೂಪಾಯಿಗಳಷ್ಟು ಬಿಡುಗಡೆ ಮಾಡಲಾಗುತ್ತಿದೆ ಮತ್ತು ಈರುಳ್ಳಿ, ಭತ್ತ, ತೊಗರಿ, ರೇಷ್ಮೆ ಇದಕ್ಕೆಲ್ಲಾ ಬೆಂಬಲ ಬೆಲೆಯನ್ನು ಕೊಡುತ್ತಿದ್ದೇವೆ. ಸುಮಾರು ಬರಗಾಲ ಪೀಡಿತ ಪ್ರದೇಶಗಳಿಗೆ ಕೊಡುವಂಥದ್ದು. ಈ ರೀತಿ ಸ್ವಲ್ಪ ಆರ್ಥಿಕವಾಗಿ ಹೆಚ್ಚು ವ್ಯಯ ಆಗುವಂಥ ಎಲ್ಲಾ ಸಂದರ್ಭಗಳಿವೆ. ಇದರ ಅರ್ಥ ಇವರಿಗೆ ಕೊಡಬಾರದು ಎಂದಲ್ಲ. ನಿಮಗೆ ಕೊಡಬೇಕಾಗಿರುವುದನ್ನು ಕೊಡಬೇಕಾಗಿದೆ. ಇವತ್ತು ನಾವು ಗುರುವಾರದಲ್ಲಿದ್ದೇವೆ, ಮಂಗಳವಾರ

ಅಥವಾ ಬುಧವಾರದೊಳಗೆ ನಾನು, ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಮತ್ತು ಆರ್ಥಿಕ ಇಲಾಖೆಯವರು ಕುಳಿತುಕೊಂಡು ಚರ್ಚೆ ಮಾಡಿ ಎಷ್ಟು ಹಣವನ್ನು ತಕ್ಷಣ ಬಿಡುಗಡೆಗೊಳಿಸುವುದಕ್ಕೆ ಸಾಧ್ಯವಿದೆಯೋ ಅಷ್ಟು ಹಣವನ್ನು ನಿಶ್ಚಯವಾಗಿ ಬಿಡುಗಡೆ ಮಾಡುವುದಕ್ಕೆ ನಾನು ಬದ್ಧನಿದ್ದೇನೆ. ಅಂತುಇಂತು ಒಂದೆರಡು ಕಂತುಗಳಲ್ಲಿ ನಿಮ್ಮ ಎಲ್ಲಾ ಕಾರ್ಯಗಳನ್ನು ಮುಗಿಸುವಂತಹ ಕೆಲಸ ಮಾಡುತ್ತೇವೆ. ತಾವು ದಯವಿಟ್ಟು ಧರಣಿ ನಿರತರನ್ನು ಎಬ್ಬಿಸಬೇಕು, ಮತ್ತು ಎಲ್ಲವನ್ನು ಒಮ್ಮೆಲೇ ಕೊಡುವುದಕ್ಕೆ ಕಷ್ಟವಾಗುತ್ತದೆ. ಆದಕಾರಣ ಇದನ್ನು ಹಂತ ಹಂತವಾಗಿ ಕೊಡುವುದನ್ನು ನಾವು ಮುಂದುವರೆಸುತ್ತೇವೆ. ಬುಧವಾರದೊಳಗೆ ತಕ್ಷಣ ಸ್ವಲ್ಪ ಹಣ ಬಿಡುಗಡೆ ಮಾಡುವುದಕ್ಕೆ ಕ್ರಮ ಕೈಗೊಳ್ಳುತ್ತೇನೆ. ಎರಡು ಮೂರು ದಿವಸಗಳ ಕಾಲಾವಕಾಶದಲ್ಲಿ ನಾನು ಬುಧವಾರದೊಳಗೆ ಸದನಕ್ಕೆ ಪುನಃ ಉತ್ತರ ಕೊಡುತ್ತೇನೆಂದು ತಮ್ಮ ಮೂಲಕ ತಿಳಿಸಲು ಬಯಸುತ್ತೇನೆ.

**ಶ್ರೀ ಎಂ.ಸಿ. ನಾಣಯ್ಯ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸರ್ಕಾರ ಈಗ ಕೊಡಬೇಕಾಗಿರುವಂಥದ್ದು 169 ಕೋಟಿ ರೂಪಾಯಿಗಳು. ಅದರಲ್ಲಿ ಯಾರಿಗೆ ಇವತ್ತು ಸರ್ಕಾರದಿಂದ ಸಂಬಳವೇ ಸಿಗದೆ 25-30 ವರ್ಷದಿಂದ ಕೆಲಸ ಮಾಡುತ್ತಿರುವಂತಹ ಶಿಕ್ಷಕರಿಗೆ. ಯಾರು ಮೂವತ್ತು ವರ್ಷದಿಂದ ಸಂಬಳವನ್ನು ಪಡೆಯುತ್ತಿದ್ದಾರೆ. ಇನ್ನು ನಾವು ಪೇ-ಕಮೀಶನ್, ಪೇ-ಕಮೀಶನ್ ಎಂದು ಹೇಳುತ್ತಲೇ ಹೋಗುತ್ತಿದ್ದೇವೆ, ದಯವಿಟ್ಟು ಹೊಟ್ಟೆ ತುಂಬಿದವರಿಗೆ ಬೇಕಾದರೆ ಆರು ತಿಂಗಳ ಮಿತವ್ಯಯದ ಮಿತಿ ಹಾಕಿ. ಏಕೆ ಆರ್ಥಿಕ ಮಿತವ್ಯಯ ಹಾಕುವುದಕ್ಕೆ ಆಗುವುದಿಲ್ಲ ಎಂದರೆ it's an organized sector. ಇದು organized sector ಆಗಿರುವುದರಿಂದ ಎಲ್ಲಾ ಕಡೆ ಧರಣಿ ಮಾಡುತ್ತಾರೆ ಇಡೀ ಸರ್ಕಾರವನ್ನೇ ಇವರು ತಲೆಕೆಳಗೆ ಮಾಡುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡುತ್ತಾರೆ. ನಾನು ತಮ್ಮನ್ನು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ ಕಳೆದ 30 ವರ್ಷದಿಂದ ಹೊಟ್ಟೆಗೆ ಇಲ್ಲದಿರುವಂತಹ ಶಿಕ್ಷಕರು ಯಾರಿದ್ದಾರೆ ಅವರನ್ನು ಅನುದಾನಕ್ಕೆ ಒಳಪಡಿಸಲು 169 ಕೋಟಿ ರೂಪಾಯಿಗಳನ್ನು ಒದಗಿಸುವುದಕ್ಕೆ ಯಾವುದೇ

ರೀತಿಯಾದಂತಹ ಕಷ್ಟವಾಗುವುದಿಲ್ಲ. ನೀವು ಬಜೆಟ್‌ನ್ನು ಒಂದು ಲಕ್ಷ ಕೋಟಿ ರೂಪಾಯಿಗಳಿಗೆ ತೆಗೆದುಕೊಂಡು ಹೋಗುತ್ತೇವೆಂದು ಹೇಳಿದ್ದೀರಿ. ಇದರಲ್ಲಿ 169 ಕೋಟಿ ರೂಪಾಯಿ ಎಂಟತ್ತು ಸಾವಿರ ಶಿಕ್ಷಕರಿಗೆ ಕೊಟ್ಟರೆ ಅದಕ್ಕಿಂತ ದೊಡ್ಡದಾದಂತಹ ಉಪಯೋಗ ಯಾವುದು ಇಲ್ಲವೆಂದು ಹೇಳಿ, ದಯವಿಟ್ಟು ಇದಕ್ಕೆ ಆರ್ಥಿಕ ಮಿತವ್ಯಯವನ್ನು ಹೇರಬಾರದು. ನಿಮ್ಮ Economy Measure ಇದಕ್ಕೆ ಅಡ್ಡ ಬರಬಾರದು. Non-productive Expenditure ಕಡಿಮೆ ಮಾಡಿ, ಖಂಡಿತವಾಗಿ ನೀವು ಮುಂದಿನ ಬುಧವಾರ ಎಂದು ಹೇಳಿದ್ದೀರಿ, ಆರ್ಥಿಕ ಇಲಾಖೆಯವರು ಶಿಕ್ಷಕರಿಗೆ 169 ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ಅಸಹಾಯಕತೆಯನ್ನು ಖಂಡಿತವಾಗಿ ತೋರಿಸಬಾರದು. ದಯವಿಟ್ಟು ಎರಡು ಕಂತು, ಮೂರು ಕಂತಿನಲ್ಲಿ ಹಣ ಬಿಡುಗಡೆ ಮಾಡುತ್ತೇವೆ ಎಂದು ಹೇಳಬೇಡಿ. ದಯವಿಟ್ಟು ಇದನ್ನು ಜನವರಿ 1ನೇ ತಾರೀಖಿನಿಂದ ಜಾರಿಗೆ ಬರುವಂತೆ 169 ಕೋಟಿ ರೂಪಾಯಿಗಳನ್ನು ಕೂಡಲೇ ಕೊಡಬೇಕಾಗುತ್ತದೆ. ಪಾಪದ ಜನರಿಗೆ, ಹೊಟ್ಟೆ ಹಸಿದವರಿಗೆ ಮೊದಲು ಕೊಡಿ, ಹೊಟ್ಟೆ ತುಂಬಿದವರಿಗೆ ಒಂದು ವರ್ಷ ಬೇಕಾದರೆ ಮುಂದೂಡಿ ಎಂಬ ಸಲಹೆಯನ್ನು ಕೊಡುತ್ತಿದ್ದೇನೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:-** ಮಾನ್ಯ ಸಭಾಪತಿಯವರೇ, 169 ಕೋಟಿ ರೂ. ಏನಿದೆ ಈ ಹಣವನ್ನು ಸರ್ಕಾರ ಮನಸ್ಸು ಮಾಡಿದರೆ ಏನಾದರೂ ಮಾಡಿ ಕೊಡಬಹುದು.

**Sri D.V. SADANANDA GOWDA:-** I will come back to the House on Wednesday about this.

**ಉಪ ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಗಳೇ, ಇದು ಬಹಳ ಗಂಭೀರವಾದಂತಹ ಪರಿಸ್ಥಿತಿ ಇರುವುದರಿಂದ ಧಾರವಾಡದಲ್ಲಿ ಧರಣಿ ಕುಳಿತಿರುವಂತಹ ಹೆಣ್ಣು ಮಕ್ಕಳನ್ನು ದೂರದರ್ಶನದಲ್ಲಿ ನೋಡಿದೆ. ಅದನ್ನು ನೋಡಿ ನನಗೂ ಸಹ ತುಂಬಾ ಸಂಕಟವಾಯಿತು. ಇದು ಬಹಳ ಗಂಭೀರ ಸ್ವರೂಪದಲ್ಲಿರುವುದರಿಂದ ಆದಷ್ಟು ಬೇಗ ಅಂದರೆ 1995ರವರೆವಿಗೆ ಬಾಕಿ

ಇದೆ ಅದನ್ನು ಪೂರ್ಣಗೊಳಿಸಿದರೆ ಒಳ್ಳೆಯದು. ದಯಮಾಡಿ ಈ ಕೆಲಸವನ್ನು ಮಾಡಿ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ನನ್ನದೊಂದು ಮನವಿ ಏನೆಂದರೆ, ಬುಧವಾರದೊಳಗೆ ಸಮಯವನ್ನು ತಿಳಿಸಿದ್ದೀರಿ, ಶುಕ್ರವಾರ ಸದನ ಮುಗಿಯುತ್ತದೆ. ನೀವು ಮಾಡುತ್ತೀರೋ ಬಿಡುತ್ತೀರೋ ಗೊತ್ತಿಲ್ಲ. ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳು ಇದೇ ರೀತಿಯಲ್ಲಿ ನಿಮಗೆ ತಿಳಿದಿರುವಂತೆ 11ನೇ ತಿಂಗಳಿನಲ್ಲಿ ಸಭೆ ಮಾಡಿ, ಕೂಡಲೇ ಹಣ ಬಿಡುಗಡೆ ಮಾಡುತ್ತೇವೆಂದು ತಿಳಿಸಿದ್ದರು. ಆದರೆ ಅದನ್ನು ಮಾಡಿದ್ದಾರೆಯೇ? ಮಾಡಲಿಲ್ಲ. ನೀವು ಬುಧವಾರದಂದು ಮಾಡಲಿಲ್ಲ ಎಂದರೆ ಏನು ಮಾಡಬೇಕು ಹೇಳಿ. ಬುಧವಾರ ಆದೇಶ ಮಾಡಿಸುತ್ತೀರಾ?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹಣಕಾಸಿನ ಇಲಾಖೆಯೊಂದಿಗೆ ಚರ್ಚಿಸಿ ಪುನಃ ಸದನಕ್ಕೆ ಬರುತ್ತೇವೆಂದು ತಿಳಿಸಿದ್ದಾರೆ. ಸದನವು ನಡೆಯುತ್ತಿರುತ್ತದೆ.

**ಉಪ ಸಭಾಪತಿಯವರು:–** ಮಾನ್ಯ ಕಾಗೇರಿಯವರೆ, ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆ ಅದನ್ನು ಆದಷ್ಟು ಬೇಗ ನೀವು, ಮಾನ್ಯ ಮುಖ್ಯಮಂತ್ರಿಗಳು ಮತ್ತು ಆರ್ಥಿಕ ಇಲಾಖೆಯವರು ಕುಳಿತುಕೊಂಡು ಮಾಡಬೇಕು. ಕೇವಲ ಭರವಸೆ ಕೊಡುವುದಲ್ಲ, ಇದನ್ನು ಇಂಪ್ಲಿಮೆಂಟ್ ಮಾಡಬೇಕು.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಆ ರೀತಿ ಮಾಡುವ ಪ್ರಯತ್ನವನ್ನಂತೂ ಮಾಡುತ್ತೇವೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಈ ಸರ್ಕಾರ ಗುಡಿ–ಗೋಪುರಗಳನ್ನು ಕಟ್ಟುವುದಕ್ಕೆ ನಾಲ್ಕು ಕೋಟಿ ರೂಪಾಯಿಗಳನ್ನು ಕೊಡುತ್ತದೆ.

**ಉಪ ಸಭಾಪತಿಯವರು:–** ನಿಮಗೆ ಒಂದು ಒಳ್ಳೆಯ ಭರವಸೆ ಸಿಕ್ಕಿದೆ. ಆದುದರಿಂದ ನೀವು ವಿಷಯಾಂತರ ಏಕೆ ಮಾಡುತ್ತೀರಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಶಾಲೆಯಲ್ಲಿ ಪಾಠ ಮಾಡುವಂತಹ ಶಿಕ್ಷಕರಿಗೆ ಇವತ್ತು ವೇತನಾನುದಾನ ಕೊಡುವುದಕ್ಕೆ ಸರ್ಕಾರ ಹಣ ಇಲ್ಲವೆಂದು ಹೇಳುತ್ತಿದೆ. ಆದರೆ ಗುಡಿ–ಗೋಪುರ ಕಟ್ಟುವುದಕ್ಕೆ ನಾಲ್ಕು ನೂರು ಕೋಟಿ ರೂಪಾಯಿಗಳನ್ನು ಕೊಡುತ್ತದೆ.

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮೊದಲು ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಹಿಂದೆ ಸರ್ಕಾರ ಶಾಶ್ವತ ಅನುದಾನರಹಿತ ಎಂಬ ಶಬ್ದವನ್ನು ಕಿತ್ತುಹಾಕಿ ಅನುದಾನ ಕೊಡುವಂತಹ ಒಂದು ನಿರ್ಣಯವನ್ನು ಕೈಗೊಂಡಿತು ಅದರ ಹಿಂದೆ ಒಂದು ರಾಜಕೀಯ ಆಶಯವಿದೆ. ನನಗೆ ಅನ್ನಿಸುತ್ತದೆ ನಮ್ಮ ಹಣಕಾಸು ಇಲಾಖೆಯ ಅಧಿಕಾರಿಗಳು ಇದರ ಹಿಂದೆ ಇರುವಂತಹ ಉದ್ದೇಶವನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ವಿಫಲರಾಗಿದ್ದಾರೇನೋ ಎಂದು ನಾವು ಮೊದಲು ಅರ್ಥ ಮಾಡಿಕೊಳ್ಳಬೇಕಾಗಿದೆ. 1991 ರವರೆವಿಗೆ ಕೊಡುತ್ತೇವೆಂದು ಮೊದಲನೆ ಹಂತದಲ್ಲಿ ನಿರ್ಣಯವನ್ನು ಕೈಗೊಳ್ಳಲಾಯಿತು, ಆದರೆ 1991 ರವರೆಗೆ ಸಾಕಾಗುವುದಿಲ್ಲ ಅದನ್ನು 1995ರವರೆಗೆ ಕೊಡುವುದು ಉಚಿತವೆಂದು ಪುನಃ ಸರ್ಕಾರ ಅದರ ಬಗ್ಗೆ ನಿರ್ಣಯವನ್ನು ಕೈಗೊಂಡಿತು. ನಂತರ ಆರ್ಥಿಕ ಮಿತವ್ಯಯದ ನೆಪದಲ್ಲಿ ಇವತ್ತು ಹಣಕಾಸನ್ನು ಒದಗಿಸುವ ನಿಟ್ಟಿನಲ್ಲಿ ಎಲ್ಲೋ ಒಂದು ಕಡೆ ತಪ್ಪನ್ನು ಎಸಲಾಗುತ್ತಿದೆ ಎನ್ನುವಂತಹ ಸಂಗತಿಯನ್ನು ಈ ಸದನದ ಗಮನಕ್ಕೆ ತಮ್ಮ ಮೂಲಕ ತರಬಯಸುತ್ತೇನೆ. ಇವತ್ತು ಆರ್ಥಿಕ ಮಿತವ್ಯಯದ ನೆಪವನ್ನು ಹೇಳುತ್ತೀರಿ, ಆದರೆ ಇದರ ಮಧ್ಯದಲ್ಲಿಯೂ ಸಹ 699 ಶಾಲಾ ಕಾಲೇಜುಗಳಿಗೂ ಸಹ ನಾವು ಅನುದಾನವನ್ನು ಕೊಟ್ಟಿದ್ದೇವೆ. ಅಂದರೆ, ರಾಜಕೀಯ ಒತ್ತಡ ಮಾಡಬೇಕು, ಹೋರಾಟ ಮಾಡಬೇಕು, ಶಿಕ್ಷಕರು ನಿರಂತರವಾಗಿ ಇದರಲ್ಲಿಯೇ ತೊಡಗಿಸಿಕೊಳ್ಳಬೇಕು ಎನ್ನುವಂಥ ಅರ್ಥದಲ್ಲಿ, ಪ್ರತಿಯೊಂದು ಸಂದರ್ಭದಲ್ಲಿಯೂ ಸಹ ಒತ್ತಡ ಹೇರಿದಾಗ

ಮಾತ್ರ ಕೆಲಸ ಆಗುತ್ತದೆ ಎನ್ನುವಂಥ ಸ್ಥಿತಿ ನಿರ್ಮಾಣವಾದರೆ ಇದಕ್ಕೆ ಯಾರು ಜವಾಬ್ದಾರು ಎಂದು ನನಗೆ ಅರ್ಥವಾಗುತ್ತಿಲ್ಲ. ಕಳೆದ ಬಾರಿ 1995ರವರೆವಿಗೂ ಅನುದಾನ ಕೊಡುವಂತಹ ಪ್ರಕ್ರಿಯೆ ಸರಳವಾಗಿ ನಡೆದಿತ್ತು. First come first serve – ಯಾವುದು ಇಲಾಖೆಗೆ ಬರುತ್ತಿತ್ತು ಅದನ್ನು ಕೊಡುವಂತಹ ಕೆಲಸ ಸುಗಮವಾಗಿ ನಡೆಯುತ್ತಿತ್ತು. ಆದರೆ ಅದು ಯಾರ ಕಲ್ಪನೆಗೆ ಬಂತು ಎಂದು ಇವತ್ತಿಗೂ ಅರ್ಥವಾಗುತ್ತಿಲ್ಲ, ಆದರೆ ಆರ್ಥಿಕ ಮಿತವ್ಯಯವನ್ನು ಹಿಂತೆಗೆದುಕೊಳ್ಳುವಂಥ ಸಂದರ್ಭದಲ್ಲಿ 1991ರವರೆಗೆ ಮಾತ್ರ ಎಂದು ಅಡ್ಡಗೋಡೆಯ ಮೇಲೆ ದೀಪ ಇಟ್ಟಂತೆ 1991ರವರೆಗೆ ಮಾತ್ರ ಕೊಡುತ್ತೇವೆ ಎಂದು ಹೇಳುವುದು ಯಾವ ನ್ಯಾಯ ಎಂದು ಅರ್ಥವಾಗುತ್ತಿಲ್ಲ. ಆದಕಾರಣ ಈ ಸಂದರ್ಭದಲ್ಲಿ ಒಂದೇ ಒಂದು ಮಾತನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಇಡೀ ಸರ್ಕಾರದಲ್ಲಿ 1995ರವರೆಗೆ ಎಷ್ಟು ಕಡತಗಳು ಬರುತ್ತವೆ ಎನ್ನುವುದು ನಂತರದ ಮಾತು. ಆದರೆ 1991ರವರೆವಿಗೂ ನಿಜವಾಗಿಯೂ ಸರ್ಕಾರದ ಹಂತದಲ್ಲಿ ಬಂದಿರುವಂತಹ ಫೈಲುಗಳು ಎಷ್ಟು? ಸರ್ಕಾರ ಕಳೆದ ಬಜೆಟ್‌ನಲ್ಲಿ 65 ಕೋಟಿ ರೂಪಾಯಿ ಕೊಟ್ಟಿದೆ, ಆ ಹಣದಲ್ಲಿಯೇ ಈಗಿರುವಂತಹ ಎಲ್ಲಾ ಶಾಲಾ ಕಾಲೇಜುಗಳನ್ನು ಅನುದಾನಕ್ಕೊಳಪಡುವಂತಹ ಕೆಲಸ ಪ್ರಥಮವಾಗಿ ಮಾಡಬಹುದು. ಆದರೆ, ಯಾವ ಕಾರಣಕ್ಕಾಗಿ ಅಧಿಕಾರಿಗಳು ಇದಕ್ಕೆ ಅವಕಾಶ ಮಾಡಿಕೊಡುತ್ತಿಲ್ಲವೆಂದು ನನಗೂ ಅರ್ಥವಾಗುತ್ತಿಲ್ಲ. ಒಂದು ಸಲ ಸಚಿವ ಸಂಪುಟ ಸಭೆಯಲ್ಲಿ ನಿರ್ಣಯವಾದ ನಂತರವೂ ಸಹ 1995ರವರೆಗೆ ಅಲ್ಲ, 1991ರವರೆಗೆ ಮಾತ್ರ ನಾವು ಆರ್ಥಿಕ ಮಿತವ್ಯಯವನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೇವೆ ಎಂದರೆ ಇದು ಒಂದು ರೀತಿಯಲ್ಲಿ ಉದ್ಧಟತನ ಕೆಲಸವಾಗುತ್ತದೆ ಎಂದು ಬಹಳ ಗಂಭೀರವಾಗಿ ಪರಿಗಣಿಸಬೇಕು. ಎಲ್ಲದಕ್ಕೂ ಕಿರೀಟ ಇಟ್ಟಂತೆ, ನನಗೆ ಬಹಳ ಆಶ್ಚರ್ಯದ ಸಂಗತಿ ಏನೆಂದರೆ, ಸನ್ಮಾನ್ಯ ಶಿಕ್ಷಣ ಸಚಿವರು ಸಹಿ ಮಾಡಿರುವಂತಹ ಸುಮಾರು 70 ಫೈಲುಗಳಿಗೆ ಅನುದಾನ ಕೊಡುವುದಿಲ್ಲ ಎಂದು ಹೇಳುತ್ತಾರೆ ಎಂದರೆ ಸರ್ಕಾರ ಯಾವ ರೀತಿಯಲ್ಲಿ ಹೋಗುತ್ತಿದೆ ಎನ್ನುವಂಥದ್ದನ್ನು ಆತ್ಮಾವಲೋಕನ ಮಾಡಿಕೊಳ್ಳಬೇಕು. ಅನುದಾನ ಕೊಡುವ ನಿಟ್ಟಿನಲ್ಲಿ ಒಂದು

ಬದ್ಧತೆ, ಒಂದು ರಾಜಕೀಯ ಆಶಯಗಳೊಂದಿಗೆ ಇದನ್ನು ಮಾಡಲಾಗಿದೆ. ಯಾವ ಹೋರಾಟಕ್ಕೆ ಹಿಂದಿನ ಮಾನ್ಯ ಮುಖ್ಯಮಂತ್ರಿಗಳು ಹೋಗಿ ತಮ್ಮ ಬೆಂಬಲವನ್ನು ಕೊಟ್ಟಿದ್ದರು, ಸನ್ಮಾನ್ಯ ಹೊರಟ್ಟಿಯವರು ತಮ್ಮ ಬದುಕಿನ ಉದ್ದಕ್ಕೂ ಹೋರಾಟ ಮಾಡಿಕೊಂಡು ಬಂದಿದ್ದಾರೆ. ಹಾಗಾಗಿ ಸರ್ಕಾರ ಆರ್ಥಿಕ ಮಿತವ್ಯಯವನ್ನು ಹಿಂತೆಗೆದುಕೊಂಡು ಅನುದಾನ ಕೊಡುವಂತಹ ಕೆಲಸ ಮಾಡಿದೆ. ಈ ಆಶಯವನ್ನು ಅರ್ಥಮಾಡಿಕೊಂಡು ತಕ್ಷಣ ಆರ್ಥಿಕ ಮಿತವ್ಯಯವನ್ನು ಹಿಂದಕ್ಕೆ ಪಡೆದುಕೊಂಡು ಅನುದಾನ ಕೊಡುವಂತಹ ಕೆಲಸ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ಸಮಯದಲ್ಲಿ ಒಂದೇ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಈ ಸಮಯದಲ್ಲಿ ಬಜೆಟ್ ಬರುವುದಿದೆ. ಈಗ ನಾವು ಫೆಬ್ರವರಿ ತಿಂಗಳಿನಲ್ಲಿ ಇದ್ದೇವೆ, ಮಾರ್ಚಿ ತಿಂಗಳಿನಲ್ಲಿ ನಾವು ಬಜೆಟ್ ಮಂಡನೆ ಮಾಡಲಿದ್ದೇವೆ. ಅಷ್ಟರೊಳಗಾಗಿ ಎಷ್ಟು ಶಾಲೆಗಳಿಗೆ ಕೊಡುವುದಕ್ಕೆ ಆಗುತ್ತದೆ, ಅಷ್ಟು ಶಾಲೆಗಳಿಗೆ ಅನುದಾನ ಕೊಡೋಣ. ಬಜೆಟ್‌ನಲ್ಲಿ ಹಣವನ್ನು ಎತ್ತಿಟ್ಟು ಇನ್ನು ಎಷ್ಟು ಶಾಲೆಗಳಿಗೆ ಕೊಡುವುದಕ್ಕೆ ಆಗುತ್ತದೆ ಅಷ್ಟೊ ಶಾಲೆಗಳಿಗೂ ಕೊಡೋಣ.

(ಗೊಂದಲ)

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ,...

**ಶ್ರೀ ಗೋ ಮಧುಸೂದನ್:–** ಮಾನ್ಯ ಸಭಾಪತಿಯವರೇ, ನಾನು ಕೊಡುತ್ತಿರುವುದು ಸರ್ಕಾರದ ಉತ್ತರವಲ್ಲ. ನನಗೆ ಮಾತನಾಡುವುದಕ್ಕೆ ಹಕ್ಕಿದೆ. ನೀವು ಹೇಗೆ ಓಟು ತೆಗೆದುಕೊಂಡು ಬಂದಿದ್ದೀರಿ ನಾನು ಸಹ ಅದೇ ರೀತಿ ಓಟು ತೆಗೆದುಕೊಂಡು ಬಂದಿದ್ದೇನೆ.

(ಗೊಂದಲ)

**ಶ್ರೀ ಗೋ ಮಧುಸೂದನ್:-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡುವುದಕ್ಕೆ ಹಕ್ಕಿದೆ, ನಾನು ಮಾತನಾಡುತ್ತೇನೆ. ಅಲ್ಲಿಯವರೆವಿಗೂ ಅವರು ಸುಮ್ಮನೆ ಕುಳಿತುಕೊಳ್ಳಬೇಕು. ನನ್ನ ಹಕ್ಕನ್ನು ಮೊಟಕುಗೊಳಿಸುವುದಕ್ಕೆ ಇವರ್‍ಯಾರು?

(ಗೊಂದಲ)

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಉತ್ತರ ಕೊಡುವುದಕ್ಕೆ ಇವರೇನು ಮಂತ್ರಿಗಳೇ?

(ಗೊಂದಲ)

**ಉಪ ಸಭಾಪತಿಯವರು:-** ಅವರ ಅಭಿಪ್ರಾಯವನ್ನು ಅವರು ಹೇಳುತ್ತಿದ್ದಾರೆ. ಅವರೂ ಸಹ ಈ ಸದನದ ಸದಸ್ಯರು

(ಗೊಂದಲ)

**ಶ್ರೀ ಗೋ ಮಧುಸೂದನ್:-** ಮಾನ್ಯ ಸಭಾಪತಿಯವರೇ, ನಾನು ಹೇಳುವುದನ್ನು ರಾಜಕೀಯವಾಗಿ ಲಾಭ ತೆಗೆದುಕೊಳ್ಳುವುದಕ್ಕೆ ಮಧ್ಯದಲ್ಲಿ **"ಅಶ್ವತ್ಥಾಮ ಹತಃ ಕುಂಜರ"** ಮಾಡುವಂತಹ ಪ್ರಯತ್ನವನ್ನು ಸನ್ಮಾನ್ಯ ವಿರೋಧ ಪಕ್ಷದ ಸದಸ್ಯರು ಮಾಡುತ್ತಿದ್ದಾರೆ.

(ಗೊಂದಲ)

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಪಕ್ಷಾತೀತವಾಗಿ ಎಲ್ಲರೂ ಕೇಳುತ್ತಿದ್ದಾರೆ. ಅದು ಅವರಿಗೆ ಅರ್ಥವಾಗುತ್ತಿಲ್ಲವೆ?

**ಶ್ರೀ ಗೋ. ಮಧುಸೂದನ್:-** ನೀವು ನಾನು ಮಾತನಾಡಲಿಕ್ಕೆ ಬಿಡಿ. ನೀವು ಕುಳಿತುಕೊಳ್ಳಿ ಎಂದು ಹೇಳುವುದಕ್ಕಾಗುವುದಿಲ್ಲ.

(ಗೊಂದಲ)

**ಉಪ ಸಭಾಪತಿಯವರು:–** ಶ್ರೀಯುತ ಪಟೇಲ್ ಶಿವರಾಂರವರೆ, ಶ್ರೀಯುತ ಮರಿತಿಬ್ಬೇಗೌಡರವರೇ, ಶ್ರೀಯುತ ಬಸವರಾಜ ಹೊರಟ್ಟಿಯವರೇ, ದಯವಿಟ್ಟು ಕುಳಿತುಕೊಳ್ಳಿ. ಈ ರೀತಿ ಎಲ್ಲರೂ ಮಾತನಾಡಿದರೆ ಕಡತಕ್ಕೆ ಹೋಗುವುದಿಲ್ಲ. ಸನ್ಮಾನ್ಯ ಮಂತ್ರಿಗಳು ಈ ಬಗ್ಗೆ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಜೊತೆಗೆ ಈ ಬಗ್ಗೆ ಸನ್ಮಾನ್ಯ ಸಚಿವರೂ ಸಹ ಹೇಳಿದ್ದಾರೆ. ತಾವುಗಳು ಹಿರಿಯರಿದ್ದೀರಿ, ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಅವರು ನಮಗೆ ರಾಜಕೀಯ ಮಾಡುತ್ತಾರೆಂದು ಹೇಳುತ್ತಾರೆ.

(ಗೊಂದಲ)

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೆ, 'ಅಶ್ವತಾಮ ಹತ: ಕುಂಜರ' ಎಂದರೆ ವಿರೋಧ ಪಕ್ಷದವರೆಲ್ಲರೂ ಸುಳ್ಳು ಹೇಳುತ್ತಾರೆ ಎಂದರ್ಥ. ಇವರು ಟೀಚರ್ಸ್ ಮತವನ್ನು ಪಡೆದುಕೊಂಡು ಈ ರೀತಿಯಲ್ಲಿ ಹೇಳುವುದೇ?

(ಗೊಂದಲ)

**ಶ್ರೀ ಗೋ. ಮಧುಸೂದನ್:–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಡಬೇಕು. ನಾನು ಮಾತನಾಡಬೇಕಾದರೆ ಮಧ್ಯೆ ಮಾತನಾಡುವುದು ಬೇಡ.

**ಶ್ರೀ ಮರಿತಿಬ್ಬೇಗೌಡ:–** ಶಂಖವನ್ನು ಊದಿಸಿದವರೂ ಇವರೇ. ಇವರು "ಅಶ್ವತಾಮ ಹತ: ಕುಂಜರ" ಎಂದು ಹೇಳಲಿಲ್ಲವೆಂದು ಹೇಳುತ್ತಾರೆ. ಅವರೆಲ್ಲರೂ ಮಾತನಾಡಿದಾಗ ನಾವು ಕೇಳಲಿಲ್ಲವೇ?

(ಗೊಂದಲ)

**ಶ್ರೀ ಮನೋಹರ್ ಮಸ್ಕಿ:–** ಮಾನ್ಯ ಸಭಾಪತಿಯವರೇ, ನನ್ನೊಂದು point of order ಇದೆ.

**ಉಪ ಸಭಾಪತಿಯವರು:-** ಶ್ರೀಯುತ ಮರಿತಿಬ್ಬೇಗೌಡರವರೇ, ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಮನೋಹರ್ ಮಸ್ಕಿಯವರ point of order ಏನು?

**ಶ್ರೀ ಮತ್ತಿಕಟ್ಟಿ ವೀರಣ್ಣ:-** ಮಾನ್ಯ ಸಭಾಪತಿಯವರೇ, ಶ್ರೀಯುತ ಗಣೇಶ್ ಕಾರ್ಣಿಕ್‌ರವರು ಮಾತನಾಡಿದರು, ಯಾರಾದರೂ object ಮಾಡಿದರಾ? ಶ್ರೀಯುತ ನಮೋಶಿಯವರು ಮಾತನಾಡಿದರು. ಯಾರಾದರೂ object ಮಾಡಿದರಾ?

**ಶ್ರೀ ಗೋ. ಮಧುಸೂದನ್:-** ನಾನು ಮಾತನ್ನೇ ಆಡಿಲ್ಲ. ಅದು ಹೇಗೆ 'dilute' ಎಂದು ಹೇಳುತ್ತೀರಾ? This is my privilege Mr. former Chairman. This is my privilege. You can't utter like that.

**ಶ್ರೀ ಮತ್ತಿಕಟ್ಟಿ ವೀರಣ್ಣ:-** ಮಾನ್ಯ ಸದಸ್ಯರಲ್ಲಿ ಒಂದು ವಿನಂತಿ. ತಾವು ಮಾತನಾಡಿ. ಆದರೆ ತಾವು ಮಾತನಾಡಲಿಕ್ಕೆ ತಯಾರು ಇಲ್ಲ. ಇದರಲ್ಲಿ ರಾಜಕೀಯ ಬೆರಸಬೇಡಿ.

(ಗೊಂದಲ)

**ಶ್ರೀ ಗೋ. ಮಧುಸೂದನ್:-** ನಾನು ಮಾತನ್ನೇ ಆಡಿಲ್ಲ. ಅದು ಹೇಗೆ 'dilute' ಎಂದು ಹೇಳುತ್ತೀರಾ? ನಾನು ಸಹ ಅದೇ ಶಿಕ್ಷಕರ ಕ್ಷೇತ್ರದಿಂದ ಬಂದಿದ್ದೇನೆಂದು ಮಾನ್ಯ ಸದಸ್ಯರುಗಳು ತಿಳಿದುಕೊಳ್ಳಬೇಕು. ನಾನು ಮೂರು ಬಾರಿ ಗೆದ್ದು ಬಂದಿದ್ದೇನೆ.

**ಉಪ ಸಭಾಪತಿಯವರು:-** ಶ್ರೀಯುತ ಮರಿತಿಬ್ಬೇಗೌಡರವರೇ, ತಾವು ಕುಳಿತುಕೊಳ್ಳಬೇಕು. ತಾವು ಪದೇ ಪದೇ ಎದ್ದು ನಿಲ್ಲಬಾರದು. ತಾವು ಸದನದಲ್ಲಿ ಈ ರೀತಿ ನಡೆದುಕೊಳ್ಳಬಾರದು. ದಯವಿಟ್ಟು ಕುಳಿತುಕೊಳ್ಳಿ. ಶ್ರೀಯುತ ಮಧುಸೂದನ್‌ರವರು ಮಾತನಾಡುತ್ತಿದ್ದಾರೆ. ಅವರ ಅಭಿಪ್ರಾಯವನ್ನು ಹೇಳಲಿಕ್ಕೆ ಅವಕಾಶವನ್ನು ಕೊಡಿ. ಶ್ರೀಯುತ ಮಧುಸೂದನ್‌ರವರೇ ತಾವು ನೇರ ವಿಷಯಕ್ಕೆ ಬಂದು ಮಾತನಾಡಿ.

(ಗೊಂದಲ)

**ಶ್ರೀ ಗೋ. ಮಧುಸೂದನ್:–** ಮಾನ್ಯ ಸಭಾಪತಿಯವರೇ, ಸರ್ಕಾರ ಮಾರ್ಚ್ ತಿಂಗಳಿನಲ್ಲಿ . .

**ಶ್ರೀ ಮನೋಹರ್ ಮಸ್ಕಿ:–** ಮಾನ್ಯ ಸಭಾಪತಿಯವರೆ, ನನ್ನದೊಂದು point of order ಇದೆ. ನಮ್ಮ ನಿಯಮ 306 ರ ಪ್ರಕಾರ ಈ ಸದನದ ಒಬ್ಬ ಗೌರವಾನ್ವಿತ ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದರೆ, ಅವರು ಅಭಿಪ್ರಾಯವನ್ನು ವ್ಯಕ್ತಪಡಿಸುವಾಗ ಅದನ್ನು ಅಡ್ಡಿಪಡಿಸುವುದು ನಿಯಮ 306ರ ಉಲ್ಲಂಘನೆಯಾಗುತ್ತದೆ ಎಂದು ತಮ್ಮ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಆದ್ದರಿಂದ, ದಯವಿಟ್ಟು ಸದಸ್ಯರಿಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡುವುದಕ್ಕೆ ಅವಕಾಶ ಕೊಡಿ.

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೆ,......

**ಉಪ ಸಭಾಪತಿಯವರು:–** ತಾವು ಸಭಾಪತಿಗಳಾಗಿ ಕೆಲಸ ಮಾಡಿದ್ದೀರಿ. ದಯವಿಟ್ಟು ಕುಳಿತುಕೊಳ್ಳಿ. ಶ್ರೀಯುತ ಮಧುಸೂದನ್‌ರವರೇ, ತಾವು ಈ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಎರಡೇ ನಿಮಿಷಗಳಲ್ಲಿ ತಮ್ಮ ಅಭಿಪ್ರಾಯವನ್ನು ನೇರವಾಗಿ ಹೇಳಬೇಕು.

**ಶ್ರೀ ಗೋ. ಮಧುಸೂದನ್:–** ಮಾನ್ಯ ಸಭಾಪತಿಯವರೆ, ಮುಂದಿನ ಮಾರ್ಚ್ ತಿಂಗಳಿನಲ್ಲಿ ನಮ್ಮ ಸರ್ಕಾರ ಬಜೆಟ್ ಅನ್ನು ಮಂಡನೆ ಮಾಡ್ತುವುದು ಇದೆ. ನಾನು ಸರ್ಕಾರವನ್ನು ಒತ್ತಾಯ ಮಾಡುವುದೇನೆಂದರೆ ಬಜೆಟ್‌ನ ಒಳಗಾಗಿ ನಮ್ಮ ಈ ಎಲ್ಲಾ ಶಾಲೆಗಳಿಗೆ ಬೇಕಾದಂತಹ ವೇತನ ಅನುದಾನವನ್ನು ಬಿಡುಗಡೆ ಮಾಡುವಂತಹ ಪ್ರಯತ್ನವನ್ನು ಮಾಡಿ. ಆಕಸ್ಮಾತ್ ನಿಮಗೆ ಆರ್ಥಿಕವಾದಂತಹ ತೊಂದರೆಗಳಿವೆ ಎಂದಾದರೆ ಎಲ್ಲವನ್ನು ಸಿದ್ಧತೆ ಮಾಡಿಕೊಂಡು ಬಜೆಟ್‌ನೊಳಗೆ ಎಲ್ಲದಕ್ಕೂ ಹಣವನ್ನು ಸಂಗ್ರಹ ಮಾಡಿ ಇಟ್ಟುಕೊಂಡು ನಮ್ಮ ಎಲ್ಲಾ ಶಿಕ್ಷಕರಿಗೆ ಬೇಕಾದಂತಹ ಘೋಷಣೆಯನ್ನು ಮಾಡಿ ನಮ್ಮ ಶಿಕ್ಷಕರು ಈಗ ಹೊರಗಡೆ ಆತಂಕದಲ್ಲಿದ್ದಾರೆ. ಅವರ ಆತಂಕ ಏನೆಂದರೆ, ಇನ್ನು ಎಲ್ಲಿಯೂ ಅವರಿಗೆ ಸಾಲ ಸಿಕ್ಕುವುದಿಲ್ಲ. ಆ ಒಂದು

ಸ್ಥಿತಿಯಲ್ಲಿ ಆ ಎಲ್ಲಾ ಶಿಕ್ಷಕರಿದ್ದಾರೆ. ಅವರಿಗೆ ಒಂದು ಭದ್ರತೆ ಬೇಕಾಗಿದೆ. ಅದಕ್ಕೋಸ್ಕರ ದಯಮಾಡಿ ಶಿಕ್ಷಣ ಸಚಿವರು, 'ನಾವು ಬಜೆಟ್‌ನ ಒಳಗಾಗಿ ನಿಮ್ಮ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುತ್ತೇವೆ, ಪ್ರತಿಯೊಂದು ಶಿಕ್ಷಕರಿಗೂ ಸಹ ನಾವು ಸಂಬಳವನ್ನು ಕೊಡುತ್ತೇವೆ'. ಎನ್ನುವಂತಹ ಘೋಷಣೆಯನ್ನು ಮಾಡಿ ಎಂದು ಒತ್ತಾಯ ಮಾಡಲಿಕ್ಕೆ ನಾನು ನಿಂತಿದ್ದೇನೆ. ಅರ್ಥವಾಗದೇ ಪಾಪ ಏನೋ ಮಾತನಾಡಿದರು. ಅವರ ಬಗ್ಗೆ ನನಗೆ ಕನಿಕರ ಇದೆ.

**ಉಪ ಸಭಾಪತಿಯವರು:–** ಮಾನ್ಯ ಸಚಿವರು ಸ್ವಲ್ಪ ಇದರ ಬಗ್ಗೆ ಮಾತನಾಡಬೇಕು. ಇದರ ಬಗ್ಗೆ ಸುದೀರ್ಘವಾಗಿ ಚರ್ಚೆಯಾಗಿದೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೆ, ಈಗ ಎಲ್ಲರಿಗೂ ಎಲ್ಲಾ ವಿಷಯ ಗೊತ್ತಿದೆ. ಅನುದಾನ ನೀಡಲು ದುಡ್ಡು ಬೇಕು, ದುಡ್ಡಿಗಾಗಿ ಮುಖ್ಯಮಂತ್ರಿಗಳು ಹಣಕಾಸು ಇಲಾಖೆಯವರೊಂದಿಗೆ ಸಭೆ ಮಾಡುತ್ತೇವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಅದರ ಹಿನ್ನೆಲೆಯಲ್ಲಿ ಈ ಸದನ ಮುಗಿಯುವುದರೊಳಗಾಗಿ ಈ ವಿಷಯವನ್ನು ಪುನಃ ಮುಖ್ಯಮಂತ್ರಿಗಳು ಮತ್ತು ನಾನು ಈ ಸದನದಲ್ಲಿ ತರುತ್ತೇವೆ. ಆ ಸಂದರ್ಭದಲ್ಲಿ ಹೇಳುವಂತಹ ಅಭಿಪ್ರಾಯಗಳಿದ್ದರೆ ಅವುಗಳನ್ನು ಜೋಡಿಸಿಕೊಳ್ಳುವುದಕ್ಕೆ ಅವಕಾಶವಿದೆ. ನಮ್ಮ ಸರ್ಕಾರ ಶಿಕ್ಷಕರ ಪರವಾಗಿದೆ. ನಮ್ಮ ಶಿಕ್ಷಣ ಇಲಾಖೆಯನ್ನು ಇನ್ನಷ್ಟು ಚೆನ್ನಾಗಿ ಮಾಡಲಿಕ್ಕೆ ನಾವು ಬದ್ಧತೆಯನ್ನು ತೋರಿಸಿದ್ದೇವೆ.

**ಉಪ ಸಭಾಪತಿಯವರು:–** ಮಾನ್ಯ ಸಚಿವರೇ, ಒಂದು ನಿಮಿಷ. ಬರುವ ಮಂಗಳವಾರ–ಬುಧವಾರದಲ್ಲಿ ನಾವು ಸಭೆ ಸೇರಿ ಮಾಡುತ್ತೇವೆಂದು ಈಗ ಮುಖ್ಯಮಂತ್ರಿಗಳು ಹೇಳಿದ್ದಾರೆ. ತಾವು ಅದನ್ನು ಆದಷ್ಟು ಬೇಗ ಮಾಡುವ ಪ್ರಯತ್ನ ಮಾಡಿ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೇ, ಆಗಬಹುದು.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಸರ್ಕಾರ ಕೊಟ್ಟಂತಹ ಉತ್ತರ ತೃಪ್ತಿಯಾಗಲಿಲ್ಲ. ತಾವು ದಯವಿಟ್ಟು ಕೇಳಬೇಕು. ಏಕೆಂದರೆ, ಮಾನ್ಯ ಮುಖ್ಯಮಂತ್ರಿಗಳು ಕೂಡ ಇದೇ ಸೆಮಿನಾರ್‌ನಲ್ಲಿ 1994-95 ರವರೆಗೆ ನಾವು ಅನುದಾನವನ್ನು ಕೊಡುತ್ತೇವೆಂದು ಘೋಷಣೆ ಮಾಡಿದರು. ಮಾನ್ಯ ಮಂತ್ರಿಗಳೂ ಕೂಡ ಸಭಾಪತಿಯವರ ಅಧ್ಯಕ್ಷತೆಯಲ್ಲಿ ನಡೆದಂತಹ ಸಭೆಯಲ್ಲಿ ಜೂನ್ 1ನೇ ತಾರೀಖಿನಿಂದ ಕೊಡುತ್ತೇವೆಂದು ಹೇಳಿದ್ದರು. ಇದೇ ಸದನದಲ್ಲಿ ಬಹಳಷ್ಟು ಭರವಸೆಗಳನ್ನು ಕೊಟ್ಟಿದ್ದು, ಯಾವುದೂ ಸಹ ಈಡೇರಲಿಲ್ಲ. ಆ ಕಾರಣಕ್ಕೋಸ್ಕರ ನೀವು ಬುಧವಾರ ಈ ಬಗ್ಗೆ ಘೋಷಣೆ ಮಾಡುವವರೆಗೆ ನಾವು ಇದನ್ನು ವಿರೋಧ ಮಾಡಿ ಧರಣಿಯನ್ನು ಮಾಡುತ್ತೇವೆ.

**ಶ್ರೀ ಮರಿತಿಬ್ಬೇಗೌಡ:-** ನಾವೆಲ್ಲರೂ ಸದನದ ಭಾವಿಯೊಳಗೆ ಧರಣಿ ಕುಳಿತುಕೊಳ್ಳುತ್ತೇವೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:-** ಸರ್ಕಾರ ಇಷ್ಟು ಸಕಾರಾತ್ಮಕವಾಗಿ ಸ್ಪಂದಿಸಿದ ನಂತರವೂ ಸಹ ನಮ್ಮ ಗೌರವಾನ್ವಿತ ಸದಸ್ಯರುಗಳು ಈ ರೀತಿ ಧರಣಿ ಮಾಡುವಂತಹ ಒಂದು ಹಂತಕ್ಕೆ ಹೋಗಬಾರದು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಜೊತೆಗೆ ಹೊರಗಡೆ ಧರಣಿ ಮಾಡುತ್ತಿರುವ ಶಿಕ್ಷಕರಲ್ಲಿಯೂ ವಿನಂತಿ ಮಾಡಿಕೊಳ್ಳುತ್ತೇನೆ. ಶಿಕ್ಷಕರುಗಳು ತಮ್ಮ ಧರಣಿಯನ್ನು ಹಿಂತೆಗೆದುಕೊಳ್ಳಬೇಕು. ಮಕ್ಕಳಿಗೆ ಪರೀಕ್ಷೆ ಬಂದಿದೆ, ಪರೀಕ್ಷೆಗೆ ಅಗತ್ಯವಾದ ಪಾಠ-ಪ್ರವಚನಗಳನ್ನು ಮಾಡಬೇಕಾದಂತಹ ಅಗತ್ಯತೆ ಇದ್ದು, ಅದನ್ನು ಅವರು ಮಾಡಬೇಕು. ಮಗುವಿನ ಕೇಂದ್ರೀಕರಿಸಿ ನಮ್ಮ ಶಿಕ್ಷಣ ವ್ಯವಸ್ಥೆ ಇರಬೇಕೆಂದು ನಾವೆಲ್ಲರೂ ಬಯಸುತ್ತೇವೆ. ಮಕ್ಕಳಿಗೆ ಶಿಕ್ಷಣದ ಪ್ರಾಮುಖ್ಯತೆ ಗೊತ್ತಿದೆ. ಇವತ್ತು ಮಕ್ಕಳಿಗೆ ಆದ್ಯತೆ ಮೇಲೆ ಶಿಕ್ಷಣವನ್ನು ಕೊಡಬೇಕೆನ್ನುವುದು ನಮ್ಮೆಲ್ಲರಿಗೂ ಗೊತ್ತಿದೆ. ಇಂತಹ ಸಂದರ್ಭದಲ್ಲಿ ಸರ್ಕಾರ ಇಷ್ಟೊಂದು ಸಕಾರಾತ್ಮಕವಾಗಿ ಸ್ಪಂದಿಸುತ್ತಿರುವ ಸಂದರ್ಭದಲ್ಲಿ ನಮ್ಮ ಗೌರವಾನ್ವಿತ ಸದಸ್ಯರುಗಳು ಈ ರೀತಿಯಲ್ಲಿ ಧರಣಿ ಮಾಡಬಾರದು ಎಂದು ವಿನಂತಿಸಿಕೊಳ್ಳುತ್ತೇನೆ. ಇದರ ಜೊತೆಗೆ ಧರಣಿ ನಿರತ ಶಿಕ್ಷಕರುಗಳು ಸಹ ನಮ್ಮ ಮಕ್ಕಳ ಭವಿಷ್ಯವನ್ನು ಕಣ್ಣು ಮುಂದಿಟ್ಟುಕೊಂಡು, ಸರ್ಕಾರ ಇಷ್ಟು ಒಳ್ಳೆಯ ನಿರ್ಣಯಗಳನ್ನು

ಹೇಳುತ್ತಿರುವಾಗ ಅವರು ಸಹ ತರಗತಿಗಳನ್ನು ನಡೆಸಿ, ಮಕ್ಕಳ ಪರೀಕ್ಷೆಯನ್ನು ಸಮರ್ಥವಾಗಿ ನಡೆಸಬೇಕಾದಂತಹ ಪ್ರಯತ್ನಗಳನ್ನು ಮಾಡಬೇಕು. ಏಕೆಂದರೆ, ಈ ವಿಚಾರದಲ್ಲಿ ಪಾಲಕರಿಗೂ ಆತಂಕವೂ ಇದೆ. 'ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಬೇಕಾದಂತಹ ಶಿಕ್ಷಕರುಗಳು ಪರೀಕ್ಷೆಯ ಈ ಸಂದರ್ಭದಲ್ಲಿ ಅಂದರೆ ಮಾರ್ಚ್-ಏಪ್ರಿಲ್ ತಿಂಗಳುಗಳಲ್ಲಿ ಪರೀಕ್ಷೆ ಇದೆ, ಈ ಸಂದರ್ಭದಲ್ಲಿ ಧರಣಿ ಕುಳಿತಿದ್ದಾರೆ' ಎಂದು ಪಾಲಕರು ಮತ್ತು ಮಕ್ಕಳು ಆತಂಕಕ್ಕೆ ಒಳಗಾಗಬಾರದು. ಸರ್ಕಾರದ ವತಿಯಿಂದ ಇಷ್ಟೊಂದು ನಮ್ಮ ಬದ್ಧತೆಯನ್ನು ಹೇಳಿದ್ದೇವೆ. ನಾವು ಇಷ್ಟೊಂದು ಬದ್ಧತೆಯನ್ನು ತೋರಿಸಿದ ನಂತರವೂ ಸಹ ಈಗ ಹೇಗೋ ಆಗಿಯೇ ಆಗುತ್ತದೆ, ಅದರ ಲಾಭವನ್ನು ನಾವೆಲ್ಲರೂ ತೆಗೆದುಕೊಳ್ಳೋಣವೆಂದು ಯಾರಾದರೂ ಯೋಚನೆ ಮಾಡಿದರೆ ಅದು ಸರಿ ಹೋಗುವುದಿಲ್ಲ. ಅದು ಸರಿಯಾದಂತಹ ನಿರ್ಣಯವಲ್ಲ.

(ಈ ಹಂತದಲ್ಲಿ ಮಾನ್ಯ ಸದಸ್ಯರುಗಳಾದ ಶ್ರೀಯುತ ಪುಟ್ಟಣ್ಣ,
ಶ್ರೀಯುತ ಮರಿತಿಬ್ಬೇಗೌಡ ಸದನದ ಬಾವಿಗೆ ಬಂದು ಧರಣಿ ನಿರತರಾದರು)

ಮಾನ್ಯ ಸದಸ್ಯರುಗಳಲ್ಲಿ ಮತ್ತು ಧರಣಿ ನಿರತ ಶಿಕ್ಷಕರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಮಕ್ಕಳ ದೃಷ್ಟಿಯಿಂದ ಮತ್ತು ಪರೀಕ್ಷೆಯ ದೃಷ್ಟಿಯಿಂದ ಸರ್ಕಾರ ಈ ರೀತಿಯಲ್ಲಿ ಸಕಾರಾತ್ಮಕವಾಗಿ ಸ್ಪಂದಿಸಿರುವುದರಿಂದ ಗೌರವಾನ್ವಿತ ಸದಸ್ಯರುಗಳು ಸ್ವಸ್ಥಾನಕ್ಕೆ ಹೋಗಬೇಕು ಮತ್ತು ಧರಣಿ ನಿರತ ಶಿಕ್ಷಕರು ತಮ್ಮ ಧರಣಿಯನ್ನು ಹಿಂತೆಗೆದುಕೊಳ್ಳಬೇಕು.

**ಶ್ರೀ ಮಾನೆ ಶ್ರೀನಿವಾಸ್:-** ಮಾನ್ಯ ಸಭಾಪತಿಯವರೇ, ಸರ್ಕಾರದ ಖಜಾನೆ ತುಂಬಿ ತುಳುಕುತ್ತಿದೆ ಎನ್ನುವಂತಹ ಮಾತನ್ನು ಹಲವಾರು ಸಂದರ್ಭಗಳಲ್ಲಿ ಹೇಳುತ್ತಿದ್ದಾರೆ. ಅದು ಎಲ್ಲಿ ತುಂಬಿ ತುಳುಕುತ್ತಿದೆ ಎಂದು ಮಾನ್ಯ ಸಚಿವರು ಹೇಳುವಂತಹ ಕೆಲಸವನ್ನು ಮಾಡಬೇಕು. ಎಲ್ಲಿ ತುಂಬಿ ತುಳುಕುತ್ತಿದೆ ಎಂದು ಹೇಳಿದರೆ ನಾವೇ ಅಲ್ಲಿಗೆ ಹೋಗಿ ಆರಿಸಿಕೊಂಡು ಬಂದು ಆ ಶಿಕ್ಷಕರಿಗೆ ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ.

**ಶ್ರೀ ರಾಮಕೃಷ್ಣ:–** ಮಾನ್ಯ ಸಭಾಪತಿಯವರೇ ಸುಮಾರು ನಾಲ್ಕು ಗಂಟೆಯಿಂದ ಸತತವಾಗಿ ಶಿಕ್ಷಕರ ಬಗ್ಗೆ ವ್ಯರ್ಥ ಕಲಾಪ ನಡೆಯುತ್ತಿದೆ. ಅಲ್ಲಿ ಶಿಕ್ಷಕರುಗಳು ಅಮರಣಾಂತರ ಮುಷ್ಕರ ಹೂಡಿ ಸಾಯುತ್ತಿದ್ದಾರೆ. ಅವರಿಗೆ ಬೆಂಬಲ ಸೂಚಿಸಿ ನಾನು ಕೂಡ ಧರಣಿಗೆ ಹೋಗುತ್ತಿದ್ದೇನೆ.

**ಶ್ರೀ ಪಟೇಲ್ ಶಿವರಾಂ:–** ಅವರು ಮಂಗಳವಾರ–ಬುಧವಾರ ಎಂದು ಹೇಳುತ್ತಿರುವುದನ್ನು ನೋಡಿದರೆ ಅದು ಇನ್ನೂ ಪರಿಶೀಲನೆಯಲ್ಲಿದೆ ಎನ್ನುವ ರೀತಿಯಲ್ಲಿ ಮಾತನಾಡುತ್ತಿದ್ದಾರೆ.

(6.00 ಗಂಟೆ)

**ಉಪ ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಗಳು ಅಷ್ಟೊಂದು ಕ್ಲೀಯರ್ ಆಗಿ ಹೇಳಿದ್ದಾರೆ. ಆದರೂ ಧರಣಿ ಮಾಡುತ್ತೇವೆ ಎಂದರೆ ಹೇಗೆ?

**ಶ್ರೀ ಪಟೇಲ ಶಿವರಾಂ:–** ಶಿಕ್ಷಕರಿಗೆ 1000 ರೂ.ಗಳ ಸಂಬಳವನ್ನು ಸಹ ಕೊಡುತ್ತಿಲ್ಲ. ಶಿಕ್ಷಕರಿಂದಲೇ ಹಣವನ್ನು ತೆಗೆದುಕೊಂಡಿದ್ದಾರೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಗಳೇ, ಮಾನ್ಯ ಮುಖ್ಯಮಂತ್ರಿಗಳು, 'ಬುಧವಾರ ಸದನಕ್ಕೆ ಬಂದು ಇದಕ್ಕೆ ಒಂದು ಪರಿಹಾರವನ್ನು ಸೂಚಿಸುತ್ತೇನೆ' ಎಂದು ಹೇಳಿದ್ದಾರೆ. ಆ ಮಧ್ಯೆ ಶಿಕ್ಷಣ ಸಚಿವರು ಸೋಮವಾರವೇ ಹಣಕಾಸು ಇಲಾಖೆಯ ಅಧಿಕಾರಿಗಳ ಜೊತೆ ಮತ್ತು ಶಿಕ್ಷಣ ಇಲಾಖೆ ಅಧಿಕಾರಿಗಳ ಜೊತೆಯಲ್ಲಿ ಸಭೆ ಮಾಡಿ, ಸದನಕ್ಕೆ ಬಂದು ಪಾಸಿಟಿವ್ ಆಗಿ ಹೇಳಲಿ. ಉಳಿದವರ ವಿಚಾರ ಬಿಡಿ, ಆದರೆ ಮಾನ್ಯ ಮುಖ್ಯಮಂತ್ರಿಗಳು ಈಗ ಹೇಳಿಕೆಯನ್ನು ಕೊಟ್ಟಿದ್ದಾರೆ. ಆದ್ದರಿಂದ ಮಾನ್ಯ ಮರಿತಿಬ್ಬೇಗೌಡರಿಗೆ, ಪುಟ್ಟಣ್ಣನವರಿಗೆ ವಿನಂತಿ ಮಾಡುತ್ತೇನೆ, ಇದೊಂದು ಸಾರಿ ಅವರಿಗೆ ಸಮಯವನ್ನು ಕೊಡಿ. ಹೇಳಿದ ಹಾಗೆ ಮಾಡದಿದ್ದರೆ, ಶ್ರೀಯುತರಾದ ಗಣೇಶ್ ಕಾರ್ಣಿಕರವರು, ನಮೋಶಿ, ಶಿವಯೋಗಿಸ್ವಾಮಿ, ಜಿಣಗಾ, ಲಿಂಬೀಕಾಯಿಯವರು ಎಲ್ಲರೂ ಆ ಕಡೆಯವರು ಇದ್ದಾರೆ, ನಮ್ಮ ಕಡೆಯವರು ಇದ್ದಾರೆ, ಎಲ್ಲರು ಸೇರಿ ಹೋರಾಟ ಮಾಡೋಣ. ಇದೇ ಎಲ್ಲರ ಅಭಿಪ್ರಾಯ ಎಂದು ನಾನು ಹೇಳುತ್ತಿದ್ದೇನೆ. ದಯಮಾಡಿ ಬುಧವಾರ ಈ

ಸಮಸ್ಯೆಯನ್ನು ಪರಿಹರಿಸಿ ಅನುದಾನವನ್ನು ಬಿಡುಗಡೆ ಮಾಡುವ ನಿರ್ಧಾರವನ್ನು ಈ ಸದನದಲ್ಲಿ ಪ್ರಕಟಿಸುತ್ತಾರೆ ಎಂದು ತಿಳಿದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಬುಧುವಾರದವರೆಗೆ ಅವರಿಗೆ ಸಮಯವನ್ನು ಕೊಟ್ಟು ಈಗ ನಿಮ್ಮ ಸ್ಥಾನಗಳಿಗೆ ಬಂದು ಕುಳಿತುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೇ, ಮರಿತಿಬ್ಬೇಗೌಡರು ಹಿರಿಯ ಸದಸ್ಯರು ಅವರು ಧರಣಿಯನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಜವಾಬ್ದಾರಿಯುತವಾಗಿ ಮಾತನಾಡಿದ್ದಾರೆ, ಅವರ ಮಾತಿಗೆ ನಾವು ಗೌರವ ಕೊಡೋಣ. ಬುಧವಾರ ಯಾವುದೇ ನಿರ್ಧಾರವನ್ನು ತೆಗೆದುಕೊಳ್ಳದಿದ್ದರೆ ನಾವು ನಿಮ್ಮ ಜೊತೆಯಲ್ಲಿ ಧರಣಿ ಕೂಡುತ್ತೇವೆ.

**ಉಪ ಸಭಾಪತಿಯವರು:–** ಶಿಕ್ಷಕರು ಧರಣಿಯನ್ನು ವಾಪಸ್ ತೆಗೆದುಕೊಳ್ಳುವಂತೆ ಸದಸ್ಯರು ವಿನಂತಿ ಮಾಡಿಕೊಳ್ಳಿ.

**ಶ್ರೀಮತಿ ಮೋಟಮ್ಮ:–** ಇಷ್ಟೊತ್ತು ನಾವು ಕೂಡ ಶಿಕ್ಷಕರ ಪರವಾಗಿ ಮಾತನಾಡಿದ್ದೇವೆ. ಅವರಿಗೆ ಹೊಟ್ಟೆಗಿಲ್ಲ ಸಂಬಳವನ್ನು ಕೊಡಿ, ಶಿಕ್ಷಕರ ಧರಣಿ ಮಾಡುತ್ತಿರುವುದರಿಂದ ಮಕ್ಕಳಿಗೂ ತೊಂದರೆಯಾಗುತ್ತಿದೆ. ಶಿಕ್ಷಣವೇ ನಮ್ಮ ಗುರಿ ಎನ್ನುವುದನ್ನು ಹೇಳಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಅದಕ್ಕೆ ಒಪ್ಪಿಕೊಂಡಿದ್ದಾರೆ. ಇದು ಆರ್ಥಿಕ ಇಲಾಖೆಯವರಿಗೂ ಅರ್ಥವಾಗುತ್ತದೆ ಎಂದು ನಾವು ಅಂದುಕೊಂಡಿದ್ದೇವೆ. ಬುಧವಾರದವರೆಗೆ ಸರ್ಕಾರಕ್ಕೆ ಸಮಯವನ್ನು ಕೊಡೋಣ. ನಂತರ ಬೇಕಾದರೆ ಸಿರೀಯಸ್ ಆಗಿ ನಾವು–ನೀವು ಜೊತೆಯಾಗಿ ಹೋರಾಟ ಮಾಡೋಣ. ದಯಮಾಡಿ ಸದಸ್ಯರು ತಮ್ಮ ಸ್ಥಾನಗಳಿಗೆ ಬರಬೇಕು.

(ಮಾನ್ಯ ಪುಟ್ಟಣ್ಣನವರು ತಮ್ಮ ಸ್ಥಾನಕ್ಕೆ ಮರಳಿದರು)

**ಶ್ರೀ ಪುಟ್ಟಣ್ಣ:- ಮಾನ್ಯ ಸಭಾಪತಿಗಳೇ,** ಇಡೀ ಸದನ ಶಿಕ್ಷಕರ ಬಗ್ಗೆ ಸಹಾನುಭೂತಿಯನ್ನು ವ್ಯಕ್ತಪಡಿಸಿದೆ, ಅದಕ್ಕೆ ಮೊದಲನೆಯದಾಗಿ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಮಗೆ ಏಕೆ ಇಷ್ಟೊಂದು ಆತಂಕ ಎಂದರೆ, ಇವರು ಹೇಳಿರುವುದನ್ನು ಇದುವರೆಗೆ ಯಾವುದನ್ನು ಮಾಡಿರುವುದಿಲ್ಲ. ಕಾಗೇರಿಯವರು 'ನಮಗೆ ಬದ್ಧತೆ ಇದೆ, ಬದ್ದತೆ ಇದೆ' ಎಂದು ಹೇಳುತ್ತಾರೆ ಅಷ್ಟೆ. ಕಡತ ತೆಗೆಸಿ ನೋಡಿ, ಪ್ರತಿ ಸಾರಿ ಇದು ಚರ್ಚೆಗೆ ಬಂದಾಗ ನಮ್ಮ ಸರ್ಕಾರಕ್ಕೆ ಬದ್ಧತೆ ಇದೆ ಎಂದು ಹೇಳುತ್ತಾರೆ. ಬದ್ಧತೆ ಎಂದರೆ ಏನು ಅರ್ಥ? ಅದಕ್ಕೆ ಆದೇಶವನ್ನು ಮಾಡಬೇಕು. ಈ ಸದನ ನಡೆಯುವುದಕ್ಕೆ ನಾವೇನು ತೊಂದರೆ ಮಾಡುವುದಿಲ್ಲ. ಬುಧವಾರ ಸರ್ಕಾರ ಆದೇಶ ಕೊಡುವವರೆಗೆ ನಾವು ಸದನದ ಬಾವಿಯಲ್ಲಿ ಧರಣಿ ಕೂಡುತ್ತೇವೆ, ತಾವು ಸದನವನ್ನು ನಡೆಸಿ.

**(ಈ ಹಂತದಲ್ಲಿ ಜೆಡಿಎಸ್ ಪಕ್ಷದ ಸದಸ್ಯರಾದ ಶ್ರೀ ಪುಟ್ಟಣ್ಣನವರು ಸದನದ ಬಾವಿಗೆ ಬಂದು ಧರಣಿ ನಿರತರಾದರು)**

**ಉಪ ಸಭಾಪತಿಯವರು:-** ನೀವು ಧರಣಿ ಕುಳಿತರೆ ಸದನವನ್ನು ನಡೆಸಲು ಹೇಗೆ ಸಾಧ್ಯವಾಗುತ್ತದೆ? ಪುಟ್ಟಣ್ಣನವರೆ ಕಾಗೇರಿಯವರು ಆ ರೀತಿ ಹೇಳುತ್ತಾರೆ ಎಂದು ಹೇಳುತ್ತಿದ್ದೀರಿ, ಆದರೆ ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳು ಇಬ್ಬರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಅದಕ್ಕೆ ತಾವು ಬೆಲೆ ಕೊಡಬೇಕಾಗುತ್ತದೆ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಗಳೇ, ದಿನಾಂಕ 25-2-2011ರಲ್ಲಿ ಮಾನ್ಯ ಸಭಾಪತಿಯವರಾದ ಶ್ರೀ ಡಿ.ಎಚ್. ಶಂಕರಮೂರ್ತಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮೇ 30ರೊಳಗೆ ಕೊಡುತ್ತೇವೆ ಎಂದು ಇದೇ ರೀತಿ ಭರವಸೆಯನ್ನು ಕೊಟ್ಟರು. ಅವತ್ತು ಸಭಾಪತಿಯವರ ಅಧ್ಯಕ್ಷತೆಯಲ್ಲಿ ಏಕೆ ಸಭೆ ಮಾಡಿದರು, ಮಂತ್ರಿಗಳ ಅಧ್ಯಕ್ಷತೆಯಲ್ಲಿ ಏಕೆ ಮಾಡಲಿಲ್ಲ? ಸಭಾಪತಿಗಳ ಅಧ್ಯಕ್ಷತೆಯಲ್ಲಿ ಸಭೆ ಮಾಡಿದ ಉದ್ದೇಶವೇ ಬೇರೆ. ಅಂದು ಕೊಡುತ್ತೇವೆ ಎಂದು ಭರವಸೆ ನೀಡಿದರು ಇದುವರೆಗೂ ಕೊಡಲಿಲ್ಲ. ಪ್ರತಿ ಸಾರಿಯು ಇದೇ ರೀತಿ ಆಶ್ವಾಸನೆಯನ್ನು

ಕೊಡುತ್ತಾರೆ. ಇವತ್ತು ಮಕ್ಕಳ ಭವಿಷ್ಯದ ಬಗ್ಗೆ ಇವರು ಕೇಳುತ್ತಿದ್ದಾರೆ, 20 ವರ್ಷದಿಂದ ಶಿಕ್ಷಕರ ಭವಿಷ್ಯ ಏನು ಆಗಿರಬಹುದು ಎನ್ನುವುದು ಇವರಿಗೆ ಅರ್ಥವಾಗುವುದು ಬೇಡವೆ? 20 ವರ್ಷದಿಂದ ಅವರಿಗೆ ಸಂಬಳವಿಲ್ಲ. ಶಿಕ್ಷಕರೂಬ್ಬರು ಪಾಠ ಮಾಡಿದರೆ ಒಬ್ಬರು ಧರಣಿಯಲ್ಲಿರುತ್ತಾರೆ. ಅನುದಾನ ನೀಡುತ್ತೇವೆ ಎಂದು ನಿರ್ಣಯ ಮಾಡಿ ಆಡಳಿತ ಮಂಡಳಿಯವರಿಗೆ ನಿರ್ಣಯವನ್ನು ಸಹಿ ಮಾಡಿ ಕಳುಹಿಸಿದ ಮೇಲೆ ಆಡಳಿತ ಮಂಡಳಿಯವರು ನಮ್ಮ ಕೆಲಸ ಮುಗಿಯಿತು ನಾವು ಸಂಬಳ ಕೊಡುವುದಿಲ್ಲ ಎಂದು ಹೇಳುತ್ತಾರೆ. ಇವರ ಆದೇಶದ ಪ್ರಕಾರ ನಿರ್ಣಯ ಮಾಡಿ ಕಳುಹಿಸಿದರು. ಇದುವರೆಗೆ ಇವರು ಶಿಕ್ಷಕರಿಗೆ ಸಂಬಳ ಕೊಟ್ಟಿಲ್ಲ. ಮಾನಸಿಕ ನೆಮ್ಮದಿ ಇಲ್ಲದ ಮೇಲೆ ಶಿಕ್ಷಕರು ಪಾಠ ಹೇಗೆ ಮಾಡುತ್ತಾರೆ ನೀವೇ ಹೇಳಿ. ಎಲ್ಲಿಯವರೆಗೆ ತಡೆದುಕೊಳ್ಳಬೇಕು. ನೀವು ಕೊಟ್ಟಿರುವ ಮಾತಿನಂತೆ ನೀವು ನಡೆದುಕೊಳ್ಳಬೇಕಲ್ಲವೆ? ಬನ್ನಪ್ಪ ಪಾರ್ಕ್‌ನಲ್ಲಿ ಶಿಕ್ಷಕರು ಉಪವಾಸ ಕುಳಿತಾಗ ನಾವು ನಿಮ್ಮ ಕೆಲಸವನ್ನು ಮಾಡಿಕೊಡುತ್ತೇವೆ ಎಂದು ಮಂತ್ರಿಗಳು ಹೇಳಿದ್ದರು. ಆದರೆ ಮಾಡಲಿಲ್ಲ. ಎಲ್ಲಿಯವರೆಗೆ ತಡೆಯಬೇಕು ನೀವೇ ಹೇಳಿ. 1994ರವರೆಗೆ ಕೆಲವರಿಗೆ ಅನುದಾನ ಸಿಕ್ಕಿದೆ. ಸಿಗದಿರುವವರಲ್ಲಿ ಕೆಲವರದು ಇನ್ನು ನಾಲ್ಕು ವರ್ಷ ಸರ್ವೀಸ್ ಇದೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ಸರಿ, ಆದರೆ ನಾಳೆ ಹಣಕಾಸು ಇಲಾಖೆಯವರು ಆಗುವುದಿಲ್ಲ ಎಂದು ಹೇಳಿದರೆ ಏನು ಮಾಡುತ್ತೀರಿ? ಬುಧವಾರದಂದು ಆದೇಶವನ್ನು ಕೊಡುತ್ತೇವೆ ಎಂದು ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಿರುವುದಿಲ್ಲ. 'ಹಣಕಾಸು ಇಲಾಖೆಯವರನ್ನು ಕರೆದು ಚರ್ಚೆ ಮಾಡಿ ಬಂದು ಸದನದಲ್ಲಿ ಉತ್ತರ ಹೇಳುತ್ತೇನೆ' ಎಂದು ಹೇಳಿದ್ದಾರೆ. ಅನುದಾನ ಬಿಡುಗಡೆ ಮಾಡುತ್ತೇವೆ ಎಂದು ಹೇಳಿರುವುದಿಲ್ಲ. ನಡವಳಿಕೆಗಳನ್ನು ತೆಗೆದು ನೋಡಿ. ಹಿಂದೆಯು ಒಂದು ಬಾರಿ ಮೂರನೇ ಮಹಡಿಯಲ್ಲಿರುವ ಸಮ್ಮೇಳನ ಸಭಾಂಗಣದಲ್ಲಿ ಸಭೆ ಕರೆದು ಚರ್ಚೆ ಮಾಡಿ ಕೊಡುತ್ತೇವೆ ಎಂದು ಹೇಳಿದ್ದರು ಇದುವರೆಗೂ ಕೊಡಲು ಆಗಿರುವುದಿಲ್ಲ ಸರ್ಕಾರಕ್ಕೆ. ಇವತ್ತು ಶಿಕ್ಷಕರ ಪರಿಸ್ಥಿತಿ ಏನಾಗಿದೆ ಎನ್ನುವುದನ್ನು ಎಲ್ಲರೂ ನೋಡಿದ್ದಾರೆ. ರಾಜಕೀಯ ಮಾಡುತ್ತಾರೆ ಎಂದು

ಮಾತನಾಡುತ್ತಾರೆ. ನಮಗೆ ಏನು ಬೇಕಾದರೂ ಅನ್ನಲಿ, ಶಿಕ್ಷಕರಿಗೆ ಸಂಬಳ ಕೊಟ್ಟರೆ ಸಾಕು. ನಾನು ಶಿಕ್ಷಣ ಸಚಿವನಾಗಿದ್ದಾಗ ಈ ವಿಚಾರ ಬಂದಾಗ ಕ್ಯಾಬಿನೆಟ್‌ನಲ್ಲಿ 4–5 ಮಂತ್ರಿಗಳು ವಿರೋಧ ಮಾಡಿದರು, ನಾನು ಎದ್ದು ನಿಂತು ಇಡೀ ಕ್ಯಾಬಿನೆಟ್‌ಗೆ ಕೈಮುಗಿದೆ, ಆಗ ಮಾನ್ಯ ಯಡಿಯೂರಪ್ಪನವರು, 'ಏನು ಮಾತನಾಡಬೇಡಿ ದಯಮಾಡಿ ಕುಳಿತುಕೊಳ್ಳಿ' ಎಂದು ಹೇಳಿದರು. ಅವತ್ತು ಅದಕ್ಕೆ ಅನುಮೋದನೆಯನ್ನು ಕೊಟ್ಟರು. ಇವತ್ತು 161 ಕೋಟಿ ರೂ.ಗಳು ಬೇಕು, 200 ಕೋಟಿ ರೂ.ಗಳು ಬೇಕು ಎಂದು ಹೊಸದಾಗಿ ಸಮಸ್ಯೆಗಳನ್ನು ತಂದಿದ್ದಾರೆ. ಅವತ್ತೇ ಎಷ್ಟು ಶಾಲೆಗಳು ಇವೆ, ಎಷ್ಟು ಅನುದಾನ ಕೊಡಬೇಕಾಗುತ್ತದೆ ಎನ್ನುವುದನ್ನು ಲೆಕ್ಕ ಮಾಡಿ ಹಣಕಾಸು ಇಲಾಖೆಯವರನ್ನು ಕರೆಯಿಸಿ, ಶಿಕ್ಷಣ ಇಲಾಖೆಯವರನ್ನು ಕರೆಯಿಸಿ ಚರ್ಚೆ ಮಾಡಿ ಎಲ್ಲಾ ಅಂಕಿ–ಸಂಖ್ಯೆಗಳನ್ನು ಕೊಟ್ಟಿದ್ದೇವೆ. ಅದನ್ನೇ ಬಜೆಟ್‌ನಲ್ಲಿ ಪಾಸ್ ಮಾಡಲಾಗಿದೆ. ಮತ್ತೆ ಹೊಸದು ಹೇಗೆ ಬಂತು? 2008ರವರೆಗೆ ಯಾವ ಅನುದಾನರಹಿತ ಶಾಲೆಗಳು ಉಳಿಯಬಾರದು ಎಂದು ಡಾ॥ ಸುಬ್ರಹ್ಮಣ್ಯರವರು ಕುಳಿತು ಎಲ್ಲಾ ಲೆಕ್ಕಾ ಮಾಡಿ 50 ಕೋಟಿ ರೂ.ಗಳನ್ನು ಇದಕ್ಕೆ ಮೀಸಲಿಡಲಾಯಿತು. ಆ 50 ಕೋಟಿ ರೂ.ಗಳನ್ನು 1993–94ರಲ್ಲಿ ಬಿಡುಗಡೆ ಮಾಡಿದರು. ಹಣ ಮುಗಿತು, ಮತ್ತೆ ಎಲ್ಲಿಂದ ಹಣ ತರುತ್ತಾರೆ? 1987ರಿಂದ 1993ರವರೆಗೆ ಬಂದು ಹಂತ, 1993ರಿಂದ 1995ರವರೆಗೆ ಒಂದು ಹಂತ. ಅದಕ್ಕೆ ಆ 50 ಕೋಟಿ ರೂ.ಗಳನ್ನು ಕೊಟ್ಟುಬಿಟ್ಟಿದ್ದಾರೆ. ಮತ್ತೆ ಎಲ್ಲಿಂದ ಇವರು ಹಣವನ್ನು ತರುತ್ತಾರೆ. ನಾನು ಬಹಳ ವಿನಯದಿಂದ ಹೇಳುತ್ತೇನೆ, ಇವರು ಮಾತು ಕೊಟ್ಟ ಹಾಗೆ ಯಾವತ್ತು ನಡೆದುಕೊಂಡಿಲ್ಲ. ಬರೀ ಹೇಳುತ್ತಾ ಬಂದಿದ್ದಾರೆ, ಏನೇನೋ ಮಾಡಿದ್ದೇವೆ ಎಂದು ಹೇಳುತ್ತಾರೆ ಮಾಡಿದ್ದರೆ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇವೆ ನಮ್ಮದೇನು ತಕರಾರು ಇಲ್ಲ. ಆ ಶಿಕ್ಷಕರ ಪರಿಸ್ಥಿತಿ ನೋಡಲು ಆಗುವುದಿಲ್ಲ. ಒಬ್ಬ ಶಿಕ್ಷಕ ಕಣ್ಣೀರು ಹಾಕಿ, 'ನನ್ನ ತಂದೆಗೆ 74 ವರ್ಷ, ಈಗ ತಂದೆ–ತಾಯಿಯವರನ್ನು ನಾನು ಜೋಪಾನ ಮಾಡಬೇಕು, ಆದರೇ, ಇವತ್ತು ಅವರೇ ನನ್ನನು ಜೋಪಾನ ಮಾಡುತ್ತಿದ್ದಾರೆ, ನನಗೆ ನಾಚಿಕೆಯಾಗುತ್ತದೆ ನಾನು ಮನೆಗೆ ಹೋಗುವುದಿಲ್ಲ ಆತ್ಮಹತ್ಯೆ

ಮಾಡಿಕೊಳ್ಳುತ್ತೇನೆ' ಎಂದು ಹೇಳಿರುವುದನ್ನು ನಾವು ಟಿ.ವಿ. ಯಲ್ಲಿ ನೋಡಿದ್ದೇವೆ. ಒಂದು ತಿಂಗಳಿಂದ ಏಕೆ ಮಂತ್ರಿಗಳು ಸುಮ್ಮನೆ ಕುಳಿತರು, ಇಷ್ಟು ದಿನಗಳಾದರು ಇವರು ಸಂಬಂಧಪಟ್ಟವರ ಜೊತೆಯಲ್ಲಿ ಏಕೆ ಮಾತನಾಡಲಿಲ್ಲ? ಮುಖ್ಯಮಂತ್ರಿಗಳ ಜೊತೆಯಲ್ಲಿ, ಹಣಕಾಸು ಇಲಾಖೆ ಅಧಿಕಾರಿಗಳ ಜೊತೆಯಲ್ಲಿ ಏಕೆ ಮಾತನಾಡಲಿಲ್ಲ. ಇವರಿಗೆ ಕಳಕಳಿ ಇದೆಯಾ? ಇವರು ಮೂರು ದಿನ ಹುಬ್ಬಳ್ಳಿಯಲ್ಲಿದ್ದರು ಬರಿ 5 ನಿಮಿಷ ಬಂದು ಹೋದರು. ಶಿಕ್ಷಕರ ಜೊತೆಯಲ್ಲಿ ಮಾತನಾಡಲಿಲ್ಲ, ಚರ್ಚೆ ಮಾಡಲಿಲ್ಲ, ಯಾರನ್ನು ಕರೆದರು ಎನ್ನುವುದನ್ನು ಅವರೇ ಹೇಳಬೇಕು. ಯಾರನ್ನು ಕರೆದು ಮಾತನಾಡಲಿಲ್ಲ. ಮತ್ತೆ ನಮಗೆ ರಾಜಕೀಯ ಮಾಡುತ್ತಾರೆ ಎಂದು ಹೇಳುತ್ತಾರೆ. ಇದರಲ್ಲಿ ರಾಜಕೀಯ ಏನು ಮಾಡಲು ಆಗುತ್ತದೆ ಹೇಳಿ. ಶಿಕ್ಷಕರು ನಮ್ಮ ಕ್ಷೇತ್ರಕ್ಕೆ ಮಾತ್ರ ಸಂಬಂಧವಿಲ್ಲ, ಇಡೀ ರಾಜ್ಯಕ್ಕೆ ಸಂಬಂದಪಟ್ಟವರಿದ್ದಾರೆ. ಕಾರ್ಣಿಕ್‌ರವರ, ನಮೋಶಿಯವರ, ಮರಿತಿಬ್ಬೇಗೌಡರ ಎಲ್ಲರ ಕ್ಷೇತ್ರದಲ್ಲಿ ಅನುದಾನಿತ ಶಾಲಾ ಶಿಕ್ಷಕರು ಇದ್ದಾರೆ.

**ಉಪಸಭಾಪತಿಯವರು:–** ಮಾನ್ಯ ಹೊರಟ್ಟಿಯವರೇ, ತಾವು ಇಷ್ಟೊತ್ತು ಮಾತನಾಡಿ ಪ್ರತಿಯೊಂದು ವಿಚಾರವನ್ನು ಮನವರಿಕೆ ಮಾಡಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳಿಗೂ ಮನವರಿಕೆಯಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಮುಂದಿನ ವಾರದಲ್ಲಿ ಇದಕ್ಕೆ ಪರಿಹಾರ ಕಂಡುಹಿಡಿಯುತ್ತೇವೆ ಎಂದು ಒಂದು ಟೈಮ್ ಬಾಂಡ್ ಕೊಟ್ಟಿದ್ದಾರೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಗಳೇ, ನಾನು ತಮಗೆ ತುಂಬಾ ಗೌರವವನ್ನು ಕೊಡುತ್ತೇನೆ. ದಯಮಾಡಿ ನಡವಳಿಕೆಯನ್ನು ತರಿಸಿ ನೋಡಿ, ನಾನು ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಬುಧವಾರ ಬಂದು ಉತ್ತರ ಹೇಳುತ್ತೇನೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅನುದಾನ ಕೊಡುತ್ತೇವೆ ಎಂದು ಹೇಳಿರುವುದಿಲ್ಲ, ಉತ್ತರ ಹೇಳುತ್ತೇನೆ ಎಂದು ಹೇಳಿದ್ದಾರೆ.

**ಉಪಸಭಾಪತಿಯವರು:–** ಒಂದು ಅವಕಾಶವನ್ನು ಕೊಡಿ, ನಿಮ್ಮ ಸದಸ್ಯರಿಗೆ ಹೇಳಿ, ಹೊರಟ್ಟಿಯವರೇ, ತಾವು ಹಿರಿಯ ಸದಸ್ಯರು, ಮಂತ್ರಿಗಳಾಗಿ ಕೆಲಸ ಮಾಡಿದ್ದೀರಿ, ಮಾನ್ಯ ಮುಖ್ಯಮಂತ್ರಿಗಳ ಮತ್ತು ಸಚಿವರಾದ ಕಾಗೇರಿಯವರ ಮಾತಿನ ಮೇಲೆ ವಿಶ್ವಾಸವಿಟ್ಟು, ಸ್ವಲ್ಪ ಸಮಯವನ್ನು ಕೊಡಿ. ನಿಮ್ಮ ಸದಸ್ಯರಿಗೆ ಧರಣಿಯನ್ನು ವಾಪಸ್ ತೆಗೆದುಕೊಳ್ಳುವಂತೆ ಹೇಳಿ. ಮಾನ್ಯ ಹೊರಟ್ಟಿಯವರೇ, ತಮ್ಮ ಮಿತ್ರರಿಗೆ ಹೇಳಿ ಅವರು ಧರಣಿಯನ್ನು ವಾಪಸ್ಸು ತೆಗೆದುಕೊಳ್ಳಲ್ಲಿ. ಮೂರ್ನಾಲ್ಕು ದಿನಗಳ ಕಾಲ ಕಾಯುವುದರಿಂದ ಏನೂ ಆಗುವುದಿಲ್ಲ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಸನ್ಮಾನ್ಯ ಸಭಾಪತಿಯವರೇ, ತಾವು ಇಷ್ಟು ಹೇಳಿದ ಮೇಲೆ, ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಮೇಲೆ, ನಾವು ಇಷ್ಟು ಹೇಳಿದ ಮೇಲೂ ಇದು ಈ ರೀತಿ ಮುಂದುವರೆಯುತ್ತಿರುವುದನ್ನು ಅವಲೋಕಿಸಿದರೆ, ನಾವು ಸರ್ಕಾರವಾಗಿ ಶಿಕ್ಷಣ ಇಲಾಖೆಗೆ ಎಷ್ಟು ಆದ್ಯತೆ ಕೊಟ್ಟಿದ್ದೇವೆ ಎನ್ನುವುದು ಎಲ್ಲರಿಗೂ ತಿಳಿದಿದ್ದರೂ ಸಹ, ಮಾಡುತ್ತೇವೆಂದು ಹೇಳಿ ನಮ್ಮ ಬದ್ಧತೆಯನ್ನು ಹೇಳಿದ್ದರೂ ಸಹ ಈ ರೀತಿ ಧರಣಿಯನ್ನು ಮುಂದುವರೆಸುವುದು ಸೂಕ್ತವಲ್ಲ ಎನ್ನುವುದು ನನ್ನ ಭಾವನೆಯಾಗಿದೆ. ಇಷ್ಟೆಲ್ಲಾ ಪ್ರಯತ್ನಗಳನ್ನು ನಾವು ಮಾಡುತ್ತಿದ್ದೇವೆ.

**ಉಪ ಸಭಾಪತಿಯವರು:–** ದಯಮಾಡಿ ಸದಸ್ಯರು ಸಹಕರಿಸಬೇಕು.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಸನ್ಮಾನ್ಯ ಸಭಾಪತಿಯವರೇ, ಬುಧವಾರಕ್ಕೆ ಅಧಿವೇಶನ ಮುಗಿದು ಹೋಗುವುದಿಲ್ಲ. ನಮ್ಮ ಕಾರ್ಯಕಲಾಪಗಳ ಪಟ್ಟಿಯ ಪ್ರಕಾರ ಅಧಿವೇಶನ ಶುಕ್ರವಾರದವರೆಗೆ ನಡೆಯುತ್ತದೆ. ನಾವೆಲ್ಲರೂ ಎಲ್ಲಿಗೆ ಹೋಗುತ್ತೇವೆ? ಇಲ್ಲಿಯೇ ಇರುತ್ತೇವೆ. ಮಕ್ಕಳ ಮತ್ತು ಪಾಲಕರ ಆತಂಕದ ವಿಷಯವನ್ನು ನಾನು ವಿಸ್ತರಿಸಿ ಹೇಳುವುದಕ್ಕೆ ಹೋಗಿಲ್ಲ.

**ಶ್ರೀ ಬಸವರಾಜ ಹೊರಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಇದಕ್ಕೆ ಯಾರು ಜವಾಬ್ದಾರಿ ಎನ್ನುವುದನ್ನು ಅವರೇ ಹೇಳಬೇಕಾಗುತ್ತದೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಸನ್ಮಾನ್ಯ ಸಭಾಪತಿಯವರೇ, ಶಿಕ್ಷಣ ಸಚಿವನಾಗಿ ಅವರ ಬಗ್ಗೆಯೂ ನನಗೆ ಕಾಳಜಿ ಇದೆ. ಶಿಕ್ಷಕರ ಜವಾಬ್ದಾರಿ ನನ್ನ ಮೇಲೆ ಹೇಗಿದೆಯೋ ಹಾಗೆಯೇ ಮಕ್ಕಳನ್ನು ಭವಿಷ್ಯದ ಪರೀಕ್ಷೆಗೆ ಸಿದ್ಧಗೊಳಿಸುವ ಜವಾಬ್ದಾರಿಯೂ ನನ್ನ ಮೇಲಿದೆ. ಶಿಕ್ಷಕರಲ್ಲಿ ಇಲ್ಲದೆ ಇರುವಂತಹ ಆತಂಕವನ್ನು ಸೃಷ್ಟಿಸುವುದಕ್ಕೆ ಯಾರೂ ಬಯಸಬಾರದು. ಸರ್ಕಾರಕ್ಕೆ ಶಿಕ್ಷಕರ ಬಗ್ಗೆ ಕಾಳಜಿ ಇದೆ. ಶಿಕ್ಷಕರ ಮೇಲೆ ಮಕ್ಕಳಿಗೆ ಕಲಿಸಬೇಕೆನ್ನುವ ಜವಾಬ್ದಾರಿ ಇದೆ. ಶಿಕ್ಷಕರಲ್ಲಿ ಇಲ್ಲದೇ ಇರುವಂತಹ ಆತಂಕವನ್ನು ಸೃಷ್ಟಿಸಿ, ಇನ್ಯಾವುದೋ ರೀತಿಯ ವಾತಾವರಣವನ್ನು ನಿರ್ಮಾಣ ಮಾಡುವಂತಾಗಬಾರದು.

**ಶ್ರೀ ಬಸವರಾಜ ಹೊರಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಯಾರೂ ಆತಂಕವನ್ನು ಸೃಷ್ಟಿ ಮಾಡುತ್ತಿಲ್ಲ. ನಾಟಕ ಕಂಪನಿಯ ರೀತಿ ನಾಟಕವಾಡುತ್ತಿದ್ದಾರೆ. ಅವರು ಈ ರೀತಿ ಮಾತನಾಡಿದರೆ ನಾವೂ ಮಾತನಾಡಬೇಕಾಗುತ್ತದೆ. ಸರ್ಕಾರ ಇಷ್ಟು ಕಠಿಣವಾಗಿ ನಡೆದುಕೊಳ್ಳುತ್ತಿದೆ. ಇವರು ಬರೀ ಪುರಾಣ ಹೇಳುತ್ತಿದ್ದಾರೆ. ಸ್ವಲ್ಪವಾದರೂ ಬದ್ಧತೆ ಇಲ್ಲ.

(ಗೊಂದಲ)

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಸನ್ಮಾನ್ಯ ಸಭಾಪತಿಯವರೇ, ಅವರು ಆ ರೀತಿ ಮಾತನಾಡಿದರೆ, ನಮಗೂ ಬೇರೆ ರೀತಿ ಮಾತನಾಡುವುದಕ್ಕೆ ಬರುತ್ತದೆ. ಸರ್ಕಾರ ಸ್ಪಂದಿಸುತ್ತಿದೆ. ಆದರೂ ಈ ರೀತಿ ವರ್ತಿಸುವುದು ಸರಿಯಲ್ಲ ಎನ್ನುವುದು ನನ್ನ ಭಾವನೆ.

**ಉಪ ಸಭಾಪತಿಯವರು:–** ಮಾನ್ಯ ಹೊರಟ್ಟಿಯವರೇ, ತಮ್ಮ ಮಿತ್ರರಿಗೆ ಹೇಳಿ ಧರಣಿಯನ್ನು ವಾಪಸು ತೆಗೆದುಕೊಳ್ಳಿ. ಇನ್ನೊಂದು ಮೂರ್ನಾಲ್ಕು ದಿನಗಳ ಕಾಲ ಕಾಯುವುದರಿಂದ ಏನೂ ತೊಂದರೆ ಆಗುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಸಹ ಮನವಿಯನ್ನು ಮಾಡಿದ್ದಾರೆ. ದಯಮಾಡಿ ಮಾನ್ಯ ಸದಸ್ಯರು ತಮ್ಮ

ಧರಣಿಯನ್ನು ಹಿಂದಕ್ಕೆ ತೆಗೆದುಕೊಳ್ಳಬೇಕಾಗಿದೆ. ಇನ್ನೂ ಒಂದು ವಿಚಾರದ ಮೇಲೆ ಚರ್ಚೆ ಮಾಡಬೇಕಾಗಿದೆ. ದಯವಿಟ್ಟು ಸಹಕರಿಸಿ.

**ಶ್ರೀ ಗೋ. ಮಧುಸೂದನ್:–** ಸನ್ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರಿಗೆ ಸರ್ಕಾರ ಈ ಸಮಯದಲ್ಲಿ, 'ಆ ಕೆಲಸ ಮಾಡುತ್ತದೆ' ಎನ್ನುವಂತಹ ವಿಶ್ವಾಸ ಬಂದಿದೆ. 'ನಾವು ಧರಣಿ ಮಾಡಿದಕ್ಕೋಸ್ಕರ ಸರ್ಕಾರ ಮಾಡಿದೆ' ಎಂದು ಲಾಭ ಪಡೆದುಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ ಎನ್ನುವುದು ನನ್ನ ಅನಿಸಿಕೆಯಾಗಿದೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ದಯಮಾಡಿ ಪ್ರತಿಭಟನೆಯನ್ನು ಕೈಬಿಟ್ಟು ತಮ್ಮ ಆಸನಗಳಿಗೆ ಮರಳಬೇಕಾಗಿದೆ. ನಾವು ಮಾನ್ಯ ಮುಖ್ಯಮಂತ್ರಿಗಳ ಮೇಲೆ ವಿಶ್ವಾಸವನ್ನು ಇಡೋಣ. 'ಬುಧವಾರ ಮಾಡುತ್ತೇವೆ' ಎನ್ನುವಂತಹ ಮಾತುಗಳನ್ನು ಆಡಿದ್ದಾರೆ. ಆ ರೀತಿ ನಡೆದುಕೊಳ್ಳದೇ ಹೋದರೆ, ನೀವಷ್ಟೇ ಅಲ್ಲ, ನಾವೂ ಸಹ ಅಂದರೆ, ಮಾನ್ಯ ವಿರೋಧ ಪಕ್ಷದ ನಾಯಕರಾದಿಯಾಗಿ, ಆ ಭಾಗದಲ್ಲಿ ಇರುವಂತಹ ಬಹಳಷ್ಟು ಜನ ಶಿಕ್ಷಕರ ಕ್ಷೇತ್ರದ ಸದಸ್ಯರ ಬೆಂಬಲ ಸಹ ಇದಕ್ಕೆ ಇದೆ ಎನ್ನುವುದು ನನ್ನ ಭಾವನೆಯಾಗಿದೆ. ಇದು ಒಬ್ಬರ ಪ್ರಶ್ನೆ ಅಲ್ಲ. ಇಡೀ ರಾಜ್ಯದ ಶಿಕ್ಷಕರ ಪ್ರಶ್ನೆಯಾಗಿದೆ. ಆದ್ದರಿಂದ ನಾನು ಮತ್ತೊಮ್ಮೆ ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತಿದ್ದೇನೆ. ಮಾನ್ಯ ಸದಸ್ಯರು ಧರಣಿಯಿಂದ ಹೊರಗೆ ಬರಲಿ. ಮಾನ್ಯ ಮುಖ್ಯಮಂತ್ರಿಗಳ ಮಾತಿಗೆ ಬೆಲೆ ಕೊಡೋಣ. ಬುಧವಾರ ಅವರು ಈ ಸಮಸ್ಯೆಯನ್ನು ಪರಿಹರಿಸುತ್ತಾರೆ ಎನ್ನುವ ವಿಶ್ವಾಸ ನನಗಿದೆ.

**ಶ್ರೀ ಘೋಟ್ನೇಕರ್ ಶ್ರೀಕಾಂತ ಲಕ್ಷ್ಮಣ:–** ಸನ್ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಭರವಸೆ ಭರವಸೆಯಾಗಿಯೇ ಉಳಿದಿದೆ. ಎಲ್ಲಾ ಶಿಕ್ಷಕರು ಧರಣಿ ಕುಳಿತಿದ್ದಾರೆ. ಮಾಧ್ಯಮಗಳಲ್ಲಿ ಅದನ್ನು ನೋಡಿ ನೋಡಿ ನಮಗೆ ಸಾಕಾಗಿ ಹೋಗಿದೆ. ಮಾನ್ಯ ಕಾಗೇರಿಯವರು ಉತ್ತರ ಕನ್ನಡ ಜಿಲ್ಲೆಯ ಮಂತ್ರಿಗಳಾಗಿದ್ದಾರೆ. ಅವರು

ಭರವಸೆಗಳ ಮಂತ್ರಿಗಳಾಗದೆ, 'ಮಾಡಿಯೇ ಮಾಡುತ್ತೇವೆ' ಎಂದು ಈ ಸಂದರ್ಭದಲ್ಲಿ ಹೇಳಬೇಕೆಂದು ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಬಸವರಾಜ ಹೊರಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ನನಗೆ ಬಹಳಷ್ಟು ನೋವಿದೆ ಆದರೂ ಸಹ ತಮ್ಮ ಮೇಲೆ ವಿಶ್ವಾಸವನ್ನು ಇಡುತ್ತಿದ್ದೇನೆ. ಬುಧುವಾರ ಪ್ರಶ್ನೋತ್ತರ ವೇಳೆ ಆದ ಮೇಲೆ ಈ ವಿಚಾರವಾಗಿ ಸರ್ಕಾರ ನಮಗೆ ಸ್ಪಷ್ಟವಾಗಿರುವಂತಹ ಉತ್ತರವನ್ನು ಹೇಳಬೇಕಾಗಿದೆ. ಬರೀ ಉತ್ತರವನ್ನು ಹೇಳದೇ ಹಣಕಾಸಿನ ಅನುದಾನವನ್ನು ಸಹ ಬಿಡುಗಡೆ ಮಾಡಬೇಕಾಗಿದೆ. ಒಂದು ವೇಳೆ ಪ್ರಶ್ನೋತ್ತರದ ನಂತರ ಹೇಳಿಕೆಯನ್ನು ಮಾಡದೇ ಹೋದರೆ, ನಾವು ನಿರಂತರವಾಗಿ ಧರಣಿಯನ್ನು ಮಾಡುತ್ತೇವೆ ಎನ್ನುವಂತಹ ಷರತ್ತಿನ ಮೇಲೆ ನಾವು ಧರಣಿಯನ್ನು ಹಿಂತೆಗೆದುಕೊಳ್ಳುತ್ತಿದ್ದೇವೆ. ತಮ್ಮ ಮೇಲೆ ವಿಶ್ವಾಸವನ್ನು ಇಟ್ಟು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಎಲ್ಲ ಹಿರಿಯ ಸದಸ್ಯರು ವಿನಂತಿ ಮಾಡಿರುವ ಹಿನ್ನೆಲೆಯಲ್ಲಿ ನಾವು ಬುಧವಾರದವರೆಗೆ ನಮ್ಮ ಸಹಕಾರವನ್ನು ನೀಡುತ್ತೇವೆ.

**ಉಪ ಸಭಾಪತಿಯವರು:–** ಧನ್ಯವಾದಗಳು, ಎಲ್ಲರೂ ತಮ್ಮ ಸ್ಥಾನಕ್ಕೆ ಮರಳಿ.

(ಈ ಹಂತದಲ್ಲಿ ಮಾನ್ಯ ಪಟ್ಟಣ್ಣನವರು ತಮ್ಮ ಸ್ಥಾನಕ್ಕೆ ಮರಳಿದರು.)

**ಶ್ರೀ ಮನೋಹರ್ ಮಸ್ಕಿ:–** ಸನ್ಮಾನ್ಯ ಸಭಾಪತಿಯವರೇ, ಇಷ್ಟೆಲ್ಲಾ ಚರ್ಚೆ ಆಗಿದೆ. ನಾವೆಲ್ಲರೂ ಒಟ್ಟಿಗೆ ಇದ್ದೇವೆ, ಈ ಸಮಸ್ಯೆಯನ್ನು ಬಗೆಹರಿಸೋಣ ಎಂದು ಹೇಳಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು, 'ಬುಧವಾರ ಈ ಬಗ್ಗೆ ಖಚಿತವಾಗಿ ತಿಳಿಸುತ್ತೇನೆ' ಎಂದು ಹೇಳಿದ್ದಾರೆ. ಬುಧವಾರ ಅಧಿವೇಶನ ನಡೆಯುತ್ತಿರುತ್ತದೆ. ಇಷ್ಟಿದ್ದರೂ ಸಹ 'ಆಗುವವರೆಗೆ ಕಾದು ಆರುವವರೆಗೆ ಕಾಯಲಿಲ್ಲ' ಎನ್ನುವಂತಹ ಗಾದೆ ಮಾತಿದೆ. ಆ ರೀತಿ ಆಗುವುದು ಬೇಡ. ಆದ್ದರಿಂದ ಮಾನ್ಯ ಸದಸ್ಯರು ಧರಣಿಯಿಂದ ಹೊರಗಡೆ ಬರಬೇಕಾಗಿದೆ. ಬುಧವಾರದವರೆಗೆ ನಾವೆಲ್ಲರು ಕಾಯೋಣ.

**ಶ್ರೀ ಪುಟ್ಟಣ್ಣ:–** ಸನ್ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದವರೂ ಬಂದು ಧರಣಿಗೆ ಸೇರಿಕೊಳ್ಳಬಹುದಾಗಿದೆ. ಶಿಕ್ಷಕರ ಧರಣಿ ಮತ್ತು ಉಪವಾಸ ಸತ್ಯಾಗ್ರಹಕ್ಕೆ ಪಕ್ಷಾತೀತವಾಗಿ ಕಾಂಗ್ರೆಸ್ ಪಕ್ಷದ ವಿರೋಧ ಪಕ್ಷದ ನಾಯಕರು, ನಮ್ಮ ಪಕ್ಷದವರು ಮತ್ತು ಆಡಳಿತ ಪಕ್ಷದ ಸದಸ್ಯರು ಸಹ ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿ ಎಲ್ಲರೂ ಬೆಂಬಲವನ್ನು ವ್ಯಕ್ತಪಡಿಸಿದ್ದಾರೆ. ಆದ್ದರಿಂದ ನಾನು ಇಡೀ ಸದನದ ಆಡಳಿತ ಪಕ್ಷದ ಮತ್ತು ವಿರೋಧ ಪಕ್ಷದ ಎಲ್ಲ ಸದಸ್ಯರಿಗೂ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಮಾನ್ಯ ಶಿಕ್ಷಣ ಸಚಿವರು, 'ನಾವು ಬುಧವಾರದೊಳಗೆ ಮಾಡೇ ಮಾಡುತ್ತೇವೆ' ಎನ್ನುವಂತಹ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ನಾವು ಅವರ ಮೇಲೆ ಮತ್ತು ಮಾನ್ಯ ಮುಖ್ಯಮಂತ್ರಿಗಳ ಮೇಲೆ ವಿಶ್ವಾಸವನ್ನು ಇಟ್ಟು ಬುಧವಾರದವರೆಗೆ ಯಾವುದೇ ರೀತಿಯ ಧರಣಿಯನ್ನು ಮಾಡುವುದಿಲ್ಲ. ಆದರೆ, ಬುಧವಾರ ಸಂಜೆ 5–6 ಗಂಟೆಯೊಳಗಾಗಿ ಖಂಡಿತವಾಗಿ 1994–05ರವರೆಗೆ ವೇತನ ಅನುದಾನವನ್ನು ಕೊಡುತ್ತೇವೆ ಎನ್ನುವುದನ್ನು ಪ್ರಕಟ ಮಾಡಬೇಕಾಗಿದೆ. ಇಲ್ಲದಿದ್ದರೆ. ಗುರುವಾರ ಬೆಳಿಗ್ಗೆ ಪ್ರಶ್ನೋತ್ತರ ವೇಳೆ ಮುಗಿದ ಕೂಡಲೇ ನಾವು ಧರಣಿಯನ್ನು ಪುನಃ ಪ್ರಾರಂಭ ಮಾಡುತ್ತೇವೆ ಎನ್ನುವ ಮಾತನ್ನು ತಮ್ಮ ಮೂಲಕ ಹೇಳುವುದಕ್ಕೆ ಬಯಸುತ್ತಿದ್ದೇನೆ.

**(ಈ ಹಂತದಲ್ಲಿ ಧರಣಿನಿರತ ಮಾನ್ಯ ಮರಿತಿಬ್ಬೇಗೌಡರು ಮತ್ತು ಶ್ರೀ ಬಿ. ರಾಮಕೃಷ್ಣರವರು ತಮ್ಮ ಸ್ಥಾನಗಳಿಗೆ ಮರಳಿದರು.)**

**(ಆ) ಕರ್ನಾಟಕ ರಾಜ್ಯದಲ್ಲಿ ಅರ್ಚಕರಿಗೆ ತರಬೇತಿಗೊಳಿಸುವ ಬೋಧಕ ಬೋಧಕೇತರ ಸಿಬ್ಬಂದಿಗೆ ಸಂಬಳ–ಸಾರಿಗೆ ಭತ್ಯೆಗಳನ್ನು ಕಳೆದ 10 ತಿಂಗಳಿಂದ ನೀಡದಿರುವ ಬಗ್ಗೆ.**

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದಲ್ಲಿ ಅರ್ಚಕರಿಗೆ ತರಬೇತಿಗೊಳಿಸುವ ಬೋಧಕ ಬೋಧಕೇತರ ಸಿಬ್ಬಂದಿಗೆ ಕಳೆದ 10 ತಿಂಗಳುಗಳಿಂದ ಸಂಬಳ

ನೀಡದೇ ಇರುವ ಬಗ್ಗೆ ಮಾನ್ಯ ಉನ್ನತ ಶಿಕ್ಷಣ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು, ಉನ್ನತ ಶಿಕ್ಷಣ, ಯೋಜನೆ, ಸಾಂಖ್ಯಿಕ, ಮುಜರಾಯಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಪರವಾಗಿ):–** ಸನ್ಮಾನ್ಯ ಸಭಾಪತಿಯವರೇ,

ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೆ ಕೆಳಕಂಡ ಸಂಸ್ಕೃತ/ ಆಗಮ ಪಾಠಶಾಲೆಗಳು ಒಳಪಡುತ್ತವೆ.

1. ಸರ್ಕಾರಿ ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು
2. ಸರ್ಕಾರಿ ಸಂಸ್ಕೃತ ಕಾಲೇಜು, ಮೇಲುಕೋಟೆ
3. ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದಾಗಮ ಮಹಾ ವಿದ್ಯಾಲಯ, ಆದಿಚುಂಚನಗಿರಿ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ.
4. ಶ್ರೀ ಸಿದ್ಧಲಿಂಗೇಶ್ವರ ವೇದ ಸಂಸ್ಕೃತ ಆಗಮ ಪಾಠಶಾಲೆ, ಯಡಿಯೂರು, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ.
5. ಶ್ರೀ ಮಹದೇಶ್ವರ ಪಾಠಶಾಲೆ, ಸಾಲೂರು ಮಠ, ಮಹದೇಶ್ವರಬೆಟ್ಟ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ
6. ಶ್ರೀ ಮೇಧ ದಕ್ಷಿಣಾಮೂರ್ತಿ ಸಂಸ್ಕೃತ ಮಹಾ ವಿದ್ಯಾಲಯ, ಗೋಕರ್ಣ, ಉತ್ತರಕನ್ನಡ ಜಿಲ್ಲೆ.

2. ಈ ಮೇಲೆ ಕ್ರಮ ಸಂಖ್ಯೆ (1)ರಲ್ಲಿ ನಮೂದಿಸಿರುವ ಸರ್ಕಾರಿ ಮಹಾರಾಜ ಸಂಸ್ಕೃತ ಕಾಲೇಜಿನಲ್ಲಿ ಆಗಮ ವಿಭಾಗದಲ್ಲಿ ಆಗಮ ಶಿಕ್ಷಣವನ್ನು ನೀಡಲಾಗುತ್ತಿದ್ದು, ಕ್ರಮ ಸಂಖ್ಯೆ (2)ರಲ್ಲಿ ನಮೂದಿಸಿರುವ ಸರ್ಕಾರಿ ಸಂಸ್ಕೃತ ಕಾಲೇಜು, ಮೇಲುಕೋಟೆ ಇಲ್ಲಿ ಶಾಸ್ತ್ರ/ ಸಂಸ್ಕೃತ ಬೋಧಿಸಲಾಗುತ್ತದೆ. ಈ ಸರ್ಕಾರಿ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ ಮತ್ತು

ಬೋಧಕೇತರ ಸಿಬ್ಬಂದಿಯ ವೇತನ ಮತ್ತು ಇತರ ಭತ್ಯೆಗಳ ವೆಚ್ಚವನ್ನು ಧಾರ್ಮಿಕ ದತ್ತಿ ಇಲಾಖೆ ಭರಿಸಿ ಪಾವತಿಸಲಾಗುತ್ತಿತ್ತು. ಕ್ರಮ ಸಂಖ್ಯೆ (3) ರಿಂದ (6) ರವರೆಗೆ ನಮೂದಿಸಿರುವ ಆಗಮ ಪಾಠಶಾಲೆಗಳು ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೆ ಒಳಪಡುವ ಅನುದಾನಿತ ಆಗಮ ಪಾಠಶಾಲೆಗಳಾಗಿದ್ದು, ಸದರಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿ ವೇತನ ಮತ್ತು ಇತರೆ ಭತ್ಯೆಗಳನ್ನು ಪ್ರಾರಂಭಿಕವಾಗಿ ಶಿಕ್ಷಣ ಇಲಾಖೆಯಿಂದ ಭರಿಸಿ, ನಂತರ ಧಾರ್ಮಿಕ ದತ್ತಿ ಇಲಾಖೆಯ ಸಹಾಯಾನುದಾನದಿಂದ ಮರು ಪಾವತಿಸಲಾಗುತ್ತಿತ್ತು.

3. ಆ ಪ್ರಕಾರ ಮೇಲೆ ತಿಳಿಸಿರುವ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗೆ ಫೆಬ್ರವರಿ 2011 ರವರೆವಿಗೂ ವೇತನ ಮತ್ತು ಇತರ ಭತ್ಯೆಗಳನ್ನು ಶಿಕ್ಷಣ ಇಲಾಖೆಯಿಂದ ಭರಿಸಲಾಗುತ್ತಿತ್ತು, ಧಾರ್ಮಿಕ ದತ್ತಿ ಇಲಾಖೆಯ ಲೆಕ್ಕ ಶೀರ್ಷಿಕೆ 2250–00–800–2–02– ಸಂಸ್ಥೆಗಳು ಮತ್ತು ಸಂಘಟನೆಗಳು ಸಹಾಯಾನುದಾನ ಇದರಡಿ ಅಗತ್ಯವಾದ ಅನುದಾನದ ಲಭ್ಯತೆ ಇಲ್ಲದಿದ್ದುದ್ದರಿಂದ "ಮರು ಪಾವತಿಸುವ ಷರತ್ತನ್ನು ಪಾಲಿಸಲಾಗಿರುವುದಿಲ್ಲ.

4. ರಾಜ್ಯದಲ್ಲಿ ಸರ್ಕಾರದ ಆದೇಶ ಸಂಖ್ಯೆ:ಇಡಿ 82 ಯುಆರ್‌ಸಿ 2010 ದಿನಾಂಕ:15–10–2011ರನ್ವಯ ಪ್ರತ್ಯೇಕ ಸಂಸ್ಕೃತ ವಿಶ್ವವಿದ್ಯಾಲಯ ಸ್ಥಾಪನೆಯಾಗಿದ್ದು, ವೇತನ ಹಾಗೂ ಇತರೆ ಭತ್ಯೆಗಳನ್ನು ಫೆಬ್ರವರಿ 2011ರ ಅಂತ್ಯದವರೆಗೆ ಮಾತ್ರ ಶಿಕ್ಷಣ ಇಲಾಖೆಯಿಂದ ನೀಡಲಾಗುವುದೆಂದು, 2011–12ನೇ ಸಾಲಿಗೆ ಆಗಮ ಶಾಲಾ / ಕಾಲೇಜುಗಳಿಗೆ ಸಂಬಂಧಿಸಿದಂತೆ ವೇದ ಆಗಮ ಪಾಠಶಾಲೆಗಳ ವೇತನಕ್ಕೆ ಒಟ್ಟು ಅಂದಾಜು ಆಯವ್ಯಯ ರೂ. 25.00 ಲಕ್ಷಗಳ ಅವಶ್ಯಕತೆ ಇರುವುದಾಗಿ ನಿರ್ದೇಶಕರು (ಪ್ರೌಢಶಿಕ್ಷಣ) ದಿನಾಂಖ:29.01.2011ರ ಪತ್ರದಲ್ಲಿ ತಿಳಿಸಿದ್ದರು.

5. ನಾಲ್ಕು ಅನುದಾನಿತ ಆಗಮ ಪಾಠಶಾಲೆಗಳ ಬೋಧಕ ಸಿಬ್ಬಂದಿಯವರ ವೇತನ ಮತ್ತು ಇತರ ಭತ್ಯೆಗಳ ಪಾವತಿಗೆ ಅಗತ್ಯವಿದ್ದ ಅನುದಾನವನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಧಾರ್ಮಿಕ ದತ್ತಿ ಇಲಾಖೆಗೆ ಒದಗಿಸದೇ ಇದ್ದುದರಿಂದ ಈ ಸಿಬ್ಬಂದಿಗೆ ಕಳೆದ 10 ತಿಂಗಳಿಂದ ವೇತನ ಪಾವತಿಸಲು ಸಾಧ್ಯವಾಗಿರಲಿಲ್ಲ.

6. ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ಕಲಂ 19 ರ ಸಾಮಾನ್ಯ ಸಂಗ್ರಹಣ ನಿಧಿ ಇದರಡಿಯಲ್ಲಿ ಅವಕಾಶ ಕಲ್ಪಿಸಿರುವುದರನ್ವಯ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೆ ಬರುವ ಕೆಳಕಂಡ 4 ಅನುದಾನಿತ ಆಗಮ ಶಾಲೆಗಳ ಬೋಧಕ ಸಿಬ್ಬಂದಿ ವೇತನ ಬಾಬ್ತು ನೀಡುವ ರೂ. 27.64 ಲಕ್ಷಗಳ ಮೊತ್ತವನ್ನು ಸಾಮಾನ್ಯ ಸಂಗ್ರಹಣ ನಿಧಿಯಿಂದ ಭರಿಸಿ ಪಾವತಿಸಲು ಸರ್ಕಾರವು ಆದೇಶ ಸಂಖ್ಯೆ: ಕಂಇ 124/ಮುಅಬಿ/2011, ದಿನಾಂಕ:24.01.2012 ರಲ್ಲಿ ಅನುಮೋದನೆ ನೀಡಲಾಗಿದೆ.

1. ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದಾಗಮ ಮಹಾ ವಿದ್ಯಾಲಯ, ಆದಿಚುಂಚನಗಿರಿ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ.
2. ಶ್ರೀ ಸಿದ್ಧಲಿಂಗೇಶ್ವರ ವೇದ ಸಂಸ್ಕೃತ ಆಗಮ ಪಾಠಶಾಲೆ, ಯಡಿಯೂರು, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ.
3. ಶ್ರೀ ಮಹದೇಶ್ವರ ಪಾಠಶಾಲೆ, ಸಾಲೂರು ಮಠ, ಮಹದೇಶ್ವರಬೆಟ್ಟ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ
4. ಶ್ರೀ ಮೇಧ ದಕ್ಷಿಣಾಮೂರ್ತಿ ಸಂಸ್ಕೃತ ಮಹಾ ವಿದ್ಯಾಲಯ, ಗೋಕರ್ಣ, ಉತ್ತರಕನ್ನಡ ಜಿಲ್ಲೆ.

ಮಾನ್ಯ ಸಭಾಪತಿಯವರೇ, ಇವರಿಗೆ ಈಗಾಗಲೇ ಹಣ ಬಿಡುಗಡೆಗೆ ಸೂಚಿಸಲಾಗಿದೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೇ, ಅದಕ್ಕಾಗಿ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ಇದೇ ಕೆಲಸವನ್ನು ಸರ್ಕಾರ ಶಿಕ್ಷಕರಿಗೆ ಸಂಬಂಧಿಸಿದಂತೆಯೂ ಮಾಡಿಬಿಡಲಿ. ಎಷ್ಟು ಲಘುವಾಗಿ ಇವರಿಗೆ ಸ್ಪಂದಿಸಿದರೋ ಅಷ್ಟು ಲಘುವಾಗಿ ಶಿಕ್ಷಕರಿಗೂ ಮಾಡಲಿ.

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಹಣವನ್ನು ಬಿಡುಗಡೆ ಮಾಡಿರುವುದಕ್ಕೆ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ, ಧನ್ಯವಾದಗಳನ್ನು ಹೇಳುತ್ತೇನೆ. ಆದರೆ ಸಮಸ್ಯೆ ಇಲ್ಲಿಗೆ ಮುಗಿದಿಲ್ಲ. ಏಕೆಂದರೆ ಇಲ್ಲಿಯ ತನಕ ಕೊಡದೇ ಇರುವ ಹಣವನ್ನು ಈಗ ಇವರು ಧಾರ್ಮಿಕ ದತ್ತಿ ಇಲಾಖೆಯಿಂದಲೇ ಭರಿಸಿ ಕೊಟ್ಟಿದ್ದಾರೆ. ಆದರೆ, ಇವರನ್ನು ಕಾಲೇಜು ವಿಶ್ವವಿದ್ಯಾನಿಲಯಕ್ಕೆ ಸೇರಿಸಿದ್ದಾರೆ. ಅಲ್ಲಿಗೆ ಇವರಿಗೆ ಹಣವನ್ನು ಕೊಡಲು ಬೇರೆ ಹೆಡ್ ಏಕೆ ಬೇಕು? ಮುಂದಿನ ತಿಂಗಳಿನಿಂದ ಮತ್ತೆ ಅವರಿಗೆ ಸಂಬಳವನ್ನು ಕೊಡುವಂಥಾದ್ದು ಆಗಬೇಕು. ಮತ್ತೆ 6 ತಿಂಗಳಿನಿಂದ ಸಂಬಳವನ್ನು ಕೊಟ್ಟಿಲ್ಲವೆಂದು ತಮ್ಮ ಮೂಲಕ ಸರ್ಕಾರಕ್ಕೆ ಹೇಳುವಂಥ ಸ್ಥಿತಿ ನಿರ್ಮಾಣ ಆಗಬಾರದು. ಇದು ಇಷ್ಟು ಪ್ರಮುಖವಾದುದು ಏಕೆಂದರೆ, ನಮ್ಮ ರಾಜ್ಯದಲ್ಲಿ ಅನೇಕ ದೇವಸ್ಥಾನಗಳಿವೆ. ಆ ದೇವಸ್ಥಾನಗಳಲ್ಲಿ ಸರಿಯಾದಂಥ ರೀತಿಯಲ್ಲಿ ಅರ್ಚಕರಿಗೆ ವೇದೋಕ್ತವಾಗಿ ಅನೇಕ ಆಗಮಗಳು ಶಾಸ್ತ್ರಗಳು ಇದ್ದಾವೆ. ಆ ಎಲ್ಲಾ ಆಗಮ ಶಾಸ್ತ್ರಗಳ ಪ್ರಕಾರವಾಗಿ, ಅದರಲ್ಲಿ ಶೈವಾಗಮ, ವೀರಶೈವಾಗಮ, ಪಂಚರಾತ್ರಾಗಮ ಇರಬಹುದು. ಈ ತರಹದ ಬೇರೆ ಬೇರೆ ಆಗಮ ಶಾಸ್ತ್ರಗಳ ಪ್ರಕಾರವಾಗಿ ಅವರು ಪೂಜೆಯನ್ನು ಮಾಡಬೇಕು. ವೀರಶೈವಾಗಮದ ಪ್ರಕಾರವೂ ಪೂಜೆಯನ್ನು ಮಾಡಬೇಕು. ಹಾಗಾಗಿ ಇಲ್ಲಿ ಅರ್ಚಕರಿಗೆ ತರಬೇತಿ ಆಗಲಿಲ್ಲವೆಂದರೆ ಎಲ್ಲಾ ದೇವಸ್ಥಾನಗಳಲ್ಲಿ ಪೂಜೆ ನಿಲ್ಲುತ್ತದೆ. ಆಗಮದ ಪ್ರಕಾರದಲ್ಲಿ ಪೂಜೆ ಆಗದೇ ಹೋದರೆ ದೇಶಕ್ಕೆ ಒಳ್ಳೆಯದಾಗುವುದಿಲ್ಲ ಎನ್ನುವುದು ಬಹುತೇಕ ಜನರಲ್ಲಿ ಒಂದು ನಂಬಿಕೆ ಇದೆ. ಆದರೆ, ಇದು ತುಂಬಾ ಪ್ರಮುಖವಾದುದು. ಆ ಕಾರಣಕ್ಕೋಸ್ಕರ ಈ ಸಂಸ್ಥೆಗಳು ಯಾವ ಕಾರಣಕ್ಕೂ ಒಣಗಬಾರದು. ಮುಂದಿನ ತಿಂಗಳಿನಿಂದ ಇವರಿಗೆ ಸಂಬಳವನ್ನು

ಕೊಡುವ ರೀತಿಯಲ್ಲಿ ಒಂದು ಶಾಶ್ವತ ವ್ಯವಸ್ಥೆಯನ್ನು ಮಾಡುವ ಬಗ್ಗೆ ಸನ್ಮಾನ್ಯ ಸಚಿವರು ಘೋಷಣೆ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಉತ್ತರದಲ್ಲಿ ತಿಳಿಸಿರುವ ಹಾಗೆ "ಅಗತ್ಯವಿದ್ದ ಅನುದಾನವನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಧಾರ್ಮಿಕ ದತ್ತಿ ಇಲಾಖೆಗೆ ಒದಗಿಸದೇ ಇದ್ದುದರಿಂದ ಈ ಸಿಬ್ಬಂದಿಗೆ ಕಳೆದ 10 ತಿಂಗಳಿಂದ ವೇತನವನ್ನು ಪಾವತಿಸಲು ಸಾಧ್ಯವಾಗಿರಲಿಲ್ಲ." ಎಂದು ಹೇಳಿದ್ದಾರೆ. ಇಷ್ಟು ವರ್ಷಗಳಿಂದ ಮಾಡಿಕೊಂಡು ಬರುತ್ತಿದ್ದಾರಲ್ಲಾ. ಈ ವರ್ಷವೇ ಈ ಅಧಿಕಾರಿಗಳಿಗೆ ಏನಾಯಿತು?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ನೀವು ಪೂರ್ಣ ಉತ್ತರವನ್ನು ಓದದೇ ಅರ್ಧ ಉತ್ತರವನ್ನು ಓದಿ ಏನೋನೋ ತಪ್ಪು ಹೇಳಬೇಡಿ. ನೀವು ಅರ್ಧ ಓದಿ ಇನ್ನು ಅರ್ಧವನ್ನು ಓದದೇ ಇದ್ದರೆ ತಪ್ಪಾಗುತ್ತದೆ. ನಾನು ಸರಿ ಏನು ಎಂಬುದನ್ನು ಹೇಳುತ್ತೇನೆ. ನಿಮಗೆಲ್ಲರಿಗೂ ಸ್ಪಷ್ಟಪಡಿಸಿ ಹೇಳುತ್ತೇನೆ.

**ಶ್ರೀ ಮರಿತಿಬ್ಬೇಗೌಡ:–** ಸುಮಾರು 10 ತಿಂಗಳಿನಿಂದ ಅವರಿಗೆ ವೇತನವನ್ನು ನೀಡಿಲ್ಲವೆಂದರೆ ಅವರು ಏನು ತಿನ್ನಬೇಕು?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಇಲ್ಲಿರುವ ವಿಷಯ ಇಷ್ಟೇ.

**ಶ್ರೀ ಮರಿತಿಬ್ಬೇಗೌಡ:–** ಪೂಜಾರರಿಗೆ ಪಾಠವನ್ನು ಹೇಳಲಿಕ್ಕೆ ಇವರಿಗೆ ಎಲ್‌ಐಸಿ ಕಂತನ್ನು ಕಟ್ಟಲಿಕ್ಕೆ ತಿಂಗಳಿಗೆ ಸುಮಾರು 165 ಬಿಲ್‌ಗಳನ್ನು ಕೊಡಬೇಕು. ಇವರಿಗೆ ಸುಮಾರು 10 ತಿಂಗಳಿನಿಂದ ವೇತನ ಇಲ್ಲ ಎಂದರೆ ಅವರು ಹೇಗೆ ಊಟವನ್ನು ಮಾಡಬೇಕು? ಮಾನ್ಯ ಸಚಿವರು ತಾಂತ್ರಿಕ ಸಮಸ್ಯೆಯ ಬಗ್ಗೆ ಹೇಳುತ್ತಾರೆ. ಇಲ್ಲಿ 4 ಸಂಸ್ಥೆಗಳಿಗೆ ಅನುದಾನವನ್ನು ಕೊಟ್ಟಿದ್ದಾರೆ. ಇನ್ನೆರಡು ಸಂಸ್ಥೆಗಳ ವಿಚಾರವನ್ನೇ ಹೇಳಿಲ್ಲ.

**ಉಪ ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರಿಗೆ ಎಲ್ಲರ ಬಗ್ಗೆ ಕಳಕಳಿ ಇದೆ ಎನ್ನುವುದು ಗೊತ್ತಾಗಿದೆ. ತಾವು ದಯಮಾಡಿ ಕುಳಿತುಕೊಳ್ಳಿ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೇ, ಇಲ್ಲಿರುವ ವಿಷಯ ಇಷ್ಟೇ. ಎಲ್ಲರಿಗೂ ಸರಳವಾಗಿ ಅರ್ಥವಾಗುವ ರೀತಿಯಲ್ಲಿ ಹೇಳುವುದಾದರೆ, ಮೊದಲು ಇವೆಲ್ಲವೂ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಇತ್ತು. ಯಾವತ್ತು ಸಂಸ್ಕೃತ ವಿಶ್ವವಿದ್ಯಾನಿಲಯ ನಮ್ಮ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂತೋ, ಆ ಕಾರಣದಿಂದಾಗಿ ನಾವು ನಮ್ಮ ಇಲಾಖೆಯಿಂದ ಸಂಸ್ಕೃತ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಇದನ್ನು ಹಸ್ತಾಂತರಿಸಿದ್ದೆವು. ಈ ರೀತಿ ಹಸ್ತಾಂತರಿಸಿರುವ ಸಂದರ್ಭದಲ್ಲಿ ಆಗಿರುವಂತಹ ಒಂದು ಚಿಕ್ಕ ಗೊಂದಲ.

**ಶ್ರೀ ಮರಿತಿಬ್ಬೇಗೌಡ:–** 10 ವರ್ಷಗಳ ವೇತನ ನಿಂತರೂ 'ಒಂದು ಚಿಕ್ಕ ಗೊಂದಲ' ಎಂದು ಹೇಳುತ್ತೀರಿ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೇ, ಇವರಿಗೆ ಸಂಬಳವನ್ನು ವಿಶ್ವವಿದ್ಯಾನಿಲಯದ ಅಡಿಯಲ್ಲಿ ಕೊಡಬೇಕು ಎನ್ನುವ ಒಂದು ವಾದವಿದೆ. ಇನ್ನೊಂದು ಧಾರ್ಮಿಕ ದತ್ತಿ ಇಲಾಖೆ, ಮುಜರಾಯಿ ಇಲಾಖೆಯ ಅಡಿಯಲ್ಲಿಯೇ ಕೊಡಬೇಕು ಎನ್ನುವ ಇನ್ನೊಂದು ವಾದವಿದೆ. ಈ ಗೊಂದಲಗಳಿಂದ ಇಲ್ಲಿ ವಿಳಂಬವಾಗಿರುವುದು ಸತ್ಯವಿದೆ. ಈಗ ನಾವು ನಮ್ಮ ಸಂಚಿತನಿಧಿಯಲ್ಲಿ ಹಣವನ್ನು ಬಿಡುಗಡೆ ಮಾಡುತ್ತೇವೆ ಮತ್ತು ಅವರಿಗೆ ಮುಂದಿನ ದಿನಗಳಲ್ಲಿ ಸಂಬಳಕ್ಕೆ ತೊಂದರೆಯಾಗದೇ ಇರುವುದಕ್ಕೆ ಏನು ಎಚ್ಚರಿಕೆಯನ್ನು ವಹಿಸಬೇಕೋ ಅದನ್ನು ಮಾಡುತ್ತೇವೆ.

**ಉಪ ಸಭಾಪತಿಯವರು:–** ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವುದು.

**(ಸದನವು ಸಂಜೆ 6 ಗಂಟೆ 28 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ: 3ನೇ ಫೆಬ್ರವರಿ ಮಾಹೆ 2012ರ ಶುಕ್ರವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)**